॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ನಂ. ೩೨)

ಶ್ರೀಶಿವರಹಸ್ಯ

ಸಂಪುಟ ೫

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

ಶ್ರೀ ಶಿವರಹಸ್ಯ

ಸಂಪುಟ ೫

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಅಧ್ಯಾಪಕ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1947

Printed by D. Rajarathnam,
Sree Panchacharya Electric Press
Sayaji Rao Road, Mysore.
For The Palace Mysore.

ಮುನ್ನುಡಿ

ಇತಿಹಾಸಪುರಾಣಾದಿಗಳಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ವಿಶೇಷವಾಗಿ ನಿರೂಪಿಸಿರುವರು. ಅವುಗಳಲ್ಲಿ ಮೊದಲನೆಯ ಮೂರು ಪುರುಷಾರ್ಥಗಳಿಗೆ ತ್ರಿವರ್ಗಗಳೆಂದೂ, ಮೋಕ್ಷಕ್ಕೆ ಅಪವರ್ಗವೆಂದೂ ಹೆಸರಿರುವುದು. ಈ ಪುರುಷಾರ್ಥವಿಭಾಗವು ವೇದವೇದಾಂತಗಳಲ್ಲಿ ವಿಶೇಷವಾಗಿ ಕಂಡುಬರುವುದಿಲ್ಲ. ನಾಲ್ಕು ಪುರುಷಾರ್ಥಗಳು, ನಾಲ್ಕು ವರ್ಣಗಳು, ನಾಲ್ಕು ಆಶ್ರಮಗಳು, ನಾಲ್ಕು ಯುಗಗಳು, ನಾಲ್ಕು ವೇದಗಳು ಇವುಗಳಿಗೆ ಪರಸ್ಪರವಾದ ಸಂಬಂಧಗಳನ್ನೂ, ಪರಸ್ಪರ ಹೋಲಿಕೆಗಳನ್ನೂ ದೃಷ್ಟಾಂತಪ್ರತಿಪಾದನೆಗಳಿಂದ ಸ್ಪಷ್ಟವಾಗಿ ನಿರೂಪಿಸುವುದೇ ಪುರಾಣೇತಿಹಾಸಕಾರರ ಅಭಿಪ್ರಾಯ. ಈ ನಾಲ್ಕು ಪುರುಷಾರ್ಥಗಳಲ್ಲಿ, ಧರ್ಮಶಾಸ್ತ್ರಕ್ಕೆ ಜೈಮಿನಿಯೂ, ಅರ್ಥಶಾಸ್ತ್ರಕ್ಕೆ ಚಾಣಕ್ಯನೂ, ಕಾಮಶಾಸ್ತ್ರಕ್ಕೆ ವಾತ್ಸ್ಯಾಯನನೂ, ಮೋಕ್ಷಶಾಸ್ತ್ರಕ್ಕೆ ಬಾದರಾಯಣರೂ ಹಿಂದಿನ ಸೂತ್ರಗಳನ್ನು ಅನುಸರಿಸಿ ವ್ಯಾಖ್ಯಾನಮಾಡಿರುವರು. ಮೊದಲಿನ ಮೂರು ಶಾಸ್ತ್ರಗಳೂ ಮನುಷ್ಯನನ್ನು ಮೊದಲು ಕರ್ಮಮಾರ್ಗದಲ್ಲಿ ನಡೆಯುವಂತೆ ಮಾಡಿ, ಅದರಿಂದ ಜ್ಞಾನಮಾರ್ಗವನ್ನು ಅವಲಂಬಿಸುವಂತೆ ಪ್ರೇರಿಸುವುವು. ಬಾದರಾಯಣರ ಸೂಕ್ತಿಗಳಾದರೋ, ಜ್ಞಾನಮಾರ್ಗದ ಸ್ವರೂಪವನ್ನೆಲ್ಲಾ ವಿವರಿಸುವುವು. ಆದರೆ ಈ ಜ್ಞಾನಮಾರ್ಗವು ಮನುಷ್ಯ ಸಾಮಾನ್ಯಕ್ಕೆ ದೊರೆಯುಲಾರದು. ಒಂದುವೇಳೆ ಅದರಂತೆ ನಡೆಯಬೇಕಾದರೂ, ಮಾನವವರ್ಗವು ಐಹಿಕೋದ್ಯೋಗಗಳಲ್ಲಿ ವಿಮುಖರಾಗಬೇಕಾಗುವುದು. ಇದು ಸುಲಭಸಾಧ್ಯವಲ್ಲದ ವಿಷಯ. ಆದಕ್ಕಾಗಿ ಪುರಾಣಕಾರರು ಮಂದಾಧಿಕಾರಿಗಳಿಗೂ ಅನುಕೂಲವಾಗುವಂತೆ ಭಕ್ತಿಯೋಗ ಅಥವಾ ಭಕ್ತಿಮಾರ್ಗವೆಂಬ ಮತ್ತೊಂದು ಮೋಕ್ಷೋಪಾಯವನ್ನು ತಮ್ಮ ಎಲ್ಲಾ ಗ್ರಂಥಗಳಲ್ಲಿಯೂ ವಿಶದಪಡಿಸಿರುವರು. ಹಾಗೆ ಭಕ್ತಿಯೋಗದಿಂದಲೇ ಮುಕ್ತರಾದ ವಾಲ್ಮೀಕಿ, ಧರ್ಮವ್ಯಾಧ, ವಿದುರ ಮುಂತಾದವರ ಇತಿಹಾಸಗಳನ್ನೆಲ್ಲಾ ವಿವರಿಸುವುದು, ಭಕ್ತಿಯ ಸ್ವರೂಪ, ಭಕ್ತಲಕ್ಷಣ ಇವುಗಳನ್ನು ನಾನಾರೀತಿ ಪ್ರತಿಪಾದನೆ ಮಾಡುವುದು ಇವೇ ಇತಿಹಾಸಕಾರರ ಮುಖ್ಯ ಧ್ಯೇಯವೆನಿಸಿದೆ. ಈ ಭಕ್ತಿಮಾರ್ಗಾವಲಂಬನೆಗೆ ಜಾತಿ, ಕುಲ, ಗೋತ್ರ, ವೃತ್ತ, ಕಾಲ, ದೇಶವಿಶೇಷ ಮೊದಲಾದ ಯಾವ ನಿಯಮಗಳೂ ಬೇಕಿಲ್ಲ. ಮನುಷ್ಯ, ಪಶು, ಪಕ್ಷಿ, ಮೃಗ ಮೊದಲಾದ ಜಂತು ನಿಯಮವೂ ಇಲ್ಲ.

ಜೀವಸಾಮಾನ್ಯವೂ ಭಕ್ತಿಮಾರ್ಗದಿಂದ ಆಯಾ ಜನ್ಮದಲ್ಲಿಯೇ ಮೋಕ್ಷವನ್ನು ಹೊಂದಬಹುದು. ಇದೇ ಉದ್ದೇಶವನ್ನು ಸಮರ್ಥಿಸುವುದಕ್ಕಾಗಿ ಶಿವರಹಸ್ಯದ ಈ ಭಾಗದಲ್ಲಿ ಅನೇಕ ಭಿಲ್ಲರು, ದುರ್ಮಾರ್ಗಗಾಮಿಗಳು, ಪಶ್ವಾದಿಗಳು ಸುಲಭವಾಗಿ ಶಿವನ ಸನ್ನಿಧಿಯನ್ನು ಹೊಂದಿದ ಕಥಾಭಾಗಗಳನ್ನು ಅತಿಶಯವಾಗಿ ತೋರ್ಪಡಿಸಿರುವರು. ಅಲ್ಲದೆ ಮನುಷ್ಯಸಾಮಾನ್ಯಕ್ಕೆ ಬೇಕೆಂದಿರುವ ಐಹಿಕಸುಖಾದಿಗಳು ಕ್ಷಣಿಕಗಳೆಂಬುದನ್ನೂ, ಆದರೆ ಅದರಲ್ಲಿ ಜುಗುಪ್ಸೆ ಹೊಂದದೆ, ಭಗವದನುಗ್ರಹದಿಂದ ಐಶ್ವರ್ಯಾದಿಗಳನ್ನು ಸಂಪಾದಿಸಿ, ಅದರಲ್ಲಿ ಮಮತೆಯನ್ನಿಡದೆ ಸಾತ್ವಿಕವರ್ಗಕ್ಕೆ ತ್ಯಾಗಮಾಡಬೇಕೆಂಬ ತತ್ತ್ವವೊಂದನ್ನೂ ಈ ಪ್ರಕರಣದಲ್ಲಿ ತಿಳಿಯಬಹುದಾಗಿದೆ. ಮೂವತ್ತುನಾಲ್ಕು ಮತ್ತು ಮೂವತ್ತೈದನೆಯ ಅಧ್ಯಾಯಗಳಲ್ಲಿ ಬಂದಿರುವ ಚಮಕಾಧ್ಯಾಯದ ಸ್ತುತಿ, ಅಗಸ್ತ್ಯಕೃತ ವೇದಪಾದಸ್ತವ ಇವು ಮತ್ತಾವ ಗ್ರಂಥದಲ್ಲಿಯೂ ದೊರೆಯದ ಅಂಶಗಳು. ಇದರಲ್ಲಿ ಅರ್ಥವತ್ತಾದ ಪದಗಳೂ, ಪದಜೋಡಣೆಯಿಂದ ಹೊಳೆಯುವ ಭಾವಗಳೂ ಬಹು ಮನೋಹರವಾಗಿವೆ. ಈಶ್ವರನ ಪ್ರತ್ಯಕ್ಷಕಾಲದಲ್ಲಿ ತೋರಿಬರುವ ಶಿವಸ್ತುತಿಗಳಂತೂ ಎಂತಹ ನಾಸ್ತಿಕನ ಮನಸ್ಸನ್ನಾದರೂ ಭಕ್ತಿಭಾವ ಪರವಶತೆಗೆ ಸೆಳೆಯುವುವು.

ಇಂತಹ ಅಮೂಲ್ಯಗ್ರಂಥರತ್ನಾಕರಕ್ಕೆ ಸುಧಾಕರಪ್ರಾಯರಂತೆ ರಂಜಿಸುತ್ತಾ, ಸಕಲಸನ್ನಾಹಾದಿಗಳನ್ನೂ ಪಂಡಿತವರ್ಗಕ್ಕೆ ಒದಗಿಸಿಕೊಟ್ಟು, ಆ ಮೂಲಕ ಎಲ್ಲಿಯೋ ಅಡಗಿದ್ದ ಈ ಗ್ರಂಥರತ್ನಗಳನ್ನು ಜನಸಾಮಾನ್ಯಕ್ಕೆ ಅನುಕೂಲವಾಗುವಂತೆ ಬಹಿರಂಗಪಡಿಸಿದ ನಮ್ಮನ್ನಾಳುತ್ತಿರುವ ಶ್ರೀಮನ್ಮಹಾರಾಜ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರಿಗೂ, ಅವರ ಕುಟುಂಬವರ್ಗಕ್ಕೂ ಈ ಗ್ರಂಥಾಭಿಮಾನಿಯಾದ ಮಹೇಶ್ವರನು ಪುತ್ರಪೌತ್ರಾದಿ ಸಕಲ ಸಂಪತ್ತುಗಳನ್ನೂ, ಸುಜ್ಞಾನವಾಹಿನಿಯನ್ನೂ ಅನುಗ್ರಹಿಸಿ ಸರ್ವದಾ ಸಲಹುತ್ತಿರಲಿ ಎಂದು ಅಂಜಲಿಬದ್ಧನಾಗಿ ಸರ್ವೇಶ್ವರನನ್ನು ಬೇಡಿಕೊಳ್ಳುತ್ತೇನೆ.

ಸರ್ವಜಿನ್ನಾಮ ಸಂವತ್ಸರದ
ಚೈತ್ರ ಬಹುಳ ಅಷ್ಟಮೀ
ಸೋಮವಾರ
14—4—1947.

ಇತಿ ಸಜ್ಜನವಿಧೇಯ,
ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,
ಆಸ್ಥಾನವಿದ್ವಾನ್, ಮೈಸೂರು.

॥ ಶ್ರೀಃ ॥

ಶ್ರೀಶಿವರಹಸ್ಯದ ಹರನಾಮಕವಾದ ತೃತೀಯಾಂಶ ಪೂರ್ವಾರ್ಧದ ವಿಷಯಸೂಚೀ

(ಇಪ್ಪತ್ತೊಂದರಿಂದ ಮೂವತ್ತೈದು ಅಧ್ಯಾಯಗಳು ಮಾತ್ರ)

ಇಪ್ಪತ್ತೈದನೆಯ ಅಧ್ಯಾಯ

ಇಪ್ಪತ್ತಾರನೆಯ ಅಧ್ಯಾಯ

ಇಪ್ಪತ್ತೇಳನೆಯ ಅಧ್ಯಾಯ

ಇಪ್ಪತ್ತೆಂಟನೆಯ ಅಧ್ಯಾಯ

ಇಪ್ಪತ್ತೊಂಬತ್ತನೆಯ ಅಧ್ಯಾಯ

ಮೂವತ್ತನೆಯ ಅಧ್ಯಾಯ

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಏಕವಿಂಶೋಽಧ್ಯಾಯಃ

॥ ವ್ಯಾಸ ಉವಾಚ ॥

ತತಃ ಸ್ಮರಹರಾಪಾರಶೃಂಗಾರರಸಸಂಯುತಾ ।
ಗೌರೀ ಕುಮಾರಂ ಸಸ್ಮಾರ ಶಂಕರೋ ಲೋಕಶಂಕರಃ ॥೧॥

ತತಃ ಸಮಾಗತಃ ಸ್ಕಂದಃ ಸಾನಂದಂ ಸುಂದರಾನನಾಂ ।
ತ್ರಿಲೋಚನಂ ಚ ಸಂವೀಕ್ಷ್ಯ ಪ್ರಣತೋ ದಂಡವದ್ಭುವಿ ॥೨॥

ತತಃ ಕೃತಾಂಜಲಿರ್ಭೂತ್ವಾ ಶಿವೌ ತುಷ್ಟಾವ ಷಣ್ಮುಖಃ ।
ಗಣೇಶೇನ ಸಹಾನಂದಸಾಗರಾವತಿಸಾದರಂ ॥೩॥

ಇಪ್ಪತ್ತೊಂದನೆಯ ಅಧ್ಯಾಯ

ಮನ್ಮಥನನ್ನು ದಹಿಸಿದ ಮಹೇಶ್ವರನೊಡನೆಯೇ ನಾನಾವಿಧವಾದ ಶೃಂಗಾರ ರಸಭರಿತ ವಿಹಾರಗಳಲ್ಲಿ ಯುಕ್ತಳಾಗಿದ್ದ ಗೌರಿಯೂ, ಲೋಕಮಂಗಳಕರನಾದ ಶಂಕರನೂ ಸಹ ಷಣ್ಮುಖನನ್ನು ಸ್ಮರಿಸಿಕೊಂಡರು ಎಂದು ಹೇಳುತ್ತಾ, ವ್ಯಾಸಮಹರ್ಷಿಗಳು ಮುಂದಿನ ಕಥೆಯನ್ನು ಪ್ರಸ್ತಾಪಿಸಿದರು. ॥೧॥

ಆಗ ಕುಮಾರಸ್ವಾಮಿಯು ಕೂಡಲೇ ಅಲ್ಲಿಗೆ ಆನಂದದಿಂದ ಬಂದು, ಸುಂದರವಾದ ಮುಖವುಳ್ಳ ದೇವಿಯನ್ನೂ, ಮಹಾದೇವನನ್ನೂ ನೋಡಿ ಭಕ್ತಿಯಿಂದ ದಂಡಪ್ರಣಾಮಮಾಡಿದನು. ॥೨॥

ಆಮೇಲೆ ಷಣ್ಮುಖನು ಕೈಮುಗಿದುಕೊಂಡು, ಅತಿ ಸಂತೋಷದಿಂದ

ನಮೋ ನಮಸ್ತೇ ಗಿರಿಶಾಯ ತುಭ್ಯಂ
ನಮೋ ನಮಸ್ತೇ ಗಿರಿಕನ್ಯಕಾಯೈ ।
ನಮೋ ನಮಸ್ತೇ ವೃಷಭಧ್ವಜಾಯ
ಸಿಂಹಧ್ವಜಾಯೈ ಚ ನಮೋ ನಮಸ್ತೇ ॥೪॥

ನಮೋ ನಮೋ ಭೂತಿವಿಭೂಷಣಾಯ
ನಮೋ ನಮಶ್ಚಂದನಭೂಷಿತಾಯೈ ।
ನಮೋ ನಮಃ ಫಾಲವಿಲೋಚನಾಯ
ನಮೋ ನಮಃ ಪದ್ಮವಿಲೋಚನಾಯೈ ॥೫॥

ತ್ರಿಶೂಲಹಸ್ತಾಯ ನಮೋ ನಮಸ್ತೇ
ನಮೋ ನಮಃ ಪದ್ಮಲಸತ್ಕರಾಯೈ ।
ನಮೋ ನಮೋ ದಿಗ್ವಸನಾಯ ತುಭ್ಯಂ
ಚಿತ್ರಾಂಬರಾಯೈ ಚ ನಮೋ ನಮಸ್ತೇ ॥೬॥

ಗಣೇಶನೊಂದಿಗೆ ವಿರಾಜಿಸುವ ಪಾರ್ವತೀಪರಮೇಶ್ವರರನ್ನು ಹೀಗೆ ಸ್ತುತಿಸಿದನು. ॥೩॥

ಗಿರಿಶನೇ, ವೃಷಭಧ್ವಜನೇ, ನಿನ್ನನ್ನು ಪುನಃ ಪುನಃ ವಂದಿಸುವೆನು. ಹಿಮವಂತನಪುತ್ರಿಯೇ, ಸಿಂಹಧ್ವಜಳೇ, ಅಂಬಾ ನಿನಗೆ ಬಾರಿಬಾರಿಗೂ ಎರಗುವೆನು. ॥೪॥

ವಿಭೂತಿಯಿಂದ ಶೋಭಿತನಾದ ಮತ್ತು ಹಣೆಯಲ್ಲಿ ಕಣ್ಣುಳ್ಳ ದೇವದೇವನಿಗೆ ನಮಿಸುವೆನು. ಮೈತುಂಬ ಚಂದನ ಲೇಪನದಿಂದ ಭೂಷಿತಳಾಗಿ ಕಮಲದಂತೆ ಕಣ್ಣುಳ್ಳದೇವಿಗೆ ನಾನು ಪುನಃ ಪುನಃ ತಲೆಬಾಗುವೆನು. ॥೫॥

ತ್ರಿಶೂಲವನ್ನು ಕೈಯಲ್ಲಿ ಹಿಡಿದಿರುವವನೂ, ದಿಗಂಬರನೂ ಆದ ನಿನಗೆ ನಮಸ್ಕಾರ. ಕಮಲವನ್ನು ಕೈಯಲ್ಲಿ ಹಿಡಿದಿರುವವಳೂ, ಬಣ್ಣಬಣ್ಣದ ಸೀರೆಯನ್ನು ಧರಿಸಿದವಳೂ ಆದ ದೇವಿಯೇ ನಿನಗೆ ಶಿರಸ್ಸನ್ನು ತಗ್ಗಿಸುವೆನು. ॥೬॥

ಚಂದ್ರಾವತಂಸಾಯ ನಮೋ ನಮಸ್ತೇ
ನಮೋಽಸ್ತು ಚಂದ್ರಾಭರಣಾನ್ವಿತಾಯೈ ।
ನಮಃ ಸುವರ್ಣಾಂಕಿತಕುಂಡಲಾಯ
ನಮೋಽಸ್ತು ರತ್ನೋಜ್ವಲಕುಂಡಲಾಯೈ ॥೭॥

ನಮೋಽಸ್ತು ತಾರಾಗ್ರಹಮಾಲಿಕಾಯ
ನಮೋಽಸ್ತು ಹಾರಾನ್ವಿತಕಂಧರಾಯೈ ।
ಸುವರ್ಣವರ್ಣಾಯ ನಮೋ ನಮಸ್ತೇ
ನಮಃ ಸುವರ್ಣಾಧಿಕಸುಂದರಾಯೈ ॥೮॥

ನಮೋ ನಮಸ್ತೇ ತ್ರಿಪುರಾಂತಕಾಯ
ನಮೋ ನಮಸ್ತೇ ಮಧುನಾಶಕಾಯೈ ।
ನಮೋ ನಮಸ್ತ್ವಂಧಕಸೂದನಾಯ
ನಮೋ ನಮಃ ಕೈಟಭಸೂದನಾಯೈ ॥೯॥

ಚಂದ್ರನಿಂದ ಅಲಂಕೃತನೂ, ಬಂಗಾರದ ಕರ್ಣಕುಂಡಲವನ್ನು ಧರಿಸಿದವನೂ, ಆದ ಶಂಕರನನ್ನು ಅನೇಕಬಾರಿ ವಂದಿಸುವೆನು. ಚಂದ್ರಕಲೆ ಎಂಬ ಒಡವೆಯಿಂದ ಶೋಭಿತಳೂ, ರತ್ನಮಯವಾದ ಕುಂಡಲವನ್ನು ಧರಿಸಿದವಳೂ ಆದ ಗಿರಿಜೆಗೆ ಕೈಮುಗಿಯುತ್ತೇನೆ. ॥೭॥

ನಕ್ಷತ್ರ, ಗ್ರಹ ಇವುಗಳನ್ನು ಮಾಲಿಕೆಯ ಹಾಗೆ ಧರಿಸಿರುವವನೂ, ಬಂಗಾರದ ಬಣ್ಣದಂತಹ ಮೈಬಣ್ಣವುಳ್ಳವನೂ ಆದ ಶಂಕರನೇ, ನಿನಗೆ ವಂದಿಸುವೆನು. ಮತ್ತು ಕೊರಳಿನಲ್ಲಿ ಮನೋಹರವಾದ ಹಾರವನ್ನು ಧರಿಸಿರುವವಳೂ, ಬಂಗಾರದ ಬಣ್ಣವನ್ನೂ ಮೀರಿಸುವಂತಹ ದೇಹಕಾಂತಿಯುಳ್ಳವಳೂ ಆದ ದೇವಿಯೇ, ನಿನಗೆ ಅನಂತ ನಮಸ್ಕಾರಗಳು. ॥೮॥

ತ್ರಿಪುರರನ್ನು ಸಂಹರಿಸಿದವನೂ, ಅಂಧಕಾಸುರನನ್ನು ಕೊಂದವನೂ ಆದ ಈಶ್ವರನನ್ನು ವಂದಿಸುವೆನು. ಮತ್ತು ಮಧು, ಕೈಟಭ ಎಂಬೀರ್ವರು ದೈತ್ಯರನ್ನು ನಾಶಮಾಡಿದ ಪಾರ್ವತಿಗೂ ಬಾರಿಬಾರಿಗೂ ಎರಗುತ್ತೇನೆ. ॥೯॥

ನಮೋ ನಮೋ ಜ್ಞಾನಮಯಾಯ ನಿತ್ಯಂ
ನಮಶ್ಚಿದಾನಂದಘನಪ್ರದಾಯೈ ।
ನಮೋ ಜಟಾಜೂಟವಿರಾಜಿತಾಯ
ನಮೋಽಸ್ತು ವೇಣೀಫಣಿಮಂಡಿತಾಯೈ ॥೧೦॥

ನಮೋಽಸ್ತು ಕರ್ಪೂರರಸಾಕರಾಯ
ನಮೋ ಲಸತ್ಕುಂಕುಮಮಂಡಿತಾಯೈ ।
ನಮೋಽಸ್ತು ಬಿಲ್ವಾಮ್ರದಳಾರ್ಚಿತಾಯ
ನಮೋಽಸ್ತು ಕುಂದಪ್ರಸವಾರ್ಚಿತಾಯೈ ॥೧೧॥

ನಮೋ ಜಗನ್ಮಂಡಲಮಂಡಲಾಯ
ನಮೋ ಮಣಿಭ್ರಾಜಿತಮಂಡನಾಯೈ ।
ನಮೋಽಸ್ತು ವೇದಾಂತಗಣಸ್ತುತಾಯ
ನಮೋಽಸ್ತು ವಿಶ್ವೇಶ್ವರಸಂಸ್ತುತಾಯೈ ॥೧೨॥

ಸದಾ ಜ್ಞಾನಸ್ವರೂಪನೂ, ಜಡೆಯಿಂದ ಭೂಷಿತನೂ ಆದ ಶಂಕರನಿಗೆ ಅಪಾರ ವಂದನೆಗಳು. ಮತ್ತು ಚಿದಾನಂದಭಾವವನ್ನು ಕೊಡುವವಳೂ, ಸರ್ಪದಂತೆ ಉದ್ದವಾಗಿಯೂ ರಮ್ಯವಾಗಿಯೂ ಇರುವ ಜಡೆ (ಹೆರಳು) ಯಿಂದ ಶೋಭಿಸುವವಳೂ ಆದ ದೇವಿಗೆ ಪದೇಪದೇ ನಮಿಸುವೆನು. ॥೧೦॥

ಕರ್ಪೂರರಸಗಳಿಗೆ ಗಣಿಯಂತಿರುವ (ದಯಾಮಯನಾದ) ಮತ್ತು, ಬಿಲ್ವ, ಮಾವು ಇವುಗಳ ಪತ್ರೆಗಳಿಂದ ಪೂಜಿತನಾದ ದೇವದೇವನಿಗೆ ಎರಗುತ್ತೇನೆ. ಮತ್ತು ಕುಂಕುಮದಿಂದ ಪ್ರಕಾಶಿಸುವವಳೂ, ಕುಂದಪುಷ್ಪಗಳಿಂದ ಆರಾಧಿತಳೂ ಆದ ದೇವಿಗೂ ಯಾವಾಗಲೂ ತಲೆಬಾಗುವೆನು. ॥೧೧॥

ಸಮಸ್ತ ಭೂವಲಯಕ್ಕೂ ಅಧಿಪತಿಯೂ, ಉಪನಿಷತ್ತುಗಳ ಸಮೂಹಗಳಿಂದ ಸ್ತುತ್ಯನೂ ಆದ ಸ್ವಾಮಿಗೆ ಶಿರಸ್ಸನ್ನು ಬಗ್ಗಿಸುವೆನು. ಹಾಗೂ ರತ್ನಖಚಿತವಾದ ಒಡವೆಗಳನ್ನು ಧರಿಸಿರುವವಳೂ, ವಿಶ್ವೇಶ್ವರನಾದ ಶಿವನಿಂದಲೂ ಹೊಗಳಿಸಿಕೊಳ್ಳುವವಳೂ ಆದ ದೇವಿಯ ಪಾದಗಳಿಗೆ ಎರಗುತ್ತೇನೆ. ॥೧೨॥

ನಮೋಽಸ್ತು ಸರ್ಪಾಭರಣಾನ್ವಿತಾಯ
ನಮೋಽಸ್ತು ಪದ್ಮಾರ್ಚಿತಪಾದುಕಾಯ್ಕೈ ।
ನಮಃ ಶಿವಾಲಿಂಗಿತವಿಗ್ರಹಾಯ
ನಮಃ ಶಿವಾಲಿಂಗಿತವಿಗ್ರಹಾಯ್ಕೈ ॥೧೩॥

ನಮೋ ನಮಸ್ತೇ ಜನಕಾಯ ನಿತ್ಯಂ
ನಮೋ ನಮಸ್ತೇ ಗಿರಿಜೇ ಜನನ್ಯೈ ।
ನಮೋ ನಮೋಽನಂಗಹರಾಯ ನಿತ್ಯಂ
ನಮೋ ನಮೋಽನಂಗವಿವರ್ಧಕಾಯ್ಕೈ ॥೧೪॥

ನಮೋನಮಸ್ತೇಽಸ್ತು ವಿಷಾಶನಾಯ
ನಮೋ ನಮಸ್ತೇಽಸ್ತು ಸುಧಾಶನಾಯ್ಕೈ ।
ನಮೋ ನಮಸ್ತೇಽಸ್ತು ಮಹೇಶ್ವರಾಯ
ಶ್ರೀಛಂದಳೇ ದೇವಿ ನಮೋ ನಮಸ್ತೇ ॥೧೫॥

ಹಾವುಗಳನ್ನು ಒಡವೆಯ ಹಾಗೆ ಧರಿಸಿರುವವನೂ, ಪಾರ್ವತಿಯಿಂದ ಅಪ್ಪಿಕೊಳ್ಳಲ್ಪಟ್ಟ ಶರೀರವುಳ್ಳವನೂ ಆದವನಿಗೆ ನನ್ನ ಪ್ರಣಾಮಗಳು. ಹಾಗೆಯೇ ಕಮಲದ ಹೂಗಳಿಂದ ಅರ್ಚಿಸಿದ ಚರಣಗಳುಳ್ಳವಳೂ, ಪರಮೇಶ್ವರನಿಂದ ಆಲಿಂಗಿತವಾದ ದೇಹವುಳ್ಳವಳೂ ಆದ ಪಾರ್ವತಿಯನ್ನು ಸದಾ ನಮಸ್ಕರಿಸುತ್ತೇನೆ. ॥೧೩॥

ತಂದೆಯಾದವನೂ, ಮನ್ಮಥನನ್ನು ನಾಶಮಾಡಿದವನೂ ಆದ ಈಶನಿಗೆ ವಂದಿಸುತ್ತೇನೆ. ಮತ್ತು ಯಾವಾಗಲೂ ಮನ್ಮಥವಿಕಾರವನ್ನು ಹೆಚ್ಚಾಗಿ ಅಭಿವೃದ್ಧಿ ಮಾಡುವವಳೂ, ಲೋಕಮಾತೆಯೂ, ಆದ ಗಿರಿಜೆಯೇ! ನಿನಗೆ ಅನಂತ ಪ್ರಣಾಮಗಳು. ॥೧೪॥

ವಿಷವನ್ನು ಭಕ್ಷಿಸಿದವನೂ, ಮಹೇಶ್ವರನೂ ಆದವನನ್ನು ನಮಿಸುವೆನು. ಮತ್ತು ಅಮೃತಪಾನಮಾಡಿದ ಶ್ರೀಛಂದಲದೇವಿಗೆ ಬಾರಿಬಾರಿಗೂ ಎರಗುವೆನು. (ಛಂದಲದೇವಿಯೆಂಬ ಹೆಸರಿನಿಂದ ಕೆಲವು ದೇಶಗಳಲ್ಲಿ ಗೌರೀ ಹಬ್ಬವನ್ನು ಮಾಡುವರು.) ॥೧೫॥

ಇತಿ ಸ್ತುತ್ವಾ ಮಹಾದೇವಮಂಬಾಮಾನಂದಕಂದಳಾಂ ।
ಲಂಬೋದರಃ ಕುಮಾರೋಽಪಿ ತಾಭ್ಯಾಮಾಲಿಂಗಿತೋ ಮುಹುಃ ॥೧೬॥

ವರಂ ವೃಣು ಕುಮಾರಾದ್ಯ ಲಂಬೋದರ ತವೇಪ್ಸಿತಂ ।
ಇತ್ಯುಕ್ತಂ ತದ್ವಚಃ ಶ್ರುತ್ವಾ ಯುಯಾಚೇ ಸ ವರಂ ಪರಂ ॥೧೭॥

ತ್ವತ್ಪಾದಾಂಬುರುಹಾರ್ಚನೇ ಮತಿರುಮಾಕಾಂತೋಽಸ್ತು ಮೇ ಸರ್ವಥಾ ।
ತ್ವನ್ನಾಮಸ್ಮರಣೇಽಪಿ ಮೇ ಶಿವ ಶಿವೇ ಪಂಚಾಕ್ಷರಾವರ್ತನೇ ।
ಲಿಂಗೇ ಮಂಗಳದಾಯಕೇಽಪಿ ಭಸಿತೇ ರುದ್ರಾಕ್ಷಮಾಲಾಸ್ವಪಿ ।
ಸ್ವಾಮಿನ್ ಶಾಂಕರಸೇವನೇಽಪಿ ಸತತಂ ಹಾರೋಽಪಿ ಹಾರೇಷ್ವಪಿ ॥೧೮॥

ಸಾಂಗೈರಧ್ಯಯನಾದಿಭಿರ್ಹರತಪಃಸಂಘೈರ್ನಯಾಗೈಸ್ತಥಾ
ಯೋಗೈರ್ವಾ ನ ತುಲಾದಿದಾನನಿಕರೈರ್ಭೂಮಂಡಲಾವರ್ತನೈಃ ।

ಹೀಗೆ ಗಣಪತಿಯೂ, ಕುಮಾರಸ್ವಾಮಿಯೂ, ಶಂಕರನನ್ನೂ ಆನಂದಮಯಳಾದ ಗೌರಿಯನ್ನೂ ಸ್ತೋತ್ರಮಾಡಿದರು. ಆಗ ಆ ಪಾರ್ವತೀಪರಮೇಶ್ವರರು ಆ ಇಬ್ಬರನ್ನೂ ಸಂತೋಷದಿಂದ ಆಲಿಂಗಿಸಿಕೊಂಡರು. ॥೧೬॥

ಅನಂತರ ಆ ಗೌರೀಶಂಕರರು ಎಲೈ ಕುಮಾರನೇ! ಗಣಪತಿಯೇ! ನೀವಿಬ್ಬರೂ ಬೇಕಾದ ವರಗಳನ್ನು ಕೇಳಿಕೊಳ್ಳಿರಿ ಎಂದರು. ಆ ಮಾತನ್ನು ಕೇಳಿ ಕುಮಾರನು ಹೀಗೆ ವರ ಕೇಳಿದನು. ॥೧೭॥

ಎಲೌ! ತಾಯಿಯೇ! ನನಗೆ ಯಾವಾಗಲೂ ನಿನ್ನ ಪಾದಕಮಲಗಳನ್ನು ಪೂಜೆಮಾಡಲು ಬುದ್ಧಿಕೊಡು. ಯಾವಾಗಲೂ ನನ್ನ ಮನಸ್ಸು ಈಶ್ವರನಲ್ಲಿ ನೆಲೆಸಲಿ. ನನ್ನ ಮನಸ್ಸು ನಿನ್ನ ನಾಮಸ್ಮರಣ, ಮತ್ತು ಪಂಚಾಕ್ಷರೀಜಪ, ಪರಮಲಿಂಗಪೂಜೆ, ಮಂಗಳಪ್ರದವಾದ ಭಸ್ಮ, ರುದ್ರಾಕ್ಷಮಾಲೆ, ಈಶ್ವರನ ಸೇವೆ, ಈಶ್ವರಸಂಬಂಧವಾದ ಮಾಲಿಕೆ ಇವುಗಳನ್ನು ಬಿಟ್ಟು ಬೇರೆ ಕಡೆ ಚಲಿಸದಿರಲಿ. ॥೧೮॥

ಎಲೈ ಲಲಾಟನೇತ್ರನೇ, ಯಮನಿಗೂ ಯಮನಾಗಿರುವ ಶಂಕರನೇ, ಅಂಗಗಳೊಂದಿಗಿರುವ ವೇದಾಧ್ಯಯನ, ಈಶ್ವರ ತಪಸ್ಸು, ಯಜ್ಞ, ಯೋಗ, ತುಲಾದಾನಾದಿಗಳು, ಭೂಪ್ರದಕ್ಷಿಣೆ ಇವಲ್ಲದೆ ಇನ್ನೂ ಅನೇಕ ಧಾರ್ಮಿಕ ಕರ್ಮಗಳು

ಅನ್ಯೈರಪ್ಯಲಮೇವ ಧರ್ಮನಿಕರೈ(ನಿಚಯೈ)ರಾಯಾಸಸಂಪಾದಕೈ
ರ್ಭೋಗೀ ಭಾಲಾನಲ ಕಾಲಕಾಲ ಕಲಯೇ ತ್ವಾಂ ತೇऽನುವೇಲಂ ಪದಂ॥೧೯॥

ಭೋಗಾಂಗಾನಿ ವಿನಶ್ವರಾಣಿ ಭಗವನ್ ತ್ಯಾಜ್ಯಾನಿ ರಾಜ್ಯಾನ್ಯಪಿ
ಶ್ರೀಮೃತ್ಯುಂಜಯ ಸರ್ವಥಾಪಿ ನಿಧಯಃ ಸಾಪಾಯಶಂಕಾಶ್ರಯಾಃ ।
ಶಂಕಾತಂಕನಿವಾರಕಂ ನಿರಧಿಕಂ ಕಾಲಾಂತಕಂ ಕೇವಲಂ
ತ್ವಾಂ ಮನ್ಯೇ ತತ ಏವ ಸಾ ತ್ವಯಿ ಸದಾ ಭಕ್ತಿರ್ಮಮಾಸ್ತು ಸ್ಥಿರಾ ॥೨೦॥

ಗೋಕ್ಷೀರೇ ಘೃತಶರ್ಕರಾದಿಮಧುರದ್ರವ್ಯೇಷು ಜಿಹ್ವಾ ಯಥಾ
ಲೋಲಾ ತದ್ವದುಮಾಪತೇ ಶಿವಮಹಾದೇವೇತಿ ನಾಮಾಮೃತೇ ।
ಲೋಲಾ ಸಂತತಮಸ್ತು ಚಿತ್ತಮಪಿ ಮೇ ತ್ವತ್ಪಾದಪದ್ಮೇ ಮುದಾ
ಭೃಂಗತ್ವಂ ಸಮುಪೇತ್ಯ ತಿಷ್ಠತು ನರಃ ಸೋऽಯಂ ನರಾಣಾಂ ವರಃ ॥೨೧॥

ನಮಗೆ ಬಹಳ ಶ್ರಮಕೊಡತಕ್ಕವುಗಳಾಗಿವೆ. ಆದುದರಿಂದ ಅವೆಲ್ಲವನ್ನೂ ಬಿಟ್ಟು ಸಂಸಾರಸಾಗರದ ತೀರದಲ್ಲಿರುವ ನಿನ್ನನ್ನು ಮಾತ್ರ ಆಶ್ರಯಿಸುತ್ತೇನೆ. ನೀನೇ ನಮಗೆ ಸುಲಭ ಲಭ್ಯನು. ॥೧೯॥

ಪೂಜ್ಯನೇ, ಸುಖಸಾಧನಗಳು, ಮತ್ತು ಹೆಚ್ಚಾದ ರಾಜ್ಯಗಳು ಇವುಗಳು ನಶಿಸಿಹೋಗತಕ್ಕವುಗಳು. ಐಶ್ವರ್ಯವೇ ಮೊದಲಾದ ನಿಧಿನಿಕ್ಷೇಪಗಳನ್ನು ರಕ್ಷಣೆ ಮಾಡುವುದು ಖಂಡಿತ ಕಷ್ಟವಾದುದು. ಅವು ಅನೇಕ ಸಂದೇಹಗಳನ್ನು ಹುಟ್ಟಿಸುತ್ತವೆ. ಎಲೈ ಮೃತ್ಯುಂಜಯನೇ, ಸಂಶಯವನ್ನು ಹೋಗಲಾಡಿಸುವವನೂ, ನಾಶರಹಿತನೂ, ಯಮನನ್ನು ತಡೆಯತಕ್ಕವನೂ, ಜಗತ್ತಿನಲ್ಲಿ ನೀನೊಬ್ಬನೇ ಆದುದರಿಂದ ನಿನ್ನಲ್ಲಿ ನನಗೆ ಯಾವಾಗಲೂ ಸ್ಥಿರವಾದ ಭಕ್ತಿಹುಟ್ಟುವಂತೆ ಮಾಡು. ॥೨೦॥

ದೇವ, ಈ ನನ್ನ ನಾಲಿಗೆಯು ಹಸುವಿನ ಹಾಲು, ತುಪ್ಪ, ಸಕ್ಕರೆ, ಮುಂತಾದ ಸಿಹಿಯಾದ ಪದಾರ್ಥಗಳಲ್ಲಿ ಆಸಕ್ತವಾಗಿರುವಂತೆ "ಶಿವ, ಮಹಾದೇವ" ಎಂಬ ನಿನ್ನ ನಾಮಾಮೃತ ಸ್ಮರಣೆಯಲ್ಲೂ ಆಸಕ್ತವಾಗಲಿ. ಮತ್ತು ನನ್ನ ಮನಸ್ಸು ನಿನ್ನ ಚರಣಗಳೆಂಬ ಕಮಲಗಳಲ್ಲಿ ಯಾವಾಗಲೂ ಭೃಂಗದಂತಿರಲಿ. ಇದು ಎಲ್ಲಾ ವರಗಳಿಗಿಂತಲೂ ಉತ್ತಮವಾದದ್ದು. ॥೨೧॥

ಪ್ರಾಪ್ಯ ಪ್ರೋಷಿತಭರ್ತೃಕೇವ ರಮಣಂ ಭಾನುಂ ಯಥಾ ಪದ್ಮಿನೀ
ಶೀತಾಂಶುಂ ಕುಮುದಂ ಸುಧಾಮಿವ ನರೋ ರಾಜ್ಯಾನಿ ರಾಜಾಧಮಃ ।
ಸುಶ್ರೋತ್ರಂ ಬಧಿರೋಽಂಧಕಃ ಸುನಯನಂ ಪಂಗುಃ ಪದಕ್ಷೇಪಣಂ
ವಾಣೀ ಮೂಕ ಇವಾಂತಕಾಂತಕಪದಂ ಪುಷ್ಪಂ ಪ್ರಹೃಷ್ಟಂ ಮನಃ ॥೨೩॥

ಪ್ರಾಪ್ಯೇವೋಷರಭೂತಲೇ ಜಲಮತಿಶ್ರಾಂತೋ ವಸಂತಂ ಪಿಕೋ
ವಂಧ್ಯಾಪುತ್ರಮಘಕ್ಷಯಂ ಮುನಿಜನಶ್ಚಂದ್ರಂ ಚಕೋರಾಂಗನಾ ।
ಮೇಘಂ ಚಾತಕಬಾಲಕಃ ಶಿವಪುರೀಂ ವಿಶ್ವೇಶ್ವರಾರಾಧಕಃ
ಪ್ರಾಪಾನಂದಮಮುಂದಮಿಂದುಮುಕುಟಂ ಮನ್ಮಾನಸಂ ಲಾಲಸಂ ॥೨೪॥

ಮಚ್ಚಿತ್ತಂ ಮಕರಂದಪಾನನಿರತೋ ಭೃಂಗೋ ಮರಂದಂ ಯಥಾ
ಕಾಮೀ ಸುಂದರಕಾಮಿನೀಮಿವ ಧನೀ ನಿಃಸ್ವೋ ಯಥಾ ಬಾಲಕಃ ।

ಸ್ವಾಮಿಯೇ, ಅಂತಕನಿಗೂ ಅಂತಕನಾದ ನಿನ್ನ ಸ್ಥಾನವನ್ನು ಹೊಂದಿದ ನನ್ನ ಮನಸ್ಸು, ಕಾಂತನನ್ನು ಹೊಂದಿದ ವಿರಹಿಣಿ, ಸೂರ್ಯೋದಯವನ್ನು ಕಂಡ ಕಮಲ, ಚಂದ್ರನನ್ನು ಹೊಂದಿದ ಕನ್ನೈದಿಲೆ, ಅಮೃತವನ್ನು ಕುಡಿದ ಮನುಷ್ಯ, ರಾಜ್ಯವನ್ನು ಪುನಃ ಸಂಪಾದಿಸಿದ ಪಾಳೇಗಾರ, ಕಿವಿಯನ್ನು ಹೊಂದಿದ ಕಿವುಡ, ಕಣ್ಣುಗಳನ್ನು ಕಂಡ ಕುರುಡ, ನಡೆಯುವುದಕ್ಕೆ ಬರುವ ಕುಂಟ, ಮಾತನ್ನು ಬಲ್ಲ ಮೂಗ, ಇವರಂತೆ ಹಿಡಿಸಲಾರದಷ್ಟು ಸಂತೋಷವನ್ನು ಹೊಂದಿದೆ. ॥೨೩॥

ದೇವನೇ, ಮರುಭೂಮಿಯಲ್ಲಿ ಬಳಲಿದವನಿಗೆ ನೀರೂ, ಕೋಗಿಲೆಗೆ ವಸಂತ ಮಾಸವೂ, ಬಂಜೆಗೆ ಸಂತಾನವೂ, ಋಷಿಗಳಿಗೆ ಪಾಪನಾಶವೂ, ಹೆಣ್ಣು ಚಕೋರ ಹಕ್ಕಿಗೆ ಚಂದ್ರನೂ, ನೀರು ಗುಟುಕಹಕ್ಕಿಯ ಮರಿಗೆ (ಚಾತಕಃ) ಮೋಡವೂ, ಶಿವ ಪೂಜೆಮಾಡಿದವನಿಗೆ ಕೈಲಾಸವೂ ಲಭಿಸಿದರೆ ಎಂತಹ ಆನಂದವಾಗಬಲ್ಲದೋ ಹಾಗೆ, ಈಗ ಆನಂದರೂಪನೂ ಚಂದ್ರಶೇಖರನೂ ಆದ ನಿನ್ನನ್ನು ಹೊಂದಿದ ನನ್ನ ಈ ಚಪಲ ಮನಸ್ಸಿಗೆ ಆನಂದವಾಗಿದೆ. ॥೨೪॥

ಶಿವನೇ, ದುಂಬಿಯು ಹೂರಸವನ್ನೂ, ಕಾಮುಕನು ಸುಂದರಿಯನ್ನೂ, ದರಿದ್ರನು ಹಣವನ್ನೂ, ಬಾಲಕನು ಸ್ತನ್ಯವನ್ನೂ, ನವಿಲು ಮೋಡವನ್ನೂ

ಸ್ತ್ವನ್ಯಂ ಮೇಘುನಿವಾಂಕುರಂ ಶಿವ ತಥಾ ತ್ವನ್ನಾಮಸಂಕೀರ್ತನಂ
ಲಬ್ಧ್ವಾ ತುಷ್ಯತು ತುಷ್ಟಮಸ್ತು ಸತತಂ ಯಾಚೇ ನ ಚಾನ್ಯಾನ್ ವರಾನ್
॥೨೪॥

ಶಂಭೋ ತ್ವಚ್ಚರಣಾರವಿಂದಮಧುನಾ ದೃಷ್ಟಂ ಪುನರ್ಮೇ ಕದಾ
ದೇಯಂ ದರ್ಶನಮಿಂದುಶೇಖರ ದಯಾಸಿಂಧೋ ಯದಾ ನೇಕ್ಷಿತಂ ।
ತ್ವತ್ಪಾದಾಂಬುಜಮಾದರೇಣ ನ ತದಾ ಗ್ರಾಹ್ಯಂ ಜಲಂ ವಾ ಕಥಂ
ಮಾಮಾಜ್ಞಾಪಯ ದರ್ಶನಾಯ ಭಗವತ್ಸಾಯಂ ಪ್ರಗೇವ ಪ್ರಭೋ ॥೨೫॥

ಏತಸ್ಮಿನ್ನಧಿಕೋ ವರೋ ವರದ ಮೇ ನಾಪೇಕ್ಷಿತಃ ಸರ್ವಥಾ
ಶರ್ವಾಣ್ಯಂ ಶಪಥಃ ಶಿವಾ ಚರಣಯೋಸ್ತ್ವತ್ಪಾದಪದ್ಮೇಽಪಿ ಮೇ ।
ಅನ್ಯತ್ಕಿಂ ಮದಪೇಕ್ಷಿತಂ ಶಿವಪದಾಂಭೋಜೇ ಭಜೇ ಸಂತತಂ
ತನ್ಮಾತ್ರಂ ಮದಪೇಕ್ಷಿತಂ ಹೃದಯ ಮಂಯ್ಯತ್ರಾನ್ವಹಂ ಸಾದರಂ ॥೨೬॥

ಕಂಡು ಸಂತೋಷಪಡುವಹಾಗೆ, ನನ್ನ ಮನಸ್ಸು ನಿನ್ನ ನಾಮವನ್ನು ಹಾಡಿ ಸಂತೋಷವನ್ನು ಹೊಂದಲಿ. ನನಗೆ ಇದಕ್ಕಿಂತಲೂ ಹೆಚ್ಚಾದ ವರವೇನೂ ಬೇಡ. ॥೨೪॥

ಶಂಕರನೇ, ನಿನ್ನ ಪಾದಕಮಲದ ಮಕರಂದವನ್ನು ಯಾವಾಗ ನಾನು ಸೇವಿಸಲಿ? ಮತ್ತೆ ಯಾವಾಗ ಅಲಭ್ಯವಾದ ನಿನ್ನ ದರ್ಶನವನ್ನು ಕೊಡುವೆ? ಕರುಣಾಳುವೇ! ಚಂದ್ರಶೇಖರನೇ! ಒಂದು ಸಲವಾದರೂ ಭಕ್ತಿಯಿಂದ ನಿನ್ನ ಪಾದವನ್ನು ನಾನು ನಮಿಸಲಿಲ್ಲ. ಮತ್ತು ನೀರಿನಿಂದ ಅಭಿಷೇಕ ಮಾಡಲಿಲ್ಲ. ಇಂತಹ ನನಗೆ ನಿನ್ನ ದರ್ಶನವು ಸರ್ವದಾ ಲಭಿಸುವಂತೆಯೂ, ಪಾದಸೇವೆ ಮಾಡುವಂತೆಯೂ, ಸಾಯಂಪ್ರಾತಃಕಾಲಗಳಲ್ಲಿ ನಿನ್ನ ಎಡೆಯಲ್ಲಿಯೇ ಇರುವಂತೆಯೂ ವರಕೊಡು. ॥೨೫॥

ಇದಕ್ಕಿಂತಲೂ ಹೆಚ್ಚಾಗಿ ಬೇಕಾದುದು ನನಗೆ ಖಂಡಿತವಾಗಿಯೂ ಮತ್ತೊಂದಿಲ್ಲ. ಇದು ಪಾರ್ವತಿಯ ಪಾದಕಮಲದಾಣೆಗೂ ಪರಮೇಶ್ವರನ ಚರಣದಾಣೆಗೂ ನಿಜ. ಶಿವನ ಪಾದಪದ್ಮವನ್ನು ಯಾವಾಗಲೂ ಭಜನೆಮಾಡುವುದಕ್ಕಿಂತಲೂ ಬೇರೆ ಇನ್ನೇನೂ ನನಗೆ ಬೇಡ. ಯಾವಾಗಲೂ ನನ್ನ ಮನಸ್ಸು ಶಿವನನ್ನೇ ಅನುಸರಿಸಿ ಇರುವುದು ಮಾತ್ರ ಬೇಕು. ॥೨೬॥

ಇತ್ಯಾಕರ್ಣ್ಯ ವಚಸ್ತಸ್ಯ ತಮಾಲಿಂಗ್ಯ ಮುಹುರ್ಮುಹುಃ ।
ಪ್ರೀತಿರ್ಯಥಾ ತಥೈವಾಸ್ತು ತ್ವದನ್ಯಃ ಕಃ ಪ್ರಿಯೋ ಮಮ ॥೨೭॥

ಗಣೇಶ್ವರಕುಮಾರಾಭ್ಯಾಂ ಶಿವಯಾಪಿ ಸಹಾನ್ವಹಂ ।
ಯೋಗೋಽಸ್ತ್ವಿತಿ ರುಚಿಸ್ತಾವದನ್ಯತ್ರ ಪ್ರೀತಿರೇವ ನ ॥೨೮॥

ಇತ್ಯುಕ್ತ್ವಾ ಪುನರಾಲಿಂಗ್ಯ ಕುಮಾರಗಣಪೌ ಶಿವಃ ।
ವಸನಾನಿ ವಿಚಿತ್ರಾಣಿ ದದಾವಾಭರಣಾನ್ಯಪಿ ॥೨೯॥
ತತಃ ಪರಮುವಾಚೇದಂ ವಚನಂ ಗಿರಿಜಾಪತಿಃ ।
ವಸ್ತ್ರಾದ್ಯೈರ್ನಂದಿಕೇಶಾದೀನ್ ತೋಷಯಸ್ವೇತಿ ಸಾದರಂ ॥೩೦॥

ತತಃ ಪ್ರಣಮ್ಯ ತಂ ಸಾಂಬಂ ನಿರ್ಗತೋ ಗಣಪಾನ್ವಿತಃ ।
ರತ್ನದ್ವಾರಾಣ್ಯಪಾರಾಣಿ ತೀರ್ತ್ವಾ ವಿಸ್ಮಯಸಂಯುತಃ ॥೩೧॥

ಈಶ್ವರನು ಆ ಕುಮಾರಸ್ವಾಮಿಯ ಮಾತನ್ನು ಕೇಳಿ ಸಂತೋಷದಿಂದ ಬಾರಿಬಾರಿಗೂ ಅಪ್ಪಿಕೊಂಡು ನಿನ್ನಿಷ್ಟದಂತೆ ಆಗಲಿ, ನಿಮಗಿಂತಲೂ ಪ್ರೀತಿಪಾತ್ರರು ನನಗೆ ಬೇರೆ ಯಾರಿರುವರು ? ಎಂದನು. ॥೨೭॥

ನನಗೆ ಗಣೇಶ, ಕುಮಾರಸ್ವಾಮಿ, ಗೌರಿ ಈ ಮೂವರೊಂದಿಗೇ ಸ್ಥಿರಸಂಬಂಧವಿರುತ್ತದೆ. ಅದಕ್ಕಾಗಿ ಈ ಮೂವರಲ್ಲಿ ನನಗೆ ಪ್ರೀತಿಇರುವುದು. ಇವರನ್ನು ಬಿಟ್ಟು ಬೇರೆಯವರಲ್ಲಿ ನನಗೆ ಅಕ್ಕರೆಯೇ ಇಲ್ಲ ಎಂದನು. ಈಶ್ವರನು ಹೀಗೆ ಹೇಳಿ ಆ ಗಣೇಶ, ಷಣ್ಮುಖ ಇವರನ್ನು ಪುನಃ ಅಪ್ಪಿಕೊಂಡು ಅವರಿಗೆ ವಿವಿಧವಾದ ವಸ್ತ್ರಗಳನ್ನೂ ಒಡವೆಗಳನ್ನೂ ಕೊಟ್ಟನು. ॥೨೮-೨೯॥

ಆಮೇಲೆ ಈಶ್ವರನು, ಕುಮಾರನೇ, ವಸ್ತ್ರವೇ ಮುಂತಾದುವುಗಳನ್ನು ನಂದಿಯೇ ಮೊದಲಾದವರಿಗೆ ಕೊಟ್ಟು ಸಂತೋಷಪಡಿಸು ಎಂದು ಮತ್ತೆ ಹೇಳಿದನು. ॥೩೦॥

ಅನಂತರ ಕುಮಾರಸ್ವಾಮಿಯು ಅಂಬಿಕೆಯಿಂದ ಕೂಡಿದ ಶಂಕರನಿಗೆ ನಮಸ್ಕಾರಮಾಡಿ ಗಣೇಶನೊಂದಿಗೆ ಹೊರಟನು. ಹಾಗೆ ಅಲ್ಲಿರುವ ಅನೇಕ ರತ್ನಮಯ ಬಾಗಿಲುಗಳನ್ನು ದಾಟಿಬರುತ್ತಾ ಅದರಿಂದ ಅಚ್ಚರಿವಡೆದನು. ॥೩೧॥

ತತಃ ಪರಂ ಮಣಿಶ್ರೇಷ್ಠರಂಜಿತೇ ಶಿಂಜಿತಾಶ್ರಿತೇ ।
ಮಂದಿರೇ ಸುಂದರೇ ಧೀರಃ ಕುಮಾರಃ ಸುಕರಃ ಸ್ಥಿತಃ ॥೩೨॥

ತತಃ ಸಮಾಗತಃ ಸರ್ವೇ ನಂದಿಕೇಶಮುಖಾ ಗಣಾಃ ।
ಪ್ರಣತಾಃ ಪ್ರಸ್ತುವಂತಸ್ತಂ ಸ್ತುತಿತತ್ಪರಮಾದರಾತ್ ॥೩೩॥

ತತಃ ಸಸ್ಮಾರ ತರಸಾ ದಿವ್ಯಾಭರಣಪರ್ವತಾನ್ ।
ದುಕೂಲಪರ್ವತಾನನ್ಯಾನ್ ತದಾ ದಿವ್ಯಾನ್ನಪರ್ವತಾನ್ ॥೩೪॥

ತದಪೇಕ್ಷಾನುಸಾರೇಣ ದದೌ ತೇಭ್ಯೋ ಯಥಾಕ್ರಮಂ ।
ತಾನ್ ಕೋಟಿಶಃ ಪ್ರಹೃಷ್ಟಾಸ್ತೇ ತುಷ್ಟುವುರ್ಗಣನಾಯಕಾಃ ॥೩೫॥

ತತಃ ಪರಂ ಮಂದಿರಾಣಿ ದದೌ ತೇಭ್ಯಸ್ತದಿಚ್ಛಯಾ ।
ಚಿತ್ರನಿರ್ಮಾಣರಮ್ಯಾಣಿ ಹರ್ಮ್ಯಾಣ್ಯಪಿ ಚ ಕೋಟಿಶಃ ॥೩೬॥

ಆಮೇಲೆ ಷಣ್ಮುಖನು ಒಳ್ಳೊಳ್ಳೆ ಮಣಿಗಳಿಂದ ಪ್ರಕಾಶಿಸುತ್ತಾ ಕಿರುಗೆಜ್ಜೆಗಳ ಧ್ವನಿಗಳಿಂದ ಕೂಡಿದ ಸುಂದರವಾದ ಮನೆಯಲ್ಲಿ ಸ್ವಸ್ಥವಾಗಿ ವಾಸಿಸುತ್ತಿದ್ದನು. ॥೩೨॥

ಅನಂತರ ನಂದಿಕೇಶ್ವರನೇ ಮೊದಲಾದ ಎಲ್ಲಾ ಪ್ರಮಥಗಣಗಳೂ, ಧ್ಯಾನಪರನಾದ ಕಾರ್ತಿಕೇಯನ ಹತ್ತಿರ ಬಂದು ನಮಸ್ಕರಿಸಿ, ಆತನನ್ನು ಹೊಗಳಲು ಆರಂಭಿಸಿದರು. ॥೩೩॥

ಗಣಗಳು ಸ್ತೋತ್ರಮಾಡಿದ ಮೇಲೆ ಆ ಕುಮಾರಸ್ವಾಮಿಯು ಒಳ್ಳೆ ಒಡವೆಗಳನ್ನೂ, ವಸ್ತ್ರಗಳನ್ನೂ, ಪರಮಾನ್ನ, ಭಕ್ಷ್ಯಭೋಜ್ಯ, ಇವುಗಳನ್ನೂ ರಾಶಿರಾಶಿಯಾಗಿ ಸ್ಮರಿಸಿದನು. ಅದೆಲ್ಲವನ್ನೂ ಆಮೇಲೆ ಗಣಗಳಿಗೆ ಬೇಕುಬೇಕಾದಷ್ಟು ಕ್ರಮವಾಗಿ ಕೊಟ್ಟನು. ಆ ಗಣಗಳೆಲ್ಲಾ ಅದರಿಂದ ಸಂತುಷ್ಟವಾದುವು. ॥೩೫॥

ಅನಂತರ ಆ ಗಣಗಳ ಬಯಕೆಯಂತೆ ಚಿತ್ರವಿಚಿತ್ರವಾಗಿ ಕಟ್ಟಿದ ಮನೆಗಳನ್ನೂ, ಮನೋಹರವಾದ ದೊಡ್ಡ ದೊಡ್ಡ ಉಪ್ಪರಿಗೆ ಮನೆಗಳನ್ನೂ ಒದಗಿಸಿದನು. ॥೩೬॥

ತತಃ ಪರಂ ಗಣಾಃ ಸರ್ವೇ ಶರ್ವಧ್ಯಾನಪರಾಯಣಾಃ ।
ಸ್ವಸ್ವಮಂದಿರಮಾಸಾದ್ಯ ಸದ್ಯಸ್ಸಂತುಷ್ಟಮಾನಸಾಃ ॥೩೭॥

ತತಃ ಪರಂ ಕುಮಾರೋಽಪಿ ಸಂಯುತೋ ದೇವಸೇನಯಾ ।
ವಿಚಾರಚತುರೋ ಧೀರೋ ರಮ್ಯಂ ಹರ್ಮ್ಯಮುಪಾಶ್ರಿತಃ ॥೩೮॥

ಗಣೇಶ್ವರೋಽಪಿ ಸ್ವರಯಾ[1] ತಯಾ ಸರಸಯಾ ಸಹ ।
ದಿವ್ಯಂ ಪ್ರಾಸಾದಮಾಸಾದ್ಯ ಹೃದ್ಯಾಚಾರರತೋ ಮುದಾ ॥೩೯॥

ತತಃ ಪರಂ ಜಯಾಮಂಬಾ ವಿಜಯಾಮಪಿ ಸಾದರಂ ।
ಆಹೂಯಾಭರಣಾದೀನಿ ದದೌ ತಾಭ್ಯಾಂ ತು ಕೋಟಿಶಃ ॥೪೦॥

ಪಶ್ಚಾನ್ನಾಟ್ಯಾಂಗನಾಃ ಸರ್ವಾಃ ಸಮಾಹೂಯ ಶಿವಾ ತದಾ ।
ತಾಭ್ಯೋಽಪ್ಯಾಭರಣಾದೀನಿ ದದೌ ದಿವ್ಯಾನಿ ಸಾದರಂ ॥೪೧॥

ಬಳಿಕ ಎಲ್ಲಾ ಗಣಗಳೂ ಈಶ್ವರಧ್ಯಾನದಲ್ಲಿ ಆಸಕ್ತರಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿ ಸಂತೋಷಮನಸ್ಕರಾಗಿದ್ದರು. ||೩೮||

ಬಳಿಕ ವಿಚಾರನಿಪುಣನೂ, ಪರಾಕ್ರಮಶಾಲಿಯೂ ಆದ ಷಣ್ಮುಖನು ದೇವಸೇನೆಯಿಂದ ಕೂಡಿದವನಾಗಿ ಮನೋಹರವಾದ ದೊಡ್ಡ ಉಪ್ಪರಿಗೆ ಮನೆಯಲ್ಲಿ ನೆಲಸಿದನು. ||೩೮||

ಅನಂತರ ಗಣೇಶನೂ ಸರಳಮನಸ್ಕಳಾದ ಸ್ವರೆಯೊಂದಿಗೆ, ಮನೋಹರವಾದ ಭವನದಲ್ಲಿ ವಾಸಿಸುತ್ತಾ ಸದಾಚಾರದಲ್ಲಿ ನಿರತನಾದನು. ||೩೯||

ಹಾಗೆಯೇ ದೇವಿಯೂ ಸಹ ಜಯ, ವಿಜಯ ಎಂಬ ಇಬ್ಬರನ್ನು ಕರೆದು ಅವರಿಗೆ ಅನೇಕ ಒಡವೆ ಮುಂತಾದವುಗಳನ್ನು ಪಾರಿತೋಷಿಕವಾಗಿ ಕೊಟ್ಟಳು.||೪೦||

ನಾಟ್ಯವಾಡುವ ಸ್ತ್ರೀಯರನ್ನೆಲ್ಲಾ ಪ್ರೀತಿಯಿಂದ ಕರಸಿ ಅವರಿಗೂ ಸಹ ಒಡವೆ, ವಸ್ತ್ರ ಮೊದಲಾದ ಪಾರಿತೋಷಕಗಳನ್ನು ಕೊಟ್ಟಳು. ||೪೧||

---

1 ಸಾಸ್ತ್ರೀಭಾವಾಕ್ಷರಾಸ್ವರಾ (ಪಾ ರ)

ತತಃ ಪರಂ ಮಹಾದೇವಃ ಪುಷ್ಪಪ್ರಾಸಾದಮುತ್ತಮಂ ।
ಸಹಾಸಸಾದ ಶಿವಯಾ ಪರಯಾ ಹೃದ್ಯಮುತ್ತಮಂ ॥೪೨॥

ತತ್ರ ಲೀಲಾಕಲ್ಪಿತಾನಿ ದಿವ್ಯಾನ್ನಾನಿ ಸಹಾಂಬಯಾ ।
ಭಕ್ತ್ಯಾ ಯಥೇಷ್ಟಮಾಸಾದ್ಯ ಫಲಾನಿ ಮುದಿತಃ ಶಿವಃ ॥೪೩॥

ತತಃ ಪರಂ ಕೇತಕೀನಾಂ ಗಂಧಮಾಘ್ರಾಯ ಶಂಕರಃ ।
ವಾತಾನೀತಂ ಶಿವಾಮಾಹ ಗ್ರಾಹ್ಯೋ ಗಂಧಸ್ತ್ವಯೇತ್ಯಯಂ ॥೪೪॥

ತತಃ ಪರಮುವಾಚಾಂಬಾ ಗಂಧಾನ್ನಾನಾವಿಧಾನಪಿ ।
ತ್ವದುಪಾಘ್ರಾತಶೇಷಾನ್ಮೇ ಪ್ರಯಚ್ಛೇತಿ ಮುಹುರ್ಮುಹುಃ ॥೪೫॥

ತತಃ ಪರಂ ರುದ್ರವೀಣಾಮಾದಾಯ ಭವವಲ್ಲಭಾ ।
ಗಾನವಿದ್ಯಾಸ್ವರೂಪಾ ಸಾ ಜಾತಾ ಗಾನರತಾ ಶಿವಾ ॥೪೬॥

ಅಲ್ಲಿಂದ ಮುಂದೆ ಪರಮೇಶ್ವರನು ಹೃದಯಂಗಮವಾದ ಮತ್ತು ಶ್ರೇಷ್ಠವಾದ "ಪುಷ್ಪ" ಎಂಬ ಹೆಸರಿನ ಮಹಡಿಮನೆಯಲ್ಲಿ ಪಾರ್ವತೀಸಹಿತನಾಗಿ ವಾಸಿಸಲು ಇಷ್ಟಪಟ್ಟನು. ॥೪೨॥

ಅಲ್ಲಿ ಲೀಲಾಮಾತ್ರದಿಂದಲೇ ಸಿದ್ಧವಾದ ದಿವ್ಯಾನ್ನಗಳನ್ನೂ, ಬೇಕಾದಷ್ಟು ಹಣ್ಣುಹಂಪಲುಗಳನ್ನೂ ಸಹ ವಿಶ್ವಾಸದಿಂದ ಪಾರ್ವತಿಯೊಂದಿಗೆ ಸವಿದನು. ॥೪೩॥

ಬಳಿಕ ಶಿವನು ಗಾಳಿಯಿಂದ ತರಲ್ಪಟ್ಟ ಕೇದಿಗೆ ಹೂಗಳ ಪರಿಮಳವನ್ನು ಸೇವಿಸಿ, ಪಾರ್ವತಿಯನ್ನು ಕುರಿತು ಈ ಪರಿಮಳವು ಸೇವನೀಯವಲ್ಲವೇ ? ಎಂದನು. ॥೪೪॥

ಆಮೇಲೆ ಗಿರಿಜೆಯು ಎಲೈ ದೇವ, ನೀನು ಸೇವಿಸಿ ಉಳಿಸಿರುವ ಬಗೆ ಬಗೆಯ ಸುಗಂಧದ್ರವ್ಯಗಳನ್ನು ನನಗೂ ಕೊಡು ಎಂದು ಬಾರಿಬಾರಿಗೂ ಬೇಡಿದಳು. ॥೪೫॥

ಆಮೇಲೆ ಸಂಗೀತವಿದ್ಯಾಸ್ವರೂಪಿಣಿಯಾದ ಆ ದಾಕ್ಷಾಯಣಿಯು ರುದ್ರವೀಣೆಯನ್ನು ತೆಗೆದುಕೊಂಡು ಸಂಗೀತಕಲೆಯಲ್ಲಿ ನಿರತಳಾದಳು. ॥೪೬॥

ಶಿವ ಶಿವ ಹರ ಶಂಭೋ ಭರ್ಗ ಭೀಮ ಸ್ಮರಾರೇ
ತ್ರಿಪುರಹರ ಯಮಾರೇ ಕಾಲಕೂಟಾಂಧಕಾರೇ ।
ಪರಶಿವ ಪರಮಾತ್ಮನ್ ರುದ್ರವೀಣಾ ಪ್ರವೀಣಾ
ವದತಿ ನಖಮುಖಾಗ್ರಾಘಾತಭೀತಿಂ ಹರೇತಿ ॥೪೭॥

ಸೃಷ್ಟಿರೇಷಾ ಮಹಾದೇವ ಭೂತಪೂರ್ವಾ ನ ಸರ್ವಥಾ ।
ಬೀಜಮಸ್ತಿ ಕಿಮತ್ರೇತಿ ಬಭಾಷೇ ವಚನಂ ಶಿವಾ ॥೪೮॥

ಪುರಾ ಗಂಧರ್ವನಗರೇ ಶಿವಲಿಂಗಮನೋಹರೇ ।
ಗಂಧರ್ವರಾಜನಾರೀಣಾಂ ವಿಹಾರನಿಕರಾಕರೇ ॥೪೯॥

ಹೂ ಹೂ ನಾಮ್ನಾ ಪ್ರಸಿದ್ಧೋಽಭೂದ್ಗಂಧರ್ವಗಣನಾಯಕಃ ।
ಸ ಸರ್ವಭಾಗ್ಯಸಂಪನ್ನೋ ವದಾನ್ಯಶ್ಚ ವಿಶೇಷತಃ ॥೫೦॥

ಎಲೈ ಮಂಗಳಕರನಾದ ಶಿವನೇ, ಹರನೇ, ಶಂಭುವೇ, ಭರ್ಗನೂ, ಭೀಮನೂ ಎನಿಸಿದ ಮನ್ಮಥನ ಶತ್ರುವೇ, ತ್ರಿಪುರರನ್ನು ನಾಶಮಾಡಿದಾತನೇ, ಯಮನ ಹಗೆಯೇ, ಕಾಲಕೂಟವನ್ನು ಧರಿಸಿದವನೇ, ಅಂಧಕಾಸುರನನ್ನು ನಾಶಮಾಡಿದವನೇ, ಪರಶಿವನೇ, ಪರಮಾತ್ಮನೇ ನಿನಗೆ ನಮಸ್ಕಾರ, ಎಂದು ಸಂಗೀತವಿದ್ಯೆಯಲ್ಲಿ ಕುಶಲಳಾಗಿ ರುದ್ರವೀಣೆ ಬಾರಿಸುವುದರಲ್ಲಿ ಜಾಣಳಾದ ಗಿರಿಜೆಯು ಉಗುರುಗಳಿಂದ ವೀಣೆಯನ್ನು ಬಾರಿಸುತ್ತಾ ಹಾಡಿದಳು. ಆ ವೀಣೆಯೇ ಹಾಗೆ ಹಾಡುವಂತಿದ್ದಿತು. ॥೪೭॥

ದೇವ, ಈ ದಿವ್ಯವಸ್ತುಸೃಷ್ಟಿಯು ಹಿಂದೆ ಎಂದೂ ಆಗಿಲ್ಲ. ಹೀಗೆ ಪುನಃ ಪುನಃ ಸೃಷ್ಟಿಗೆ ಕಾರಣವಾದರೂ ಏನಿರಬಹುದು? ಎಂದು ಪಾರ್ವತಿಯು ಶಿವನನ್ನು ಕೇಳಿದಳು. ॥೪೮॥

ಹಿಂದೆ ಈಶ್ವರಲಿಂಗಗಳಿಂದ ರಮ್ಯವಾಗಿಯೂ, ಗಂಧರ್ವರಾಜಕನ್ನಿಕೆಯರ ವಿಹಾರವನಗಳಿಂದ ಶೋಭಿತವಾಗಿಯೂ ಇರುವ ಒಂದು ಗಂಧರ್ವರ ಪಟ್ಟಣವಿತ್ತು. ಅಲ್ಲಿ ಪ್ರಸಿದ್ಧನಾದ "ಹೂಹೂ" ಎಂಬ ಹೆಸರುಳ್ಳ ಗಂಧರ್ವರಾಜನಿದ್ದನು. ಅವನು ಸಮಸ್ತ ಐಶ್ವರ್ಯಗಳಿಂದಲೂ ಕೂಡಿದ್ದನು. ಮತ್ತು ಹೆಚ್ಚಾಗಿ ದಾನಮಾಡುವುದರಿಂದ ಉದಾರನೆನಿಸಿದ್ದನು. ॥೪೯-೫೦॥

ಸ ಪುಷ್ಪಕಂ ಸಮಾರುಹ್ಯ ಚಚಾರ ಭುವನತ್ರಯೇ ।
ಕುತ್ರ ಕೋ ವಾ ವಿಶೇಷೋಽಸ್ತಿ ಕಿಂ ಪ್ರಿಯಂ ಕಸ್ಯ ವಾ ಭುವಿ ॥೫೧॥

ಕಿಂ ವಾ ಮನೋಹರಂ ಲೋಕೇ ಹರಾರಾಧನಸಾಧನಂ ।
ಏವಂ ವಿಚಾರ್ಯ ತರಸಾ ಜಗಾಮ ಗಿರಿಕಂಧರಂ ॥೫೨॥

ತತ್ರ ಕೋಽಪಿ ಮಹಾವೀರಃ ಶಾಂಕರಃ ಕರುಣಾಕರಃ ।
ಶಂಕರಾರಾಧನೋದ್ಯುಕ್ತಸ್ತಂ ದೃಷ್ಟ್ವಾ ಪ್ರಣತೋಽಪಿ ಸಃ ॥೫೩॥

ತತಸ್ತಂ ವಿನಯೇನೈವ ಹೂಹೂಗಂಧರ್ವಸತ್ತಮಃ ।
ಕಿಮತ್ರ ಶಾಂಭವಶ್ರೇಷ್ಠ ಸ್ಥೀಯತೇ ಗಿರಿಗಹ್ವರೇ ॥೫೪॥

ಸೌಂದರ್ಯವೀರ್ಯಸಂಪನ್ನ ಸೌಭಾಗ್ಯನಿಲಯೋಽಧುನಾ ।
ಕಿಂ ಕರ್ತುಮುದ್ಯತಃ ಕಿಂ ತೇ ದುರ್ಲಭಂ ಭುವನತ್ರಯೇ ॥೫೫॥

ಅವನು ಒಂದು ದಿನ ಪುಷ್ಪಕವಿಮಾನವನ್ನು ಹತ್ತಿ ಮೂರು ಲೋಕದಲ್ಲಿ ಎಲ್ಲಿ ಏನು ವಿಶೇಷವಿದೆ? ಭೂಮಿಯಲ್ಲಿ ಯಾರಿಗೆ ಯಾವುದು ಪ್ರಿಯವಾದದ್ದು ? ಮನೋಹರಗಳಾದ ಈಶ್ವರಪೂಜೆಯ ಸಾಧನಗಳು ಯಾವುವು ? ಎಂದು ತಿಳಿಯುವುದಕ್ಕಾಗಿ ಸಂಚರಿಸುತ್ತಾ ಬಂದು, ಒಂದು ಬೆಟ್ಟದ ತಪ್ಪಲನ್ನು ಸೇರಿದನು. ||೫೧-೫೨||

ಅಲ್ಲಿ ಒಬ್ಬ ಪರಾಕ್ರಮಶಾಲಿಯೂ ದಯಾಳುವೂ ಆದ ಭಕ್ತನು ಶಿವನನ್ನು ಪೂಜಿಸಲು ಉಪಕ್ರಮಿಸಿದ್ದನು. ಆತನನ್ನು ನೋಡಿ ರಾಜನು ಕೈಮುಗಿದನು. ಮತ್ತು ಆತನನ್ನು ಕುರಿತು ಏತಕ್ಕೆ ಈ ಬೆಟ್ಟದ ಗುಹೆಯಲ್ಲಿ ವಾಸಿಸುವೆ? ಎಂದು ನಮ್ರಭಾವದಿಂದ ಪ್ರಶ್ನಿಸಿದನು. ||೫೩-೫೪||

ಪ್ರಶ್ನೆಯನ್ನು ಮುಂದುವರಿಸುತ್ತಾ ಸೌಂದರ್ಯ, ಪರಾಕ್ರಮ, ಐಶ್ವರ್ಯ ಇವುಗಳಿಂದ ಸಮೃದ್ಧನಾದ ನೀನು ಈಗ ಏನುಮಾಡುವುದಕ್ಕೆ ಪ್ರಯತ್ನಿಸುತ್ತಿದ್ದೀಯೆ ? ನಿನಗೆ ಸಾಧ್ಯವಿಲ್ಲದಿರುವುದು ಈ ಮೂರು ಲೋಕದಲ್ಲಿ ಯಾವುದಿದೆ? ಎಂದನು. ||೫೫||

ಇತಿ ತದ್ವಚನಂ ಶ್ರುತ್ವಾ ಸೋಽಪಿ ತಂ ಪ್ರಾಹ ಸಸ್ಮಿತಃ ।
ಅತ್ಯಾಶ್ಚರ್ಯಕರಾಂ ವಾಣೀಂ ಶೃಣು ಕರ್ಣವಿಭೂಷಣಂ ॥೫೬॥

ಅತ್ರಾಸ್ತಿ ಲಿಂಗಮುತ್ಕೃಷ್ಟಮಿದಂ ಸರ್ವೇಷ್ಟದಾಯಕಂ ।
ಏತದಾರಾಧನೇನೈವ ಸಿದ್ಧಾಃ ಸಿದ್ಧಿಂಗತಾಃ ಪುರಾ ॥೫೭॥

ಸಿದ್ಧಲಿಂಗಮಿತಿ ಖ್ಯಾತಂ ಸಿದ್ಧಿದತ್ವೇನ ನಿಶ್ಚಿತಂ ।
ಅತ್ರ ಪೂರ್ವಮಭೂದ್ವಿಪ್ರೋ ದರಿದ್ರೋ ವ್ಯಾಧಿಪೀಡಿತಃ ॥೫೮॥

ಕುಷ್ಠೀ ವ್ರಣಪ್ರರಿಕ್ರಾಂತಃ ಕುನಖೀ ಶಾವದಂತಕಃ ।
ಕುಬ್ಜೋ ವಿಕರ್ಣಃ ಕಾಣಶ್ಚ ಸಚ್ಛಿದ್ರಮಲಿನಾಂಬರಃ ॥೫೯॥

ತೇನ ಕಾಣೇನ ಭುಕ್ತಾನಿ ದುಃಖಾನಿ ವಿವಿಧಾನ್ಯಪಿ ।
ಸದ್ದೈವಯೋಗಾದೇತಸ್ಯ ಲಿಂಗಸ್ಯ ನಿಕಟೇ ಸ್ಥಿತಃ ॥೬೦॥

ಹೀಗೆ ರಾಜನ ಮಾತನ್ನು ಕೇಳಿ ಆ ಈಶ್ವರಭಕ್ತನು ನಸುನಗುತ್ತಾ ಹೀಗೆಂದನು.—ಎಲೈ ಗಂಧರ್ವನೇ, ಅತ್ಯಂತ ವಿಸ್ಮಯವನ್ನುಂಟುಮಾಡುವ ಮತ್ತು ಕಿವಿಗಿಂಪಾದ ಈ ನನ್ನ ಮಾತನ್ನು ಕೇಳು. ॥೫೬॥

ಇಲ್ಲಿ ಅತ್ಯುತ್ತಮವಾದ ಎಲ್ಲಾ ಕೋರಿಕೆಗಳನ್ನೂ ಕೊಡುವ ಒಂದು ಶಿವಲಿಂಗವಿರುತ್ತದೆ. ಹಿಂದೆ ಸಿದ್ಧರು ಇದರ ಅರ್ಚನೆಯಿಂದಲೇ ಸಕಲ ಸಿದ್ಧಿಯನ್ನೂ ಪಡೆದರು. ॥೫೭॥

ಸಿದ್ಧಿಯನ್ನು ಕೊಡತಕ್ಕುದಾದುದರಿಂದ ಈ ಲಿಂಗವು ಸಿದ್ಧಲಿಂಗವೆಂದು ಪ್ರಸಿದ್ಧವಾಯಿತು. ಹಿಂದೆ ಇಲ್ಲಿ ಒಬ್ಬ ರೋಗಿಯಾದ ಬಡ ಬ್ರಾಹ್ಮಣನು ವಾಸಿಸುತ್ತಿದ್ದನು. ॥೫೮॥

ಆ ಬಡಬ್ರಾಹ್ಮಣನು ಕುಷ್ಠರೋಗವುಳ್ಳವನಾಗಿದ್ದನು. ಮೈ ತುಂಬ ಹುಣ್ಣುಗಳಿದ್ದವು. ಹಲ್ಲುಗಳೆಲ್ಲಾ ಹುಳುಹಿಡಿದವುಗಳು. ಆತನು ಕುಳ್ಳಾಗಿ ಕುರೂಪಿಯೆನಿಸಿದ್ದನು. ಕಣ್ಣು, ಕಿವಿ ಇವು ಆತನಿಗೆ ಮಂದವಾಗಿದ್ದವು. ಹರಕುಹರಕಾದ ಕೊಳೆ ಬಟ್ಟೆಯನ್ನು ಅವನು ಧರಿಸಿದ್ದನು. ॥೫೯॥

ಆ ಕುರುಡನು ಹಾಗೆ ಅನೇಕ ಸಂಕಟಗಳನ್ನು ಅನುಭವಿಸಿದನು. ಒಂದು ಸಲ ಅದೃಷ್ಟದಿಂದ ಆ ಕುರುಡನು ಈ ಲಿಂಗದ ಸಮೀಪದಲ್ಲಿ ನಿಂತಿದ್ದನು. ಆಗ

ಏತಲ್ಲಿಂಗಾರ್ಚನಂ ಕೃತ್ವಾ ಕೋಽಪಿ ಕಿಂನರಪುಂಗವಃ ।
ದದೌ ನೈವೇದ್ಯಮುತ್ಕೃಷ್ಟಂ ಪರಮಾನ್ನಂ ಮನೋಹರಂ ॥೬೧॥

ವಿಶಾಲೇ ಕದಲೀಪರ್ಣೇ ಶಿವನೈವೇದ್ಯಮಾದರಾತ್ ।
ನಿಧಾಯ ಶರ್ಕರಾಯುಕ್ತಂ ಘೃತಧಾರಾಸಮನ್ವಿತಂ ॥೬೨॥

ದತ್ವಾ ಶಿವಾಯ ನೈವೇದ್ಯಂ ಪೂಜಾಂತೇ ಶಂಕರಂ ಸ್ಮರನ್ ।
ನಿಶ್ಶೇಷಂ ಬುಭುಜೇ ತೇನ ಪಾತ್ರಂ ತ್ಯಕ್ತಂ ತದಂತಿಕೇ ॥೬೩॥

ತತಸ್ತೇನ ತದಾಘ್ರಾಯ ಸುಗಂಧಸಹಿತಂ ಮೃದು ।
ಭಕ್ಷಿತಂ ಪರ್ಣಮೇವೈತತ್ತೂರ್ಣಂ ತು ಕ್ಷುಧಯಾ ತದಾ ॥೬೪॥

ತತಸ್ತದ್ಭಕ್ಷಣಾದೇವ ಪಾಪರೂಪಮನುತ್ತಮಂ ।
ವೃದ್ಧೋಽಪಿ ಸ ಯುವಾ ಜಾತಸ್ತದಾನೀಮತಿಸುಂದರಃ ॥೬೫॥

ಒಬ್ಬ ಕಿನ್ನರ ಶ್ರೇಷ್ಠನು ಶಿವಲಿಂಗವನ್ನು ಪೂಜಿಸಿ ಆದಕ್ಕೆ ನೈವೇದ್ಯವಾಗಿದ್ದ ರುಚಿಕರವಾದ ಪಾಯಸವನ್ನು ಸ್ವಾಮಿಗೆ ನಿವೇದಿಸಿದನು. ॥೬೦-೬೧॥

ಆಗಲವಾದ ಬಾಳೆಯ ಎಲೆಯಲ್ಲಿ, ತುಪ್ಪ ಸಕ್ಕರೆಗಳಿಂದ ಕೂಡಿದ ಪಾಯಸವನ್ನು ಈಶ್ವರನಿಗೆ ನೈವೇದ್ಯಮಾಡಿ, ಪೂಜಾಂತ್ಯದಲ್ಲಿ ಶಿವನನ್ನು ಸ್ಮರಣೆ ಮಾಡುತ್ತಾ, ತಾನು ಅದನ್ನು ಊಟಮಾಡಿದನು. ಅನಂತರ ಆ ಕಿಂನರನು ಎಂಜಲ ಎಲೆಯನ್ನು ಆ ಕುರುಡು ಬ್ರಾಹ್ಮಣನ ಹತ್ತಿರಕ್ಕೆಸೆದನು. ॥೬೨-೬೩॥

ಆಗ ಆ ಕುಷ್ಠಿಯಾದ ಬ್ರಾಹ್ಮಣನು ಪಾಯಸದ ಪರಿಮಳ ದ್ರವ್ಯದ ವಾಸನೆಯನ್ನು ಆಘ್ರಾಣಿಸಿ, ಬಹಳ ಹಸಿವೆಯಿಂದ ಪೀಡಿತನಾದ ಆತನು ಎಸೆದಿರತಕ್ಕ ಎಂಜಲು ಎಲೆಯನ್ನು ಭಕ್ಷಿಸಿದನು. ॥೬೪॥

ಆ ಉಚ್ಛಿಷ್ಟವನ್ನು ಭಕ್ಷಿಸಿದ ಕೂಡಲೇ ಆ ಬ್ರಾಹ್ಮಣನ ಪಾಪವೆಲ್ಲಾ ನಷ್ಟವಾಯಿತು. ಒಡನೆಯೇ ಮುದುಕತನವು ಹೋಗಿ ಹುಡುಗತನವು ಪ್ರಾಪ್ತವಾಯಿತು. ಕುರೂಪವು ನಾಶವಾಗಿ ಸುರೂಪಿಯೆನಿಸಿದನು ॥೬೫॥

ತತಃ ಸ ವಿಸ್ಮಯಾವಿಷ್ಟೋ ಹೃಷ್ಟಃ ಪುಷ್ಟೋ ಮುಹುರ್ಮುಹುಃ ।
ಕಸ್ಯಾಯಂ ಮಹಿಮಾ ಕಿಂ ವಾ ಮಮ ಪುಣ್ಯಂ ಪುರಾತನಂ ॥೬೬॥

ಏವಮುಕ್ತ್ವಾ ಸ್ಥಿತೇ ತಸ್ಮಿನ್ ಪುನರ್ನೈವೇದ್ಯಮಾದರಾತ್ ।
ತೇನಾನೀತಂ ಮಹೇಶಾಯ ಯೇನಾನೀತಂ ಪುರಾ ಮುದಾ ॥೬೭॥

ತತೋ ನಿವೇದ್ಯ ನೈವೇದ್ಯಂ ಸಿದ್ಧೇಶಾಯ ವಿಶೇಷತಃ ।
ಭುಕ್ತ್ವಾ ತಥೈವ ತತ್ಪರ್ಣಂ ತತ್ರ ತೇನ ನಿಪಾತಿತಂ ॥೬೮॥

ತತಃ ಪರಂ ಗತೇ ತಸ್ಮಿನ್ ತತ್ಪರ್ಣಂ ತೂರ್ಣಮೇವ ಸಃ ।
ಆದಾಯ ಪರಮಾನಂದಮವಾಪ ಧನಿಕೋ ಯಥಾ ॥೬೯॥

ತತಃ ಪರಂ ತದಾಘ್ರಾಯ ವಾರಂ ವಾರಂ ಸಸಾದರಂ ।
ಮಹಿಮಾ ಕೋಽಯಮಸ್ಯೇತಿ ವಿಚಾರನಿರತೋಽಭವತ್ ॥೭೦॥

ಹೀಗೆ ತನಗೆ ಒಳ್ಳೆಯ ರೂಪು ಬಂದದ್ದನ್ನು ನೋಡಿದನಂತರ ಆತನು ವಿಸ್ಮಿತನಾಗಿ ಹಿಡಿಸಲಾರದಷ್ಟು ಸಂತೋಷದಿಂದ ಮೈಯುಬ್ಬಿಹೋದನು. ಇದು ಯಾರ ಮಹಿಮೆ ಇರಬಹುದು? ಅಥವಾ ಪೂರ್ವಜನ್ಮದಲ್ಲಿ ಮಾಡಿದ ನನ್ನ ಪುಣ್ಯಫಲವಿದ್ದಿರಬಹುದೇ? ಎಂದು ಅಚ್ಚರಿಗೊಂಡನು. ॥೬೬॥

ಹೀಗೆ ಆ ಬ್ರಾಹ್ಮಣನು ಹೇಳುತ್ತಾ ಅಲ್ಲಿಯೇ ನಿಂತುಕೊಂಡಿದ್ದನು. ಆಗ ಹಿಂದೆ ಈಶ್ವರನಿಗೆ ನೈವೇದ್ಯಮಾಡಿದ್ದ ಕಿಂನರನೇ ಮತ್ತೆ ನೈವೇದ್ಯವನ್ನು ತಂದನು. ॥೬೭॥

ಎಂದಿನಂತೆ ಆ ಕಿಂನರನು ನೈವೇದ್ಯವನ್ನು ಸಿದ್ಧೇಶ್ವರನಿಗೆ ಅರ್ಪಿಸಿ, ತಾನು ಅದನ್ನು ಊಟಮಾಡಿ ಮೊದಲಿನಂತೆ ಉಚ್ಛಿಷ್ಟವನ್ನು ಹೊರಗೆ ಹಾಕಿದನು. ॥೬೮॥

ಆ ಕಿಂನರನು ಎಂಜಲು ಎಲೆಯನ್ನು ಬಿಸಾಟು ಆಚೆಗೆ ಹೋದನಂತರ ಈ ಬ್ರಾಹ್ಮಣನು ಬಹಳ ಸಂತೋಷದಿಂದ ಉಚ್ಛಿಷ್ಟ ಪರ್ಣವನ್ನು ತೆಗೆದುಕೊಂಡು ನಿಧಿ ಸಿಕ್ಕಿದವನಂತೆ ಸಂತೋಷಪಟ್ಟನು. ॥೬೯॥

ಬಹಳ ಆದರದಿಂದ ಆ ಎಲೆಯನ್ನು ಬಾರಿಬಾರಿಗೂ ಮೂಸಿನೋಡುತ್ತಾ ಇದು ಯಾರ ಮಾಹಾತ್ಮ್ಯದ ಫಲವಾಗಿರಬಹುದು? ಎಂದು ಯೋಚಿಸಲಾರಂಭಿಸಿದನು. ॥೭೦॥

ತದಾನೀಮಾಗತಃ ಶೈವಃ ಕಶ್ಚಿನ್ನಾಮಾನಿ ಸಂವದನ್ ।
ಶಿವ ಶಂಕರ ಶರ್ವೇತಿ ಮುಹುರ್ಮುಹುರುದಾರಧೀಃ ॥೭೦॥

ಆಗತ್ಯ ಬಿಲ್ವಪತ್ರಾದ್ಯೈಃ ಶಿವಲಿಂಗಸಮರ್ಚನಂ ।
ಕೃತ್ವಾ ಫಲೇನ ದಿವ್ಯೇನ ಪೂಜಯಾಮಾಸ ಶಂಕರಂ ॥೭೨॥

ತತಸ್ತತ್ಫಲಮಾದಾಯ ಸನ್ನೈವೇದ್ಯಧಿಯಾ ಮುದಾ ।
ಭಕ್ಷಯಿತ್ವಾ ಪರಂ ರೇಜೇ ಜಿತಸರ್ವಮನೋರಥಃ ॥೭೩॥

ತಂ ಪ್ರಣಮ್ಯ ತತೋ ವಿಪ್ರಃ ಸಾದರಂ ಭಕ್ತಿಪೂರ್ವಕಂ ।
ಅತಿ ವಿಸ್ಮಯಮಾಪನ್ನಃ ಪ್ರಾಹ ಶೈವಂ ಕೃತಾಂಜಲಿಃ ॥೭೪॥

ಶೈವೇಂದ್ರ ರೂಪಂ ಪೂರ್ವಂ ತೇ ಯದಭೂತ್ತನ್ಮನೋಹರಂ ।
ತತಃ ಸಹಸ್ರಗುಣಿತಂ ರೂಪಮಾಸೀದಿಹಾಧುನಾ ॥೭೫॥

ಕಿಮಸ್ಯ ಕಾರಣಂ ವಿದ್ವನ್ ತತ್ತ್ವಜ್ಞ ವದ ಸಾದರಂ ।
ಕೆಸ್ಯಾಯಂ ಮಹಿಮಾ ಕಿಂ ವಾ ಸಾಮರ್ಥ್ಯಂ ಕಸ್ಯ ಕಿಂ ವದ ॥೭೬॥

ಅವನು ಹೀಗೆ ಯೋಚಿಸುತ್ತಾ ನಿಂತಿರುವಾಗ ಆ ಶಿವಭಕ್ತನಾದ ಕಿಂನರನು ಶಿವ, ಶಂಕರ, ಶರ್ವ ಎಂದು ಮೊದಲಾಗಿ ಕೆಲವು ಶಿವನಾಮಗಳನ್ನು ಉಚ್ಚರಿಸುತ್ತಾ ಅಲ್ಲಿಗೆ ಬಂದನು. ॥೭೧॥

ಆ ಕಿನ್ನರನು ಹಾಗೆ ಬಂದು ಬಿಲ್ವಪತ್ರೆಯೇ ಮೊದಲಾದವುಗಳಿಂದ ಶಿವಲಿಂಗವನ್ನು ಪೂಜಿಸಿ, ಅಮೋಘವಾದ ಹಣ್ಣನ್ನು ನೈವೇದ್ಯಮಾಡಿ ಈಶ್ವರನನ್ನು ಅರ್ಚಿಸಿದನು. ॥೭೨॥

ಬಳಿಕ ನೈವೇದ್ಯಮಾಡಿದ ಆ ಹಣ್ಣನ್ನು ಭಕ್ತಿಯಿಂದ ತಿಂದನು. ಆಮೇಲೆ ತನ್ನ ಬಯಕೆಗಳೆಲ್ಲಾ ಸಿದ್ಧಿಸಿದವೆಂದು ತಿಳಿದು ಆತನು ತೃಪ್ತನಾದನು. ॥೭೩॥

ಅನಂತರ ಹೀಗೆ ಈಶ್ವರಪೂಜೆ ಮಾಡಿದ ಕಿನ್ನರನನ್ನು ನೋಡಿದ ಆ ಬ್ರಾಹ್ಮಣನು, ಆತನಿಗೆ ನಮಸ್ಕಾರಮಾಡಿ ಆಶ್ಚರ್ಯದಿಂದಲೂ, ವಿನಯದಿಂದಲೂ ಕೂಡಿದವನಾಗಿ ಕೈಜೋಡಿಸಿಕೊಂಡು ಆ ಕಿಂನರನನ್ನು ಪ್ರಶ್ನೆಮಾಡಿದನು. ॥೭೪॥

"ಎಲೈ ಶಿವಭಕ್ತಾಗ್ರೇಸರನೇ, ನಿನ್ನ ರೂಪವು ಮೊದಲೇ ಬಹಳ ಚೆನ್ನಾಗಿದ್ದಿತು. ಈಗ ಆ ರೂಪವು ಸಾವಿರದಷ್ಟು ಹೆಚ್ಚಿ ಅತ್ಯಂತ ದಿವ್ಯರೂಪವು ಪ್ರಾಪ್ತ

ಇತಿ ತದ್ವಚನಂ ಶ್ರುತ್ವಾ ಶಾಂಕರಸ್ತಮುವಾಚ ಸಃ ।
ಸಾಧು ಪೃಷ್ಟಂ ತ್ವಯಾ ವೀರ ಶೃಣು ತತ್ತಾವದುಚ್ಯತೇ ॥೭೭॥

ಶಿವನೈವೇದ್ಯಶೇಷಸ್ಯ ಭುಕ್ತಸ್ಯ ಪರಯಾ ಮುದಾ ।
ಸಾಮರ್ಥ್ಯಮೇತದನ್ಯಚ್ಚ ಸಾಮರ್ಥ್ಯಂ ಶ್ರುತಿಷು ಶ್ರುತಂ ॥೭೮॥

ಯೋ ಭುಂಕ್ತೇ ಶಿವನೈವೇದ್ಯಂ ಸ ತಾವದತಿಭಾಗ್ಯವಾನ್ ।
ಸುಂದರೋಪಿ ಭವತ್ಯೇವ ಸರ್ವಲಕ್ಷಣಸಂಯುತಃ ॥೭೯॥

ಶಿವನೈವೇದ್ಯಕೋಟ್ಯಂಶೇ ಕೋಟ್ಯಂಶಮಪಿ ಭಾಗ್ಯವಾನ್ ।
ಪ್ರಾಪ್ನೋತ್ಯನ್ಯಸ್ಯ ಕಸ್ಯಾಪಿ ಸ ತಾವದತಿದುರ್ಲಭಃ ॥೮೦॥

ವಾಗಿದೆ. ಇದಕ್ಕೆ ಏನು ಕಾರಣ? ಎಲೈ ತತ್ವಜ್ಞನೇ ಪಂಡಿತನೇ, ಇದು ಯಾರ ಮಹಿಮೆ ? ಅಥವಾ ಯಾರ ಸಾಮರ್ಥ್ಯ? ದಯವಿಟ್ಟು ನನಗೆ ಹೇಳು" ಎಂದು ಬ್ರಾಹ್ಮಣನು ಕೇಳಿಕೊಂಡನು. ॥೭೫-೭೬॥

ಹೀಗೆ ಆ ಬ್ರಾಹ್ಮಣನ ಮಾತು ಕೇಳಿ "ಎಲೈ ವಿಪ್ರನೇ ನೀನು ಚೆನ್ನಾಗಿ ಕೇಳಿದೆ. ಆಗಲಿ. ಅದರ ವಿಚಾರವನ್ನು ಹೇಳುವೆನು ಕೇಳು ಎಂದು ಕಿನ್ನರನು ತನ್ನ ಮಾತನ್ನು ಮುಂದುವರಿಸಿದನು. ॥೭೭॥

ಈಶ್ವರನಿಗೆ ನೈವೇದ್ಯಮಾಡಿ ಆ ಪ್ರಸಾದವನ್ನು ಭಕ್ತಿಯಿಂದ (ಸಂತೋಷ ದಿಂದ) ಊಟಮಾಡಿದವನಿಗೆ ಏನು ಫಲ ? ಮತ್ತು ಇದರ ಸಾಮರ್ಥ್ಯವೆಂತಹುದು ? ಎಂಬುದು ವೇದಗಳಲ್ಲಿ ಪ್ರಸಿದ್ಧವಾಗಿದೆ. ಎಲೈ ವಿಪ್ರನೇ, ಕೇಳು. ಶಿವನೈವೇದ್ಯ ವನ್ನು ಭಕ್ಷಿಸಿದವನು ಅತ್ಯಂತ ಹಣಗಾರನಾಗುವನಲ್ಲದೇ, ಸುಂದರನೂ ಆಗುವನು. ಸಲ್ಲಕ್ಷಣಗಳೆಲ್ಲವೂ ಅವನಲ್ಲಿ ಕಾಣುವುವು. ॥೭೮-೭೯॥

ಶಿವನೈವೇದ್ಯದ ಕೋಟಿಯ ಒಂದು ಭಾಗದ ಕೋಟಿಯ ಒಂದನೇ ಭಾಗವೂ ಕೂಡ ಮಹಾಭಾಗ್ಯಪ್ರದಾಯಕವಾದುದು. ಇದು ಶಿವಭಕ್ತನಲ್ಲದ ಇತರನಿಗೆ ಎಂದೂ ಸಿಕ್ಕಲಾರದು. ॥೮೦॥

ಇಂದಿರಾ ಪ್ರಾಪ ಸೌಂದರ್ಯಂ ಭಾಗ್ಯಮಪ್ಯತುಲಂ ದ್ವಿಜ ।
ಶಿವನೈವೇದ್ಯಪಾತ್ರಸ್ಯ ಸಂಗಮೇನಾಪಿ ಕೇವಲಂ ॥೪೧॥

ಪದ್ಮಾ ಭಿಲ್ಲಸತೀ ಪೂರ್ವಮರಣ್ಯನಿಲಯಾ ಸದಾ ।
ಸಾ ಭರ್ತ್ರಾ ಸಹ ಕಾಷ್ಠಾನಿ ಕ್ರಯಾಯಾನಯತಿ ಸ್ವಯಂ ॥೪೨॥

ತದೇವ ಜೀವನಂ ತಸ್ಯಾಃ ತದ್ಭರ್ತುರಪಿ ಸರ್ವದಾ ।
ಸಾ ಕೃಶಾಜರಯಾ ನಿತ್ಯಂ ಪಲಿತಾಪಿ ಪ್ರತಿಕ್ಷಣಂ ॥೪೩॥

ಸಾ ಕದಾಚಿತ್ ದಿನೇ ಸ್ಥಿತ್ವಾ ಕಾಷ್ಠಾನ್ಯಪಿ ತೃಣಾನ್ಯಪಿ ।
ಬಧ್ವಾ ವೋಢುಮಶಕ್ತಾಪಿ ಮೂರ್ಧ್ನಾಽಽದಾಯ ಯಯೌ ತದಾ ॥೪೪॥

ತತ್ರ ಕಶ್ಚಿನ್ಮಹಾದೇವೋ ಬಿಲ್ವಪತ್ರಾದಿಭಿಃ ಶಿವಂ ।
ಸಂಪೂಜ್ಯ ಪಾಂಥಃ ಕೃತ್ವಾನ್ನಂ ದದೌ ಶರ್ವಾಯ ಸಾದರಂ ॥೪೫॥

ತನ್ನೈವೇದ್ಯಂ ಸ್ವಯಂ ಭುಕ್ತ್ವಾ ನಿಃಶೇಷಮತಿಸಾದರಂ ।
ಉಚ್ಛಿಷ್ಟಪಾತ್ರಮನ್ಯತ್ರ ತ್ಯಕ್ತಂ ತೇನ ಮಹಾತ್ಮನಾ ॥೪೬॥

ಮಹಾಲಕ್ಷ್ಮಿಯೂ ಸಹ ಶಿವನೈವೇದ್ಯಕ್ಕೆ ಪಾತ್ರನೆನಿಸಿದ ವಿಷ್ಣುವಿನ ಸಂಪರ್ಕದಿಂದಲೇ ಅಧಿಕವಾದ ಸೌಂದರ್ಯವನ್ನು ಪಡೆದಳು. ॥೪೧॥

ಹಿಂದೆ ಪದ್ಮಾ ಎಂಬ ಹೆಸರಿನ ಬೇಡರವಳೊಬ್ಬಳು ಪತಿವ್ರತೆಯಾಗಿದ್ದಳು. ಆಕೆಯು ಯಾವಾಗಲೂ ಕಾಡಿನಲ್ಲಿಯೇ ವಾಸಮಾಡುತ್ತಾ ಗಂಡನೊಂದಿಗೆ ಪ್ರತಿ ದಿನವೂ ಸೌದೆಗಳನ್ನು ತಂದು ಮಾರಿ ಜೀವನಮಾಡುತ್ತಿದ್ದಳು. ಆಕೆಗೂ ಅವಳ ಗಂಡನಿಗೂ ಕಾಷ್ಠವಿಕ್ರಯವಲ್ಲದೆ ಬೇರೆ ಜೀವನವಿರಲಿಲ್ಲ. ಹೀಗೆ ಇರಲಾಗಿ ಆ ಪದ್ಮೆಯು ವಾರ್ಧಕ್ಯದಿಂದ ಕೃಶಳಾಗಿ ಅಶಕ್ತಳೆನಿಸಿದಳು. ॥೪೨-೪೩॥

ಹೀಗೆಯೇ ಇರಲು ಒಂದು ಸಲ ಸೌದೆ, ಹುಲ್ಲು ಇವನ್ನು ಹೊರೆಕಟ್ಟಿ ಹೊರುವುದಕ್ಕೆ ಸಾಧ್ಯವಾಗದಿದ್ದರೂ ಕೂಡ, ಆಕೆಯು ಕಷ್ಟಪಟ್ಟು ಆ ಸೌದೆ ಹುಲ್ಲು ಹೊರೆಗಳನ್ನು ತಲೆಯಿಂದ ಹೊತ್ತುಕೊಂಡು ಬಂದಳು. ॥೪೪॥

ಅಲ್ಲಿ ಒಬ್ಬ ಪಥಿಕನು ಈಶ್ವರನನ್ನು ಬಿಲ್ವಪತ್ರಗಳಿಂದ ಪೂಜಿಸಿ ಅನ್ನವನ್ನು ಮಾಡಿ ಶಿವನಿಗೆ ನೈವೇದ್ಯಮಾಡಿದನು. ಮತ್ತು ಆ ನೈವೇದ್ಯಶೇಷವನ್ನು ತಾನೂ

ತದೇವ ಪಾತ್ರಂ ವಾತೇನ ನೀತಂ ಭಿಲ್ಲಾಂಗನಾಕರೇ ।
ಪಪಾತ ಸಾ ತತಃ ಪಶ್ಚಾತ್ ಚಕ್ರೇ ದೇಹವಿಸರ್ಜನಂ ॥೮೭॥

ತತಃ ಪರಂ ಭಟೈರ್ನೀತಾ ದುರ್ಘಟೈಶ್ಚ ಯಮಸ್ಯ ಸಾ ।
ಪಾತಿತಾ ಕಾಲನಿಕಟೇ ಕ್ರೈರ್ದೂತೈರತಿನಿಷ್ಠುರೈಃ ॥೮೮॥

ತತಃ ಪರಂ ಯಮಃ ಪ್ರಾಹ ಚಿತ್ರಗುಪ್ತಮಿಮಾಂ ಕ್ವ ವಾ ।
ಸ್ಥಿತ್ವಾ ಕಿಂ ವಾ ಕೃತಂ ಪಾಪಮನಯಾ ಪುಣ್ಯಮುತ್ತಮಂ ॥೮೯॥

ಇತ್ಯುಕ್ತಸ್ತಮುವಾಚೇಯಂ ಭಿಲ್ಲನಾರೀ ಯಮಾಧುನಾ ।
ವನೇ ಮೃತಾ ಕೃಶಾ ದೀನಾ ಕ್ಷುಧಾರ್ತಾ ತೃಷಿತಾ ಭೃಶಂ ॥೯೦॥

ಅನಯಾ ನ ಕೃತಂ ಪುಣ್ಯಂ ಮರಣಾತ್ಪೂರ್ವಮಾದರಾತ್ ।
ಹಿಂಸಾ ಪರಾ ಪ್ರಯತ್ನೇನ ಪರಪೀಡನತತ್ಪರಾ ॥೯೧॥

ಸಂಪೂರ್ಣವಾಗಿ ಊಟಮಾಡಿ ಎಂಜಲು ಪಾತ್ರೆಯನ್ನು ಹೊರಕ್ಕೆ ಒಂದು ಕಡೆ ಎಸೆದನು. ॥೮೫-೮೬॥

ಆತನು ಎಸೆದ ಎಂಜಲು ಎಲೆಯನ್ನು ಗಾಳಿಯು ತೆಗೆದುಕೊಂಡು ಬಂದು ಆ ಭಿಲ್ಲ ಹೆಂಗಸಿನ ಕೈಯಲ್ಲಿ ಹಾಕಿತು. ಆಗಲೇ ಆಕೆಯು ಕೆಳಕ್ಕೆ ಬಿದ್ದು ಪ್ರಾಣ ಬಿಟ್ಟಳು. ಅನಂತರ ಕ್ರೂರರಾದ ಯಮದೂತರು ಬಂದು ಆಕೆಯನ್ನು ಕರೆದು ಕೊಂಡು ಹೋಗಿ ಯಮನ ಸಮೀಪದಲ್ಲಿ ನಿಲ್ಲಿಸಿದರು. ॥೮೭-೮೮॥

ಅನಂತರ ಯಮನು ಈಕೆಯು ಯಾವ ಪಾಪವನ್ನು ಮಾಡಿದ್ದಾಳೆ? ಅಥವಾ ಪುಣ್ಯಕರ್ಮಗಳನ್ನೇನಾದರೂ ಆಚರಿಸಿರುವಳೇ? ಎಂದು ಚಿತ್ರಗುಪ್ತ ನನ್ನು ಕೇಳಿದನು. ॥೮೯॥

" ಈ ಬೇಡರ ಹೆಂಗುಸು ಕಾಡಿನಲ್ಲಿ ಹಸಿವೆ ಬಾಯಾರಿಕೆಗಳಿಂದ ಬಳಲಿದ್ದಳು. ಕೃಶಳಾದ ಇವಳು ಬಹಳ ಕಷ್ಟದಿಂದ ಪರದೇಶಿಯಂತೆ ಕಾಡಿನಲ್ಲಿ ಮರಣಹೊಂದಿ ದಳು. ಇವಳು ಸಾಯುವ ಮೊದಲು ಯಾವ ಪುಣ್ಯಕೆಲಸಗಳನ್ನೂ ಈಕೆಯು ಮಾಡಿದವಳಲ್ಲ. ಮತ್ತು ಅತಿ ಕ್ರೂರವಾದ ಪ್ರಾಣಿಹಿಂಸೆಯನ್ನು ಸಹ ಈಕೆಯು ಮಾಡುತ್ತಿದ್ದಳು. ॥೯೧॥

ಜಾಲೇನ ಪಕ್ಷಿಜಾಲಾನಿ ಸಮಾದಾಯ ಯಥೇಚ್ಛಯಾ ।
ಭಿತ್ವಾ ಶಸ್ತ್ರೇಣ ಬಹುಧಾ ತತ್ಪಾಕಂ ಚ ಕರೋತಿ ಸಾ ॥೯೨॥

ತನ್ಮಾಂಸಮಶನಂ ತಸ್ಯಾ ಸುರಾಪಾನರತಾಽಪಿ ಸಾ ।
ಸೇಯಂ ಪುಣ್ಯವಿಹೀನೈವ ವನಂ ಚರತಿ ಸರ್ವದಾ ॥೯೩॥

ನ ದೃಷ್ಟಮನಯಾ ಕ್ವಾಪಿ ಶಿವಲಿಂಗಮನುತ್ತಮಂ ।
ದೀಪಮಾಲಾಪಿ ವಿಮಲಾ ನ ದೃಷ್ಟಾ ಶಿವಮಂದಿರೇ ॥೯೪॥

ನಾನಯಾ ಶಾಂಭವೋ ದೃಷ್ಟೋ ಲೀಲಾಮಾನುಷವಿಗ್ರಹಃ ।
ಸಂಮಾರ್ಜನಂ ಚ ನ ಕೃತಂ ಯಥಾ ಶಾಂಕರಮಂದಿರೇ ॥೯೫॥

ಶಿವಾಂಗಣರಜಃಪುಂಜೋ ನಾಪಿ ದೂರೀಕೃತಸ್ತಯಾ ।
ನ ದೃಷ್ಟಾ ಶಿವಪೂಜಾಪಿ ಸರ್ವಕಷ್ಟವಿನಾಶಿನೀ । ॥೯೬॥

ಈಕೆಯು ಬಲೆಯನ್ನು ಬೀಸಿ, ಹಕ್ಕಿಗಳನ್ನು ಹಿಡಿದು ಕತ್ತಿಯಿಂದ ಅವುಗಳನ್ನು ಕತ್ತರಿಸುತ್ತಿದ್ದಳು. ಹಾಗೆಯೇ ಅವುಗಳನ್ನು ಬೇಯಿಸುತ್ತಿದ್ದಳು. ಆಕೆಗೆ ಹಕ್ಕಿಗಳ ಮಾಂಸವೇ ಆಹಾರ. ಹೆಂಡವನ್ನು ಸಹ ಕುಡಿಯುತ್ತಿದ್ದಳು. ಹೀಗೆ ಪಾಪಿನಿಯಾದ ಈಕೆಯು ಪ್ರತಿದಿನವೂ ಕಾಡಿನಲ್ಲಿ ಸುತ್ತುತ್ತಿದ್ದಳು. ||೯೨-೯೩||

ಇವಳು ಎಲ್ಲಿಯೂ ಶಿವಲಿಂಗದ ದರ್ಶನವನ್ನು ಮಾಡಿದವಳಲ್ಲ. ಅದಲ್ಲದೆ ಶಿವನಿಗೆ ಹಚ್ಚಿದ ಶುಭ್ರವಾದ ದೀಪಮಾಲಿಕೆಯನ್ನೂ ನೋಡಿದವಳಲ್ಲ. ಮತ್ತು ಲೀಲಾರೂಪನಾದ ಈಶ್ವರನ ವಿಗ್ರಹವನ್ನು ದರ್ಶನಮಾಡಿದವಳಲ್ಲ. ಈಶ್ವರ ದೇವಸ್ಥಾನವನ್ನು ಪರಕೆಯಿಂದ ಗುಡಿಸಿ, ಒಂದು ದಿನವಾದರೂ ಸಾರಿಸಿದವಳಲ್ಲ. ||೯೪-೯೫||

ಈ ಭಿಲ್ಲಸ್ತ್ರೀಯು ಒಂದುಸಾರಿಯಾದರೂ ಶಿವಾಲಯದ ಮುಂಗಡೆ ಅಂಗಳದಲ್ಲಿರುವ ಕಸವನ್ನು ದೂರಕ್ಕೆ ಹಾಕಲಿಲ್ಲ. ಸಮಸ್ತ ಆಪತ್ತುಗಳನ್ನೂ ಹೋಗಲಾಡಿಸುವ ಶಿವಪೂಜೆಯನ್ನು ಒಂದು ಬಾರಿಯಾದರೂ ಕಣ್ಣಾರೆ ನೋಡಲಿಲ್ಲ. ||೯೬||

ನ ಜ್ಞಾತಃ ಶಿವಮಾರ್ಗೋಽಪಿ ಭಾಗೇ ಸ್ವರ್ಗಾಪವರ್ಗದಃ ।
ನ ಬಿಲ್ವತರುಸೇವಾಪಿ ಕೃತಾ ಭಕ್ತಿಪುರಃಸರಂ ॥೯೭॥

ನ ಭಸ್ಮನಾ ಲಲಾಟಂ ವಾ ಪೂತಮಸ್ಯಾಃ ಕದಾಪಿ ಚ ।
ರುದ್ರಾಕ್ಷವಾರ್ತಾಪಿ ತಯಾ ನ ಜ್ಞಾತಾ ಸರ್ವಥಾ ಯಮ ॥೯೮॥

ಶಿವಾಭಿಷೇಕಪಾನೀಯಂ ನ ಪೀತಂ ಚ ತಯಾ ಯಮ ।
ಶಿವನೈವೇದ್ಯಗಂಧೋಽಪಿ ನಾಘ್ರಾತೋ ದುಷ್ಟಯಾ ಯಮ ॥೯೯॥

ನ ಮಹಾದೇವನಾಮಾಪಿ ಶ್ರುತಂ ಸರ್ವಾಘನಾಶಕಂ ।
ಶಿವತೀರ್ಥಾಟನೋದ್ಯೋಗಸ್ತಯಾ ನ ಕೃತ ಏವ ಹಿ ॥೧೦೦॥

ಶಿವಾರ್ಚನಂ ನ ಜಾನಾತಿ ನ ಶ್ರುತಂ ಚ ಶಿವಾರ್ಚನಂ ।
ಶಿವೋತ್ಸವೋ ನ ದೃಷ್ಟೋಽಪಿ ನ ಶ್ರುತೋಽಪಿ ಕದಾಚನ ॥೧೦೧॥

ಶಿವನ ಪೂಜೆಯ ರೀತಿಯನ್ನೇ ಈಕೆಯು ಅರಿಯಳು. ಸ್ವರ್ಗ ಮತ್ತು ಮುಕ್ತಿಯನ್ನು ಕೊಡತಕ್ಕ ಈಶ್ವರನ ವಿಚಾರದಲ್ಲಿ ಈಕೆಗೆ ತಿಳಿವೇ ಇಲ್ಲ. ಈಕೆ ಭಕ್ತಿಯಿಂದ ಬಿಲ್ವಮರದ ಪ್ರದಕ್ಷಿಣೆಮಾಡಿ ಒಂದು ಸಾರಿಯೂ ಸೇವೆಮಾಡಿದವಳಲ್ಲ. ॥೯೭॥

ಈಕೆಯು ಹಣೆಯಲ್ಲಿ ಭಸ್ಮವನ್ನು ಒಂದು ಸಾರಿಯೂ ಧರಿಸಲಿಲ್ಲ. ರುದ್ರಾಕ್ಷಧಾರಣೆಯ ವಿಚಾರವೇ ಈಕೆಗೆ ತಿಳಿಯದು. ॥೯೮॥

ಎಲೈ ಯಮನೇ, ಈಶ್ವರನಿಗೆ ಅಭಿಷೇಕಮಾಡಿದ ನೀರನ್ನು (ತೀರ್ಥ) ಇವಳು ಕುಡಿದವಳಲ್ಲ. ಶಿವನೈವೇದ್ಯದ ಪರಿಮಳ ಲೇಶವನ್ನೂ ಈಕೆ ಸೇವಿಸಲಿಲ್ಲ. ॥೯೯॥

ಸಮಸ್ತ ಪಾಪಗಳನ್ನು ನಾಶಪಡಿಸುವ ಶಿವನಾಮವನ್ನು ಇವಳು ಕಿವಿಯಿಂದಲೂ ಕೇಳಿಲ್ಲ. ಶಿವನು ವಾಸಿಸುವ ಕ್ಷೇತ್ರಗಳ ಯಾತ್ರೆಯನ್ನು ಇವಳು ಮಾಡಲಿಲ್ಲ. ॥೧೦೦॥

ಶಂಕರನ ಅರ್ಚನೆಯ ವಿಧಾನವೇ ಇವಳಿಗೆ ಗೊತ್ತಿಲ್ಲ. ಪಾರ್ವತಿಯ ಪೂಜೆಯನ್ನೂ ಇವಳು ಕೇಳಿಲ್ಲ. ಶಿವನ ಉತ್ಸವವನ್ನು ಇವಳು ನೋಡಿಲ್ಲ ಮತ್ತು ಕೇಳಿಯೂ ಇಲ್ಲ. ॥೧೦೧॥

ತಯಾ ಶಿವಪುರಾವಾಸೋ ನ ಕೃತೋಽಪಿ ಕದಾಚನ ।
ಶಿವಕುಂಡಾನಿ ದೃಷ್ಟಾನಿ ನಾನಯಾ ಪ್ರೀತಿಪೂರ್ವಕಂ ॥೧೦೨॥

ಶರೀರತ್ಯಾಗಸಮಯೇ ಶಿವೋಚ್ಛಿಷ್ಟಚ್ಛದಾನ್ವಿತಃ ।
ಜಾತಂ ತತ್ಪುಣ್ಯಮೇತಸ್ಯಾ ಸರ್ವಾಭೀಷ್ಟಪ್ರದಾಯಕಂ ॥೧೦೩॥

ಇತ್ಯುಕ್ತಂ ತದ್ವಚಃ ಶ್ರುತ್ವಾ ಪ್ರಹೃಷ್ಟಸ್ತ್ವರಯಾ ಯಮಃ ।
ಸ್ಪೃಷ್ಟ್ವಾ ತದಂಗಂ ಪ್ರಣತಃ ಕೃತ್ವಾ ತಸ್ಯಾಃ ಪ್ರದಕ್ಷಿಣಂ ॥೧೦೪॥

ತತಃ ಪರಂ ಪರಂ ರೂಪಂ ಪ್ರಾಪ ಸಾ ತತ್ಕರಾನ್ವಯಾತ್ ।
ದಿವ್ಯಮಾಲ್ಯಾಂಬರಧರಾಂ ದಿವ್ಯಾಭರಣಭೂಷಿತಾಂ । ॥೧೦೫॥

ತತಸ್ತಾಂ ಸ್ಥಾಪಯಾಮಾಸ ರತ್ನಹಿಂಹಾಸನೇ ಯಮಃ ।
ಪೂಜಯಾಮಾಸ ಪುಷ್ಪಾದ್ಯೈಸ್ತತಃ ಸ್ವರ್ಗಂ ಜಗಾಮ ಸಾ ॥೧೦೬॥

ಈಕೆಯು ಒಂದುಸಲವಾದರೂ ಶಿವಕ್ಷೇತ್ರದಲ್ಲಿ ವಾಸಮಾಡಲಿಲ್ಲ. ಅಲ್ಲದೆ ಪ್ರೀತಿಯಿಂದ ಶಿವಪ್ರೀತ್ಯರ್ಥವಾಗಿ ಮಾಡಿದ ಹೋಮಕುಂಡಗಳನ್ನೂ ನೋಡಲಿಲ್ಲ. ॥೧೦೨॥

ಆದರೆ ಇವಳು ದೇಹಬಿಡುವ ಸಮಯದಲ್ಲಿ ಮಾತ್ರ ಶಿವನೈವೇದ್ಯದ ಎಂಜಲೆಲೆಯ ಸ್ಪರ್ಶವುಂಟಾಯಿತು. ಅದರ ಪ್ರಭಾವದಿಂದ ಸಮಸ್ತ ಬಯಕೆಗಳನ್ನೂ ನೆರವೇರಿಸುವ ಪುಣ್ಯವು ಇವಳಿಗೆ ಉಂಟಾಗಿದೆ" ಎಂದು ಚಿತ್ರಗುಪ್ತನು ಯಮನಿಗೆ ಆಕೆಯ ಪಾಪಪುಣ್ಯಗಳನ್ನು ಅರಿಕೆಮಾಡಿಕೊಂಡನು. ॥೧೦೩॥

ಹೀಗೆ ಚಿತ್ರಗುಪ್ತನ ಮಾತನ್ನು ಕೇಳಿ ಯಮನು ಸಂತಸದಿಂದೆದ್ದು ಆಕೆಯ ಪಾದವನ್ನು ಮುಟ್ಟಿ ಪ್ರದಕ್ಷಿಣನಮಸ್ಕಾರ ಮಾಡಿದನು. ॥೧೦೪॥

ಆಮೇಲೆ ಆ ಭಿಲ್ಲಹೆಂಗಸು ಅತಿ ಸುಂದರವಾದ ರೂಪನ್ನು ಹೊಂದಿದಳು. ಅಮೂಲ್ಯವಾದ ವಸ್ತ್ರಗಳನ್ನೂ ಮತ್ತು ಬೆಲೆಬಾಳುವ ಒಡವೆಗಳನ್ನೂ ಆಕೆಗೆ ಕೊಟ್ಟು ಸತ್ಕರಿಸಿದನು. ಮತ್ತು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಹೂಗಂಧಗಳಿಂದ ಪೂಜಿಸಿದನು. ಅನಂತರ ಅವಳು ಸ್ವರ್ಗಲೋಕಕ್ಕೆ ತೆರಳಿದಳು. ॥೧೦೫-೧೦೬॥

ಕಿಂ ವರ್ಣನೀಯಮಧುನಾ ಶಿವಪೂಜಕಾನಾಂ
ಸಾಮರ್ಥ್ಯಮರ್ಥಿಜನದುಃಖವಿನಾಶಕಾನಾಂ ।
ಯದ್ಭುಕ್ತಮಾತ್ರಮಪಿ ಗಾತ್ರವಿಶೇಷಯೋಗೇ
ಸ್ವರ್ಗಂ ತನೋತಿ ಸುಖಸಂತತಿಮಾತನೋತಿ ॥೧೦೭॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶಿವನೈವೇದ್ಯ ಶಿವೋಚ್ಛಿಷ್ಟ ಪಾತ್ರಮಹಿಮಾವರ್ಣನಂ ನಾಮ
ಏಕವಿಂಶೋಽಧ್ಯಾಯಃ

ಶಿವಪೂಜೆಮಾಡತಕ್ಕವರ ಮಾಹಾತ್ಮ್ಯೆಯನ್ನು ಎಷ್ಟೆಂದು ಹೇಳಲಿ. ತಮ್ಮನ್ನು ಆಶ್ರಯಿಸಿದವರ ಆಪತ್ತುಗಳನ್ನು ನಿವಾರಣೆಮಾಡುವ ಸಾಮರ್ಥ್ಯವು ಅವರಿಗೆ ಇರುತ್ತದೆ. ಅವರು ಊಟಮಾಡಿ ಬಿಸಾಡಿದ ಎಂಜಲು ಪಾತ್ರೆಯ ಸ್ಪರ್ಶ ಒಂದರಿಂದಲೇ ಸ್ವರ್ಗವೂ, ದಿವ್ಯವಾದ ಸುಖಗಳೂ ಸಿಕ್ಕಬಹುದಾದರೆ ಅವರ ಮಹಿಮೆಯನ್ನು ವಿವರಿಸಲು ಸಾಧ್ಯವಾದೀತೆ ಎಂದು ವ್ಯಾಸಮಹರ್ಷಿಯು ಋಷಿ ಜನರಿಗೆ ಹೇಳಿದನು. ॥೧೦೭॥

ಇಲ್ಲಿಗೆ ಶ್ರೀಶಿವರಹಸ್ಯದ ಹರ ಎಂಬ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
ಶಿವನೈವೇದ್ಯ, ಶೈವನ ಉಚ್ಛಿಷ್ಟಪಾತ್ರ ಇವುಗಳ ಮಹಿಮಾವರ್ಣನವೆಂಬ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ದ್ವಾವಿಂಶೋಽಧ್ಯಾಯಃ

॥ ಶ್ರೀಶಿವ ಉವಾಚ ॥

ಇತಿ ಶೈವವಚಃಶ್ರುತ್ವಾ ಸ ವಿಪ್ರೋ ಹೃಷ್ಟಮಾನಸಃ ।
ಪುನರ್ಭಿಲ್ಲಾಂಗನಾವಾರ್ತಾಂ ಪಪ್ರಚ್ಛ ಕಿಮಭೂದಿತಿ ॥೧॥

॥ ಶ್ರೀಶೈವ ಉವಾಚ ॥

ಸ್ವರ್ಗಲೋಕಮನುಪ್ರಾಪ್ಯ ಭುಕ್ತ್ವಾ ಭೋಗಾನನೇಕಧಾ ।
ಬ್ರಹ್ಮಲೋಕಮವಾಪ್ಯಾಥ ಬ್ರಹ್ಮಣಾ ಸಾಪಿ ಪೂಜಿತಾ ॥೨॥

ಇಪ್ಪತ್ತೆರಡನೆಯ ಅಧ್ಯಾಯ

ಆಮೇಲೆ ಆ ಬ್ರಾಹ್ಮಣನು (ಹಿಂದೆ ಹೇಳಿದ) ಪರಶಿವಭಕ್ತನಾದ ಕಿನ್ನರನ ಮಾತನ್ನು ಕೇಳಿ ಸಂತೋಷಪಟ್ಟು ಮುಂದೆ ಬೇಡರಸ್ತ್ರೀಯ ಸಂಗತಿಯು ಏನಾಯಿತೆಂದು ಪ್ರಶ್ನಿಸಿದನು ; ಎಂದು ಮುಂದಿನ ಕಥೆಯನ್ನು ಶಂಕರನು ಪಾರ್ವತಿಗೆ ವಿವರಿಸಲಾರಂಭಿಸಿದನು. ॥೧॥

ಹಿಂದೆ ಹೇಳಿದ ಆ ಬೇಡರ ಸ್ತ್ರೀಯು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಅನೇಕ ಸುಖಗಳನ್ನು ಅನುಭವಿಸಿದಳು. ಬಳಿಕ ಅಲ್ಲಿಂದ ಬ್ರಹ್ಮಲೋಕಕ್ಕೆ ಹೋದಳು. ಅಲ್ಲಿ ಬ್ರಹ್ಮನಿಂದಲೂ ಪೂಜಿತಳಾದಳು. ॥೨॥

ತತಃ ಪರಂ ಬ್ರಹ್ಮಲೋಕೇ ಸಾ ಸಿಂಹಾಸನಸಂಸ್ಥಿತಾ ।
ಬ್ರಹ್ಮಣಾ ಪೂಜಿತಾ ನಿತ್ಯಂ ಸನಕಾದ್ಯೈಶ್ಚ ಸಾದರಂ ॥೩॥

ತತಃ ಕದಾಚಿದ್ಯತ್ನೇನ ಬ್ರಹ್ಮಲೋಕನಿವಾಸಿಭಿಃ ।
ಪೃಷ್ಟಾ ಕೇಯಮಿತಿ ಪ್ರೀತ್ಯಾ ಸಾದರಂ ಸ ಚತುರ್ಮುಖಃ ॥೪॥

॥ ಬ್ರಹ್ಮೋವಾಚ ॥

ಕಿಂ ವಕ್ತವ್ಯಮಹೋ ಧನ್ಯಂ ಶಾಂಭವಾನಾಂ ಮಹಾತ್ಮನಾಂ ।
ಸ್ವರೂಪಂ ನೇವ ಸಂವೇದ್ಯಂ ಕಥಂಚಿದಿತಿ ಮನ್ಮಹೇ ॥೫॥

ವೇದೈರಪಿ ನ ವಿಜ್ಞಾತಂ ಯದ್ರೂಪಂ ತತ್ಕಥಂ ಮಯಾ ।
ವಕ್ತವ್ಯಂ ತತ್ರ ಮೇ ಬುದ್ಧಿಃ ಸರ್ವಥಾಪ್ಯತಿಕುಂಠಿತಾ ॥೬॥

ವೈಕುಂಠೇನಾಪಿ ನ ಜ್ಞಾತಂ ಶಾಂಭವಾನಾಂ ಸ್ವಭಾವತಃ ।
ಸ್ವರೂಪಮಮಲಂ ತತ್ತು ಜಾನಾತಿ ಸ ಮಹೇಶ್ವರಃ ॥೭॥

ಆ ಬ್ರಹ್ಮಲೋಕದಲ್ಲಿ ಸಿಂಹಾಸನವನ್ನು ಈಕೆಗೆ ಆಸನವಾಗಿ ಕೊಟ್ಟರು. ಬ್ರಹ್ಮನು ಈಕೆಯನ್ನು ಅರ್ಚಿಸಿದ ಮೇಲೆ ಸನಕಾದಿಯೋಗಿಗಳೂ, ಇವಳನ್ನು ಪೂಜಿಸಿದರು. ಆಮೇಲೆ ಬ್ರಹ್ಮಲೋಕವಾಸಿಗಳು ಇವಳು ಯಾರು? ಎಂದು ಬ್ರಹ್ಮನನ್ನು ಕೇಳಿದರು. ಆಗ ಬ್ರಹ್ಮನು ಪ್ರೀತಿಯಿಂದ ಇವಳ ಕಥೆಯನ್ನು ಹೇಳಲುಪಕ್ರಮಿಸಿದನು. ॥೩-೪॥

"ಈಶ್ವರ ಭಕ್ತರ ಮಹಿಮೆಯನ್ನು ಏನೆಂದು ಹೇಳಲಿ! ಆಹಾ! ಅವರ ಸ್ವರೂಪವನ್ನು ವೇದದಿಂದ ತಿಳಿಯತಕ್ಕುದಾಗಿದೆ. ಆದರೂ ಸ್ವಲ್ಪಮಟ್ಟಿಗೆ ನಾನು ತಿಳಿದಿದ್ದೇನೆ. ॥೫॥

ವೇದಗಳಿಂದಲೂ ವಿವರಿಸಲಸಾಧ್ಯವಾದ ಅವರ ಸ್ವರೂಪವನ್ನು ನಾನು ಹೇಗೆ ಹೇಳಲಿ? ಮತ್ತು ಆ ವಿಷಯದಲ್ಲಿ ನನ್ನ ಬುದ್ಧಿಯು ಖಂಡಿತವಾಗಿಯೂ ಕುಂಠಿತವಾಗಿದೆ. ॥೬॥

ಈಶ್ವರ ಭಕ್ತರ ಸ್ವಭಾವವನ್ನು ಶ್ರೀವಿಷ್ಣುವೂ ಕೂಡ ತಿಳಿಯನು. ನಿರ್ಮಲವಾದ ಅವರ ಸ್ವರೂಪವು ಯಾರಿಗೆ ತಿಳಿದುಬಂದೀತು? ಪವಿತ್ರವಾದ ಅವರ ಸ್ವರೂಪವನ್ನು ತಿಳಿದಿರುವವನು ಆ ಪರಶಿವನೊಬ್ಬನೇ. ॥೭॥

ಯದ್ಘ್ರಾತ್ರಮಾತ್ರಸಂಗೇನ ಪವಿತ್ರಂ ಗಾತ್ರಮುಚ್ಯತೇ ।
ತೇಷಾಂ ಸ್ವರೂಪಂ ಶೈವಾನಾಂ ನ ಜ್ಞಾತುಮಪಿ ಶಕ್ಯತೇ ॥೮॥

ಶೈವಾಶ್ಚ ಸಂತಿ ಭೂಲೋಕೇ ತೇ ಸರ್ವೇ ಶಿವವಿಗ್ರಹಾಃ ।
ಶಿವಪ್ರಭಾವಃ ಕೇನಾಪಿ ಜ್ಞಾಯತೇ ಕಿಂ ಜಗತ್ತ್ರಯೇ ॥೯॥

ಯದಂಗಸಂಗಃ ಸಂಸಾರಸಾಗರಸ್ಯಾಪಿ ಶೋಷಕಃ ।
ಸ ಮೋಚಕೋಽಪಿ ಪಾಪೇಭ್ಯೋ ವರ್ಣನೀಯಃ ಕಥಂ ಮಯಾ ॥೧೦॥

ಅಲೌಕಿಕಮಿದಂ ಚಿತ್ರಂ ಚರಿತ್ರಂ ಶಾಂಕರಸ್ಯ ತು ।
ತತ್ತ್ರಿನೇತ್ರಚರಿತ್ರತ್ವಾದ್ವೇದಾಂತವಿಷಯೋಽಪಿ ನ ॥೧೧॥

ಶೈವಸ್ಯ ರೂಪಕೋಟ್ಯಂಶಕೋಟ್ಯಂಶಾಂಶೋಽಪಿ ಕೇವಲಂ ।
ನ ವೇದೈರಪಿ ವೇದಾಂತೈಃ ಸರ್ವೈರಪಿ ನ ನಿಶ್ಚಿತಂ ॥೧೨॥

ಯಾರ ಅವಯವವು ಸೋಂಕಿದ ಮಾತ್ರಕ್ಕೇ ದೇಹವು ಪರಿಶುದ್ಧವಾಗುವುದೋ, ಅಂತಹ ಶೈವರ ಮಹಿಮೆಯನ್ನು ತಿಳಿಯುವುದು ತುಂಬಾ ಕಷ್ಟ ॥೮॥

ಭೂಲೋಕದಲ್ಲಿ ಯಾರು ಯಾರು ಶೈವರೋ ಅವರೆಲ್ಲಾ ಈಶ್ವರ ಸ್ವರೂಪರು. ಮೂರು ಲೋಕದಲ್ಲಿಯೂ ಅವರ (ಶಿವ) ಪ್ರಭಾವವನ್ನು ತಿಳಿದವನು ಯಾವನೂ ಇಲ್ಲ. ॥೯॥

ಆ ಪರಶಿವಭಕ್ತನ ಅಂಗಸ್ಪರ್ಶವು ಸಂಸಾರವೆಂಬ ಕಡಲನ್ನು ದಾಟಿಸುವುದು. ಅವನು ಜನರ ಪಾಪಗಳನ್ನು ನಿವಾರಿಸಲು ಸಮರ್ಥನು. ಅಂತಹವನನ್ನು ನಾನು ಹೇಗೆ ವರ್ಣಿಸಲಿ ? ॥೧೦॥

ಲೋಕವಿಲಕ್ಷಣವಾದ ಆ ಭಕ್ತರ ಚರಿತ್ರೆಯು ಬಹಳ ಆಶ್ಚರ್ಯವನ್ನುಂಟುಮಾಡುವುದು. ಅದೇ ಈಶ್ವರನ ಚರಿತ್ರೆಯಾಗಿದೆ. ವೇದಾಂತ ವಿಷಯವಾಗಿದ್ದರೆ ನಾನು ಹೇಳಲು ಸಮರ್ಥನಿದ್ದೆನು. ಆದುದರಿಂದ ಈ ವಿಚಾರವನ್ನು ನಾನು ಹೇಗೆ ಹೇಳಲಿ ? ॥೧೧॥

ಶಿವಭಕ್ತನ ರೂಪ ಕೋಟಿಗಳ ಮಧ್ಯೇ ಒಂದಂಶದ ಕೋಟಿಭಾಗವೂ ವೇದಗಳಿಂದಾಗಲೀ ವೇದಾಂತಗಳಿಂದಲಾಗಲೀ ತಿಳಿಯಲು ಸಾಧ್ಯವಾಗಲಾರದು. ॥೧೨॥

ಧನ್ಯಾಃ ಕೃತಾರ್ಥಾಃ ಸರ್ವಜ್ಞಾ ಶಾಂಕರಾ ಏವ ಕೇವಲಂ ।
ತತ್ಪಾದರಜಸೋ ಲೇಶಃ ಪುನಾತಿ ಭುವನತ್ರಯಂ ॥೧೩॥

ಸಹಸ್ರಜಿಹ್ವಃ ಶೇಷೋಽಪಿ ಶೈವಮಾಹಾತ್ಮ್ಯ ವೈಭವಂ ।
ನೈವ ವರ್ಣಯಿತುಂ ಶಕ್ತಃ ತಥೈವಾಹಂ ಹರಿಸ್ತಥಾ ॥೧೪॥

ಶಾಂಭವಾಂಗಾನುಷಂಗೇಣ ಮಹಾಪಾಪವಿಹಂಗಮಾಃ ।
ಪ್ರಯಾಂತಿ ನಳಿಕಾಘಾತಘೋಷಾದಿವ ವಿಶೇಷತಃ ॥೧೫॥

ಪುರಾ ಕಶ್ಚಿದಭೂದ್ರಾಜಾ ಪ್ರಜಾಪೀಡನತತ್ಪರಃ ।
ಪಾಪಾನಾಮಾಶ್ರಯಸ್ತಸ್ಯ ಪಾಪಾನಾಂ ಗಣನಾಪಿ ನ ॥೧೬॥

ಪರದ್ರವ್ಯರತೋ ನಿತ್ಯಂ ಪರದ್ರೋಹರತಸ್ತಥಾ ।
ಪರನಿಂದಾಪರೋ ನಿತ್ಯಂ ಪರದಾರರತಃ ಸದಾ । ॥೧೭॥

ಲೋಕದಲ್ಲಿ ಶೈವಭಕ್ತರೇ ಧನ್ಯರು. ಅವರೇ ಕೃತಕೃತ್ಯರು. ಅವರ ಪಾದ ಧೂಳಿನ ಸ್ವಲ್ಪವಾದ ಅಂಶವೂ ಸಹ ಮೂರು ಲೋಕವನ್ನೂ ಪವಿತ್ರಮಾಡುತ್ತದೆ. ಒಂದುಸಾವಿರ ನಾಲಿಗೆಯುಳ್ಳ ಮಹಾಶೇಷನಿಗೂ ಸದಾ ಶಿವಭಕ್ತರ ಮಾಹಾತ್ಮ್ಯ ವನ್ನು ವರ್ಣಿಸಲು ಸಾಮರ್ಥ್ಯವಿಲ್ಲ. ಹಾಗೆಯೇ ನಾನೂ ಶ್ರೀವಿಷ್ಣುವೂ ಅವರ ಮಹಿಮೆಯನ್ನು ಬಣ್ಣಿಸಲು ಶಕ್ತರಾಗಿಲ್ಲ. ||೧೩-೧೪||

ಘೋರಪಾಪಗಳೆಂಬ ಹಕ್ಕಿಗಳು ಶಿವಭಕ್ತರ ಅಂಗಸ್ಪರ್ಶಮಾತ್ರದಿಂದಲೇ ಬಂದೂಕದ ಶಬ್ದದಿಂದ ಹಾರಿಹೋಗುವಂತೆ ಹಾರಿಹೋಗುತ್ತವೆ. ||೧೫||

“ಹಿಂದೆ ಒಬ್ಬ ರಾಜನಿದ್ದನು. ಅವನು ಯಾವಾಗಲೂ ಪ್ರಜೆಗಳನ್ನು ತೊಂದರೆ ಗೊಳಿಸುತ್ತಿದ್ದನು. ಯಾವಾಗಲೂ ಪಾಪಕರ್ಮಗಳನ್ನು ಮಾಡುತ್ತಿದ್ದ ಆತನಿಗೆ ಪಾಪಗಳ ಲೆಕ್ಕವೇ ಇರಲಿಲ್ಲ. ||೧೬||

ಅವನು ಯಾವಾಗಲೂ ಇನ್ನೊಬ್ಬರ ಸ್ವತ್ತುಗಳನ್ನೇ ಅಪಹರಿಸುತ್ತಿದ್ದನು. ಇತರರಿಗೆ ದ್ರೋಹಮಾಡುವುದಲ್ಲದೆ ಎರಡನೆಯವರನ್ನು ಬೈಯುತ್ತಿದ್ದನು. ಮತ್ತು ಪರಸ್ತ್ರೀಯರಲ್ಲಿ ಆಸಕ್ತನಾಗಿದ್ದನು. ||೧೭||

ಗೋಹಿಂಸಾನಿರತೋ ನಿತ್ಯಮಶ್ವಹಿಂಸಾರತಸ್ತಥಾ ।
ದ್ವಿಜಹಿಂಸಾಪರೋ ನಿತ್ಯಂ ತನ್ನಾರೀದುಃಖದಾಯಕಃ ॥೧೮॥

ತದ್ರಾಜ್ಯೇ ಜಲಪಾನಾರ್ಥಂ ಮೃಗಾ ಅಪಿ ಚರಂತಿ ನ ।
ಅನ್ಯೇಷಾಂ ತ್ವತ್ರ ಕಾ ವಾರ್ತಾ ಪಾಪಿಷ್ಠಜನಮಂಡನೇ ॥೧೯॥

ತದ್ದೇಶವಿಪಿನೇ ಕೋಽಪಿ ಪಾಂಥಃ ಶೈವೋತ್ತಮೋ ಗತಃ ।
ತತ್ರ ಬಿಲ್ವತರುಸ್ತೇನ ದೃಷ್ಟೋ ದೋಷನಿವಾರಕಃ ॥೨೦॥

ನವಬಿಲ್ವದಳಾಕ್ರಾಂತಮಾಲವಾಲಜಲಾಕುಲಂ ।
ವೇಷ್ಟಿತಂ ಪರಿತಃ ಸಮ್ಯಗುಶೀರೈರತಿಶೀತಲೈಃ ॥೨೧॥

ತತ್ರಾಸ್ತಿ ಕುಂಡಮಮಲಂ ಜಲಕಲ್ಲೋಲಮಂಡಿತಂ ।
ಪರಿತಃ ಪ್ರೋಕ್ಷಿತಂ ಶುದ್ಧಂ ಛಾಯಾಚ್ಛನ್ನಮನುತ್ತಮಂ ॥೨೨॥

ಗೋ ಹಿಂಸೆಯನ್ನು ಮಾಡುವುದಲ್ಲದೆ ಕುದುರೆಗಳನ್ನೂ ಪೀಡಿಸುತ್ತಿದ್ದನು. ಮತ್ತು ಬ್ರಾಹ್ಮಣರನ್ನೂ ಅವರ ಹೆಂಗಸರನ್ನೂ ಬಹಳ ತೊಂದರೆಪಡಿಸುತ್ತಿದ್ದನು. ॥೧೮॥

ಅವನ ರಾಜ್ಯದಲ್ಲಿ ಮೃಗಗಳು (ಜಿಂಕೆ) ನೀರು ಕುಡಿಯುವುದಕ್ಕೂ ಸಹ ಸಂಚರಿಸುತ್ತಿರಲಿಲ್ಲ. ಆದರ ಮೇಲೆ ಆ ರಾಜ್ಯದಲ್ಲಿ ಕೆಟ್ಟವರ ವಿಷಯದಲ್ಲಿ ಇನ್ನೇನು ಹೇಳತಕ್ಕದ್ದಿದೆ? ॥೧೯॥

ಅವನ ರಾಜ್ಯಕ್ಕೆ ಒಂದು ಬಾರಿ ಒಬ್ಬ ಹರಭಕ್ತನು ಬಂದನು. ಮತ್ತು ಅಲ್ಲಿ ಪಾಪನಿವಾರಕವಾಗಿ ನಿಂತಿರುವ ಒಂದು ಬಿಲ್ವವೃಕ್ಷವನ್ನು ನೋಡಿದನು. ॥೨೦॥

ಆ ಬಿಲ್ವಮರವು ಹೊಸಹೊಸ ಚಿಗುರು ಎಲೆಗಳಿಂದ ಸುಂದರವಾಗಿತ್ತು. ಪಾತಿಯು ತುಂಬ ನೀರು ತುಂಬಿತ್ತು. ಸುತ್ತಲೂ ಲಾಮಂಚವೇ ಮೊದಲಾದ ಶೀತಲ ಮಯ ಸುಗಂಧವಸ್ತುವು ಸುತ್ತುವರಿಯಲ್ಪಟ್ಟಿತ್ತು. ॥೨೧॥

ಆದರ ಸಮೀಪದಲ್ಲಿ ಒಂದು ಕೊಳವಿದ್ದಿತು. ಅದು ನೀರಿನ ಅಲೆಗಳಿಂದ ತುಂಬಿ ಅಂದವಾಗಿ ಕಾಣುತ್ತಿತ್ತು. ಅದರ ಸುತ್ತುಮುತ್ತಲಿನ ಪ್ರದೇಶವು ಶುದ್ಧವಾಗಿತ್ತು; ಮತ್ತು ಆ ಕೊಳವು ನೆರಳಿನಿಂದ ಆಚ್ಛಾದಿತವಾಗಿತ್ತು. ॥೨೨॥

ತದ್ದೇಶರಾಜೋ ವಿಪಿನೇ ಸಂಚರನ್ ಮೃಗಘಾತುಕಃ ।
ತದ್ಬಿಲ್ವಮೂಲೇ ಛಾಯಾರ್ಥಮಧಿತಿಷ್ಠತಿ ಶೀತಲೇ ॥೨೩॥

ಗ್ರೀಷ್ಮಕಾಲೇ ರವಿಕರೈಃ ಪ್ರತಪ್ತಃ ಪರ್ಯಟನ್ ವನೇ ।
ತದ್ಬಿಲ್ವಮೂಲಮಾಶ್ರಿತ್ಯ ತತೋ ಯಾತಿ ಪುರಂ ಪ್ರತಿ ॥೨೪॥

ತಂ ಬಿಲ್ವತರುಮಾಲೋಕ್ಯ ತುಷ್ಟೋ ಭವತಿ ಭೂಮಿಪಃ ।
ತದ್ರಕ್ಷಣಾರ್ಥಂ ಬಹವಃ ಸ್ಥಾಪಿತಾಶ್ಚ ವನೇಚರಾಃ । ॥೨೫॥

ವಾತೇನಾಪಿ ನ ಲೂನೇವ ಶಾಖಾ ಬಿಲ್ವತರೋರತಃ ।
ಅನ್ಯೇನೈತೇನ ವಾ ತಸ್ಯ ಶಾಖಾ ಲೂನಾ ಭವಿಷ್ಯತಿ ॥೨೬॥

ಬಿಲ್ವಶಾಖಾಪ್ರವೃದ್ಧ್ಯರ್ಥಂ ಜಲಂ ಚಾತೀವ ನಿರ್ಮಲಂ ।
ಸ ದಾಪಯತಿ ಭೂಪಾಲಸ್ತನ್ಮೂಲಂ ಪೂರ್ಣಮಂಬುನಾ ॥೨೭॥

ಆ ದೇಶದ ರಾಜನು ಬೇಟೆಗಾಗಿ ಕಾಡಿಗೆ ಹೋದನು. ಅಲ್ಲಿ ಬಳಲಿ ಆ ಬಿಲ್ವ ವೃಕ್ಷದ ನೆರಳಿನಲ್ಲಿ ವಿಶ್ರಮಿಸಿಕೊಳ್ಳಲು ಬರುತ್ತಿದ್ದನು. ಆತನು ಕಾಡಿನಲ್ಲಿ ಅಲೆದಾಡುತ್ತಾ ಬಿಸಿಲಿನ ತಾಪದಿಂದ ಬಳಲಿ, ಆ ಬಿಲ್ವವೃಕ್ಷದ ತಂಪಾದ ನೆರಳಿನಲ್ಲಿ ಕೂತುಕೊಂಡನು. ಆಮೇಲೆ ತನ್ನ ಊರಿಗೆ (ಪಟ್ಟಣಕ್ಕೆ) ಹೋಗುವವನಾಗಿದ್ದನು. ||೨೩-೨೪||

ಆ ಸೊಂಪಾದ ಬಿಲ್ವಮರವನ್ನು ನೋಡಿ ಸಂತೋಷಪಟ್ಟ ಆ ರಾಜನು ಅದರ ರಕ್ಷಣೆಗಾಗಿ ಅನೇಕ ಭಿಲ್ಲರನ್ನು ನೇಮಿಸಿದ್ದನು. ||೨೫||

ಕಾವಲು ನೇಮಿಸಿರುವುದರಿಂದ ಗಾಳಿಯಿಂದ ಕೂಡ ಅದರ ಕೊಂಬೆಯು ಮುರಿಯುವಂತಿರಲಿಲ್ಲ, ಎಂದ ಮೇಲೆ ಇತರರಾರೂ ಅದನ್ನು ಮುಟ್ಟುವುದು ಹೇಗೆ? ಹೀಗಾಗಿ ಅದು ಸೊಂಪಾಗಿಯೇ ಕಾಣತೊಡಗಿತು. ||೨೬||

ಬಿಲ್ವ ಕೊಂಬೆಯು ಚನ್ನಾಗಿ ಹರಡಿ ಬೆಳೆಯಬೇಕೆಂಬ ಉದ್ದೇಶದಿಂದ ಆ ರಾಜನು ಅದರ ಬುಡಕ್ಕೆ ಸ್ವಚ್ಛವಾದ ನೀರನ್ನು ಬಹಳವಾಗಿ ಹಾಕಿಸುತ್ತಿದ್ದನು. ||೨೭||

ತಾದೃಶಂ ಬಿಲ್ವಮೂಲಂ ತು ಸಮಾಶ್ರಿತ್ಯ ಕ್ಷಣಂ ಸ್ಥಿತಃ ।
ಸಶಾಂಭವಸ್ತದಾ ರಾಜಾ ಸೋಽಪಿ ತತ್ರ ಸಮಾಗತಃ ॥೨೮॥

ತತಃ ಶ್ರಾಂತಂ ಶೈವವರ್ಯಂ ಬಿಲ್ವಮೂಲಸ್ಥಿತಂ ನೃಪಃ ।
ದೃಷ್ಟ್ವಾ ಶಾಂತಿರಸಾಕ್ರಾಂತಸ್ತುರಗಾದವತೀರ್ಯ ಸಃ ॥೨೯॥

ಏಕಾಕೀ ಸ ಯಯೌ ಮಂದಂ ಬಿಲ್ವಮೂಲಂ ಕ್ಷುಧಾತುರಃ ।
ಶ್ರಾಂತೋ ಭಾನುಕರೈಸ್ತಪ್ತಃ ಕೋಽಯಮಿತ್ಯಾಹ ತಂ ಶನೈಃ ॥೩೦॥

ತತೋ ವಾತಃ ಪ್ರಚಲಿತಃ ಶೈವಾಂಗಾದ್ಭೂತಿಸಂಯುತಾತ್ ।
ತೇನ ವಾತೇನ ಸಂವೀತೋ ಭೂಪತಿಃ ಸಾತ್ವಿಕಾನ್ವಿತಃ ॥೩೧॥

ತಮಾಹ ಶೈವಂ ಶ್ರಾಂತೋಽಪಿ ಕುತೋ ವಾ ಸಮುಪಾಗತಃ ।
ವಿಪಿನೇ ತವ ಸಂಚಾರಃ ಕಥಂ ಶಾರ್ದೂಲಸಂಯುತೇ ॥೩೨॥

ಹಿಂದೆ ಹೇಳಿದ ಆ ಶಿವಭಕ್ತನು ಅಂತಹ ಬಿಲ್ವವೃಕ್ಷದ ಬುಡದಲ್ಲಿ ಕ್ಷಣ ಕಾಲ ತಂಗಿದನು. ಅಷ್ಟು ಹೊತ್ತಿಗೆ ಆ ರಾಜನೂ ಅಲ್ಲಿಗೆ ಬಂದನು. ॥೨೮॥

ಬಳಿಕ ಬಿಲ್ವಮರದ ಕೆಳಗೆ ಬಳಲಿ ಕೂತಿದ್ದ ಆ ಭಕ್ತನನ್ನು ನೋಡಿದೊಡನೆಯೇ ರಾಜನು ಸಾತ್ವಿಕ ಭಾವನೆಯಿಂದ ಪೂರ್ಣನಾಗಿ ಕುದುರೆಯಿಂದ ಇಳಿದನು. ಮತ್ತು ಬಹಳ ಹಸಿವೆ ಬಾಯಾರಿಕೆಯಿಂದಲೂ ಬಿಸಲಿನ ಝಳದಿಂದಲೂ ದುಃಖಿತನಾದ ಆ ರಾಜನು ಮೆಲ್ಲಮೆಲ್ಲನೆ ಬಿಲ್ವಮರದ ಕೆಳಗೆ ಕೂತಿರುವ ಶೈವನ ಹತ್ತಿರಕ್ಕೆ ಹೋದನು. ॥೨೯-೩೦॥

ಆಗ ಶೈವನ ಮೈಮೇಲೆ ಬೀಸಿ ಅವನು ಧರಿಸಿದ ವಿಭೂತಿಯನ್ನು ಹೊತ್ತ ಗಾಳಿಯು ರಾಜನಿಗೆ ತಗುಲಿತು. ತಾನು ಬಹಳ ಶ್ರಮಪಟ್ಟವನಾದರೂ ಆ ರಾಜನು, ವಿನಯಭಾವವುಳ್ಳವನಾಗಿ ನೀನು ಏತಕ್ಕೋಸ್ಕರ ಇಲ್ಲಿಗೆ ಬಂದಿರುವೆ? ಹುಲಿಗಳೇ ಮೊದಲಾದ ದುಷ್ಟ ಜಂತುಗಳಿರುವ ಕಾಡಿನಲ್ಲಿ ಹೇಗೆ ನೀನು ಸಂಚರಿಸುತ್ತೀಯೆ? ಎಂದು ಆ ಶೈವನನ್ನು ಸೌಮ್ಯರೀತಿಯಿಂದ ಕೇಳಿದನು. ॥೩೧-೩೨॥

ನಿಷ್ಠುರಂ ಹಿ ಮನಃ ಪೂರ್ವಂ ಮಮೇದಾನೀಂ ನ ತಾದೃಶಂ ।
ತ್ವದ್ದರ್ಶನಾದೇವ ಮೇದ್ಯ ಸಾಮರ್ಥ್ಯಂ ಕಿಂ ತವೇದೃಶಂ ॥೩೩॥

ಮಯಾ ತು ನಿಹತಾಃ ಪೂರ್ವಂ ಬ್ರಾಹ್ಮಣಾ ಏವ ಕೇವಲಂ ।
ತೇಷಾಂ ನ ಗಣನಾ ನೂನಮದ್ಯ ಸಾ ಧೀರ್ನಜಾಯತೇ ॥೩೪॥

ಅಹೋ ಮಮಾಪಿ ವಿಪಿನೇ ಕೋಽಯಂ ಕಾಲವಿಪರ್ಯಯಃ ।
ಪ್ರಾಯೋಽವಶ್ಯಕರೋ ಮಂತ್ರಸ್ತವ ತಿಷ್ಠತಿ ಕಶ್ಚನ ॥೩೫॥

ಶಾರ್ದೂಲೈರಪಿ ನ ಸ್ಪೃಷ್ಟೋ ಭವಾನತ್ರ ವನೇ ಘನೇ ।
ಅತಸ್ತಂ ವದ ಮೇ ಮಂತ್ರಂ ತವ ಭೃತ್ಯತ್ವಮಾಗತಃ ॥೩೬॥

ಮಯಾ ಯದ್ಯತ್ಕೃತಂ ಪಾಪಂ ತತ್ಸಂಖ್ಯಾಪಿ ನ ದೃಶ್ಯತೇ ।
ತನ್ನಿಷ್ಕೃತಿಃ ಕಥಂ ವಾ ಸ್ಯಾತ್ ತತ್ಸರ್ವಂ ವದ ಸಾದರಂ ॥೩೭॥

ಅದ್ಯ ಪ್ರಭೃತಿ ಭೃತ್ಯೋಽಹಂ ತವ ನಾಸ್ತ್ಯತ್ರ ಸಂಶಯಃ ।
ಕೃಪಾಂ ಕುರು ವಿಧೇಯೋಽಸ್ಮಿ ಸರ್ವಥಾ ತವ ಶಾಂಭವ ॥೩೮॥

ಮತ್ತು ಹಿಂದೆ ನನ್ನ ಮನಸ್ಸು ಬಹಳ ಕ್ರೂರವಾಗಿತ್ತು. ನಿನ್ನ ದರ್ಶನದಿಂದ ಅಂತಹ ಕಠಿನ ಭಾವವು ಮಾಯವಾಯಿತು. ನಿನ್ನ ಸಾಮರ್ಥ್ಯವೆಂತಹುದಿರಬಹುದು ? ನಾನು ಹಿಂದೆ ಮುಖ್ಯವಾಗಿ ಬ್ರಾಹ್ಮಣರನ್ನೇ ಕೊಲ್ಲಿಸಿದ್ದೇನೆ. ಆ ಬ್ರಹ್ಮಹತ್ಯೆಯ ಲೆಕ್ಕವೇ ನನಗಿರಲಿಲ್ಲ. ಈಗ ಅಂತಹ ಕಠೋರ ಬುದ್ಧಿಯು ನನ್ನಲ್ಲಿ ಉಂಟಾಗುವುದಿಲ್ಲ ! ॥೩೩-೩೪॥

ಆಹಾ ! ನಾನಾದರೂ ಎಷ್ಟು ಹೊತ್ತು ಕಾಡಿನಲ್ಲಿ ಹೊತ್ತು ಕಳೆದೆನು ! ತುಂಬಾ ಆಶ್ಚರ್ಯ. ನಿನ್ನಲ್ಲಿ ಯಾವುದೋ ಒಂದು ವಶೀಕರಣ ಮಂತ್ರವಿರುವಂತೆ ಇದೆ. ಆದರಿಂದಲೇ ಈ ಗೊಂಡಾರಣ್ಯದಲ್ಲಿ ಹುಲಿಗಳು ನಿನ್ನನ್ನು ಹಿಂಸಿಸಿಲ್ಲ. ಆ ಮಂತ್ರವನ್ನು ನನಗೆ ಉಪದೇಶಮಾಡು. ಈಗ ನಾನು ನಿನಗೆ ಶಿಷ್ಯನಾಗಿದ್ದೇನೆ.॥೩೫-೩೬॥

ನಾನು ಹಿಂದೆ ಎಷ್ಟೆಷ್ಟು ಪಾಪಗಳನ್ನು ಮಾಡಿದೆನೋ ಅವುಗಳ ಲೆಕ್ಕವೀಗ ಸಿಕ್ಕಲಾರದು. ಅಂತಹ ನನಗೆ ಹೇಗೆ ಮುಕ್ತಿಯಾದೀತು ? ಅವೆಲ್ಲವನ್ನೂ ಆದರದಿಂದ ಹೇಳು. ಈಹೊತ್ತು ಮೊದಲುಗೊಂಡು ನಿನಗೆ ಶಿಷ್ಯ (ದಾಸ) ನಾಗಿದ್ದೇನೆ.

ತ್ವದಂಗಸಂಗವಾತೇನ ಪೂತಃ ಸಾತ್ವಿಕತಾಂ ಗತಃ ।
ಭೂತಿಂ ಪ್ರಯಚ್ಛ ಮೇ ಶೈವೀಂ ಮಂತ್ರಪೂತಾಮನುತ್ತಮಾಂ ॥೩೯॥

ಪಾಪಿಷ್ಠೇಷ್ವಪಿ ಕುರ್ವಂತಿ ಕರುಣಾಮತಿಸಾಧವಃ ।
ಕಿಂಚಿತ್ತ್ವತ್ಸನ್ನಿಧಾನೇನ ಪಾಪೇಭ್ಯೋಽಪಿ ನ ಮೇ ಭಯಂ ॥೪೦॥

ತ್ವಂ ತಾವತ್ಪಾಪಶಾರ್ದೂಲಪಂಚಾನನ ಇತಿ ಸ್ಮೃತಃ ।
ಅತಃ ಪರಂ ಕ್ವ ಪಾಪೇಭ್ಯೋ ಭಯಮದ್ಯ ಭವಿಷ್ಯತಿ ॥೪೧॥

ತ್ವತ್ಸನ್ನಿಧಾನಜನಕಂ ನ ಪುಣ್ಯಂ ಮಯಿ ದೃಶ್ಯತೇ ।
ಏತಜ್ಜನ್ಮಕೃತಂ ಪುಣ್ಯಂ ಪೂರ್ವಜನ್ಮಕೃತಂ ಚ ನ ॥೪೨॥

ಅಕಾಲವೃಷ್ಟಿರಿವ ಮೇ ದೃಷ್ಟಿಸ್ತವ ವಿಶೇಷತಃ ।
ತಾನಿ ತಾನಿ ವಿನಷ್ಟಾನಿ ದುರದೃಷ್ಟಾನಿ ಕೋಟಿಶಃ ॥೪೩॥

ಇದರಲ್ಲಿ ಸ್ವಲ್ಪವೂ ಸಂಶಯ ಬೇಡ. ಎಲೈ ಶೈವನೇ, ದಯವಿಟ್ಟು ನನಗೆ ಕರ್ತವ್ಯವನ್ನು ಆಜ್ಞಾಪಿಸು. ಖಂಡಿತವಾಗಿಯೂ ನಾನು ನಿನಗೆ ವಿಧೇಯನಾಗಿದ್ದೇನೆ. ||೩೭-೩೮||

ನಿನ್ನ ಅವಯವದ ಮೇಲೆ ಬೀಸಿದ ವಾಯುವಿನ ಸ್ಪರ್ಶದಿಂದ ನಾನು ಪವಿತ್ರನಾಗಿ ಶಾಂತಸ್ವಭಾವವನ್ನು ಹೊಂದಿದ್ದೇನೆ. ನನಗೆ ಪರಿಶುದ್ಧವಾದ ಶೈವೀ ವಿಭೂತಿಯ ಮಂತ್ರೋಪದೇಶವನ್ನು ಮಾಡು. ಅದಕ್ಕಿಂತ ಶ್ರೇಷ್ಠವಾದ ವಸ್ತುವು ಮತ್ತೊಂದಿಲ್ಲ. ಸತ್ಪುರುಷರು ಪಾಪಮಾಡಿದವರಲ್ಲಿಯೂ ಸಹ ಅತಿ ಕರುಣೆಯುಳ್ಳವರಾಗಿರುತ್ತಾರೆ. ಆದುದರಿಂದ ನಿನ್ನ ಸನ್ನಿಧಿಯಲ್ಲಿ ಇರುವ ನನಗೆ ಪಾಪಗಳ ಭೀತಿಯೇ ಇಲ್ಲ. ||೩೯-೪೦||

ನೀನು ಪಾಪಗಳೆಂಬ ಹುಲಿಗಳಿಗೆ ಸಿಂಹಸ್ವರೂಪವೆನಿಸಿರುವೆ. ಆದುದರಿಂದ ನನಗೆ ಪಾಪಗಳ ಹೆದರಿಕೆ ಇನ್ನು ಎಲ್ಲಿಯದು ? ಆದರೆ ನಿನ್ನ ಸಂದರ್ಶನದಿಂದುಂಟಾದ ಪುಣ್ಯವು ಲಭಿಸಿದಂತೆ ನನಗೆ ತೋರುವುದಿಲ್ಲ. ಅಂತಹ ಪುಣ್ಯವು ಈ ಜನ್ಮದಲ್ಲಿ ನನಗಿರಲಿ. ಪೂರ್ವಜನ್ಮದಲ್ಲೂ ನಾನು ಪುಣ್ಯಮಾಡಿದವನಲ್ಲ. ||೪೧-೪೨||

ನಿನ್ನ ದರ್ಶನವು ಆಕಸ್ಮಾತ್ ಅಕಾಲದಲ್ಲಿ ಬಂದ ಮಳೆಯ ಹಾಗೆ ಹೆಚ್ಚು ಸಂತೋಷಕರವಾಗಿದೆ. ಕೋಟಿಗಟ್ಟಲೆಯ ದುರದೃಷ್ಟಗಳೆಲ್ಲಾ ಇಂದು ನಷ್ಟವಾ

ತ್ವದ್ದರ್ಶನಂ ಪಾಪರಾಶೇರಶನಿಸ್ಪರ್ಶನಂ ತವ ।
ಸರ್ವಪುಣ್ಯನಿಧಾನಾನಾಂ ಮೂಲಮಿತ್ಯವಧಾರ್ಯತೇ ॥೪೪॥

ಇತ್ಯುಕ್ತ್ವಾ ಪ್ರಣತೋ ರಾಜಾ ಶೈವಪುಂಗವಮಾದರಾತ್ ।
ತತಸ್ತತ್ಫಲಭೂತ್ಯಾಂಗೈಃ ಸಂಯುತೋ ಭೂಪತಿಸ್ತದಾ ॥೪೫॥

ತದ್ದೇಹಾನ್ನಿರ್ಗತಂ ಪಾಪಂ ಗಜರೂಪಮುಪಾಶ್ರಿತಂ ।
ದಗ್ಧಪುಚ್ಛಂ ದಗ್ಧತುಂಡಂ ದದರ್ಶ ಸ ನೃಪೋ ಗಜಂ ॥೪೬॥

ತತಃ ಪರಂ ಪ್ರಣಮ್ಯಾಶು ಸ ರಾಜಾ ಶೈವಪುಂಗವಂ ।
ಕಿಮಯಂ ಭಗವನ್ ಬ್ರೂಹಿ ಧೂಮಾಕಾರೋ ಗಜೋಽಧುನಾ ॥೪೭॥

ನಿರ್ಗಚ್ಛತಿ ಕಿಲಾಂಗಾರಸ್ತತ್ತುಂಗಾಂಗಾದನಂ ತಥಾ ।
ಜ್ವಲತ್ಯಯಂ ಸ ಧೂಮೋಽಪಿ ಮಹಾಪರ್ವತಸನ್ನಿಭಃ ॥೪೮॥

ದುವು. ನಿನ್ನ ಈ ನೋಟವು ಪಾಪಪರ್ವತರಾಶಿಗೆ ವಜ್ರಾಯುಧದ ಪ್ರಹಾರದಂತಿದೆ. ನಿನ್ನ ಸಂದರ್ಶನವು ಎಲ್ಲಾ ಪುಣ್ಯಕರ್ಮಗಳ ಫಲಗಳಿಗೂ ಮೂಲಕಾರಣವೆಂದು ನಿಶ್ಚೈಸಿದ್ದೇನೆ. ॥೪೩-೪೪॥

ಹೀಗೆ ಹೇಳಿ ಆ ರಾಜನು ನಮ್ರತೆಯಿಂದ ಆ ಈಶ್ವರ ಭಕ್ತನಿಗೆ ನಮಸ್ಕರಿಸಿದನು. ಬಳಿಕ ಆ ಪುಣ್ಯಫಲರೂಪವಾದ ಶೈವೀವಿಭೂತಿಯು ರಾಜನಿಗೆ ಲಭಿಸಿತು. ಆ ಕೂಡಲೆ ಆ ರಾಜನ ದೇಹದಲ್ಲಿರುವ ಪಾಪಸಮೂಹವು ಆನೆಯ ರೂಪವನ್ನು ಧರಿಸಿ ಈಚೆಗೆ ಕಾಣಿಸಿಕೊಂಡಿತು. ಸುಟ್ಟು ಹೋದ ಬಾಲ, ಸೊಂಡಿಲು ಇವುಗಳುಳ್ಳ ಆ ಆನೆಯನ್ನು ರಾಜನು ನೋಡಿದನು. ॥೪೫-೪೬॥

ಆಮೇಲೆ ರಾಜನು ಶೈವಶ್ರೇಷ್ಠನಿಗೆ ತಲೆಬಾಗಿ "ಎಲೈ ಪೂಜ್ಯನೇ, ಹೊಗೆಯ ಆಕಾರವುಳ್ಳ ಈ ಆನೆಯು ಯಾವುದಿರಬಹುದು? ಅದರ ಉನ್ನತವಾದ ಅವಯವದಿಂದ ಕಿಡಿಗಳು ಹೊರಬೀಳುತ್ತಿವೆ. ಹೊಗೆಯಿಂದ ಮುಸುಕಿದ್ದರೂ ದೊಡ್ಡ ಬೆಟ್ಟದಂತಿರುವ ಈ ಗಜವು ಉರಿಯುತ್ತಿದೆ. ಇದರ ವಿಚಾರವೇನು? ಎಂದನು. ॥೪೭-೪೮॥

ತಸ್ಮಾದಪಿ ಪ್ರಜಾಯಂತೇ ದಗ್ಧಾಃ ಪಾತಕಪರ್ವತಾಃ ।
ಇದಮತ್ಯದ್ಭುತಂ ದೃಷ್ಟಂ ಸರ್ವಕಷ್ಟನಿವಾರಕಂ ॥೪೯॥

ಸನ್ನಿಧಾನಂ ಶಾಂಭವಸ್ಯ ಭಾಗ್ಯಂ ವಾ ಕಿಮುತೋಧಿಕಂ ।
ಸರ್ವಸೌಭಾಗ್ಯಮೂಲತ್ವಂ ಜ್ಞಾತಂ ತ್ವತ್ಸನ್ನಿಧೇರ್ಮಯಾ ॥೫೦॥

ಅಹೋಮಹದಿದಂ ಭಾಗ್ಯಂ ಭೋಗಃ ಸ್ವರ್ಗಾಪವರ್ಗದಂ ।
ಇತಿ ತದ್ವಚನಂ ಶ್ರುತ್ವಾ ಪ್ರಾಹ ಶಾಂಭವಪುಂಗವಃ ॥೫೧॥

ರಾಜನ್ನಾಶ್ಚರ್ಯಮೇವೈತನ್ಮಮಾಪ್ಯತ್ರ ನ ಸಂಶಯಃ ।
ತ್ವತ್ತಃ ಕೋಪ್ಯಧಿಕೋ ಲೋಕೇ ಪುಣ್ಯವಾನ್ನೇತಿ ಮನ್ಮಹೇ ॥೫೨॥

ಕೃತಂ ಬಿಲ್ವತರೋರಸ್ಯ ಪಾಲನಂ ಜಲದಾನತಃ ।
ತದಂಬುಲವಮಾನೇನ ಪಾಪನಾಶಸ್ತವಾಧುನಾ ॥೫೩॥

ಆ ಆನೆಯಿಂದ ಪಾಪಗಳ ಬೆಟ್ಟಗಳು ಸುಟ್ಟು ಹೊರಬೀಳುತ್ತಿವೆ. ಎಲ್ಲಾ ಕಷ್ಟಗಳನ್ನೂ ನಿವಾರಣೆಮಾಡತಕ್ಕ ಇದು ಅತ್ಯಾಶ್ಚರ್ಯವನ್ನು ಉಂಟುಮಾಡುತ್ತಿದೆ. ॥೪೯॥

ಶೈವಸಾನ್ನಿಧ್ಯವು ಭಾಗ್ಯದಾಯಕವಾಗಿರುತ್ತದೆ. ಇದಕ್ಕಿಂತಲೂ ಹೆಚ್ಚಾದುದು ಬೇರೆ ಇಲ್ಲ. ನಿನ್ನ ಸಹವಾಸದಿಂದ ಸಮಸ್ತ ಕಲ್ಯಾಣಗಳಿಗೂ ಮೂಲಕಾರಣವು ತಿಳಿಯಲ್ಪಟ್ಟಿತು. ಆಹಾ! ಎಂತಹ ಅದೃಷ್ಟ! ಸ್ವರ್ಗ ಮತ್ತು ಮುಕ್ತಿಗಳನ್ನು ನೀಡತಕ್ಕ ಭಾಗ್ಯ ಮತ್ತು ಭೋಗಗಳು ಲಭಿಸಿದಹಾಗಾಯಿತು ಎಂದನು. ಅವನ ಮಾತನ್ನು ಕೇಳಿ ಆ ಶೈವಾಗ್ರೇಸರನು ರಾಜನನ್ನು ಕುರಿತು ಹೀಗೆಂದನು. ॥೫೦-೫೧॥

“ ರಾಜನೇ, ನನಗೆ ಇದು ಆಶ್ಚರ್ಯವೆನಿಸಲಾರದು. ಲೋಕದಲ್ಲಿ ನಿನಗಿಂತಲೂ ಬೇರೆ ಪುಣ್ಯಶಾಲಿಯು ಇಲ್ಲವೆಂದು ತಿಳಿಯುತ್ತೇನೆ. ಈ ವಿಚಾರದಲ್ಲಿ ಸಂಶಯ ಬೇಡ. ॥೫೨॥

ನೀನು ಈ ಬಿಲ್ವವೃಕ್ಷವನ್ನು ನೀರು ಹಾಕಿ ಬೆಳಸಿರುವೆ. ಇದಕ್ಕೆ ನೀರು ಹಾಕಿಸಿರುವುದರಿಂದಲೇ ನಿನ್ನ ಪಾಪಗಳು ನಾಶವಾಗುತ್ತಿವೆ. ಬಿಲ್ವವೃಕ್ಷದ ಬುಡಕ್ಕೆ

ಬಿಲ್ವಮೂಲೇ ತ್ವಯಾ ದತ್ತಾ ಶೀತಲಾ ಜಲಬಿಂದವಃ ।
ತತ್ಸಂಖ್ಯಯಾ ಪ್ರಣಷ್ಟಾನಿ ಪಾತಕಾನಿ ಬಹೂನಿ ತೇ ॥೫೪॥

ಏಕಸ್ಮಿನ್ ದಿವಸೇ ಸಿಕ್ತೋ ಬಿಲ್ವಃ ಸಲಿಲಬಿಂದುಭಿಃ ।
ತೈರನಂತಾನಿ ಪಾಪಾನಿ ವಿನಷ್ಟಾನಿ ನ ಸಂಶಯಃ ॥೫೫॥

ಪ್ರತ್ಯಹಂ ದೀಯತೇ ಮೂಲೇ ಬಿಲ್ವಸ್ಯಾಸ್ಯ ನೃಪೋತ್ತಮ ।
ಜಲಂ ತೇನ ಮಹದ್ಭಾಗ್ಯಂ ಮುಕ್ತಿಶ್ಚಾಗ್ರೇ ಭವಿಷ್ಯತಿ ॥೫೬॥

ಏತಾನಿ ಬಿಲ್ವಪತ್ರಾಣಿ ಪವಿತ್ರಾಣಿ ನೃಪೋತ್ತಮ ।
ನೂನಂ ತ್ರಿಣೇತ್ರರೂಪಾಣಿ ಪೋಷಿತಾನಿ ಜಲಾರ್ಪಣೈಃ ॥೫೭॥

ತ್ವಂ ತಾವದಧುನಾ ವಂದ್ಯೋ ವೃಂದಾರಕಗಣೈರಪಿ ।
ತವ ಭಾಗ್ಯಸ್ಯ ನೇಯತ್ತಾ ಮಮ ಮಾನ್ಯೋಽಸಿ ಸರ್ವಥಾ ॥೫೮॥

ಮಹಾದೇವಸ್ವರೂಪೋಽಯಂ ಬಿಲ್ವೋ ವೇದೈರಪಿ ಸ್ತುತಃ ।
ಯಥಾ ಕಥಂಚಿದೇತಸ್ಯ ಮಹಿಮಾ ಜ್ಞಾಯತೇ ಕಥಂ ॥೫೯॥

ತಂಪಾದ ನೀರನ್ನು ಚುಮುಕಿಸಿರುತ್ತೀಯೆ. ಎಷ್ಟು ನೀರು ಹನಿಗಳು ಈ ವೃಕ್ಷದ ಬುಡಕ್ಕೆ ಬಿದ್ದಿವೆಯೋ ಅಷ್ಟು ಪಾಪಗಳು ನಿನಗೆ ನಾಶವಾದುವು. ॥೫೩-೫೪॥

ಒಂದು ದಿನ ಬಿಲ್ವವೃಕ್ಷಕ್ಕೆ ಎರಚಿದ ಜಲಬಿಂದುಗಳಿಂದಲೇ ಅನೇಕ ಪಾಪಗಳು ವಿನಾಶಹೊಂದುತ್ತವೆ. ಹೀಗಿರಲು ಪ್ರತಿದಿನವೂ ಈ ಬಿಲ್ವವೃಕ್ಷಕ್ಕೆ ನೀರು ಹಾಕಿಸಿರುವ ನಿನ್ನ ಭಾಗ್ಯವನ್ನೇನೆಂದು ಹೇಳಲಿ! ನಿನಗೆ ಮುಂದೆ ಮೋಕ್ಷವೇ ಲಭಿಸುವುದು. ॥೫೫-೫೬॥

ಎಲೈ ರಾಜಶ್ರೇಷ್ಠನೇ, ಈ ಬಿಲ್ವಪತ್ರೆಗಳು ಪವಿತ್ರಗಳಾಗಿವೆಯಲ್ಲದೆ ಸಾಕ್ಷಾತ್ ಈಶ್ವರನ ಸ್ವರೂಪಗಳೆನಿಸಿವೆ. ಇಂತಹವುಗಳನ್ನು ನೀರು ಹಾಕಿಸಿ ನೀನು ಪೋಷಿಸಿರುತ್ತೀಯೆ. ಆದುದರಿಂದ ದೇವತೆಗಳಿಂದಲೂ ನೀನು ನಮಸ್ಕಾರ ಮಾಡಿಸಿಕೊಳ್ಳಲು ಯೋಗ್ಯನಿರುತ್ತೀಯೆ. ಖಂಡಿತವಾಗಿಯೂ ಆದರಿಂದಲೇ ನನಗೆ ನೀನು ಪೂಜ್ಯನು. ನಿನ್ನ ಪುಣ್ಯಕ್ಕೆ ಇಷ್ಟೆಂದು ಅಳತೆಯೇ ಇಲ್ಲ. ॥೫೭-೫೮॥

ಬಿಲ್ವವು ಈಶ್ವರನ ಸ್ವರೂಪವೆಂದು ವೇದಗಳಿಂದಲೂ ಹೇಳಲ್ಪಟ್ಟಿದೆ. ಇದರ ಮಹಿಮೆಯನ್ನು ಸಂಪೂರ್ಣವಾಗಿ ತಿಳಿದವರಿಲ್ಲ. ಈ ಬಿಲ್ವವೃಕ್ಷದ ಸಾನ್ನಿಧ್ಯದಿಂದ

ವನಮೇತತ್ಪಾವನಂ ಚ ಬಿಲ್ವೇನಾನೇನ ಕೇವಲಂ ।
ಏತದ್ವಾತಾನುಷಂಗೇಣ ಲಿಂಗಮಂಗಂ ಪ್ರಜಾಯತೇ ॥೬೦॥

ಪುಣ್ಯತೀರ್ಥಾನಿ ಯಾವಂತಿ ಲೋಕೇಷು ಪ್ರಥಿತಾನ್ಯಪಿ ।
ತಾನಿ ಸರ್ವಾಣಿ ತೀರ್ಥಾನಿ ಬಿಲ್ವಮೂಲೇ ವಸಂತಿ ಹಿ ॥೬೧॥

ಬಿಲ್ವಮೂಲಜಲೈರ್ಯಸ್ತು ಮೂರ್ಧಾನಮಭಿಷಿಂಚತಿ ।
ಸ ಸರ್ವತೀರ್ಥಸ್ನಾತಃಸ್ಯಾತ್ ಸ ಏವ ಭುವಿ ಪಾವನಃ ॥೬೨॥

ಬಿಲ್ವಮೂಲೇ ಮಹಾದೇವಂ ಲಿಂಗರೂಪಿಣಮವ್ಯಯಂ ।
ಯಃ ಪೂಜಯತಿ ಪುಣ್ಯಾತ್ಮಾ ಸ ಶಿವಂ ಪ್ರಾಪ್ನುಯಾತ್ ಧ್ರುವಂ ॥೬೩॥

ಬಿಲ್ವಮೂಲೇ ಪ್ರಜಪ್ತಸ್ತು ಮಂತ್ರಾಃ ಸಿದ್ಧಿಮುಪಾಗತಾಃ ।
ತನ್ಮಂತ್ರಮಹಿಮಾ ತಾವತ್ ಜ್ಞಾಯತೇ ಶಂಕರೇಣ ಹಿ ॥೬೪॥

ಶಕ್ತಿಹೀನೋಽಪಿ ಯೋ ಮಂತ್ರೋ ಬಿಲ್ವಮೂಲೇಷು ಜಪ್ಯತೇ ।
ಸ ಸಿದ್ಧಃ ಸ್ವಫಲಂ ದದ್ಯಾತ್ ಯದಿ ಮಾಹೇಶ್ವರಪ್ರಿಯಃ ॥೬೫॥

ಈ ಕಾಡೆಲ್ಲಾ ಪರಿಶುದ್ಧವಾಗಿದೆ. ಇತರ ಗಾಳಿಯ ಸ್ಪರ್ಶದಿಂದಲೇ ದೇಹವು ಶಿವಲಿಂಗಸ್ವರೂಪವಾಗುವುದು. ||೫೯-೬೦||

ಲೋಕದಲ್ಲಿ ಎಷ್ಟೆಷ್ಟು ಪುಣ್ಯತೀರ್ಥಗಳು ಪ್ರಸಿದ್ಧಗಳಾಗಿವೆಯೋ ಅವೆಲ್ಲಾ ಈ ಬಿಲ್ವವೃಕ್ಷದ ತಳದಲ್ಲಿ ವಾಸವಾಗಿವೆ. ಯಾವನು ಬಿಲ್ವವೃಕ್ಷದ ಪಾತಿಯಲ್ಲಿರುವ ನೀರಿನಿಂದ ತಲೆಗೆ ಪ್ರೋಕ್ಷಣೆಮಾಡಿಕೊಳ್ಳುವನೋ, ಅವನು ಎಲ್ಲಾ ತೀರ್ಥಸ್ನಾನವನ್ನು ಮಾಡಿದಂತೆಯೇ ಆಗುವುದು. ಅವನೇ ಭೂಮಿಯಲ್ಲಿ ಪರಿಶುದ್ಧನೆಂದು ಹೇಳಿಸಿಕೊಳ್ಳುವನು. ||೬೧-೬೨||

ನಾಶರಹಿತನೂ ಲಿಂಗಸ್ವರೂಪಿಯೂ ಆದ ಪರಮೇಶ್ವರನು ಬಿಲ್ವವೃಕ್ಷದ ಬುಡದಲ್ಲಿ ವಾಸಮಾಡುತ್ತಾನೆ. ಆದುದರಿಂದಲೇ ಬಿಲ್ವಮೂಲವನ್ನು ಪೂಜಿಸಿದ ಮನುಷ್ಯನು ನಿಶ್ಚಯವಾಗಿಯೂ ಈಶ್ವರ ಸಾನ್ನಿಧ್ಯವನ್ನು ಹೊಂದುವನು. ಬಿಲ್ವವೃಕ್ಷದ ಕೆಳಗೆ ಕೂತು ಜಪಿಸಿದ ಮಂತ್ರಗಳು ಸಿದ್ಧಿಪ್ರದಗಳಾಗುವುವು. ಅವುಗಳ ಮಾಹಾತ್ಮ್ಯವನ್ನು ಶಂಕರನೊಬ್ಬನೇ ತಿಳಿದಿರುವನು. ||೬೪-೬೫||

ಬಿಲ್ವರೂಪಂ ಸಮಾಸಾದ್ಯ ಶಿವ ಏವ ಸ್ವಯಂ ಪ್ರಭುಃ ।
ಲೋಕಾನಾಮುಪಕಾರಾಯ ವನೇಽಸ್ಮಿನ್ನಧಿತಿಷ್ಠತಿ ॥೬೬॥

ಏತಸ್ಯ ಬಿಲ್ವಮೂಲಸ್ಯಾಪ್ಯಾಲವಾಲಮನುತ್ತಮಂ ।
ಜಲಾಕುಲಂ ಮಹಾದೇವೋ ದೃಷ್ಟ್ವಾ ತುಷ್ಟೋ ಭವಿಷ್ಯತಿ ॥೬೭॥

ಗಂಧಪುಷ್ಪಾದಿಭಿಃ ಸರ್ವೈರುಪಚಾರೈಃ ಪ್ರಯತ್ನತಃ ।
ಯೋ ಬಿಲ್ವಂ ಪೂಜಯೇದ್ಭಕ್ತ್ಯಾ ಸಂತತಿಸ್ತಸ್ಯ ವರ್ಧತೇ ॥೬೮॥

ದೀಪಮಾಲಾಂ ಬಿಲ್ವಮೂಲೇ ಯಃ ಕಲ್ಪಯತಿ ಸಾದರಂ ।
ಸ ತತ್ತ್ವಜ್ಞಾನಸಂಪನ್ನೋ ಮಹೇಶಾಂತರ್ಗತೋ ಭವೇತ್ ॥೬೯॥

ಪ್ರದಕ್ಷಿಣನಮಸ್ಕಾರಾನ್ ಬಿಲ್ವಮೂಲೇ ಪ್ರಯತ್ನತಃ ।
ತೇ ಪಾಪಪರ್ವತಾನಾಂ ಚ ನಾಶಕಾಸ್ಸ್ಯುರ್ನ ಸಂಶಯಃ ॥೭೦॥

ಬಲಹೀನವಾದ ಮಂತ್ರವಾದರೂ ಸರಿಯೇ, ಅದನ್ನು ಬಿಲ್ವವೃಕ್ಷದ ಮೂಲ ಭಾಗದಲ್ಲಿ ಕೂತು ಜಪಿಸಿದರೆ ಅದು ಶಕ್ತಿಪ್ರದವಾಗುವುದು. ಇಷ್ಟಾರ್ಥವನ್ನು ಈಶ್ವರನೇ ಸಂತುಷ್ಟನಾಗಿ ಕೊಡಬಲ್ಲನು. ನಿಗ್ರಹಾನುಗ್ರಹಶಕ್ತನಾದ ಈಶ್ವರನು ಬಿಲ್ವವೃಕ್ಷವನ್ನು ಆಶ್ರಯಿಸಿ; ತನ್ಮೂಲಕ ಜನೋದ್ಧಾರ ಮಾಡುತ್ತಾ ಈ ಕಾಡಿನಲ್ಲಿ ನೆಲಸಿರುತ್ತಾನೆ. ॥೬೫-೬೬॥

ಈ ಬಿಲ್ವವೃಕ್ಷದ ಪಾತಿಯಲ್ಲಿ ನೀರು ತುಂಬಿರುವುದನ್ನು ನೋಡಿ ಈಶ್ವರನು ಸಂತೋಷಪಡುತ್ತಾನೆ. ಪುಷ್ಪಗಳಿಂದಲೂ, ಗಂಧಗಳಿಂದಲೂ ಕೂಡಿದ ಷೋಡಶೋಪಚಾರಗಳಿಂದ ಯಾವನು ಬಿಲ್ವವೃಕ್ಷವನ್ನು ಪೂಜೆಮಾಡುತ್ತಾನೋ, ಅವನಿಗೆ ಸಂತಾನಾಭಿವೃದ್ಧಿಯುಂಟಾಗುತ್ತದೆ. ॥೬೭-೬೮॥

ಬಿಲ್ವವೃಕ್ಷದ ಕೆಳಗೆ ದೀಪೋತ್ಸವ ಮಾಡಿಸಿದವನಿಗೆ ತತ್ತ್ವಜ್ಞಾನವುಂಟಾಗುತ್ತದೆ. ಅವನು ಮಹೇಶ್ವರನೊಂದಿಗೆ ಐಕ್ಯವನ್ನು ಹೊಂದುವನು. ಬಿಲ್ವಮೂಲದಲ್ಲಿ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿದವರು ಮಹಾಮಹಾಪಾಪಗಳನ್ನೂ ಹೋಗಲಾಡಿಸುವ ಶಕ್ತಿವಂತರಾಗುವರು. ಇದರಲ್ಲಿ ಸಂಶಯ ಲೇಶವೂ ಇಲ್ಲ. ॥೬೯-೭೦॥

ನಮಸ್ಕಾರ್ಯತ್ವಬುದ್ಧ್ಯಾ ಯಃ ಪ್ರಣತೋ ದಂಡವದ್ಭುವಿ ।
ತಸ್ಮಾತ್ ಪತಂತಿ ಪಾಪಾನಿ ನೋತ್ತಿಷ್ಠಂತಿ ಕದಾಚನ ॥೭೧॥

ಬಿಲ್ವಶಾಖಾಂ ಸಮಾದಾಯ ಹಸ್ತೇನ ನವಪಲ್ಲವಂ ।
ಗೃಹೀತ್ವಾ ಪೂಜಯೇದ್ಬಿಲ್ವಂ ತೇನ ಪಾಪೈಃ ಪ್ರಮುಚ್ಯತೇ ॥೭೨॥

ಬಿಲ್ವಮೂಲೇ ಶಿವರತಂ ಭೋಜಯೇದ್ಯಸ್ತು ಭಕ್ತಿತಃ ।
ಏಕಂ ವಾ ಕೋಟಿಗುಣಿತಂ ತಸ್ಯ ಪುಣ್ಯಂ ಪ್ರಜಾಯತೇ ॥೭೩॥

ಬಿಲ್ವಮೂಲೇ ಕ್ಷೀರಯುಕ್ತಮನ್ನಮಾಜ್ಯೇನ ಸಂಯುತಂ ।
ಯೋ ದದ್ಯಾಚ್ಛಿವಭಕ್ತಾಯ ಸ ದರಿದ್ರೋ ನ ಜಾಯತೇ ॥೭೪॥

ಪುರಾ ಕಶ್ಚಿದಭೂದ್ವಿಪ್ರೋ ವಿಂಧ್ಯಮೂಲಮುಪಾಶ್ರಿತಃ ।
ಸ ದರಿದ್ರಃ ಕುಂಟುಂಬೀ ಚ ಪುತ್ರಪೌತ್ರಾದಿಸಂಯುತಃ ॥೭೫॥

ಪ್ರತಿದ್ವಾರಮಟತ್ಯೇವ ಕಣಾರ್ಥಂ ಪುತ್ರಸಂಯುತಃ ।
ಕಣಾನ್ ಕಥಂ ಚಿತ್ಸಂಪ್ರಾಪ್ಯ ತೈಃ ಸಂಜೀವತಿ ಭೂಪತೇ ॥೭೬॥

ಈ ಬಿಲ್ವವು ನಮಸ್ಕಾರಕ್ಕೆ ಅರ್ಹವಾಗಿದೆ ಎಂಬ ತಿಳಿವಳಿಕೆಯಿಂದ ಅದಕ್ಕೆ ದಂಡಪ್ರಣಾಮವನ್ನು ಮಾಡಿದವನ ಪಾಪಗಳು ನಾಶವಾಗುವುವು. ಅವು ಪುನಃ ಮೇಲಕ್ಕೆ ಏಳಲಾರವು. ಹೊಸ ಎಳೆಚಿಗುರಿರುವ ಬಿಲ್ವಶಾಖೆಯನ್ನು ಕೈಯಿಂದ ಹಿಡಿದು, ಅದನ್ನು ಪೂಜಿಸಿದವನ ಪಾಪಗಳು ಸಂಪೂರ್ಣವಾಗಿ ನಾಶವಾಗುವುವು. ||೭೧-೭೨||

ಭಕ್ತಿಯಿಂದ ಶೈವನನ್ನು ಬಿಲ್ವವೃಕ್ಷದ ಕೆಳಗೆ ಕೂರಿಸಿ, ಊಟಮಾಡಿಸಿದರೆ, ಅದರಿಂದ ಉತ್ಪನ್ನವಾದ ಪುಣ್ಯವು ಕೋಟಿಪಾಲು ಫಲವನ್ನು ಕೊಡುತ್ತದೆ. ಬಿಲ್ವವೃಕ್ಷದ ಮೂಲದಲ್ಲಿ ಪಾಯಸವನ್ನು ಯಾವನು ಈಶಭಕ್ತನಿಗೆ ದಾನಮಾಡುತ್ತಾನೋ ಅವನು ದರಿದ್ರನಾಗುವುದಿಲ್ಲ. ಯಾವ ಜನ್ಮದಲ್ಲಿಯೂ ಬಡವನಾಗಿ ಹುಟ್ಟುವುದೇ ಇಲ್ಲ. ||೭೩-೭೪||

ಪೂರ್ವಕಾಲದಲ್ಲಿ ವಿಂಧ್ಯಾರಣ್ಯದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನು ತುಂಬಾ ಬಡವನಾಗಿದ್ದನು. ಮತ್ತು ದೊಡ್ಡ ಕುಟುಂಬಿಯೂ ಆಗಿದ್ದನು. ಪ್ರತಿದಿನವೂ ಮಕ್ಕಳೊಡನೆ ಮನೆಮನೆಗೂ ಭಿಕ್ಷೆಕ್ಕಾಗಿ (ಕಾಳಿಗಾಗಿ) ಅಲೆಯುತ್ತಿದ್ದನು.

ತತಃ ಪರಂ ಮುನಿವರಂ ಮಾರ್ಕಂಡೇಯಂ ದದರ್ಶ ಸಃ ।
ಕಣಾರ್ಥಂ ಸ ಗೃಹದ್ವಾರಾಣ್ಯಟನ್ನೇವ ಸಪುತ್ರಕಃ ॥೭೭॥

ತತಸ್ತಂ ಮುನಿಶಾರ್ದೂಲಂ ಪ್ರಣತೋ ದಂಡವದ್ಭುವಿ ।
ಪ್ರಾಹ ದುಃಖಸಮಾಕ್ರಾಂತಃ ಪಾಹಿ ಪಾಹೀತಿ ಸಂವದನ್ ॥೭೮॥

॥ ವಿಪ್ರ ಉವಾಚ ॥

ವೃದ್ಧೋಽಹಂ ಪುತ್ರಪೌತ್ರಾದ್ಯೈರ್ವೃತಃ ಪತ್ನ್ಯಾಪಿ ವೃದ್ಧಯಾ ।
ನ ಭಕ್ಷ್ಯಂ ಪ್ರಾಪ್ಯತೇ ವಿದ್ವನ್ ಶರೀರಾಣಿ ಕೃಶಾನ್ಯಪಿ ॥೭೯॥

ಧನಪೂರ್ಣೇಷು ದೇಶೇಷು ಧಾನ್ಯಪೂರ್ಣೇಷು ಸರ್ವದಾ ।
ಸ್ಥೀಯತೇ ತೈರ್ನ ದೀಯಂತೇ ದ್ವಿತ್ರಾ ಅಪಿ ಕಣಾಃ ಪರಂ ॥೮೦॥

ದಾತುಮಭ್ಯುದ್ಯತಾಃ ಪೂರ್ವಂ ವಿರತಾಸ್ತೇ ಭವಂತ್ಯಪಿ ।
ಅನ್ಯೇಭ್ಯೋ ದೀಯತೇ ಧಾನ್ಯಂ ಮಹ್ಯಮೇತೈರ್ನ ದೀಯತೇ ॥೮೧॥

ಹೇಗೋ ಕಷ್ಟದಿಂದ ಸಂಪಾದಿಸಿದ ಧಾನ್ಯದಿಂದ ಜೀವನವನ್ನು ಸಾಗಿಸುತ್ತಿದ್ದನು. ॥೭೫-೭೬॥

ಹೀಗೆಯೇ ಮಕ್ಕಳೊಂದಿಗೆ ಭಿಕ್ಷೆಗಾಗಿ ಮನೆಮನೆಯನ್ನು ಸುತ್ತುತ್ತಿರುವ ಆತನು ಒಂದುಸಲ ಮಾರ್ಕಂಡೇಯ ಋಷಿಗಳನ್ನು ನೋಡಿದನು. ಆ ಋಷಿ ಶ್ರೇಷ್ಠನನ್ನು ಕಂಡು ದಂಡಾಕಾರವಾಗಿ ನಮಸ್ಕರಿಸಿದನು. ಬಳಿಕ ಅತ್ಯಂತ ದುಃಖದಿಂದ ನನ್ನನ್ನು ಕಾಪಾಡು ಎಂದು ಹೇಳುತ್ತಾ ಪಾದಕ್ಕೆರಗಿದನು. ॥೭೭-೭೮॥

"ನಾನು ಮುದುಕನಾಗಿರುವೆನು, ಮುದುಕಿಯಾದ ಹೆಂಡತಿ ಮತ್ತು ಮಕ್ಕಳಿಂದ ಕೂಡಿದ್ದೇನೆ. ನನಗೆ ಆಹಾರವು ಸಿಕ್ಕುತ್ತಿಲ್ಲ. ನಮ್ಮ ದೇಹಗಳೆಲ್ಲಾ ತೆಳ್ಳಗಾಗಿ ಹೋಗಿವೆ. ಧನಧಾನ್ಯಗಳು ತುಂಬಿದ ದೇಶಗಳಲ್ಲಿ ನಾನು ವಾಸಮಾಡುತ್ತೇನೆ. ಆದರೂ ಯಾರೂ ನನಗೆ ಎರಡು ಮೂರು ಧಾನ್ಯದ ಕಾಳನ್ನೂ ಸಹ ಹೆಚ್ಚಾಗಿ ಕೊಡುವುದಿಲ್ಲ. ॥೭೯-೮೦॥

ಮೊದಲು ಕೊಡುವುದಕ್ಕಾಗಿ ಹವಣಿಸಿದವರು ಒಡನೆಯೇ ಸುಮ್ಮನಾಗುವರು. ಬೇರೆಯವರಿಗೆ ಧಾನ್ಯವನ್ನು ಭಿಕ್ಷೆ ಹಾಕುತ್ತಾರೆ, ನನಗೆ ಕೊಡುವುದಿಲ್ಲ. ಒಂದು

ಕದಾಚಿತ್ಪ್ರಾಪ್ತಮಪ್ಯನ್ನಂ ಕರ್ದಮೇಷು ಪತತ್ಯಧಃ ।
ಕದಾಚಿನ್ನೀಯತೇ ಚೋರೈಃ ಪಶ್ಯತ್ಯೇವ ಮಯಿ ಸ್ಫುಟಂ ॥೪೨॥

ಆಹಾರೇಣ ವಿನಾ ಸರ್ವೇ ಕ್ರಂದಂತ್ಯೇತೇಽತ್ರ ಬಾಲಕಾಃ ।
ಅತಃ ಪರಂ ಮಯಾ ವಿದ್ವನ್ ಕಿಂ ಕರ್ತವ್ಯಮಥಾಧುನಾ ॥೪೩॥

ಯುಗಪದ್ಯದಿ ಸರ್ವೇಷಾಮೇತೇಷಾಂ ಮರಣಂ ಯದಿ ।
ತಥಾಪಿ ಸುಖಮೇವೇತಿ ಮನ್ಯೇ ಮುನಿಗಣೋತ್ತಮ ॥೪೪॥

ಇತಿ ತದ್ವಚನಂ ಶ್ರುತ್ವಾ ಮುನಿರ್ವಿಸ್ಮಯಮಾನಸಃ ।
ವಿಚಿಂತ್ಯ ಹೃದಿ ತದ್ಬೀಜಂ ತತಃ ಪರಮುವಾಚ ತಂ ॥೪೫॥

॥ ಮಾರ್ಕಂಡೇಯ ಉವಾಚ ॥

ಜನ್ಮಾಂತರೇ ತ್ವಯಾ ವಿಪ್ರ ಶೈವಾಯ ಪ್ರೀತಿಪೂರ್ವಕಂ ।
ನ ದತ್ತಮನ್ನಂ ಬಿಲ್ವಸ್ಯ ಮೂಲೇ ದಾರಿದ್ರ್ಯನಾಶಕೇ ॥೪೬॥

ಶಾಂಭವಂ ರೂಪಮಾಸ್ಥಾಯ ಸಾಕ್ಷಾದನ್ನಪತಿಃ ಸ್ವಯಂ ।
ಬಿಲ್ವಮೂಲೇ ತು ಭುಕ್ತ್ವಾನ್ನಂ ಕರೋತ್ಯನ್ನಪತಿಂ ನರಂ ॥೪೭॥

ವೇಳೆ ಕಷ್ಟಪಟ್ಟು ಅನ್ನ ಸಿಕ್ಕಿದರೂ ಅದು ಅಕಸ್ಮಾತ್ತಾಗಿ ಜಾರಿ ಕೆಸರಿನಲ್ಲಿ ಬಿದ್ದು ಹೋಗುವುದು. ಒಂದೊಂದುವೇಳೆ ನಾನು ನೋಡುತ್ತಿರುವಾಗಲೇ ಕಳ್ಳರು ಬಂದು ನನ್ನ ಅನ್ನವನ್ನು ಕಿತ್ತುಕೊಂಡು ಹೋಗುವರು. ॥೪೧-೪೨॥

ಅನ್ನವಿಲ್ಲದೇ ಈ ಎಲ್ಲಾ ಚಿಕ್ಕಮಕ್ಕಳೂ ಅಳುತ್ತವೆ. ಎಲೈ ಮುನಿಶ್ರೇಷ್ಠನೇ, ನಾನೇನು ಮಾಡಲಿ? ಈ ಎಲ್ಲರಿಗೂ ಒಟ್ಟಿಗೇ ಸಾವು ಬಂದರೆ ಅದು ಸುಖವೆಂದು ತಿಳಿಯುತ್ತೇನೆ" ಎಂದು ಆ ಬ್ರಾಹ್ಮಣನು ಮಾರ್ಕಂಡೇಯ ಋಷಿಗಳೊಂದಿಗೆ ಹೇಳಿ ಗೋಳಿಟ್ಟನು. ॥೪೩-೪೪॥

ಹೀಗೆ ಆತನ ಮಾತನ್ನು ಕೇಳಿ ಮಾರ್ಕಂಡೇಯನು ತುಂಬಾ ಆಶ್ಚರ್ಯಪಟ್ಟು ಮನಸ್ಸಿನಲ್ಲಿ ಅದಕ್ಕೆ ಕಾರಣವೇನೆಂಬುದನ್ನು ಯೋಚಿಸಿ ತಿಳಿದು ಆತನನ್ನು ಕುರಿತು ಹೀಗೆಂದನು. ॥೪೫॥

ಎಲೈ ಬ್ರಾಹ್ಮಣನೇ, ಪೂರ್ವಜನ್ಮದಲ್ಲಿ ನೀನು ದಾರಿದ್ರ್ಯನಾಶಕವಾದ ಬಿಲ್ವವೃಕ್ಷದ ಕೆಳಗಡೆ ದೈವಭಕ್ತನಿಗೆ ಅನ್ನದಾನ ಮಾಡಲಿಲ್ಲ. ಸಾಕ್ಷಾತ್

ನ ದತ್ತಂ ಬಿಲ್ವಮೂಲೇಷು ಶಾಂಭವಾಯಾನ್ನಮಾದರಾತ್ ।
ಅತಸ್ತವೇದೃಶಂ ದುಃಖಮನ್ನಾಭಾವೇನ ಜಾಯತೇ ॥೮೮॥

ಅಧುನಾ ವಾ ಬಿಲ್ವಮೂಲೇ ಶಾಂಭವಾಯ ಪ್ರಯತ್ನತಃ ।
ಪ್ರಯಚ್ಛಾನ್ನಮಿದಂ ಭಕ್ತ್ಯಾ ತೇನಾನ್ನಂ ಲಭ್ಯತೇ ತ್ವಯಾ ॥೮೯॥

ತದನ್ನಸ್ಯ ಪ್ರದಾನೇನ ಸರ್ವದಾಪ್ಯನ್ನರಾಶಿಭಿಃ ।
ತೂರ್ಣಂ ಪೂರ್ಣಂ ಭವತ್ಯೇವ ಮಂದಿರಂ ತವ ಸರ್ವದಾ ॥೯೦॥

ವಿಶ್ವಸ್ಯ ವಚನಂ ವಿಪ್ರ ತ್ವರಯಾ ಬಿಲ್ವಮುತ್ತಮಂ ।
ಪಶ್ಯ ಪ್ರಯಾಹಿ ತನ್ಮೂಲೇ ಪೂಜಯಸ್ವ ಸದಾಶಿವಂ ॥೯೧॥

ತತ್ರೈವ ಶಾಂಭವಾಯಾನ್ನಂ ದೇಹಿ ಭಕ್ತಿಪುರಃಸರಂ ।
ಅತಃ ಪರಂ ನ ದಾರಿದ್ರ್ಯಂ ನ ದುಃಖಮಪಿ ಜಾಯತೇ ॥೯೨॥

ಅನ್ನಪತಿಯಾದ ಈಶ್ವರನು ಬಿಲ್ವವೃಕ್ಷದ ಬುಡದಲ್ಲಿ ರೂಪಾಂತರದಿಂದ ಊಟಮಾಡಿ ಮನುಷ್ಯನನ್ನು ಸುಖಿಯನ್ನಾಗಿಯೂ ಅನ್ನದಾತೃವನ್ನಾಗಿಯೂ ಮಾಡುತ್ತಾನೆ. ||೮೬-೮೭||

ಬಿಲ್ವಮೂಲದಲ್ಲಿ ಈಶ್ವರ ಭಕ್ತನಿಗೆ ಆದರದಿಂದ ಅನ್ನ ಇಡದೇ ಇಂತಹ ತೊಂದರೆಯನ್ನು ನೀನು ಅನುಭವಿಸಬೇಕಾಗಿದೆ. ಈಗಲಾದರೂ ಕಷ್ಟಪಟ್ಟು ಬಿಲ್ವಮೂಲದಲ್ಲಿ ಶೈವನಿಗೆ ಊಟಮಾಡಿಸಿದರೆ ನಿನಗೆ ತೃಪ್ತಿಯಾಗುವಷ್ಟು ಅನ್ನವು ಲಭಿಸುತ್ತದೆ. ||೮೮-೮೯||

ಮತ್ತು ಬಿಲ್ವವೃಕ್ಷದ ಕೆಳಗೆ ಶೈವನಿಗೆ ಊಟಮಾಡಿಸಿದರೆ ಯಾವಾಗಲೂ ನಿನ್ನ ಮನೆಯು ಅನ್ನರಾಶಿಗಳಿಂದ ತುಂಬಿರುತ್ತದೆ. ವಿಶ್ವಋಷಿಗಳೂ ಹೀಗೆಯೇ ಅಭಿಪ್ರಾಯಪಡುತ್ತಾರೆ. ಜಾಗ್ರತೆ ನೀನು ಬಿಲ್ವವೃಕ್ಷಸಮೀಪಕ್ಕೆ ಹೋಗು. ಅಲ್ಲಿ ಶಂಕರನನ್ನು ಪೂಜಿಸು. ||೯೦-೯೧||

ಆ ವೃಕ್ಷಮೂಲದಲ್ಲಿಯೇ, ಭಕ್ತಿಯಿಂದ ಶೈವನಿಗೆ ಅನ್ನವನ್ನು ದಾನಮಾಡು. ಬಳಿಕ ನಿನಗೆ ಬಡತನದ ದುಃಖವೆಂದಿಗೂ ಆಗಲಾರದೆಂದು ಆ ಮಾರ್ಕಂಡೇಯ ಋಷಿಗಳು ಹೇಳಿದರು. ||೯೨||

ಇತಿ ತದ್ವಚನಂ ಶ್ರುತ್ವಾ ನತ್ವಾ ತಂ ಮುನಿಪುಂಗವಂ ।
ತದೇವ ಧಾನ್ಯಮಾದಾಯ ಯಯೌ ಬಿಲ್ವವನಂ ಪ್ರತಿ ॥೯೩॥

ತತ್ರ ಬಿಲ್ವತರೋರ್ಮೂಲೇ ದೃಷ್ಟಃ ಶಾಂಭವಪುಂಗವಃ ।
ಶಿವಲಿಂಗಾರ್ಚನರತೋ ಭಸ್ಮೋದ್ಧೂಲಿತವಿಗ್ರಹಃ ॥೯೪॥

ಉಪವಾಸೈಃ ಕೃಶತನುರ್ವಾಯುಮಾತ್ರಾಶನಃ ಸದಾ ।
ತಂ ದೃಷ್ಟ್ವಾ ಪ್ರಣತೋ ವಿಪ್ರಃ ಕೃತಾರ್ಥೋಽಹಮಿತಿ ಸ್ಮರನ್ ॥೯೫॥

ತತಃ ಸ್ವೋಪಾರ್ಜಿತಂ ಧಾನ್ಯಂ ತುಷನಿರ್ಮುಕ್ತಮಾದರಾತ್ ।
ಕೃತ್ವಾ ಪಾಕೋದ್ಯತೋ ಜಾತಃ ಸ್ನಾತ್ವಾ ಕುಂಡೇ ಹರಾಂತಿಕೇ॥೯೬॥

ಬಿಲ್ವಚ್ಛಾಯಾ ಸಮಾಕ್ರಾಂತೇ ಬಿಲ್ವಪತ್ರಸಮಾವೃತೇ ।
ತತಃ ಸಿದ್ಧಂ ಚಕಾರಾನ್ನಂ ಮೃದುಲಂ ನವಮುತ್ತಮಂ ॥೯೭॥

ತದನ್ನಂ ಸಮುಪಾದಾಯ ಬಿಲ್ವಮೂಲೇ ಶಿವಾಂತಿಕೇ ।
ನೀತ್ವಾ ಶಿವಾಯ ನೈವೇದ್ಯಂ ದದೌ ಭಕ್ತಿಪುರಃಸರಂ ॥೯೮॥

ಹೀಗೆ ಮಾರ್ಕಂಡೇಯ ಋಷಿಶ್ರೇಷ್ಠರ ಮಾತನ್ನು ಕೇಳಿ ಆ ಬ್ರಾಹ್ಮಣನು ಅವರಿಗೆ ವಂದಿಸಿ, ಅವನಲ್ಲಿರುವ ಧಾನ್ಯವನ್ನು ತೆಗೆದುಕೊಂಡು ಬಿಲ್ವವನದ ಕಡೆ ಹೊರಟನು. ಅಲ್ಲಿ ಬಿಲ್ವವೃಕ್ಷದ ಕೆಳಗೆ ಒಬ್ಬ ಶಿವಪೂಜಕನಾದ ಭಕ್ತನನ್ನು ಕಂಡನು. ಆತನು ಲಿಂಗಾರ್ಚನೆಯನ್ನು ಭಕ್ತಿಯಿಂದ ಮಾಡುತ್ತಿದ್ದನು. ಮೈ ತುಂಬ ಭಸ್ಮವನ್ನು ಧರಿಸಿದ್ದನು. ॥೯೩-೯೪॥

ಆ ಶೈವನು ಉಪವಾಸವ್ರತದಿಂದ ತುಂಬಾ ಕೃಶನಾಗಿದ್ದನು. ಗಾಳಿಯು ಮಾತ್ರ ಅವನಿಗೆ ಆಹಾರವಾಗಿತ್ತು. ಅಂತಹ ಶಿವಭಕ್ತನನ್ನು ನೋಡಿದ ಆ ಬ್ರಾಹ್ಮಣನು ಆತನಿಗೆ ನಮಸ್ಕಾರಮಾಡಿ ಇಂದು ನಾನು ಧನ್ಯನಾದೆನೆಂದು ಭಾವಿಸಿದನು. ಬಳಿಕ ತಾನು ಸಂಪಾದಿಸಿದ್ದ ಧಾನ್ಯವನ್ನು ಕೇರಿ, ಹೊಟ್ಟನ್ನು ತೆಗೆದು ಪಾಕಮಾಡಲು ಆರಂಭಿಸಿದನು. ಹಾಗೆಯೇ ಮೊದಲು ಸಮೀಪದಲ್ಲಿದ್ದ ಒಂದು ಕೊಳದಲ್ಲಿ ಸ್ನಾನಮಾಡಿದನು. ॥೯೫-೯೬॥

ಆ ಪವಿತ್ರಸರೋವರವು ಬಿಲ್ವವೃಕ್ಷದ ನೆರಳಿನಿಂದ ಆಚ್ಛಾದಿತವಾಗಿತ್ತು. ಬಿಲ್ವಪತ್ರೆಗಳಿಂದ ತುಂಬಿತ್ತು. ಅಲ್ಲಿ ಆ ಬ್ರಾಹ್ಮಣನು ಸ್ನಾನಮಾಡಿದನು. ಬಳಿಕ ಆ

ತದನ್ನಂ ಸಮುಭೂತ್ವೃದ್ಧಿಂ ದೃಷ್ಟ್ವಾ ತದ್ಗಿರಿಸನ್ನಿಭಂ ।
ದೃಷ್ಟ್ವಾ ಸಂತೋಷಮಾಪನ್ನಃ ಪುತ್ರಪೌತ್ರಸಮನ್ವಿತಃ ॥೯೯॥

ತತಃ ಪರಂ ಸ ಶೈವೋಽಪಿ ತದನ್ನಂ ಗಿರಿಸನ್ನಿಭಂ ।
ವಿಲೋಕ್ಯ ಹರ್ಷಸಂಪೂರ್ಣಃ ಕ್ಷುಧಿತಸ್ತಮುವಾಚ ಹ ॥೧೦೦॥

॥ ಶೈವ ಉವಾಚ ॥

ಅಹೋ ಬ್ರಾಹ್ಮಣ ಧನ್ಯೋಽಸಿ ಶಿವಾಯಾನ್ನಮಿದಂ ಶುಭಂ ।
ದತ್ತಮಲ್ಪಪ್ರವೃದ್ಧಂ ಹಿ ಭುಕ್ತಶೇಷಂ ಶಿವೇನ ತು ॥೧೦೧॥

ತವ ಭಾಗ್ಯಸ್ಯ ನಾಂತೋಽಸ್ತಿ ದಾರಿದ್ರ್ಯಂ ನಷ್ಟಮೇವ ತೇ ।
ಅತಃ ಪರಂ ಶಾಂಭವೇಭ್ಯೋ ದೇಯಮನ್ನಮಿದಂ ಶುಭಂ ॥೧೦೨॥

ಅಸ್ಮಿನ್ ವನೇ ಬಿಲ್ವವೃಕ್ಷಾಃ ಕೋಟಿಶಃ ಸಂತಿ ಶಾಂಭವಾಃ ।
ತನ್ಮೂಲೇಷು ಶಿವಾಸಕ್ತಾಃ ಶಿವಲಿಂಗಾರ್ಚನಪ್ರಿಯಾಃ ॥೧೦೩॥

ಧಾನ್ಯದಿಂದ ಮೆತ್ತಗೆ ಹೊಸ ಅನ್ನವನ್ನು ಮಾಡಿ, ಅದನ್ನು ಬಿಲ್ವವೃಕ್ಷದ ಬುಡಕ್ಕೆ ತೆಗೆದುಕೊಂಡು ಹೋದನು. ಮತ್ತು ಅಲ್ಲಿ ಅದನ್ನು ಈಶ್ವರನಿಗೆ ನಿವೇದನಮಾಡಿ ಅದನ್ನೇ ಶೈವನಿಗೆ ದಾನಮಾಡಿದನು. ||೯೭-೯೮||

ಒಡನೆಯೇ ಆ ಅನ್ನವು ಪರ್ವತರಾಶಿಯ ಹಾಗೆ ವೃದ್ಧಿಯಾಗಿ ರಾಶಿರಾಶಿಯಾಗಿ ಬಿದ್ದಿತು. ಆ ಬ್ರಾಹ್ಮಣನು ಮಕ್ಕಳು ಮೊಮ್ಮಕ್ಕಳೊಡನೆ ಆ ರಾಶಿಯನ್ನು ನೋಡಿ ಆಶ್ಚರ್ಯಪಟ್ಟನು. ಬಳಿಕ ಶೈವನೂ ಆ ಅನ್ನರಾಶಿಯನ್ನು ನೋಡಿ ಸಂತೋಷ ಪಟ್ಟು, ಹಸಿದವನಾಗಿ ಹೀಗೆಂದನು. ||೯೯-೧೦೦||

ಆಹಾ! ಎಲೈ ಬ್ರಾಹ್ಮಣನೇ, ನೀನು ಧನ್ಯನು. ಈಶ್ವರನಿಗೆ ಕೊಟ್ಟಿರುವ ಈ ಸ್ವಲ್ಪ ಅನ್ನವು ಹೇಗೆ ಅಭಿವೃದ್ಧವಾಗಿದೆ? ಇದು ಶಿವಭುಕ್ತವಾಗಿರುವುದು. ನಿನ್ನ ಭಾಗ್ಯಕ್ಕೆ ಕೊನೆಯಿಲ್ಲ. ನಿನ್ನ ಬಡತನವು ನಾಶವಾಯಿತು. ಇನ್ನು ಮುಂದೆ ಈ ಅನ್ನವನ್ನು ಶಿವಭಕ್ತರಿಗೆ ದಾನಮಾಡು. ||೧೦೧-೧೦೨||

ಈ ಕಾಡಿನಲ್ಲಿ ಕೋಟಿಗಟ್ಟಲೆ ಬಿಲ್ವವೃಕ್ಷಗಳಿವೆ. ಅವೆಲ್ಲವೂ ಈಶ್ವರನಿಗೆ ಪ್ರಿಯವಾದವುಗಳು. ಅವುಗಳ ತಳದಲ್ಲಿ ಶೈವರನೇಕರು ಶಿವಲಿಂಗಪೂಜೆಯನ್ನು

ತಾನ್ ಪ್ರಣಮ್ಯ ಮುಹುರ್ಭಕ್ತ್ಯಾ ತೇಭ್ಯೋಽನ್ನಮಿದಮುತ್ತಮಂ ।
ಪ್ರಯಚ್ಛ ತೇನ ಸಂತುಷ್ಟೋ ಭವೇದನ್ನಪತಿಃ ಸ್ವಯಂ ॥೧೦೪॥

ಯೇನಾನ್ನಪತಿಭಕ್ತಾಯ ದತ್ತಮನ್ನಂ ಪ್ರಯತ್ನತಃ ।
ತೇನಾನ್ನಂ ಪ್ರಾಪ್ಯತೇ ದಿವ್ಯಂ ನಾನಾವಿಧಮನುಕ್ಷಣಂ ॥೧೦೫॥

ಇತ್ಯೇತದ್ವಚನಂ ಶ್ರುತ್ವಾ ನತ್ವಾ ಶಾಂಭವಪುಂಗವಾನ್ ।
ಚಕಾರ ಪ್ರಾರ್ಥನಂ ಭಕ್ತ್ಯಾ ತದನ್ನಂ ಗ್ರಹಣಾಯ ಸಃ ॥೧೦೬॥

ತತಸ್ತೇ ಶಿವನೈವೇದ್ಯಮಿದಮತ್ಯುತ್ತಮಂ ವನಂ ।
ಇತಿ ಭಕ್ತ್ಯಾ ಪ್ರಹೃಷ್ಟಾಸ್ತೇ ತೇನ ತುಷ್ಟಃ ಸದಾಶಿವಃ ॥೧೦೭॥

ತತಃ ಸ ಭುಕ್ತ್ವಾ ವಿಪ್ರೋಽಪಿ ಸಪುತ್ರೋ ಭಾರ್ಯಯಾ ಸಹ ।
ಪೌತ್ರೈಶ್ಚ ಪರಮಾನಂದಂ ಪ್ರಾಪಾಕಂಠಾನ್ನಸಂಗಮಾತ್ ॥೧೦೮॥

ಮಾಡುತ್ತಾ ಇರುವರು. ಅವರಿಗೆ ತಲೆಬಾಗಿ ಈ ಅನ್ನವನ್ನು ಕೊಡು. ಅದರಿಂದ ಅನ್ನಪತಿಯಾದ ಈಶ್ವರನು ತೃಪ್ತನಾಗುತ್ತಾನೆ. ||೧೦೩-೧೦೪||

ಈಶ್ವರಭಕ್ತನಿಗೆ ದಾನಮಾಡಿದ ಅನ್ನದಿಂದ ಮನುಷ್ಯನು ಪ್ರತಿಕ್ಷಣದಲ್ಲಿಯೂ ದಿವ್ಯವಾದ ನಾನಾವಿಧ ಅನ್ನವನ್ನು ಹೊಂದುತ್ತಾನೆ. ಹೀಗೆಂದ ಆ ಶೈವನ ಮಾತನ್ನು ಕೇಳಿ ಅವನಿಗೆ ನಮಸ್ಕಾರಮಾಡಿ, ಬಳಿಕ ಆ ಬ್ರಾಹ್ಮಣನು ಅಲ್ಲಿದ್ದವರೆಲ್ಲರಿಗೂ ಅನ್ನವನ್ನು ಕೊಟ್ಟು ಭಕ್ತಿಪುರಸ್ಸರವಾಗಿ ಪ್ರಾರ್ಥನೆಮಾಡಿದನು. ||೧೦೫-೧೦೬||

ಬಳಿಕ ಆ ಶೈವರೆಲ್ಲಾ ಇದು ಬಳ್ಳಿಯ ಶಿವನೈವೇದ್ಯವೆಂದು ಸ್ವೀಕರಿಸಿ, ಈ ವನವು ಬಹಳ ಪವಿತ್ರವಾದದ್ದು ಎಂದರು. ಸಂತೋಷಪಟ್ಟ ಆ ಶೈವರಿಂದ ಶಿವನೂ ತೃಪ್ತಿಹೊಂದಿದನು. ಅನಂತರ ಆ ಬ್ರಾಹ್ಮಣನೂ ಮಕ್ಕಳು ಮೊಮ್ಮಕ್ಕಳಿಂದ ಕೂಡಿ ಹೆಂಡತಿಯೊಂದಿಗೆ ಊಟಮಾಡಿ ಬಹಳ ಸಂತೋಷಪಟ್ಟನು. ||೧೦೭-೧೦೮||

ಬಳಿಕ ಆ ಬ್ರಾಹ್ಮಣನು ತನ್ನ ಮನೆಗೆ ಹೋದನು. ಆಗ ತನ್ನ ಮನೆಯು ಧಾನ್ಯರಾಶಿಗಳಿಂದ ತುಂಬಿತ್ತು. ಅದನ್ನು ನೋಡಿ ಇದು ಈಶ್ವರಮಹಿಮೆ ಇರಬಹುದು

ತತೋ ಗೃಹಂ ಯಯೌ ಸೋಪಿ ಸ್ವಕೀಯಂ ಧಾನ್ಯಸಂಯುತಂ ।
ದೃಷ್ಟ್ವಾ ಪ್ರಹೃಷ್ಟೋ ಮಹಿಮಾ ಕೋಯಮದ್ಭುತ ಇತ್ಯಪಿ॥೧೦೯॥

ತತಃ ಪರಂ ವಿಶಾಲಾನಿ ಚಕಾರ ಸದನಾನಿ ಸಃ ।
ಅನ್ನರಾಶಿಸಮಾಕ್ರಾಂತಾನ್ಯುತ್ತಮಾನಿ ಪ್ರತಿಕ್ಷಣಂ ॥೧೧೦॥

ತೇನ ತದ್ಬಿಲ್ವಮೂಲೇಷು ಭೋಜಯಾಮಾಸ ಶಾಂಭವಾನ್ ।
ದಿವ್ಯೇನಾನ್ನೇನ ವಿಪ್ರೋಸೌ ಕೋಟಿಶೋ ನೃಪಸತ್ತಮ ॥೧೧೧॥

ಅತಃ ಪೂಜಯ ಭೂಪಾಲ ಬಿಲ್ವಮೂಲೇ ಮಹೇಶ್ವರಂ ।
ಪ್ರಯಚ್ಛಾನ್ನಂ ಶಾಂಭವೇಭ್ಯೋ ಪ್ರತ್ಯಹಂ ಪ್ರೀತಿಪೂರ್ವಕಂ॥೧೧೨॥

ಅತಃ ಪರಂ ನ ಹಿಂಸಾಪಿ ವಿಧೇಯಾ ಪಕ್ಷಿಣಾಮಪಿ ।
ಕಾರಯಸ್ವ ಪ್ರಯಾಸೇನ ಸುಂದರಂ ಶಿವಮಂದಿರಂ ॥೧೧೩॥

ಏತಸ್ಮಿನ್ನಂತರೇ ರಮ್ಯೇ ಬಾಣಲಿಂಗಮನುತ್ತಮಂ ।
ಸೋಮೇಶ್ವರಾತ್ಸಮಾನೀಯ ಸ್ಥಾಪನೀಯಂ ಪ್ರಯತ್ನತಃ ॥೧೧೪॥

ದೆಂದು ತರ್ಕಿಸಿ, ಸಂತೋಷಪಟ್ಟು ತನ್ನ ಮನೆಯನ್ನು ವಿಶಾಲವಾಗಿ ಕಟ್ಟಿಸಿದನು. ಅನಂತರ ಆ ಮನೆಯು ಪ್ರತಿಕ್ಷಣದಲ್ಲಿಯೂ ಧಾನ್ಯರಾಶಿಗಳಿಂದ ತುಂಬಿಹೋಗುತ್ತಿತ್ತು. ||೧೦೯-೧೧೦||

ಅದರಿಂದ ಬಿಲ್ವವೃಕ್ಷದ ತಳದಲ್ಲಿ ನಿತ್ಯವೂಶಿವಭಕ್ತರಿಗೆ ಊಟಮಾಡಿಸುತ್ತಿದ್ದನು. ಕೋಟಿಸಂಖ್ಯೆಯ ಶಾಂಭವರನ್ನು ದಿವ್ಯಾನ್ನದಿಂದ ಆ ಬ್ರಾಹ್ಮಣನು ತೃಪ್ತಿಗೊಳಿಸಿದನು. ಎಲೈ! ರಾಜನೇ! ನೀನೂ ಕೂಡ ಬಿಲ್ವಮೂಲದಲ್ಲಿ ಮಹೇಶ್ವರನನ್ನು ಪೂಜಿಸು. ಈಶ್ವರ ಭಕ್ತರಿಗೆ ಪ್ರತಿದಿನವೂ ಪ್ರೀತಿಯಿಂದ ಊಟಮಾಡಿಸು. ||೧೧೧-೧೧೨||

ಇಲ್ಲಿಂದ ಮುಂದೆ ನೀನು ಪಕ್ಷಿಹಿಂಸೆಯನ್ನೂ ಸಹ ಮಾಡಲಾಗದು. ಸ್ವಪ್ರಯತ್ನದಿಂದ ಸುಂದರವಾದ ಶಿವದೇವಸ್ಥಾನವನ್ನು ಕಟ್ಟಿಸು. ಅದರ ಮಧ್ಯೆ ಸೋಮೇಶ್ವರಕ್ಷೇತ್ರದಿಂದ ಬಾಣಲಿಂಗವನ್ನು ತರಿಸಿ ಪ್ರತಿಷ್ಠೆಮಾಡಿಸು. ||೧೧೩-೧೧೪||

ಬಿಲ್ವಮೂಲೇ ಬಾಣಲಿಂಗಂ ಸ್ಥಾಪಯಿತ್ವಾ ಸಮರ್ಚಯೇತ್ ।
ವಿಭೂತಿಧಾರಣಂ ಕೃತ್ವಾ ಕೃತ್ವಾ ರುದ್ರಾಕ್ಷಧಾರಣಂ ॥೧೧೫॥

ಅತಃ ಪರಂ ತು ವಿರತಃ ಸಂಸಾರಾದಘಸಾಗರಾತ್ ।
ಮಹೇಶ್ವರರತೋ ಭೂತ್ವಾ ಲಿಂಗಪೂಜಾರತೋ ಭವ ॥೧೧೬॥

ಸದೋಷಾಃ ಸರ್ವೇಷಾಂ ವಿಷವಿಷಮಪಾಕಾ ವಿಷಯಿಣಾಂ
ವಿಷಪ್ರಾಯಃ ಪ್ರಾಯಃ ಪ್ರಿಯತಮಮಹಿಷ್ಯಾದಿವಿಷಯಾಃ ।
ಅತೋ ಹಿತ್ವಾ ಮೋಹಂ ಭಜ ಭಜ ಮಹಾದೇವಮನಘಂ
ಮಹಾದೇವಂ ಹಿತ್ವಾ ನ ಹಿ ನ ಹಿ ಮಹೋತ್ಸಾಹದಮಹೋ॥೧೧೭॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಬಿಲ್ವವೃಕ್ಷಮಹಿಮಾವರ್ಣನಂ ನಾಮ
ದ್ವಾವಿಂಶೋಽಧ್ಯಾಯಃ

ಬಿಲ್ವವೃಕ್ಷದ ಮೂಲಭಾಗದಲ್ಲಿ ಬಾಣಲಿಂಗವನ್ನು ಪ್ರತಿಷ್ಠೆಮಾಡಿಸಬೇಕು. ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದವನಾಗಬೇಕು. ಆಮೇಲೆ ಪಾಪಸಮುದ್ರವಾದ ಸಂಸಾರವ್ಯವಹಾರವನ್ನು ಬಿಟ್ಟು ವಿರಕ್ತನಾಗಿ ಈಶ್ವರನಲ್ಲಿ ಆಸಕ್ತನಾಗು. ಮತ್ತು ಲಿಂಗಪೂಜೆಯಲ್ಲಿ ಪ್ರೀತಿಯನ್ನು ತೋರಿಸು. ||೧೧೫-೧೧೬||

ಸುಖಾಪೇಕ್ಷಿಗಳಾದ ಮನುಷ್ಯರು ಎಲ್ಲಾ ವಿಷಯಗಳಲ್ಲೂ ತಪ್ಪುಗಳನ್ನು ಮಾಡುತ್ತಿರುತ್ತಾರೆ. ಅದರ ಪರಿಣಾಮವಾಗಿ ಅವರ ವ್ಯವಹಾರಗಳು ದುಃಖಾವಸಾನಗಳಾಗುತ್ತವೆ. ಸಾಮಾನ್ಯವಾಗಿ ಹೆಚ್ಚುಭಾಗದಲ್ಲಿ ತನಗೆಪ್ರಿಯರಾದ ಹೆಂಡತಿಮಕ್ಕಳೂ ದುಃಖಕೊಡುವವರಾಗುತ್ತಾರೆ. ಆದುದರಿಂದ ತನ್ನ ಮನೆ, ತನ್ನ ಹೆಂಡತಿ, ಮಗ, ಧನ, ಕನಕ ಮುಂತಾದ ವಸ್ತುಗಳಲ್ಲಿ ಮೋಹವನ್ನು ತ್ಯಜಿಸಬೇಕು. ಪಾಪವನ್ನು ನಾಶಮಾಡತಕ್ಕ ಮಹಾದೇವನನ್ನು ಧ್ಯಾನಿಸಬೇಕು. ಅತ್ಯಂತ ಕಲ್ಯಾಣ, ಉತ್ಸಾಹ ಇವುಗಳು ನಮಗೆ ಬೇಕಾದರೆ ಈಶ್ವರನನ್ನೇ ಭಜಿಸಬೇಕು. ಇತರರಿಂದ ಅವು ಲಭಿಸಲಾರವು. ಆದುದರಿಂದ ಎಲೈ ಮನುಷ್ಯನೇ! ಯಾವಾಗಲೂ ಶಿವನನ್ನು ಧ್ಯಾನಿಸು. ||೧೧೭||

ಇಲ್ಲಿಗೆ ಶ್ರೀಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಬಿಲ್ವವೃಕ್ಷ ಮಹಿಮಾವರ್ಣನೆಯೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ತ್ರಯೋವಿಂಶೋಽಧ್ಯಾಯಃ

|| ಬ್ರಹ್ಮೋವಾಚ ||

ಇತಿ ತದ್ವಚನಂ ಶ್ರುತ್ವಾ ರಾಜಾ ಸಂತುಷ್ಟಮಾನಸಃ ।
ಪ್ರಣಮ್ಯ ದಂಡವದ್ಭೂಮೌ ತಮುವಾಚ ಶಿವಾರ್ಚನಂ ||೧||

|| ರಾಜೋವಾಚ ||

ಶಿವದೀಕ್ಷಾಂ ಪ್ರಯಚ್ಛಾದ್ಯ ತಯಾ ಪೂತೋ ಭವಾಮ್ಯಹಂ ।
ಅನನ್ಯಶರಣಂ ವಿದ್ಧಿ ಮಾಂ ಪಾಪವಿರತಂ ನೃಪಂ ||೨||

ಶಿವದೀಕ್ಷಾಪ್ರಭಾವೋ ವಾ ಮಹಿಮಾ ಶಂಕರಸ್ಯ ವಾ ।
ಕೀದೃಶಸ್ತಂ ವದಾದ್ಯಾಶು ಯೇನ ಪಾಪಂ ವಿನಶ್ಯತಿ ||೩||

ಇಪ್ಪತ್ತಮೂರನೆಯ ಅಧ್ಯಾಯ

ಹೀಗೆ ಶೈವನ ಮಾತನ್ನು ಕೇಳಿ ರಾಜನು ಸಂತುಷ್ಟನಾಗಿ ಆ ಶೈವನಿಗೆ ದಂಡಪ್ರಣಾಮಮಾಡಿ ಹೀಗೆಂದನು, ಎಂದು ಬ್ರಹ್ಮನು ಸಭಿಕರಿಗೆಹೇಳಿದನು. ||೧||

"ಎಲೈ ಶೈವನೇ, ಈಗ ನನಗೆ ಶಿವದೀಕ್ಷೆಯನ್ನು ಕೊಡು. ಅದರಿಂದ ನಾನು ಪವಿತ್ರನಾಗುವೆನು. ಪಾಪನಿರ್ಮುಕ್ತನಾಗದ ನನಗೆ ಬೇರೆ ಯಾರೂ ದಿಕ್ಕಿಲ್ಲವೆಂದೇ ತಿಳಿ. ಶಿವದೀಕ್ಷೆಯ ಪ್ರಭಾವವು ಎಂತಹುದು? ಶಂಕರನ ಮಹಿಮೆಯಾದರೂ ಎಂತಹುದು? ಆ ವಿಚಾರವನ್ನು ಹೇಳು. ಅದರ ಶ್ರವಣದಿಂದ ನಾನು ಪಾಪನಿರ್ಮುಕ್ತನಾಗುವೆನು" ಎಂದು ಆ ರಾಜನು ಪ್ರಾರ್ಥಿಸಿದನು. ||೨-೩||

ಇತ್ಯಾಕರ್ಣ್ಯ ವಚಸ್ತಸ್ಯ ಶಾಂಭವಃ ಪ್ರಾಹ ತಂ ನೃಪಂ ।
ವಿಭೂತಿಧಾರಣಂ ಕೃತ್ವಾ ಶಪಥಂ ಚ ಮಹೇಶ್ವರೇ ॥೪॥

॥ ಶಾಂಭವ ಉವಾಚ ॥

ಶಿವದೀಕ್ಷಾಪ್ರಭಾವಸ್ತು ಶಿವೇನ ಜ್ಞಾಯತೇ ಪರಂ ।
ಯದ್ಯಪ್ಯಥಾಪಿ ತದ್ರೂಪಂ ಶೃಣು ಸಾದರಮಾಸ್ತಿಕ ॥೫॥

ಶಿವಮಂತ್ರೇ ದೀಕ್ಷಿತಸ್ಯ ತನುಂ ದೃಷ್ಟ್ವಾತಿದೂರತಃ ।
ಪ್ರಯಾಂತಿ ಯಮದೂತಾಸ್ತು ತಥಾ ಪಾತಕಪರ್ವತಾಃ ॥೬॥

ಅಧುನೈವ ತ್ವಯಾ ದೃಷ್ಟಃ ಪಾಪಾಕಾರೋ ಗಜೋ ಮಹಾನ್ ।
ಮಹಾಪರ್ವತಸಂಕಾಶೋ ಜ್ವಲತ್ಯದ್ಯಾಪಿ ಪಶ್ಯ ತಂ ॥೭॥

ಪಾಪಾನಿ ಗಜರೂಪೇಣ ನಿರ್ಗತಾನಿ ತವಾಧುನಾ ।
ಯತ್ಕಾಲಭೂತಿಸಂಗೇನ ಮದಂಗಾಲೋಕನಾದಪಿ ॥೮॥

ದೀಕ್ಷಿತಃ ಶೈವವಿದ್ಯಾಯಾಂ ಬಾಲ್ಯೇ ಭಾಗ್ಯವಶಾದಹಂ ।
ಶ್ರೀಕಾಲಕಾಲಕರುಣಾಸಂಪೂರ್ಣಾ ಮಯಿ ತಿಷ್ಠತಿ ॥೯॥

ಇದನ್ನು ಕೇಳಿದ ಶೈವನು ರಾಜನನ್ನು ಕುರಿತು "ಮೊದಲು ನೀನು ವಿಭೂತಿಯನ್ನು ಧರಿಸಿಕೊಂಡು ಈಶ್ವರನಲ್ಲಿ ಪ್ರತಿಜ್ಞೆ ಮಾಡಬೇಕು" ಎಂದನು. ॥೪॥

ಶಿವದೀಕ್ಷೆಯ ಮಾಹಾತ್ಮ್ಯೆಯನ್ನು ಈಶ್ವರನು ಮಾತ್ರ ತಿಳಿದಿರುವನು. ಆದರೂ ಕೂಡ ಅದರ ಸ್ವರೂಪವನ್ನು ಸ್ವಲ್ಪಮಟ್ಟಿಗೆ ನಿನಗೆ ಹೇಳುವೆನು. ಎಲೈ ಆಸ್ತಿಕನೆ ಕೇಳು, ಶಿವದೀಕ್ಷಿತನನ್ನು ನೋಡಿದೊಡನೆಯೇ ಯಮದೂತರು ಪಲಾಯನ ಮಾಡುವರು. ಹಾಗೆಯೇ ಮಹಾಮಹಾಪಾಪಗಳೂ ನಷ್ಟವಾಗುವುವು. ॥೫-೬॥

ಈಗತಾನೆ ಗಜರೂಪವನ್ನು ಧರಿಸಿದ ಪಾಪರಾಶಿಯನ್ನು ನೋಡಿದೆ. ದೊಡ್ಡ ಬೆಟ್ಟದಂತಿರುವ ಆ ಪಾಪಗಜವು ಇನ್ನೂ ಉರಿಯುತ್ತಲೇ ಇದೆ. ನೋಡು. ಈಗ ನಿನ್ನ ಪಾಪಗಳೆಲ್ಲಾ ಆನೆಯರೂಪದಿಂದ ಹೊರಕ್ಕೆ ಬಂದಿವೆ. ಇದು ಈಶ್ವರಭಸ್ಮ ಸಂಗದಿಂದಲೂ ಮತ್ತು ನನ್ನ ದರ್ಶನದಿಂದಲೂ ಉಂಟಾಗಿದೆ ಎಂದು ತಿಳಿ. ॥೭-೮॥

ನಾನು ಸುಕೃತವಶದಿಂದ ಚಿಕ್ಕಂದಿನಲ್ಲಿಯೇ ಶೈವದೀಕ್ಷೆಯನ್ನು ತೊಟ್ಟೆನು. ನನ್ನಲ್ಲಿ ಆ ಕಾಲಕಾಲ (ಯಮನಿಗೂ ಯಮ) ನಾದ ಈಶ್ವರನ ಕೃಪೆಯು ಸಂಪೂ

ಯೇ ಯೇ ಶಾಂಭವವಿದ್ಯಾಯಾಂ ದೀಕ್ಷಿತಾಸ್ತೇ ತಪೋಧನಾಃ ।
ತತ್ಪಾದರಜಸಾ ತಾವತ್ ಪಾವನಂ ಭುವನತ್ರಯಂ ॥೧೦॥

ಯಸ್ಯ ಶಾಂಭವವಿದ್ಯಾಯಾಂ ಭಕ್ತಿರ್ಭವತಿ ಭಾಗ್ಯತಃ ।
ತಂ ನಮಂತಿ ಸುರಾಃ ಸರ್ವೇ ಶರ್ವಾನುಗ್ರಹಕಾಂಕ್ಷಯಾ ॥೧೧॥

ಅಕ್ಷಯಂ ಧನಮಸ್ಮಾಕಂ ಸಾ ವಿದ್ಯಾ ಶಾಂಭವೀ ಖಲು ।
ಅನ್ಯದ್ಧನಂ ಕ್ಷಯಂ ಯಾತಿ ನ ತದ್ಯಾತಿ ಕ್ಷಯಂ ನೃಪ ॥೧೨॥

ಬಹುಪುಣ್ಯಾಬ್ಧಯಃ ಶೈವಾಃ ತಾಂ ದೀಕ್ಷಾಂ ಪ್ರಾಪ್ಯ ಸಾದರಂ ।
ಹೃಷ್ಟಾ ಭವಂತಿ ತೇ ತಾವದ್ದ್ವಿತ್ರಾ ಏವ ಕಲೌ ಖಲು ॥೧೩॥

ನ ಯಸ್ಯ ಪಾತಕಾದ್ಭೀತಿರ್ನ ಯಮಾದಪಿ ಜಾಯತೇ ।
ತಸ್ಯ ಪುಣ್ಯಸ್ವರೂಪಸ್ಯ ವಿದ್ಯಾ ಭವತಿ ಶಾಂಭವೀ ॥೧೪॥

ರ್ಣವಾಗಿದೆ. ತಪೋಧನರಾದ ಶೈವದೀಕ್ಷಿತರು ಯಾರು ಇರುವರೊ, ಅವರ ಪಾದ ಧೂಳಿಯ ಪ್ರಭಾವದಿಂದ ಮೂರು ಲೋಕವೂ ಪವಿತ್ರವಾಗಿರುವುದು. ॥೯-೧೦॥

ಯಾವನಿಗೆ ಶೈವವಿದ್ಯೆಯಲ್ಲಿ ಅದೃಷ್ಟವಶಾತ್ ಭಕ್ತಿಯಿರುತ್ತದೆಯೋ, ಅಂತಹ ವರನ್ನು ದೇವತೆಗಳೂ ಸಹ ಈಶ್ವರಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಹೆಬ್ಬಯಕೆ ಯಿಂದ ನಮಸ್ಕಾರ ಮಾಡುತ್ತಾರೆ. ॥೧೧॥

ನಮ್ಮ ಹಣವೆಂದಿಗೂ ನಾಶವಾಗುವುದಿಲ್ಲ. ಏಕೆಂದರೆ ಆ ಶೈವ ವಿದ್ಯೆಯೇ ನಮಗೆ ಧನವಾಗಿದೆ. ಇತರ ಹಣವು ವ್ಯರ್ಥವಾಗಿ ಹೋಗುತ್ತದೆ. ಈ ಶೈವವಿದ್ಯಾ ಧನವು ಎಂದೆಂದಿಗೂ ಕ್ಷಯವನ್ನು ಹೊಂದಲಾರದು. ರಾಜನೇ ! ಲೋಕದಲ್ಲಿ ಈಶ್ವರ ಭಕ್ತರೇ ಪುಣ್ಯಶಾಲಿಗಳು. ಅದಕ್ಕೆ ಶಿವದೀಕ್ಷೆಯನ್ನು ಸ್ವೀಕರಿಸಿರುವುದೇ ಮುಖ್ಯ ಕಾರಣ. ಅಂತಹ ಶೈವದೀಕ್ಷೆಯನ್ನು ಧರಿಸಿ ಸಂತೋಷದಿಂದಿರುವವರು, ಎರಡು ಮೂರುಮಂದಿ ಮಾತ್ರ ಈ ಕಲಿಯುಗದಲ್ಲಿ ದೊರಕಬಹುದು. ॥೧೨-೧೩॥

ಯಾವನಿಗೆ ಪಾಪಗಳಿಂದಲೂ ಯಮನಿಂದಲೂ ಹೆದರಿಕೆ ಉಂಟಾಗುವು ದಿಲ್ಲವೋ ಅಂತಹವನ ಪುಣ್ಯಸ್ವರೂಪಕ್ಕೆ ಈ ಶೈವವಿದ್ಯೆಯೇ ಕಾರಣ. ಶಿವಭಕ್ತ ರನೇಕರು ಶಾಂಭವವಿದ್ಯೆಯಿಂದ ಕೈಲಾಸವನ್ನೂ ಸಹ ಹೊಂದಿದ್ದಾರೆ. ಕೈಲಾಸ

ಕೈಲಾಸಮಪಿ ಸಂಪ್ರಾಪ್ತಾಃ ಶೈವಾಃ ಶಾಂಭವವಿದ್ಯಯಾ ।
ಸೋಪಾನರೂಪಾ ವಿದ್ಯೇಯಂ ಕೈಲಾಸಾರೋಹಣೋದ್ಯಮೇ ॥೧೫॥

ನಾನ್ಯೈರುಪಾಯೈಸ್ತಲ್ಲಾಭಃ ಕೈಲಾಸೋ ದುರ್ಲಭೋಽಪ್ಯಯಂ ।
ಸುಲಭತ್ವೇನ ವಿಜ್ಞೇಯಸ್ತಯಾ ಶಾಂಭವವಿದ್ಯಯಾ ॥೧೬॥

ನ ಯಸ್ಯ ಶಾಂಭವೀ ವಿದ್ಯಾ ತಸ್ಯ ಜನ್ಮ ನಿರರ್ಥಕಂ ।
ವಂಧ್ಯಾ ತಜ್ಜನನೀ ರಾಜನ್ ತೇನ ಪುತ್ರೇಣ ಕಿಂ ಫಲಂ ॥೧೭॥

ಮಾನುಷಂ ಜನ್ಮ ಸಂಪ್ರಾಪ್ಯ ದ್ವಿಜತ್ವಂ ಚ ವಿಶೇಷತಃ ।
ಸಂಪ್ರಾಪ್ಯ ಶಾಂಭವೀಂ ವಿದ್ಯಾಂ ರಾಜತೇ ದ್ವಿಜರಾಜವತ್ ॥೧೮॥

ತೃಪ್ತಾ ಭವಂತಿ ಪಿತರಸ್ತಸ್ಯ ಶಾಂಭವವಿದ್ಯಯಾ ।
ತದ್ವಿದ್ಯಾಸಹಿತಂ ವಿಪ್ರಂ ಪ್ರಣಮಂತಿ ಮುನೀಶ್ವರಾಃ ॥೧೯॥

ಬ್ರಾಹ್ಮಣಃ ಶಾಂಭವೀಂ ವಿದ್ಯಾಂ ಯಾವನ್ನಾಪ್ನೋತಿ ಪುಣ್ಯದಾಂ ।
ತಾವತ್ಸ ನ ಪ್ರಣಾಮಾರ್ಹೋ ನ ದಾನಾರ್ಹೋಽಪಿ ಭೂಪತೇ ॥೨೦॥

ಪರ್ವತವನ್ನು ಆರೋಹಣಮಾಡಬೇಕಾದರೆ ಈ ಶೈವವಿದ್ಯೆಯು ಮೆಟ್ಟಲಿನ ಪ್ರಾಯವಾಗುತ್ತದೆ. ||೧೪-೧೫||

ಇತರ ಯಾವ ಉಪಾಯಗಳಿಂದಲೂ ಕೈಲಾಸವು ಲಭಿಸಲಾರದು. ಆ ಶಾಂಭವವಿದ್ಯೆಯಿಂದ ಮಾತ್ರ ಸುಲಭವಾಗಿ ಪಡೆಯಬಹುದು. ||೧೬||

ಶಾಂಭವವಿದ್ಯೆಯನ್ನು ತಿಳಿಯದವನ ಜನ್ಮ ವ್ಯರ್ಥ. ಅವನ ತಾಯಿಯು ಬಂಜೆಗೆ ಸಮನಾಗುವಳು. ಏಕೆಂದರೆ ಮಗನಿಂದ ಹೊಂದಬಹುದಾದ ಸದ್ಗತಿಯನ್ನು ಹೊಂದಲಾರಳು. ಅಂತಹ ಮಗನಿಂದೇನು ಪ್ರಯೋಜನ? ಮನುಷ್ಯ ಜನ್ಮವನ್ನು ಹೊಂದಿದರೂ ಬ್ರಾಹ್ಮಣತ್ವವು ಲಭಿಸುವುದು ದುಷ್ಕರ. ವಿಶೇಷವಾಗಿ ಬ್ರಾಹ್ಮಣನಾಗಿ ಶೈವವಿದ್ಯೆಯನ್ನು ತಿಳಿದವನಂತೂ ಪೂರ್ಣಚಂದ್ರನಂತೆ ಶೋಭಿಸುವನು. ||೧೭-೧೮||

ಶೈವವಿದ್ಯೆಯನ್ನು ಬಲ್ಲವನ ಪಿತೃಗಳಂತೂ ಅವನ ಶೈವೀವಿದ್ಯೆಯಿಂದ ತೃಪ್ತರಾಗುತ್ತಾರೆ. ಶಿವವಿದ್ಯೆಯನ್ನು ತಿಳಿದ ಮನುಷ್ಯನನ್ನು ಮುನಿಶ್ರೇಷ್ಠರು ಸಹ ನಮಸ್ಕರಿಸುತ್ತಾರೆ. ಬ್ರಾಹ್ಮಣನಾದವನು ಪವಿತ್ರವಾದ ಪುಣ್ಯವನ್ನೂ ಕೊಡುವ

ಅಭ್ಯಸ್ಯ ಶಾಂಭವೀಂ ವಿದ್ಯಾಂ ಶಿವಾರ್ಚನರತೋ ಯದಿ ।
ಯದೈವ ಸ್ಯಾತ್ ಪ್ರಣಾಮಾರ್ಹೋ ದಾನಾರ್ಹೋಽಪೀತಿ ಮನ್ಮಹೇ ॥೨೦॥

ಪರಮಾ ಶಾಂಭವೀ ವಿದ್ಯಾ ದುರ್ಲಭಾ ಪರಮಾರ್ಥತಃ ।
ಅತಸ್ತತ್ರಾಧಿಕಾರೋಽಪಿ ದುರ್ಲಭತ್ವೇನ ನಿಶ್ಚಿತಃ ॥೨೧॥

ಸಂಪ್ರಾಪ್ಯ ಶಾಂಭವೀಂ ವಿದ್ಯಾಂ ಶಂಭುಪೂಜಾಂ ಕರೋತಿ ಚೇತ್ ।
ತದಾ ಶಿವೇನ ಸಾ ಪೂಜಾ ಗೃಹ್ಯತೇ ಪ್ರೀತಿಪೂರ್ವಕಂ ॥೨೩॥

ತಯೈವ ವಿದ್ಯಯಾ ದತ್ತಂ ಶಿವಲಿಂಗೇ ಜಲಾದಿಕಂ ।
ಸಾಧುತ್ವಂ ಯಾತಿ ತೇನೈವ ಮುಕ್ತಾಸ್ತತ್ಪಿತರೋಽಪಿ ಹ ॥೨೪॥

ಸ್ವಪುತ್ರಂ ಪಿತರೋ ದೃಷ್ಟ್ವಾ ತಯಾ ಶಂಕರಪೂಜಕಃ ।
ಪೀತ್ವಾ ತಜ್ಜಲಮಾನಂದಂ ಪ್ರಾಪ್ತಾ ನೇಚ್ಛಂತಿ ಚ ಸ್ವಧಾಂ ॥೨೫॥

ಶೈವವಿದ್ಯೆಯನ್ನು ಎಲ್ಲಿಯ ವರೆಗೆ ತಿಳಿಯುವುದಿಲ್ಲವೋ ಅಲ್ಲಿಯ ತನಕ ಅವನು ನಮಸ್ಕಾರಕ್ಕೂ, ದಾನಕ್ಕೂ ಯೋಗ್ಯನಲ್ಲ. ||೧೯-೨೦||

ಶೈವವಿದ್ಯೆಯನ್ನು ಅಭ್ಯಾಸಮಾಡಿ ಶಿವಾರ್ಚನೆಯಲ್ಲಿ ಆಸಕ್ತನಾಗಿದ್ದವನು ಯಾವಾಗಲೂ ನಮಸ್ಕಾರಕ್ಕೂ ಮತ್ತು ದಾನಮಾಡುವುದಕ್ಕೂ ಯೋಗ್ಯನೆನಿಸುವನು. ಮತ್ತು ಪಾರಮಾರ್ಥಿಕದೃಷ್ಟಿಯಿಂದ ವಿಚಾರಮಾಡಿದರೆ ಶ್ರೇಷ್ಠವಾದ ಈ ಶಾಂಭವೀವಿದ್ಯಾಸಾಕ್ಷಾತ್ಕಾರವು ದುಷ್ಕರವಾದುದು. ಮತ್ತು ಆ ಶೈವವಿದ್ಯೆಯನ್ನು ಸಾಕ್ಷಾತ್ಕಾರಮಾಡಿಕೊಳ್ಳಲು ತಕ್ಕ ಅಧಿಕಾರಿಗಳು ಸಿಗುವುದೂ ಕಷ್ಟ ಎಂದು ತಿಳಿಯುತ್ತೇನೆ. ||೨೦-೨೨||

ಶಾಂಭವೀವಿದ್ಯೆಯನ್ನು ತಿಳಿದು ಯಾವನು ಶಿವಪೂಜೆಯನ್ನು ಮಾಡುವನೋ ಆ ಪೂಜೆಯು ಸಾಕ್ಷಾತ್ ಶಿವನಿಂದ ಸ್ವೀಕರಿಸಲ್ಪಡುತ್ತದೆ. ಆ ವಿದ್ಯೆಯಿಂದ ಕೊಟ್ಟ ಜಲಾದಿತರ್ಪಣಗಳೂ ಉತ್ತಮಗಳಾಗುತ್ತವೆ. ಮತ್ತು ಅವನ ಪಿತೃಗಳೂ ಅದರಿಂದ ಮುಕ್ತಿಯನ್ನು ಹೊಂದುವರು. ||೨೩-೨೪||

ಪಿತೃಗಳು ತಮ್ಮ ಮಗನನ್ನು ಕಂಡು, ಆತನು ಶಿವವಿದ್ಯೆಯಿಂದ ಕೊಟ್ಟಿರುವ ಜಲತರ್ಪಣವನ್ನು ಆಸ್ವಾದಮಾಡಿದಮೇಲೆ, ಶ್ರಾದ್ಧಾದಿಗಳಲ್ಲಿಕೊಡುವ ಸ್ವಧೆಯನ್ನೂ ಕೂಡ ಬಯಸುವುದಿಲ್ಲ ಎಂದು ಆ ಶೈವನು ಶಿವವಿದ್ಯಾವಿಚಾರವನ್ನು ವಿವರಿಸಿದನು. ||೨೫||

ಇತ್ಯಾಕರ್ಣ್ಯ ವಚಸ್ತಸ್ಯ ಭೂಪತಿಃ ಪ್ರಣತಃ ಪುನಃ ।
ಅಧುನಾ ಶಾಂಭವೀಂ ವಿದ್ಯಾಂ ದೇಹಿದೇಹೀತಿ ಸಾದರಂ ॥೨೬॥

ತತಸ್ತದ್ವಿನಯಂ ದೃಷ್ಟ್ವಾ ವೀರಃ ಶಾಂಭವಪುಂಗವಃ ।
ತಥಾಸ್ತ್ವಿತಿ ತಮುಸ್ಯಾಹ ಸೋಽಪಿ ತುಷ್ಟಸ್ತತೋ ನೃಪಃ ॥೨೭॥

ತತಃ ಸಮಾಗತಾಸ್ತಸ್ಯ ಸೇನಾ ಸಾ ವಾಹಿನೀ ವಿಭೋಃ ।
ಸಂಖ್ಯಾಮಾರ್ಗಮತಿಕ್ರಾಂತಾ ಗಜವಾಜಿವಿರಾಜಿತಾ ॥೨೮॥

ತಸ್ಯಾಃ ಪ್ರಧಾನಪುರುಷೋ ರಾಜಾ ಕ್ವ ಗತ ಇತ್ಯಪಿ ।
ವಿಚಾರವ್ಯಾಕುಲಾಃ ಸರ್ವೇ ಬಿಲ್ವಮೂಲಮುಪಾಗತಾಃ ॥೨೯॥

ತತ್ರ ರಾಜಾನಮಾಸೀನಂ ವಿನಯಾನತಕಂಧರಂ ।
ವಿಲೋಕ್ಯ ವಿಸ್ಮಯಾಪನ್ನಾಃ ಕಿಮಭೂದಿತಿ ಭೋ ಬುಧಾಃ ॥೩೦॥

ಕ್ರೂರೋಽಯಂ ಪಾಪನಿರತಃ ಪುರಾದ್ಯಪ್ರಾತರಂತತಃ ।
ಅಧುನಾ ಸತ್ವಮಾಪನ್ನಃ ಕಿಮಿತ್ಯಾಶ್ಚರ್ಯಸಂಯುತಾಃ ॥೩೧॥

ಹೀಗೆ ಆ ಶೈವನಂದನಾತನ್ನು ಕೇಳಿದ ಆ ರಾಜನು ಅವನಿಗೆ ಬಾರಿ ಬಾರಿಗೂ ನಮಸ್ಕಾರ ಮಾಡುತ್ತಾ ಈಗ ನನಗೆ ಶೈವವಿದ್ಯೆಯನ್ನು ಉಪದೇಶ ಮಾಡು ಎಂದು ಆದರದಿಂದ ಅಂಗಲಾಚಿ ಬೇಡಿಕೊಂಡನು. ಆಗ ಆ ಮಹಾತ್ಮನು ಆ ರಾಜನ ವಿನಯವನ್ನು ನೋಡಿ ನಿನ್ನಿಷ್ಟದಂತೆ ಆಗಲಿ ಎಂದನು. ಅದರಿಂದ ರಾಜನಿಗೆ ಬಹು ಸಂತೋಷವಾಯಿತು. ||೨೬-೨೭||

ಬಳಿಕ ಆ ರಾಜನ ದೊಡ್ಡ ಸೈನ್ಯವು ಅಲ್ಲಿಗೆ ಬಂದಿತು. ಅದು ಅನೇಕ ಆನೆ, ಕುದುರೆ ಇವುಗಳಿಂದ ತುಂಬಿ ಲೆಕ್ಕಕ್ಕೆ ಸಿಗುವಂತಿರಲಿಲ್ಲ. ಅಪರಿಮಿತ ಸೈನಿಕರಿಂದ ಕಂಗೊಳಿಸುತ್ತಿತ್ತು. ಆ ಸೇನಾಪತಿಗಳು ರಾಜನು ಎಲ್ಲಿ ಹೋದನೋ ಎಂದು ಕಳವಳಹೊಂದಿದವರಾಗಿ ಹುಡುಕುತ್ತಾ ಬಂದು ಅದೇ ಬಿಲ್ವವೃಕ್ಷಮೂಲವನ್ನು ಸೇರಿದರು. ||೨೮-೨೯||

ಬಿಲ್ವವೃಕ್ಷದಡಿಯಲ್ಲಿ ವಿನಯದಿಂದ ತಲೆಬಾಗಿರುವ ರಾಜನನ್ನು ನೋಡಿ ಆಶ್ಚರ್ಯಪಟ್ಟು 'ಏನಾಗಿರಬಹುದು ಈತನಿಗೆ! ಹೀಗೆ ಕುಳಿತಿರುವನಲ್ಲಾ! ಘಾತುಕಿ

ತತಸ್ತೇ ಸತ್ವಸಂಪನ್ನಾಃ ಸನ್ನಿಧಾನೇನ ಭೂಪತೇಃ ।
ಸತಾಸ್ತೇ ಭೂಪತಿಂ ಪ್ರಾಹುರ್ಗಂತವ್ಯಮಿತಿ ಸತ್ವರಂ ॥೩೨॥

ತತಸ್ತಾನಾಹ ಭೂಪಾಲೋ ವಿಸ್ಮಯಂ ಜನಯನ್ಮುದಾ ।
ಶೃಣ್ವಂತು ಸಾವಧಾನೇನ ಕರ್ತವ್ಯಮಧುನೋಚ್ಯತೇ ॥೩೩॥

ಶಾಂಭವಾಗ್ರೇಸರಸ್ಯಾಸ್ಯ ಸನ್ನಿಧಾನೇ ಸದಾ ಮಯಾ ।
ಸ್ಥಾತವ್ಯಮತ್ರ ನಗರಂ ರಚನೀಯಂ ವಿಶೇಷತಃ ॥೩೪॥

ರತ್ನಮಂದಿರಮತ್ರೈಕಂ ಕರ್ತವ್ಯಮಿತಿ ಸಾದರಂ ।
ಅತ್ರೈವ ಬಾಣಲಿಂಗಾನಿ ಸ್ಥಾಪನೀಯಾನ್ಯನಂತಧಾ ॥೩೫॥

ಏತಸ್ಯ ಬಿಲ್ವವೃಕ್ಷಸ್ಯ ಛಾಯಾ ಮಧ್ಯಂದಿನೇ ರವೌ ।
ಯಾವತ್ತಾವನ್ನಾರ್ಮದಾನಿ ಸಂತು ಲಿಂಗಾನಿ ಕೋಟಿಶಃ ॥೩೬॥

ಯಾಗಿ ಈತನು ಬೆಳಿಗ್ಗೆ ಬೇಟೆಗಾಗಿ ಹೊರಟವನು ಈಗ ಶಾಂತಭಾವವನ್ನು ತಾಳಿರುವನಲ್ಲ! ಇದೇನಾಶ್ಚರ್ಯ! ' ಎಂದು ಮುಂತಾಗಿ ಯೋಚಿಸುತ್ತಾ ಎಲ್ಲರೂ ಅಲ್ಲಿಗೆ ಬಂದು ಸೇರಿದರು. ॥೩೦-೩೧॥

ಬಳಿಕ ಅವರೆಲ್ಲರೂ ರಾಜನು ಸಿಕ್ಕಿದ್ದರಿಂದ ಶಾಂತರಾಗಿ ರಾಜನಿಗೆ ನಮಸ್ಕಾರ ಮಾಡಿದರು. ಮತ್ತೆ ಜಾಗ್ರತೆ ಪಟ್ಟಣಕ್ಕೆ ಹೋಗಬೇಕೆಂದು ಅರಸನಿಗೆ ಅರಿಕೆ ಮಾಡಿಕೊಂಡರು. ಬಳಿಕ ಆ ಅರಸನು ಅವರೆಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತಾ ಎಲೈ ಸೇನಾಪತಿಗಳೇ! ಸಾವಧಾನದಿಂದ ಕೇಳಿರಿ. ಈಗ ಮಾಡಬೇಕಾದ ಕಾರ್ಯ ವನ್ನು ಹೇಳುತ್ತೇನೆ ಎಂದನು. ॥೩೧-೩೩॥

ನಾನು ಈ ಶಿವಭಕ್ತಶಿರೋಮಣಿಯ ಸನ್ನಿಧಿಯಲ್ಲಿಯೇ ವಾಸಮಾಡಬೇಕಾ ಗಿದೆ. ಅಲ್ಲದೆ ಇಲ್ಲಿ ಒಂದು ಪಟ್ಟಣವನ್ನು ಕಟ್ಟಿಸತಕ್ಕದ್ದಿದೆ. ಒಂದು ರತ್ನಮಂದಿರ ವನ್ನೂ ಕಟ್ಟಿಸಬೇಕು. ಇಲ್ಲಿಯೇ ಅನೇಕ ಬಾಣಲಿಂಗಗಳನ್ನೂ ಪ್ರತಿಷ್ಠೆಮಾಡಿಸ ಬೇಕೆಂದು ನನ್ನ ಸಂಕಲ್ಪ. ॥೩೪-೩೫॥

ಈ ಬಿಲ್ವವೃಕ್ಷದ ನೆರಳು ಮಧ್ಯಾಹ್ನಕಾಲದಲ್ಲಿ ಹೇಗೆ ನಿಬಿಡವಾಗಿ ಹರಡಿ ದೆಯೋ, ಅಷ್ಟು ಸ್ಥಳದಲ್ಲಿಯೂ ನರ್ಮದಾಸಂಬಂಧಿಗಳಾದ ಕೋಟಿಲಿಂಗಗಳನ್ನು

ಯಾವತೀ ರಚನಾ ತತ್ರ ತತಃ ಶತಗುಣಾ ಯದಿ ।
ಅತ್ರ ಸ್ಯಾತ್ ಸಂತು ಸಂತೋಷಸ್ತತ್ರ ತಾವನ್ನ ಗಮ್ಯತೇ ॥೩೭॥

ವಿಶ್ವಕರ್ಮಾ ಸಮಾಯಾತು ರಚನಾಂ ನಗರಸ್ಯ ಸಃ ।
ಕರೋತು ಸತ್ವರಂ ರತ್ನೈರ್ನಾನಾಮಂಡಪಮಂಡಿತಂ ॥೩೮॥

ಅಧುನಾ ಶಿವದೀಕ್ಷಾರ್ಥಂ ಯದಾ ದ್ರವ್ಯಮಪೇಕ್ಷಿತಂ ।
ತದಾನಯಧ್ವಂ ಯತ್ನೇನ ತ್ವರಯೇತ್ಯಾಹ ತಾನ್ ನೃಪಃ ॥೩೯॥

ತತಸ್ತದ್ವಚನಂ ಶ್ರುತ್ವಾ ರಾಜ್ಞಃ ಕ್ರೂರಸ್ಯ ಮಂತ್ರಿಣಃ ।
ತದುಕ್ತಂ ಸರ್ವಮಪ್ಯಾಶು ಕರ್ತವ್ಯಮಿತಿ ಚೋಚಿರೆ ॥೪೦॥

ತತೋ ನಿರ್ಮಿತಮೇವಾಶು ನಗರಂ ಸ್ವರ್ಗಸನ್ನಿಭಂ ।
ಮಂದಿರಂ ಚ ಮಹೇಶಸ್ಯ ನಾನಾರತ್ನವಿರಾಜಿತಂ ॥೪೧॥

ಸ್ಥಾಪಿಸುವೆನು. ಇಲ್ಲಿ ನಗರ, ದೇವಸ್ಥಾನ, ಇವುಗಳನ್ನು ರಚಿಸುವುದು ನನಗೆ ನೂರ್ಮಡಿಯಾಗಿ ಆನಂದವನ್ನುಂಟುಮಾಡೀತು! ಪಟ್ಟಣಕ್ಕೆ ನಾನು ಬರಲಾರೆ. ||೩೬-೩೭||

ವಿಶ್ವಕರ್ಮನು ಜಾಗ್ರತೆ ಬರಲಿ. ಅವನು ನಗರರಚನೆಯನ್ನು ಮಾಡಲಿ. ರತ್ನಗಳನ್ನು ಉಪಯೋಗಿಸಿ ಈ ನಗರದ ನಿರ್ಮಾಣ ನಡೆಯಬೇಕು. ಮತ್ತು ನಾನಾ ವಿಧವಾದ ಮಂಟಪಗಳನ್ನು ಕಟ್ಟಲಿ. ಈಗ ಶಿವದೀಕ್ಷೆ ಸ್ವೀಕರಿಸಲು ಎಷ್ಟು ಹಣ ಬೇಕಾಗುವುದೋ, ಅದಷ್ಟು ಹಣವನ್ನು ಜಾಗ್ರತೆ ತೆಗೆದುಕೊಂಡು ಬನ್ನಿ. ಈ ಕಾರ್ಯದಲ್ಲಿ ಆಲಸ್ಯಕ್ಕೆ ಸ್ಥಳವಿಲ್ಲ. ತ್ವರೆಮಾಡಿರಿ, ಎಂದು ಸೈನ್ಯಾಧಿಪತಿಗಳಿಗೆ ರಾಜನು ಆಜ್ಞೆಯಿತ್ತನು. ||೩೮-೩೯||

ಕ್ರೂರನಾಗಿದ್ದ ಆ ಅರಸಿನ ಮಾತು ಕೇಳಿ ಮಂತ್ರಿಗಳು, ಅವನು ಹೇಳಿದಂತೆ ಎಲ್ಲವೂ ಜಾಗ್ರತೆ ಮಾಡಲ್ಪಡಬೇಕೆಂದು ನಿಶ್ಚಯಿಸಿದರು. ಬಳಿಕ ಸ್ವರ್ಗಲೋಕಕ್ಕೆ ಸಮನಾದ ನಗರವು ಸಿದ್ಧವಾಯಿತು. ಮತ್ತು ಅನೇಕ ರತ್ನಗಳಿಂದ ಹೊಳೆಯುವ ಶಿವ ದೇವಾಲಯವೂ ಕೂಡ ಕಟ್ಟಲ್ಪಟ್ಟಿತು. ||೪೦-೪೧||

ತತಃ ಸ್ನಾತ್ವಾ ಪ್ರಯತ್ನೇನ ಭಸ್ಮನೋದ್ಧೂಲ್ಯ ತಾಂ ತನುಂ ।
ರುದ್ರಾಕ್ಷಮಾಲಾಭರಣಸ್ತಮುವಾಚ ಮುನೀಶ್ವರಂ ॥೪೨॥

ಸ್ವಾಮಿನ್ ಮಧ್ಯಾಹ್ನಗೋ ಭಾನುಃ ಪುಣ್ಯಕಾಲೋಯಮುತ್ತಮಃ ।
ದೀಕ್ಷಾಸಾಧನಸಂಪತ್ತಿರ್ಜಾತೇತ್ಯಾಹ ನೃಪೋತ್ತಮಃ ॥೪೩॥

ಸ್ಥಾಪಯಿತ್ವಾ ತತೋ ಭಕ್ತ್ಯಾ ಮೂಲೇ ಬಿಲ್ವತರೋಃ ಶುಭೇ ।
ಲಿಂಗಾನಿ ತಾನಿ ಸಂಪೂಜ್ಯ ಬಿಲ್ವಪತ್ರಾದಿಸಾಧನೈಃ ॥೪೪॥

ಹೋಮಂ ಕೃತ್ವಾ ಪ್ರಯತ್ನೇನ ತಯಾ ಶಾಂಭವವಿದ್ಯಯಾ ।
ರಾಜ್ಞೇ ಸ ಶಾಂಭವೀಂ ವಿದ್ಯಾಂ ದದೌ ಪ್ರೀತಿಪುರಃಸರಂ ॥೪೫॥

ರರಾಜ ರಾಜಾ ಸಂಪ್ರಾಪ್ಯ ತಾಂ ವಿದ್ಯಾಂ ಶಾಂಭವೀಂ ತದಾ ।
ನೀರಂಧ್ರಮೇಘನಿರ್ಮುಕ್ತಭಾನುಮಂಡಲವದ್ಬುಧಾಃ ॥೪೬॥

ರಾಹುಗ್ರಸ್ತಾರ್ಕವದ್ರಾಜಾ ಸ ಪೂರ್ವಂ ವಿದ್ಯಯಾ ವಿನಾ ।
ತಾಂ ಪ್ರಾಪ್ಯ ರಾಹುನಿರ್ಮುಕ್ತಭಾನುವದ್ಭೂಪತಿರ್ಬಭೌ ॥೪೭॥

ಆಮೇಲೆ ಆ ರಾಜನು ಸ್ನಾನಮಾಡಿ ಭಸ್ಮದಿಂದ ತನ್ನ ಶರೀರವನ್ನು ಲೇಪಿಸಿ, ಬಳಿಕ ರುದ್ರಾಕ್ಷಮಾಲೆಯನ್ನು ಹಾಕಿಕೊಂಡು, "ಅನಂತರ ಸ್ವಾಮಿ! ಸೂರ್ಯನು ಮಧ್ಯಾಕಾಶಕ್ಕೆ ಬಂದನು. ಈಗ ಉತ್ತಮವಾದ ಪುಣ್ಯಕಾಲವು ಬಂದಿದೆ. ದೀಕ್ಷೆ ಸ್ವೀಕರಿಸಲು ಬೇಕಾದ ಸಾಮಗ್ರಿಗಳು ಸಿದ್ಧವಾಗಿವೆ" ಎಂದು ಶೈವಭಕ್ತನಲ್ಲಿ ವಿಜ್ಞಾಪಿಸಿಕೊಂಡನು. ॥೪೨-೪೩॥

ಮಂಗಳಕರವಾದ ಬಿಲ್ವವೃಕ್ಷದ ಮೂಲದಲ್ಲಿ ಶಿವಲಿಂಗಗಳನ್ನು ಪ್ರತಿಷ್ಠೆ ಮಾಡಿ, ಅವುಗಳನ್ನು ಬಿಲ್ವಪತ್ರೆ ಮೊದಲಾದವುಗಳಿಂದ ಪೂಜಿಸಿದನು. ಅನಂತರ ಶಾಂಭವಮಂತ್ರಗಳಿಂದ ಹೋಮವನ್ನು ಮಾಡಿದನು. ಬಳಿಕ ಆ ಶೈವನು ಪ್ರೀತಿಯಿಂದ ರಾಜನಿಗೆ ಶೈವವಿದ್ಯೆಯನ್ನು ಉಪದೇಶಮಾಡಿದನು. ॥೪೪-೪೫॥

ಆಗ ರಾಜನು ನಿಬಿಡವಾದ ಮೋಡಗಳಿಂದ ಬಿಡಲ್ಪಟ್ಟ ಸೂರ್ಯಮಂಡಲದಂತೆ ಪ್ರಕಾಶಿಸಿದನು. ಶೈವವಿದ್ಯೆಯ ಉಪದೇಶಕ್ಕಿಂತ ಮೊದಲು ಅರಸನು ರಾಹುಗ್ರಸ್ತನಾದ ಸೂರ್ಯನಂತೆ ಕಳೆಗುಂದಿದ್ದನು. ಆಗ ಶಿವವಿದ್ಯಾಪ್ರಭಾವದಿಂದ ಪುನಃ ರಾಹುವಿನಿಂದ ಬಿಡಲ್ಪಟ್ಟ ಭಾಸ್ಕರನಂತೆ ಕಂಗೊಳಿಸಿದನು. ॥೪೬-೪೭॥

ಮಂತ್ರಿಣಸ್ತಂ ನೃಪಂ ದೃಷ್ಟ್ವಾ ತೇಽಪಿ ಶಾಂಭವವಿದ್ಯಯಾ ।
ಸಂಪನ್ನಾಸ್ತಸ್ಯ ಭಾರ್ಯಾಶ್ಚ ತದ್ಭೃತ್ಯಾ ಅಪಿ ಕೋಟಿಶಃ ॥೪೮॥

ತತಸ್ತಂ ನಗರಂ ಸರ್ವಂ ಶಾಂಕರೈಃ ಪರಿವಾರಿತಂ ।
ತತ್ರ ಶಾಂಕರವಾರ್ತಾಪಿ ಶ್ರೂಯತೇಽಪಿ ನ ಕೈರಪಿ ॥೪೯॥

ಶಿವಮಂದಿರಸಂಕ್ರಾಂತಂ ನಗರಂ ಸರ್ವತಃ ಸದಾ ।
ಮಂದಿರಂ ತಾದೃಶಂ ತತ್ರ ನ ಯತ್ರ ಶಿವಮಂದಿರಂ ॥೫೦॥

ದೃಷ್ಟೋಽಪಿ ನಗರೇ ತಸ್ಮಿನ್ನತಿಕ್ರೂರೋಽಪಿ ಶಾಂಕರಃ ।
ಶಿವಲಿಂಗಾರ್ಚನಪರೋ ಭವತ್ಯೇವ ನ ಸಂಶಯಃ ॥೫೧॥

ದೃಷ್ಟ್ವಾ ತಂ ನಗರಂ ದೂರಾದ್ಭೂಪಾಲಸ್ಯ ಪ್ರಯಾಂತ್ಯಪಿ ।
ಭಯಗ್ರಸ್ತಾಃ ಕೃತಾಂತಸ್ಯ ದೂತಾಃ ಸರ್ವೇ ಮದೋದ್ಧತಾಃ ॥೫೨॥

ಮಂತ್ರಿಗಳು ಆತನನ್ನು ನೋಡಿ, ಅವರೂ ಕೂಡ ಶಾಂಭವವಿದ್ಯೆಯನ್ನು ಸ್ವೀಕರಿಸಿದರು. ಮತ್ತು ಅವನ ಹೆಂಡಿರು, ಸೇವಕರು ಮುಂತಾದ ಅನೇಕ ಕೋಟಿ ಜನರು ಶೈವದೀಕ್ಷೆಯನ್ನು ಸ್ವೀಕರಿಸಿದರು. ಕ್ರಮೇಣ ಆ ಪಟ್ಟಣವೆಲ್ಲಾ ಶೈವಭಕ್ತರಿಂದ ತುಂಬಿಹೋಯಿತು. ಅಲ್ಲಿ ಎಲ್ಲರೂ ಶಿವಾರ್ಚಕರೇ ಆಗಿರುವುದರಿಂದ ಇವರು ಶೈವರು, ಇವರಲ್ಲ ಎಂಬ ವ್ಯವಹಾರವೇ ಇರಲಿಲ್ಲ. ಆದುದರಿಂದ ಶೈವರು ಇವರು ಎಂದು ಪ್ರತ್ಯೇಕವಾಗಿ ಹೇಳುವಂತಿರಲಿಲ್ಲ. ||೪೮-೪೯||

ಆ ಪಟ್ಟಣದಲ್ಲಿ ಎಲ್ಲಾ ಭಾಗವೂ ಶಿವಾಲಯಗಳಿಂದ ವ್ಯಾಪ್ತವಾಯಿತು. ಶಿವಮಂದಿರವಿಲ್ಲದಿರುವ ಮನೆಯೇ ಇರಲಿಲ್ಲ. ||೫೦||

ಆ ಪಟ್ಟಣದಲ್ಲಿರುವ ಈಶ್ವರ ಭಕ್ತನು ಅತ್ಯಂತ ದುಷ್ಟನಾಗಿ ಕಂಡರೂ ಅವನು ಶಿವಾರ್ಚನೆಯಲ್ಲಿ ಆಸಕ್ತನಾಗಿಯೇ ಇರುತ್ತಿದ್ದನು. ರಾಜನ ಆ ನೂತನ ನಗರವನ್ನು ಬಹು ದೂರದಿಂದಲೇ ನೋಡಿ ಕೊಬ್ಬಿದ ಯಮದೂತರೂ ಹೆದರಿಕೆಯಿಂದ ಓಡಿಹೋಗುತ್ತಿದ್ದರು. ||೫೧-೫೨||

ಏತಾದೃಶೋಽಯಂ ಮಹಿಮಾ ಶಾಂಭವಾನಾಮನಾಮಯಃ ।
ಅತಸ್ತದ್ವರ್ಣನಂ ಕರ್ತುಂ ಕಃ ಸಮರ್ಥೋ ಭವೇದ್ಭುವಿ ॥೫೩॥

ತೇನ ರಾಜ್ಞಾ ಧನಂ ಯಾವದಾರ್ಜಿತಂ ಪೂರ್ವಮಾದರಾತ್ ।
ತತ್ಸರ್ವಂ ಪ್ರದದೌ ಭಕ್ತ್ಯಾ ಶಾಂಭವೇಭ್ಯಸ್ತದಾಜ್ಞಯಾ ॥೫೪॥

ಶಾಂಭವಾಃ ಪ್ರತ್ಯಹಂ ತೇನ ಬಿಲ್ವಮೂಲೇಷು ಕೋಟಿಶಃ ।
ಭೋಜನಾದ್ಯೈಸ್ತೋಷಿತಾಶ್ಚ ಪ್ರತ್ಯಹಂ ಪ್ರೀತಿಪೂರ್ವಕಂ ॥೫೫॥

ತಸ್ಯ ಬಿಲ್ವತರೋರೇಕಃ ಪ್ರಾಕಾರಸ್ತೇನ ಕಾರಿತಃ ।
ಪರಿತೋ ಯೋಜನಾಯಾಮೋ ಮಣಿಮಂಡಲಮಂಡಿತಃ ॥೫೬॥

ತನ್ಮಧ್ಯೇ ರತ್ನಭವನಂ ಯೋಜನಾರ್ಧಾಯತಂ ಕೃತಂ ।
ತತ್ರ ಲಿಂಗಾನಿ ರಮ್ಯಾಣಿ ಸ್ಥಾಪಿತಾನಿ ಬಹೂನ್ಯಪಿ ॥೫೭॥

ರತ್ನಮಾಲಾಪರಿಕ್ರಾಂತಂ ತಂ ದೇವಶಿವಮಂದಿರಂ ।
ರತ್ನದೀಪಪರಿಕ್ರಾಂತಂ ರತ್ನಭೂಷಣಭೂಷಿತಂ ॥೫೮॥

ಶೈವಮಹಿಮೆ ಮತ್ತು ಅವನ ಭಕ್ತರ ಯೋಗಕ್ಷೇಮ ಹೀಗಿರುತ್ತದೆ. ಆದುದರಿಂದ ಈ ಶೈವಮಹಿಮೆಯನ್ನು ಬಣ್ಣಿಸಲು ಭೂಮಿಯಲ್ಲಿ ಯಾರು ತಾನೆ ಸಮರ್ಥರು? ಆ ರಾಜನು ತಾನು ಹಿಂದೆ ಸಂಪಾದಿಸಿದ ಹಣವನ್ನೆಲ್ಲಾ ಆ ಶೈವನ ಅಪ್ಪಣೆಯಂತೆ ಶಿವಭಕ್ತರಿಗೆ ಭಕ್ತಿಯಿಂದ ಸಮರ್ಪಿಸಿದನು. ॥೫೩-೫೪॥

ಪ್ರತಿದಿನವೂ ಆತನು ಬಿಲ್ವವೃಕ್ಷದ ಕೆಳಗೆ ಅನೇಕ ಶಿವಪೂಜಕರಿಗೆ ಪ್ರೀತಿ ಪುರಃಸರವಾಗಿ ಅನ್ನವನ್ನು ನೀಡುತ್ತಿದ್ದನು. ಅದರಿಂದ ಅವರನ್ನು ಸಂತೋಷಗೊಳಿಸುತ್ತಿದ್ದನು. ಆ ಬಿಲ್ವಮರದ ಸುತ್ತಲೂ ಒಂದು ಯೋಜನ ಉದ್ದಕ್ಕೂ ರತ್ನಗಳಿಂದ ಅಲಂಕೃತವಾದ ಕೋಟೆಯನ್ನು ಮಾಡಿಸಿದನು. ॥೫೫-೫೬॥

ಆ ಪ್ರಾಕಾರದ ಒಳಗೆ ಮಧ್ಯಭಾಗದಲ್ಲಿ ಅರ್ಧಯೋಜನ ಉದ್ದವಾದ ಒಂದು ರತ್ನಮಂದಿರವನ್ನು ಕಟ್ಟಿಸಿದನು. ಮತ್ತು ಅಲ್ಲಿ ಮನೋಹರಗಳಾದ ಅನೇಕ ಲಿಂಗಗಳನ್ನು ಪ್ರತಿಷ್ಠಾಪಿಸಿದನು. ಆ ರತ್ನಭವನವಾದರೋ ಎಲ್ಲಾ ಕಡೆಗಳಲ್ಲೂ ರತ್ನಸಾಲುಗಳಿಂದಲೂ ರತ್ನದೀಪಗಳಿಂದಲೂ, ರತ್ನಮಯವಾದ ಒಡವೆಗಳಿಂದಲೂ ಪ್ರಕಾಶಿಸುತ್ತಿತ್ತು. ॥೫೭-೫೮॥

ಉದಾರಾಸ್ತಸ್ಯ ಯೇ ದಾರಾಃ ಕೋಟಿಶಸ್ತಾ ಮನೋಹರಾಃ ।
ಸಾಯಂ ಪ್ರಾತೋಽಪಿ ನಾಟ್ಯಾನಿ ಚಕ್ರುಸ್ತೇ ಗಿರಿಶಾಲಯೇ ॥೫೯॥

ತದ್ದರ್ಶನಾರ್ಥಮಸ್ಮಾಭಿರ್ಗಮ್ಯತೇ ಭಕ್ತಿಪೂರ್ವಕಂ ।
ತೇನಾದರಃ ಕೃತೋಽಸ್ಮಾಕಂ ಏತೇ ಶೈವಾ ಇತಿ ಶ್ರಿಯಾ ॥೬೦॥

ಏತಾದೃಶೇನ ತೇನೈವ ರಾಜ್ಞಾ ಭೂಮಂಡಲೇ ಜನಾಃ ।
ಶೈವಾಃ ಕೃತಾ ಸ್ತದಾ ಕೋಽಪಿ ನಾಶೈವೋ ಭುವಿ ದೃಶ್ಯತೇ ॥೬೧॥

ತದಾ ಯಮಾಲಯೇ ಕೋಽಪಿ ನಾಸ್ತಿ ನ ಶ್ರೂಯತೇಽಪಿ ಚ ।
ಕೀಟಾಶ್ಚ ಸ್ವರ್ಗಮಾಯಾಂತಿ ಸರ್ವೇ ತದ್ದೇಶವಾಸಿನಃ ॥೬೨॥

ಮೃಗಾದೀನಾಂ ಚ ಕಾ ವಾರ್ತಾ ತಸ್ಮಿನ್ ಶೈವೇ ಸತಿ ಶ್ರಿಯಾ ।
ರರಾಜ ಭೂತಲಂ ಸರ್ವಂ ಶೈವಮಂಡಲಮಂಡಿತಂ ॥೬೩॥

ತೇನೋಷಿತಮಿಹಾಕಲ್ಪಂ ಸಶರೀರಃ ಸಮಾಗತಃ ।
ಸ ರಾಜಾ ದಾರಸಹಿತೋ ಮಂತ್ರಿಭಿಃ ಸಹ ಸಾದರಂ ॥೬೪॥

ಸುಂದರಿಯರೂ, ಉದಾರರೂ ಆದ ಆ ಅರಸಿನ ಹೆಂಡಿರನೇಕರು ಬೆಳಿಗ್ಗೆ, ಸಂಜೆ, ಈ ಎರಡು ಹೊತ್ತು ಆ ಶಿವದೇವಾಲಯದಲ್ಲಿ ನರ್ತನವನ್ನು ಮಾಡುತ್ತಿದ್ದರು. ನಾವೂ ಕೂಡ ಭಕ್ತಿಯಿಂದ ಅಲ್ಲಿಗೆ ಹೋಗುತ್ತೇವೆ. ನಾವಲ್ಲಿಗೆ ಹೋದರೆ "ಇವರು ಶಿವಭಕ್ತರು" ಎಂದು ಗೌರವದಿಂದ ನಮಗೆ ಬಹಳ ಸತ್ಕಾರಮಾಡುತ್ತಾರೆ. ||೫೯-೬೦||

ಮತ್ತೂ ಆ ರಾಜನು ತನ್ನ ಭೂಮಿಯಲ್ಲಿ ಎಲ್ಲಾ ಜನರೂ ಈಶ್ವರಾರ್ಚಕರಾಗುವಂತೆ ಮಾಡಿದನು. ಒಬ್ಬನಾದರೂ ಶಿವಾರ್ಚನೆಮಾಡದೆ ಆ ಭೂಮಿಯಲ್ಲಿ ತೋರುತ್ತಿರಲಿಲ್ಲ. ಹೀಗಾದಮೇಲೆ ಯಮಲೋಕದಲ್ಲಿ ಒಬ್ಬ ಪಾಪಿಯೂ ಯಮನಿಗೆ ದೊರಕಲಿಲ್ಲ. ಆತನ ವರ್ತಮಾನವನ್ನು ಕೇಳಿದವನೂ ಇರಲಿಲ್ಲ. ಆತನ ದೇಶದಲ್ಲಿ ವಾಸಮಾಡುವ ಮನುಷ್ಯರಲ್ಲದೆ ಕ್ರಿಮಿಕೀಟಗಳು ಸಹ ಸ್ವರ್ಗಕ್ಕೆ ಹೋಗುತ್ತಿದ್ದುವು. ||೬೧-೬೨||

ಹೀಗೆಂದಮೇಲೆ ಮೃಗಗಳೂ ಸಹ ಸ್ವರ್ಗವನ್ನು ಪಡೆದವೆಂದು ಹೇಳಬೇಕಾದುದೇನಿದೆ? ಶಿವದೀಕ್ಷಾಬದ್ಧನಾದ ರಾಜನು ಹಾಗೆ ಪ್ರಕಾಶಿಸುತ್ತಿರಲು ಎಲ್ಲಾ

ಸ ತೇನೈವ ಶರೀರೇಣ ವೈಕುಂಠೇಪಿ ಸ್ಥಿತೋ ಮುದಾ ।
ಕಲ್ಪಮಾತ್ರಂ ತತೋ ರಾಜಾ ಸ್ವಾರಾಜ್ಯಮಗಮನ್ಮುದಾ ॥೬೫॥

ಏತಾದೃಶಸ್ತು ಬಹವಃ ಸ್ಥಿತಾಃ ಪೂರ್ವಂ ನರೋತ್ತಮಾಃ ।
ಶಾಂಕರಾನುಗ್ರಹಾದೇವ ಸರ್ವಭಾಗ್ಯಸಮನ್ವಿತಾಃ ॥೬೬॥

ಇಯಂ ಭಿಲ್ಲಸತೀ ದೇವಾಃ ದುರ್ಭಗಾ ವ್ಯಾಧಿಪೀಡಿತಾ ।
ಜೀವನಂ ತಾವದೇತಸ್ಯಾಃ ಕಾಷ್ಠವಿಕ್ರಯಣಾದಿನಾ ॥೬೭॥

ಏತನ್ಮರಣಕಾಲೇ ತು ಶೈವೋಚ್ಛಿಷ್ಟಪಲಾಶಭಾಕ್ ।
ಕರೋಽಸ್ಯಾಸ್ತೇನ ಪುಣ್ಯೇನ ಯಮೇನಾಭ್ಯರ್ಚಿತಾ ಮುದಾ ॥೬೮॥

ಇಂದ್ರೇಣಾಭ್ಯರ್ಚಿತಾ ಭಕ್ತ್ಯಾ ಸ್ವರ್ಗಲೋಕಮುಪಾಗತಾ ।
ಅತ್ರೇಯಮಾಗತಾ ಧನ್ಯಾ ಪೂಜಿತಾಪಿ ಮಯಾ ಮುಹುಃ ॥೬೯॥

ಭೂಮಿ ಭಾಗವೂ ಶಿವೋಪಾಸಕರಿಂದ ಮನೋಹರವಾಗಿ ಕಾಣುತ್ತಿದ್ದಿತು. ಹೀಗೆಯೇ ಆ ಸ್ಥಳದಲ್ಲಿ ಶೈವದೀಕ್ಷಿತನಾದ ಅರಸನು ಭಾರ್ಯಾಮಾತ್ಯರಿಂದ ಕೂಡಿ ಒಂದು ಕಲ್ಪದ ವರೆಗೆ ನೆಲಸಿದನು. ॥೬೩-೬೪॥

ಅನಂತರ ಆತನು ಸಶರೀರನಾಗಿ ವೈಕುಂಠಲೋಕಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಅಂದರೆ ಒಂದು ಕಲ್ಪದವರೆಗೆ ನಿಂತನು. ಬಳಿಕ ಸಂತೋಷದಿಂದ ತನ್ನ ಪಟ್ಟಣಕ್ಕೆ ಹಿಂದಿರುಗಿ ಬಂದನು. ಇಂತಹ ಶಿವದೀಕ್ಷಿತರಾದ ರಾಜರು ಪೂರ್ವಕಾಲ ದಲ್ಲಿ ಅನೇಕರಿದ್ದರು. ಎಲೈ! ದೇವತೆಗಳಿರಾ! ಶಂಕರನ ಅನುಗ್ರಹದಿಂದ ಅವರೆಲ್ಲರೂ ಭಾಗ್ಯಶಾಲಿಗಳೆನಿಸಿದರು. ॥೬೫-೬೬॥

ಈ ಅದೃಷ್ಟಹೀನಳಾದ ಬೇಡರ ಸ್ತ್ರೀಯು ರೋಗಪೀಡಿತಳಾಗಿದ್ದಳು. ಈಕೆಯು ಸೌದೆಯನ್ನು ಮಾರಿ ಜೀವಿಸುತ್ತಿದ್ದಳು. ಈಕೆಯು ಸಾಯುವ ಕಡೆಕಾಲ ದಲ್ಲಿ ಶೈವೋಚ್ಛಿಷ್ಟವಾದ ಎಲೆಯನ್ನು ಹಸ್ತದಿಂದ ಸ್ಪರ್ಶಿಸಿದಳು. ಅದರ ಭಾಗ್ಯಾತಿ ಶಯದಿಂದ ಸಾಕ್ಷಾತ್ ಯಮನೇ ಈಕೆಯನ್ನು ಪೂಜಿಸಿದನು. ॥೬೭-೬೮॥

ಬಳಿಕ ಸ್ವರ್ಗಲೋಕಕ್ಕೆ ಬಂದ ಈಕೆಯನ್ನು ಇಂದ್ರನು ಪೂಜಿಸಿದನು. ಆಮೇಲೆ ಅಲ್ಲಿಂದ ಇಲ್ಲಿಗೆ ಬಂದಿರುವಳು. ಈಗ ಈಕೆಯನ್ನು ನಾನು ಅರ್ಚಿಸಿದೆನು.

ಅತಃ ಪರಂ ವಿಷ್ಣುಲೋಕಂ ಪ್ರಯಾಸ್ಯತಿ ವಿಮಾನತಃ ।
ಬಹುಕಾಲಮುಷಿತ್ವಾ ಸಾ ತತ್ರ ತುಷ್ಟಾ ಭವಿಷ್ಯತಿ ॥೭೦॥

ತತಃ ಪರಮಿಯಂ ನಾರೀ ಕ್ಷೀರಸಾಗರಕನ್ಯಕಾ ।
ಭವಿತ್ರೀ ರೂಪಲಾವಣ್ಯಸಂಯುತಾ ಭಾಗ್ಯಸಂಯುತಾ ॥೭೧॥

ಸ ಸಾಗರಃ ಸುತಾಂ ದೃಷ್ಟ್ವಾ ಸಂತುಷ್ಟೋಽಪಿ ಭವಿಷ್ಯತಿ ।
ಲಕ್ಷ್ಮೀನಾಮ್ನಾ ನಾಮ ಕರ್ಮ ಸ ಕರಿಷ್ಯತಿ ಸಾಗರಃ ॥೭೨॥

ಉಮಾಪ್ರಸಾದಲಬ್ಧೇಯಂ ಕನ್ಯಕೇಯಂ ಮಮೇತಿ ಸಃ ।
ಲಕ್ಷ್ಮೀನಾಮಾಂಕಿತಾಂ ಚಕ್ರೇ ತೇನ ಸಾತಿತರಾಂ ಬಭೌ ॥೭೩॥

ತತಃ ಸ ಕಸ್ಮೈ ದೇಯೇಯಂ ಕನ್ಯಕಾ ಕಮಲಾನನಾ ।
ಇಯಮಾಜಾನದೇವಾನಾಂ ಗಣಾನಾಮಪಿ ಯಾ ಖಲು ॥೭೪॥

ಅತಃ ಪರಂ ಕರ್ಮದೇವಾಸ್ತಿಷ್ಠಂತಿ ಬಹವಃ ಖಲು ।
ತೇಷು ಕಸ್ಮೈ ಪ್ರದಾತವ್ಯಾ ಕೋ ವಾ ಪ್ರೀತೋ ಭವಿಷ್ಯತಿ ॥೭೫॥

ಇನ್ನು ಇವಳು ವಿಷ್ಣುಲೋಕಕ್ಕೆ ಹೋಗುವಳು. ಅಲ್ಲಿ ಆಕೆಗೆ ಒಳ್ಳೆ ಗೌರವ ಸಿಕ್ಕುತ್ತದೆ. ಅಲ್ಲಿ ಬಹಳ ವರ್ಷಗಳಿದ್ದು ಸಂತೋಷವನ್ನು ಹೊಂದುವಳು.॥೬೯-೭೦॥

ಬಳಿಕ ಈ ಬಿಲ್ಲ ಸ್ತ್ರೀಯು ತನ್ನ ರೂಪಲಾವಣ್ಯಾತಿಶಯದಿಂದ ಮತ್ತು ಅದೃಷ್ಟವಿಶೇಷದಿಂದ ಕ್ಷೀರಸಾಗರನ ಮಗಳಾಗಿ ಜನಿಸುವಳು. ಆ ಸಾಗರನು ಮಗಳನ್ನು ನೋಡಿ ಬಹಳ ಸಂತೋಷವನ್ನು ಹೊಂದುವನು. ಮತ್ತು ತನ್ನ ಮಗಳಾದ ಈಕೆಗೆ ಲಕ್ಷ್ಮೀ ಎಂದು ನಾಮಕರಣವನ್ನು ಮಾಡುವನು. ॥೭೧-೭೨॥

ಪಾರ್ವತಿಯ ಅನುಗ್ರಹದಿಂದ ಲಭಿಸಿದವಳೆಂದು ಸಾಗರನು ಈ ತನ್ನ ಮಗಳಿಗೆ ಲಕ್ಷ್ಮೀ ಎಂದು ಹೆಸರನ್ನಿಡುವನು. ಆ ಹೆಸರಿನಿಂದ ಆಕೆಯು ಅತ್ಯಂತವಾಗಿ ಶೋಭಿಸುವಳು. ಬಳಿಕ ಸಮುದ್ರನು ಕಮಲದಂತೆ ನೇತ್ರವುಳ್ಳ ತನ್ನ ಮಗಳನ್ನು ಯಾರಿಗೆ ಕೊಡಲಿ? ದೇವಗಣಗಳೊಳಗೆ ಈಕೆಗೆ ಯೋಗ್ಯನಾದವನು ಯಾವನಿರುವನು? ಎಂದು ಯೋಚಿಸಲಾರಂಭಿಸುವನು. ॥೭೩-೭೪॥

ಬಳಿಕ ದೇವತೆಗಳನೇಕರು ಸನ್ನಿಹಿತರಾಗುವರು. ಅವರ ಪೈಕಿ ಯಾರಿಗೆ ಕನ್ನಿಕೆಯನ್ನು ಕೊಡಲಿ? ಯಾವನು ಪ್ರೀತನಾಗುವನು? ಎಂದು ಯೋಚಿಸಿ

ಶ್ರೇಷ್ಠೋ ನಾರಾಯಣಸ್ತೇಷು ಕರ್ಮದೇವೇಷ್ವತೋ ಮಯಾ ।
ತಸ್ಮೈ ದೇಯೇಯಮಿತ್ಯೇವ ತಸ್ಮೈ ದಾಸ್ಯತ್ಯಸಂಶಯಃ ॥೨೬॥

ಸಾ ತೇನ ಪರಿಣೀತಾಪಿ ಕಿಯತ್ಕಾಲಂ ಯಥೇಚ್ಛಯಾ ।
ಉಷಿತ್ವಾ ತಾತಸದನೇ ಪುನರ್ವಿಷ್ಣುಸಮನ್ವಿತಾ ॥೨೭॥

ನಾರಾಯಣಸ್ಯ ರಮಣೀ ಸಾ ಲಕ್ಷ್ಮೀರ್ಲಕ್ಷಣಾನ್ವಿತಾ ।
ತನ್ನಾಮಾನಿ ಭವಿಷ್ಯಂತಿ ಬಹೂನಿ ವಿವಿಧಾನ್ಯಪಿ ॥೨೮॥

ಇಂದಿರಾ ಕಮಲಾ ಪದ್ಮಾ ಶ್ರೀರಿತ್ಯಾದೀನಿ ಭೋ ಬುಧಾಃ ।
ಈದೃಶಂ ಭಾಗ್ಯಮನಯಾ ಪ್ರಾಪ್ತಂ ತತ್ಪಾತ್ರಸಂಗಮಾತ್ ॥೨೯॥

ಶಿವನೈವೇದ್ಯಫಲಭುಗ್ಭವೇಜ್ಜನಮನೋಹರಃ ॥೩೦॥

ಕರ್ಮದೇವತೆಗಳಲ್ಲಿ ಶ್ರೀಮನ್ನಾರಾಯಣನೇ ಶ್ರೇಷ್ಠನು, ಆತನಿಗೆ ಕೊಡುವುದು ಒಳ್ಳೆಯದೆಂದು ಸಮುದ್ರರಾಜನು ನಿಶ್ಚೈಸಿ ನಾರಾಯಣನಿಗೆ ತನ್ನ ಮಗಳನ್ನು ಕೊಡುವನು. ಇದು ನಿಜ. ||೨೫-೨೬||

ಆ ಲಕ್ಷ್ಮಿಯು ವಿಷ್ಣುವಿನಿಂದ ಪರಿಗ್ರಹಿಸಲ್ಪಟ್ಟಿದ್ದರೂ ಕೆಲವು ಕಾಲ ಯಥೇಚ್ಛವಾಗಿ ವಿಷ್ಣುವಿನಲ್ಲಿ ವಾಸಮಾಡಿ, ಅನಂತರ ತವರು ಮನೆಗೆ ಹೋಗುವಳು. ಅಲ್ಲಿಯೂ ವಿಷ್ಣುವಿನೊಂದಿಗೇ ಇರುವಳು. ಅವಳು ನಾರಾಯಣನಿಗೆ ಆನಂದವನ್ನುಂಟುಮಾಡುತ್ತಾ ವಿವಿಧ ಲಕ್ಷಣಲಕ್ಷಿತಳಾಗಿ ಕಂಗೊಳಿಸುವಳಲ್ಲದೇ ಆಕೆಗೆ ಅನೇಕ ಹೆಸರುಗಳಾಗುವುವು. ||೨೭-೨೮||

ಎಲೈ ದೇವತೆಗಳಿರಾ, ಆ ಲಕ್ಷ್ಮೀದೇವಿಗೆ ಇಂದಿರೆ, ಕಮಲೆ, ಶ್ರೀ ಎಂದು ಮೊದಲಾದ ಹೆಸರುಗಳು ಪ್ರಸಿದ್ಧವಾಗುವುವು. ಹೀಗೆ ಈ ಭಿಲ್ಲ ಯುವತಿಯು ಶೈವನ ಉಚ್ಛಿಷ್ಟ ಪಾತ್ರಸ್ಪರ್ಶದಿಂದ ಇಂತಹ ಮಾಹಾತ್ಮ್ಯೆಯನ್ನು ಹೊಂದಿದಳು. ಶಿವನೈವೇದ್ಯವಾದ ಫಲಗಳನ್ನು ಭಕ್ಷಿಸಿದವನು ಜನಗಳಿಗೆ ಬೇಕಾದವನಾಗುವನು" ಎಂದು ಬ್ರಹ್ಮನು ದೇವತೆಗಳಿಗೆ ಹೇಳಿದನು ||೨೯-೩೦||

॥ ಶ್ರೀ ಶಂಕರ ಉವಾಚ ॥

ಇತಿ ಬ್ರಹ್ಮವಚಃ ಶ್ರುತ್ವಾ ತತ್ಸಭಾನಿಲಯಾಃ ಸುರಾಃ ।
ಅತಿ ವಿಸ್ಮಯಮಾಪನ್ನಾಃ ಶಿವಧ್ಯಾನರತಾಸ್ಸದಾ ॥೮೧॥

ತಥಾ ಚ ಶಿವನೈವೇದ್ಯಫಲಭೋಜನಪುಣ್ಯತಃ ।
ರೂಪಂ ಪ್ರವರ್ಧತೇ ಭಾಗ್ಯಂ ತತ್ಪ್ರಸಾದಸ್ತು ತಾದೃಶಃ ॥೮೨॥

ಅತಃ ಪರಂ ಕಿಮೇತಸ್ಯ ವರ್ಣನೀಯಂ ಫಲಂ ಮಯಾ ।
ಶಿವಾರ್ಪಿತಸ್ಯಾಪಿ ನೀರಸ್ಯ ಫಲಸ್ಯಾಪಿ ವಿಶೇಷತಃ ॥೮೩॥

ಭೋಜನೇನ ವಿನಷ್ಟಾನಿ ನೈವೇದ್ಯಸ್ಯ ಮಹೇಶ್ವರೇ ।
ಅರ್ಪಿತಸ್ಯಾಶು ಪಾಪಾನಿ ಧರ್ಮಾಶ್ಚ ಸಮುಪಾಗತಾಃ ॥೮೪॥

ಅನೇಕಜನ್ಮತಪಸಾ ಶಿವನೈವೇದ್ಯ(ಮುತ್ತಮಂ)ಭೋಜನಂ ।
ಪ್ರಾಪ್ಯತೇ ದುರ್ಲಭಂ ಪುಂಸಾಂ ದೇವಾನಾಂ ಚ ವಿಶೇಷತಃ ॥೮೫॥

ಈರೀತಿಯಾಗಿ ಬ್ರಹ್ಮನು ಹೇಳಿದ ಮಾತನ್ನು ಕೇಳಿ ಆ ಸಭೆಯಲ್ಲಿರುವ ದೇವತೆಗಳೆಲ್ಲಾ ಆಚ್ಚರಿಪಟ್ಟರು. ಮತ್ತು ಒಡನೆಯೇ ಎಲ್ಲರೂ ಶಿವಧ್ಯಾನಾಸಕ್ತ ರಾದರು. ಒಟ್ಟಿನ ಮೇಲೆ ಶಿವನೈವೇದ್ಯವನ್ನು ಸ್ವೀಕರಿಸಿದರೆ ಮನುಷ್ಯನ ರೂಪು ಹೆಚ್ಚುತ್ತದೆ. ಮತ್ತು ಭಾಗ್ಯಶಾಲಿಯೂ ಆಗುವನು. ಏಕೆಂದರೆ ಶಿವನ ಅನುಗ್ರಹ ಅಂತಹುದು. ॥೮೧-೮೨॥

ಇದಕ್ಕಿಂತಲೂ ಅಧಿಕವಾಗಿ ವರ್ಣಿಸತಕ್ಕದ್ದೇನಿದೆ? ಈಶ್ವರನಿಗೆ ಅಭಿಷೇಕ ಮಾಡಿದ ಜಲಮಹಾತ್ಮ್ಯೆಯೂ ವಿಶೇಷ ಫಲದಾಯಕವಾದುದು. ಈಶ್ವರನಿಗೆ ಸಮರ್ಪಿಸಿದ ನೇವೇದ್ಯಭಕ್ಷಣೆಯಿಂದ ಮಹಾಪಾಪಗಳು ಜಾಗ್ರತೆಯಾಗಿ ನಾಶವಾಗುವುವಲ್ಲದೆ ಪುಣ್ಯವೂ ಲಭಿಸುತ್ತದೆ. ॥೮೩-೮೪॥

ಅನೇಕ ಜನ್ಮ ತಪಸ್ಸು ಮಾಡಿದುದರ ಫಲವಾಗಿ ಶಿವನೈವೇದ್ಯ ಭಕ್ಷಣ ಮಾಡುವ ಸುಯೋಗವು ಲಭಿಸುವುದು. ಮನುಷ್ಯರಿಗೆ ಈ ಸುಯೋಗ ಲಭಿಸುವುದು ದುರ್ಲಭ. ದೇವತೆಗಳಿಗಂತೂ ಮತ್ತೂ ದುರ್ಲಭ. ಈ ಹಿಂದೆ ಶಿವನೈವೇದ್ಯ ಪಾತ್ರೆಯ ಮಹಿಮೆಯನ್ನು ವರ್ಣಿಸಿದುದಾಯಿತು. ಆದರೂ ಈಗ ಹೇಳಿದುದು

ಶಿವನ್ನೈವೇದ್ಯಪಾತ್ರಸ್ಯ ಮಹಿಮಾ ವರ್ಣಿತೋ ಮಯಾ ।
ಆಪಾತತೋ ನ ಸಂಪೂರ್ಣಪೂರ್ಣೋ ವಾಗ್ವಿಷಯೋಽಪಿ ನ ॥೮೬॥

ಇತಿ ತದ್ವಚನಂ ಶ್ರುತ್ವಾ ಸ ವಿಪ್ರೋಽಪಿ ಪ್ರಣಮ್ಯ ತಂ ।
ಸಿದ್ಧಲಿಂಗಾರ್ಚನಂ ಕರ್ತುಂ ಚಕಾರ ಮತಿಮಾದರಾತ್ ॥೮೭॥

ಇದಮೇತಾದೃಶಂ ಲಿಂಗಂ ಸರ್ವಮಂಗಳದಾಯಕಂ ।
ಪೂಜನೀಯಂ ಪ್ರಯತ್ನೇನ ದೇವಾನಾಮಪಿ ದುರ್ಲಭಂ ॥೮೮॥

ಅಸ್ಮಿನ್ ಲಿಂಗೇ ಫಲಂ ನೀರಮನ್ನಂ ವಾ ಯತ್ಸಮರ್ಪಿತಂ ।
ತದ್ಭೋಜನೇನ ಭಾಗ್ಯಾನಿ ಭವಿಷ್ಯಂತ್ಯೇವ ಕೋಟಿಶಃ ॥೮೯॥

ಇತಿ ತದ್ವಚನಂ ಶ್ರುತ್ವಾ ಗಂಧರ್ವನಗರಾಧಿಪಃ ।
ತಲ್ಲಿಂಗಪೂಜನೋದ್ಯುಕ್ತಃ ಸರ್ವಸಾಧನಸಂಯುತಃ ॥೯೦॥

ಮೇಲಿಂದ ಮೇಲೆಯೇ ಹೊರತು ಸಂಪೂರ್ಣವಾಗಲಿಲ್ಲ. ಅದರ ಮಹಿಮೆಯನ್ನು ಸಂಪೂರ್ಣವಾಗಿ ಬಾಯಿಂದ ಹೇಳಲು ಸಾಧ್ಯವಿಲ್ಲ. ಎಂದು ಆ ಶೈವನಾದ ಕಿನ್ನರನು ಬ್ರಾಹ್ಮಣನಿಗೆ ಹೇಳಿದನು. ||೮೫-೮೬||

ಈ ಪ್ರಕಾರ ಶೈವನು ಹೇಳಿದ ಮಾತನ್ನು ಆಲೈಸಿ, ಆ ಬ್ರಾಹ್ಮಣನು ಆವನಿಗೆ ತಲೆಬಾಗಿದನು. ಮತ್ತು ಸಿದ್ಧಲಿಂಗಾರ್ಚನೆ ಮಾಡಬೇಕೆಂದು ಸಂಕಲ್ಪ ಮಾಡಿದನು. ಈ ಸಿದ್ಧಲಿಂಗವು ಸಮಸ್ತ ಕಲ್ಯಾಣವನ್ನೂ ಕೊಡಬಲ್ಲದು. ಆದುದ ರಿಂದ ಬಹಳ ಪ್ರಯತ್ನದಿಂದ ಇದನ್ನು ಪೂಜಿಸಬೇಕು. ದೇವತೆಗಳಿಗೂ ಇದರ ಪೂಜೆ ದುರ್ಲಭ. ||೮೭-೮೮||

ಈ ಲಿಂಗಕ್ಕೆ ಜಲ, ಹಣ್ಣು, ಅನ್ನ ಇವುಗಳಲ್ಲಿ ಯಾವುದನ್ನು ಅರ್ಪಿಸಿದರೂ ಆ ಅರ್ಪಿಸಿದ ವಸ್ತುಭೋಜನದಿಂದ ಕೋಟಿಗಟ್ಟಲೆಯಾಗಿ ಭಾಗ್ಯವಂತನಾಗುವನು, ಅಂದರೆ ಕೋಟ್ಯಾಧೀಶನಾಗುವನು ಎಂದು ಆ ಬ್ರಾಹ್ಮಣನು ಹೇಳಿದನೆಂದು ಶಿವನು ಆ ಭಾಗವನ್ನೇ ಮುಂದುವರಿಸಿದನು. ||೮೯||

ಈರೀತಿ ಹೇಳುವ ಆ ಬ್ರಾಹ್ಮಣನ ಮಾತನ್ನು ಕೇಳಿ ಗಂಧರ್ವನಗರಾಧೀಶ ನಾದ ಕಿನ್ನರನು ಸಿದ್ಧಲಿಂಗಪೂಜೆಗಾಗಿ ತಕ್ಕ ಸಲಕರಣೆಗಳನ್ನೆಲ್ಲಾ ಸಿದ್ಧಗೊಳಿ

ರತ್ನಾದಿಭಿಃ ಸಮಭ್ಯರ್ಚ್ಯ ಸಾಯಂಕಾಲೇ ಮುಹುರ್ಮುಹುಃ ।
ರತ್ನದೀಪಪ್ರಭಾಕೋಟ್ಯೈಃ ಪೂಜಯಾಮಾಸ ಸಾದರಂ ॥೯೧॥

ತತಃ ಸ್ವದಾರಾನಾಹೂಯ ನಾಟ್ಯಾರ್ಥಂ ಲಿಂಗಮಂದಿರೇ ।
ಯೋಜಯಾಮಾಸ ತಾಃ ಸರ್ವಾ ನಾಟ್ಯವಿದ್ಯಾವಿಶಾರದಾಃ ॥೯೨॥

ತೈರೇವ ಗಾನಮಾರಬ್ಧಂ ನಾಟ್ಯಂ ಕೃತ್ವಾ ಪುನಃ ಪುನಃ ।
ರುದ್ರವೀಣಾಂ ಸಮಾದಾಯ ಪ್ರತ್ಯೇಕಂ ಲಿಂಗಮಂದಿರೇ ॥೯೩॥

ರುದ್ರವೀಣಾಧ್ವನಿಂ ಕೃತ್ವಾ ಪವನಾಘಾತಜಂ ಮುಹುಃ ।
ಸಂತುಷ್ಟಾಸ್ತೇ ದುರ್ಲಭೋಽಯಂ ಧ್ವನಿರಿತ್ಯಾಹುರಾದರಾತ್ ॥೯೪॥

ಪ್ರಾರ್ಥನಾ ತೈಃ ಕೃತಾ ತತ್ರ ನಾಟ್ಯಾಂತೇ ಮುಹುರಾದರಾತ್ ।
ಅಸ್ಮಾಸು ರುದ್ರವೀಣಾತ್ವಂ ಭವತ್ವಿತ್ಯತಿಭಕ್ತಿತಃ ॥೯೫॥

ಸಿದನು. ರತ್ನಗಳಿಂದ ಅರ್ಚನೆಮಾಡಿ ಸಾಯಂಕಾಲ ರತ್ನದೀಪೋತ್ಸವವನ್ನೂ ಮಾಡಿಸಿ ಪೂಜಿಸಿದನು. ॥೯೦-೯೧॥

ಬಳಿಕ ಲಿಂಗಮಂದಿರದಲ್ಲಿ ನರ್ತನಮಾಡಿಸುವುದಕ್ಕಾಗಿ ಆ ಗಂಧರ್ವನು ತನ್ನ ಕಾಂತೆಯರನ್ನು ಕರೆಯಿಸಿದನು. ನಾಟ್ಯವಿದ್ಯೆಯಲ್ಲಿ ಕುಶಲರಾದ ಅವರು ನಾಟ್ಯಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಹೊಂದಿಸಿಕೊಂಡರು. ಅವರೇ ಪುನಃ ಪುನಃ ಕುಣಿಯುತ್ತಾ ಹಾಡಿದರು. ಒಬ್ಬೊಬ್ಬರೂ ಪ್ರತ್ಯೇಕವಾಗಿ ರುದ್ರವೀಣೆಯನ್ನು ಬಾರಿಸುತ್ತಾ ನಾಟ್ಯವಾಡಿದರು. ॥೯೨-೯೩॥

ಆ ಗಂಧರ್ವಯುವತಿಯರು ರುದ್ರವೀಣೆಯನ್ನು ಕೈಯಲ್ಲಿ ಹಿಡಿದು ಬಾರಿಸ ತೊಡಗಿದರು. ಆಗ ಗಾಳಿಯ ಹೊಡೆತದಿಂದ ಸುಮನೋಹರಧ್ವನಿಯು 'ಆ ವೀಣೆ ಯಿಂದ ಹೊರಡುತ್ತಿತ್ತು. ಆ ಧ್ವನಿಯಿಂದವರು ಸಂತೋಷಪಟ್ಟು ಇಂತಹ ನಾದವು ದುರ್ಲಭ ಎಂದರು. ನಮ್ಮಲ್ಲಿಯೂ ರುದ್ರವೀಣೆಯಂತಹ ಕಂಠಧ್ವನಿಯು ಉಂಟಾ ಗಲಿ ಎಂದು ಭಕ್ತಿಯಿಂದ ನಾಟ್ಯ ಮುಗಿದನಂತರ ಬೇಡಿಕೊಂಡರು. ಬಾರಿಬಾರಿಗೂ ರುದ್ರವೀಣಾಧ್ವನಿಯಂತೆ ತಮ್ಮ ಕಂಠಧ್ವನಿ ಉತ್ಪನ್ನವಾಗಲೆಂದು ಪ್ರಾರ್ಥಿಸು ತ್ತಿದ್ದರು. ಅಲ್ಲದೆ ರುದ್ರವೀಣಾಧರ್ಮವೇ ನಮಗೆ ಲಭಿಸಲಿ ಎಂದೂ ಕೇಳಿಕೊಂಡರು. ॥೯೪-೯೫॥

ತತಃ ಪರಂ ಸ ಸಿದ್ಧೇಶಸ್ವರೂಪೇಣ ಮಯಾ ಶಿವೇ ।
ತಥಾಸ್ತ್ವಿತಿ ವರೋ ದತ್ತಸ್ತೇನ ಜಾತಾಸ್ತಥೈವ ತೇ ॥೯೬॥

ತೇ ಸರ್ವೇ ರುದ್ರವೀಣಾತ್ವಂ ಪ್ರಾಪ್ತಾತ್ರ ಮಮ ಮಂದಿರೇ ।
ತಿಷ್ಠಂತಿ ಗಿರಿಜೇ ಪಶ್ಯ ಶೃಣು ತದ್ಧ್ವನಿಮಾದರಾತ್ ॥೯೭॥

ಇತಿ ತದ್ವಚನಂ ಶ್ರುತ್ವಾ ಗೌರೀ ಸಂತುಷ್ಟಮಾನಸಾ ।
ವಿಹಾರೇ ನಿರತಾ ಜಾತಾ ತದ್ಧ್ವನಿಶ್ರವಣೋತ್ಸವೈಃ ॥೯೮॥

ವಸಂತೋತ್ಸವಸಂಪನ್ನಾ ಕಸ್ತೂರೀಕರ್ದಮಾದಿಭಿಃ ।
ಸಮಾಕ್ರಾಂತಾ ಮಹೇಶೋಪಿ ತೈರಾಕ್ರಾಂತೋ ಮುಹುರ್ಮುಹುಃ॥೯೯॥

ಸರಃ ಪರಂ ಸಮಾಸಾದ್ಯ ಫುಲ್ಲರಾಜೀವರಾಜಿತಂ ।
ಮಣಿಸೋಪಾನಸಂಬದ್ಧಂ ಜಲಕ್ರೀಡಾಂ ಚಕಾರ ಸಃ ॥೧೦೦॥

ಎಲೌ ಪಾರ್ವತಿಯೇ, ಬಳಿಕ ಸಿದ್ಧೇಶಸ್ವರೂಪಿಯಾದ ನಾನು ಹಾಗೆಯೇ ಆಗಲೆಂದು ಅವರಿಗೆ ವರವಿತ್ತೆನು. ಹಾಗೆಯೇ ಅವರೆಲ್ಲಾ ರುದ್ರವೀಣೆಗಳಾಗಿ ಜನಿಸಿದರು. ಅವರೆಲ್ಲರೂ ನನ್ನ ಭವನದಲ್ಲಿ ರುದ್ರವೀಣೆಗಳಾಗಿ ಇದ್ದಾರೆ. ಅಗೋ! ನೋಡು, ಅವುಗಳ ಧ್ವನಿಯನ್ನು ಆದರದಿಂದ ಆಲೈಸು ಎಂದು ಶಿವನು ಪಾರ್ವತಿಗೆ ಹೇಳಿದನು. ॥೯೬-೯೭॥

ಈ ರೀತಿ ಹೇಳಿದ ಶಿವನ ಮಾತನ್ನು ಕೇಳಿ ಗೌರಿಯು ಸಂತೋಷಚಿತ್ತಳಾಗಿ ಆ ರುದ್ರವೀಣೆಯನ್ನು ಬಾರಿಸಿ ಅದರ ಧ್ವನಿಯನ್ನು ಕೇಳತಕ್ಕ ಕುತೂಹಲದಲ್ಲಿ ಆಸಕ್ತಳಾದಳು. ಅದು ವಸಂತಕಾಲವಾದುದರಿಂದ ವಸಂತೋತ್ಸವದಲ್ಲಿ ನಿರತ ಳಾದಳು. ಮತ್ತು ಮೈಗೆ ಕಸ್ತೂರೀ ಗಂಧವನ್ನು ಬಳಿದುಕೊಂಡಳು. ಪರಮೇಶ್ವರನೂ ಕೂಡ ಹಾಗೆಯೇ ಮಾಡಿಕೊಂಡನು. ॥೯೮-೯೯॥

ಶಂಕರನು ಅರಳಿದ ಕಮಲಗಳಿಂದ ತುಂಬಿ, ನೋಡಲು ಅಂದವಾದ, ಮಣಿಮಯ ಮೆಟ್ಟಲುಗಳಿಂದ ಕೂಡಿದ ರಮಣೀಯವಾದ ಸರೋವರಕ್ಕೆ ದೇವಿ ಯೊಡನೆ ಹೋಗಿ ಜಲಕ್ರೀಡೆಯನ್ನಾಡಿದನು. ॥೧೦೦॥

ಸ ಜಲಕ್ರೀಡಯಾ ಶ್ರಾಂತಸ್ತತ್ರೈವ ಮಣಿಮಂಟಪೇ ।
ರತ್ನಸಿಂಹಾಸನಾಕ್ರಾಂತೇ ಸ್ಥಿತೋ ಗಿರಿಜಯಾ ಸಹ ॥೧೦೧॥

ತತೋ ದಿವ್ಯದುಕೂಲಾನಿ ಪರಿಧಾಯ ಮಹೇಶ್ವರಃ ।
ಅಂಬಯಾ ಸಹ ದಿವ್ಯೈಶ್ಚ ಭೂಷಣೈರ್ಭೂಷಿತಃ ಶಿವಃ ॥೧೦೨॥

ಅಂಗರಾಗಂ ಚಕಾರಾಶು ಘನಸಾರದ್ರವಾದಿಭಿಃ ।
ರರಾಜ ಗೌರೀ ತೈರೇವ ಮಂಗಳಾಪತಿಸಂಯುತಾ ॥೧೦೩॥

ತತಃ ಪ್ರಾಸಾದಮತ್ಯುಚ್ಚಂ ಕುಂದಮಂದಾರರಂಜಿತಂ ।
ತೈರೇವ ರಚಿತಂ ಪ್ರಾಪ ಯೋಜನಾರ್ಬುದಮುನ್ನತಂ ॥೧೦೪॥

ತತ್ರ ಸ್ಥಿತ್ವಾ ಮಹಾದೇವಸ್ತಯಾ ಗಿರಿಜಯಾ ಸಹ ।
ರೇಮೇ ಸಪರಮಾನಂದವಿಗ್ರಹೋ ಮುಹುರಾದರಾತ್ ॥೧೦೫॥

ಆ ಶಿವನು ಜಲಕ್ರೀಡೆಯನ್ನು ಆಡಿ ಆಯಾಸಪಟ್ಟು ಅಲ್ಲಿಯೇ ಹತ್ತಿರವಿರುವ ಮಣಿಮಂಟಪದಲ್ಲಿದ್ದ ರತ್ನಸಿಂಹಾಸನದಲ್ಲಿ ಗಿರಿಜೆಯೊಡನೆ ವಿಶ್ರಮಿಸಿಕೊಂಡನು. ಅನಂತರ ಬೆಲೆಬಾಳುವ ದಿವ್ಯ ಪತ್ತಲಗಳನ್ನು ಧರಿಸಿದನು. ಹಾಗೆಯೇ ಆ ಮಹೇಶ್ವರ ಮತ್ತು ಪಾರ್ವತಿ ಇವರಿಬ್ಬರೂ ಅನೇಕ ದಿವ್ಯಾಭರಣಗಳಿಂದ ಅಲಂಕೃತರಾದರು. ॥೧೦೧-೧೦೨॥

ಘನಸಾರದ್ರವದಿಂದ ಅಂಗರಾಗವನ್ನು ಲೇಪಿಸಿಕೊಂಡರು ಆಗ ಗೌರಿಯು ಅಂಗರಾಗದಿಂದ ಬಹುಮಟ್ಟಿಗೆ ಶೋಭಿಸಿದಳು. ಬಳಿಕ ಅತಿ ಉನ್ನತವಾದ ಕುಂದ ಮಂದಾರಪುಷ್ಪಗಳಿಂದ (ಲತೆಗಳಿಂದ) ಮನೋಹರವಾಗಿರುವ ಆ ಗೌರೀಶಂಕರರೇ ನಿರ್ಮಿಸಿದ್ದ, ಒಂದು ಯೋಜನ ಅಗಲ, ಅರ್ಧಬುರ್ದ ಎತ್ತರವಿದ್ದ ದೊಡ್ಡ ಭವನವೊಂದನ್ನು ಪ್ರವೇಶಮಾಡಿದರು. ॥೧೦೩-೧೦೪॥

ಅಂತಹ ದೊಡ್ಡ ಭವನದಲ್ಲಿ ದೇವಿಯೊಡನೆ ಪರಮಾನಂದಮೂರ್ತಿಯಾದ ಶಿವನು ರಮಿಸಿದನು. ॥೧೦೫॥

ಪಾಪಾರಣ್ಯದವಾನಲೋ ಜನಿಜರಾಸಂಸಾರಹಾಲಾಹಲೋ
ರೋಗೋದ್ವೇಗಪತಂಗಭಂಗನಳಿಕಾಸಂಘಾತಕೋಲಾಹಲೈಃ ।
ದುಷ್ಕಾರಿಷ್ಟಸದರ್ಪಸರ್ಪಕುಹರಾಪಾರಾಚಲಾನಂದಲಃ
ಕಾಲಃ ಕೋಽಪಿ ಕಿಲಾಪದಾಮಪಿ ಕಥಾ ಯಾ ಕಾಲಕಾಲಸ್ಯ ಸಾ ॥೧೦೬॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಭಿಲ್ಲವನಿತಾವೃತ್ತಾಂತವರ್ಣನೇ ಶಿವನೈವೇದ್ಯಮಹಿಮಾ ಕಥನಂ ನಾಮ ತ್ರಯೋವಿಂಶೋಽಧ್ಯಾಯಃ

ಒಟ್ಟಿನಲ್ಲಿ ಶ್ರೀಶಂಕರನು ಪಾಪಗಳೆಂಬ ಅರಣ್ಯಕ್ಕೆ ಕಾಡುಕಿಚ್ಚಿನಂತಿರುವನು. ಜನನ, ಮರಣ, ಬಾಲ್ಯ, ಯೌವನ, ವಾರ್ಧಕ್ಯ ಮುಂತಾದ ಅವಸ್ಥೆಗಳಿಂದ ಮತ್ತು ಈ ಸಂಸಾರವೆಂಬ ಹಾಲಾಹಲವಿಷಪಾನದಿಂದ ಜನಗಳಲ್ಲಿ ರಾಗ, ದ್ವೇಷ, ಅಸೂಯೆ ಮುಂತಾದುವು ಹುಟ್ಟುವುವು. ಅವುಗಳನ್ನು ನಾಶಮಾಡಲು ಈಶ್ವರನೊಬ್ಬನೇ ಸಮರ್ಥನು. ಬಂದೂಕಿನ ಶಬ್ದವನ್ನು ಕೇಳಿದ ಕೂಡಲೇ ಹಕ್ಕಿಗಳು ಹಾರಿಹೋಗುವ ಹಾಗೆ ಈಶ್ವರನ ನಾಮಸ್ಮರಣೆಯಿಂದ ದುಷ್ಕಾರಿಷ್ಟಗಳ ದರ್ಪವು ನಾಶವಾಗುತ್ತದೆ. ಹೀಗೆ ಜಗತ್ತಿನಲ್ಲಿ ಸುಖದುಃಖಗಳು ಒಂದು ಕಾಲದಲ್ಲಿ ಪ್ರವೃದ್ಧವಾಗುತ್ತವೆ. ಮತ್ತೊಂದು ಕಾಲದಲ್ಲಿ ಕ್ಷೀಣವಾಗುತ್ತವೆ. ಈ ಸಂಸಾರಸಾಗರದಿಂದ ಮುಕ್ತನಾಗ ಬೇಕಾದರೆ ಶಿವನ ಆರಾಧನೆಯೇ ಮುಖ್ಯ ಕಾರಣ. ||೧೦೬||

ಇಲ್ಲಿಗೆ ಶ್ರೀಶಿವರಹಸ್ಯದ ಹರ ಎಂಬ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಭಿಲ್ಲಸ್ತ್ರೀಯ ಮಹಿಮಾವರ್ಣನೆಯಲ್ಲಿ ಶಿವೋಚ್ಛಿಷ್ಟಪಾತ್ರಸ್ಪರ್ಶ ಮಹಿಮೆ ಎಂಬ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಚತುರ್ವಿಂಶೋಽಧ್ಯಾಯಃ

॥ ವ್ಯಾಸ ಉವಾಚ ॥

ತತ್ರ ಸಿಂಹಾಸನಾಸೀನಂ ಮಹೇಶಾನಮುಮಾ ಮುಹುಃ ।
ಆಲಿಂಗ್ಯಾಲಿಂಗನೈಸ್ತುಷ್ಟಮಷ್ಟಮೂರ್ತಿಮುವಾಚ ಸಾ ॥೧॥

॥ ಪಾರ್ವತ್ಯುವಾಚ ॥

ಭಗವನ್ ಸತ್ಯಲೋಕೋಽಪಿ ತ್ವಯಾ ಸೃಷ್ಟೋ ಮಹಾಪ್ರಭೋ ।
ತಸ್ಯ ಲೋಕಸ್ಯ ಮಹಿಮಾ ಮಹಾನೇವಾನುವರ್ತತೇ ॥೨॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಬಳಿಕ ಆ ರತ್ನಮಂಟಪದಲ್ಲಿ ಸಿಂಹಾಸನವನ್ನು ಅಲಂಕರಿಸಿರುವ ಆ ಮಹೇಶ್ವರನನ್ನು ಪಾರ್ವತಿಯು ಪುನಃ ಪುನಃ ಆಲಿಂಗಿಸಿದಳು. ಹೀಗೆ ಆಲಿಂಗನದಿಂದ ಪ್ರಸನ್ನನಾದ ಆ ಅಷ್ಟಮೂರ್ತಿಸ್ವರೂಪನಾದ (ಪೃಥಿವೀ, ಜಲ, ತೇಜಸ್ಸು, ವಾಯು ಆಕಾಶ, ಸೂರ್ಯ, ಚಂದ್ರ ಸೋಮಯಾಗಮಾಡಿದವನು ಈ ಎಂಟು ಜನರ ಅಂಶವೇ ಈಶ್ವರನ ಸ್ವರೂಪವೆಂದು ಪ್ರಸಿದ್ಧಿ ಇದೆ. ಅದರಿಂದ ಇವನಿಗೆ ಅಷ್ಟಮೂರ್ತಿ ಎಂದು ಹೆಸರಾಯಿತು.) ಶಂಕರನನ್ನು ಕುರಿತು ಗೌರಿಯು ಹೀಗೆಂದಳು, ಎಂದು ವ್ಯಾಸಮಹರ್ಷಿಗಳು ಮುನಿವರ್ಗಕ್ಕೆ ತಿಳಿಸಿದರು. ॥೧॥

ಪೂಜ್ಯನೇ, ನೀನು ಸತ್ಯಲೋಕವನ್ನು ಸೃಷ್ಟಿಮಾಡಿದೆ. ಆ ಲೋಕದ ಮಾಹಾತ್ಮ್ಯ ಮಹತ್ತರವೆಂದು ಕೇಳಿಬರುತ್ತದೆ. ಆ ಲೋಕದಲ್ಲಿ ವಾಸಿಸಲು

ತನ್ನಿವಾಸಸ್ಯ ಹೇತುಃ ಕಸ್ತಸ್ಯ ಲೋಕಸ್ಯ ಕಸ್ತ್ವಯಾ ।
ಪಾಲನಾಯ ನಿಯುಕ್ತೋಽಸ್ತಿ ತೇನ ಪುಣ್ಯಂ ಚ ಕಿಂ ಕೃತಂ ॥೩॥

ಇದಂ ಸರ್ವಂ ವಿಶೇಷೇಣ ಶ್ರೋತವ್ಯಂ ಫಾಲಲೋಚನ ।
ಕಿಯತ್ಕಾಲಮುಪಸ್ಥಾನಂ ತತ್ರ ತಸ್ಯ ಭವಿಷ್ಯತಿ ॥೪॥

ಇತಿ ತದ್ವಚನಂ ಶ್ರುತ್ವಾ ಮಧುರಂ ಚ ಮನೋಹರಂ ।
ಶಂಕರೋಽಪಿ ಸುಧಾರೂಪಾಂ ಗಿರಮಾಹ ಶಿವಾಂ ಪ್ರತಿ ॥೫॥

॥ ಶ್ರೀಶಿವ ಉವಾಚ ॥

ಸತ್ಯಲೋಕೋಽಪಿ ದುಷ್ಪ್ರಾಪ್ಯಃ ಸರ್ವೇಷಾಮಪಿ ಸರ್ವಥಾ ।
ಸುಮೇರುಮಧ್ಯಭಾಗಸ್ಥಃ ಮದ್ವಿಲಾಸಾಶ್ರಯಃ ಪುರಾ ॥೬॥

ತಸ್ಮಿನ್ ಲೋಕೇ ಮನೋಜ್ಞಾನಿ ವನಾನಿ ಸವನಾನ್ಯಪಿ ।
ಜಲಕಲ್ಲೋಲಲೋಲಾನಿ ವಿಮಲಾನಿ ಸರಾಂಸ್ಯಪಿ ॥೭॥

ಕಾರಣವೇನಿರಬೇಕು? ಆ ಲೋಕದ ರಕ್ಷಣೆಗಾಗಿ ಯಾರನ್ನು ನಿಯಮಿಸಿರುವೆ? ನಿಯುಕ್ತನಾದ ಆ ಪುರುಷನು ಪುಣ್ಯಕರ್ಮವನ್ನೇನು ಮಾಡಿರುವನು? ॥೨-೩॥

ಎಲೈ ಫಾಲನೇತ್ರನೇ, ಇದೆಲ್ಲವನ್ನು ವಿಶೇಷವಾಗಿ ತಿಳಿದುಕೊಳ್ಳಬೇಕೆಂದು ಇಚ್ಛೆ ನನಗಿದೆ. ಮತ್ತು ಆ ಲೋಕಪಾಲನೆಗಾಗಿ ನಿಯುಕ್ತನಾದಪುರುಷನು ಎಷ್ಟು ಕಾಲ ಅಲ್ಲಿರುವನು? ಇವೆಲ್ಲವನ್ನೂ ಕೇಳಬಯಸುತ್ತೇನೆ. ದಯೆಯಿಂದ ಹೇಳಬೇಕು ಎಂದು ಪಾರ್ವತಿಯು ಕೇಳಿಕೊಂಡಳು. ॥೪॥

ಹೀಗೆ ಪಾರ್ವತಿಯು ಹೇಳಿದ ಮನಸ್ಸಿಗೆ ಸಂತೋಷಕರವಾದ ಮತ್ತು ಲಲಿತವಾದ ಮಾತನ್ನು ಕೇಳಿ ಶಿವನೂ ಕೂಡ ಅಮೃತಮಯವಾದ ವಾಣಿಯಿಂದ ಪಾರ್ವತಿಯೊಡನೆ ಮಾತನಾಡಿದನು. ॥೫॥

ಸತ್ಯಲೋಕಪ್ರಾಪ್ತಿಯು ಎಲ್ಲರಿಗೂ ಸುಲಭವಲ್ಲ. ಅದು ಮೇರುಪರ್ವತದ ಮಧ್ಯಭಾಗದಲ್ಲಿದೆ. ಹಿಂದೆ ನಾನು ಅಲ್ಲಿ ವಿಹರಿಸುತ್ತಿದ್ದೆನು. ಆ ಲೋಕದಲ್ಲಿ ಸೊಂಪಾದ ಅನೇಕ ವನಗಳಿವೆ. ಅಲ್ಲದೆ ಚಿಕ್ಕ ಚಿಕ್ಕ ಉಪವನಗಳೂ ಹೇರಳವಾಗಿವೆ. ನೀರಿನ ಅಲೆಗಳಿಂದ ಮನೋಹರವಾದ ಮತ್ತು ಸ್ವಚ್ಛವಾದ ಸರೋವರಗಳೂ ಇವೆ. ॥೬-೭॥

ಉತ್ಫುಲ್ಲಾನಿ ಸರೋಜಾನಿ ಸರ್ವದಾ ತೇಷು ಸಂತ್ಯುಮೇ ।
ಮಂದಾರತರವಸ್ತತ್ರ ಕೋಟಿಶಃ ಕಮಲಾನನೇ ॥೮॥

ತತ್ರಾಪಿ ಸಂತಿ ಗಿರಿಜೇ ರತ್ನಮಂದಿರಕೋಟಯಃ ।
ತೇಷು ತಿಷ್ಠಂತಿ ಲಿಂಗಾನಿ ಮನೋಜ್ಞಾನಿ ಮನೋರಮೇ ॥೯॥

ತದಾಲೋಕನಮಾತ್ರೇಣ ಶುಭವೃದ್ಧಿಃ ಪ್ರಜಾಯತೇ ।
ತತ್ಪೂಜಯಾ ಮಂಗಳಾನಿ ಭವಂತ್ಯೇವ ಪ್ರತಿಕ್ಷಣಂ ॥೧೦॥

ತತ್ರ ನ ಕ್ಷುಧಯಾ ಪೀಡಾ ತೃಷಯಾ ವಾ ವರಾನನೇ ।
ತತ್ರ ಸ್ಥಿತಂ ಪುರಾ ಗೌರಿ ವಿಹಾರಾಯ ಮಯಾ ತದಾ ॥೧೧॥

ಆಗತಂ ನಂದಿಕೇಶೇನ ಕೈಲಾಸಾತ್ತ್ವರಯಾ ಶಿವೇ ।
ಕುತ್ರ ಕ್ರೀಡತಿ ದೇವೇಶ ಶಿವ ಇತ್ಯಾಕುಲಸ್ತದಾ ॥೧೨॥

ತತ್ರ ಸಿಂಹಾಸನಾರೂಢಂ ದೇವಬಂದಿಗಣಸ್ತುತಂ ।
ಮನೋಜ್ಞವೇಷಂ ಗೀರ್ವಾಣವಾಣೀಸಂಸ್ತುತಮಾದರಾತ್ ॥೧೩॥

ಆ ಕೊಳಗಳಲ್ಲಿ ಎಲ್ಲಾ ಕಾಲಗಳಲ್ಲೂ ಕಮಲಗಳು ಅರಳಿಯೇ ಇರುತ್ತವೆ. ಅಲ್ಲಿ ಮಂದಾರವೃಕ್ಷಗಳು ಹೇರಳವಾಗಿವೆ. ಎಲೌ ಗಿರಿಜೆಯೇ, ಅನೇಕ ಕೋಟಿ ರತ್ನಭವನಗಳು ಇಲ್ಲಿ ಇವೆ. ಕಮಲಲೋಚನಳಾದ ಉಮೆಯೇ, ಅಲ್ಲಿಯೂ ಕೂಡ ಮನಸ್ಸನ್ನು ಆಕರ್ಷಿಸುವಂತಹ ಅಸಂಖ್ಯಾತಲಿಂಗಗಳು ಪ್ರತಿಷ್ಠಿತಗಳಾಗಿವೆ. ॥೯॥

ಆ ಲಿಂಗಗಳ ದರ್ಶನದಿಂದ ನಮಗೆ ಒಳ್ಳೆಯದಾಗುವುದು. ಅವುಗಳನ್ನು ಪೂಜೆಮಾಡಿದರೆ ಪ್ರತಿಕ್ಷಣದಲ್ಲಿಯೂ ಮಂಗಳವು ಉಂಟಾಗುತ್ತದೆ. ಆ ಲೋಕದಲ್ಲಿ ಹಸಿವು, ಬಾಯಾರಿಕೆ ಇವುಗಳ ಬಾಧೆಯೇ ಇಲ್ಲ. ಎಲೌ ಸುಂದರಿ, ಹಿಂದೆ ನಾನು ವಿಹಾರಕ್ಕಾಗಿ ಆ ಸ್ಥಳದಲ್ಲಿ ಇದ್ದೆನು. ॥೧೦-೧೧॥

ಆಗ ನಂದಿಕೇಶ್ವರನು ಕೈಲಾಸಕ್ಕೆ ಹೋಗಬೇಕೆಂದು ಅವಸರಪಟ್ಟು ನಮ್ಮ ಸ್ವಾಮಿಯು ಎಲ್ಲಿ ಕ್ರೀಡಿಸುತ್ತಿರುವನು ಎಂದು ಯೋಚಿಸುತ್ತಾ ನನ್ನನ್ನು ಹುಡುಕಿಕೊಂಡು ಬಂದನು. ಆಗ ನಾನು ಸಿಂಹಾಸನದಲ್ಲಿ ಮಂಡಿಸಿದ್ದೆನು. ದೇವತೆಗಳೆಲ್ಲಾ ಸ್ತೋತ್ರಮಾಡುತ್ತಿದ್ದರು. ರಮಣೀಯವಾದ ಉಡುಪನ್ನು ಧರಿಸಿದ್ದೆನು. ಎಲ್ಲರೂ ದೇವಭಾಷೆಯಿಂದ ನನ್ನನ್ನು ಹೊಗಳುತ್ತಿದ್ದರು. ॥೧೨-೧೩॥

ಆಗತ್ಯ ದಂಡವನ್ನಂದೀ ಪ್ರಣತೋ ಭಕ್ತಿಪೂರ್ವಕಂ ।
ವಿನಯಾವನತಃ ಪ್ರಾಹ ಕೃತಾಂಜಲಿಪುಟಃ ಶಿವೇ ॥೧೪॥

॥ ನಂದಿಕೇಶ್ವರ ಉವಾಚ ॥

ಭಗವನ್ ದೇವದೇವೇಶ ಸರ್ವಲೋಕಮಹೇಶ್ವರ ।
ಕೋಽಯಂ ವಿಲಾಸೋ ಭಗವನ್ನವಸ್ಥಾನಮಿದಂ ಕಥಂ ॥೧೫॥

ಯಾದೃಶೀ ರಚನಾ ಶಂಭೋ ಕೈಲಾಸದ್ವಾರಮಂದಿರೇ ।
ನ ತತ್ಕೋಟ್ಯಂಶಕೋಟ್ಯಂಶಕೋಟ್ಯಂಶೋಽಪ್ಯತ್ರ ಶಂಕರ ॥೧೬॥

ಕೈಲಾಸೋಪವನೇ ಶೋಭಾ ಸಾ ಶೋಭಾ ಭುವನೇಷು ನ ।
ತತ್ರ ಮಂದಾರತರವೋ ಜಾಯಮಾನಾಃ ಫಲಾನ್ವಿತಾಃ ॥೧೭॥

ಮಂದಾರಾಂಕುರಸಂಜಾತಫಲಾನಾಂ ಗಣನಾಪಿ ನ ।
ಪ್ರಸೂನೈಃ ಸಹ ಜಾಯಂತೇ ಮಂದಾರಾಂಕುರಕೋಟಯಃ ॥೧೮॥

ಅಷ್ಟುಹೊತ್ತಿಗೆ ನಂದೀಶ್ವರನು ಅಲ್ಲಿಗೆ ಬಂದನು. ಬಂದವನೇ ಉದ್ದಕ್ಕೆ ದಂಡಪ್ರಣಾಮವನ್ನು ಮಾಡಿ ವಿನಯದಿಂದ ತಲೆಬಾಗಿ ಕೈಜೋಡಿಸಿಕೊಂಡು ಹೀಗೆ ಹೇಳತೊಡಗಿದನು. ||೧೪||

ಪೂಜ್ಯನೇ, ಸಮಸ್ತ ಲೋಕಗಳಿಗೂ ಒಡೆಯನು ನೀನು. ಇಲ್ಲಿ ಇದೆಂತಹ ನಿನ್ನ ವಿಲಾಸ! ಹೇಗೆ ನೀನು ಇಲ್ಲಿ ವಾಸಮಾಡುತ್ತೀಯೆ! ಕೈಲಾಸದ ಬಾಗಿಲಿನಲ್ಲಿರುವ ಭವನಗಳಲ್ಲಿ ಎಂತಹ ಸುಂದರವಾದ ರಚನೆಗಳಿರುವುವು! ಅಲ್ಲಿರ ತಕ್ಕ ಸೌಂದರ್ಯದ ಕೋಟಿಗಳ ಕೋಟಿಪಾಲಿನ ಕೋಟಿಭಾಗವಾದರೂ ಇಲ್ಲಿ ತೋರಲಾರದು. ||೧೫-೧೬||

ಕೈಲಾಸಪರ್ವತದಲ್ಲಿರುವ ಉದ್ಯಾನಗಳ ಸೌಂದರ್ಯಕ್ಕೆ ಸಮನಾದ ಸೊಗಸು ಹದಿನಾಲ್ಕು ಲೋಕಗಳಲ್ಲಿಯೂ ಇರಲಾರದು. ಅಲ್ಲಿ ಮಂದಾರ ವೃಕ್ಷಗಳು ಹೇರಳವಾಗಿ ಬೆಳೆದಿವೆ. ಅಲ್ಲದೆ ಅನೇಕ್ಲಾ ಫಲಭರಿತಗಳಾಗಿವೆ. ಲೆಕ್ಕವಿಲ್ಲ ದಷ್ಟು ಮಂದಾರದ ಚಿಗುರುಗಳು ಸೊಂಪಾಗಿವೆ. ಹೂಗಳೊಂದಿಗೇ ಕೋಟಿಗಟ್ಟಲೆ ಮಂದಾರತಳಿರುಗಳು ಹುಟ್ಟುತ್ತವೆ. ||೧೭-೧೮||

ತದಂಕುರಫಲಸ್ಯಾಪಿ ಯೋ ರಸಃ ಸ ಸುಧಾರಸಂ ।
ತಿರಸ್ಕರೋತಿ ಸಹಸಾ ತನ್ಮಾಧುರ್ಯಂ ಕ್ವ ವರ್ತತೇ ॥೧೯॥

ತದಂಕುರಪ್ರಸೂನಾನಾಂ ಗಂಧಲೇಶೋಽಪಿ ವಸ್ತುತಃ ।
ಕಸ್ತೂರೀಗಂಧಸಂದೋಹತಿರಸ್ಕಾರಕರಃ ಖಲು ॥೨೦॥

ಕುಂದಾದೀನಿ ಪ್ರಸೂನಾನಿ ಭವಂತ್ಯೇವ ಪ್ರತಿಕ್ಷಣಂ ।
ತದುತ್ಪತ್ತಿಃ ಕದಾಪೀಶ ಪ್ರತಿಬದ್ಧಾ ನ ಸರ್ವಥಾ ॥೨೧॥

ಅನ್ಯೇಷಾಮಪಿ ಪುಷ್ಪಾಣಾಂ ಧಾರಾರೂಪಾ ಜನಿಃ ಖಲು ।
ಅಖಂಡಬಿಲ್ವಪತ್ರಾಣಿ ಜಾಯಂತೇಽಪಿ ತದಂಕುರೈಃ ॥೨೨॥

ಬಿಲ್ವಾಂಕುರೈಃ ಸಮಾಗತ್ಯ ಶಿವಲಿಂಗಸ್ಯ ಪೂಜನಂ ।
ಕ್ರಿಯತೇ ಬಿಲ್ವಪತ್ರಾದ್ಯೈಸ್ತದತೀವ ಮನೋಹರಂ ॥೨೩॥

ಮರಂದಧಾರಾಸಿಕ್ತಾನಿ ಶಿವಲಿಂಗಾನಿ ಕೋಟಿಶಃ ।
ಬಿಲ್ವಾದಿಭಿಃ ಪೂಜಿತಾನಿ ಪ್ರಸನ್ನಾನಿ ಮಹೇಶ್ವರ ॥೨೪॥

ಆ ಮಂದಾರವೃಕ್ಷದ ಚಿಗುರು ಮತ್ತು ಹಣ್ಣು ಇವುಗಳ ರುಚಿಯು ಅಮೃತ ರಸಾಸ್ವಾದದ ಸವಿಯನ್ನೂ ಮೀರಿಸಿವೆ. ಆ ಮಂದಾರಚಿಗುರು ಮತ್ತು ಹೂಗಳ ಪರಿಮಳವು ವಾಸ್ತವಿಕವಾಗಿ ಕಸ್ತೂರೀ ಪರಿಮಳಕ್ಕಿಂತಲೂ ಹಿತಕರವಾಗಿದೆ. ಆ ಮಣ್ಣಿನ ಮಾಧುರ್ಯವು ಬೇರೆ ಯಾವ ಹಣ್ಣಿನಲ್ಲಿ ತಾನೇ ಸಿಕ್ಕೀತು ? ||೧೯-೨೦||

ಮಾಗೀಮಲ್ಲಿಗೆ ಮೊದಲಾದ ಅನೇಕ ಹೂಗಳು ಪ್ರತಿಕ್ಷಣದಲ್ಲಿಯೂ ಅಲ್ಲಿ ಅರಳಿರುತ್ತವೆ. ಆ ಹೂಗಳ ಉತ್ಪತ್ತಿಯು ಯಾವ ಕಾಲದಲ್ಲಿಯೂ ಕ್ಷಯಿಸುವುದಿಲ್ಲ. ಇನ್ನೂ ಇತರ ಅನೇಕ ಹೂಗಳು ಧಾರಾಕಾರವಾಗಿ ಅಲ್ಲಿ ಬಿಡುತ್ತವೆ. ಬಿಲ್ವಪತ್ರೆಗಳಂತೂ ಅವಿಚ್ಛಿನ್ನಗಳಾಗಿವೆ. ಆ ವನವು ಬಿಲ್ವಚಿಗುರುಗಳಿಂದ ತುಂಬಿದೆ. ||೨೧-೨೨||

ಎಲೈ ಮಹೇಶ್ವರನೇ, ಬಿಲ್ವತಳಿರುಗಳನ್ನು ತಂದು ಶಿವಲಿಂಗಪೂಜೆಮಾಡುವುದು ಬಹಳ ಅಂದವಾಗಿ ಕಾಣಿಸುತ್ತದೆ. ಬಿಲ್ವಪತ್ರೆಗಳನ್ನು ಏರಿಸಿ ಪೂಜೆಮಾಡುವುದಂತೂ ಮತ್ತೂ ಚೆನ್ನ. ಅಲ್ಲಿರುವ ಕೋಟಿಲಿಂಗಗಳು ಹೂಗಳ ಮಕರಂದಗಳಿಂದ

ತಲ್ಲಿಂಗದರ್ಶನಂ ತ್ಯಕ್ತ್ವಾ ಮನೋಽನ್ಯತ್ರ ನ ಯಾಸ್ಯತಿ ।
ತದಾಲೋಕನಸೇಯಾನಿ ದಿನಾನೀತಿ ಮತಿರ್ಮಮ ॥೨೫॥

ತಸ್ಮಿನ್ನುಪವನೇ ಶೋಭಾ ಯಾ ಸಾ ವಾಗ್ವಿಷಯಃ ಕಥಂ ।
ವನಶೋಭಾ ಮಹಾದೇವ ಶ್ರುತಾ ಹಿ ಶುಭದಾಯಿನೀ ॥೨೬॥

ಭೃಂಗೈಃ ಪಿಕೈಃ ಶುಕೈರ್ಹಂಸೈಶ್ಚಕೋರೈರಪಿಸಾರಸೈಃ ।
ರತ್ನಾಕಾರೈರಪಾರೈಸ್ತೈರ್ವ್ಯಾಪ್ತಂ ವನಮಿಾಶ್ವರ ॥೨೭॥

ಸುವರ್ಣವರ್ಣವರ್ಣಾನಾಂ ಕದಳೀನಾಂ ಫಲೈರಪಿ ।
ಅಪಾರೈರ್ವ್ಯಾಪ್ತಂ ಶಂಭೋ ತದ್ಗಂಧೈರ್ವ್ಯಾಪ್ತಂ ವನಂ ॥೨೮॥

ತತ್ರೇಕ್ಷುದಂಡಾ ಜಾಯಂತೇ ಸುಧಾಫಲ(ರಸ)ಸಮನ್ವಿತಾಃ ।
ತದ್ರಸಾದಧಿಕಃ ಕೋಽಪಿ ರಸಸ್ತು ಮಧುರೋಽಪಿ ನ ॥೨೯॥

ಅಭಿಷಿಕ್ತಗಳಾಗಿವೆ. ಆ ಲಿಂಗಗಳೆಲ್ಲವನ್ನೂ ಬಿಲ್ವಪತ್ರೆಗಳಿಂದ ಪೂಜೆಮಾಡುವರು. ಅದು ಮನಸ್ಸಿಗೆ ಆನಂದವನ್ನು ಉಂಟುಮಾಡುವುದು. ॥೨೩-೨೪॥

ಅಲ್ಲಿರುವ ಲಿಂಗಗಳ ದರ್ಶನವನ್ನು ಬಿಟ್ಟು ನನ್ನ ಮನಸ್ಸು ಬೇರೆ ಕಡೆ ಹೋಗಲಾರದು. ಆ ಲಿಂಗ ಮತ್ತು ವನ ಇವುಗಳನ್ನು ನೋಡುತ್ತಾ ದಿವಸಗಳನ್ನೆಲ್ಲಾ ಕಳೆಯಬೇಕೆಂದು ನನಗನಿಸುತ್ತದೆ. ಆ ವನದ ಸೊಬಗನ್ನು ಮಾತಿನಿಂದ ಹೇಳಲು ಹೇಗೆ ಸಾಧ್ಯ! ಸ್ವಾಮಿನ್, ಅದರ ಶೋಭೆಯನ್ನು ಕೇಳಿದ ಮಾತ್ರವೇ ಆನಂದವಾಗುತ್ತದೆ. ॥೨೫-೨೬॥

ಹೇ ಈಶ್ವರ, ಆ ಉದ್ಯಾನವು ದುಂಬಿ, ಕೋಗಿಲೆ, ಗಿಳಿ, ಹಂಸ, ಚಕೋರ, ಸಾರಸ ಮೊದಲಾದ ಅನೇಕ ಹಕ್ಕಿಗಳಿಂದ ವ್ಯಾಪ್ತವಾಗಿದೆ. ಅಲ್ಲಿರುವ ಹಕ್ಕಿಗಳೆಲ್ಲಾ ರತ್ನಮಯವಾದವುಗಳು, ಬಂಗಾರದ ಬಣ್ಣದಂತೆ ಹೊಂಬಣ್ಣವಾದ ಮತ್ತು ಸುಂದರವಾದ ಬಾಳೇಹಣ್ಣುಗಳು ಅಪಾರವಾಗಿ ಅಲ್ಲಿ ಸಿಕ್ಕುತ್ತವೆ. ಆ ಬಾಳೇಹಣ್ಣಿನ ಪರಿಮಳವು ಆ ವನದ ತುಂಬಾ ಹರಡಿದೆ. ॥೨೭-೨೮॥

ಆ ಉದ್ಯಾನವನದಲ್ಲಿ ಹೇರಳವಾಗಿ ಕಬ್ಬುಗಳು ಬೆಳೆದಿವೆ. ಅವುಗಳ ರಸವು ಅಮೃತರಸಕ್ಕೆ ಸಮನಾಗಿದೆ. ಆ ಕಬ್ಬಿನ ಹಾಲಿಗಿಂತ ಸಿಹಿಯಾದ ಬೇರೆ ಮಧುರ ರಸವು ಸಿಕ್ಕಲಾರದು. ಅಲ್ಲಿ ಅನೇಕ ಮಾವಿನಮರಗಳಿವೆ. ಅವುಗಳ ತುಂಬಾ

ಸಹಕಾರಾಂಕುರೈರೇವ ಸಹಕಾರಫಲಾನ್ಯಪಿ ।
ಪರಿಪಕ್ವಾನಿ ಜಾಯಂತೇ ಪ್ರಸೂನಂ ಚ ನ ದೃಶ್ಯತೇ ॥೩೦॥

ಯುಕ್ತಾ ವಿದ್ರುಮವಲ್ಲೀನಾಮಂತಸ್ತತ್ರ ನ ಸರ್ವಥಾ ।
ಪುಷ್ಪಾಸಾರಃ ಸರ್ವದಾಪಿ ಸದಾ ಪುಷ್ಪೋಚ್ಚಯಾಃ ಶಿವ ॥೩೧॥

ನೀಲಾಚಲಾನಾಂ ಧಿಕ್ಕಾರಃ ಕೃತಂ ಸ್ಯಾದಲಿಮಂಡಲೈಃ ।
ತೇಽಪಿ ಗಾಯಂತಿ ನಾಮಾನಿ ಮಧುರಾಣಿ ತವ ಪ್ರಭೋ ॥೩೨॥

ಇದಮೇತಾವದೀಶಾನ ಕೈಲಾಸನಗರಾದ್ಬಹಿಃ ।
ನಗರಾಂತರಶೋಭಾ ತು ನ ಮನೋ ಗೋಚರಾ ಪ್ರಭೋ ॥೩೩॥

ತತ್ತಾದೃಶಂ ಸ್ಥಲಂ ತ್ಯಕ್ತ್ವಾ ಕಿಮತ್ರ ಸ್ಥೀಯತೇ ಪ್ರಭೋ ।
ಇದಂ ಹಾರವಿಹಾರಾರ್ಥಂ ಕಥಂ ವಾ ಸ್ಥಲಮೀಶ್ವರ ॥೩೪॥

ತುಂಬಿದ ಹಣ್ಣುಗಳು ಹೂಗಳನ್ನು ಕಾಣದಂತೆ ಮುಚ್ಚಿಬಿಟ್ಟಿವೆ. ಅಲ್ಲದೆ ಮಾವಿನ ಹಣ್ಣುಗಳಂತೂ ಬಹು ಚನ್ನಾಗಿ ಕಳಿತು ನಿಂತಿವೆ. ॥೨೯-೩೦॥

ಆ ಉದ್ಯಾನವನದಲ್ಲಿ ಹವಳದ ಬಳ್ಳಿಗಳು ಬೇಕಾದಷ್ಟಿವೆ. ಅವುಗಳೆಲ್ಲವು ಪುಷ್ಪರಸದಿಂದ ತುಂಬಿವೆ. ಅಲ್ಲಿ ಹೂಗುಚ್ಛಗಳು ಅನೇಕವಿವೆ. ಆ ಹೂಗಳ ಮೇಲೆ ಹಾರಾಡುವ ದುಂಬಿಗಳು ತಮ್ಮ ನೈಲ್ಯದಿಂದ ನೀಲಪರ್ವತದ ಕಾಂತಿಗಿಂತಲೂ ಹೆಚ್ಚು ಶೋಭೆಯನ್ನೀಯುವುವು. ಅಲ್ಲದೆ ಅವು ಯಾವಾಗಲೂ "ಗುಯ್ ಗುಯ್" ನಾದದಿಂದ ನಿನ್ನ ಮಧುರವಾದ ನಾಮವನ್ನು ಹಾಡುತ್ತಿವೆ. ॥೩೧-೩೨॥

ಶಂಕರನೇ, ಇದುವರೆಗೆ ಹೇಳಿದ ವರ್ಣನೆಯೆಲ್ಲವೂ ಕೈಲಾಸದ ಹೊರಗಿನ ವಿಷಯವಾಯಿತು. ಕೈಲಾಸನಗರದೊಳಗಿನ ಸೊಬಗು ಮನೋಗೋಚರವಲ್ಲ. (ಅದು ಹೀಗೆ ಎಂದು ಹೇಳಲು ಸಾಧ್ಯವಾಗದಷ್ಟು ಅಪಾರವಾಗಿದೆ ಎಂದು ಭಾವವು). ಅಂತಹ ಸ್ಥಳವನ್ನು ಬಿಟ್ಟು ಏತಕ್ಕೆ ಇಲ್ಲಿಗೆ ಬಂದಿರುವೇ! ಸ್ವಾಮಿ, ಇದು ಈಶ್ವರನಾದ ನಿನಗೆ ಕ್ರೀಡಾಸ್ಥಲವು ಹೇಗಾದೀತು? ॥೩೩-೩೪॥

ಮಮಾಪ್ಯತ್ರ ರುಚಿರ್ನೇಶ ತವ ಕಿಂ ವಾ ರುಚಿಃ ಶಿವ ।
ಲೋಕೇ ರುಚಿಕರಂ ವಸ್ತು ತಾದೃಶಂ ನೈವ ದೃಶ್ಯತೇ ॥೩೫॥

ಯಾದೃಶಂ ಶಂಕರಾವಾಸೇ ಕೈಲಾಸೇ ಸುಖಮೀಶ್ವರ ।
ತಜ್ಜಾತೀಯಸುಖಸ್ಯಾಪಿ ನಾತ್ರ ಸಂಭಾವನಾ ಖಲು ॥೩೬॥

ಯದಸಂಭಾವಿತಂ ಲೋಕೇ ತತ್ಸರ್ವಂ ತತ್ರ ಶಂಕರ ।
ಅತಃ ಕಥಂ ವಾ ತತ್ತ್ಯಾಗೇ ಮತಿಃ ಪರಮಸುಂದರೇ ॥೩೭॥

ತವ ಯದ್ರತ್ನಸದನಂ ಕೈಲಾಸದ್ವಾರಿ ದೃಶ್ಯತೇ ।
ತದ್ಬ್ರಹ್ಮಾಂಡೇ ನ ಕುತ್ರಾಪಿ ತತ್ಕೋಟ್ಯಂಶೋಽಪಿ ಕುತ್ರ ವಾ ॥೩೮॥

ತತ್ರ ಸ್ಥಿತಿರ್ಮಹಾದೇವ ತವ ಯೋಗ್ಯೇತಿ ಮೇ ಮತಿಃ ।
ಅಯೋಗ್ಯಾ ಸ್ಥಿತಿರತ್ರೇತಿ ತ್ವಯಾಪಿ ಜ್ಞಾಯತೇ ಪ್ರಭೋ ॥೩೯॥

ನಾಹಂ ವಿಜ್ಞಾಪನಾಂ ಕರ್ತುಮಧಿಕಾರೀ ತಥಾಪಿ ಕಿಂ ।
ವಿಜ್ಞಾಪನೇಯಂ ಹೃದಯೇ ಜ್ಞಾಪನಾಯಾಧಿತಿಷ್ಠತು ॥೪೦॥

ಈಶ್ವರನೇ! ನನಗಾದರೋ ಈ ಸ್ಥಳವು ಇಷ್ಟವಾಗುವುದಿಲ್ಲ. ನಿನಗೆ ಹೇಗೆ ಇದು ಪ್ರಿಯವಾಗಿದೆ? ಲೋಕದಲ್ಲಿ ಆ ಶಂಕರನ ವಾಸಭೂಮಿಯಲ್ಲಿ ಎಂತಹ ಪ್ರಿಯಕರವಾದ ಸಾಮಗ್ರಿಗಳು ಇರುವುವೋ ಅವಕ್ಕಿಂತ ಮಿಗಿಲಾದ ಇಷ್ಟವಸ್ತುವು ಬೇರೆ ಇನ್ನೊಂದು ಇರುವುದೆ? ಈ ಜಾಗದಲ್ಲಿ ಆ ಕೈಲಾಸ ಸುಖದಂತಹ ಸುಖವು ಲಭಿಸಬಹುದೋ ಎಂಬ ಊಹೆಗೂ ಸಹ ಅವಕಾಶವಿಲ್ಲ. ॥೩೫-೩೬॥

ಲೋಕದಲ್ಲಿ ಯಾವಯಾವುದು ಅಸಂಭವವೆಂದು ತೋರುತ್ತದೆಯೋ ಅವೆಲ್ಲವೂ ಕೂಡ ಇಲ್ಲಿದೆ. ಆದುದರಿಂದ ಅತಿ ಸುಂದರವಾದ ಆ ಕೈಲಾಸವನ್ನು ಬಿಡಲು ನಿನಗೆ ಮನಸ್ಸು ಹೇಗೆ ಒಪ್ಪಿತು! ಕೈಲಾಸದ ಬಾಗಿಲಿನಲ್ಲಿ ನಿನ್ನ ರತ್ನಮಂದಿರವು ಕಾಣುತ್ತದೆ. ಅಂತಹ ಭವನದ ಕೋಟ್ಯಂಶವಾದರೂ ಇಡೀ ಬ್ರಹ್ಮಾಂಡದಲ್ಲಿ ಅಥವಾ ಬೇರೆಕಡೆಯಲ್ಲಿಯಾಗಲೀ ದೊರೆತೀತೆ? ॥೩೭-೩೮॥

ಆ ಕೈಲಾಸದಲ್ಲಿ ವಾಸಿಸುವುದು ನಿನಗೆ ಯುಕ್ತವಾದುದೆಂದು ನನ್ನ ಅಭಿಪ್ರಾಯ. ನಿನಗೂ ಈ ಸ್ಥಳದಲ್ಲಿರುವುದು ಸರಿಯಲ್ಲವೆಂದು ತಿಳಿದೇ ಇದೆಯಲ್ಲವೇ? ಸ್ವಾಮಿನ್, ನಾನು ಹೀಗೆ ವಿಜ್ಞಾಪನೆ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿಲ್ಲ.

ಕಿಂಚಾನುಗ್ರಹಪಾತ್ರಾಣಿ ಭುವನಾನಿ ಚತುರ್ದಶ ।
ತವ ತಾನಿ ವಿಚಿತ್ರಾಣಿ ರಮ್ಯಾಣೀತ್ಯಪಿ ಮನ್ಮಹೇ ॥೪೦॥

ತೇಷು ಸರ್ವೇಷು ಭಾನ್ಯೇಷು ಭುವನೇಷು ಶುಭಾವಹಂ ।
ಕೈಲಾಸಭುವನಂ ಮನ್ಯೇ ಭವಾನೀರಮಣ ಪ್ರಭೋ ॥೪೨॥

॥ ವ್ಯಾಸ ಉವಾಚ ॥

ಇತ್ಯಾಕರ್ಣ್ಯ ವಚಸ್ತಸ್ಯ ಪ್ರಾಹ ಗೌರೀಮನೋಹರಃ ।
ಸಂತೋಷಂ ಜನಯನ್ನೇವ ಘನಗಂಭೀರಯಾ ಗಿರಾ ॥೪೩॥

॥ ಸದಾಶಿವ ಉವಾಚ ॥

ಸತ್ಯಮುಕ್ತಂ ತ್ವಯಾ ನಂದಿಂಸ್ತತ್ರಾರ್ಥೇ ವಿಸ್ಮಯೋಽಪಿ ನ ।
ಕೈಲಾಸಾದಧಿಕಃ ಕೋ ವಾ ದೇಶೋ ದೇಶೇಷು ವಿಶ್ರುತಃ ॥೪೪॥

ಸ ನೈವ ತಪಸಾ ಪ್ರಾಪ್ಯೋ ಘೋರೇಣಾಪ್ಯಮಿತೇನ ವಾ ।
ನಾನ್ಯೈರಪೀತಿ ಲೋಕೇಷು ಕೈಲಾಸಃ ಪರಮೋ ಮತಃ ॥೪೫॥

ಆದರೂ ಈ ನನ್ನ ಅರಿಕೆಯು ನಿನ್ನ ಹೃದಯದಲ್ಲಿ ಮರೆತು ಹೋದುದನ್ನು ಜ್ಞಾಪಿಸುವುದಕ್ಕಾಗಿ ಆಗಲಿ. ॥೩೯-೪೦॥

ಮತ್ತೇನೆಂದರೆ, ಈ ಹದಿನಾಲ್ಕು ಲೋಕಗಳೂ ಕೂಡ ನಿನ್ನ ಅನುಗ್ರಹಕ್ಕೆ ಪಾತ್ರಗಳಾಗಿವೆ. ಆ ಎಲ್ಲಾ ವಿಚಿತ್ರಗಳಾದ ಮತ್ತು ಮನೋಹರಗಳಾದ ಲೋಕಗಳು ನಿನಗೂ ಇಷ್ಟವೆಂದು ತಿಳಿದಿದ್ದೇವೆ. ಮಂಗಳಕರಗಳಾದ ಆ ಹದಿನಾಲ್ಕು ಲೋಕಗಳೊಳಗೆ ಈ ಕೈಲಾಸಲೋಕವು ಅತ್ಯಂತ ಶುಭವನ್ನು ಕೊಡುತ್ತದೆ ಎಂದು ನಾನು ತಿಳಿದಿರುವೆನು. ಓ ಭವಾನೀವಲ್ಲಭ, ಲಾಲಿಸು ಎಂದು ನಂದಿಕೇಶ್ವರನು ಶಂಕರನಿಗೆ ಅರಿಕೆಮಾಡಿಕೊಂಡನು. ॥೪೧-೪೨॥

ಹಾಗೆ ನಂದಿಯು ಹೇಳಿದುದನ್ನು ಕೇಳಿ ಗೌರೀರಮಣನಾದ ಶಂಕರನು ಎಲ್ಲರಿಗೂ ಸಂತೋಷವಾಗುವ ಹಾಗೆ ಮೇಘಗಂಭೀರವಾದ ಮಾತಿನಿಂದ ಹೀಗೆ ಹೇಳಲಾರಂಭಿಸಿದನು. ॥೪೩॥

ನಂದಿಯೇ, ನೀನು ನಿಜವಾದ ವಿಚಾರವನ್ನು ಹೇಳಿದೆ. ಈ ವಿಷಯದಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ, ಕೈಲಾಸಕ್ಕಿಂತಲೂ ಹೆಚ್ಚಿನ ದೇಶವು ಯಾವ

ನ ದೇವೇಷು ಯಥಾ ದೇವೋ ಮದನ್ಯೋಽಪ್ಯಧಿಕಸ್ತಥಾ ।
ತಥಾ ಸರ್ವೇಷು ದೇಶೇಷು ಕೈಲಾಸಸ್ತ್ವಧಿಕಾಧಿಕಃ ॥೪೬॥

ಯಥಾ ಗೋಕ್ಷೀರಮಧಿಕಂ ಕ್ಷೀರೇಷು ವಿವಿಧೇಷ್ವಪಿ ।
ಮಧುರೇಷು ಯಥಾ ಶ್ರೇಷ್ಠಾ ಮಧುರಾ ಸಿತಶರ್ಕರಾ ॥೪೭॥

ಯಥಾ ಘೃತೇಷು ಸರ್ವೇಷು ಗೋಘೃತಂ ಸುಮನೋಹರಂ ।
ಪರಮಾನ್ನಂ ಯಥಾನ್ನೇಷು ಸರ್ವೇಷ್ವಪ್ಯಧಿಕಂ ಶ್ರುತಂ ॥೪೮॥

ಯಥಾ ತರುಷು ಸರ್ವೇಷು ಶ್ರೇಷ್ಠೋ ಬಿಲ್ವತರುಃ ಶ್ರುತಃ ।
ಯಥಾ ಫಲೇಷು ಸರ್ವೇಷು ಶ್ರೀಫಲಸ್ಯ ಫಲಂ ವರಂ ॥೪೯॥

ಯಥಾ ಸರ್ವೇಷು ವಸ್ತ್ರೇಷು ದುಕೂಲಂ ಚಿತ್ರಿತಂ ವರಂ ।
ಭೂಷಣೇಷು ಯಥಾ ಶ್ರೇಷ್ಠಂ ಭವ್ಯಂ ರುದ್ರಾಕ್ಷಭೂಷಣಂ ॥೫೦॥

ದೇಶಗಳಲ್ಲೂ ಪ್ರಸಿದ್ಧವಾಗಿಲ್ಲ. ಆ ಕೈಲಾಸವನ್ನು ಘೋರತಪಸ್ಸಿನಿಂದಲಾಗಲಿ ಅಥವಾ ಅಪರಿಮಿತವಾದ ತಪಃಶಕ್ತಿಯಿಂದಲಾಗಲೀ ಪಡೆಯಲು ಸಾಧ್ಯವಿಲ್ಲ. ಇತರ ಕರ್ಮಗಳಿಂದಲೂ ಅದು ಲಭಿಸಲಾರದು. ಹದಿನಾಲ್ಕು ಲೋಕಗಳಲ್ಲಿ ಕೈಲಾಸವು ಉತ್ತಮವೆಂಬುದು ನನಗೂ ಅಭಿಮತವೇ ಸರಿ. ||೪೪-೪೫||

ದೇವತೆಗಳಲ್ಲಿ ನನಗಿಂತಲೂ ಶ್ರೇಷ್ಠನು ಇಲ್ಲದ ಹಾಗೆ, ಕೈಲಾಸಕ್ಕಿಂತಲೂ ಉತ್ತಮವಾದ ದೇಶವಿಲ್ಲ. ಅನೇಕವಿಧವಾದ ಹಾಲುಗಳಲ್ಲಿ ಹಸುವಿನ ಹಾಲು ಹೇಗೆ ಉತ್ತಮವಾಗಿದೆಯೋ ಹಾಗೆಯೇ ಕೈಲಾಸವು ದೇಶಗಳಲ್ಲಿ ಉತ್ತಮವಾದ ದೇಶ. ಸಿಹಿ ಪದಾರ್ಥಗಳೊಳಗೆ ಕಲ್ಲುಸಕ್ಕರೆಯು ಉತ್ತಮೋತ್ತಮವಾಗಿರುವ ಹಾಗೆ ಕೈಲಾಸವು ಅತ್ಯುತ್ತಮವಾದ ಲೋಕ. ||೪೬-೪೭||

ಎಲ್ಲಾ ವಿಧವಾದ ತುಪ್ಪಗಳಲ್ಲಿ ಹಸುವಿನ ತುಪ್ಪವೂ, ಎಲ್ಲಾ ತರಹ ಅನ್ನಗಳಲ್ಲಿ ಪರಮಾನ್ನವೂ, ನಾನಾಜಾತಿಯ ಮರಗಳಲ್ಲಿ ಬಿಲ್ವವೃಕ್ಷವೂ, ಅನೇಕವಿಧ ಹಣ್ಣುಗಳಲ್ಲಿ (ಶ್ರೀಫಲ) ಬಿಲ್ವಹಣ್ಣೂ ಉತ್ತಮವಾಗಿರುವಹಾಗೆ ದೇಶಗಳಲ್ಲಿ ಕೈಲಾಸವು ಉತ್ತಮವಾದುದು. ||೪೮-೪೯||

ಎಲ್ಲಾ ತರಹ ವಸ್ತ್ರಗಳಲ್ಲಿ ಚಿತ್ರವಿಚಿತ್ರವಾದ ಪೀತಾಂಬರವೂ ಆಭರಣಗಳಲ್ಲಿ ರುದ್ರಾಕ್ಷಭೂಷಣವೂ, ದೇಹಸೌಂದರ್ಯಕ್ಕಾಗಿ ಉಪಯೋಗಿಸುವ ಚೂರ್ಣಗಳಲ್ಲಿ

ಅಂಗರಾಗೇಷು ಸರ್ವೇಷು ಶ್ರೇಷ್ಠಾ ಭೂತಿಃ ಶ್ರುತಿಶ್ರುತಾ ।
ಯಥಾ ನರೇಷು ಸರ್ವೇಷು ಶಾಂಕರಃ ಪುರುಷೋತ್ತಮಃ ॥೫೧॥

ಯಥಾ ನಾರೀಷು ಸರ್ವಾಸು ನಾರೀ ರತ್ನಗಿರೀಂದ್ರಜಾ ।
ಯಥಾ ತೀರ್ಥೇಷು ಸರ್ವೇಷು ಶಿವಗಂಗಾ ಪರಂ ವರಾ ॥೫೨॥

ಸರೋವರೇಷು ಸರ್ವೇಷು ಯಥಾ ರುದ್ರಸರೋವರಂ ।
ತಥಾ ಪುರೇಷು ಸರ್ವೇಷು ಪುರಂ ಕಾಶೀಪುರಂ ವರಂ ॥೫೩॥

ಯಥಾ ವಾಪೀಷು ಸರ್ವಾಸು ಜ್ಞಾನವಾಪೀ ಮನೋಹರಾ ।
ಮುಕ್ತಿಮಂಟಪಮುತ್ಕೃಷ್ಟಂ ಮಂಟಪೇಷು ಯಥಾ ಮತಂ ॥೫೪॥

ಯಥಾ ವೈಶ್ವೇಶ್ವರಂ ಲಿಂಗಂ ಲಿಂಗೇಷು ಶ್ರೇಷ್ಠಮುಚ್ಯತೇ ।
ಯಥಾ ಮೂರ್ತಿಷು ಸರ್ವಾಸು ದಕ್ಷಿಣಾಮೂರ್ತಿರುತ್ತಮಾ ॥೫೫॥

ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೫೬॥

ಯಥಾ ಗಿರಿಷು ಸರ್ವೇಷು ಶ್ರೇಷ್ಠೋ ಹಿಮಗಿರಿಃ ಸ್ಮೃತಃ ।
ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೫೭॥

ವೇದಪ್ರಸಿದ್ಧವಾದ ವಿಭೂತಿಯೂ, ಮನುಷ್ಯರಲ್ಲಿ ಶಿವಪೂಜಕನೂ ಇವರು ಹೇಗೆ ಉತ್ತಮರೆನಿಸಿರುವರೋ ಹಾಗೆ ಕೈಲಾಸವೂ ಶ್ರೇಷ್ಠವೆನಿಸಿದೆ. ॥೫೦-೫೧॥

ಲೋಕದಲ್ಲಿರುವ ಎಲ್ಲಾ ಯುವತಿಯರ ಮಧ್ಯೇ ರತ್ನಗಿರಿಪುತ್ರಿಯಾದ ಗಿರಿಜೆಯೂ, ಎಲ್ಲಾ ತೀರ್ಥೋದಕಗಳಲ್ಲಿ ಶಿವನ ಜಡೆಯಲ್ಲಿರುವ ಗಂಗೆಯೂ, ಕೊಳಗಳಲ್ಲೆಲ್ಲಾ ರುದ್ರಸರೋವರವೂ, ಪಟ್ಟಣಗಳಲ್ಲೆಲ್ಲಾ ಕಾಶೀಪಟ್ಟಣವೂ ಶ್ರೇಷ್ಠಗಳಾಗಿರುವಂತೆ ಲೋಕಗಳಲ್ಲಿ ಕೈಲಾಸವು ಉತ್ತಮವಾಗಿದೆ. ॥೫೨-೫೩॥

ಎಲ್ಲಾ ವಿಧದ ಬಾವಿಗಳಲ್ಲಿ ಜ್ಞಾನವಾಪಿಯೂ, ಮಂಟಪಗಳಲ್ಲೆಲ್ಲಾ ಮುಕ್ತಿ ಮಂಟಪವೂ, ಲಿಂಗಗಳಲ್ಲೆಲ್ಲಾ ವಿಶ್ವೇಶ್ವರಲಿಂಗವೂ, ಮೂರ್ತಿಗಳಲ್ಲಿ ದಕ್ಷಿಣಾ ಮೂರ್ತಿಯೂ ಹೇಗೆ ಉತ್ಕೃಷ್ಟಗಳೆಂದು ಪ್ರಸಿದ್ಧಿ ಇದೆಯೋ ಹಾಗೆಯೇ ಕೈಲಾಸವೂ ಉತ್ತಮವೆನಿಸಿದೆ. ॥೫೪-೫೫॥

ಬೆಟ್ಟಗಳಲ್ಲಿ ಹಿಮವತ್ಪರ್ವತವು ಶ್ರೇಷ್ಠವೆನಿಸಿಕೊಂಡಿರುವಂತೆ ಕೈಲಾಸವು ದೇಶಗಳಲ್ಲಿ ಉತ್ತಮೋತ್ತಮವೆಂದು ಹೇಳಲ್ಪಟ್ಟಿದೆ. ॥೫೬-೫೭॥

ಯಥಾ ನದೀಷು ಸರ್ವಾಸು ನರ್ಮದಾ ಶರ್ಮದಾ ಸದಾ ।
ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೫೮॥

ಯಥಾ ಮುನಿಷು ಸರ್ವೇಷು ಶ್ರೇಷ್ಠಃ ಕಲಶಸಂಭವಃ ।
ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೫೯॥

ಯಥಾ ಮಂತ್ರೇಷು ಸರ್ವೇಷು ಶಿವಪಂಚಾಕ್ಷರಃ ಪರಃ ।
ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೬೦॥

ಶಿವಪೂಜಾಸಾಧನೇಷು ಬಿಲ್ವಪತ್ರಂ ಯಥಾ ವರಂ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೧॥

ಯಥಾ ವೇದೇಷು ಸರ್ವೇಷು ರುದ್ರಾಧ್ಯಾಯಃ ಪರಃ ಸ್ಮೃತಃ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೨॥

ಯಥಾ ಸರ್ವೇಷು ಸರ್ಪೇಷು ಸಹಸ್ರಫಣಿರುತ್ತಮಃ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೩॥

ಯಥಾ ಚತುಷ್ಪದಾಂ ಮಧ್ಯೇ ಪ್ರಸಿದ್ಧೋ ವೃಷಭೇಶ್ವರಃ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೪॥

ನದಿಗಳೊಳಗೆಲ್ಲಾ ಮಂಗಳವನ್ನು ಕೊಡುವ ನರ್ಮದೆ, ಮುನಿಗಳಲ್ಲೆಲ್ಲಾ ಅಗಸ್ತ್ಯ, ಮಂತ್ರಗಳಲ್ಲಿ ಪಂಚಾಕ್ಷರಿ ಇವು ಶ್ರೇಷ್ಠಗಳಾಗಿರುವಂತೆ ದೇಶಗಳಲ್ಲೆಲ್ಲಾ ಕೈಲಾಸವು ಉತ್ತಮೋತ್ತಮವೆನಿಸಿದೆ. ||೫೮-೫೯-೬೦||

ಶಿವಪೂಜೆಯ ಸಾಮಗ್ರಿಗಳಲ್ಲಿ ಬಿಲ್ವಪತ್ರೆ, ನಾಲ್ಕು ವೇದಗಳಲ್ಲಿ ರುದ್ರಾಧ್ಯಾಯ, ಹಾವುಗಳಲ್ಲೆಲ್ಲಾ ಮಹಾಶೇಷ, ಪಶುಗಳಲ್ಲೆಲ್ಲ ವೃಷಭವು, ಇವುಗಳು ಮೇಲ್ಮೆಯನ್ನು ಹೊಂದಿರುವಂತೆ ದೇಶಗಳೊಳಗೆ ಕೈಲಾಸವು ಉತ್ಕರ್ಷವನ್ನು ಹೊಂದಿದೆ. ||೬೧-೬೨-೬೩-೬೪||

ಯಥಾ ವಿದ್ಯಾಸು ಸರ್ವಾಸು ಶಿವವಿದ್ಯಾ ಪರಾ ಸ್ಮೃತಾ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೫॥

ಯಥಾ ಭೋಜ್ಯೇಷು ಸರ್ವೇಷು ಶಿವನೈವೇದ್ಯಮುತ್ತಮಂ ।
ತಥಾ ಸರ್ವೇಷು ಲೋಕೇಷು ಕೈಲಾಸೋಽಪ್ಯಧಿಕಾಧಿಕಃ ॥೬೬॥

ಯಥಾ ಗೃಹೇಷು ಸರ್ವೇಷು ಶ್ರೇಷ್ಠಮಂತರ್ಗೃಹಂ ಸ್ಮೃತಂ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೬೭॥

ಮಂದಿರೇಷು ಯಥಾ ಶ್ರೇಷ್ಠಂ ರಮ್ಯಂ ಶಾಂಭವಮಂದಿರಂ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೬೮॥

ಉತ್ತಮಾಂಗಂ ಯಥಾಂಗೇಷು ಶಿವಾನತಿಕಿಣಾಂಕಿತಂ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೬೯॥

ಕುಮಾರೇಷು ಯಥಾ ಶ್ರೇಷ್ಠಃ ಷಣ್ಮುಖಃ ಶ್ರುತಿಷು ಶ್ರುತಃ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೭೦॥

ಲೋಹಮಧ್ಯೇ ಯಥಾ ಶ್ರೇಷ್ಠಂ ಕಾಂಚನಂ ಶೈಲಜಾಪ್ರಿಯಂ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೭೧॥

ಎಲ್ಲಾ ವಿದ್ಯೆಗಳಲ್ಲಿ ಶಿವವಿದ್ಯೆಯು, ಭೋಜ್ಯವಸ್ತುಗಳಲ್ಲೆಲ್ಲಾ ಶಿವನೈವೇದ್ಯವೂ, ಮನೆಗಳಲ್ಲೆಲ್ಲಾ ನಡುಮನೆಯೂ ಪ್ರಶಸ್ತವಾಗಿರುವಂತೆ ದೇಶಗಳಲ್ಲೆಲ್ಲಾ ಪ್ರಶಸ್ತವಾಗಿದೆ. ||೬೫-೬೬-೬೭||

ಅವಯವಗಳ ಮಧ್ಯೆ ಈಶ್ವರನಿಗೆ ಮತ್ತು ದೇವಿಗೆ ನಮಸ್ಕಾರಮಾಡಿ ಗುರುತಾಗಿರುವ ತಲೆಯೂ, ಕುಮಾರರೊಳಗೆ ವೇದಪ್ರಸಿದ್ಧನಾದ ಷಣ್ಮುಖನೂ, ಲೋಹಗಳೊಳಗೆ ಪಾರ್ವತಿಗೆ ಇಷ್ಟವಾದ ಬಂಗಾರವೂ, ಬ್ರಾಹ್ಮಣರಲ್ಲಿ ಶಿವದೀಕ್ಷಾಬದ್ಧನಾದ ಶೈವನೂ, ಶ್ರೇಷ್ಠತೆಯನ್ನು ಹೊಂದಿರುವಂತೆ, ಕೈಲಾಸವು ದೇಶಗಳೊಳಗೆ ಅತ್ಯಂತ ಉತ್ತಮವೆನಿಸಿದೆ. ಮತ್ತು ದೇವಾಲಯಗಳೊಳಗೆ ರಮ್ಯವಾದ ಶಿವದೇವಾಲ

ಬ್ರಾಹ್ಮಣೇಷು ಯಥಾ ಶ್ರೇಷ್ಠಃ ಶಾಂಭವೋ ಬ್ರಾಹ್ಮಣೋತ್ತಮಃ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೨೨॥

ಯಥಾ ರತ್ನೇಷು ಸರ್ವೇಷು ಶ್ರೇಷ್ಠಶ್ಚಿಂತಾಮಣಿಃ ಸ್ಮೃತಃ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೨೩॥

ಯಥಾ ಗ್ರಹೇಷು ಸರ್ವೇಷು ಶ್ರೇಷ್ಠಃ ಸೋಽಯಂ ಸುಧಾಕರಃ ।
ತಥಾ ದೇಶೇಷು ಸರ್ವೇಷು ಕೈಲಾಸೋಽಪ್ಯಧಿಕಾಧಿಕಃ ॥೨೪॥

ಪಾವನೇಷು ಯಥಾ ಭಸ್ಮ ಶ್ರುತ್ಯುಕ್ತಂ ಪಾವನೋತ್ತಮಂ ।
ತಥಾ ಸರ್ವೇಷು ದೇಶೇಷು ಕೈಲಾಸೋಽಪ್ಯಧಿಕಾಧಿಕಃ ॥೨೫॥

ಕೈಲಾಸತುಲ್ಯಃ ಕುತ್ರಾಪಿ ವೇದೇಷ್ವಪಿ ನ ದೃಶ್ಯತೇ ।
ತತೋಽಪ್ಯಧಿಕಮಸ್ತೀತಿ ವಕ್ತಾ ಪಾಪಕುಲಾಕುಲಃ ॥೨೬॥

ಸನ್ನಿಧಿಃ ಸರ್ವದಾ ಯತ್ರ ಮಮ ತಸ್ಮಿನ್ ಕಿಮುತ್ತಮಃ ।
ಕೈಲಾಸೇ ಸನ್ನಿಧಿರ್ನಿತ್ಯಂ ತೇನಾಸಾವಧಿಕಃ ಸ್ಮೃತಃ ॥೨೭॥

ಯವು ಉತ್ತಮವೆನಿಸಿದಂತೆ ಕೈಲಾಸವು ದೇಶಗಳೊಳಗೆ ಅಷ್ಟು ಪ್ರಶಸ್ತಿಯನ್ನು ಹೊಂದಿದೆ. ||೬೮-೬೯-೭೦-೭೧||

ರತ್ನಗಳೊಳಗೆ ಚಿಂತಾಮಣಿ, ನವಗ್ರಹಗಳೊಳಗೆ ಚಂದ್ರನು, ಪವಿತ್ರವಾದ ವಸ್ತುಗಳೊಳಗೆ ವೇದಪ್ರಸಿದ್ಧವಾದ ಭಸ್ಮವು, ಇವುಗಳು ಉತ್ತಮವಾದವು ಎಂಬ ಖ್ಯಾತಿಯನ್ನು ಪಡೆದಿರುವಂತೆ, ದೇಶಗಳಲ್ಲೆಲ್ಲಾ ಕೈಲಾಸವು ಅತ್ಯುತ್ತಮವಾದುದೆಂಬ ಪ್ರಶಸ್ತಿಯನ್ನು ಹೊಂದಿದೆ. ||೭೩-೭೪-೭೫||

ಕೈಲಾಸಕ್ಕೆ ಸಮನಾದುದು ಬೇರೊಂದು ಎಲ್ಲಿಯೂ ಇಲ್ಲ. ಮತ್ತು ವೇದಗಳಲ್ಲೂ ಕೇಳಿಬರುವುದಿಲ್ಲ. ಕೈಲಾಸಕ್ಕಿಂತಲೂ ಹೆಚ್ಚಿನದು ಮತ್ತೊಂದು ಇದೆ ಎಂದು ಹೇಳುವವನು ಪಾಪಿಯಾಗುತ್ತಾನೆ. ನಾನು ಯಾವಾಗಲೂ ಕೈಲಾಸದಲ್ಲಿಯೇ ನೆಲಸಿರುವೆನು. ಇದಕ್ಕಿಂತಲೂ ಪ್ರಶಸ್ತವಾದುದು ಬೇರೆ ಬೇಕೇ? ನನ್ನ ಸನ್ನಿಧಿಯಿಂದ ಕೈಲಾಸವು ಅತ್ಯುತ್ತಮವೆನಿಸಿಗೊಂಡಿದೆ. ||೭೬-೭೭||

ವಿಚಿತ್ರಾ ರಚನಾ ತತ್ರ ವೇದಾಂತಾಗೋಚರಾ ಅಪಿ ।
ತತ್ರ ತತ್ರ ಸುಖಂ ಯಾವತ್ ತಾವದನ್ಯತ್ರ ಕುತ್ರ ವಾ ॥೭೮॥

ಸರ್ವೋತ್ತಮಃ ಸ ಕೈಲಾಸಸ್ತತ್ರೈವ ರಮತೇ ಮನಃ ।
ತತ್ರಾನಂತಾನಿ ರಮ್ಯಾಣಿ ವಸ್ತೂನಿ ವಿವಿಧಾನ್ಯಪಿ ॥೭೯॥

ರಹಸ್ಯಮನ್ಯದ್ವಕ್ಷ್ಯಾಮಿ ಯತ್ರ ಮೇ ರಮತೇ ಮನಃ ।
ತದೇವ ವಿದ್ಧಿ ನಂದೀಶ ಕೈಲಾಸ ಇತಿ ಸಾದರಂ ॥೮೦॥

ಗೌರೀಶರೀರೇ ರಮತೇ ಮಮ ಚಿತ್ತಮನುತ್ತಮಂ ।
ಕಾಶ್ಯಾಂ ಶಾಂಭವಚಿತ್ತೇಪಿ ತದನ್ಯತ್ರ ನ ಸರ್ವಥಾ ॥೮೧॥

ತೇಷ್ವಪ್ಯತ್ಯುತ್ತಮಂ ಮನ್ಯೇ ಕೇವಲಂ ಶಾಂಭವಂ ಮನಃ ।
ತತ್ರಾನಂದೋ ಯಥಾ ತದ್ವದಾನಂದೇ ಯತ್ರ ಕುತ್ರ ನ ॥೮೨॥

ಆ ಕೈಲಾಸದಲ್ಲಿರುವ ರಚನಾಕ್ರಮವು ವಿಚಿತ್ರವಾಗಿದೆ. ವೇದೋಪನಿಷತ್ತುಗಳಲ್ಲಿಯೂ ಹೇಳದಿರುವ ರಚನೆಯು ಆ ಕೈಲಾಸದಲ್ಲಿ ತೋರುತ್ತದೆ. ಎಷ್ಟರ ಮಟ್ಟಿಗೆ ಅಲ್ಲಿ ಸುಖವನ್ನು ಅನುಭವಿಸಬಹುದೋ, ಅಷ್ಟುಮಟ್ಟಿನ ಸುಖ ಬೇರೆ ಕಡೆ ಸಿಗಲಾರದು. ಎಲ್ಲಕ್ಕಿಂತಲೂ ಕೈಲಾಸವು ಉತ್ತಮವಾಗಿದೆ. ಆದುದರಿಂದ ನನ್ನ ಮನಸ್ಸು ಅಲ್ಲೇ ನೆಲಸಿದೆ, ಮತ್ತು ಆನಂದಿಸುತ್ತದೆ. ಅಲ್ಲಿ ಅನೇಕ ಮನೋಹರ ವಸ್ತುಗಳೂ ಇವೆ. ॥೭೮-೭೯॥

ಇನ್ನೊಂದು ರಹಸ್ಯವೇನೆಂದರೆ, ಎಲೈ ನಂದಿಯೇ, ಎಲ್ಲಿ ನನ್ನ ಮನಸ್ಸು ವಿಹರಿಸುವುದೋ ಅದೇ ಕೈಲಾಸವೆಂದು ತಿಳಿ. ॥೮೦॥

ನನ್ನ ಮನಸ್ಸು ಉತ್ತಮಳಾದ ಗೌರಿಯನ್ನು ಬಿಟ್ಟು ಬೇರೇಕಡೆ ರಮಿಸುವುದಿಲ್ಲ. ಅಲ್ಲದೆ ಕಾಶೀನಗರದಲ್ಲಿ ಮತ್ತು ನನ್ನ ಭಕ್ತನ ಹೃದಯದಲ್ಲಿ ಯಾವಾಗಲೂ ಕ್ರೀಡಿಸುತ್ತದೆ. ಈ ಮೂರು ಸ್ಥಳಗಳಲ್ಲಿ ಪರಶಿವಭಕ್ತನ ನಿರ್ಮಲವಾದ ಮತ್ತು ಅತ್ಯುತ್ತಮವಾದ ಚಿತ್ತವೃತ್ತಿಯೇ ನನಗೆ ಮುಖ್ಯಾಶ್ರಯವಾದುದು. ಆದುದರಿಂದ ನನ್ನ ಭಕ್ತನ ಮೇಲೆ ಇರುವಷ್ಟು ಅಭಿಮಾನವು ನನಗೆ ಬೇರೆ ಕಡೆ ಇರಲಾರದು. ॥೮೧-೮೨॥

ಕಲ್ಪ್ಯತೇ ಬಹುಧಾ ಪೂಜಾ ಶಾಂಭವೇನ ಪ್ರತಿಕ್ಷಣಂ ।
ಪ್ರತಿಕ್ಷಣಂ ವಿಶಿಷ್ಟೇಷ್ಟೇ ಕ್ಷಣದಾ ಸಾ ಮನೋರಮಾ ॥೮೩॥

ಸ ತನ್ಮನೋ ವಿಭುತಯಾ ಜಾತಸ್ತತ್ರ ಶಿವಾಲಯಃ ।
ಪರಾರ್ಧಯೋಜನಾಯಾಮಃ ಕಲ್ಪಿತೋ ರತ್ನಮಂಟಪಃ ॥೮೪॥

ರತ್ನಪ್ರಾಕಾರಸಂವೀತೋ ರತ್ನಮಂದಿರಮಂಡಿತಃ ।
ರತ್ನದ್ವಾರಾರ್ಬುದಾಕೀರ್ಣಮೇಕೈಕಂ ತತ್ರ ಮಂದಿರಂ ॥೮೫॥

ತತ್ರಾಪಿ ಕಲ್ಪತರವಃ ಪ್ರಸೂನಸಮಲಂಕೃತಾಃ ।
ಅರ್ಪಿತಾಃ ಕೋಟಿಶಸ್ತೇನ ಕಲ್ಪಿತಾಃ ಶಿವಮಂದಿರೇ ॥೮೬॥

ತತ್ಕಲ್ಪತರುಮಧ್ಯಸ್ಥಂ ರತ್ನಸಿಂಹಾಸನಂ ವರಂ ।
ಕೋಟಿಯೋಜನವಿಸ್ತೀರ್ಣಂ ಕಲ್ಪಿತಂ ತಾವದಾಯತಂ ॥೮೭॥

" ಕಾಶಿಯಲ್ಲಿರುವ ಶಾಂಭವನು ಪ್ರತಿಕ್ಷಣವೂ ನನ್ನನ್ನು ಪೂಜಿಸುತ್ತಾನೆ. ಮತ್ತು ಅದರಲ್ಲಿಯೂ ಶಿವರಾತ್ರಿಯೆನಿಸಿದ ಉತ್ತಮ ದಿನದಲ್ಲಿ ಒಂದು ಕ್ಷಣವೂ ತಪ್ಪದೇ ನನ್ನನ್ನು ಸ್ತೋತ್ರಮಾಡುವನು. ಆತನು ತನ್ನ ಮನಃಶಕ್ತಿಯಿಂದ ಪರಾರ್ಧಯೋಜನ ಉದ್ದವಾದ ಶಿವದೇವಾಲಯವನ್ನು ಮನದಲ್ಲಿಯೇ ರಚಿಸುವನು. ರತ್ನಮಯವಾದ ಮಂಟಪವನ್ನೂ ಕಟ್ಟಿಸುವನು. ||೮೩-೮೪||

ಆ ಶಿವದೇವಸ್ಥಾನದ ಸುತ್ತಲೂ ರತ್ನಮಯವಾದ ಕೋಟೆಯನ್ನು ಹಾಕಿಸುವನು. ಎಲ್ಲಾ ಕಡೆಯೂ ರತ್ನಗಳಿಂದಲೇ ಮನೆಗಳನ್ನು ಕಟ್ಟಿಸುವನು. ಆ ರತ್ನಮನೆಗಳೊಳಗೆ ಒಂದು ಅರ್ಬುದ ರತ್ನಮಂದಿರಗಳನ್ನು ಬೇರೆ ಬೇರೆಯಾಗಿ ನಿರ್ಮಿಸಿ, ಅಂತಹ ಆ ಈಶ್ವರದೇವಾಲಯದಲ್ಲಿ ಕೋಟಿ ಕೋಟಿಯಾಗಿ ಕಲ್ಪವೃಕ್ಷಗಳನ್ನು ಬೆಳೆಯಿಸುವನು. ಅವುಗಳೆಲ್ಲಾ ಹೂಗಳಿಂದ ತುಂಬಿತುಳುಕಾಡುವುವು. ||೮೫-೮೬||

ಆ ಕಲ್ಪವೃಕ್ಷಗಳ ಮಧ್ಯೇ ಒಂದು ಕೋಟಿಯೋಜನ ವಿಶಾಲವಾದ ರತ್ನಸಿಂಹಾಸನವನ್ನು ಇಡಿಸುವನು. ಅದರ ಮುಂದೆ ಅತ್ಯಂತ ರಮಣೀಯವಾದ

ತದಗ್ರೇ ಕಲ್ಪಿತೋ ತೇನ ಪುಷ್ಪಶಯ್ಯಾ ಮನೋರಮಾ ।
ತತ್ರ ಸ್ಥಿತಮುಮಾಕಾಂತಂ ಮಾಂ ಚಿಂತಯತಿ ಸಾದರಂ ॥೮೮॥

ನವ್ಯಚಿತ್ರದುಕೂಲಾನಾಂ ಪುಂಜೈರಾವೇಷ್ಟಿತಂ ಮುಹುಃ ।
ನಾನಾಪರಿಮಳದ್ರವ್ಯರಸರಾಗಾನುರಂಜಿತಂ ॥೮೯॥

ದಿವ್ಯಾಭರಣಸಂಕೀರ್ಣಭಿತ್ತಿಕಾಂಚಿವಿರಾಜಿತಂ ।
ರತ್ನಕೇಯೂರನಿಕರಾಕಾಂತಿರಾಜಿವಿರಾಜಿತಂ ॥೯೦॥

ರತ್ನಾಂಗದಾರ್ಬುದಾಕೀರ್ಣಂ ತತ್ಕಾಂತಿನಿಕರಾಶ್ರಿತಂ ।
ರತ್ನೋತ್ತಮಪರಿಕ್ರಾಂತಕಟಿಸೂತ್ರವಿರಾಜಿತಂ ॥೯೧॥

ದಿವ್ಯರತ್ನಾಂಗುಲೀಯಾನಾಂ ಸಹಸ್ರೇಣ ಸಮನ್ವಿತಂ ।
ಅಪಾರತಾರಹಾರಾಣಾಂ ವಿಹಾರೈಶ್ಚ ವಿರಾಜಿತಂ ॥೯೨॥

ಹೂವಿನ ಹಾಸಿಗೆಯು ಸಿದ್ಧವಾಗುವುದು. ಆ ಪುಷ್ಪಶಯನದಲ್ಲಿ ಸುಖವಾಗಿ ಕುಳಿತಿರುವ ಉಮಾಕಾಂತನಾದ ನನ್ನನ್ನು ಈರೀತಿ ಆತನು ಭಾವಿಸುತ್ತಾನೆ. ||೮೭-೮೮||

ಆ ಪುಷ್ಪಶಯ್ಯೆಯಲ್ಲಿ ಮಂಡಿಸಿರುವ ಉಮಾಕಾಂತನು ಹೊಸ ಹೊಸ ಚಿತ್ರವಿಚಿತ್ರಗಳಾದ ಪಂಚೆಗಳನ್ನು ಧರಿಸಿರುವನು. ಮೈಗೆ ಅನೇಕ ವಿಧವಾದ ಸುಗಂಧದ್ರವ್ಯಗಳನ್ನು ಲೇಪಿಸಿಕೊಂಡಿರುವುದರಿಂದ ಮನೋಹರನಾಗಿ ಕಾಣುತ್ತಾನೆ. ಅಮೋಘವಾದ ಒಡವೆಗಳನ್ನು ಧರಿಸಿರುವನು. ಮತ್ತು ಅನೇಕ ಒಡವೆಗಳಿಂದ ಕೂಡಿದ ಒಡ್ಯಾಣವನ್ನೂ ಹಾಕಿಕೊಂಡಿರುವನು. ರತ್ನಮಯಗಳಾದ ಕರ್ಣಕುಂಡಲಗಳಿಂದ ಅಲಂಕೃತನಾಗಿರುವನು. ||೮೯-೯೦||

ರತ್ನಖಚಿತವಾದ ಭುಜಕೀರ್ತಿಗಳನ್ನು ಹಾಕಿಕೊಂಡಿರುವುದರಿಂದ ಅದರ ಕಾಂತಿ ಪ್ರಸರಿಸುತ್ತಿರುವುದು. ಮತ್ತು ಒಳ್ಳೊಳ್ಳೆ ರತ್ನಗಳನ್ನು ಮೆಟ್ಟಿರುವ ಉಡಿದಾರವನ್ನು ಸೊಂಟದಲ್ಲಿ ಧರಿಸಿರುವನು. ದಿವ್ಯಮಣಿಗಳನ್ನು ಕೆತ್ತಿದ (ಹರಳುಕಟ್ಟಿದ) ಒಂದುಸಾವಿರ ಉಂಗುರಗಳು ಬೆರಳುಗಳಲ್ಲಿ ಶೋಭಿಸುತ್ತಿವೆ. ಲೆಕ್ಕವಿಲ್ಲದಷ್ಟು ಹೊಸದಾದ ನಕ್ಷತ್ರಮಾಲೆಗಳಿಂದ ಕಂಗೊಳಿಸುತ್ತಿರುವನು. ||೯೧-೯೨||

ಮಣಿಶ್ರೇಷ್ಠ ಸಮಾಕೀರ್ಣಕರ್ಣಾಭರಣಭೂಷಿತಂ ।
ರತ್ನರತ್ನ ಸಮಾಕೀರ್ಣಕೋಟೀರಗಣರಾಜಿತಂ ॥೯೩॥

ನೂಪುರೈರಪ್ಯಸಾರೈಶ್ಚ ಪಾದಯೋಃ ಪರಿವೇಷ್ಟಿತಂ ।
ಧೂಪೈರ್ವಿಚಿತ್ರೈರಗರುಪ್ರಭವೈರಪಿಧೂಪಿತಂ ॥೯೪॥

ರತ್ನನೀರಾಜನವ್ರಾತನಿರಾಜಿತಮುಮಾಪತಿಂ ।
ದಿವ್ಯಪಕ್ವಾನ್ನಗಿರಿಭಿಃ ಶರ್ಕರಾಪರ್ವತಾನ್ವಿತೈಃ ॥೯೫॥

ದಿವ್ಯಾಜ್ಯವಾಹಿನೀಯುಕ್ತೈಃ ಸಂತೋಷಯತಿ ಮಾಂ ಮುಹುಃ ।
ಸೂಪಶಾಕಗಿರಿವ್ರಾತಸಮೇತೌದನಪರ್ವತೈಃ ॥೯೬॥

ಮಧ್ವಾಜ್ಯವಾಹಿನೀಯುಕ್ತೈಸ್ತೋಷಯತ್ಯನುವಾಸರಂ ।
ಸುಧಾಫಲೈರಸಾರೈರ್ಮಾಂ ವಿವಿಧೈರ್ಮಧುರೋತ್ತಮೈಃ ॥೯೭॥

ಉತ್ತಮ ಮಣಿಗಳನ್ನು ಕೆತ್ತಿದ ಹತ್ತಕಡಕುಗಳನ್ನು ಕಿವಿಯಲ್ಲಿ ಧರಿಸಿರುವನು. ಮತ್ತು ಅಲ್ಲಲ್ಲಿ ರತ್ನಗಳನ್ನು ಮೆಟ್ಟಿದ ಕೋಟೀರ (ಕಿರೀಟ) ಸಮೂಹಗಳಿಂದ ಶೋಭಿಸುತ್ತಿರುವನು. ಅಲ್ಲದೇ ಪಾದಗಳಲ್ಲಿ ಅನೇಕನೂಪುರ (ಕಾಲುಬಳೆ ಅಥವಾ ಪಿಲ್ಲಿ)ಗಳು ವಿರಾಜಿಸುತ್ತಿರುವುವು. ಅಗರು ಮೊದಲಾದ ಸುಧೂಪಗಳನ್ನು ಸೇವಿಸುತ್ತಿರುವನು. ॥೯೩-೯೪॥

ರತ್ನಮಯವಾದ ಆರತಿಯಿಂದ ನೀರಾಜನಮಾಡಿಸಿಕೊಳ್ಳುತ್ತಿರುವನು. ಹೀಗೆ ಉಮಾಪತಿಯು ಆ ಪುಷ್ಪಶಯ್ಯೆಯಲ್ಲಿ ಶೋಭಿಸುವನು.” ಎಂದು ಮುಂತಾಗಿ ಆ ಶೈವನು ತನ್ನ ಮನಸ್ಸಿನಿಂದ ನನ್ನನ್ನು ಭಾವಿಸುತ್ತಾನೆ. ಅಲ್ಲದೇ ಪ್ರಪಕ್ವಾನ್ನ ರಾಶಿಗಳನ್ನೂ ಮತ್ತು ಬೆಟ್ಟದಂತೆ ಇರುವ ಸಕ್ಕರೆರಾಶಿಯನ್ನು ಮನಸಾ ಸಮರ್ಪಿಸುವನು. ಅಲ್ಲದೆ ತೊವ್ವೆ, ಪಲ್ಯ ಮುಂತಾದುವುಗಳಿಂದ ಮಿಶ್ರವಾದ, ಬೆಟ್ಟಕ್ಕೆ ಸಮವಾದ ಅನ್ನರಾಶಿಯನ್ನೂ ಹೊಳೆಯಹಾಗೆ ಹರಿಯುವ ತುಪ್ಪದ ಕಾಲುವೆಯನ್ನೂ ಸಮರ್ಪಿಸಿ ಅವನು ನನಗೆ ಸಂತೋಷವನ್ನುಂಟುಮಾಡುವನು. ॥೯೫-೯೬॥

ನದಿಯ ಹಾಗೆ ಹರಿಯುವ ಜೇನುತುಪ್ಪದ ಧಾರೆಗಳಿಂದಲೂ, ಅಮೃತತುಲ್ಯಗಳಾದ ಹಣ್ಣುಗಳಿಂದಲೂ ಮತ್ತು ಅನೇಕ ತರಹ ಸಿಹಿ ತಿಂಡಿಗಳಿಂದಲೂ ಅಮೃತ

ಸಂತೋಷಂ ಜನಯತ್ಯೇವ ಸುಧಾಧಾರಾಭಿರಾದರಾತ್ ।
ತಾಂಬೂಲಪರ್ವತಾನೇಕಪೂಗಪರ್ವತಸಂಕುಲಾನ್ ॥೯೮॥

ಮುಕ್ತಾಚೂರ್ಣಾನ್ವಿತಾನ್ ದಿವ್ಯಾನ್ ಪ್ರಯಚ್ಛತಿ ಯಥೇಚ್ಛಯಾ ।
ಏಲಾಲವಂಗಗಿರಯಃ ಖದಿರಾ ಗಿರಯೋಽಪಿ ಮೇ ॥೯೯॥

ಏವಂ ಪ್ರತಿಕ್ಷಣಂ ತೇನ ಮಾನಸಂ ಸಮುಪೂಜನಂ ।
ಕರೋತಿ ಪ್ರತ್ಯಹಂ ಭಕ್ತ್ಯಾ ನೃತ್ಯತ್ಯಗ್ರೇ ಯಥೇಚ್ಛಯಾ ॥೧೦೦॥

ಪಂಚಾಮೃತಪ್ರವಾಹೈರ್ಮಾಮಭಿಷಿಚ್ಯ ಮನೋಹರೈಃ ।
ಏವಂ ಪೂಜಾವಿಧಾನೇನ ಕಲ್ಪಿತೇ ಶಾಂಭವೇನ ಮೇ ॥೧೦೧॥

ತಚ್ಚಿತ್ತೇ ಯಾದೃಶಂ ಸೌಖ್ಯಂ ತನ್ನಕ್ವಾಪಿ ಮನೋಹರಂ ।
ಮಂದಿರಂ ಶಾಂಕರಾಕಾರಂ ದೃಶ್ಯತೇ ನಂದಿಕೇಶ್ವರ ॥೧೦೨॥

ಧಾರೆಗಳಿಂದಲೂ ಆ ಶೈವನು ನನಗೆ ತೃಪ್ತಿಯನ್ನುಂಟುಮಾಡುವನು. ಅಲ್ಲದೇ ಅಡಿಕೆ ರಾಶಿಗಳಿಂದ ಕೂಡಿದ ತಾಂಬೂಲಗಳನ್ನು ಸಮರ್ಪಿಸುವನು. ॥೯೭-೯೮॥

ಮುತ್ತಿನ ಚಿಪ್ಪಿನ ಸುಣ್ಣಗಳನ್ನು (ಚಿಪ್ಪಿನ ಸುಣ್ಣ) ಹಚ್ಚಿರುವ, ಮತ್ತು ಏಲಕ್ಕಿ, ಲವಂಗ ಇವುಗಳ ಚೂರುಗಳನ್ನು ಹಾಕಿದ ಪರಿಮಳ ತಾಂಬೂಲವನ್ನು ನನಗೆ ಸಮರ್ಪಿಸುವನು. ಖದಿರವೆಂಬ ಸುಗಂಧದ್ರವ್ಯವನ್ನು ಅರ್ಪಿಸುತ್ತಾನೆ. ಹೀಗೆ ಪ್ರತಿಕ್ಷಣವೂ ಭಕ್ತಿಯಿಂದ ಮಾನಸಪೂಜೆಯನ್ನು ಮಾಡಿ ಆನಂದದಿಂದ ಭಕ್ತಿಭಾವವನ್ನು ತೋರ್ಪಡಿಸುತ್ತಾ ಕುಣಿಯುತ್ತಾನೆ. ॥೯೯-೧೦೦॥

ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆ ಈ ಮೊದಲಾದ ಪಂಚಾಮೃತಗಳಿಂದ ಅಭಿಷೇಕಮಾಡಿದಂತೆ ಭಾವಿಸಿಕೊಳ್ಳುತ್ತಾನೆ. ಹೀಗೆ ಪೂಜಾದ್ರವ್ಯಗಳಿಂದಲೂ, ಪೂಜಾವಿಧಾನದಿಂದಲೂ ಮನಸ್ಸಿನಿಂದ ನನ್ನನ್ನು ಅರ್ಚಿಸಿ ಅವನು ಆನಂದಪಡುತ್ತಾನೆ. ಆತನ ಮಾನಸಿಕ ಆನಂದಕ್ಕೆ ಮಿಗಿಲಾದುದು ಬೇರೆ ಇಲ್ಲ. ಎಲೈ ನಂದೀಶ್ವರನೇ, ಈ ಭವನಗಳೆಲ್ಲಾ ನನಗೆ ಆ ಶಿವಭಕ್ತನ ಆಕಾರದಂತೆ ತೋರುತ್ತವೆ. ॥೧೦೧-೧೦೨॥

ಸಮೃದ್ಧಸದನಂ ತ್ಯಕ್ತ್ವಾ ಧನಧಾನ್ಯಾದಿಭಿರ್ನರಃ ।
ಅನ್ಯತ್ರ ಯಾತಿ ಕಿಂ ಲೋಕೇ ತಥಾ ತತ್ತ್ಯಜ್ಯತೇ ಕಥಂ ॥೧೦೩॥

ಗೌರ್ಯಾ ಸಹ ವಿಹಾರಾರ್ಥಂ ಪುಷ್ಪಪ್ರಾಸಾದಕಲ್ಪನಾ ।
ಕ್ರಿಯತೇ ತೇನ ಸತತಂ ತತ್ತ್ಯಾಗೇ ಮತಿರೇವ ನ ॥೧೦೪॥

ಶರೀರೇ ಯಾದೃಶೀ ಪ್ರೀತಿರ್ಮದೀಯೇ ಮಮ ಸರ್ವಥಾ ।
ತತೋಽಪ್ಯತ್ರಾಧಿಕಾ ಪ್ರೀತಿಃ ಶಾಂಭವೇ ವಿಗ್ರಹೇ ಸದಾ ॥೧೦೫॥

ತೇನ ಛತ್ರಾಣ್ಯಪಾರಾಣಿ ಮಂಡಿತಾನಿ ಮನೋಹರೈಃ ।
ಕಲ್ಪಿತೈರ್ಮಣಿಭಿರ್ದಿವ್ಯೈರ್ಮುಕ್ತಾಜಾಲಾನ್ವಿತಾನ್ಯಪಿ ॥೧೦೬॥

ಸುಧಾಕರಕರಾಕಾರೈರಪಾರೈರಪಿ ಚಾಮರೈಃ ।
ಚಾರುಚಾಮೀಕರಾಕಾರದಂಡಮಂಡಲಮಂಡಿತೈಃ ॥೧೦೭॥

ಲೋಕದಲ್ಲಿ ದವಸಧಾನ್ಯ, ಹಣಕಾಸುಗಳಿಂದ ತುಂಬಿದ ಮನೆಯನ್ನು ಬಿಟ್ಟು ಮನುಷ್ಯರು ಬೇರೆ ಕಡೆ ಹೋಗದಿರುವಂತೆ, ನಾನು ಅಂತಹ ಶೈವನ ಚಿತ್ತಮಂದಿರವನ್ನು ಬಿಟ್ಟು ಬೇರೆ ಹೋಗಲಾರೆ. ಅಲ್ಲದೆ, ನಾನು ಗೌರಿಯೊಡನೆ ಕ್ರೀಡಿಸಬೇಕು ಎಂದು ಯೋಚಿಸಿ ಆತನು ಮನಸ್ಸಿನಿಂದಲೇ ಪುಷ್ಪಗೃಹವನ್ನು ಕಟ್ಟುವನು. ಹೀಗೆ ಯಾವಾಗಲೂ ನನ್ನನ್ನು ಭಾವಿಸುತ್ತಿರುವ ಆತನನ್ನು ಬಿಟ್ಟು ಬೇರೆ ಹೋಗಲು ನನಗೆ ಮನಸ್ಸೇ ಬಾರದು. ||೧೦೩-೧೦೪||

ನನಗೆ ನನ್ನ ಶರೀರದಲ್ಲಿ ಎಷ್ಟರಮಟ್ಟಿನ ವಿಶ್ವಾಸವೋ ಅದಕ್ಕಿಂತಲೂ ಹೆಚ್ಚು ವಿಶ್ವಾಸವು ಆ ಭಕ್ತನ ದೇಹದಲ್ಲಿರುವುದು. ||೧೦೫||

ಆ ಶೈವನು ಪ್ರತಿನಿತ್ಯವೂ ಅನೇಕ ಛತ್ರಿಗಳನ್ನು ನನಗೆ ಹಿಡಿದಂತೆ ಭಾವಿಸುತ್ತಾನೆ. ಆ ಛತ್ರಿಗಳಿಗೆ ಮುತ್ತಿನ ಗೊಂಚಲುಗಳನ್ನು ತೂಗುಬಿಟ್ಟಿರುವರು. ಮತ್ತು ದಿವ್ಯವಾದ ಶ್ವೇತಛತ್ರಿಯನ್ನೂ ಚಂದ್ರಕಿರಣಗಳಂತೆ ಬೆಳ್ಳಗೆ ಹರಡಿರುವ, ಚಾಮರಗಳನ್ನೂ ಹಿಡಿಯುವನು. ಆ ಚಾಮರಗಳಿಗೆ ಸುವರ್ಣನಿರ್ಮಿತವಾದ ಹಿಡಿಕೆಗಳಿರುತ್ತವೆ. ಒಂದು ದಿನವೂ ತಪ್ಪದಂತೆ ಶೈವನು ಈ ಭಾವನೆಯಿಂದ ಮಾನಸಿಕ ಪೂಜೆಯನ್ನು ಮಾಡುತ್ತಾನೆ. ರಮಣೀಯವಾದ ಆ ಶಂಕರನ ಶರೀರವೇ ನನಗೆ ಮನೆಯಾಗಿರುತ್ತದೆ. ||೧೦೬-೧೦೭||

ನಿಯತಂ ಶಾಂಕರೋ ನಿತ್ಯಂ ಮಮ ಸೇವಾಂ ಕರೋತ್ಯತಃ ।
ರಮ್ಯಂ ಶಾಂಕರಮೇವಾತ್ರ ಶರೀರಂ ಮಮ ಮಂದಿರಂ ॥೧೦೮॥

ಕಿಂ ಕೈಲಾಸೇನ ಕಾಶ್ಯಾಂ ವಾ ಕಿಂ ಗೌರ್ಯಾ ಮಂದಿರೇಣ ವಾ ।
ಶರೀರಂ ಶಾಂಕರಂ ಮನ್ಯೇ ರತ್ನಮಂದಿರಮಂದಿರಂ ॥೧೦೯॥

ಪ್ರತಿಕ್ಷಣಂ ತೇನ ಪೂಜಾ ಯಥಾ ವಿವಿಧಸಾಧನೈಃ ।
ಕ್ರಿಯತೇ ತಾದೃಶೀ ಕುತ್ರ ಪೂಜೋಪಕರಣಾನಿ ತೇ ॥೧೧೦॥

ಮರಂದರಸಸಂಕೀರ್ಣಕುಸುಮಾಸಾರಕಲ್ಪನಾ ।
ಕ್ರಿಯತೇ ತೇನ ಸಾಽನ್ಯೇನ ಕಲ್ಪನೀಯಾ ಕಥಂ ಮಮ ॥೧೧೧॥

ತಾದೃಶಃ ಶಾಂಕರೋ ವೀರಃ ಕಲೌ ಕಶ್ಚಿದ್ಭವಿಷ್ಯತಿ ।
ದ್ವಿತ್ರಾ ಸಂತ್ಯಧುನಾ ನಂದಿನ್ ತೇ ತೇ ಪೂಜ್ಯಾ ನ ಸಂಶಯಃ॥೧೧೨॥

ಏತಾವತ್ಕಾಲಪರ್ಯಂತಂ ತ್ವಯಾ ಪೂಜಾ ಕೃತಾ ಮಮ ।
ಪರಂ ತು ನ ತಥಾ ಪೂಜಾ ಕೃತಾ ಜ್ಞಾತಾಪಿ ನ ಧ್ರುವಂ ॥೧೧೩॥

ಕೈಲಾಸ, ಕಾಶಿ, ಗೌರಿಯ ಅಂತಃಪುರ, ಇವುಗಳಿಂದ ನನಗೇನೂ ಹೆಚ್ಚು ತೃಪ್ತಿಯಿಲ್ಲ. ನನಗೆ ಆ ಶೈವನ ಶರೀರವೇ ರತ್ನಸೌಧವು. ಬೇರೆ ನನಗೆ ಯಾವ ಪ್ರಾಸಾದವೂ ಬೇಡ. ಆತನು ಪ್ರತಿದಿನವೂ ತಪ್ಪದೇ ಮಾನಸಿಕ ಪೂಜಾಸಲಕರಣೆಗಳಿಂದ ನನಗೆ ಪೂಜೆಮಾಡುತ್ತಾನೆ. ಇಂತಹ ಪೂಜೆ ಬೇರೆ ಕಡೆ ನನಗೆ ಸಲ್ಲುವುದೇ ಇಲ್ಲ. ॥೧೦೯-೧೧೦॥

ಪುಷ್ಪರಸ ತುಂಬಿದ ಹೂಗಳನ್ನು ಅಭಿಷೇಕಾನಂತರ ಪೂಜಿಸಿದಂತೆ ಆತನು ಭಾವಿಸುತ್ತಾನೆ. ಈ ತರಹ ಕಲ್ಪನೆಯು ಇನ್ನೊಬ್ಬನಿಗಸಾಧ್ಯ. ಅಂತಹ ಶೈವ ವೀರನು ಕಲಿಯುಗದಲ್ಲಿ ಎಲ್ಲಿಯೋ ಒಬ್ಬನು ಹುಟ್ಟುವನು. ಎಲೈ ನಂದಿಯೇ, ಈಗ ಎರಡು ಮೂರು ಜನ ಮಾತ್ರ ಅಂತಹವರು ಇದ್ದಾರೆ. ನಿಜವಾಗಿಯೂ ಅವರು ಪೂಜಾಯೋಗ್ಯರು. ॥೧೧೧-೧೧೨॥

ಇಲ್ಲಿಯವರೆಗೆ ನೀನೂ ನನ್ನ ಆರಾಧನೆ ಮಾಡಿರುವೆ. ಆದರೆ ಶೈವನು ಮಾಡಿದ ಆ ತರಹ ಪೂಜೆಯನ್ನು ನಾನೆಂದಿಗೂ ಮರೆಯಲಾರೆನು. ಎಲೈ ನಂದಿಯೆ,

ಅಧುನಾ ಗಮ್ಯತೇ ನಂದಿನ್ ರೇವಾತೀರಂ ಮನೋಹರಂ ।
ತತ್ರಾಸ್ತಿ ಶಾಂಕರಃ ಕಶ್ಚಿತ್ತೇನ ಧ್ಯಾನಂ ಕೃತಂ ಮಮ ॥೧೧೪॥

ಪರಂತು ನ ತಥಾ ಪೂಜಾ ಕೃತಾ ಜ್ಞಾತಾಪಿ ನ ಧ್ರುವಂ ।
ಆಸಾಯಂ ತತ್ರ ವಿಶ್ರಾಮ್ಯ ಗೌರ್ಯಾ ಸಹ ವಿಶೇಷತಃ ॥೧೧೫॥

ಪ್ರತಿಕ್ಷಣಮಪಾರಾಭಿಃ ಪೂಜಾಭಿಃ ಪರಿವೇಷ್ಟಿತಃ ।
ವಸಾಮಿ ಪರಮಾನಂದಸಾಗರಃ ಕರುಣಾಕರಃ ॥೧೧೬॥

ಸಾಯಂಕಾಲೇಪಿ ಪೂಜಾಂ ಮೇ ಸ ಕರಿಷ್ಯತಿ ಸಾದರಂ ।
ಮಹಾನಿಶಿ ಮಹಾಪೂಜಾಂ ಸ ಕರಿಷ್ಯತಿ ಸಾದರಂ ॥೧೧೭॥

ತತಃ ಪರಂ ಪುಷ್ಪಶಯ್ಯಾಂ ಕಲ್ಪಯಿಷ್ಯತಿ ಮೇ ಪರಾಂ ।
ರತ್ನಪ್ರಾಸಾದಮಧ್ಯಸ್ಥಾಂ ಮಂದಿರೇ ರತ್ನಸುಂದರೇ ॥೧೧೮॥

ವಿಹಾರಸಾಧನಂ ಸರ್ವಂ ಕಲ್ಪಯಿಷ್ಯತಿ ಭಕ್ತಿತಃ ।
ರತ್ನದೀಪಾಃ ಸುಧಾಕಾರಾಃ ಫಲಸಾರಮನೋಹರಾಃ ॥೧೧೯॥

ಈಗ ಆ ರೇವಾತೀರಕ್ಕೆ ಹೋಗುತ್ತೇನೆ. ಏಕೆಂದರೆ ಅಲ್ಲಿ ಒಬ್ಬ ಶೈವನು ಯಾವಾಗಲೂ ನನ್ನನ್ನು ಧ್ಯಾನಿಸುತ್ತಿರುವನು. ॥೧೧೩-೧೧೪॥

ಹಾಗೆ ಯಾರೂ ಇಲ್ಲಿನ ವರೆಗೆ ನನ್ನನ್ನು ಪೂಜಿಸಿಲ್ಲ. ಅಲ್ಲಿ ಸಾಯಂಕಾಲದ ವರೆಗೆ ವಿಶ್ರಮಿಸಿಕೊಂಡು ಅವನು ಮಾಡುವ ಪ್ರತಿಕ್ಷಣದ ಪೂಜೆಯನ್ನು ಗೌರಿಯೊಡನೆ ಸ್ವೀಕರಿಸಿ, ಅತ್ಯಂತ ಆನಂದದಿಂದ ವಾಸಮಾಡುತ್ತೇನೆ. ಆ ಶೈವನು ಪ್ರತಿ ಸಂಜೆಯಲ್ಲಿಯೂ ಪೂಜೆಮಾಡುತ್ತಾನೆ. ಮಹಾಶಿವರಾತ್ರಿಯಲ್ಲಿ ಮಹಾಪೂಜೆಯನ್ನೂ ಮಾಡುವನು. ॥೧೧೫-೧೧೬-೧೧೭॥

ಅನಂತರ ರತ್ನಖಚಿತವಾದ ಒಂದು ಸುಂದರವಾದ ಮನೆಯಲ್ಲಿ ಅತ್ಯಂತ ಸುಂದರವಾದ ಪುಷ್ಪಶಯ್ಯೆಯನ್ನು ರಚಿಸುತ್ತಾನೆ. ಅನಂತರ ಕ್ರೀಡಾಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸುತ್ತಾನೆ. ಅಮೃತಮಯಗಳಾದ ರತ್ನದೀವಟಿಗೆಗಳನ್ನು ಹಚ್ಚುತ್ತಾನೆ. ಸವಿಯಿಂದ ಕೂಡಿರುವ ಹಣ್ಣುಗಳನ್ನು ನಿವೇದನಮಾಡುವನು. ॥೧೧೮-೧೧೯॥

ಪುಷ್ಪಸಾರಾಃ ಕಲ್ಪನೀಯಾ ಮಂದವಾತಾ ಮನೋಹರಾಃ ।
ತತಃ ಪರಂ ಸ ವಿರತೋ ವಿಹಾರನಿರತೇ ಮಯಿ ॥೧೨೦॥

ನಿದ್ರಾಮುದ್ರಾನ್ವಿತಃ ಸೋಽಪಿ ಭವಿಷ್ಯತಿ ಕಥಂಚನ ।
ಇದಾನೀಂ ತು ತ್ವಯಾ ನಂದಿನ್ ಕೈಲಾಸಂ ಪ್ರತಿ ಸತ್ವರಂ ॥೧೨೧॥

ಗಂತವ್ಯಂ ರಕ್ಷಣಂ ಕಾರ್ಯಂ ಕೈಲಾಸದ್ವಾರಮಂದಿರೇ ॥೧೨೨॥

ಪುನರಪ್ಯಮೃತಾಮೃತಾ ಮತಾ
ಮಮ ನಾಮಾಮೃತಪಾನಲೋಲುಪಾ
ರಸನಾ ಶಿವಕೀರ್ತನೋತ್ಸುಕಾ ।
ಶಿವಗಂಗೇವ ಪುನಾತಿ ಮಾನಸಂ ॥೧೨೩॥

ಶಿವ ಸಜ್ಜನಸಾಧುವಾದಗೋಷ್ಠೀ
ಭುವನಾನ್ಯಪಿ ತಾರಯಂತಿ ಸತ್ಯಂ ॥೧೨೪॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಭಕ್ತಿಮಾನಸ ಪೂಜಾವರ್ಣನಂ ನಾಮ
ಚತುರ್ವಿಂಶೋಽಧ್ಯಾಯಃ

ಆಮೇಲೆ ಆತನು ಪುಷ್ಪಸಾರಗಳನ್ನೂ ಅರ್ಪಿಸುವನು. ಮೆಲ್ಲಮೆಲ್ಲನೆ ತಂಗಾಳಿಯು ಬೀಸುವಂತೆ ಮಾಡುವನು. ಬಳಿಕ ನಾನು ವಿಹಾರಾಸಕ್ತನಾಗಲು ಆತನು ನಿದ್ದೆಯಿಂದ ಮುದ್ರಿತನಾಗುವನು. ಎಲೈ ನಂದಿಕೇಶ್ವರನೇ, ನೀನು ಈಗ ಜಾಗ್ರತೆ ಕೈಲಾಸಕ್ಕೆ ಹೋಗು. ಅಲ್ಲದೆ ಆ ಪಟ್ಟಣವನ್ನು ರಕ್ಷಣೆಮಾಡತಕ್ಕ ಕೆಲಸವು ನಿನ್ನ ಪಾಲಿಗೆ ಸೇರಿದೆ. ಮತ್ತು ಕೈಲಾಸದ ಬಾಗಿಲಿನಲ್ಲಿ ನೀನು ಸರ್ವದಾ ಇರಬೇಕು. ||೧೨೦-೧೨೧-೧೨೨||

ಎಲೈ ನಂದೀಶನೇ, ಪುನಃ ನಿನ್ನ ನಾಲಿಗೆಯು ನನ್ನ ನಾಮಾಮೃತಪಾನ ದಲ್ಲಿ ಆಸಕ್ತವಾಗಲಿ. ಶ್ರೀ ಈಶ್ವರನ ಕೀರ್ತಿಯನ್ನು ಹಾಡಲಿ. ನನ್ನ ಶಿಖೆಯ ಲ್ಲಿರುವ ಗಂಗೆಯಂತೆ ಶಿವನಾಮಕೀರ್ತನೆ ಮಾಡುವ ನಿನ್ನ ನಾಲಿಗೆಯೂ ಪವಿತ್ರ

ವಾಗಲಿ. ಭಕ್ತರಾದ ಶಿವಸತ್ಪುರುಷರ ಸಹವಾಸದಿಂದ ಲೋಕಗಳೆಲ್ಲಾ ಪವಿತ್ರವಾಗುವುವು. ಹೀಗೆ ಶಿವನು ನಂದಿಕೇಶ್ವರನಿಗೆ ಹೇಳಿದನು. ||೧೨೩-೧೨೪||

ಇಲ್ಲಿಗೆ ಶ್ರೀ ಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಭಕ್ತಮಾನಸಪೂಜಾವರ್ಣನವೆಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಪಂಚವಿಂಶೋಽಧ್ಯಾಯಃ

॥ ವ್ಯಾಸ ಉವಾಚ ॥

ಇತ್ಯುಕ್ತ್ವಾ ಶ್ರೀಮಹಾದೇವೋ ದೇವದೇವಃ ಶಿವಾಯುತಃ ।
ಪ್ರಾಪ ಶೈವಮನೋರೂಪಂ ಮಂದಿರಂ ಸರ್ವಸುಂದರಂ ॥೧॥

ತೇನ ಧ್ಯಾತೋ ಮಹಾದೇವಃ ಸರ್ವದೇವಶಿರೋಮಣಿಃ ।
ಅನಂತವೇದವೇದಾಂತವಂದಿವೃಂದನಿಷೇವಿತಃ ॥೨॥

ಸೇವಿತಃ ಪರಯಾ ಭಕ್ತ್ಯಾ ಗಣೈರಗಣಿತೈರಪಿ ।
ವಂದಾರುಬೃಂದಸಂದೋಹೈರಮಂದೈರಭಿವಂದಿತಃ ॥೩॥

ತುಷಾರಗಿರಿಸಂಕಾಶವೃಷಭಾರೂಢವಿಗ್ರಹಃ ।
ರತ್ನಚ್ಛತ್ರಾರ್ಬುದಚ್ಛಾಯಾ ಸಮಾಚ್ಛಾದಿತವಾಹನಃ ॥೪॥

ಇಪ್ಪತ್ತೈದನೆಯ ಅಧ್ಯಾಯ

ಹೀಗೆ ಆ ಪರಮೇಶ್ವರನು ನಂದಿಕೇಶ್ವರನೊಡನೆ ಹೇಳಿ, ದೇವದೇವನಾದ ಮಹೇಶ್ವರನು ಗೌರಿಯೊಂದಿಗೆ ಆ ಶೈವನ ಮಾನಸಿಕ ಸುಂದರ ಮಂದಿರವನ್ನು ಪ್ರವೇಶ ಮಾಡಿದನು. ಸಮಸ್ತ ದೇವತೆಗಳ ಅಗ್ರೇಸರನೂ, ಅಪಾರ ವೇದಗಳೆಂಬ ಹೊಗಳು ಭಟರಿಂದ ಸೇವಿತನೂ ಆದ ಪರಶಿವನನ್ನು ಶೈವನು ಹಾಗೆ ಧ್ಯಾನಿಸಿದನು. ॥೧-೨॥

ಆ ಈಶ್ವರನನ್ನು ಅನಂತ ಪ್ರಮಥಗಣಗಳು ಸೇವಿಸುತ್ತಿದ್ದರು. ಅನೇಕ ಹೊಗಳು ಭಟರು ಸ್ತೋತ್ರಗಳನ್ನು ಮಾಡುತ್ತಿದ್ದರು. ಆತನು ಹಿಮವತ್ಪರ್ವತದಂತೆ

ಅಪಾರಚಾಮರೋದ್ಭೂತವಾತಪೋತನಿಷೇವಿತಃ ।
ಗೌರೀರಮ್ಯಾಂಗಸಂಗೇನ ಸರ್ವಮಂಗಳಸಂಯುತಃ ॥೫॥

ಸ್ವಮನೋಮಂದಿರಾಪಾರಪ್ರಾಕಾರಮಣಿಮಂಟಪೇ ।
ಪುಷ್ಪೋಚ್ಚಯಸಮಾಕೀರ್ಣೇ ಸ್ಥಿತಮೀಶಮಚಿಂತಯತ್ ॥೬॥

ತತ್ರೋಪಹಾರೈರುತ್ಕೃಷ್ಟೈಸ್ಸಂತುಷ್ಟಂ ಪುಷ್ಪಪೂಜಯಾ ।
ದಿವ್ಯನಾಟ್ಯಾಂಗನಾನಾಟ್ಯವಿಲೋಕನರತಂ ಮುಹುಃ ॥೭॥

ಅಪಾರರತ್ನದ್ವಾರಾಣಿ ತೀರ್ತ್ವಾ ತೀರ್ತ್ವಾನ್ಯತಾನ್ಯಪಿ ।
ಆಯಾಂತಂ ವೃಷಭಾರೂಢಂ ಚಿಂತಯಾಮಾಸ ಶಂಕರಂ ॥೮॥

ಶುಭ್ರವಾಗಿರುವ ವೃಷಭವನ್ನು ಏರಿದ್ದನು. ಸುತ್ತಲೂ ರತ್ನಮಯಗಳಾದ ಅರ್ಬುದ ಸಂಖ್ಯೆಯ ಛತ್ರಿಗಳನ್ನು ಹಿಡಿದಿರುವುದರಿಂದ ಆತನ ವೃಷಭವು ಮುಚ್ಚಿಹೋಗಿದ್ದಿತು. ||೩-೪||

ಗಣನೆಗೆ ಸಿಗದಷ್ಟು ಚಾಮರಗಳನ್ನು ಬೀಸುತ್ತಿದ್ದರು. ಆಗ ಆ ಚಾಮರದ ಗಾಳಿಯು ಈಶ್ವರನಿಗೆ ಆನಂದವನ್ನು ಉಂಟುಮಾಡುತ್ತಿತ್ತು. ಗೌರೀದೇವಿಯ ಅಂಗಸ್ಪರ್ಶದಿಂದ ಅತ್ಯಂತವಾಗಿ ಶೋಭಿಸುತ್ತಿದ್ದನು. ತನ್ನ ಮಾನಸಿಕ ಮಂದಿರಕ್ಕಿರುವ ಹಾಗೆ ಅನಂತ ರತ್ನಕೋಟೆಗಳಿಂದ ಕಟ್ಟಿದ ಒಂದು ಮಂಟಪವು ಅಲ್ಲಿ ಸಿದ್ಧವಾಗಿತ್ತು. ಅಲ್ಲದೆ ಆ ಮಂಟಪವು ಹೂಮಾಲೆಗಳಿಂದ ಅಲಂಕೃತವಾಗಿದ್ದಿತು. ಹೀಗಿರುವ ರತ್ನಮಂಟಪದಲ್ಲಿ ಈಶನು ಮಂಡಿಸಿದ್ದನು. ಈ ರೀತಿ ಭಾವನೆಯನ್ನು ಆ ಶೈವನು ಮನಸ್ಸಿಗೆ ತಂದುಕೊಂಡನು. ||೫-೬||

ಆ ಶೈವಶ್ರೇಷ್ಠನ ಮನಸ್ಸಿನಲ್ಲಿ ನೆಲಸಿದ ಶಂಕರನು ಪುಷ್ಪಾರ್ಚನೆಯಿಂದ ಮತ್ತು ಅನೇಕ ಮಧುರಫಲಾಹಾರ (ಪಸಿವಾರ) ಗಳಿಂದ ತೃಪ್ತನಾಗಿದ್ದನು. ಅಲ್ಲದೇ ದೇವಲೋಕದ ಅಪ್ಸರಸ್ತ್ರೀಯರ ಮನೋಹರವಾದ ನಾಟ್ಯವನ್ನು ನೋಡುವವನಾಗಿದ್ದನು. ಇಂತಹ ಮಹೇಶ್ವರನು ವೃಷಭವನ್ನೇರಿ ಅನೇಕ ರತ್ನಮಯ ಬಾಗಿಲುಗಳನ್ನು ದಾಟಿ, ಈಚೆಗೆ ಬರುತ್ತಿದ್ದಂತೆ ಚಿಂತಿಸಿದನು. ||೭-೮||

ಪ್ರತಿದ್ವಾರಿ ಮಹೇಶಾಯ ಕಲ್ಪಿತಂ ತೇನ ಸಾದರಂ ।
ಪೂಜೋಪಕರಣಂ ತಾವತ್ ಯಾವದಾತುಷ್ಟಧೀರ್ಭವಃ ॥೯॥

ಅವತೀರ್ಯ ವೃಷಾಧೀಶಾದ್ರತ್ನಸೋಪಾನಮಾರ್ಗತಃ ।
ರತ್ನಸಿಂಹಾಸನಾಸೀನಂ ಚಕಾರ ಮಣಿಮಂದಿರೇ ॥೧೦॥

ಮಧುಪರ್ಕಾದಿಕಂ ಸರ್ವೇ ತೇನೈವ ಪ್ರತಿಪಾದಿತಂ ।
ಗೋಕ್ಷೀರವಾಹಿನೀ ತೇನ ಸ್ನಾನಾಯ ಪರಿಕಲ್ಪಿತಾ ॥೧೧॥

ಘೃತಾಂಭೋಧಿಃ ಕಲ್ಪಿತೋಪಿ ದಧಿಸಾರಾಂಬುಧಿಸ್ತಥಾ ।
ಶರ್ಕರಾಗಿರಯಸ್ತೇನ ಸ್ನಾನಾಯ ಪರಿಕಲ್ಪಿತಾಃ ॥೧೨॥

ತದಾ ಫಲರಸಾಂಭೋಧಿಸ್ತದರ್ಥಂ ಕಲ್ಪಿತಸ್ತದಾ ।
ಗಂಗಾಪ್ರವಾಹಃ ಶತಧಾ ಕಲ್ಪಿತಸ್ತೇನ ಮೂರ್ಧನಿ ॥೧೩॥

ಹೀಗೆ ವೃಷಭಾರೂಢನಾಗಿ ಬರುತ್ತಿರುವ ಆ ಪರಮೇಶ್ವರನಿಗೆ ಪ್ರತಿಯೊಂದು ಬಾಗಿಲಿನಲ್ಲಿಯೂ ಪೂಜೆಗಾಗಿ ಸಲಕರಣೆಗಳನ್ನು ಸಿದ್ಧಗೊಳಿಸಿದನು. ಶಂಕರನು ತೃಪ್ತನಾಗುವ ತನಕ ಪೂಜೆಮಾಡಿದನು. ಅನಂತರ ಶಂಕರನು ವೃಷಭದಿಂದ ಇಳಿದು ರತ್ನಮಯಸೋಪಾನ (ಮೆಟ್ಟಲು) ಮಾರ್ಗಕ್ಕೆ ಬಂದನು. ಆ ಸೋಪಾನ ಮಾರ್ಗದಿಂದ ರತ್ನಮಂದಿರದಲ್ಲಿ ಶೋಭಿಸುತ್ತಿದ್ದ ಸಿಂಹಾಸನವನ್ನು ಅಲಂಕರಿಸಿದನು. ಹೀಗೆ ಶೈವನ ಮಾನಸಿಕಭಾವನೆಯಾಗಿತ್ತು. ॥೯-೧೦॥

ಆ ಶಂಕರನಿಗೆ ಪಂಚಾಮೃತಗಳಿಂದ ಅಭಿಷೇಕಮಾಡಿಸುವುದಕ್ಕಾಗಿ ಎಲ್ಲಾ ಸಾಮಗ್ರಿಗಳನ್ನು ಸಿದ್ಧಪಡಿಸಿದನು. ಮೊದಲು ಮಧುಪರ್ಕದಿಂದ ಪೂಜಿಸಿ ಅನಂತರ ಅಭಿಷೇಕಕ್ಕಾಗಿ ಹೊಳೆ ಹೊಳೆಯಾಗಿ ಹರಿಯುವ ಹಾಗೆ ಹಾಲುಕಾಲುವೆಯನ್ನೇ ಹರಿಸಿದನು. ಅಲ್ಲದೇ ಘೃತ, ದಧಿ (ಮೊಸರು) ಇವುಗಳ ಸಮುದ್ರಗಳನ್ನೇ ಸಿದ್ಧಗೊಳಿಸಿದ್ದನು. ಮತ್ತು ಬೆಟ್ಟದ ಹಾಗೆ ರಾಶಿಹಾಕಿದ ಸಕ್ಕರೆಯನ್ನು ಸಮರ್ಪಿಸುತ್ತಿದ್ದನು. ಹೀಗೆ ಪಂಚಾಮೃತಸ್ನಾನಮಾಡಿಸಿದಂತೆ ಮನಸ್ಸಿನಲ್ಲಿ ಭಾವಿಸುವನು. ॥೧೧-೧೨॥

ಬಳಿಕ ಆ ಶೈವಶ್ರೇಷ್ಠನು ಶಿವನ ಅಭಿಷೇಕಕ್ಕಾಗಿ ಹಣ್ಣಿನ ರಸಸಮುದ್ರವನ್ನೂ ಮತ್ತು ಶಿವನ ಶಿರಸ್ಸಿನಲ್ಲಿ ಗಂಗಾಪ್ರವಾಹವು ಧಾರಾಕಾರವಾಗಿ ಇರುವ

ಅಪಾರರತ್ನಕಲಶೈಃ ಕವೋಷ್ಣಜಲಸಂಯುತೈಃ ।
ಸ್ನಾನಂ ಪ್ರಕಲ್ಪಯಾಮಾಸ ಸ ತು ಶಾಂಗಾಯ ಶಾಂಭವಃ ॥೧೪॥

ತತಃ ಪರಂ ದುಕೂಲಾನಿ ಕಲ್ಪಿತಾನ್ಯಮಿತಾನ್ಯಪಿ ।
ತತೋಽನಂತಮಣಿಶ್ರೇಷ್ಠಮಹಾಸಿಂಹಾಸನಂ ವರಂ ॥೧೫॥

ಕುಂದಾದಿಪುಷ್ಪಸಂಕೀರ್ಣಂ ಕಲ್ಪಯಾಮಾಸ ಸಾದರಂ ।
ತ್ರಿಪುಂಡ್ರಂ ಕಲ್ಪಯಾಮಾಸ ಚಂದನೈರನುಲೇಪನಂ ॥೧೬॥

ಅಪಾರರತ್ನಾಭರಣೈರ್ಭೂಷಯಾಮಾಸ ಶಂಕರಂ
ಧೂಪಯಾಮಾಸ ಧೂಪೈಶ್ಚ ದೀಪಯಾಮಾಸ ದೀಪಕೈಃ ॥೧೭॥

ದೀಪಮಾಲಾಃ ಕಲ್ಪಿತಾಶ್ಚ ಪರಿತಃ ಶತಯೋಜನಂ ।
ಸೂಪೋದನಾದ್ರಿರಾಜ್ಯಸ್ಯ ವಾಹಿನ್ಯಃ ಪರಿವೇಷ್ಟಿತಾಃ ॥೧೮॥

ದನ್ನೂ, ಅನೇಕ ರನ್ನಕೊಡೆಗಳಿಂದ ಸ್ವಲ್ಪ ಬೆಚ್ಚಗಿರುವ ನೀರುಗಳನ್ನು ಸುರಿದು ಅಭಿಷೇಕಮಾಡುವುದನ್ನೂ ಸಹ ತನ್ನ ಮನಸ್ಸಿನಿಂದಲೇ ಚಿಂತಿಸಿದನು.॥೧೩-೧೪॥

ಅನಂತರ ಅನೇಕ ಶುಭ್ರವಾದ ವಸ್ತ್ರಗಳನ್ನು ಧರಿಸಿದವನಂತೆಯೂ ಮತ್ತು ಮಣಿಖಚಿತವಾದ ಸಿಂಹಾಸನದಲ್ಲಿ ಕುಳಿತಿರುವಂತೆಯೂ ಭಾವಿಸಿದನು. ಆ ಸಿಂಹಾಸನವು ಮಾಗೀಮಲ್ಲಿಗೆ ಹೂಗಳಿಂದ ಆಚ್ಛಾದಿತವಾಗಿತ್ತು. ಅಂತಹ ದಿವ್ಯಪೀಠದಲ್ಲಿ ಶಿವನು ಮಂಡಿಸಿದಂತೆ ಭಾವಿಸಿದನು. ಅಲ್ಲದೆ ಚಂದನ ಭಸ್ಮತ್ರಿಪುಂಡ್ರಗಳನ್ನು ಧರಿಸಿರುವನ ಹಾಗೆ ತಿಳಿದನು. ॥೧೫-೧೬॥

ಆಮೇಲೆ ಶಂಕರನನ್ನು ಅನೇಕ ಆಭರಣಗಳಿಂದ ಸಿಂಗರಿಸಿದಂತೆಯೂ, ಧೂಪ, ದೀಪಗಳನ್ನು ಸಮರ್ಪಿಸಿದ ಹಾಗೂ, ಸುತ್ತಲೂ ನೂರುಯೋಜನದವರೆಗೆ ದೀಪಮಾಲಿಕೆಗಳನ್ನು ಹಚ್ಚಿ ದೀಪೋತ್ಸವ ನಡೆಸಿದಂತೆಯೂ, ತೊವ್ವೆ ಮಿಶ್ರವಾದ ಅನ್ನದ ರಾಶಿಯನ್ನೂ, ಅಲ್ಲದೇ ಹೊಳೆ ಹೊಳೆಯಾಗಿ ಹರಿಯುವಂತಹ ತುಪ್ಪದ ಧಾರೆಯನ್ನು ಸಮರ್ಪಿಸಿದಂತೆಯೂ ಭಾವನೆಯನ್ನು ತಂದುಕೊಂಡನು. ॥೧೭-೧೮॥

ಶಾಕಪರ್ವತಸಂಕೀರ್ಣಃ ಕಲ್ಪಿತಸ್ತೇನ ಸಾದರಂ ।
ತತಃ ಪಕ್ವಾನ್ನಗಿರಯಃ ಕಲ್ಪಿತಾಸ್ತೇನ ಕೋಟಿಶಃ ॥೧೯॥

ಶರ್ಕರಾಗಿರಿಸಂಯುಕ್ತಾ ಪರಮಾನ್ನಸ್ಯ ವಾಹಿನೀ ।
ಕಲ್ಪಿತಾ ತೇನ ಮಹತೀ ಮಧುರಾ ಘೃತವಾಹಿನೀ ॥೨೦॥

ಸುಧಾಮಧುಪ್ರವಾಹಾಶ್ಚ ಕಲ್ಪಿತಾಸ್ತೇನ ಕೋಟಿಶಃ ।
ನಾಲಿಕೇರಾಂಬುವಾಹಿನ್ಯಸ್ತೇನ ಸಂಕಲ್ಪಿತಾಸ್ತದಾ ॥೨೧॥

ತತಶ್ಚ ಸಿತತಾಂಬೂಲದಳಪರ್ವತಪಙ್ಕ್ತಯಃ ।
ಕ್ರಮುಕಾದ್ರಿಸಮಾಕೀರ್ಣಾ ಶ್ಚೂರ್ಣಪರ್ವತಸಂಯುತಾಃ ॥೨೨॥

ಏಲಾಲವಂಗಕರ್ಪೂರಕಸ್ತೂರೀಖದಿರಾಚಲಾಃ ।
ಕಲ್ಪಿತಾಸ್ತೇನ ಛತ್ರಾದಿ ವಿಚಿತ್ರಾಣ್ಯಮಿತಾನ್ಯಪಿ ॥೨೩॥

ಕಲ್ಪಿತಾನಿ ಪ್ರಯತ್ನೇನ ಚಾರುಚಾಮರಕೋಟಯಃ ।
ಸುಗಂಧವಾತಾಸ್ತೇನಾಶು ಕೋಟಯಃ ಪರಿಕಲ್ಪಿತಾಃ ॥೨೪॥

ಕಾಯಿಪಲ್ಯಗಳ ಅಡಿಗೆ, ಶಾಲ್ಯಾನ್ನದ ಬೆಟ್ಟದಂತಹ ರಾಶಿ, ರಾಶಿಯಾಗಿ ಬಿದ್ದಿರುವ ಸಕ್ಕರೆ ಹಾಕಿದ ಪಾಯಸ, ರುಚಿಯಾದ ತುಪ್ಪ ಇವುಗಳನ್ನು ನೈವೇದ್ಯ ಮಾಡಿದಂತೆ ಆತನು ಮನಸ್ಸಿನಿಂದ ತಿಳಿದನು. ॥೧೯-೨೦॥

ಅನಂತರ ಆ ಶೈವನು ಅಮೃತರಸಪ್ರವಾಹ, ಎಳನೀರಿನಪ್ರವಾಹ, ಬಿಳೀ ವೀಳೆದೆಲೆಕಟ್ಟು (ಎಳೆ ಚಿಗುರು ಎಲೆ) ಒಳ್ಳೆ ಬಟ್ಟಲು ಅಡಿಕೆ ರಾಶಿ, ಸುಣ್ಣದ ಬೆಟ್ಟ ಇವುಗಳನ್ನು ಶ್ರೀ ಶಂಕರನಿಗೆ ಸಮರ್ಪಿಸಿದಂತೆ ತಿಳಿದನು. ॥೨೧-೨೨॥

ಏಲಕ್ಕಿ, ಲವಂಗ, ಕರ್ಪೂರ, ಕಸ್ತೂರಿ, ಖದಿರ ಮೊದಲಾದ ದ್ರವ್ಯಗಳನ್ನೂ ನಾನಾ ತರಹ ಛತ್ರಿ, ಮೃದುವಾದ ಚಾಮರ, ಪರಿಮಳ ಗಂಧಗಳನ್ನು ಬಳಿದ ಬೀಸಣಿಗೆ, ಮಂದಮಾರುತ ಇವೇ ಮೊದಲಾದುವನ್ನು ಅರ್ಪಣೆ ಮಾಡಿದ ಹಾಗೆ ಭಾವಿಸಿಕೊಂಡನು. ॥೨೩-೨೪॥

ದರ್ಪಣಾನ್ಯಪಿ ತೇನೈವ ರಮ್ಯಾಣಿ ವಿವಿಧಾನ್ಯಪಿ ।
ಚಂದ್ರಮಂಡಲತುಲ್ಯಾನಿ ಶಂಕರಾಯಾರ್ಪಿತಾನ್ಯಪಿ ॥೨೫॥

ಶಂಕರಾರ್ಥೇ ಸ ನಾಟ್ಯಾರ್ಥಂ ತೂರ್ಣಮಪ್ಸರಸಾಂ ಗಣಾನ್ ।
ಕಲ್ಪಯಾಮಾಸ ನಿಪುಣಃ ಕೋಟಿಶೋಪಿ ಮನೋಹರಾಃ ॥೨೬॥

ರತ್ನದಂಡಾಂಕಿತಾನಂತರತ್ನಛತ್ರಾಣಿ ಶಾಂಭವಃ ।
ಅಪಾರಚಾಮರೋಪೇತಾನನುಕಲ್ಪ್ಯ ಸ ಹೃಷ್ಟಧೀಃ ॥೨೭॥

ಪ್ರತಿಕ್ಷಣಂ ಪುಷ್ಪವೃಷ್ಟಿಂ ಮಂದಾರಕುಸುಮೋದ್ಭವಾಂ ।
ಕಲ್ಪಯಾಮಾಸ ಸಾಂಬಾಯ ಶಾಂಕರಃ ಸಾದರಂ ದ್ವಿಜಾಃ ॥೨೮॥

ಏವಂ ತತ್ಕೃಪಯಾ ಸಾಂಬಃ ಪೂಜಯಾ ಪರಯಾ ತಯಾ ।
ಸಂತುಷ್ಟಃ ಪ್ರಾಹ ತಂ ಸಾಯಂ ವಚನೈರ್ಮಧುರೈರ್ಹರಃ ॥೨೯॥

ಬಳಿಕ ಅನೇಕ ತರಹದ ಮತ್ತು ಚಂದ್ರಮಂಡಲದ ಹಾಗೆ ನಿರ್ಮಲವಾದ ಕನ್ನಡಿಯನ್ನು ತೋರಿಸಿದಂತೆಯೂ, ಶಂಕರನ ಸಂತೋಷಕ್ಕಾಗಿ ನಾಟ್ಯವಾಡಿಸಲು ಅಪ್ಸರಸ್ತ್ರೀಯರನ್ನು ಕರೆಯಿಸಿ ನರ್ತನ ಮಾಡಿಸಿದಂತೆಯೂ ಭಾವಿಸಿದನು. ||೨೫-೨೬||

ರತ್ನಖಚಿತವಾದ ಹಿಡಿಕೆಗಳುಳ್ಳ ಶ್ವೇತಛತ್ರಿಗಳನ್ನು ಹಿಡಿದ ಹಾಗೆ, ಬಹಳ ಚಾಮರಗಳಿಂದ ಸೇವಿಸಲ್ಪಡುತ್ತಿರುವವನ ಹಾಗೆ ಭಾವಿಸಿ ಆತನು ಸಂತೋಷ ಪಡುವನು. ||೨೭||

ಕ್ಷಣಕ್ಷಣವೂ ಮಂದಾರಪುಷ್ಪಗಳ ಮಳೆಗರೆದ ಹಾಗೆಯೂ ಆತನು ಭಾವಿಸಿ, ಗೌರೀಸಹಿತನಾದ ಶಂಕರನಿಗೆ ಆನಂದವನ್ನು ಉಂಟುಮಾಡುವನು. ||೨೮||

ಈ ರೀತಿಯಾಗಿ ಆ ಶೈವನು ಮಾಡಿದ ಶ್ರೇಷ್ಠವಾದ ಮಾನಸಪೂಜೆಯಿಂದ ಸಾಂಬಮೂರ್ತಿಯು ಸಂತುಷ್ಟನಾಗಿ ಸಾಯಂಕಾಲ ಆ ಶೈವನನ್ನು ಕುರಿತು ಪ್ರೀತಿ ಯುಕ್ತವಾದ ಕೆಲವು ಮಾತನ್ನು ಆಡಿದನು, ಎಂದು ಋಷಿಗಳಿಗೆ ವ್ಯಾಸರು ಹೇಳಿದರು. ||೨೯||

॥ ಶ್ರೀಶಿವ ಉವಾಚ ॥

ಕೃತಂ ಯತ್ಪೂಜನಮಿದಂ ಮಹ್ಯಂ ಶಾಂಭವಪುಂಗವ ।
ತೇನ ತುಷ್ಟೋಽಸ್ಮಿ ಸಹಸಾ ವರಂ ವೃಣು ಯಥೇಪ್ಸಿತಂ ॥೩೦॥

॥ ಶಾಂಕರ ಉವಾಚ ॥

ನಮೋ ನಮಸ್ತೇಽಸ್ತು ನಮೋ ನಮಸ್ತೇ
ನಮೋ ನಮಸ್ತೇ ಗಿರಿಜಾಸಹಾಯ ।
ಮೃತ್ಯುಂಜಯಾನಾಮಯ ಮಾಮವಾವ
ಗತಿಸ್ತ್ವಮೇವಾಸಿ ಮಹೇಂದುಮೌಳೇ ॥೩೧॥

ತ್ವಂ ಕಾಲಕೂಟಾದಿವಿಷೋದ್ಭವಾನಿ
ದುಃಖಾನಿ ಸರ್ವಾಣಿ ಸುರಾಸುರಾಣಾಂ ।
ದೂರೀಕರೋಷಿ ತ್ರಿಜಗಜ್ಜನಿತ್ರೀ
ಗೌರೀ ತವಾರ್ಧಾಂಗಮನಂಗಶತ್ರೋ ॥೩೨॥

"ಎಲೈ ಶೈವನೇ, ನೀನು ಮಾಡಿದ ಪೂಜೆಯಿಂದ ನಾನು ಸಂತುಷ್ಟನಾಗಿದ್ದೇನೆ. ನಿನಗೆ ಬೇಕಾದುದನ್ನು ಬೇಡು" ಎಂದು ಶಿವನು ಶೈವನಿಗೆ ಹೇಳಿದನು. ॥೩೦॥

ಆಗ ಶೈವನು "ಮೃತ್ಯುದೇವತೆಯನ್ನು ಜಯಿಸಿದ ಶಂಕರನೇ, ನೀನು ಸದಾ ಗಿರಿಜೆಯಿಂದ ಕೂಡಿರುವೆಯಲ್ಲವೇ! ನಿನಗೆ ಪದೇ ಪದೇ ತಲೆಬಾಗುವೆನು. ನನಗೆ ನೀನೇ ರಕ್ಷಕನು. ಹೇ, ಚಂದ್ರಶೇಖರ! ನನ್ನನ್ನು ಕಾಪಾಡು, ಕಾಪಾಡು. ॥೩೧॥

ದೇವ, ನೀನು ಕಾಲಕೂಟವಿಶೇಷದಿಂದ ದೇವತೆಗಳಿಗೂ ರಾಕ್ಷಸರಿಗೂ ಉಂಟಾದ ವಿಪತ್ತುಗಳನ್ನು ಹೋಗಲಾಡಿಸಿರುವೆ. ಅಲ್ಲದೆ ಮೂರು ಲೋಕಕ್ಕೂ ತಾಯಿಯಾಗಿರುವ ಪಾರ್ವತಿಯನ್ನು ಸದಾ ಎಡಭಾಗದಲ್ಲಿ ಧರಿಸಿರುತ್ತೀಯೆ. ಆದರೂ ನೀನು ಕಾಮವಿಕಾರಕ್ಕೆ ಒಳಪಟ್ಟವನಲ್ಲ. ಆ ಮನ್ಮಥನನ್ನೇ ಸುಟ್ಟು ಭಸ್ಮಮಾಡಿರುತ್ತೀಯೆ. ॥೩೨॥

ಯೋ ಮಂಗಳಾಮಂಗಳಸೂತ್ರಸಂಗಃ
ಸ ಶಾಂತಿಭಂಗಾಯ ಕದಾಪಿ ನ ಸ್ಯಾತ್ ।
ಸ ತಾವದಾಶು ಸ್ಮೃತ ಏವ ಶಂಭೋ
ಶುಭಾನಿ ಸೂತೇ ಸುತರಾಂ ತತಾನಿ ॥೩೪॥

ಸಂತಾನಸಂಘಾತಸಮೂಹವೃದ್ಧಿಃ
ಸಮೃದ್ಧಿರೀಶಾನಪದೇ ಸ್ಮೃತೇ ಮೇ ।
ಸಂಭಾವಿತಾ ತಾತವಿಮುಕ್ತಿರಂತೇ
ನಿರಂತರಾಯ ಸುರವೃಂದವಂದ್ಯ ॥೩೫॥

ಯತ್ತೇ ಮಹಾದೇವ ಪದಾರವಿಂದ
ಮಾನಂದಧಾರಾಂಬುದಸುಂದರಂ ಮೇ ।
ಆನಂದಮತ್ಯದ್ಭುತಮಾತನೋತಿ
ಸಂದರ್ಶನಾದೇವ ಪಿನಾಕಪಾಣೇ ॥೩೬॥

ದೇವ, ದೇವಿಯಾದ ಪಾರ್ವತಿಯ ಮಂಗಳಸೂತ್ರದ ಸಂಬಂಧವು ಯಾವಾಗಲೂ ನಿನಗೆ ಶಾಂತಿಯನ್ನು ಕಮ್ಮಿಮಾಡಲಿಲ್ಲ. ಆ ಮಂಗಳಸೂತ್ರವನ್ನು ಸ್ಮರಣೆ ಮಾಡಿದ ಮಾತ್ರವೇ ನಮಗೆ ಅತಿಶಯವಾದ ಕಲ್ಯಾಣವೇ ಸಂಭವಿಸುವುದು. ॥೩೪॥

ದೇವ, ನಿನ್ನ ಪಾದಗಳೆರಡೂ ನೆನಪಿಗೆ ಬಂದರೆ ಪುತ್ರಸಮೃದ್ಧಿಯು ಮತ್ತಷ್ಟು ಹೆಚ್ಚಾಗುವುದಲ್ಲದೆ ಕೊನೆಗೆ ಮೋಕ್ಷವೂ ಲಭಿಸುವುದು. ದೇವ, ನೀನು ದೇವತೆಗಳಿಂದ ನಮಸ್ಕೃತನಾಗಿರುವೆಯಲ್ಲದೆ ವಿಘ್ನಗಳನ್ನೂ ನಾಶಮಾಡತಕ್ಕವನಾಗಿರುವೆ. ॥೩೫॥

ಮಹೇಶ್ವರನೇ, ನಿನ್ನ ಎರಡು ಚರಣಗಳನ್ನು ದರ್ಶನಮಾಡಿದೊಡನೆ ಆನಂದಧಾರೆಯು ನನ್ನಲ್ಲಿ ಉಕ್ಕುವುದು. ಆದುದರಿಂದ ಅದು ಮತ್ತಷ್ಟು ಅಂದವಾಗಿ ಕಾಣಿಸುತ್ತದೆ. ಆದು ದರ್ಶನದಿಂದಲೇ ನಮಗೆ ಅತ್ಯಾಶ್ಚರ್ಯಕರವಾದ ಸಂತೋಷವನ್ನು ಉತ್ಪತ್ತಿಮಾಡುವುದು. ॥೩೬॥

ಕಲ್ಯಾಣರಾಶಿಃ ಸಮುದೇತಿ ವೃದ್ಧಿಂ
ನಷ್ಟೋ ಮಹಾಪಾತಕಪರ್ವತೋಽಪಿ ।
ಆನಂದಗಂಗಾವಿತರಂಗಭಂಗ
ಸಂಗೇನ ಸಿಕ್ತಂ ಕುರುತೇ ಮನೋ ಮೇ ॥೩೭॥

ಅಪಾರಪುಣ್ಯಾನಿ ಫಲೋನ್ಮುಖಾನಿ
ತಪಾಂಸಿ ದಾನಾನ್ಯಮಿತಾನಿ ತಾನಿ ।
ಆನಂದಗಂಗಾ ವವೃಧೇ ಸಮೃದ್ಧಾ
ಮತಿಃ ಪ್ರವೃದ್ಧಾ ಮಮ ಚಂದ್ರಮೌಳೇ ॥೩೮॥

ತ್ವತ್ಪಾದಪದ್ಮಸ್ಮರಣೇಂದುಧಾರಾ
ಪ್ಯಾನಂದಧಾರಾಂ ತನುತೇ ವಿಚಿತ್ರಾಂ ।
ತ್ರಿಣೇತ್ರ ತತ್ಪಾತ್ರಮಹಂ ಪವಿತ್ರಂ
ತ್ವನ್ನೇತ್ರಸಂಸರ್ಗವಿಧೂತತಂತ್ರಂ ॥೩೯॥

ನಿನ್ನ ಸಂದರ್ಶನದಿಂದ ಅನಂತಕ್ಷೇಮ, ಸುಖ, ಐಶ್ವರ್ಯ ಮೊದಲಾದವು ಒದಗುತ್ತವೆ. ಮತ್ತು ಘೋರಪಾಪಗಳೂ ನಾಶವಾಗುತ್ತವೆ. ನನ್ನ ಮನಸ್ಸು ಸಂತೋಷವೆಂಬ ಗಂಗೆಯ ಅಲೆಗಳಿಂದ ತೊಯ್ದುಹೋಗಿದೆ. ||೩೭||

ನಾನು ಹಿಂದೆ ಮಾಡಿದ ಪುಣ್ಯಕರ್ಮಗಳು ಈಗ ನಿನ್ನ ದರ್ಶನದಿಂದ ಫಲ ಕೊಡುವುದಕ್ಕಾಗಿ ಕಾದಿರುವುವು. ಹಿಂದಿನ ತಪಸ್ಸು, ದಾನ ಇವುಗಳೂ ಅಧಿಕಗಳಾಗಿವೆ. ಅಕ್ಕರೆಯೆಂಬ ಗಂಗಾನದಿಯು ವೃದ್ಧಿಹೊಂದಿರುವಳು. ಎಲೈ ಚಂದ್ರಚೂಡನೇ, ನನ್ನ ಬುದ್ಧಿಯು ಈಗ ನಿರ್ಮಲವಾಯಿತು ಮತ್ತು ತಿಳಿಯಾಯಿತು. ||೩೮||

ಎಲೈ ದೇವದೇವನೇ, ಕಮಲಗಳಂತೆ ಕೋಮಲವಾದ ನಿನ್ನ ಪಾದಗಳ ಸ್ಮರಣೆಯು ಚಂದ್ರಕಲೆಯಂತೆ ದಿನೇ ದಿನೇ ಅಭಿವೃದ್ಧವಾಗುತ್ತಿದೆ. ಆ ಸ್ಮರಣೆ ನನಗೆ ಸದಾ ಅತ್ಯಾನಂದವನ್ನುಂಟುಮಾಡುತ್ತಿದೆ. ತ್ರಿಲೋಚನನೇ, ನಿನ್ನ ಕಡೆಗಣ್ಣ ನೋಟವು ಅನೇಕ ಪಾಪಗಳನ್ನು ಹೋಗಲಾಡಿಸುವುದು. ಅಂತಹ ಕಡೆಗಣ್ಣಿನ ನೋಟಕ್ಕೆ ಪಾತ್ರನಾದ ನಾನೇ ಧನ್ಯನು. ||೩೯||

ಯತ್ಪಾದಸೇವಾ ನಿರತಾಃ ಕೃತಾರ್ಥಾಃ
ಸುರೇಂದ್ರಲೋಕಾದಿಪದಾರ್ಥಮಾತ್ರೇ ।
ವಾಂಛಾಂ ನ ಕುರ್ವಂತಿ ಸುಮೇರುಹಸ್ತೋ
ಹಸ್ತೇನ ಕಿಂ ವಾ ಯವಸಂ ವಿಧತ್ತೇ ॥೪೦॥

ತ್ವತ್ಸೇವಯಾ ಕೇವಲಮಿಂದುಮೌಳೇ
ಲಕ್ಷ್ಮೀಃ ಪುರೋ ಧಾವತಿ ವಂದಿರೂಪಾ ।
ವಾಣೀ ಚ ವಾಣೀರಮಣಂ ವಿಹಾಯ
ಉಮಾಸಹಾಯಸ್ಮರಣಾನುರಾಗಾ ॥೪೧॥

ಯಮೈರ್ನ ಯೋಗೈರಪಿ ಸಾಗರಾಂತ
ಮಹೀಪ್ರದಾನೈರಪಿ ಗೋಪ್ರದಾನೈಃ ।
ಸುಖಾನ್ಯಪಾರಾಣಿ ನ ಚಂದ್ರಮೌಳೇ
ತ್ವತ್ಪಾದುಕಾರಾಧನಹೇತುಕಾನಿ ॥೪೨॥

ಶ್ರೀ ಶಂಕರನ ಪಾದಸೇವೆಯಲ್ಲಿ ಆಸಕ್ತರಾದವರು ಸ್ವರ್ಗದಲ್ಲಿರುವ ಚಿಂತಾಮಣಿ, ಕಲ್ಪವೃಕ್ಷ ಇವೇ ಮೊದಲಾದುವನ್ನು ಬಯಸಲಾರರು. ಅವೆಲ್ಲವೂ ಅವರಿಗೆ ಸಾಮಾನ್ಯಪದಾರ್ಥಗಳಂತೆ ತೋರಿಬರುವುವು. ಅದು ನ್ಯಾಯವೇ ಸರಿ. ಸುವರ್ಣಮಯವಾದ ಮೇರುಪರ್ವತವನ್ನೇ ಕೈಯಿಂದ ಹಿಡಿದಿರುವವನು, ಎಂದಾದರೂ ಧಾನ್ಯದ ತವುಡನ್ನು ಬಯಸುವನೇ ? ॥೪೦॥

ಹೇ ಸೋಮಶೇಖರನೇ, ನಿನ್ನ ಸೇವೆ ಮಾಡಿದುದರಿಂದ ಐಶ್ವರ್ಯವು (ಲಕ್ಷ್ಮೀದೇವಿಯು) ಹೊಗಳುಭಟನಂತೆ ಮುಂದೆ ಮುಂದೆ ಓಡಿಬರುವುದು. ಮತ್ತು ಸರಸ್ವತಿಯೂ ಬ್ರಹ್ಮನನ್ನು ಬಿಟ್ಟು, ಉಮಾಕಾಂತನ ಸ್ಮರಣೆಯಲ್ಲಿ ಅನುರಕ್ತರಾಗಿರುವ ಭಕ್ತರನ್ನು ಅನುಸರಿಸುವಳು. ॥೪೧॥

ಹೇ ದೇವನೇ, ಯಮನಿಯಮಾದಿ ಯೋಗಗಳಿಂದಲೂ ಸಮುದ್ರದ ಪರ್ಯಂತವಾದ ಭೂದಾನದಿಂದಲೂ, ಗೋದಾನವೇ ಮೊದಲಾದ ಅಮೂಲ್ಯ ದಾನಗಳಿಂದಲೂ ಸುಖವೆಂದಿಗೂ ಸಿಗಲಾರದು. ಆ ಸುಖಪ್ರಾಪ್ತಿಗೆ ನಿನ್ನ ಪಾದಸೇವೆಯೇ ಸಾಧನ. ॥೪೨॥

ಅಪಾರಸಂಸಾರಮಹಾಂಬುರಾಶಿ
ವಿಶೋಷಣಾಯ ಸ್ಮರಣಂ ತವೈವ ।
ಮಹಾಗ್ನಿಕಲ್ಪಾನ್ಯತಿಪಾತಕಾನಿ
ಧಾರಾ ಧರತ್ಯೇತದುಮಾಸಹಾಯ ॥೪೩॥

ಮಮ ತ್ವದೀಯಶ್ಚರಣಪ್ರಭೂತ
ಮೈಶ್ವರ್ಯಮಾಕಲ್ಪಮನನ್ಯಲಭ್ಯಂ ।
ಸಂಪಾದಯತ್ಯೇವ ವಿಮುಕ್ತಿಮಂತೇ
ಕಿಮನ್ಯದತ್ರಾಪಿ ವರಾಯ ಯೋಗ್ಯಂ ॥೪೪॥

ಯಸ್ಮಾದಿಹಾಮುತ್ರ ಸುಖಪ್ರವಾಹಃ
ತತ್ಪಾದಪದ್ಮಾನುವಿಲೋಕನೇನ ।
ಅತಃ ಕಿಮನ್ಯದ್ವರಣೀಯಮದ್ಯ
ಯದ್ಯಸ್ತಿ ತನ್ಮೇ ವದ ಸಾವಧಾನಂ ॥೪೫॥

ಉಮೇಶನೇ, ನಿನ್ನ ಸ್ಮರಣೆಯು ಅಗಾಧವಾದ ಸಂಸಾರವೆಂಬ ಸಮುದ್ರವನ್ನು ಒಣಗಿಸಲು ಸಮರ್ಥವಾಗಿದೆ. ನಿನ್ನ ಸ್ಮರಣೆಯಿಂದ ಭೂದೇವಿಯೂ ಸಹ ಮಹಾಗ್ನಿಗೆ ಸಮಾನವಾದ ಪ್ರಚಂಡ ಪಾಪಗಳನ್ನು ಧರಿಸಲು ಸಮರ್ಥಳಾಗುತ್ತಾಳೆ. ॥೪೩॥

ಈಶ್ವರನೇ, ನಿನ್ನ ಈ ಪಾದವು ನನಗೆ ಕಲ್ಪಾಂತದವರೆಗೂ ಇತರರಿಗೆ ಹೊಂದಲಸಾಧ್ಯವಾದ ಐಶ್ವರ್ಯವನ್ನು ಒದಗಿಸಿಕೊಡುವುದಲ್ಲದೇ, ಕೊನೆಗೆ ಮುಕ್ತಿಯನ್ನೂ ಕೊಡುವುದು. ನನಗೆ ಇದಕ್ಕಿಂತ ಬೇರೆ ವರ ಬೇಡಲು ಅರ್ಹವಾದುದಿಲ್ಲ. ॥೪೪॥

ಯಾವ ನಿನ್ನ ಪಾದಪದ್ಮಸಂದರ್ಶನದಿಂದ ಈ ಲೋಕ ಮತ್ತು ಪರಲೋಕಗಳಲ್ಲಿ ಸೌಖ್ಯವು ಲಭಿಸುತ್ತದೆಯೋ, ಅಂತಹ ವರವನ್ನು ಬಿಟ್ಟು ಬೇರೆ ಏನನ್ನು ಬೇಡಲಿ ? ಆದುದರಿಂದ ಇದಕ್ಕಿಂತ ಬೇರೆ ಇನ್ನೇನು ಕೇಳಲಿ ಎಂಬುದನ್ನು ನೀನೇ ಸಾವಧಾನದಿಂದ ಹೇಳು ! ನೋಡೋಣ. ॥೪೫॥

ಸ್ವರ್ಗಾಪವರ್ಗಪ್ರದಮಿತ್ಯವೈಮಿ
ನಿಧಾನದಾನಕ್ಷಮಮಿತ್ಯವೈಮಿ ।
ತ್ವತ್ಪಾದುಕಾಧ್ಯಾನಮತೋ ಮಹೇಶ
ಕಿಂ ದೇಯಮಸ್ಯಸ್ತಿ ಜಗತ್ತ್ರಯೇಽಸ್ಮಿನ್ ॥೪೬॥

ಅತಃ ಪರಂ ಕೇವಲಮಿಂದುಮೌಳೇ
ತ್ವತ್ಪಾದಪದ್ಮಸ್ಮರಣಾನುರಕ್ತಿಃ ।
ವಿರಕ್ತಿರಪ್ಯಬ್ಜಜಲೋಕವಾಸೇ
ಪ್ಯಸ್ತು ಸ್ಮರಾರೇ ಸ್ಮರ ಮಾಮನಾಥಂ ॥೪೭॥

ಅನಾಥನಾಥ ತ್ವಮುಮಾಸಹಾಯ
ಮಾಮಸ್ಯನಾಥಂ ಶರಣಂ ಗತಂ ತ್ವಾಂ ।
ಪ್ರಸನ್ನಮಂದಾರಹರಾಮರೇಶ
ತ್ವಯಾ ಸನಾಥಂ ಕುರು ಮಾಮನಾಥಂ ॥೪೮॥

ಓ ದೇವನೇ, ನಿನ್ನ ಪಾದುಕಾಧ್ಯಾನವು ಸ್ವರ್ಗ ಮೋಕ್ಷಗಳನ್ನು ಕೊಡಬಲ್ಲು ದಾಗಿದೆ. ಮತ್ತು ಕರ್ಮಗಳನ್ನು ನಾಶಮಾಡಿ ಐಶ್ವರ್ಯವನ್ನುಂಟುಮಾಡುವುದು. ಆದುದರಿಂದ ಈ ಮೂರು ಲೋಕದಲ್ಲಿ ಇದಕ್ಕಿಂತ ಬೇರೆ ಯಾವುದು ತಾನೇ ನನ್ನ ಕೋರಿಕೆಗಳನ್ನು ಸಲ್ಲಿಸೀತು ? ॥೪೬॥

ಚಂದ್ರಶೇಖರನೇ, ಆದುದರಿಂದ ಇನ್ನು ಮುಂದೆ ನನಗೆ ನಿನ್ನ ಪಾದಸ್ಮರಣೆ ಯಲ್ಲಿಯೇ ಆಸಕ್ತಿಯುಂಟಾಗುವಂತೆ ಕರುಣಿಸು. ನನ್ನ ವಾಸವು ಬ್ರಹ್ಮಲೋಕ ದಲ್ಲಿಯೂ ಆಗಬೇಡ. ದೇವದೇವನೇ, ನೀನು ಮಾತ್ರ ದಿಕ್ಕಿಲ್ಲದ ನನ್ನನ್ನು ಮರೆಯ ದಿರು. ॥೪೭॥

ದೇವನೇ, ಉಮಾಪತಿಯೇ, ದಿಕ್ಕಿಲ್ಲದ ನಾನು ನಿನ್ನನ್ನೇ ಶರಣು ಹೊಂದಿರುವೆನು. ನನ್ನನ್ನು ಸಲಹು. ಎಲೈ ಸುಪ್ರಸನ್ನನೇ, ಅಮರೇಶನೇ, ನನ್ನನ್ನು ಸನಾಥನನ್ನಾಗಿ ಮಾಡು, ನಿನ್ನನ್ನು ಮೊರೆಹೊಕ್ಕಿರುವೆನು. ॥೪೮॥

ಯತ್ತೇ ಪದಾಂಭೋರುಹಮಬ್ಜಜಾದಿ
ಮುನಃ ಸರೋಜಾಸನಸನ್ನಿವಿಷ್ಟಂ ।
ತತ್ಕಷ್ಟನಾಶಾಯ ಸಮರ್ಥಮೇವ
ಸ್ಮೃತಂ ಕದಾಚಿನ್ಮರಣಕ್ಷಣೇವ ॥೪೯॥

ಅರ್ಧೇಂದುಮೌಳೇ ಮರಣಕ್ಷಣೇ ಮೇ
ವಿಭೂತಿರುದ್ರಾಕ್ಷವಿಭೂಷಣಸ್ಯ ।
ತ್ವತ್ಪಾದಪದ್ಮಸ್ಮರಣಾನುರಾಗೇ
ಭವತ್ಯಯಂ ತಾತ ತವ ಪ್ರಸಾದಃ ॥೫೦॥

ತಾತಸ್ತ್ವಮೇವಾಸಿ ಮಮೇಂದುಮೌಳೇ
ಮಾತಾ ಭವಾನೀ ಯುವಯೋಃ ಪ್ರಸಾದಾತ್ ।
ಮಹೇಶ್ವರಾರಾಧಕಸಂತತಿರ್ಮೇ
ಸದಾ ಪ್ರವೃದ್ಧಾಸ್ತು ವರೋಽಯಮೇಕಃ ॥೫೧॥

ಈ ನಿನ್ನ ಪಾದಕಮಲವನ್ನು ಬ್ರಹ್ಮಾದಿಗಳೂ ಭಜಿಸುವರು. ಆ ಬ್ರಹ್ಮಾದಿಗಳ ಕಷ್ಟಗಳನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳ ಆ ನಿನ್ನ ಪಾದವನ್ನು ದೇಹಾವಸಾನದಲ್ಲಿ ಸ್ಮರಿಸಿದರೂ ಆತನಿಗೆ ಮುಕ್ತಿಲಭಿಸುವುದು ನಿಶ್ಚಯ. ||೪೯||

ಚಂದ್ರಕಲಾಧರನೇ, ನನ್ನ ದೇಹಾಂತ್ಯಕಾಲದಲ್ಲಿ ವಿಭೂತಿ, ರುದ್ರಾಕ್ಷಿ ಇವುಗಳನ್ನು ಧರಿಸುವ ನಾನು ಒಂದುಬಾರಿ ನಿನ್ನ ಪಾದಕಮಲವನ್ನು ಸ್ಮರಿಸಿಕೊಂಡಮಾತ್ರವೇ ನಿನ್ನ ಅನುಗ್ರಹಕ್ಕೆ ನಾನು ಪೂರ್ಣವಾಗಿ ಪಾತ್ರನಾಗುವೆನು. ||೫೦||

ದೇವ, ನನಗೆ ತಂದೆ ನೀನು. ಶ್ರೀ ಗೌರೀದೇವಿಯೇ ನನ್ನ ತಾಯಿ. ನನ್ನ ತಂದೆತಾಯಿಗಳಾದ ನಿಮ್ಮಿರ್ವರ ಅನುಗ್ರಹದಿಂದ ನನ್ನ ವಂಶೀಯರೆಲ್ಲಾ ಶಂಕರಾರಾಧಕರೇ ಆಗಲಿ ಎಂಬುದು ನನ್ನ ಬೇಡಿಕೆಯಲ್ಲೊಂದು. ||೫೧||

ಮತ್ಸಂತತಿಃ ಶಂಕರಪೂಜನೇನ
ದಿನೇ ದಿನೇ ವೃದ್ಧಿಮುಪೇತ್ಯ ನಿತ್ಯಂ।
ಕರೋತು ಗೌರೀರಮಣಾಂಘ್ರಿಪೂಜಾಂ
ಪ್ರಜಾಧನಪ್ರಾಪಣಹೇತುಭೂತಾಂ ॥೫೨॥

ಲೋಕೇ ಮಹೇಶಾರ್ಚಕಪಾದುಕಾರ್ಚಾ
ಧನಾರ್ಜನಾಸಕ್ತಧಿಯೋ ಮಹಾಂತಃ।
ಸುಖಾನಿ ಭುಂಕ್ತೇ ಸುಕೃತೈರುದಾರೈ
ರ್ದಾರೈಃ ಕುಮಾರೈರಪಿ ಭಾಗ್ಯವಂತಃ ॥೫೩॥

ಅನಂತಕಲ್ಯಾಣಪರಂಪರಾಣಾಂ
ನಿದಾನಮೀಶಸ್ಮರಣಂ ವರೇಣ್ಯಂ।
ತದೇವ ತಾವನ್ಮಮ ಸರ್ವದಾ ತು
ಮತ್ಪ್ರಾರ್ಥನೀಯಂ ಚ ತದೇವ ಶಂಭೋ ॥೫೪॥

ಶಂಕರನೇ, ನನ್ನ ವಂಶವು ಪ್ರತಿದಿನವೂ ನಿನ್ನ ಪೂಜೆಮಾಡಿ ಸರ್ವವಿಧದಲ್ಲಿಯೂ ಅಭಿವೃದ್ಧಿಯನ್ನು ಹೊಂದಲಿ. ಈ ನಿನ್ನ ಅರ್ಚನೆಯು ಸಂತತಿ, ಸಂಪತ್ತು ಇವುಗಳನ್ನು ಒದಗಿಸಿ ಕೊಡಬಲ್ಲುದಲ್ಲವೆ! ॥೫೨॥

ಲೋಕದಲ್ಲಿ ಧನಾಭಿಲಾಷೆಯುಳ್ಳ ಮಹಾತ್ಮರು ಈಶ್ವರ ಪೂಜಕನ ಪಾದಪೂಜೆಮಾಡಿ, ಅದರಿಂದ ಲಭಿಸಿದ ಪುಣ್ಯಪರಿಪಾಕದಿಂದ ಹೆಂಡಿರು, ಮಕ್ಕಳು, ಹಣ ಇವುಗಳನ್ನು ಹೊಂದಿ ಸಕಲ ಸೌಖ್ಯವನ್ನು ಅನುಭವಿಸುತ್ತಿರುವರು. ॥೫೩॥

ದೇವ, ನಮ್ಮ ಶ್ರೇಯೋಭಿವೃದ್ಧಿಗೆ ಶ್ರೇಷ್ಠವಾದ ನಿನ್ನ ನಾಮಸ್ಮರಣೆಯೇ ಮೂಲಕಾರಣ. ಆದುದರಿಂದ ಆ ಈಶಸ್ಮೃತಿಯು ನನಗೆ ಯಾವಾಗಲೂ ಉದ್ಬುದ್ಧವಾಗಲಿ. ದೇವ, ನನಗೆ ಬೇಕೆಂದಿರುವುದು ನಿನ್ನ ಸ್ಮರಣೆಯೊಂದೇ. ॥೫೪॥

ಶಂಭೋ ಭವಾನೀರಮಣ ಪ್ರಭೋ ಮಾಂ
ತ್ವದ್ದಾಸದಾಸಾದಿಪರಂಪರಾಯಾಂ ।
ವಿಲೋಕ್ಯ ಮಾ ಪಾಹಿ ಕೃಪಾನಿಧಾನ
ಗತಿಸ್ತ್ವಮೇವಾಸಿ ಮಮೇಂದುಮೌಳೇ ॥೫೫॥

ತ್ವಮೇವ ಮಾತಾಸಿ ಜಗಜ್ಜನಿತ್ರಿ
ಪ್ರಿಯೇ ಮಹೇಶಸ್ಯ ಪಿತಾ ತ್ವಮೇವ ।
ಮಹೇಶ ತಸ್ಮಾದವ ದೀನಬಂಧೋ
ದಯಾರಸಾರ್ದ್ರಾಕ್ಷಿತಟಪ್ರಸಾರೈಃ ॥೫೬॥

ಅಪಾರಪಾಪಪ್ರಳಯಾನಲಸ್ತ್ವಂ
ತ್ವತ್ಪಾದಪದ್ಮಸ್ಮರಣಂ ಕ್ಷಣಂ ವಾ ।
ಅಕ್ಷೀಣಪುಣ್ಯಾಭರಣೇನ ಲಭ್ಯಂ
ತ್ವಮೀಶ ತೇ ಪಾದಮನುಸ್ಮರಾಮಿ ॥೫೭॥

ಶಂಭೋ, ಭವಾನೀವಲ್ಲಭನೇ, ನನ್ನನ್ನು ನಿನ್ನ ದಾಸರ ದಾಸನ ಶ್ರೇಣಿಗೆ ಸೇರಿದವನೆಂದು ತಿಳಿದು ಕಾಪಾಡು. ಚಂದ್ರಶೇಖರನೇ, ನೀನು ಕರುಣಾಳು. ನನಗೆ ನೀನಲ್ಲದೇ ಬೇರೆ ದಿಕ್ಕಿಲ್ಲ. ನನ್ನನ್ನು ಸಲಹು. ॥೫೫॥

ಮಹೇಶ್ವರನ ಪ್ರಿಯಳಾದ ದೇವಿಯೇ, ನೀನು ಮೂರು ಲೋಕಕ್ಕೂ ತಾಯಿಯೆನಿಸಿಕೊಂಡಿರುವೆ. ನಿನ್ನನ್ನು ಬಿಟ್ಟು ಬೇರೆ ನನಗೆ ಜನನಿಯಿಲ್ಲ. ದೀನರಕ್ಷಕನೇ, ಮಹೇಶನೇ, ನೀನು ನನಗೆ ಜನಕನು. ಆದುದರಿಂದ ಕರುಣಾರಸ ತುಂಬಿದ ನಿನ್ನ ಕಡೆಗಣ್ಣಿನ ನೋಟಗಳನ್ನು ಬೀರಿ ನನ್ನನ್ನು ಕಾಪಾಡು. ॥೫೬॥

ನೀನು ಅನೇಕ ಘೋರ ಪಾಪಗಳನ್ನು ಪ್ರಳಯಕಾಲದ ಬೆಂಕಿಯ ಹಾಗೆ ಸುಟ್ಟು ನಾಶಪಡಿಸುತ್ತೀಯೆ. ಅನಂತ ಪುಣ್ಯಕರ್ಮಗಳಿಂದ ನಿನ್ನ ಪಾದಸ್ಮರಣೆಯು ಲಭಿಸುವುದು. ಆದುದರಿಂದ ನಾನು ಯಾವಾಗಲೂ ನಿನ್ನ ಪಾದಗಳನ್ನು ಸ್ಮರಿಸುವಂತೆ ವರವನ್ನು ನೀಡು. ॥೫೭॥

ಶ್ರೀಕಾಲಕಾಲಹೃದಯೇ ಕಲಯಾಮಿ ನಿತ್ಯಂ
ತ್ವಾಂ ಕಾಲಕಾಲಮಹಿಳೇ ಕಲಯೇಽನುವೇಲಂ।
ಮಚ್ಚಿತ್ತಮಸ್ತು ಯುವಯೋಶ್ಚರಣಾರವಿಂದೇ
ವಂದೇ ಮುಹುರ್ಮುಹುರಹಂ ವಿಜಹಾಮಿ ಮೋಹಂ ॥೫೮॥

ಹೇ ಭೂತನಾಥ ಭಗವನ್ ಗಿರಿಜಾಸಹಾಯ
ಹೇ ಗೌರಿ ದೇವಿ ಗಿರಿಜೇ ಶಿವವಲ್ಲಭೇ ಮಾಂ।
ಪಾಹಿ ಸ್ಮರಾಂತಕ ಯಮಾಂತಕ ಚಂದ್ರಮೌಳೇ
ಪಾಹಿ ಸ್ಮೃತಾಪಿ ಮಧುಕೈಟಭಹಂತ್ರಿ ಧಾತ್ರಿ ॥೫೯॥

ಪಾಹಿ ಪ್ರಭೋ ಭವಭಯಾಪಹ ಮೋಹಶತ್ರೋ
ಪಾಹಿ ತ್ರಿಲೋಚನ ಸುರಾಸುರಸಾರ್ವಭೌಮ।
ಪಾಹಿ ಪ್ರಬೋಧಜನನಿ ಪ್ರಳಯಾವಸಾನ
ಶ್ರೀಫಾಲಲೋಚನ ವಿಹಾರವಿನೋದಲೀಲೇ ॥೬೦॥

ಎಲೈ ಯಮನನ್ನು ಶಿಕ್ಷಿಸಬಲ್ಲ ದೇವನೇ ! ಯಾವಾಗಲೂ ನಾನು ನಿನ್ನನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ. ಮತ್ತು ಯಮಶಿಕ್ಷಕನ ಮಹಿಳೆಯೇ, ಪಾರ್ವತಿಯೇ, ನಿನ್ನನ್ನು ಮನಸ್ಸಿನಲ್ಲಿ ಸದಾ ಪೂಜಿಸುವೆನು. ನನ್ನ ಮನಸ್ಸು ಯಾವಾಗಲೂ ನಿಮ್ಮ ಪಾದಕಮಲಗಳಲ್ಲಿ ನೆಲಸಲಿ. ನಿಮ್ಮನ್ನು ಬಾರಿಬಾರಿಗೂ ನಮಸ್ಕರಿಸುತ್ತೇನೆ ಆದರಿಂದಲೇ ಅಜ್ಞಾನನಿರ್ಮುಕ್ತನಾಗುತ್ತೇನೆ. ॥೫೮॥

ಪೂಜ್ಯನಾದ ಶಂಕರನೇ, ನೀನು ಸಮಸ್ತ ಪ್ರಾಣಿಗಳನ್ನು ರಕ್ಷಿಸುವೆ. ಮನ್ಮಥನನ್ನು ಸಂಪೂರ್ಣವಾಗಿ ನಾಶಮಾಡಿದ ನೀನು ಯಮನನ್ನು ದಂಡಿಸಿರುವೆ. ಚಂದ್ರನನ್ನು ಶಿರಸ್ಸಿನಲ್ಲಿ ಆಭರಣದ ಹಾಗೆ ಧರಿಸಿರುವೆ. ಅಂತಹ ನೀನು ನನ್ನನ್ನು ಕಾಪಾಡು. ಅಮ್ಮಾ ಗೌರಿ, ನೀನು ಶ್ರೀ ಶಂಕರನ ಕಾಂತೆ. ಹಿಮವಂತನು ನಿನ್ನನ್ನು ಮಗಳನ್ನಾಗಿ ಪಡೆದಿರುವನು. ಮಧುಕೈಟಭರಾಕ್ಷಸರನ್ನು ಸಂಹರಿಸಿದಾಕೆಯೇ ನೀನು. ಸದಾ ನಿನ್ನನ್ನು ಸ್ಮರಿಸುವ ಈತನನ್ನು ಕಾಪಾಡಲಾರೆಯಾ. ॥೫೯॥

ಪ್ರಭುವೇ, ಸಂಸಾರದಲ್ಲಿ ಸಿಕ್ಕಿ ಭಯಪಟ್ಟಿರುವವರನ್ನು ಕಾಪಾಡುತ್ತೀಯೆ. ಅಜ್ಞಾನವನ್ನು ನಾಶಮಾಡುವ ಸಾಮರ್ಥ್ಯ ನಿನ್ನಲ್ಲಿದೆ. ದೇವರಾಕ್ಷಸರಿಗೆಲ್ಲಾ ನೀನು ಚಕ್ರವರ್ತಿನಿಯೆನಿಸಿರುವೆ. ತ್ರಿನಯನನೇ, ಕಾಪಾಡು. ದೇವಿಯೇ, ಒಳ್ಳೆಯ

ಪಾಹಿ ಪ್ರಸೀದ ಶಿವಭಕ್ತಮನನ್ಯಧನ್ಯ
ಮಾನ್ಯಂ ಮುದನ್ಯಮಪಿ ಧನ್ಯಮನನ್ಯಚಿತ್ತಂ ।
ಪಾಹಿ ಪ್ರಸಾದಸುಮುಖೈಃ ಕರುಣಾಕಟಾಕ್ಷೈಃ
ದಾಕ್ಷಾಯಣಿ ಪ್ರಣತಪಾಪವಿನಾಶದಕ್ಷೇ ॥೬೧॥

ಪಾಹಿ ಪ್ರಪನ್ನಸುರಲೋಕವಿಲೋಕನೇನ
ಕೃತ್ವಾ ಸುರಾರಿವಿಲಯಂ ಕರುಣಾನಿಧಾನೇ ।
ಪಾಹಿ ಸ್ಮರಾರಿಕರಚಾರುವಿಚಾರಿತಾಂಗಿ
ಶ್ರೀಮಂಗಳೇ ಸಕಲಮಂಗಳದಾನಲೋಲೇ ॥೬೨॥

ಪಾಹಿ ತ್ವಮೇವ ಗತಿರಿತ್ಯನುವಾರಮೀಶೇ
ತ್ವತ್ಪಾದಪದ್ಮಭಜನಂ ಕರವಾಣಿ ವಾಣಿ ।
ಸೈವಾ ಮಮ ಸ್ಫುರತು ಪಾಹಿ ಶಿವೇ ಭವಾನಿ
ತ್ವತ್ಪಾದಪದ್ಮಭಜನೇ ಮತಿರಸ್ತು ನಿತ್ಯಂ ॥೬೩॥

ಜ್ಞಾನವನ್ನು ಕೊಡತಕ್ಕವಳು ನೀನು. ವಿಹಾರ ಲೀಲೆಯಲ್ಲಿ ನೀನು ಆಸಕ್ತಳಾಗಿರುವೆ. ತಾಯಿ, ನೀನಲ್ಲದೇ ಬೇರೆ ಯಾರು ನನ್ನನ್ನು ಸಲಹುವರು? ॥೬೦॥

ಸ್ವಾಮಿನ್, ಈ ಶಿವಭಕ್ತನನ್ನು ಕಾಪಾಡು. ನಿನ್ನ ಕೃಪೆಯಿರುವುದರಿಂದ ನನಗಿಂತಲೂ ಧನ್ಯನು ಮತ್ತೊಬ್ಬನಿಲ್ಲ. ಮತ್ತು ತಾನು ಎಲ್ಲರಿಂದಲೂ ಗೌರವಿಸಲ್ಪಡುತ್ತಿರುವೆನು. ಹೀಗೆ ನಿನ್ನಲ್ಲಿ ಭಕ್ತಿಯಿರುವ ಇತರರನ್ನೂ ನೀನು ಸಲಹು. ದಾಕ್ಷಾಯಣಿ, ನೀನು ನಮಸ್ಕಾರಮಾಡಿದವರ ಪಾಪಗಳನ್ನು ನಾಶಮಾಡುವುದರಲ್ಲಿ ನಿಪುಣಳಿರುತ್ತೀಯೆ. ದೇವಿ, ಅನುಗ್ರಹಪೂರ್ಣವಾದ ದಯಾದೃಷ್ಟಿಯಿಂದ ನನ್ನನ್ನು ನೋಡು. ॥೬೧॥

ಎಲೌ ಸರ್ವಮಂಗಳೆಯೇ, ಶರಣಾಗತರಾದ ದೇವತೆಗಳನ್ನು ನೀನು ಕಾಪಾಡುವೆ. ನೀನು ದೈತ್ಯರನ್ನು ನಾಶಮಾಡಿ ಲೋಕವನ್ನು ರಕ್ಷಿಸುವೆ. ಅಲ್ಲದೆ ಎಲ್ಲಾವಿಧವಾದ ಕಲ್ಯಾಣಮಾರ್ಗವನ್ನು ಪ್ರತಿಯೊಬ್ಬರಿಗೂ ತೋರಿಸುವೆ. ಅಂತಹ ದಯಾಹೃದಯಳೇ, ನನ್ನನ್ನು ಸಲಹು. ॥೬೨॥

ಈಶ್ವರಿಯೇ, ನೀನೇ ನನಗೆ ದಿಕ್ಕು ಎಂದು ಬಾರಿಬಾರಿಗೂ ಹೇಳುವೆನು. ಯಾವಾಗಲೂ ನಿನ್ನ ಪಾದಕಮಲವನ್ನು ಭಜನೆಮಾಡುತ್ತೇನೆ. ದೇವಿ, ಭವಾನಿ

ಪಾಹಿ ಸ್ಮರಾಮಿ ಹರ ತೇ ಚರಣಾರವಿಂದಂ
ಮಂದಾರಕುಂದನವಬಿಲ್ವದಳಾದಿಪೂಜ್ಯಂ ।
ಪಾಹಿ ಸ್ಮರಾಮಿ ಗಿರಿರಾಜಸುತೇ ತ್ವದೀಯ
ಪಾದಾಂಬುಜಂ ತ್ರಿದಶಚಿತ್ತಕಲತ್ರಪಾತ್ರಂ ॥೬೪॥

ವಂದೇ ಸರ್ವಸುರಾಸುರಪ್ರಭುಮುಮಾಕಾಂತಂ ಪ್ರಶಾಂತಂ ಮುಹುಃ
ಸಂತಾನದ್ರುಮಪುಷ್ಪಮಂಟಪಮಹಾಸಿಂಹಾಸನಾಧಿಷ್ಠಿತಂ ।
ಆನಮ್ರಾಮರವೃಂದಮೌಲಿವಿಲಸತ್ಕೋಟೀರದಿವ್ಯಪ್ರಭಾ
ಪುಂಜವ್ಯಂಜಿತಪಾದುಕೇ ತವ ಭಜೇ ಮೃತ್ಯುಂಜಯಾಮಾಮವ ಮಾಂ ॥೬೫॥

ಪ್ರತಿನಿತ್ಯವೂ ನಿನ್ನ ಪಾದಕಮಲವನ್ನೇ ಭಜಿಸುವಂತೆ ನನಗೆ ಬುದ್ಧಿಯನ್ನು ಕೊಡು. ||೬೩||

ಸ್ವಾಮಿಯೇ, ಶಂಕರನೇ, ಮಂದಾರ, ಮಾಗೀಮಲ್ಲಿಗೆ, ಬಿಲ್ವಚಿಗುರು ಇವುಗಳಿಂದ ಪೂಜಿಸಿರತಕ್ಕ ನಿನ್ನ ಪಾದವನ್ನು ನಾನು ಭಜನೆಮಾಡುವೆನು. ಗೌರಿಯೇ, ದೇವತೆಗಳಿಂದಲೂ ಸ್ಮರಣೀಯವಾದ, ಮತ್ತು ದೇವಭಕ್ತೆಯರಿಂದ ಚಿಂತನೀಯವಾದ ನಿನ್ನ ಪಾದಕಮಲವನ್ನು ಧ್ಯಾನಮಾಡುವೆನು. ನನ್ನನ್ನು ಕಾಪಾಡು ದೇವಿ. ||೬೪||

ಎಲ್ಲಾ ದೇವತೆಗಳಿಗೂ, ರಾಕ್ಷಸರಿಗೂ ಒಡೆಯನಾದ, ಉಮಾಕಾಂತನಾದ ಶಂಕರನನ್ನು ನಮಿಸುವೆನು. ಆತನು ಶಾಂತಸ್ವಭಾವದವನು. ಸಂತಾನಪುಷ್ಪಗಳಿಂದ ರಚಿತವಾದ ದೊಡ್ಡ ಗದ್ದಿಗೆಯಲ್ಲಿ ಮಂಡಿಸಿರುವನು. ಇಂತಹ ಈಶ್ವರನನ್ನು ಭಜಿಸುವೆನು. ಎಲೈ ಮೃತ್ಯುಂಜಯನೇ, ದೇವತೆಗಳನೇಕರು ನಿನಗೆ ತಲೆಬಾಗಿರುವರು. ತಲೆಬಾಗುವಾಗ ಅವರ ಕಿರೀಟಗಳಲ್ಲಿ ಪ್ರಕಾಶಿಸುವ ರತ್ನಕೋಟಿಗಳ ಹೊಳಪು ನಿನ್ನ ಪಾದುಕೆಯನ್ನು ಮುಚ್ಚಿವೆ. ಹಾಗೆ ಆ ಕಾಂತಿ ಮುಸುಕಿರುವುದರಿಂದಲೇ ನಿನ್ನ ಪಾದಗಳನ್ನು ಗುರುತಿಸಬಹುದಾಗಿದೆ. ಅಂತಹ ನಿನ್ನ ಪಾದಗಳಿಗೆ ತಲೆಬಾಗುವೆನು. ದೇವ, ಕ್ಷಮಿಸು ನನ್ನನ್ನು ಕಾಪಾಡು, ಕಾಪಾಡು. ||೬೫||

ತ್ವಾಮಾರಾಧ್ಯತಮಂ ವದಂತಿ ಮುನಯಃ ಸೋಮಾವತಂಸಂ ಪ್ರಭುಂ
ವೇದಾಂತಾ ಅಪಿ ಸಂಸ್ತುವಂತಿ ಭಗವಂಸ್ತ್ವತ್ಪಾದಪದ್ಮಂ ಮುಹುಃ ।
ತ್ವದ್ರೂಪಂ ವಿದಿತಂ ನ ಯೋಗಿನಿಕರೈರ್ಯಾಗೈಶ್ಚ ದಾನೈಸ್ತಥಾ
ದೀನಾನಾಮವನೈಶ್ಚ ನಿಶ್ಚಿತಮಿದಂ ಸರ್ವಾತ್ಮನಾ ಶಂಕರ ॥೬೬॥

ಶರ್ವಾಣೀಕುಚಹೇಮಕುಂಭವಿಲಸತ್ಕಾಶ್ಮೀರರೇಣುಪ್ರಭಾ
ಪೂರಾಪೂರಿತದಿವ್ಯಕಾಂತಿರುಚಿರಂ ತ್ವತ್ಪಾದಪದ್ಮಂ ಮುದಾ ।
ವಂದೇ ಸುಂದರಮದ್ರಿಜಾಕರತಲಾಲಂಕಾರಸಾರಾಕರಂ
ವಾರಂ ವಾರಮನುಸ್ಮರಾಮಿ ಸಕಲಾಭೀಷ್ಟಪ್ರದಾನಾಕರಂ ॥೬೭॥

ಕಾರುಣ್ಯಾಮೃತಸಾಗರಾಮರವರಾಪಾರಾನತಿವ್ಯತ್ಯಯ
ವ್ಯತ್ಯಸ್ತೋನ್ನತಪಾದುಕಾಮಿತಮಣಿಶ್ರೀರಂಜಿತಂ ಮಾಂ ಕುರು ।

ಚಂದ್ರಶೇಖರನೇ, ಚಂದ್ರಚೂಡನಾದ ನೀನೇ ಪೂಜಿಸಲರ್ಹನು. ಮತ್ತು ನಿಗ್ರಹಾನುಗ್ರಹಸಮರ್ಥನು ಎಂದು ಮುನಿಗಳು ಹೇಳುವರು. ಅಲ್ಲದೇ ಎಲ್ಲಾ ಉಪನಿಷತ್ತುಗಳೂ ಪುನಃ ಪುನಃ ನಿನ್ನ ಪಾದಕಮಲವನ್ನೇ ಹೊಗಳುತ್ತಿವೆ. ಯೋಗಿಗಳೂ, ಯಾಗಮಾಡಿದವರೂ ಕೂಡ ನಿನ್ನ ರೂಪವನ್ನು ತಿಳಿಯಲಾರರು. ಆದರೆ ದಾನ, ದೀನರಕ್ಷಣೆ ಮುಂತಾದವುಗಳಿಂದ ನಿನ್ನ ಸ್ವರೂಪವನ್ನು ನಿಶ್ಚೈಸಲು ಸಾಧ್ಯವಾಗಲಾರದು. ॥೬೬॥

ದೇವ, ಗೌರಿಯು ಬಂಗಾರದ ಕೊಡಗಳಂತಿರುವ ತನ್ನ ಸ್ತನಗಳಿಗೆ ಕಸ್ತೂರಿಯನ್ನು ಲೇಪಿಸಿಕೊಂಡಿರುವಳು. ಆ ಕಸ್ತೂರಿಯ ದೂಳಿನ ಕಾಂತಿಯ ಪ್ರವಾಹದಿಂದ ನಿನ್ನ ಪಾದವು ತುಂಬಿಹೋಗಿದೆ. ಅಂತಹ ನಿನ್ನ ಚರಣಕ್ಕೆ ಸಂತಸದಿಂದೆರಗುವೆನು. ಮತ್ತು ಆ ಪಾರ್ವತಿಯಾದರೋ ನಿನ್ನ ಪಾದಗಳನ್ನು ತನ್ನ ಕೈಗಳಿಂದ ಅಲಂಕರಿಸುವಳು. ಆ ಚರಣವು ಬೇಕುಬೇಕಾದುದೆಲ್ಲವನ್ನೂ ಭಕ್ತರಿಗೆ ಕೊಡುವುದಾಗಿದೆ. ಆದುದರಿಂದ ಅದನ್ನು ವಂದಿಸುವೆನು. ॥೬೭॥

ಎಲೈ ಕರುಣಾಸಮುದ್ರನೇ, ಎಲ್ಲಾ ದೇವತೆಗಳೂ ಅನೇಕ ನಮಸ್ಕಾರಗಳನ್ನು ಮಾಡಿ ಮಾಡಿ, ನಿನ್ನ ಪಾದುಕೆಗೆ ಹಚ್ಚಿರುವ ಮಣಿಗಳೆಲ್ಲಾ ಏರು ತಗ್ಗುಗಳನ್ನು ಹೊಂದಿರುತ್ತವೆ. ಅಂತಹ ನಿನ್ನ ಪಾದುಕಾಮಣಿಕಾಂತಿಯಿಂದ ನನ್ನನ್ನು

ತ್ವಾಮೇವಾಹಮುಪಾಗತಃ ಶರಣಮಿತ್ಯರ್ಥೇಽಂದುಮೌಳೇ ಸ್ಮರ
ಸ್ಮರ್ತವ್ಯೇಷ್ವಹಮೇಕಏವ ಭಗವನ್ ಕಿಂ ನಾವಸಿಷ್ಟ ಪ್ರಭೋ ॥೬೮॥

ಕಲ್ಯಾಣಾನಿ ತನೋತು ಮೇ ತವ ಪದಾಂಭೋಜಂ ವಿಪತ್ಸಂತತಿಂ
ದೂರೀಕೃತ್ಯ ಮಹಾಘಸಾಗರಮಹಾಕಲ್ಲೋಲಮಾಲಾಮಪಿ ।
ಲೀಲಾ ತೇ ಖಲು ಕಾಲಕಾಲಜಗತಾಂ ಸೃಷ್ಟಿಸ್ಥಿತಿಧ್ವಂಸನಾ
ನ್ಯಾಯಾಸೋಽಪಿ ನ ತತ್ರ ತೇ ಸತತಮಪ್ಯೇತತ್ತವ ಕ್ರೀಡನಂ ॥೬೯॥

ಮಾ ಮಾ ಮುಂಚ ಮಹೇಶ ಮಾಮಕಧಿಯಾಮದ್ಭಾಗಧೇಯಂ ಪ್ರಿಯಂ
ಶಂಭೋ ತ್ವಚ್ಚರಣಾರವಿಂದಭಜನಂ ತನ್ಮೇ ನಿಧಿಸ್ತದ್ಧನಂ ।
ತನ್ಮೇ ಸೌಖ್ಯಮಹಾಂಬುಧಿಶ್ಚ ತರಣೋಪಾಯೋಽಪ್ಯಪಾಯಾಂಬುಧೇಃ
ಆನಂದಾಂಬುಧಿವೀಚಿಕಾದಿರಚನಾಚಾತುರ್ಯಮರ್ಯಾದಭೂಃ ॥೭೦॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶಿವಮಾನಸಪೂಜಾ ಶಾಂಭವಪ್ರಾರ್ಥನಂ ನಾಮ
ಪಂಚವಿಂಶೋಽಧ್ಯಾಯಃ

ಅಲಂಕರಿಸು. ದೇವ, ನಿನ್ನನ್ನೇ ರಕ್ಷಕನೆಂದು ತಿಳಿದು ಮೊರೆಹೊಕ್ಕಿರುವೆನು. ನಿನ್ನ ಸ್ಮರಣೆಗೆ ವಿಷಯರಾದವರಲ್ಲಿ ನಾನೊಬ್ಬ ಮಾತ್ರ ಉಳಿದಿರುವೆನು. ಪೂಜ್ಯನೇ, ಅಂತಹ ನನ್ನನ್ನು ಸ್ಮರಿಸು. ॥೬೮॥

ಶಂಕರನೇ, ನಿನ್ನ ಪಾದಕಮಲವು ನನಗೆ ಮಂಗಳವನ್ನುಂಟುಮಾಡಲಿ. ಮತ್ತು ದುಃಖಗಳನ್ನು ದೂರಮಾಡಲಿ. ಹಾಗೆಯೇ ಪಾಪಗಳೆಂಬ ಮಹಾಸಮುದ್ರದ ಅಲೆಗಳನ್ನೂ ನಾಶಮಾಡಲಿ. ದೇವ, ಯಮನಿಗೂ ನೀನು ಶಾಸಕನಾಗಿರುವೆ. ನೀನು ಕ್ರೀಡಾಮಾತ್ರದಿಂದ ಸೃಷ್ಟಿ, ಸ್ಥಿತಿ, ಧ್ವಂಸಗಳನ್ನು ಮಾಡುವೆ. ಅಲ್ಲದೇ ಅದರಲ್ಲಿ ಸ್ವಲ್ಪವೂ ನಿನಗೆ ಆಯಾಸವಿಲ್ಲ. ಇದೇ ನಿನಗೆ ಆಟವಾಗಿದೆ. ॥೬೯॥

ಶಂಭೋ, ಪರಮೇಶ್ವರ! ನಿನ್ನ ಬುದ್ಧಿಯನ್ನು ಅಭಿವೃದ್ಧಿಪಡಿಸು. ನನ್ನ ಅದೃಷ್ಟವು ಸ್ಪದೃಷ್ಟವಾಗಲಿ. ನಿನ್ನ ಪಾದದ ಭಜನೆಯೇ ನನಗೆ ನಿಧಿಯಾಗಿದೆ. ದುಃಖಸಮುದ್ರದಿಂದ ದಾಟಿ ನಾನು ಪಾರಾಗಲು ಸೌಖ್ಯಸಾಗರವನ್ನು ನನಗೆ

ದಯೆಪಾಲಿಸು. ಅದರಿಂದ ಆನಂದವು ಸಮುದ್ರದ ಅಲೆಗಳು ಉಕ್ಕುವಂತೆ ನನ್ನಲ್ಲಿ ಉಕ್ಕಿಹರಿಯಲಿ" ಎಂದು ಶೈವನು ಶಂಕರನನ್ನು ಸ್ತುತಿಸಿದನು. ||೭೦||

ಇಲ್ಲಿಗೆ ಶ್ರೀಶಿವರಹಸ್ಯದ ಹರ ಎಂಬ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಶಿವಮಾನಸಪೂಜಾ ಮತ್ತು ಶಾಂಕರಪ್ರಾರ್ಥನ ಎಂಬ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಷಟ್ತ್ರಿಂಶೋಽಧ್ಯಾಯಃ

|| ವ್ಯಾಸ ಉವಾಚ ||

ಇತಿ ತದ್ಗಿರಮಾಕರ್ಣ್ಯ ಸಕಾರುಣ್ಯಾರ್ಣವಃ ಕ್ಷಣಂ ।
ಸಾಪರ್ಣಸ್ತಂ ವಿಲೋಕ್ಯಾಹ ವಚನಂ ಚ ಸುಧಾಮಯಂ ॥೧॥

ಯೋಽಯಂ ಭವತ್ಕೃತಾ ಪೂಜಾ ತಯಾ ತುಷ್ಟೋಽಸ್ಮ್ಯಸಂಶಯಂ ।
ಸ್ತೋತ್ರೇಣಾನೇನ ಸುತರಾಂ ತುಷ್ಟಃ ಪುಷ್ಟೋಽಸ್ಮಿ ಶಾಂಭವ ॥೨॥

ವರೋ ಯಃ ಪ್ರಾರ್ಥಿತೋ ಭಕ್ತ್ಯಾ ಸೋಽಪಿ ದತ್ತಃ ಕಿಲಾದರಾತ್ ।
ಕಿಮದೇಯಂ ಮಮಾಪ್ಯಸ್ತಿ ಮದ್ಭಕ್ತೇಭ್ಯೋ ವಿಶೇಷತಃ ॥೩॥

ಭವದ್ಭಿರ್ಯತ್ಕೃತಂ ಸ್ತೋತ್ರಂ ತತ್ಪಠೇದ್ಯಃ ಸುಬುದ್ಧಿಮಾನ್ ।
ತತ್ಸಂತತಿಃ ಪ್ರವೃದ್ಧಾ ಸ್ಯಾತ್ ತದೈಶ್ವರ್ಯಂ ಚ ವರ್ಧತಾಂ ॥೪॥

ಇಪ್ಪತ್ತಾರನೆಯ ಅಧ್ಯಾಯ

ಓ ಋಷಿಗಳಿರಾ, ಹೀಗೆ ಆ ಶಾಂಭವನ ಸ್ತುತಿಯನ್ನು ಕೇಳಿ ಆ ಕರುಣಾಪೂರ್ಣನಾದ ಸಾಂಬಮೂರ್ತಿಯು, ಆತನನ್ನು ನೋಡಿ, ಅಮೃತಮಯವಾದ ಈ ಮಾತನ್ನು ಹೇಳಿದನು. ಎಲೈ ಶೈವನೇ, ನೀನು ಮಾಡಿದ ಪೂಜೆಯಿಂದ ಸುಪ್ರೀತನಾಗಿದ್ದೇನೆ. ಈ ಸ್ತೋತ್ರದಿಂದ ಅತ್ಯಂತವಾಗಿ ಸಂತೋಷಗೊಂಡಿದ್ದೇನೆ. ||೧-೨||

ನೀನು ಯಾವ ವರವನ್ನು ಬೇಡಿದ್ದೀಯೋ ಆ ವರವನ್ನು ಆದರದಿಂದ ಕೊಟ್ಟಿದ್ದೇನೆ. ನನ್ನ ಭಕ್ತರಿಗೆ ಕೊಡದೇ ಇರತಕ್ಕದು ಯಾವುದು ತಾನೇ ಇದೆ?

ಇತ್ಯುಕ್ತ್ವಾ ತತ್ಕೃತಾಂ ಪೂಜಾಂ ಗೃಹೀತ್ವಾ ಸಾದರಂ ಹರಃ ।
ತತ್ರೈವಾಂತರ್ದಧೇ ವಿಪ್ರಾಃ ಕೋಟಿಶೋ ಗಣಸೇವಿತಃ ॥೫॥

|| ಋಷಯ ಊಚುಃ ||

ತಥಾ ಪಾಪಹರಾ ಸೇಯಂ ಸುಧಾರೂಪಾ ಶ್ರುತಾಧುನಾ ।
ಪುನಃ ಕುತ್ರಾಸ್ಥಿತಂ ದೇವ್ಯಾ ಸಹ ದೇವೇನ ಶಂಭುನಾ ॥೬॥

ತತಃ ಕೈಲಾಸಮಗಮದ್ಗಿರಿಜಾವಲ್ಲಭಃ ಪ್ರಭುಃ ।
ತತ್ರೋಪವನಮಾಸಾದ್ಯ ವಿಹಾರನಿರತೋಽಭವತ್ ॥೭॥

ರಮ್ಯೋಪವನಮಧ್ಯಸ್ಥರತ್ನಮಂಟಪಮಧ್ಯಗೇ ।
ರತ್ನಸಿಂಹಾಸನೇ ಸ್ಥಿತ್ವಾ ಗೌರೀಮಾಹ ಹರೋ ಗಿರಂ ॥೮॥

ನೀವು ಮಾಡಿರತಕ್ಕ ಸ್ತೋತ್ರವನ್ನು ಯಾವನು ಪಠಿಸುತ್ತಾನೆಯೋ ಅಂತಹ ಆಸ್ತಿಕನ ಸಂತತಿಯು ಬೆಳೆಯುತ್ತದೆ. ಅಲ್ಲದೇ ಆತನಿಗೆ ಐಶ್ವರ್ಯವೂ ಹೆಚ್ಚುತ್ತದೆ. ||೩-೪||

ಎಲೈ ವಿಪ್ರರೇ, ಈಶ್ವರನು ಹೀಗೆಂದು ಹೇಳಿ, ಆ ಶೈವನು ಮಾಡಿದ ಪೂಜೆಯನ್ನು ಕೈಗೊಂಡು ಒಂದು ಕೋಟಿ ಗಣಗಳಿಂದ ಸೇವಿತನಾದ ಆತನು ಕಣ್ಮರೆಯಾದನು ಎಂದು ವ್ಯಾಸರು ಋಷಿಜನರಿಗೆ ಹೇಳಿದರು. ||೫||

'ಓ ವ್ಯಾಸನೇ, ಮಹರ್ಷಿಯೇ, ಪಾಪನಾಶಕವಾದ ಮತ್ತು ಅಮೃತಕ್ಕೆ ಸಮಾನವಾದ ಈ ಕಥೆಯನ್ನು ಕೇಳಿದೆವು. ಆಮೇಲೆ ಪಾರ್ವತಿಯು ಶಂಕರನೊಡನೆ ಎಲ್ಲಿ ವಾಸಿಸಿದಳು? ಎಂಬುದನ್ನು ಹೇಳಬೇಕು' ಎಂದು ಋಷಿಗಳು ವ್ಯಾಸರನ್ನು ಕೇಳಿಕೊಂಡರು. ||೬||

ಆಗ ವ್ಯಾಸರು ಮುಂದಿನ ವಿಷಯವನ್ನು ಮುಂದುವರಿಸಿದರು. "ಬಳಿಕ ಗಿರಿಜಾವಲ್ಲಭನಾದ ಈಶ್ವರನು ಕೈಲಾಸಕ್ಕೆ ತೆರಳಿದನು. ಅಲ್ಲಿ ರಮ್ಯವಾದ ಉದ್ಯಾನವನವನ್ನು ಹೊಂದಿ ವಿಹರಿಸುತ್ತಾ ಇದ್ದನು. ಆತನು ಆ ಉದ್ಯಾನದಲ್ಲಿರುವ ರತ್ನಮಂಟಪದ ಮಧ್ಯೆ ಇದ್ದ ಸಿಂಹಾಸನದಲ್ಲಿ ಮಂಡಿಸಿ ಗೌರಿಯೊಡನೆ ಈ ಮಾತನ್ನು ಹೇಳಿದನು. ||೭-೮||

ಪಶ್ಯ ಬಿಲ್ವತರೂನ್ ಗೌರಿ ಬಿಲ್ವಾಂಕುರಸಮಾವೃತಾನ್ ।
ಶಿವಲಿಂಗಾರ್ಚನರತಾನ್ ಗತ್ವಾ ಗತ್ವಾ ಪುನಃ ಪುನಃ ॥೯॥

ಪಶ್ಯ ಪ್ರಸೂನವಲ್ಲೀನಾಂ ಕುಲಂ ಯಾತಿ ಪ್ರತಿಕ್ಷಣಂ ।
ಶಿವಲಿಂಗಾರ್ಚನಾಯಾಶು ಪ್ರಸೂನಫಲಸಂಕುಲಂ ॥೧೦॥

ಪಶ್ಯ ಪಶ್ಯಾರವಿಂದಾನಿ ಸುಂದರಾಣ್ಯತಿಸುಂದರಿ ।
ಮಂದಮಾರುತಸಂವೀತಂ ಮಂದಾರಕುಸುಮಾನ್ಯಪಿ ॥೧೧॥

ಪಶ್ಯಾಂಕುರೇಷು ಪಕ್ವಾನಿ ಫಲಾನಿ ವಿಮಲಾನ್ಯಪಿ ।
ವಿಪುಲಾನಿ ವಿಚಿತ್ರಾಣಿ ರಸಧಾರಾನ್ವಿತಾನ್ಯಪಿ ॥೧೨॥

ಪಶ್ಯ ಪಶ್ಯೇಕ್ಷುದಂಡಾಗ್ರಫಲಮಂಡಲಮಂಬಿಕೇ ।
ತದ್ರಸಂ ಚ ಸುಧಾಧಾರಾ ರಸಧಿಕ್ಕರಣಕ್ಷಮಂ ॥೧೩॥

ಅಭೂತಪೂರ್ವಮೇವಾಸ್ಮಿನ್ ವನೇ ಸರ್ವಮಿಹಾಂಬಿಕೇ ।
ಪಶ್ಯ ಪಶ್ಯ ವಿನೋದೇನ ಪರಮಾನಂದಸಾಧನಂ ॥೧೪॥

ಗೌರಿಯೇ, ತಳಿರುಗಳಿಂದ ತುಂಬಿದ ಈ ಬಿಲ್ವಮರಗಳನ್ನು ನೋಡು. ಇಗೋ ನೋಡು, ಶಿವಲಿಂಗಾರ್ಚನೆಯಲ್ಲಿ ಆಸಕ್ತರಾದ ಪುರುಷರು ಬಾರಿಬಾರಿಗೂ ಹೋಗಿ ಬರುತ್ತಿರುವರು. ಈ ಹೂಬಳ್ಳಿಗಳ ಸಮೂಹವು ಕ್ಷಣಕ್ಷಣಕ್ಕೂ ವೃದ್ಧಿ ಹೊಂದುತ್ತಿದೆ. ಶಿವಲಿಂಗಾರ್ಚನೆಮಾಡಲು ಈ ಹೂ, ಹಣ್ಣು, ಇವುಗಳ ರಾಶಿಗಳು ತುಂಬಾ ಉಪಯುಕ್ತಗಳಾಗಿವೆ ನೋಡು. ॥೧೧॥

ಓ ಪ್ರಿಯೇ, ಅತಿ ಸುಂದರವಾದ ಈ ಕಮಲಗಳನ್ನು ನೋಡು. ಮತ್ತು ಮಂದಮಾರುತವು ಬೀಸುವುದರಿಂದ ಅಲ್ಪ ಸ್ವಲ್ಪ ಅಲುಗಾಡುತ್ತಿರುವ ಈ ಮಂದಾರ ಹೂಗಳನ್ನು ನೋಡು. ಈ ತಳಿರುಗಳನ್ನೂ ಮೊಳಕೆಗಳನ್ನೂ ನೋಡು. ಹಾಗೆ ಚನ್ನಾಗಿ ಹಣ್ಣಾಗಿ ರಸ ತುಂಬಿ ಪರಿಶುದ್ಧವಾದ ಮತ್ತು ವಿಚಿತ್ರವಾದ ಈ ಹಣ್ಣುಗಳು ಎಷ್ಟು ರಮಣೀಯಗಳಾಗಿವೆ! ನೋಡು. ॥೧೧-೧೨॥

ದಂಡದಂತೆ ಬೆಳೆದಿರುವ ಕಬ್ಬಿನ ಅಗ್ರಭಾಗಗಳನ್ನು ನೋಡು. ಆ ಫಲ ಸಮೂಹಗಳು ಎಷ್ಟು ಮುದ್ದಾಗಿವೆ! ನೋಡು. ಆ ಕಬ್ಬಿನ ರಸವಾದರೂ ಅಮೃತ ರಸದ ರುಚಿಯನ್ನೂ ಮೀರಿಸಿದೆ. ಇಂತಹ ಸನ್ನಿವೇಶಗಳು ಹಿಂದೆ ಎಲ್ಲಿಯೂ

ಶೋಭಾಮಭಿನವಾಮೇನಾಂ ಪುನಃ ಪುನರನುಕ್ಷಣಂ ।
ದೃಷ್ಟ್ವಾ ಗೌರೀ ಮಹಾದೇವಂ ಪ್ರಾಹ ವಿಸ್ಮಯಸಂಯುತಾ ॥೧೫॥

ಶಂಕರಾಪಾರಕರುಣಾರಸಸಾಗರಸಾಗರ ।
ಸಾದರಂ ವದ ವೃತ್ತಾಂತಂ ವನಸ್ಯಾಸ್ಯ ವಿಶೇಷತಃ ॥೧೬॥

ಅಮೀ ಕಿಂ ತರವೋ ಲೋಕೇ ಸಾಂಕುರಾಃ ಕಿಂ ಚರಂತ್ಯಮೀ ।
ಶಿವಾರ್ಚನಾಯ ಪುಷ್ಪಾದ್ಯೈಃ ಸ್ವತ ಏವಾದ್ಯ ಯತ್ನತಃ ॥೧೭॥

॥ ಸದಾಶಿವ ಉವಾಚ ॥

ಪುರಾ ಹಿಮಗಿರೇರೇವ ಕಂದರೇಷು ಮುನೀಶ್ವರಾಃ ।
ತಪ್ತ್ವಾಘೋರೇಣ ತಪಸಾ ಶ್ರಾಂತಾ ಶಾಂತಾ ನಿರಂತರಂ ॥೧೮॥

ಕಲ್ಪಾವಸಾನಪರ್ಯಂತಂ ಸ್ಥಿತಾಸ್ತೇ ಸ್ವತಪೋಬಲಾತ್ ।
ತತಃ ಪರಂ ಪ್ರಸನ್ನೋಽಸ್ಮಿ ತೇಭ್ಯ ಏವ ಶುಭಾನನೇ ॥೧೯॥

ಕಂಡುಬಂದಿಲ್ಲ. ಅವೆಲ್ಲಾ ಈ ವನದಲ್ಲಿ ತೋರುತ್ತಿವೆ. ಈ ವಿನೋದಕರವಾದ ಮತ್ತು ಆನಂದಸಾಧನವಾದ ವನವನ್ನು ಬಾರಿಬಾರಿಗೂ ನೋಡು. ||೧೩-೧೪|

ಅತ್ಯಂತ ಮನೋಹರವಾದ ಆ ವನದ ಶೋಭೆಯನ್ನು ಪ್ರತಿಕ್ಷಣವೂ ಬಾರಿ ಬಾರಿಗೂ ನೋಡಿ ಆ ಗೌರಿಯು, ಅತ್ಯಂತ ಆಶ್ಚರ್ಯದಿಂದ ಶಂಕರನೊಡನೆ ಇಂತೆಂದಳು. ||೧೫||

"ದಯಾಸಾಗರನೇ, ಶಂಕರನೇ, ಈ ವನದ ವೃತ್ತಾಂತವನ್ನು ವಿಸ್ತಾರವಾಗಿ ಹೇಳು. ಈ ವೃಕ್ಷಗಳು ಎಳೆಚಿಗುರುಗಳಿಂದ ತುಂಬಿ ಸೊಂಪಾಗಿರುವುವು. ಇವು ಶಿವಾರ್ಚನೆಗೋಸ್ಕರ ತಾವಾಗಿಯೇ ಹೂಗಳನ್ನು ಅರ್ಪಿಸುವುವು." ||೧೬-೧೭||

"ಹಿಂದೆ ಮುನಿಶ್ರೇಷ್ಠರು ಹಿಮವತ್ಪರ್ವತದ ಗುಹೆಗಳಲ್ಲಿ ಉಗ್ರವಾದ ತಪಸ್ಸನ್ನು ಮಾಡಿ ಮಾಡಿ ಬಳಲಿದ್ದರು. ಕಲ್ಪಾಂತದವರೆಗೂ ಅವರು ಹಾಗೆ ತಪಸ್ಸು ಮಾಡುತ್ತಿದ್ದರು. ಅವರ ತಪೋಬಲದಿಂದ ನಾನು (ಶಿವನು) ಅವರಿಗೆ ಪ್ರಸನ್ನನಾದೆನು. ||೧೮-೧೯||

ತತಃ ಸ್ತುತ್ವಾ ಪ್ರಾರ್ಥಿತೋಽಪಿ ವರಸ್ತೈರೇವ ಶೈಲಜೇ ।
ಅನ್ಯೈರಪ್ರಾರ್ಥಿತಃ ಪೂರ್ವಮಪೂರ್ವಃ ಸ ವರಃ ಶಿವೇ ॥೨೦॥

ಯಸ್ತವಸ್ತೈಃ ಕೃತೋ ಗೌರಿ ತಂ ತ್ವಂ ಪಾಪಹರಂ ಶೃಣು ।
ವರಸ್ವರೂಪಂ ವಕ್ಷ್ಯಾಮಿ ತತ್ಪ್ರಾರ್ಥಿತಮನಾಕುಲಂ ॥೨೧॥

॥ ಋಷಯ ಊಚುಃ ॥

ವಂದೇ ಸುರಾರಾಧಿತಮಿಂದುಮೌಳಿಂ
ವಂದೇ ಭವಾನೀರಮಣಂ ಮಹೇಶಂ ।
ವಂದೇ ಮಹಾಮೇರುಶರಾಸನೋರು
ಕೋಟಿಪ್ರಭಾಕೂಟನಿಘಟ್ಟಿತಾಂಗಂ ॥೨೨॥

ವಂದೇ ಮಹಾನಂದಪದಪ್ರದಾನಂ
ವಿಹಾರಲೋಲಂ ಖಲು ಕಾಲಕಾಲಂ ।
ವಂದೇ ಪುರಶ್ರೀಪರಿಹಾರಹೇತುಂ
ವಂದೇ ಸ್ಮರಾರಾತಿಮುಮಾಸಹಾಯಂ ॥೨೩॥

ಎಲೌ ಗೌರಿಯೇ, ಆ ಋಷಿಗಳು ತಪಸ್ಸು ಮಾಡಿ ನನ್ನನ್ನು ಹೀಗೆ ಪ್ರಾರ್ಥಿಸಿದರು. ಅವರು ಪ್ರಾರ್ಥಿಸಿದಂತಹ ವರವನ್ನು ಈ ಹಿಂದೆ ಯಾರೂ ಪ್ರಾರ್ಥಿಸಿರಲಿಲ್ಲ. ಅವರು ಮಾಡಿರುವ ಸ್ತೋತ್ರವನ್ನು ನೀನೂ ಕೇಳು. ಅದು ಪಾಪನಿವಾರಕವಾದದ್ದು. ಅವರು ಬೇಡಿದ ವರದ ಸ್ವರೂಪವನ್ನು ವಿವರಿಸುತ್ತೇನೆ. ಸಾವಧಾನದಿಂದ ಕೇಳು" ಎಂದು ಪಾರ್ವತಿಗೆ ಹೇಳುತ್ತಾ ಶಂಕರನು ಮುಂದುವರಿದನು. ॥೨೦-೨೧॥

"ದೇವದೇವನೇ, ಶಂಕರನೇ, ನೀನು ಸಕಲ ದೇವತೆಗಳಿಂದಲೂ ಪೂಜಿಸಲ್ಪಡುವೆ. ಭವಾನಿಗೆ ನೀನು ಒಡೆಯನು. ಮಹಾಮೇರುಪರ್ವತವೇ ನಿನಗೆ ತ್ರಿಪುರವಧಕಾಲದಲ್ಲಿ ಬಿಲ್ಲಾಗಿದ್ದಿತು. ಆ ಬಿಲ್ಲಿನ ಮೇಲ್ಭಾಗದ ತುದಿಯಿಂದ ನಿನ್ನ ಅವಯವವು ಜಡ್ಡುಗಟ್ಟಿದೆ. ಆನಂದಮಯವಾದ ಶಾಶ್ವತಸ್ಥಾನವನ್ನು ನೀನು ಕೊಡಬಲ್ಲೆ. ನೀನು ವಿಹಾರಾಸಕ್ತನಲ್ಲದೇ ಕಾಲನಿಗೂ ಕಾಲನು. ತ್ರಿಪುರನಾಶಕ್ಕೆ ನೀನೇ ಕಾರಣನಾದೆಯಲ್ಲವೇ! ದೇವನೇ, ನಿನ್ನನ್ನು ನಮಸ್ಕರಿಸುತ್ತೇನೆ. ॥೨೨-೨೩॥

ವಂದೇ ತಮುರ್ಧೇಂದುಕಲಾವತಂಸಂ
ತಾರಾವಿಹಾರಾಕರಸಂವೃತಾಂಸಂ ।
ವಂದೇ ಮನೋಮಾನಸರಾಜಹಂಸಂ
ವಂದೇ ಭವಾನೀಸ್ಮಿತಸಿಂಧುಹಾಸಂ ॥೨೪॥

ವಂದೇ ಮುಕುಂದಾದ್ಯಸುರಾಸುರಾಣಾಂ
ವಂದ್ಯಂ ಚ ವೇದಾಂತಗಣಸ್ಮೃತಂ ಚ ।
ವಂದೇ ಪ್ರಸನ್ನಾರ್ತಿಹರಂ ಪರಂ ತಂ
ವಂದೇ ಮುಹುಃ ಶಾಂಕರಮೇವ ವಂದೇ ॥೨೫॥

ವಂದೇ ಜಗತ್ಸರ್ಗವಿನಾಶಹೇತುಂ
ವಂದೇ ಜಗತ್ಪಾಲನಹೇತುಮಿಾಡ್ಯಂ ।
ವಂದೇ ಜಗತ್ಸಂಹರಣಕ್ಷಮಂ ತ್ವಾಂ
ವಂದೇ ಭವಾನೀಮುಖಪದ್ಮಭಾನುಂ ॥೨೬॥

ವಂದೇ ಮುಹುಃ ಸಂಹೃತಕಾಲಕೂಟಂ
ವಂದೇ ಯಮಾರಿಂ ಮದನಾಂತಕಂ ತಂ ।

ಪರಶಿವನೇ, ನೀನು ಅರ್ಧಚಂದ್ರಕಲೆಯನ್ನು ಶಿರಸ್ಸಿನಲ್ಲಿ ಧರಿಸಿದವನು. ನಕ್ಷತ್ರಗಣಗಳಿಂದ ಸುತ್ತುವರಿಯಲ್ಪಟ್ಟಿರುವನು. ಮನಸ್ಸೆಂಬ ಮಾನಸಸರೋವರದಲ್ಲಿ ರಾಜಹಂಸನಂತಿರುವೆ. ಮತ್ತು ಭವಾನಿಯ ಕಿರುನಗೆಯನ್ನು ನೋಡಿ ತಾನೂ ಮಂದಹಾಸವನ್ನು ಸೂಚಿಸುವೆ. ಮುಕುಂದನೇ ಮೊದಲಾದ ದೇವತೆಗಳಿಗೆ ವಂದ್ಯನೂ, ವೇದೋಪನಿಷತ್ತುಗಳಿಂದ ಪ್ರತಿಪಾದಿತನೂ, ಯಾವಾಗಲೂ ಸಂತುಷ್ಟ ಚಿತ್ತನೂ, ತಲೆಬಾಗಿದವರ ಕಷ್ಟಗಳನ್ನು ನೀಗುವವನೂ ಆಗಿರುವೆ. ಮಹಾದೇವನೇ, ಅಂತಹ ನಿನಗೆ ನಮಸ್ಕರಿಸುತ್ತೇನೆ. ॥೨೪-೨೫॥

ಪ್ರಪಂಚದ ಉತ್ಪತ್ತಿ ನಾಶಗಳಿಗೆ ಕಾರಣನೆನಿಸಿ, ಜಗತ್ತನ್ನು ಕಾಪಾಡಲು ಮೂಲಕಾರಣನೂ, ಎಲ್ಲರಿಂದ ಸ್ತುತಿಸಲ್ಪಡತಕ್ಕವನೂ, ಲೋಕವನ್ನು ಸಂಹಾರ ಮಾಡುವ ಸಾಮರ್ಥ್ಯವುಳ್ಳವನೂ, ಶ್ರೀ ಭವಾನಿಯ ಮುಖವೆಂಬ ಕಮಲಕ್ಕೆ ಸೂರ್ಯನಂತೆ ವಿಕಾಸಕನೂ ಆದ ನಿನಗೆ ತಲೆಬಾಗುವೆವು. ಅಲ್ಲದೆ ಘೋರವಾದ

ವಂದೇ ತಮೋವಾಂತಕದುರ್ಮದಾಂಧ
ಮಹಾಂಧಕಾರಪ್ರಳಯಾನಲಂ ತಂ ॥೨೭॥

ವಂದೇ ಮುದಾ ತಂ ಗಿರಿರಾಜಕನ್ಯಾ
ಕುಚಾಂಕಕಾಶ್ಮೀರರಜಃ ಕಣಾಂಡಂ ।
ವಂದೇ ಮುಹುಃ ಫಾಲವಿಲೋಚನಂ ತಂ
ವಂದೇ ತ್ರಿಶೂಲಸ್ಫುರದಗ್ರಹಸ್ತಂ ॥೨೮॥

ವಂದೇ ಪುನಸ್ತ್ವಂ ಮೃಗಶಾಬಹಸ್ತಂ
ವಂದೇ ಶಿವಾಲಂಕೃತವಾಮಭಾಗಂ ।
ವಂದೇ ವಿಭೂತಿಸ್ಫುರದುನ್ನತಾಂಗಂ
ರುದ್ರಾಕ್ಷಮಾಲಾಕುಲಭೂಷಣಂ ತಂ ॥೨೯॥

ವಂದೇ ಚತುರ್ವರ್ಗಫಲಪ್ರದಂ ತಂ
ವಂದೇ ವೃಷಾಧೀಶ್ವರಕೇತನಂ ತಂ ।

ಕಾಲಕೂಟ ವಿಷವನ್ನು ಕುಡಿದವನೂ, ಯಮನಿಗೆ ಶತ್ರುವೂ, ಮನ್ಮಥನನ್ನು ನಾಶಮಾಡಿದವನೂ, ಅಂಧಕಾಸುರನ ದುರಹಂಕಾರವೆಂಬ ಕತ್ತಲೆಗೆ ಪ್ರಳಯಕಾಲದ ಬೆಂಕಿಯ ಸ್ವರೂಪನೂ, ಆದ ಶ್ರೀ ಮಹಾದೇವನಿಗೆ ನಮಸ್ಕಾರ. ॥೨೬-೨೭॥

ಸುಂದರವಾದ ಸ್ತನಗಳಿಗೆ ಕಸ್ತೂರಿಯನ್ನು ಲೇಪಿಸಿಕೊಂಡಿದ್ದ ಪಾರ್ವತಿಯ ಆಲಿಂಗನದಿಂದ ಪಾರ್ವತೀ ಕುಚಗಳಲ್ಲಿ ಅಂಟಿಕೊಂಡಿರುವ ಕಸ್ತೂರೀಪರಾಗಗಳೆಲ್ಲಾ, ಯಾವನ ಅವಯವಗಳಿಗೆ ಅಂಟಿಕೊಂಡಿರುವವೋ, ಅಂತಹ ಶಿವನಿಗೆ ನಮಸ್ಕಾರ. ಮತ್ತು ಹಣೆಯಲ್ಲಿ ಕಣ್ಣುಳ್ಳವನೂ, ಮುಂಗೈಯಲ್ಲಿ ತ್ರಿಶೂಲವನ್ನು ಧರಿಸಿದವನೂ, ಮೃಗ (ಜಿಂಕೆ) ವನ್ನು ಕೈಯಿಂದ ಹಿಡಿದವನೂ, ಎಡಭಾಗದಲ್ಲಿ ಪಾರ್ವತಿಯಿಂದ ಅಲಂಕೃತನಾದವನೂ, ಭಸ್ಮಲೇಪನದಿಂದ ಉನ್ನತನಾಗಿ ತೋರುವವನೂ, ರುದ್ರಾಕ್ಷ ಮಾಲೆಗಳಿಂದ ಕಂಗೊಳಿಸುತ್ತಿರುವನೂ ಆದ ಆ ಪರಮೇಶ್ವರನ ಅಡಿಗೆರಗುವೆವು. ॥೨೮-೨೯॥

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕುವಿಧವಾದ ಪುರುಷಾರ್ಥಗಳನ್ನು ಕೊಡಬಲ್ಲವನೂ, ವೃಷಭಧ್ವಜನೂ, ಮತ್ತು ತಲೆಯಲ್ಲಿ ಚಂದ್ರನನ್ನೂ

ವಂದೇ ಜಟಾಜೂಟತಟಾಭಿಘಾತ
ನಿಸ್ರಸ್ತನಕ್ಷತ್ರಗಣಾವತಂಸಂ ॥೩೦॥

॥ ವ್ಯಾಸ ಉವಾಚ ॥

ಇತಿ ಸ್ತುತ್ವಾ ಮಹಾದೇವಂ ತೇ ಸರ್ವೇ ಮುನಯಃ ಸದಾ ।
ವರಂ ದೇಹಿ ಮಹಾದೇವ ವರದೋತ್ತಮ ಶಂಕರ ॥೩೧॥

ಪ್ರಸೀದ ನಃ ಪ್ರಭೋ ಶಂಭೋ ಪ್ರಪನ್ನಾರ್ತಿಹರಾಧುನಾ ।
ದೇಹಿ ನಸ್ತರುರೂಪೇಭ್ಯೋ ಕೈಲಾಸೇ ಗಿರಿಜಾಪತೇ ॥೩೨॥

ಕೈಲಾಸೇ ಖಲು ಲಿಂಗಾನಿ ಸಂತಿ ದಿವ್ಯಾನಿ ಕೋಟಿಶಃ ।
ತತ್ಪೂಜನೋಪಯುಕ್ತಾಸ್ಸ್ಮಃ ಸ್ವತಃ ಸಪ್ರಸವೈಃ ಸದಾ ॥೩೩॥

ನಾರಾಧಿತಾನಿ ಲಿಂಗಾನಿ ಪ್ರಸವೈರನುವಾಸರಂ ।
ಅತೋಗತಂ ವೃಥಾ ಜನ್ಮ ತಪಸಾ ಕೇವಲೇನ ನಃ ॥೩೪॥

ಅಗ್ರಭಾಗದಲ್ಲಿ ನಕ್ಷತ್ರಗಣಗಳನ್ನು ಧರಿಸಿದವನೂ, ಆದ ಶ್ರೀಕಂಠೇಶನನ್ನು ನಮಸ್ಕರಿಸುತ್ತೇನೆ” ಎಂದು ಋಷಿಗಳು ಸ್ತುತಿಸಿದರು. ॥೩೦॥

ಹೀಗೆ ಋಷಿಗಳೆಲ್ಲರೂ ಆ ಮಹಾದೇವನನ್ನು ಸ್ತೋತ್ರಮಾಡಿ ದೇವದೇವನೇ, ಶಂಕರನೇ, ಪ್ರಸನ್ನನಾಗು. ತಲೆಬಾಗಿದವರ ಕಷ್ಟಗಳನ್ನು ಹರಣಮಾಡುವ ಹರನೇ, ಪ್ರಸನ್ನನಾಗು. ಕೈಲಾಸದಲ್ಲಿ ವೃಕ್ಷಸ್ವರೂಪದಿಂದಿರುವುದಕ್ಕೆ ನಮಗೆ ಅನುಜ್ಞೆಕೊಡು. ನೀನು ವರದನಾಗಿರುವೆ. ॥೩೧-೩೨॥

ಕೈಲಾಸದಲ್ಲಿ ಒಂದು ಕೋಟಿ ದಿವ್ಯಲಿಂಗಗಳಿವೆ. ನಾವು ವೃಕ್ಷರೂಪಿಗಳಾಗಿ ನಮ್ಮ ಹೂ ಮೊದಲಾದವುಗಳಿಂದ ಆ ಲಿಂಗಪೂಜೆಗೆ ನೆರವಾಗುತ್ತೇವೆ. ನಾವು ಪ್ರತಿದಿನವೂ ನಮ್ಮ ಪುಷ್ಪಗಳಿಂದ ಲಿಂಗಗಳನ್ನು ಪೂಜಿಸಲಿಲ್ಲ. ಸುಮ್ಮನೆ ತಪಸ್ಸಿನಿಂದಲೇ ನಮ್ಮ ಜನ್ಮ ಕಳೆದುಹೋಯಿತು. ನಮ್ಮ ಜನ್ಮ ವ್ಯರ್ಥವೂ ಆಯಿತು. ॥೩೩-೩೪॥

ಕಿಂ ಕೇವಲೇನ ತಪಸಾ ದೇಹಶೋಷಕರೇಣ ವಾ ।
ವ್ಯರ್ಥಂ ಗತಮಿದಂ ಜನ್ಮ ನ ಕೃತಂ ಲಿಂಗಪೂಜನಂ ॥೩೫॥

ಸ ಜೀವನ್ ಮೃತ ಏವೇತಿ ನಿಶ್ಚಿತೋ ನಿಗಮೈರಪಿ ।
ಯೇನ ನಾರಾಧಿತಂ ಲಿಂಗಂ ಶಾಂಗಮಂಗಳಸಾಧನಂ ॥೩೬॥

ಬಿಲ್ವಪತ್ರೈಃ ಪ್ರಸೂನೈರ್ವಾ ಫಲೈರ್ವಾ ವಿಮಲೈರ್ಜಲೈಃ ।
ಶಿವಾರ್ಚನಂ ಚೇನ್ನ ಕೃತಂ ತಜ್ಜನ್ಮ ವಿಫಲಂ ಖಲು ॥೩೭॥

ಲಿಂಗೇ ಪ್ರಸೂನಮೇಕಂ ವಾ ನವಂ ಬಿಲ್ವದಳಂ ಮುದಾ ।
ಯೇನ ದತ್ತಂ ಸಭಾಗ್ಯಾನಾಂ ವಿಲಯಂ ಸ್ಯಾದಸಂಶಯಂ ॥೩೮॥

ಅನುಗ್ರಹಃ ಪರಂ ಶಂಭೋಃ ಕೃತೋಽಸ್ಮಾಸು ತ್ವಯಾಧುನಾ ।
ಅನೇನಾನುಗ್ರಹೇಣಾಪಿ ತತ್ರಾಸ್ತು ತರುರೂಪತಾ ॥೩೯॥

ಶಿವಪೂಜೋಪಯುಕ್ತಾನಾಂ ತರೂಣಾಂ ಮರಣೇ ಸತಿ ।
ಅಪವರ್ಗರಮಾವಾಪ್ತಿರ್ಭವತೀತಿ ಶ್ರುತಿಶ್ರುತಾ ॥೪೦॥

ಸುಮ್ಮನೆ ಶರೀರವನ್ನು ಒಣಗಿಸತಕ್ಕ ಈ ತಪಸ್ಸಿನಿಂದೇನು ಫಲ? ನಾವು ಲಿಂಗಪೂಜೆಯನ್ನು ಮಾಡಲಿಲ್ಲ. ನಮ್ಮ ಜನ್ಮ ವ್ಯರ್ಥವಾಯಿತು. ಮಂಗಳ ಸಾಧನವಾದ ಲಿಂಗಪೂಜೆಯನ್ನು ಮಾಡದಿರುವಾತನು ಬದುಕಿದರೂ ಮೃತನೆಂದು ಹೇಳಬೇಕು. ಈ ಅರ್ಥವು ವೇದಗಳಿಂದ ನಿರ್ಣಯಿಸಲ್ಪಟ್ಟಿರುವುದು. ॥೩೫-೩೬॥

ಬಿಲ್ವಪತ್ರೆ, ಹೂ, ಹಣ್ಣು, ಶುದ್ಧೋದಕ ಇವುಗಳಲ್ಲಿ ಯಾವುದಾದರೊಂದ ನ್ನಾದರೂ ಅರ್ಪಿಸಿ ಶಿವಲಿಂಗಪೂಜೆಮಾಡದವನ ಜನ್ಮ ವ್ಯರ್ಥ. ಲಿಂಗದ ಮೇಲೆ ಕೊನೆಗೆ ಒಂದು ಹೂವು, ಅಥವಾ ಹೊಸ ಬಿಲ್ವದಳ ಇವನ್ನಾದರೂ ಇರಿಸಿ ಪೂಜಿ ಸದವನು ಜಾಗ್ರತೆ ನಾಶಹೊಂದುವನು. ಇದರಲ್ಲಿ ಸಂದೇಹವಿಲ್ಲ. ॥೩೭-೩೮॥

ನಿಮ್ಮಿಂದ ಈಶ್ವರನು ಸುಪ್ರೀತನಾದನು. ಈ ಈಶ್ವರನ ಅನುಗ್ರಹದಿಂದ ಆ ಕೈಲಾಸಪರ್ವತದಲ್ಲಿ ನಮಗೆ ವೃಕ್ಷರೂಪವು ಉಂಟಾಗಲಿ. ಶಿವಪೂಜೆಗೆ ಉಪ ಯುಕ್ತಗಳಾದ ವೃಕ್ಷಗಳು ಮೃತಿಹೊಂದಿದರೆ ಅವುಗಳಿಗೆ ಶಿವಸಾಯುಜ್ಯವು ಲಭಿಸು ವುದೆಂದು ವೇದದಲ್ಲಿ ಹೇಳಿದೆ. ॥೩೯-೪೦॥

ಅತೋಽಸ್ಮಾಕಂ ವರಾನೇತಾನ್ ಈಪ್ಸಿತಾನ್ ದೇಹಿ ಶಂಕರ ।
ತದಾ ತರುತ್ವಮಸ್ಮಭ್ಯಮಪೂರ್ವಂ ತತ್ರ ದೀಯತಾಂ ॥೪೧॥

ವಿಲಕ್ಷಣಂ ತರುತ್ವೇನ ಸ್ಥಿತಿರಸ್ಮಾಕಮೀಪ್ಸಿತಾ ।
ಕೃಪಾ ವಿಧೇಯಾ ಯದಿ ತೇ ದೀನೇಷು ಕರುಣಾನಿಧೇ ॥೪೨॥

ಇತಿ ತದ್ವಚನಂ ಶ್ರುತ್ವಾ ತಥಾಸ್ತ್ವಿತಿ ಮಹೇಶ್ವರಃ ।
ತತ್ರೈವಾಂತರ್ದಧೇ ವಿಪ್ರಾಸ್ತತ್ಪ್ರೀತಿಮಭಿವರ್ಧಯನ್ ॥೪೩॥

॥ ಋಷಯ ಊಚುಃ ॥

ತಪೋದಾನಂ ಚ ಪೂಜಾ ಚ ಯಾಗಾಶ್ಚ ನಿಯಮಾ ಅಪಿ ।
ಶಿವಪ್ರಸಾದಪರ್ಯಂತಂ ತತ್ಪ್ರಸಾದಃ ಫಲಂ ಯತಃ ॥೪೪॥

ಪ್ರಸನ್ನೇ ಸತಿ ಗೌರೀಶೇ ಪುನರನ್ಯತ್ಫಲಂ ನ ತು
ಫಲಾನಾಂ ಫಲಮುತ್ಕೃಷ್ಟಂ ಪ್ರಸಾದಃ ಶಾಂಕರೋ ಯತಃ ॥೪೫॥

ಎಲೈ ಶಂಕರನೇ, ಆದುದರಿಂದ ನಮಗೆ ಇಷ್ಟವಾದ ಈ ವರವನ್ನು ಕೊಡು. ಈ ಅಪೂರ್ವವಾದ ವೃಕ್ಷಜನ್ಮವನ್ನು ಕೊಡು. ನಾವು ಎಲ್ಲಕ್ಕಿಂತಲೂ ವಿಲಕ್ಷಣರಾಗಿ ಹುಟ್ಟಬೇಕೆಂದು ಇಚ್ಛೆ ನಮಗಿದೆ. ನಮ್ಮಲ್ಲಿ ದಯೆ ತೋರು. ದೀನಜನರಲ್ಲಿ ದಯೆ ಇದ್ದರೆ ನಾವು ಕೇಳಿಕೊಂಡುದನ್ನು ನಡೆಯಿಸಿ ಕೊಡು." ॥೪೧-೪೨॥

ಹೀಗೆ ಕೇಳಿದ ಆ ಋಷಿಗಳ ಮಾತನ್ನು ಆಲೈಸಿ ಈಶ್ವರನು ಹಾಗೆಯೇ ಆಗಲೆಂದು ಹೇಳಿ ಅಲ್ಲಿಯೇ ಮಾಯವಾದನು. ಇದರಿಂದ ಅವರಲ್ಲಿ ಪ್ರೀತಿಯು ಹೆಚ್ಚಿತು. ॥೪೩॥

ತಪಸ್ಸು, ದಾನ, ಪೂಜೆ, ಯಜ್ಞ, ನಿಯಮ ಇವುಗಳೆಲ್ಲಾ ಈಶ್ವರನು ಅನುಗ್ರಹಿಸುವ ವರೆಗೆ. ಆತನ ಪ್ರಸಾದ ಲಭಿಸಿದ ನಂತರ ಇವುಗಳ ಅನುಷ್ಠಾನ ಅವಶ್ಯಕವಿಲ್ಲ. ॥೪೪॥

ಶ್ರೀ ಉಮೇಶನು ಪ್ರಸನ್ನನಾಗುವುದಕ್ಕಿಂತ ಬೇರೆ ಫಲವು ಲೋಕದಲ್ಲಿ ಯಾವುದೂ ಇಲ್ಲ. ಎಲ್ಲಾ ಫಲಗಳಿಗಿಂತಲೂ ಶಂಕರನ ಅನುಗ್ರಹವು ಶ್ರೇಷ್ಠವಾದ ಫಲವಾಗಿದೆ. ॥೪೫॥

|| ವ್ಯಾಸ ಉವಾಚ ||

ನ ಜ್ಞಾಯತೇ ಪ್ರಭಾವೋಽಯಂ ಮಹಾದೇವಸ್ಯ ಶೂಲಿನಃ ।
ವೇದಾಂತೈರಪ್ಯತಸ್ತಸ್ಯ ಮಹಿಮಾ ಕೇನ ವರ್ಣ್ಯತೇ ||೪೬||

ನೀತಂ ಜನ್ಮ ಮುದಾ ಯೇನ ಮಹೇಶಪರಿಚರ್ಯಯಾ ।
ಸ ಏವ ಧನ್ಯಃ ಪುಣ್ಯಾತ್ಮಾ ಸ ದೇವೈರಪಿ ಪೂಜ್ಯತೇ ||೪೭||

ಯೇನಾರ್ಚನಂ ಮಹೇಶಸ್ಯ ಶಿವಲಿಂಗೇ ಪ್ರಯತ್ನತಃ ।
ನ ಕೃತಂ ತಾದೃಶಂ ಜನ್ಮ ನ ವರಂ ಸತ್ಯಮುಚ್ಯತೇ ||೪೮||

ಪತ್ರೈಃ ಫಲೈಃ ಪ್ರಸೂನೈರ್ವಾ ನೀರೈರ್ದೂರ್ವಾಂಕುರೈರಪಿ ।
ಸಂಪೂಜ್ಯ ಶ್ರೀಮಹಾದೇವಂ ದೇವಪೂಜ್ಯಃ ಪ್ರಜಾಯತೇ ||೪೯||

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಶ್ರವಣೇನಾಪಿ ಭಕ್ತಿಃ ಸ್ಯಾದಿತಿಹಾಸಸ್ಯ ಕೇವಲಂ ||೫೦||

ಪುರಾ ಶ್ರೀಗಿರಿದೇಶೇಷು ಕಶ್ಚಿದಾಸೀನ್ನರಾಧಮಃ ।
ಸ ದರಿದ್ರೋಽತಿಕೃಪಣೋ ಕುಷ್ಠವ್ರಣಸಮಾಶ್ರಿತಃ ||೫೧||

ವೇದಾಂತಗಳಿಂದಲೂ ಸಂಪೂಜ್ಯನಾದ ಮಹಾದೇವನ ಪ್ರಭಾವವನ್ನು ತಿಳಿಯಲು ಸಾಧ್ಯವಿಲ್ಲದಾಗಿದೆ. ಅಂದಮೇಲೆ ಅವನ ಮಹಿಮೆಯನ್ನು ವರ್ಣಿಸಲು ಯಾರಿಗೆತಾನೇ ಸಾಧ್ಯ? ಈಶ್ವರನ ಸೇವೆಯಿಂದ ತನ್ನ ಜನ್ಮವನ್ನು ಕಳೆದವನೇ ಧನ್ಯನು. ಪುಣ್ಯಶಾಲಿಯೂ ಆತನೇ. ಆತನನ್ನು ದೇವತೆಗಳೂ ಗೌರವಿಸುತ್ತಾರೆ. ||೪೬-೪೭||

ಈಶ್ವರನ ಶಿವಲಿಂಗಾರ್ಚನೆಯನ್ನು ಮಾಡದವನ ಜನ್ಮ ವ್ಯರ್ಥವು. ಶ್ರೇಷ್ಠವಲ್ಲವೆಂದು ನಿಜವಾಗಿ ಹೇಳಿದೆ. ಪತ್ರೆ, ಹೂ, ಎಳೆಚಿಗುರು, ಅಭಿಷೇಕ, ದೂರ್ವಾಂಕುರ ಇವುಗಳಿಂದ ಮಹಾದೇವನನ್ನು ಪೂಜೆಮಾಡಿದವನು ನಿಜವಾಗಿಯೂ ದೇವತೆಗಳಿಂದ ಪೂಜಿಸಲ್ಪಡುತ್ತಾನೆ. ||೪೮-೪೯||

ಶಿವನ ಪುರಾಣ ಮತ್ತು ಇತಿಹಾಸಗಳನ್ನು ಕೇಳುವುದರಿಂದ ಭಕ್ತಿಯುಂಟಾಗಿ ಎಂತಹ ಫಲ ಸಿಕ್ಕುತ್ತದೆ ಎಂಬ ವಿಷಯದಲ್ಲಿ ಒಂದು ಇತಿಹಾಸವನ್ನು ಉದಾಹರಿಸುವೆನು. ಕೇಳಿರಿ, "ಹಿಂದೆ ಗಿರಿದೇಶದಲ್ಲಿ ಒಬ್ಬ ಕೀಳುಜಾತಿಯ

ಸ್ಥಿತ್ವಾ ಬ್ರಾಹ್ಮಣವೇಷೇಣ ಪರಹಿಂಸಾಪರಃ ಸದಾ ।
ತತಃ ಸ ಭಿಲ್ಲವೇಷೇಣ ಮೃಗಯಾನಿರತಃ ಸದಾ ॥೫೨॥

ಅರಣ್ಯಪಕ್ಷಿಜಾತಾನಾಂ ಮೃಗಾಣಾಂ ಚ ವಿಶೇಷತಃ ।
ಮಾರಣಾಯ ಪ್ರವೃತ್ತೋಽಪಿ ಸ ತದ್ಧಿಂಸಾಂ ಕರೋತಿ ಸಃ ॥೫೩॥

ಅಶಕ್ತಸ್ಯ ಕಥಂ ತಸ್ಯ ಹಿಂಸಾನೇನ ಭವಿಷ್ಯತಿ ।
ತಸ್ಮಾದಾಸಾಯಮಾಸೀನೋ ವಿಪಿನೇ ದುರ್ದಶಾಶ್ರಯಃ ॥೫೪॥

ಸ್ವತೋ ಮೃತೋಽಭವೇತ್ಪಕ್ಷೀ ಯದಿ ಕಶ್ಚಿತ್ತಥಾಸನಂ ।
ಆದಾಯ ಯಾತಿ ಸದನಂ ತೇನ ತಸ್ಯಾತಿಜೀವನಂ ॥೫೫॥

ಕಲತ್ರಸ್ಯ ಸುತಾನಾಂ ಚ ಕಲ್ಪಿತಂ ತೇನ ಜೀವನಂ ।
ಕ್ಷುಧಾತುರಾ ಸದಾ ಸರ್ವೇ ತತೋಽಪ್ಯಸ್ಯಾಸ್ತೇ ಕ್ಷುಧಾತುರಾಃ ॥೫೬॥

ಬೃಹತೀಫಲಜಾಲಾನಿ ಸಮಾದಾಯ ಕದಾಚನ ।
ಸ ಭಕ್ಷಣಾರ್ಥಮುದ್ಯುಕ್ತಃ ಪಾಕಂ ಕೃತ್ವಾ ಕ್ಷುಧಾತುರಃ ॥೫೭॥

ಮನುಷ್ಯನಿದ್ದನು. ಅವನು ಅತಿ ಬಡವನು. ಅಲ್ಲದೆ ಅವನಿಗೆ ಕುಷ್ಠರೋಗವು ಬೇರೆ ಇತ್ತು. ॥೫೦-೫೧॥

ಅವನು ಬ್ರಾಹ್ಮಣರ ವೇಷ ಹಾಕಿಕೊಂಡು ಇನ್ನೊಬ್ಬರನ್ನು ವಂಚಿಸುತ್ತಿದ್ದನು. ಬೇಡರ ವೇಷದಿಂದ ಅರಣ್ಯದಲ್ಲಿ ಬೇಟೆಯಾಡುತ್ತಿದ್ದನು. ಕಾಡಿನಲ್ಲಿರುವ ಮೃಗ, ಹಕ್ಕಿ ಇವುಗಳನ್ನು ಕೊಲ್ಲುವುದಕ್ಕಾಗಿ ಪ್ರವರ್ತಿಸಿದರೂ ಅವುಗಳಿಗೆ ಹಿಂಸೆ ಮಾಡುತ್ತಿರಲಿಲ್ಲ. ॥೫೨-೫೩॥

ಏಕೆಂದರೆ ಆತನು ಬಲಹೀನನಾದುದರಿಂದ ಪಕ್ಷಿಗಳನ್ನು ಹಿಡಿಯಲು ಆಗುತ್ತಿರಲಿಲ್ಲ. ಆದುದರಿಂದ ಅವನು ಸಾಯಂಕಾಲದ ವರೆಗೆ ಆ ಕಾಡಿನಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತಿದ್ದನು. ತಾವಾಗಿಯೇ ಮೃಗಪಕ್ಷಿಗಳು ಸಿಕ್ಕಿದರೆ ಅವನ್ನು ತೆಗೆದುಕೊಂಡು ಮನೆಗೆ ಹೋಗುತ್ತಿದ್ದನು. ಅದೇ ಆತನಿಗೆ ಜೀವನವಾಗಿತ್ತು. ॥೫೪-೫೫॥

ಆದರಿಂದಲೇ ಹೆಂಡತಿಮಕ್ಕಳನ್ನು ಸಾಕಿ ಹೊಟ್ಟೆ ಹೊರೆಯುತ್ತಿದ್ದನು. ಆತನ ಹೆಂಡತಿ ಮಕ್ಕಳು ಹಸಿವಿನಿಂದ ಪೀಡಿತರಾಗಿ ಕಷ್ಟಪಡುತ್ತಿದ್ದರು. ಆತನು

ತದಾನೀಂ ಬೃಹತೀಪುಷ್ಪಮೇಕಮಾದಾಯ ತತ್ಸುತಃ ।
ಬಾಲಕಃ ಪ್ರಕ್ಷಿಪದ್ಭೂಮೌ ತಲ್ಲಿಂಗೇ ಪತಿತಂ ತತಃ ॥೫೮॥

ತತಃ ಸ ದೈವಾತ್ ಕ್ಷುಥಯಾ ತತ್ರ ಪಂಚತ್ವಮಾಗತಃ ।
ತದಾನೀಮಾಗತಾಃ ಕ್ರೂರಾಃ ಕೋಟಿಶೋ ಯಮಕಿಂಕರಾಃ ॥೫೯॥

ತತೋ ನೀತೋ ಯಮಭಟೈಃ ಪಾತಿತೋಽಪಿ ಯಮಾಂತಿಕೇ ।
ತತೋ ದೂರಾದ್ವಿಲೋಕ್ಯಾಪಿ ತಂ ಕಾಲಂ ಕಂಪಮಾಗತಃ ॥೬೦॥

ತದಾ ಪ್ರಾಹಶ್ಚಿತ್ರಗುಪ್ತಂ ಪ್ರಾಹ ಕಂಪಸಮನ್ವಿತಃ ।
ಅಹೋ ಕಿಮಿದಮಾಶ್ಚರ್ಯಂ ಪಶ್ಯ ಪಶ್ಯೇತಿ ಸತ್ವರಂ ॥೬೧॥

ಅದ್ಯಾದ್ಭುತಮಿದಂ ದೃಷ್ಟಂ ದುಶ್ಚಿಹ್ನಮಪಿ ಜಾಯತೇ ।
ಭಯಂ ಚ ಹೃದಯಾರೂಢಂ ಕಿಂ ಕರ್ತವ್ಯಮತಃ ಪರಂ ॥೬೨॥

ಒಂದು ಸಲ ಹಸಿದವನಾಗಿ ಬೃಹತೀಹಣ್ಣುಗಳನ್ನು (ಮುಳ್ಳು ಹಣ್ಣುಗಳನ್ನು) ಕೊಯ್ದುಕೊಂಡು ಅದನ್ನು ಬೇಯಿಸಿ ತಿನ್ನಲು ಪ್ರಾರಂಭಮಾಡಿದನು. ||೫೬-೫೭||

ಆಗ ಆತನ ಮಗನು ಒಂದು ಬೃಹತೀಹೂವನ್ನು ಭೂಮಿಯಲ್ಲಿ ಹಾಕಿದನು. ಅದು ದೈವವಶಾತ್ ಶಿವಲಿಂಗದ ಮೇಲೆ ಬಿದ್ದಿತು. ಅನಂತರ ಆ ಹುಡುಗನು ಹಸಿವೆಯಿಂದ ಅಕಸ್ಮಾತ್ ಪ್ರಾಣಬಿಟ್ಟನು. ಬಳಿಕ ಕ್ರೂರರಾದ ಯಮದೂತರು ಆತನನ್ನು ಯಮನಲ್ಲಿಗೆ ಎಳೆದುಕೊಂಡು ಹೋಗಿ, ಯಮನ ಹತ್ತಿರ ಕೆಡವಿದರು. ಯಮನು ಆ ಮಗುವನ್ನು ದೂರದಿಂದಲೇ ನೋಡಿ "ಗಡಗಡ" ನಡಗುವುದಕ್ಕೆ ಪ್ರಾರಂಭಿಸಿದನು. ||೫೮-೫೯-೬೦||

ಆಗ ಚಿತ್ರಗುಪ್ತನನ್ನು ಕುರಿತು ಯಮನು ಹೀಗೆ ಹೇಳಿದನು. ಎಲೈ ಚಿತ್ರಗುಪ್ತನೇ ನೋಡು, ಇದು ಎಂತಹ ಅದ್ಭುತ ಪ್ರಸಂಗ. ಅಪಶಕುನಗಳು ಕಾಣುತ್ತವೆ. ಮನಸ್ಸಿಗೆ ಭಯವಾಗುತ್ತಿದೆ. ಈಗ ಏನು ಮಾಡಬೇಕೋ ತಿಳಿಯುವು ದಿಲ್ಲ. ||೬೧-೬೨||

ತ್ರಿಶೂಲಪಾಣೇರೇತಸ್ಯ ದರ್ಶನೇನ ಭಯಂ ಭವೇತ್ ।
ಕಂಪೋಽಪಿ ಭವತಿ ಸ್ಪಷ್ಟಂ ತಥಾ ಶಿವಗಣಾದಪಿ ॥೬೩॥

ಅಧುನಾ ತಾದೃಶಂ ಕಿಂಚಿತ್ ಅದೃಷ್ಟಮಿಹ ಸರ್ವಥಾ ।
ಏವಂ ಸತ್ಯಪಿ ಕಂಪೋಽಯಂ ಕುತೋ ಮೇ ವಾ ಪ್ರಜಾಯತೇ॥೬೪॥

ಅಧೈರ್ಯಂ ಚ ಸಮುತ್ಪನ್ನಂ ಕೋಽಯಮಾನೀಯ ಪಾತಿತಃ ।
ದೂತೈರಜ್ಞೈರ್ಮದೀಯೈಸ್ತೈರಧುನಾ ತದ್ವಿಚಾರ್ಯತಾಂ ॥೬೫॥

ಪ್ರಾಯಶಃ ಸೋಽಯಮುತ್ಕೃಷ್ಟೋಽಪ್ಯಾನೀತಸ್ತೈರ್ದುರಾತ್ಮಭಿಃ ।
ಅತಃ ಪರಂ ಮಯಾ ತೇಷಾಂ ಶಿಕ್ಷಾ ಕಾರ್ಯಾ ಪ್ರಯತ್ನತಃ ॥೬೬॥

ಇತಿ ತದ್ವಚನಂ ಶ್ರುತ್ವಾ ಚಿತ್ರಗುಪ್ತೋಽಪಿ ವಿಸ್ಮಿತಃ ।
ಯಮಮಾಹಾತಿಧೀರಂ ತಂ ದೂತಾನ್ ವೀಕ್ಷ್ಯಾಮಿತಂ ತತಃ ॥೬೭॥

ತ್ರಿಶೂಲಧಾರಿಯಾದ ಈಶನ ದರ್ಶನದಿಂದ ನನಗೆ ಭಯವಾಗುತ್ತಿದೆ. ಮೈನಡುಕವು ಸ್ಪಷ್ಟವಾಗಿ ತೋರುತ್ತಿದೆ. ಶಿವಗಣಗಳಿಂದಲೂ ಭಯವಾಗುತ್ತಿದೆ. ಈಗ ಈ ಲೋಕದಲ್ಲಿ ಖಂಡಿತ ಯಾವ ವಿಧವಾದ ತೊಂದರೆಯೂ ನನಗೆ ಆಗಿಲ್ಲ. ಆದರೂ ಈಗ ಈ ನಡುಕವು ಏತಕ್ಕೋಸ್ಕರ ಹುಟ್ಟಿದೆಯೋ ? ||೬೩-೬೪||

ಅಧೈರ್ಯವೂ ಹುಟ್ಟಿದೆ. ಯಾರನ್ನು ತಂದು ನರಕದಲ್ಲಿ ಹಾಕಿಸಿದೆನೋ, ತಿಳುವಳಿಕೆ ಇಲ್ಲದ ನನ್ನ ದೂತರು ಏನು ಮಾಡಿದರು ಎಂದು ಈಗ ವಿಚಾರಿಸು. ಸಾಮಾನ್ಯವಾಗಿ ಆ ದರಿದ್ರನ ಮಗನು, ಪುಣ್ಯಶಾಲಿಯಾಗಿದ್ದರೂ ದುಷ್ಟರಾದ ನನ್ನ ದೂತರು ತಿಳಿಯದೇ ನರಕದಲ್ಲಿ ಹಾಕಿರಬಹುದು. ಆದುದರಿಂದ ಅವರಿಗೆ ದಂಡನೆಯನ್ನು ವಿಧಿಸುತ್ತೇನೆ.” ||೬೫-೬೬||

ಹೀಗೆಂದ ಯಮನ ಮಾತನ್ನು ಕೇಳಿ ಚಿತ್ರಗುಪ್ತನು ಆಶ್ಚರ್ಯಪಟ್ಟು ಯಮನೊಡನೆ ಈರೀತಿ ಹೇಳಿದನು. ಮತ್ತು ಆ ಯಮದೂತರನ್ನು ಕುರಿತು ಹೀಗೆ ಮಾತನಾಡಿದನು. ||೬೭||

|| ಚಿತ್ರಗುಪ್ತ ಉವಾಚ ||

ಅಹೋ ಕಿಮಿದಮಾರಬ್ಧಂ ಮಹಾದೇವೇನ ತನ್ಮನಃ ।
ಕಥಂಭಾವಿ ಕದಾ ಕಿಂ ವಾ ಕರೋತೀತಿ ನ ವಿದ್ಮಹೇ ||೬೮||

ಮಹೇಶ್ವರಃ ಸ್ವತಂತ್ರೋಽಸೌ ಕರುಣಾರಸಸಾಗರಃ ।
ವಿಭವಾಸ್ತಸ್ಯ ಬಹವಸ್ತೇಷಾಂ ಸಂಖ್ಯಾ ನ ವಿದ್ಯತೇ ||೬೯||

ತಸ್ಯಾಧಮಾಧಮೋಽಪ್ಯಸ್ತಿ ಕೃಪಾ ಯದಿ ತದಾ ಪರಂ ।
ಸ ಸರ್ವಭಾಗ್ಯಸಂಪನ್ನಃ ಕೈಲಾಸಮಪಿ ಯಾಸ್ಯತಿ ||೭೦||

ಅನೇನ ಯತ್ಕೃತಂ ಪುಣ್ಯಂ ಮತ್ತಸ್ತಚ್ಛೃಣು ಸಾದರಂ ।
ಶ್ರುತ್ವಾಪಿ ಯಸ್ಯ ಮಾಹಾತ್ಮ್ಯಂ ಮುಕ್ತೋ ಭವತಿ ಮಾನವಃ ||೭೧||

ಏತಸ್ಯ ತು ಪಿತಾ ದುಷ್ಟೋ ನಷ್ಟೋ ಧರ್ಮವಿವರ್ಜಿತಃ ।
ನಾನಾಪಾತಕಸಂಕ್ರಾಂತೋ ದರಿದ್ರೋ ವ್ಯಾಧಿಪೀಡಿತಃ ||೭೨||

ಭ್ರಾತರೋಽಪ್ಯಸ್ಯ ದುಷ್ಟಾಸ್ತೇ ಮಾತಾ ದುಷ್ಟಾ ಸ್ವಭಾವತಃ ।
ಕುಲಂ ಚ ದುಷ್ಟಮೇತಸ್ಯ ದರಿದ್ರಜನಸಂಕುಲಂ ||೭೩||

ಆಹಾ, ಇದೇನು ಆರಂಭವಾಯಿತು? ಮಹಾದೇವನ ಮನಸ್ಸು ಹೇಗಿದೆಯೋ? ಯಾವ ಕಾಲದಲ್ಲಿ ಏನು ಮಾಡುವನೋ ತಿಳಿಯದಲ್ಲಾ. ಶಿವನು ಸ್ವತಂತ್ರನು. ಆತನು ಕರುಣಾಳುವು. ಅವನ ಮಹಾತ್ಮೆಗಳು ಅನೇಕವಿವೆ. ಅವುಗಳ ಸಂಖ್ಯೆಯೇ ತಿಳಿಯಲಾಗುವುದಿಲ್ಲ. ||೬೮-೬೯||

ಅತ್ಯಂತ ಕೀಳುಜಾತಿಯವನಾದರೂ ಅಡ್ಡಿಯಿಲ್ಲ. ಆತನಿಗೆ ಈಶ್ವರ ಕೃಪೆಯು ಇರುವುದಾದರೆ ಅವನು ಸಮಸ್ತ ಭಾಗ್ಯವನ್ನೂ ಹೊಂದಿ, ಕೈಲಾಸವನ್ನು ಹೊಂದುವನು. ಈ ಬಾಲಕನು ಏನು ಪುಣ್ಯ ಮಾಡಿರುವನೆಂಬುದನ್ನು ಹೇಳುವೆನು ಕೇಳು. ಅವನ ಮಹಿಮೆಯನ್ನು ಕೇಳಿದ ಮನುಷ್ಯನು ಮುಕ್ತನಾಗಬಲ್ಲನು. ||೭೦-೭೧||

ಈ ಬಾಲಕನ ತಂದೆಯು ಬಹಳ ದುಷ್ಟನು, ಧರ್ಮಭ್ರಷ್ಟನು. ಅನೇಕ ಪಾಪಗಳನ್ನು ಮಾಡಿನವನು, ಬಡವನು ಮತ್ತು ಅನೇಕ ರೋಗಗಳಿಂದ ನರಳುವವನು. ಅಣ್ಣತಮ್ಮಂದಿರೂ ಕೆಟ್ಟವರು. ತಾಯಿಯು ಸ್ವಭಾವದಿಂದಲೇ ದುಷ್ಟಳು.

ಏತತ್ಕುಲಸಮುತ್ಪನ್ನೈರನ್ನಮನ್ನಮತಿವ್ಯಥಾ ।
ಕೃತ್ವೈವ ಸ್ಥೀಯತೇ ನಾನ್ನಂ ಲಭ್ಯತೇ ಕೇನ ಕೈರಪಿ ॥೭೪॥

ಮರಣಾವಸರೇ ಪ್ರಾಪ್ತೇ ಬೃಹತೀಕುಸುಮಂ ಪರಂ ।
ವಿಚ್ಛಿನ್ನಂ ಮಲಿನಂ ಕ್ಷಿಪ್ತಂ ತಲ್ಲಿಂಗೇ ಪತಿತಂ ಯಮ ॥೭೫॥

ತಾವತಾ ಗಿರಿಜಾಕಾಂತಃ ಸಂತುಷ್ಟಃ ಕಷ್ಟನಾಶಕಃ ।
ಸ್ವದೂತಾನಾಹ ತಂ ಶೀಘ್ರಮಾನಯಂತ್ವಿತಿ ಪುಷ್ಪಕೇ ॥೭೬॥

ಅತಃ ಪರಂ ಸಮಾಗತ್ಯ ಕಿಂ ಕರಿಷ್ಯಂತಿ ತೇ ಗಣಾಃ ।
ತನ್ನಜಾನೇ ಯಮಾತೋಽಯಮಕಾಂಡಪ್ರಳಯಃ ಖಲು ॥೭೭॥

ಅತಃಪರಂ ಸಮಾಗತ್ಯ ಪಾಶೈರ್ಬಧ್ವಾ ದೃಢಂ ಯಮ ।
ಭವಂತಮಪಿ ನೇಷ್ಯಂತಿ ಮಮಾಪ್ಯತ್ರ ನ ಸಂಶಯಃ ॥೭೮॥

ಈತನ ವಂಶವೂ ಕೆಟ್ಟಿದೆ. ಈ ಕುಲವು ಕೇವಲ ಬಡಜನರಿಂದ ಅಭಿವೃದ್ಧವಾಗಿದೆ. ಈ ಕುಲದಲ್ಲಿ ಹುಟ್ಟಿದವರಿಗೆ ಅನ್ನ, ಅನ್ನ ಎಂದು ಅನ್ನವಿಲ್ಲದೇ ವ್ಯಥೆ ಪಡುವುದು ಸ್ವತಃ ಸಿದ್ಧವಾಗಿದೆ. ಆದರೂ ಅನ್ನವು ಇವರಿಗೆ ದೊರಕುವುದಿಲ್ಲ. ||೭೨-೭೪||

ಸಾಯುವ ಕಾಲ ಸಮೀಪಿಸಿದಾಗ ಈ ಹುಡುಗನು ಹರಿದು ಕೊಳಕಾದ ಬೃಹತೀಹೂವನ್ನು ಭೂಮಿಯಲ್ಲಿರುವ ಶಿವಲಿಂಗದ ಮೇಲೆ ಕೆಡವಿದನು. ಅಷ್ಟರಿಂದಲೇ ಸಂತುಷ್ಟನಾದ ಗೌರೀಶ್ವರನು ತನ್ನ ದೂತರನ್ನು ಕರೆದು ನೀವು ಬೇಗ ಪುಷ್ಪಕವಿಮಾನವನ್ನು ತೆಗೆದುಕೊಂಡು ಹೋಗಿ ಆ ಕುಮಾರನನ್ನು ಕರೆದುಕೊಂಡು ಬನ್ನಿ ಎಂದನು. ||೭೫-೭೬||

ಆದರೆ ಆ ಈಶ್ವರನ ಗಣಗಳು ಬಂದು ಈಗ ಏನು ಮಾಡುವರೋ ಕಾಣೆ. ಏಕೆಂದರೆ ಇದು ಅಕಾಲದಲ್ಲಿಯ ಪ್ರಳಯವೇ ಸರಿ. ಇನ್ನು ಮುಂದೆ ಶಿವದೂತರು ಬಂದು ನಿನ್ನನ್ನು ಹಗ್ಗಗಳಿಂದ ಕಟ್ಟಿ ಎಳೆದೊಯ್ಯುವರು. ಹಾಗೂ ನನ್ನನ್ನೂ ಎಳೆದುಕೊಂಡು ಹೋಗುವರು. ||೭೭-೭೮||

ದೂತಾನಾಮತ್ರ ಕಾ ವಾರ್ತಾ ಕೃತಾಂತ ಮರಣೇ ತವ ।
ಅತಃ ಪರಂ ಕ್ವ ಗಂತವ್ಯಮಸ್ಮಾಕಂ ಸ್ಥಳಮೇವ ನ ॥೭೯॥

ಯತ್ರಾಪಿ ಗಮ್ಯತೇ ತತ್ರ ಸಮಾಗತ್ಯ ಗಣಾಸ್ತತಃ ।
ಕುಪಿತಾಸ್ತೇ ನಯಿಷ್ಯಂತಿ ಬಧ್ವಾ ಪಾಶೈರ್ದೃಢೈರ್ಯಮ ॥೮೦॥

ದೂತಾನಾಂ ಚ ತ್ವಯಾ ಶಿಕ್ಷಾ ನ ಕೃತಾ ಪೂರ್ವಮಾದರಾತ್ ।
ಅತ ಏವಾಪದೋ ಯಾಂತಿ ಕೇನ ಸ್ಯಾತ್ತನ್ನಿವಾರಣಂ ॥೮೧॥

ಅವಿಚಾರ್ಯ ಕೃತಂ ಕರ್ಮ ದೂತೈರೇತೈರ್ದುರಾತ್ಮಭಿಃ ।
ಅತೋ ದುಃಖಸಹಸ್ರಾಣಿ ತವ ಸಂಭಾವಿತಾನ್ಯಪಿ ॥೮೨॥

ಪ್ರಮದೋ ದುಃಖಹೇತುರ್ಹಿ ತೇನ ದುಃಖಮವಾಪ್ಯತೇ ।
ಕಿಂ ಚ ನ ಜ್ಞಾತಮಸ್ಮಾಭಿಃ ಶಿವತತ್ತ್ವಂ ಯಥಾಮತಿ ॥೮೩॥

ಅಶಿಕ್ಷಿತಾಶ್ಚ ದೂತಾಸ್ತೇ ತತಸ್ತೈಸ್ತೈರನುಕ್ಷಣಂ ।
ಸಂಭಾವಿತಾನಿ ದುಃಖಾನಿ ಮಹಾಪಾಪಕುಲಾನ್ಯಪಿ ॥೮೪॥

ನಿನ್ನನ್ನು ವಧೆಮಾಡುವುದು ಶಿವದೂತರಿಗೆ ಎಷ್ಟುಮಾತ್ರದ ಕೆಲಸ. ಆಮೇಲೆ ನಾವೆಲ್ಲಿ ಹೋಗಬೇಕು. ನಮಗೆ ಬೇರೆ ಸ್ಥಳವೇ ಇಲ್ಲ. ಎಲ್ಲಿಗೆ ಹೋದರೂ ಅಲ್ಲಿಗೆ ಆ ಶಿವಭಟರು ಬಂದು ಗಟ್ಟಿಯಾದ ಹಗ್ಗಗಳಿಂದ ಕಟ್ಟಿ ನಮ್ಮನ್ನು ಎಳೆದುಕೊಂಡು ಹೋಗುವರು. ॥೭೯-೮೦॥

ನೀನು ಹಿಂದೆ ನಿನ್ನ ಭಟರಿಗೆ ಶಿಕ್ಷೆಯನ್ನು ವಿಧಿಸಲಿಲ್ಲ. ಆದುದರಿಂದ ಈಗ ವಿಪತ್ತುಗಳು ಒದಗುತ್ತಿವೆ. ಈ ಆಪತ್ತು ಯಾವ ಉಪಾಯದಿಂದ ನಿವೃತ್ತ ವಾದೀತು? ದುಷ್ಟರಾಗಿರುವ ಈ ಭಟರಿಂದ ಕಾರ್ಯವು ವಿಚಾರಿಸದೇ ಮಾಡಲ್ಪಟ್ಟಿತು. ಆದುದರಿಂದ ಅನೇಕ ದುಃಖಗಳು ಒದಗುತ್ತಿವೆ. ॥೮೧-೮೨॥

ಅಜಾಗರೂಕತೆಯೇ ದುಃಖಕ್ಕೆ ಕಾರಣವಷ್ಟೇ? ಆದುದರಿಂದ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಮತ್ತು ನಾವು ಬುದ್ಧಿಗೆ ತಿಳಿದಷ್ಟು ಶಿವನ ತತ್ವವನ್ನು ತಿಳಿದುಕೊಳ್ಳಲಿಲ್ಲ. ಶಿಕ್ಷಣವನ್ನು ಹೊಂದದ ನಿನ್ನ ದೂತರು ಪ್ರತಿಕ್ಷಣವೂ ಅನೇಕ ಪಾಪ ಮತ್ತು ದುಃಖಗಳಿಗೀಡಾದರು. ॥೮೩-೮೪॥

ತತಃ ಪರಂ ತ್ವಾ ಯತ್ನೇನ ತಮಾನಯ ವಿಶೇಷತಃ ।
ಪೂಜಯಸ್ವ ಯಥಾಕಾಮಂ ಪ್ರಮಾದೋ ಮಾಸ್ತು ಸರ್ವಥಾ ॥೮೫॥

|| ವ್ಯಾಸ ಉವಾಚ ||

ಏತಸ್ಮಿನ್ನಂತರೇ ಕಾಲೇ ಶಿವದೂತಾಃ ಸಮಾಗತಾಃ ।
ಮಹೇಶಪ್ರೇಷಿತಾಃ ಸರ್ವೇ ವಿಮಾನವರಮಾಶ್ರಿತಾಃ ॥೮೬॥

ತೇ ಸಮಾಗತ್ಯ ತರಸಾ ಪಾಶೈರ್ಬಧ್ವಾ ಯಮಂ ಮುಹುಃ ।
ಸಂತಾಡ್ಯ ನೇತುಮುದ್ಯುಕ್ತಾಸ್ತದಾ ಬ್ರಹ್ಮಾ ಸಮಾಗತಃ ॥೮೭॥

ವಿಷ್ಣುಃ ಸಮಾಗತಃ ಪಶ್ಚಾದಿಂದ್ರೇಣ ಸಹ ಸತ್ವರಂ ।
ತತಸ್ತೇ ಪ್ರಣತಾಃ ಸರ್ವೇ ಗಣಪಾದಾಂಬುಜಂ ಪೃಥಕ್ ॥೮೮॥

ತತಃ ಪೂಜಾಂ ಚ ಕೃತ್ವಾ ತೇ ಗಣೇಭ್ಯೋ ಭಕ್ತಿಪೂರ್ವಕಂ ।
ತಾನೂಚುರ್ವಿಸ್ಮಯಾವಿಷ್ಟಾಃ ಕೃತಾಂಜಲಿಪುಟಾಃ ಸುರಾಃ ॥೮೯॥

ಆದುದರಿಂದ ಇನ್ನು ಮುಂದೆ ಆ ಬಾಲಕನನ್ನು ಪ್ರಯತ್ನದಿಂದ ಪೂಜಿಸು. ಈ ವಿಷಯದಲ್ಲಿ ಉದಾಸೀನತೆಯನ್ನು ಖಂಡಿತ ಮಾಡಬೇಡ ಎಂದು ಚಿತ್ರಗುಪ್ತನು ಯಮನಿಗೆ ಹೇಳಿದನು. ||೮೫||

ಇಷ್ಟರಲ್ಲಿ ಆ ವೇಳೆಗೆ ಸರಿಯಾಗಿ ಈಶ್ವರನಿಂದ ಪ್ರೇರಿತರಾದ ಶಿವದೂತರು ದಿವ್ಯವಿಮಾನಾರೂಢರಾಗಿ ಅಲ್ಲಿಗೆ ಬಂದರು. ಅವರು ಬೇಗ ಬಂದು ಯಮನನ್ನು ಹಗ್ಗಗಳಿಂದ ಕಟ್ಟಿ ಚನ್ನಾಗಿ ಹೊಡೆದು ಎಳೆದುಕೊಂಡು ಹೋಗುವುದರಲ್ಲಿದ್ದರು. ಅಷ್ಟು ಹೊತ್ತಿಗೆ ಬ್ರಹ್ಮನು ತಾನಾಗಿ ಅಲ್ಲಿಗೆ ಬಂದನು. ||೮೬-೮೭||

ಮತ್ತು ವಿಷ್ಣುವೂ ಇಂದ್ರನೊಡನೆ ಅಲ್ಲಿಗೆ ಬಂದನು. ಅನಂತರ ಎಲ್ಲರೂ ಬೇರೆ ಬೇರೆಯಾಗಿ ಆ ಶಿವಗಣಗಳ ಪಾದಕಮಲಗಳನ್ನು ವಂದಿಸಿದರು. ಬಳಿಕ ಅವರು ಆ ಗಣಗಳಿಗೆ ಭಕ್ತಿಪುರಸ್ಸರರಾಗಿ ಪೂಜೆಮಾಡಿದರು. ಎಲ್ಲಾ ದೇವತೆಗಳೂ ಕೈಜೋಡಿಸಿಕೊಂಡು ಆಶ್ಚರ್ಯದಿಂದ ಪ್ರಾರ್ಥಿಸಿದರು. ||೮೮-೮೯||

॥ ದೇವಾ ಊಚುಃ ॥

ನಮೋ ನಮಃ ಶಾಂಭವೇಭ್ಯೋ ಗಣೇಭ್ಯೋ ವೈ ನಮೋ ನಮಃ ।
ನಮೋ ಗಣಪತಿಭ್ಯೋಽಪಿ ಗೃತ್ಸೇಭ್ಯೋ ವೈ ನಮೋ ನಮಃ ॥೯೦॥

ನಮೋ ಗೃತ್ಸಪತಿಭ್ಯಶ್ಚ ವ್ರಾತೇಭ್ಯೋ ವೈ ನಮೋ ನಮಃ ।
ನಮೋ ವ್ರಾತಪತಿಭ್ಯಶ್ಚ ವಿರೂಪೇಭ್ಯೋ ನಮೋನಮಃ ॥೯೧॥

ನಮೋಽಸ್ತು ವಿಶ್ವರೂಪೇಭ್ಯೋ ಮಹದ್ಭ್ಯೋ ವೈ ನಮೋ ನಮಃ ।
ರಥಿಭ್ಯೋ ವೈ ನಮಸ್ತುಭ್ಯಂ ರಥೇಭ್ಯಶ್ಚ ನಮೋ ನಮಃ ॥೯೨॥

ಸೇನಾಭ್ಯಶ್ಚ ನಮೋ ನಿತ್ಯಂ ಸೇನಾನಿಭ್ಯಶ್ಚ ವೋ ನಮಃ ।
ಕ್ಷತ್ರಭ್ಯೋ ವೋ ನಮಸ್ತುಭ್ಯಂ ಸಂಗೃಹೀತೃಭ್ಯ ಏವ ಚ ॥೯೩॥

ಇತಿ ಸ್ತುತ್ವಾ ಪುನರ್ನತ್ವಾ ಗಣಾನ್ ಪುಷ್ಪಕಸಂಶ್ರಿತಾನ್ ।
ಕೃತಾಂಜಲಿಪುಟಾಃ ಸರ್ವೇ ಮೂರ್ಧ್ನಿ ಕಂಪಮುಪಾಗತಾಃ ॥೯೪॥

"ಶಿವಭಕ್ತರಾದ ಗಣಗಳೇ, ನೀವು ಗಣಗಳಿಗೆಲ್ಲಾ ಅಧಿಪತಿಗಳು. ವಿಷಯ ಲಂಪಟರೂ ಆಗಿದ್ದೀರಿ. ವಿಷಯಾಸಕ್ತರಿಗೆ ಯಜಮಾನರೂ ಹೌದು. ಅಲ್ಲದೇ ನಾನಾಜಾತಿಯ ಜನರನ್ನು ಪರಿಪಾಲಿಸುವವರು. ಮತ್ತು ನಿಯಮಾನುಷ್ಠಾನ ಮಾಡುವವರಿಗೆಲ್ಲಾ ನೀವು ಒಡೆಯರು. ನಿಮ್ಮ ರೂಪು ವಿಲಕ್ಷಣವಾದದ್ದು ಆದುದರಿಂದ ನಿಮಗೆ ಬಾರಿ ಬಾರಿಗೂ ತಲೆಬಾಗುವೆವು. ॥೯೦-೯೧॥

ನೀವು ವಿಶ್ವರೂಪಿಗಳು ಮತ್ತು ಮಹತ್ಪರಿಮಾಣವುಳ್ಳವರು. ರಥಿಕರು ಅಂದರೆ ಯುದ್ಧ ವಿಶಾರದರು. ನೀವೇ ರಥ ಸ್ವರೂಪರು. ಮತ್ತು ಸೈನ್ಯ ಸ್ವರೂಪರು. ಸೇನಾಪತಿಗಳೂ, ಶರಣಾಗತರನ್ನು ರಕ್ಷಿಸುವವರೂ, ಎಲ್ಲದನ್ನು ಸ್ವೀಕರಿಸುವವರೂ ನೀವು. ಆದುದರಿಂದ ನಿಮಗೆ ನಮಸ್ಕಾರ." ॥೯೨-೯೩॥

ಹೀಗೆ ಆ ದೇವತೆಗಳು ಪುಷ್ಪಕವಿಮಾನದಲ್ಲಿರುವ ಗಣಗಳನ್ನು ಸ್ತೋತ್ರ ಮಾಡಿ ಕೈಜೋಡಿಸಿಕೊಂಡು ಎಲ್ಲರೂ 'ಗಡಗಡನೆ' ನಡುಗುತ್ತಾ ಇದ್ದರು. ॥೯೪॥

ಕ್ಷಮಧ್ವಮಪರಾಧಾನ್ ನಃ ಸರ್ವಥಾ ಪ್ರಣತಾನ್ ಸುರಾನ್ ।
ಪಶ್ಯಧ್ವಂ ಕರುಣಾದೃಷ್ಟ್ಯಾ ಪಾಲನೀಯಾ ಯತೋ ವಯಂ ॥೯೫॥

ಅಯಮಜ್ಞೋ ಯಮೋ ನಾಸ್ಯ ತ್ವಪರಾಧಸ್ತಥಾ ಸತಿ ।
ಕ್ಷಮಾ ವಿಧೇಯಾ ಯೂಯಂ ಹಿ ದಯಾಂಬುನಿಧಯಃ ಸದಾ॥೯೬॥

ದೂತಾಸ್ತಾವದಸಂಖ್ಯಾತಾಸ್ತೇಷಾಂ ಶಿಕ್ಷಾಪಿ ದುರ್ಲಭಾ ।
ಮಿತಾನಾಮಿವ ಶಿಕ್ಷಾ ಸ್ಯಾತ್ ಅಮಿತಾನಾಂ ತು ಸಾ ಕಥಂ ॥೯೭॥

ಯಮಸ್ಯೈಕಸ್ಯ ಗಮನಂ ಕಥಂ ಪ್ರತಿಗೃಹಂ ಗಣಾಃ ।
ಅಪಾರಗೃಹಸಂಕೀರ್ಣಮಿದಂ ಭೂಮಂಡಲಂ ಖಲು ॥೯೮॥

ಯದಿ ಜಾನಾತ್ಯಯಂ ತತ್ವಂ ತದಾಪಾಯೋದ್ಯತಃ ಕಥಂ ।
ಅಧುನಾ ತಸ್ಯ ಶಿಕ್ಷಾಪಿ ನಾನೀತಸ್ಯ ಕೃತಾ ಖಲು ॥೯೯॥

ನಮ್ಮ ಅಪರಾಧಗಳನ್ನು ಮನ್ನಿಸಿ, ಖಂಡಿತ ತಲೆಬಾಗಿರುವ ಈ ದೇವತೆಗಳನ್ನು ಕರುಣಾದೃಷ್ಟಿಯಿಂದ ನೋಡಿರಿ. ಏಕೆಂದರೆ ಇವರನ್ನು ನೀವು ಪಾಲಿಸಬೇಕಲ್ಲವೇ? ||೯೫||

ಈ ಯಮನು ತಿಳಿಯದವನು. ಇವನಲ್ಲಿ ತಪ್ಪಿಲ್ಲ. ಹಾಗಾದರೂ ಈತನನ್ನು ಕ್ಷಮಿಸಬೇಕು. ನೀವು ಯಾವಾಗಲೂ ಕರುಣಾಳುಗಳಾಗಿರುವಿರಿ. ||೯೬||

ಯಮಭಟರಾದರೋ ಅನೇಕರು. ಲೆಕ್ಕವಿಲ್ಲದಷ್ಟು ಇರುವರು. ಅವರಿಗೆಲ್ಲಾ ಶಿಕ್ಷೆ ವಿಧಿಸುವುದು ಸಾಧ್ಯವಾಗಲಾರದು. ಸ್ವಲ್ಪ ಸಂಖ್ಯೆಯವರಿದ್ದರೆ ಸುಲಭವಾಗಿ ದಂಡನೆ ಮಾಡಬಹುದು. ಅಪಾರವಾಗಿದ್ದರೆ ಹೇಗೆ ಶಿಕ್ಷಿಸುವುದಕ್ಕಾದೀತು? ||೯೭||

ಎಲೈ ಗಣಗಳೇ, ಯಮನು ಒಬ್ಬನೇ, ಅವನು ಪ್ರತಿಯೊಂದು ಮನೆಗೂ ಹೇಗೆ ಹೋಗುವನು? ಈ ಭೂಮಿಯಲ್ಲಿ ಅನೇಕ ಅಂದರೆ ಲೆಕ್ಕವಿಲ್ಲದಷ್ಟು ಮನೆಗಳಿವೆಯಷ್ಟೆ! ||೯೮||

ತತ್ತ್ವವನ್ನು ಈ ಯಮನು ಮೊದಲೇ ತಿಳಿದಿದ್ದರೆ ವಿಪತ್ತು ಹೇಗೆ ಒದಗುತ್ತಿತ್ತು. ಈಗಲಾದರೋ ವಿಚಾರವನ್ನು ತಿಳಿದ ಯಮನು ಆ ದೂತರಿಗೆ ಶಿಕ್ಷೆಯನ್ನು ವಿಧಿಸುವುದಿಲ್ಲವೇ? ||೯೯||

ಯಮೋಽಪಿ ಚಿತ್ರಗುಪ್ತೇನ ಸಹ ಸರ್ವಂ ವಿಚಾರ್ಯ ತತ್ ।
ಕರೋತಿ ಶಿಕ್ಷಾಂ ತದ್ಯೋಗ್ಯಾಂ ಸಾ ಪೂಜ್ಯಸ್ಯ ನ ಸರ್ವಥಾ ॥೧೦೦॥

ಪೂಜ್ಯಾಪೂಜ್ಯವಿಚಾರೋಽಪಿ ಕೃತಸ್ತೇನ ಭವಿಷ್ಯತಿ ।
ಇದಾನೀಂ ತು ಭವದ್ಭಿಶ್ಚ ತ್ವರಯಾ ಸಮುಪಾಗತಂ ॥೧೦೧॥

ಯಮಸ್ಯ ಬಧ್ವಾನಯನಂ ಯದ್ವ್ಯಾಘಾತಪುರಃಸರಂ ।
ಯದಾ ಕ್ವ ವಾ ದಯಾಽಸ್ಮಾಸು ದುಃಖಿತೇಷು ಗಣೇಶ್ವರಾಃ ॥೧೦೨॥

ಶಿವಾಜ್ಞಾಕಾರಿಣಾಮತ್ರ ನ ಯದ್ಯಪ್ಯಸ್ತಿ ದುರ್ಲಭಂ ।
ತಥಾಪ್ಯಸ್ತು ವಿಚಾರೋತ್ರ ಕಿಂ ಕರೋತೀತ್ಯಯಂ ಯಮಃ ॥೧೦೩॥

ಭವದಾಜ್ಞಾಂ ಸಮುಲ್ಲಂಘ್ಯ ಕೋ ವಾ ಜೀವಿತುಮಿಚ್ಛತಿ ।
ಸ್ವರ್ಗೇಽಪಿ ಸತ್ಯಲೋಕೇಽಪಿ ವೈಕುಂಠೇಽಪಿ ವಿಶೇಷತಃ ॥೧೦೪॥

ಯಮನಾದರೋ ಚಿತ್ರಗುಪ್ತನಿಂದ ಕೂಡಿ ಎಲ್ಲವನ್ನೂ ವಿಮರ್ಶೆಮಾಡಿ ಆ ತಪ್ಪಿಗೆ ತಕ್ಕ ಶಿಕ್ಷೆಯನ್ನು ವಿಧಿಸುತ್ತಾನೆ. ಆ ಪೂಜ್ಯನಾದ ಕುಮಾರನಿಗೆ ಇನ್ನು ಮುಂದೆ ಶಿಕ್ಷೆಮಾಡುವುದಿಲ್ಲ. ॥೧೦೦॥

ಈ ಯಮನು, ಪೂಜೆಗೆ ಯೋಗ್ಯರು ಯಾರು? ಅಯೋಗ್ಯರು ಯಾರು? ಎಂದು ವಿಚಾರಿಸುತ್ತಿದ್ದನು. ಅಷ್ಟರಲ್ಲಿ ನೀವು ಆವಸರಪಟ್ಟು ಬೇಗ ಬಂದಿರಿ.॥೧೦೧॥

ಯಮನನ್ನು ಹೊಡೆದು ಆತನ ಕಣ್ಣು ಕಟ್ಟಿದಿರಿ. ಎಲೈ ಗಣೇಶ್ವರರೇ, ಹಾಗೇ ನೀವು ಯಮನಿಗೆ ಶಿಕ್ಷಿಸಿದ್ದೇ ಆದರೆ ದುಃಖಗೊಂಡಿರುವ ನಮ್ಮಲ್ಲಿ ದಯೆ ತೋರಿಸುವವರಾರು? ॥೧೦೨॥

ಈಶ್ವರನ ಆಜ್ಞೆಯನ್ನು ನಡೆಸುವ ನಿಮಗೆ ಸಾಧ್ಯವಿಲ್ಲದುದು ಯಾವುದೂ ಇಲ್ಲ. ಆದರೂ ಈ ಯಮನು ಏನು ಮಾಡುತ್ತಾನೆ ಎಂಬುದನ್ನು ವಿಚಾರಿಸಬೇಕು. ॥೧೦೩॥

ನಿಮ್ಮ ಅಪ್ಪಣೆಯನ್ನು ಮೀರಿದ ಮನುಷ್ಯನು ಸ್ವರ್ಗದಲ್ಲಿ ಅಥವಾ ಸತ್ಯಲೋಕದಲ್ಲಿ ಅಥವಾ ವೈಕುಂಠದಲ್ಲಿಯಾದರೂ ಇರಲಿ, ಆತನು ಹೇಗೆ ಜೀವದಿಂದಿರಬಲ್ಲನು? ॥೧೦೪॥

ಅಸ್ಮಾಕಮಪರಾಧಾಸ್ತು ಭವಿಷ್ಯಂತಿ ಕ್ಷಣೇ ಕ್ಷಣೇ ।
ಕ್ಷಂತವ್ಯಾಸ್ತೇ ವಿಶೇಷೇಣ ನಮೋ ವೋ ಗಣನಾಯಕಾಃ ॥೧೦೫॥

ಕಾಲಕಾಲಾಜ್ಞಯಾ ಸರ್ವಂ ಭವದ್ಭಿಃ ಕ್ರಿಯತೇ ಯದಿ ।
ತದಾನೀಂ ವಾರಕಃ ಕೋ ವಾ ಸತ್ಯಂ ಬ್ರಹ್ಮಾಂಡಮಂಡಲೇ ॥೧೦೬॥

ಕಿಂ ಚ ಭೃತ್ಯಾನ್ ವಿನೀತಾನ್ ನಃ ಸಾಪರಾಧಾನ್ ವಿಶೇಷತಃ ।
ಪಾಲಯಧ್ವಂ ಪ್ರಯತ್ನೇನ ಭವತ್ಪ್ರತಿಭಟಾಶ್ಚ ಕೇ ॥೧೦೭॥

ಅದ್ಭುತಂ ಮಹದೈಶ್ವರ್ಯಂ ಮಹಾದೇವಸ್ಯ ತಸ್ಯ ತು ।
ದೂತಾ ಯೂಯಂ ಮಾನನೀಯಾಃ ಪೂಜ್ಯಾಶ್ಚಾತ್ರ ಸುರಾಸುರೈಃ ॥೧೦೮॥

ಏಕೇನಾಪಿ ಕ್ಷಣೇನೈವ ಶಾಂಕರೇಣ ಜಗಲ್ಲಯಃ ।
ಕ್ಷಣೇನ ಕ್ರಿಯತೇ ತತ್ರ ಬಹೂನಾಂ ಕೃತ್ಯಮಸ್ತಿ ಕಿಂ ॥೧೦೯॥

ನಾವಂತೂ ಪ್ರತಿಕ್ಷಣದಲ್ಲಿಯೂ ತಪ್ಪುಗಳನ್ನು ಮಾಡುವೆವು. ದಯವಿಟ್ಟು ಅವೆಲ್ಲವನ್ನು ವಿಶೇಷವಾಗಿ ಮನ್ನಿಸಬೇಕು. ಎಲೈ ಗಣನಾಯಕರೇ, ನಿಮಗೆ ನಮಸ್ಕಾರ. ||೧೦೫||

ಯಮನನ್ನೂ ನಿಗ್ರಹಿಸುವ ಆ ಈಶ್ವರನ ಅಪ್ಪಣೆಯಂತೆ ನೀವು ನಡೆಸುವುದಾದರೆ ಆಗ ನಿಮ್ಮನ್ನು ತಡೆಯುತಕ್ಕವನು ಈ ಬ್ರಹ್ಮಾಂಡದೊಳಗೆ ಒಬ್ಬನೂ ನಿಜವಾಗಿಯೂ ಇಲ್ಲ. ||೧೦೬||

ಈಗ ನಿಮ್ಮ ದಾಸರಾದ ಮತ್ತು ನಮ್ರರಾದ ಮತ್ತು ತಪ್ಪಿತಸ್ಥರಾದ ನಮ್ಮನ್ನು ಕಾಪಾಡಬೇಕು. ನಿಮ್ಮೆದುರಿಗೆ ನಿಲ್ಲತಕ್ಕ ಭಟನಾವನಿದ್ದಾನೆ? ||೧೦೭||

ಆ ಈಶ್ವರನ ವಿಭೂತಿಯಾದರೋ ಅತ್ಯದ್ಭುತವಾದದ್ದು. ಶಿವದೂತರಾದ ನಿಮ್ಮನ್ನು ಗೌರವಿಸಬೇಕು. ನೀವು ದೇವಾಸುರರಿಂದಲೂ ಪೂಜೆಯನ್ನೂ ಸ್ವೀಕರಿಸುವವರಲ್ಲವೆ? ||೧೦೮||

ಒಬ್ಬನೇ ಒಬ್ಬ ಶಿವದೂತನು ಒಂದೇ ಒಂದು ಕ್ಷಣದಲ್ಲಿ ಪ್ರಪಂಚವನ್ನು ನಾಶಮಾಡಬಲ್ಲನು. ಹೀಗಿರುವಲ್ಲಿ ಅನೇಕ ಮಂದಿಗೆ ಕೆಲಸವೆಲ್ಲಿದೆ? ||೧೦೯||

ಶಿವಾಜ್ಞಯಾ ತು ಪರಯಾ ಭವದ್ಭಿಃ ಸಮುಪಾಗತಂ ।
ಶ್ರಮೋ ವೃಥಾ ಹಿ ಭವತಾಂ ಲಕ್ಷ್ಯಃ ಕೋಪಸ್ಯ ಕಿಂ ಯಮಃ ॥೧೧೦॥

ಕೈಲಾಸಭವನದ್ವಾರಿ ಸ್ಥಿತ್ವಾಪಿ ಸ್ಮರಣಂ ಯದಿ ।
ಶಿಕ್ಷಾರ್ಥಂ ಕ್ರಿಯತೇ ತರ್ಹಿ ಶಿಕ್ಷಿತಃ ಕಿಂ ನ ವೈ ಯಮಃ ॥೧೧೧॥

ಯಮಸ್ಯ ತಸ್ಯ ಕಾ ವಾರ್ತಾ ವಯಂ ಸರ್ವೇ ಸುರಾ ಗಣಾಃ ।
ಭವದಾಜ್ಞಾಪಾಶಬದ್ಧಾಃ ತತ್ರ ಕಃ ಸಂಶಯೋ ಭವೇತ್ ॥೧೧೨॥

ಕಿಂಚಾದ್ಯ ಭಾಗ್ಯಮಸ್ಮಾಕಂ ಯೂಯಂ ಶಂಕರಕಿಂಕರಾಃ ।
ನೇತ್ರಪ್ರಸಾದಪಾತ್ರತ್ವಂ ಪ್ರಾಪ್ತಂ ತದ್ಭಾಗ್ಯಮೇವ ನಃ ॥೧೧೩॥

ಅದ್ಯ ಶ್ರೀಮದ್ಗಿರೀಶಾನಪಾದುಕಾದರ್ಶನಂ ಕೃತಂ ।
ಭವದ್ದರ್ಶನಮಾತ್ರೇಣ ಕೃತಾರ್ಥಾಶ್ಚ ವಯಂ ಗಣಾಃ ॥೧೧೪॥

ನೀವಾದರೋ ಶಿವನ ಶ್ರೇಷ್ಠವಾದ ಅಪ್ಪಣೆ ಮೇರೆ ಇಲ್ಲಿಗೆ ಬಂದಿರಿ. ಆದರೆ ನಿಮ್ಮ ಈ ಆಯಾಸವು ವ್ಯರ್ಥ. ನಿಮ್ಮ ಈ ಕೋಪಕ್ಕೆ ಯಮನು ಪಾತ್ರನಾಗುವನೇನು ? ॥೧೧೦॥

ಕೈಲಾಸದ ಬಾಗಿಲಿನಲ್ಲಿ ನಿಂತು ಒಂದು ಸಲ ಯಮನನ್ನು ಶಿಕ್ಷಿಸುವುದಕ್ಕಾಗಿ ಸ್ಮರಿಸಿಕೊಂಡರೆ, ಆತನು ಅಲ್ಲಿಗೆ ಬಂದು ನಿಮ್ಮಿಂದ ಶಿಕ್ಷೆಯನ್ನು ಅನುಭವಿಸುತ್ತಿದ್ದಿಲ್ಲವೇ ? ॥೧೧೧॥

ಯಮನೊಬ್ಬನ ವಿಷಯವೇನು ? ಎಲೈ ಗಣಗಳಿರಾ, ನಾವೆಲ್ಲರೂ ದೇವತೆಗಳು. ನಿಮ್ಮ ಅಪ್ಪಣೆಗೆ ಕಟ್ಟುಬಿದ್ದವರೇ ಸರಿ. ಆದರಲ್ಲಿ ಏನೂ ಸಂಶಯವಿರಲಾರದು. ॥೧೧೨॥

ಮತ್ತು ನೀವು ಶಂಕರನ ಸೇವಕರು. ನಿಮ್ಮ ದರ್ಶನವು ನಮ್ಮ ಭಾಗ್ಯದಿಂದ ಲಭಿಸಿತು. ಅಲ್ಲದೆ ನಮ್ಮ ನೇತ್ರಗಳಿಗೆ ಈಗ ಆನಂದವಾಯಿತು. ॥೧೧೩॥

ಈಗ ಶ್ರೀ ಶಂಕರನ ಪಾದದರ್ಶನವಾದ ಹಾಗೆಯೇ ಆಯಿತು. ಎಲೈ ಗಣಗಳೇ, ನಿಮ್ಮ ದರ್ಶನದಿಂದ ನಾವು ಧನ್ಯರಾದೆವು. ॥೧೧೪॥

ಅಸ್ಮಾಕಮಪಿ ಯದ್ಭಾಗ್ಯಂ ತದದ್ಯೈವ ಫಲೋನ್ಮುಖಂ ।
ಯತೋದ್ಯ ಭವತಾಂ ದೃಷ್ಟ್ವಾ ಪುಣ್ಯಾಶ್ಚರಣರೇಣವಃ ॥೧೧೫॥

ಬ್ರಹ್ಮಾಂಡಮಂಡಲಸ್ಯಾಸ್ಯ ಪಾವನತ್ವಂ ಪ್ರಕಲ್ಪಿತಂ ।
ಅಧುನಾ ಪಾವನಾನಾಂ ನೋ ದುಃಖವಾರ್ತಾಪಿ ದೂರತಃ ॥೧೧೬॥

ಆಶಾಸ್ಯಮಿದಮಸ್ಮಾಕಂ ಭವತ್ಪಾದಾವಲೋಕನಂ ।
ತಜ್ಞಾತಮಧುನಾ ತಾವತ್ ಸುಖಂ ಸಂಭಾವಿತಂ ಖಲು ॥೧೧೭॥

ಏವಂ ತೇಷು ವದತ್ಸು ಶಂಕರಗಣಾಃ ಸರ್ವೇಷು ಬಧ್ವಾ ಯಮಂ ।
ದೇವಾನಪ್ಯನುಕೂಲತಾಮುಪಗತಾನ್ ಕಾಲಸ್ಯ ಸರ್ವಾನಪಿ ।
ಬಧ್ವಾ ತಾನಪರಾಧಲೇಶರಹಿತಾನ್ ನೇತುಂ ತದೈವೋದ್ಯತಃ ।
ಶ್ರೀಮೃತ್ಯುಂಜಯಶಾಸನೇನ ಶಮನಂ ಸಂತಾಡಯಂತೋ ಮುಹುಃ॥೧೧೮॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಬೃಹತೀಪುಷ್ಪಾರ್ಚನಮಹಿಮಾ ಯಮಬಂಧನತಾಡನವರ್ಣನಂ ನಾಮ
ಷಡ್ವಿಂಶೋಽಧ್ಯಾಯಃ

ನಮ್ಮ ಅದೃಷ್ಟವು ಈಗಲೇ ಫಲದ ಕಡೆಗೆ ತಿರುಗಿದ ಹಾಗಿದೆ. ಏಕೆಂದರೆ ನಿಮ್ಮ ಪವಿತ್ರವಾದ ಪಾದಧೂಳಿಗಳನ್ನು ಕಂಡೆವು. ॥೧೧೫॥

ಈ ಇಡೀ ಜಗತ್ತೇ ಈಗ ಪವಿತ್ರವಾಯಿತು. ಈಗ ಪವಿತ್ರರಾದ ನಮ್ಮ ದುಃಖವೆಲ್ಲಾ ದೂರವಾಯಿತು. ॥೧೧೬॥

ನಮಗೆ ಈ ತಮ್ಮ ಪಾದದರ್ಶನವು, ಶುಭವನ್ನು ಕೋರಿದುದು ಈಗ ತಿಳಿಯಿತು. ಆದರೆ ಅದು ಮುಂದಿನ ಸೌಖ್ಯವಷ್ಟೇ!" ॥೧೧೭॥

ಹೀಗೆ ದೇವತೆಗಳು ಪ್ರಾರ್ಥಿಸುತ್ತಿರಲು ಆ ಶಿವದೂತರು ಯಮನನ್ನೂ ಆತನಿಗೆ ಸಹಾಯಕರಾದ ದೇವತೆಗಳನ್ನೂ ಸಹ ತಪ್ಪಿಲ್ಲದಿದ್ದರೂ ಕಟ್ಟಿ ಶಿವನಲ್ಲಿಗೆ

ಒಯ್ಯುವುದಕ್ಕೆ ತೊಡಗಿದರು. ಮತ್ತು ಮೃತ್ಯುಂಜಯನಾದ ಶಿವನ ಆಜ್ಞೆಯಂತೆ ಬಾರಿಬಾರಿಗೂ ಯಮನನ್ನು ಹೊಡೆಯುತ್ತಾ ಒಯ್ದರು. ||೧೧೮||

ಇಲ್ಲಿಗೆ ಶ್ರೀಶಿವರಹಸ್ಯದ ಹರ ಎಂಬ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
ಬೃಹತೀ ಹೂವಿನಮಾಹಾತ್ಮ್ಯ ಮತ್ತು ಯಮನ ಬಂಧನ ತಾಡನವೆಂಬ
ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಸಪ್ತವಿಂಶೋಽಧ್ಯಾಯಃ

|| ವ್ಯಾಸ ಉವಾಚ ||

ಯಮಾದಿಬಂಧನೋದ್ಯೋಗಕೋಲಾಹಲಮುಮಾಪತಿಃ ।
ಶ್ರುತ್ವಾ ನಂದಿನಮಾಹೂಯ ಪ್ರಾಹ ಯುಕ್ತಂ ವಚಸ್ತದಾ ॥೧॥

|| ಶ್ರೀ ಸದಾಶಿವ ಉವಾಚ ||

ತ್ವಯಾ ಗಂತವ್ಯಮಧುನಾ ಸತ್ವರಂ ನಂದಿಕೇಶ್ವರ ।
ರತ್ನಪುಷ್ಪಕಮಾರುಹ್ಯ ವಿಲಂಬಸ್ತತ್ರ ನೋಚಿತಃ ॥೨॥

ಯಮಾನುಕೂಲತಾಂ ಪ್ರಾಪ್ತಾಃ ಸೇಂದ್ರೋಪೇಂದ್ರಮರುದ್ಗಣಾಃ ।
ತಾನಾನೀಯ ಪ್ರಯತ್ನೇನ ಶೂಲಜ್ವಾಲಾಸು ಪಾತಯ ॥೩॥

ಇಪ್ಪತ್ತೇಳನೆಯ ಅಧ್ಯಾಯ

ಆರೀತಿ ಶಿವಭಟರು ಯಮನೇ ಮುಂತಾದವರ ಬಂಧನ ಕಾರ್ಯದಲ್ಲಿ ಉದ್ಯುಕ್ತರಾಗಿ ಕೋಲಾಹಲಮಾಡುತ್ತಿರುವುದನ್ನು ಉಮಾರಮಣನಾದ ಪರಮೇಶ್ವರನು ತಿಳಿದು, ಕೂಡಲೇ ನಂದಿಕೇಶ್ವರನನ್ನು ಕರೆದು ಕೆಲವು ಮಾತುಗಳನ್ನು ಹೇಳುತ್ತಾನೆಂದು ವೇದವ್ಯಾಸರು ಮಹರ್ಷಿಗಳಿಗೆ ತಿಳಿಸಿದರು. ||೧||

" ಓ ನಂದಿಕೇಶ್ವರ, ನೀನು ಈಗಲೇ ಸ್ವಲ್ಪವೂ ತಡಮಾಡದೇ ರತ್ನಪುಷ್ಪಕ ವಿಮಾನವನ್ನೇರಿ ಜಾಗ್ರತೆ ಯಮನ ಸಮೀಪಕ್ಕೆ ಹೋಗು. ಅಲ್ಲಿ ಯಮನಿಗೆ ಅನುಕೂಲವಾಗುವಂತೆ ಸಮಾಧಾನ ವಾಕ್ಯಗಳನ್ನಾಡುತ್ತಿರುವ ಇಂದ್ರ, ಉಪೇಂದ್ರ

ಯಾವಂತಃ ಪ್ರತಿಕೂಲಾಸ್ತೇ ತೇ ಸರ್ವೇ ಶೂಲಘಾತನೈಃ ।
ತಪ್ತಶೃಂಖಲಬಂಧೈಶ್ಚ ಪೀಡನೀಯಾಃ ಪ್ರಯತ್ನತಃ ॥೪॥

ಮದಾಜ್ಞೋಲ್ಲಂಘನಂ ಕೃತ್ವಾ ಪ್ರವೃತ್ತಾ ಯೇ ದುರಾಸದಾಃ ।
ತೇ ಪಶ್ಚಾದ್ಬಹುಬಂಧೇನ ಪೀಡನೀಯಾ ವಿಶೇಷತಃ ॥೫॥

ಕಿಂಚ ತಸ್ಯ ಯಮಸ್ಯಾಪಿ ತಪ್ತಕ್ರಕಚಘಾತನೈಃ ।
ಯಥಾ ಪೀಡಾ ತಥಾ ಕಾರ್ಯಂ ತತ್ರ ಗತ್ವಾ ಪ್ರಯತ್ನತಃ ॥೬॥

ತೇಷಾಮಾನಯನೇನಾತ್ರ ನ ಕೃತ್ಯಮಪಿ ದೃಶ್ಯತೇ ।
ಶಿಕ್ಷಾ ತತ್ರೈವ ಕರ್ತವ್ಯಾ ತಪ್ತಮುದ್ಗರಘಾತನೈಃ ॥೭॥

ಕುಂಭೀಪಾಕೇ ಪಾತನೀಯಾಃ ಪ್ರಯತ್ನೇನ ಸುರಾ ಅಪಿ ।
ಯಮಾನುಕೂಲತಾಂ ಪ್ರಾಪ್ತಾಸ್ತೇ ಸರ್ವೇ ನಷ್ಟಬುದ್ಧಯಃ ॥೮॥

ಮತ್ತು ಇತರ ದೇವತಾಗಣಗಳು ಇವರೆಲ್ಲರನ್ನೂ ಬಲಾತ್ಕಾರದಿಂದ ಹಿಡಿದುಕೊಂಡು ಬಂದು ಅವರನ್ನೆಲ್ಲಾ ತೀಕ್ಷ್ಣವಾದ ಶೂಲದಜ್ವಾಲೆಗಳ ಮೇಲೆ ಬೀಳಿಸು. ॥೨-೩॥

ಈ ನಿನ್ನ ಪ್ರಯತ್ನಕ್ಕೆ ಅಡ್ಡಿಯಾಗಿ ಬರುವರನ್ನೆಲ್ಲಾ ಒಬ್ಬರನ್ನೂ ಬಿಡದೆ, ಶೂಲದ ಇರಿತದಿಂದಲೂ, ಕಾದ ಕಬ್ಬಿಣದ ಸರಪಣಿಗಳ ಬಂಧನದಿಂದಲೂ ಬಲಾತ್ಕಾರವಾಗಿ ಹಿಂಸಿಸು. ॥೪॥

ಅಲ್ಲದೇ ಈ ನನ್ನ ಆಜ್ಞೆಯನ್ನು ಮೀರಲು ಪ್ರಯತ್ನಿಸುವ ದುಷ್ಟರನ್ನೆಲ್ಲಾ ವಿಶೇಷವಾಗಿ ನಾನಾವಿಧವಾದ ಬಂಧನಗಳಿಂದ ಸ್ವಲ್ಪವೂ ಸಂಕೋಚವಿಲ್ಲದೇ ಪೀಡಿಸು. ॥೫॥

ನಂದಿಯೇ, ಹಾಗೆಯೇ ಆ ಯಮನನ್ನೂ ಎದುರಿಸಿ, ಕಾದ ಗರಗಸದ ಏಟುಗಳಿಂದ ಅವನಿಗೆ ವಿಶೇಷವಾಗಿ ನೋವಾಗುವಂತೆ ಮಾಡಬೇಕು. ॥೬॥

ನಂದಿಕೇಶ್ವರನೇ, ಅಪರಾಧಿಗಳಾದ ಆ ಯಮಾದಿಗಳನ್ನು ಈ ವಿಷಯಕ್ಕೋಸ್ಕರ ಪುನಃ ನನ್ನ ಸಮೀಪಕ್ಕೆ ಕರೆದುಕೊಂಡು ಬರಬೇಕಾದ ಅವಶ್ಯಕತೆಯೇನೂ ತೋರುವುದಿಲ್ಲ. ನೀನೇ ಅಲ್ಲಿಗೆ ಹೋಗಿ ಅವರಿಗೆ ತಕ್ಕ ಶಿಕ್ಷೆಯನ್ನು ಕಾದ ಮುದ್ಗರಾಯುಧ ಮುಂತಾದವುಗಳಿಂದ ವಿಧಿಸು. ॥೭॥

ಯಮನನ್ನು ವಹಿಸಿಕೊಂಡು ಅವನ ಪರವಾಗಿ ಮಾತನಾಡುತ್ತಿರುವ

ಕಿಂ ಚ ತೇಷಾಂ ಯಾತನಾಯಾಂ ತೇಷಾಂ ಚೇನ್ಮರಣಂ ತದಾ ।
ಸೃಷ್ಟಿರನ್ಯೈವ ಕರ್ತವ್ಯಾ ಸರ್ವಥಾಪಿ ಮದಾಜ್ಞಯಾ ॥೯॥

ತವ ಪ್ರತಿಭಟೋ ಲೋಕೇ ನ ಕೋಽಪೀತ್ಯವಧಾರಿತಂ ।
ಅತಸ್ತತ್ರ ಯಥಾಕಾಮಂ ಸತ್ವರಂ ಯಾಹಿ ಸಾತ್ವಿಕ ॥೧೦॥

ತತ್ರ ತಾವದ್ವಿಚಾರೋಽಪಿ ನ ಕಾರ್ಯಸ್ತ್ವೈಸ್ಸಹಾಧುನಾ ।
ಪ್ರತಿಕೂಲತ್ವಮಾಪನ್ನಾಃ ಹಂತವ್ಯಾ ಏವ ಸರ್ವಥಾ ॥೧೧॥

ಯದಿ ತೇ ಸಾಮವಾದಾರ್ಥಮಾಯಾಸ್ಯಂತಿ ಸುರಾಸ್ತದಾ ।
ತೀಕ್ಷ್ಣತಪ್ತಕಶಾಘಾತೈರವಿಚಾರ್ಯೈವ ತಾನ್ಜಹಿ ॥೧೨॥

ಬುದ್ಧಿಶೂನ್ಯರಾದ ದೇವತೆಗಳನ್ನೂ ಸಹ ಕುಂಭೀಪಾಕವೆಂಬ ನರಕಕ್ಕೆ ತಳ್ಳಿಬಿಡು. ||೮||

ನಿನ್ನ ಶಿಕ್ಷೆಗಳಿಗೆ ಗುರಿಯಾಗಿ ಯಾತನೆಯನ್ನು ಅನುಭವಿಸಲು ಸಾಧ್ಯವಿಲ್ಲದೇ ಯಾರಾದರೂ ದೇವತೆಗಳು ಮೃತರಾದರೆ ಅವರ ಸ್ಥಾನದಲ್ಲಿ ಬೇರೊಬ್ಬನನ್ನು ಸೃಷ್ಟಿಮಾಡಿಬಾ? ಇದು ಸರ್ವಥಾ ನನ್ನ ಅಪ್ಪಣೆಯೆಂದು ತಿಳಿ. ||೯||

ನಂದಿಕೇಶ್ವರನೇ, ಯಾವ ಲೋಕದಲ್ಲಿಯೂ ನಿನಗೆ ಸಮಾನನಾಗಿ ಪ್ರತಿಭಟಿಸುವವನಿಲ್ಲವೆಂದು ನಾನು ನಿಶ್ಚಯಿಸಿರುವೆನು. ಇದು ಸತ್ಯವೆಂದೇ ತೋರುವುದು. ಆದುದರಿಂದ ನೀನು ಜಾಗ್ರತೆ ಹೊರಟು ನಿನಗೆ ತೋರಿದಂತೆ ನಡೆದುಕೋ. ||೧೦||

ನೀನು ಅಲ್ಲಿಗೆ ಹೋದನಂತರ ನ್ಯಾಯಾನ್ಯಾಯ ವಿಚಾರವಾವುದನ್ನೂ ಮಾಡದೆ ಪ್ರತಿಕೂಲವಾಗಿರುವವರನ್ನೆಲ್ಲಾ ನಿಸ್ಸಂಕೋಚವಾಗಿ ಧ್ವಂಸಮಾಡು? ||೧೧||

ನೀನು ಬಂದದ್ದರಿಂದ ಹೆದರಿ, ಸಾಮೋಪಾಯವನ್ನು ಆಶ್ರಯಿಸಿ ನಿನ್ನ ಸಮೀಪಕ್ಕೆ ಬರುವ ಆ ದೇವತೆಗಳನ್ನು ವಿಚಾರಮಾಡದೇ, ಕಾದ, ತೀಕ್ಷ್ಣವಾದ ಚಾವಟಿಯಿಂದ ಬಲವಾಗಿ ಹೊಡೆಯುವನಾಗು," ಎಂದು ಪರಮೇಶ್ವರನು ನಂದಿಕೇಶನಿಗೆ ಆಜ್ಞೆಮಾಡಿದನು. ||೧೨||

ಇತಿ ತದ್ಗಿರಮಾಕರ್ಣ್ಯ ಪ್ರಣಮ್ಯಾಪಿ ಮಹೇಶ್ವರಂ ।
ಕೃತಾಂಜಲಿಪುಟೋ ನಂದೀ ಪ್ರಾಹ ವಾಕ್ಯಂ ವಿಚಕ್ಷಣಃ ॥೧೩॥

॥ ನಂದಿಕೇಶ್ವರ ಉವಾಚ ॥

ಮಹೇಶ್ವರಾಜ್ಞಾ ಶಿರಸಾ ಧೃತಾ ನಾತ್ರಾಸ್ತಿ ಸಂಶಯಃ ।
ತ್ವದಾಜ್ಞಾಭಂಜಕೋ ಯಸ್ಸ್ಯಾತ್ಸ ಹಂತವ್ಯೋ ನ ಸಂಶಯಃ ॥೧೪॥

ಬ್ರಹ್ಮಾಂಡಮಂಡಲೇ ಕೋ ವಾ ತ್ವದಾಜ್ಞಾಪ್ರತಿಕೂಲಭಾಕ್ ।
ಸಕಂಪಾ ಏವ ತಿಷ್ಠಂತಿ ಸದಾ ಸರ್ವೇ ಸುರಾಸುರಾಃ ॥೧೫॥

ಅಪರಾಧಃ ಕದಾ ಕೋ ವಾ ಭವಿಷ್ಯತಿ ನ ವಿದ್ಮಹೇ ।
ಇತಿ ತಿಷ್ಠಂತಿ ಸರ್ವೇಽಪಿ ಸುರಾಃ ಶಾಸನಭೀರವಃ ॥೧೬॥

ಮಹಾದೇವನ ಈ ಮಾತುಗಳನ್ನು ಕೇಳಿ, ವಿಚಕ್ಷಣನಾದ (ಬುದ್ಧಿವಂತನಾದ) ನಂದಿಕೇಶ್ವರನು, ಆಜ್ಞೆಯನ್ನು ಶಿರಸಾವಹಿಸಿ ಕೈಮುಗಿದು ಮಹೇಶ್ವರನಿಗೆ ನಮಸ್ಕಾರಮಾಡಿ ಇಂತೆಂದನು. ॥೧೩॥

ಮಹೇಶ್ವರನೇ, ಇಗೋ ನಿನ್ನಾಜ್ಞೆಯನ್ನು ಶಿರಸಾವಹಿಸಿದೆನು. ಇದರಲ್ಲಿ ಸಂಶಯವೇ ಇಲ್ಲ. ನಿನ್ನ ಆಜ್ಞೆಯನ್ನು ಮೀರಿ ನಡೆಯುವವನನ್ನು ನಾನು ಅವಶ್ಯವಾಗಿ ಕೊಲ್ಲಲೇ ಬೇಕು. ॥೧೪॥

ದೇವದೇವನೇ, ಮಂಡಲಾಕಾರವಾಗಿರುವ ಈ ಬ್ರಹ್ಮಾಂಡದಲ್ಲಿ ನಿನ್ನ ಆಜ್ಞೆಯನ್ನು ತಿರಸ್ಕರಿಸುವವರು ಯಾರುತಾನೇ ಇರುವರು ? ದೇವದಾನವರೆಲ್ಲರೂ ನಿನ್ನ ಅಪ್ಪಣೆಗೆ ಹೆದರಿ ಸದಾ ನಡುಗುತ್ತಿರುವರು. ॥೧೫॥

ಹೀಗಿರುವಾಗ ಯಾರು ಯಾವಾಗ ಅಪರಾಧ ಮಾಡುತ್ತಿರುವರೋ ತಿಳಿಯದು. ದೇವತೆಗಳೆಲ್ಲರೂ ಈ ಅಪರಾಧಗಳನ್ನೇ ಹುಡುಕುತ್ತಾ ನಿನ್ನ ಆಜ್ಞೆಗೊಳಪಟ್ಟು ಭೀತಿಯಿಂದ ತಮ್ಮ ತಮ್ಮ ಕಾರ್ಯಗಳನ್ನು ನಡೆಸುತ್ತಿರುವರು. ॥೧೬॥

ಕಿಂ ಚಾಧುನಾ ಸುರಾಸ್ಸರ್ವೇ ಸಂಹರ್ತವ್ಯಾಸ್ತ್ವದಾಜ್ಞಯಾ ।
ತಾವತಾ ನ ಭವ[1]ಸ್ತ್ವೇಷಾಂ ನ ಹಾನಿರಪಿ ಸರ್ವಥಾ ॥೧೭॥

ಅನ್ಯಾಮರಾಣಾಂ ಸ್ವರ್ಗೇ ತು ಭೀತಿಸ್ತೇಷಾಂ ಕಥಂ ಭವೇತ್ ।
ನೂತನಾಪೇಕ್ಷಯಾ ಜೀರ್ಣಾಃ ಸ್ವತಃ ಶಂಕಾಕಲಂಕಿತಾಃ ॥೧೮॥

ಏತೇಷಾಮೇವ ಕರ್ತವ್ಯಾ ಶಿಕ್ಷಾ ತಾವದ್ಯಥೋಚಿತಂ ।
ಅನುತಪ್ತಾಸ್ತತಸ್ತೇಽಪಿ ಸ್ಥಾಸ್ಯಂತ್ಯಾಜ್ಞಾವಶಾಸ್ಸದಾ ॥೧೯॥

ಮಹಾದೇವನೇ, ನಿನ್ನಾಜ್ಞೆಯಂತೆ ಈಗ ದೇವತೆಗಳನ್ನೆಲ್ಲಾ ಸಂಹಾರ ಮಾಡಬೇಕಾಗಿದೆ. ಈರೀತಿಯಾದ ಸಂಹಾರದಿಂದ ಈ ದೇವತೆಗಳಿಗೆ ಯಾವ ಭಯವೂ ಮತ್ತು ತೊಂದರೆಯೂ ಉಂಟಾಗಲಾರದೆಂದು ತಿಳಿದಿರುವೆನು. (ಇಲ್ಲಿ ಭಯ ಎಂಬ ಪಾಠಕ್ಕಿಂತಲೂ ಭವವೆಂಬ ಪಾಠವು ಉಚಿತವಾಗಿ ತೋರುತ್ತದೆ.) ಹೇಗೆಂದರೆ, ನಿನ್ನಪ್ಪಣೆಯಂತೆ ಅಪರಾಧಿಗಳಾದ ದೇವತೆಗಳನ್ನೆಲ್ಲಾ ಈಗ ನಾನು ಸಂಹಾರ ಮಾಡಿದರೆ ಅವರಿಗೆ ಪುನರ್ಜನ್ಮವಿಲ್ಲದ ಸದ್ಗತಿಯೇ ಉಂಟಾದಂತಾಗುವುದು. ಇದರಿಂದ ಅವರಿಗೇನೂ ತೊಂದರೆಯಾದಂತಾಗಲಿಲ್ಲ. ಅನಂತರ ಇವರ ಸ್ಥಾನಕ್ಕೆ ಪ್ರಭುವಿನಪ್ಪಣೆಯಂತೆ ಮತ್ತೊಬ್ಬರನ್ನು ಸೃಷ್ಟಿಮಾಡಿದರೆ ಇವರಿಗಿಂತಲೂ ಹಳಬರಾಗಿರುವ ದೇವತೆಗಳಿಗೆ ಇವರು ಸ್ವರ್ಗದಲ್ಲಿ ಆಜ್ಞೆಮಾಡುವುದು ಅಸಾಧ್ಯವೆಂದು ತೋರುವುದು. ಇವರಿಗೆ ಉಳಿದ ದೇವತೆಗಳು ಭಯಪಡಲಾರರು. ಹೊಸದಾಗಿ ಕಾರ್ಯಭಾರಮಾಡಲು ಬರುವವರಿಗಿಂತಲೂ, ದೊಡ್ಡವರ ಹೆದರಿಕೆಗೆ ಪದೇ ಪದೇ ಪಾತ್ರರಾಗಿರುವ ಹಳಬರೇ ಶ್ರೇಷ್ಠರೆನಿಸುವರು. ಎಷ್ಟಾದರೂ ಇವರಿಗೆ ಹೆದರಿಕೆಯಿರುತ್ತದೆ. ಹೊಸದಾಗಿ ಬಂದವರಿಗೆ ಅದರ ಅರಿವೇ ಇಲ್ಲದೇ ತುಂಬಾ ತೊಂದರೆಯಾಗುತ್ತದೆ. ॥೧೭-೧೮॥

ಆದುದರಿಂದ ಸ್ವಾಮಿಯೇ, ಈ ಅಪರಾಧಿಗಳಾಗಿರುವ ದೇವತೆಗಳಿಗೇ ಉಚಿತವಾದ ಶಿಕ್ಷೆಮಾಡುವುದು ಅವರನ್ನು ಸಂಪೂರ್ಣವಾಗಿ ಸಂಹರಿಸುವುದಕ್ಕಿಂತಲೂ ಉಚಿತವೆಂದು ತೋರುತ್ತಿರುವುದು. ಮಹಾಪ್ರಭೋ, ಇದರಿಂದ ಕಳವಳಗೊಂಡು ಈ ದೇವತೆಗಳು ಮುಂದೆ ನಿನ್ನ ಆಜ್ಞಾನುಸಾರ ನಡೆದುಕೊಳ್ಳುವರು. ॥೧೯॥

---

1 ಯಂತ್ವೇ ಪಾಠಾಂತರ)

ಶಿಕ್ಷಾಯಾಂ ಕ್ರಿಯಮಾಣಾಯಾಮಪರಾಧಂ ಪುನರ್ಯದಿ ।
ಕರಿಷ್ಯಂತಿ ತದಾ ಸರ್ವೇ ಹಂತವ್ಯಾ ಏವ ತೇ ಸುರಾಃ ॥೨೦॥

ಇತಿ ಮೇ ಭಾತಿ ಭಗವಂಸ್ತ್ವಯಿ ವಿಜ್ಞಾಪನಾ ಮಯಾ ।
ಅಶಕ್ಯಾ ಕರ್ತುಮೇವೇತಿ ನಿಶ್ಚಿತಂ ಚ ಮುಹುರ್ಮುಹುಃ ॥೨೧॥

॥ ವ್ಯಾಸ ಉವಾಚ ॥

ಇತಿ ತದ್ವಚನಂ ಶ್ರುತ್ವಾ ವಿಚಾರ್ಯ ಹೃದಿ ಶಂಕರಃ ।
ಸಮ್ಯಗುಕ್ತಂ ತ್ವಯಾ ನಂದಿನ್ನುಚಿತಂ ಕುರು ಸತ್ವರಂ ॥೨೨॥

ಪ್ರಭೋ, ಈರೀತಿ ಒಂದು ಬಾರಿ ಶಿಕ್ಷೆಮಾಡಿದರೂ ಪುನಃ ಇವರೇನಾದರೂ ಅಪರಾಧಮಾಡಿದ್ದೇ ಆದರೆ, ಆಗ ಇವರನ್ನೆಲ್ಲಾ ನಿಶ್ಚಯವಾಗಿಯೂ ಸಂಹಾರ ಮಾಡಬೇಕು. ॥೨೦॥

ಓ ಭಗವನ್, ಈರೀತಿ ನನಗೆ ತೋರುತ್ತಿರುವುದು. ನಾನು ಬಾರಿಬಾರಿಗೂ ವಿಮರ್ಶೆಮಾಡಿ ಈಗ ದೇವತೆಗಳನ್ನೆಲ್ಲಾ ಸಂಹರಿಸಿ ಪುನಃ ಅವರ ಸ್ಥಾನಕ್ಕೆ ಬೇರೆಯವರನ್ನು ಸೃಷ್ಟಿಮಾಡಿ ಅವರಿಂದ ಕೆಲಸ ಮಾಡಿಸುವುದು ಅಸಾಧ್ಯವೆಂದೇ ತಿಳಿದಿರುವೆನು. ಮಹಾದೇವ, ಈ ನನ್ನ ವಿಜ್ಞಾಪನೆಯು ಉಚಿತಾನುಚಿತ ವೆಂಬುದನ್ನು ನೀನು ವಿಚಾರಮಾಡಿ ಮುಂದೆ ಆಜ್ಞೆಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇದು ನಿನ್ನ ಆಜ್ಞೋಲ್ಲಂಘನೆಯಲ್ಲವೆಂದು, ದಯವಿಟ್ಟು ತಿಳಿಯಬೇಕು. ಇನ್ನು ಮುಂದೆ ಸರ್ವಸಮರ್ಥನಾದ ನಿನ್ನ ಆಜ್ಞೆಯಂತೆ ನಡೆಯುವೆನು ಎಂದು ನಂದಿಕೇಶ್ವರನು ಪರಮೇಶ್ವರನಿಗೆ ಹೇಳಿದನು. ॥೨೧॥

ನಂದಿಕೇಶ್ವರನು ಯುಕ್ತಿಯುಕ್ತವಾದ ಮಾತನ್ನು ಹೇಳಲು ಅದನ್ನು ಶಂಕರನು ಕೇಳಿ, ತಾನೂ ಸ್ವಲ್ಪ ಹೊತ್ತು ಮನಸ್ಸಿನಲ್ಲಿ ಆಲೋಚಿಸಿ, ಎಲೈ ನಂದಿಕೇಶ್ವರನೇ, ನೀನು ಚೆನ್ನಾಗಿ ಹೇಳಿದೆ. ನಿನ್ನ ಮಾತಿನಂತೆ ನಡೆಯುವುದೇ ಈಗ ಉಚಿತವೆಂದು ನಾನು ತಿಳಿಯುತ್ತೇನೆ. ಈಗ ನೀನು ಹೋಗಿ ನಿನಗೆ ಉಚಿತವಾಗಿ ತೋರುವುದನ್ನು ನಡೆಸು. ॥೨೨॥

ಇತ್ಯಾಜ್ಞಪ್ತಃ ಪ್ರಹೃಷ್ಟೋಽತಿತ್ವರಯಾ ನಂದಿಕೇಶ್ವರಃ ।
ಜಗಾಮ ಪುಷ್ಪಕಾರೂಢೋ ಯತ್ರ ದೇವಾ ಯಮಾದಯಃ ॥೨೩॥

ನಂದಿಕೇಶಂ ಸಮಾಲೋಕ್ಯ ದೂರಾತ್ತೇ ಶಿವಕಿಂಕರಾಃ ।
ಸಕಂಪಾಂಸ್ತಾಡಯಾಮಾಸುಃ ಕಶಾದ್ಯೈರಮರಾನ್ಮುಹುಃ ॥೨೪॥

ಕೇಚಿತ್ತಪ್ತಕಶಾಘಾತೈರ್ಮೂರ್ಛಿತಾ ಏವ ತೇ ಸುರಾಃ ।
ಮುದ್ಗರೈರ್ಭಿಂಡಿಪಾಲೈಶ್ಚ ತಾಡಿತಾಶ್ಚ್ವಾಸವರ್ಜಿತಾಃ ॥೨೫॥

ತಪ್ತಕ್ರಕಚಸಂಘಾತನಿಹತಾಃ ಪತಿತಾಃ ಸುರಾಃ ।
ಚುಕ್ರುಶುಶ್ಚ ತದಾ ಸರ್ವಾಃ ಸಕಂಪಾಶ್ಚಾಮರಾಂಗನಾಃ ॥೨೬॥

ತತಃ ಕೋಲಾಹಲಮಾಕರ್ಣ್ಯ ಗಂಧರ್ವಾ ಅಪಿ ಚುಕ್ರುಶುಃ ।
ತಥೈವ ಮುನಯಃ ಸಿದ್ಧಾ ಗಂಧರ್ವಾ ಅಪಿ ಪನ್ನಗಾಃ ॥೨೭॥

ಹೀಗೆ ಪರಮೇಶ್ವರನಿಂದ ಆಜ್ಞೆಪಡೆದ ನಂದಿಕೇಶ್ವರನು ಸಂತೋಷ ಹೊಂದಿ ಜಾಗ್ರತೆಯಾಗಿ ಪುಷ್ಪಕವಿಮಾನವನ್ನೇರಿ ಯಮಾದಿಗಳಿದ್ದೆಡೆಗೆ ತೆರಳಿದನು. ॥೨೩॥

ಶಿವಗಣಗಳು (ಶಿವಕಿಂಕರರು) ನಂದಿಕೇಶ್ವರನು ದೂರದಿಂದಲೇ ಬರುತ್ತಿರುವುದನ್ನು ನೋಡಿ, ಮೊದಲೇ ಹೆದರುತ್ತಿರುವ ದೇವತೆಗಳನ್ನು ಪುನಃ ಪುನಃ ಚಾವಟಿಯೇ ಮುಂತಾದವುಗಳಿಂದ ಹೊಡೆಯಲು ಪ್ರಾರಂಭಿಸಿದರು. ॥೨೪॥

ಈ ಶಿವಕಿಂಕರರು ಹೊಡೆದ ಚಾವಟಿಯ ಏಟುಗಳಿಂದ ಕೆಲವು ಮಂದಿ ದೇವತೆಗಳು ಮೂರ್ಛೆಹೊಂದಿದರು. ಮುದ್ಗರ ಮತ್ತು ಭಿಂದಿಪಾಲ (ಇವೆರಡೂ ದೊಣ್ಣೆಯಂತಿರುವ ಆಯುಧಗಳು) ಇವುಗಳ ಏಟಿಗೆ ಗುರಿಯಾದ ಕೆಲವು ದೇವತೆಗಳು ಶ್ವಾಸರಹಿತರಾದರು (ಅಂದರೆ ಅವರಿಗೆ ಉಸಿರಾಡುವುದೇ ನಿಂತುಹೋಯಿತು). ॥೨೫॥

ಕಾದ ಗರಗಸದ ಬಲವಾದ ಏಟಿನಿಂದ ನೊಂದು ದೇವತೆಗಳೆಲ್ಲರೂ ಬೀಳುತ್ತಿರಲು, ಇದನ್ನು ನೋಡಿ ದೇವಾಂಗನೆಯರೆಲ್ಲರೂ ಗಾಬರಿಯಿಂದ ಗೋಳಾಡತೊಡಗಿದರು. ॥೨೬॥

ಈ ಕೋಲಾಹಲವನ್ನು ಕೇಳಿ ಗಂಧರ್ವರೆಲ್ಲರೂ ಕೂಗಾಡಿದರು. ಹಾಗೆಯೇ ಮುನಿಗಳೂ, ಸಿದ್ಧರೂ, ಗಂಧರ್ವರೂ ಮತ್ತು ಪನ್ನಗರೂ ಕೋಲಾಹಲಮಾಡತೊಡಗಿದರು. ॥೨೭॥

ತತಃ ಪರಸ್ಪರಂ ಪ್ರೋಚುಸ್ತೇ ಸರ್ವೇ ಭಯವಿಹ್ವಲಾಃ ।
ದುರಾತ್ಮನಾ ಯಮೇನೇದಮವಿಚಾರ್ಯ ಕೃತಂ ಖಲು ॥೨೮॥

ಶಿವಾಜ್ಞಾ ವಿಸ್ಮೃತಾ ತೇನ ಪ್ರಮತ್ತೇನ ದುರಾತ್ಮನಾ ।
ತತ್ಕೃತೇನಾಪರಾಧೇನ ಸುರಾಸ್ಸರ್ವೇಽಪಿ ದುಃಖಿತಾಃ ॥೨೯॥

ಅಕಾಲಪ್ರಲಯಾರಂಭಃ ಕೋಽಯಮತ್ಯದ್ಭುತೋಽಧುನಾ ।
ಪಾಶೈರ್ಬದ್ಧ್ವಾ ಸುರಾಸ್ಸರ್ವೇ ಪತಿತಾಃ ಶಸ್ತ್ರಮಂಡಲೇ ॥೩೦॥

ಮಹಾಗ್ನಿಜ್ವಾಲಯಾ ದಂಡೈಃ ಕಶಾಘಾತೈಶ್ಚ ಪೀಡಿತಾಃ ।
ಅಯಂ ನಿರಂತರಾಕ್ರೋಶಃ ಕದಾ ಶಾಂತೋ ಭವಿಷ್ಯತಿ ॥೩೧॥

ಕದಾ ವಾ ನಾಶಮಭ್ಯೇತಿ ಸೇಯಂ ತ್ರಿದಶದುರ್ದಶಾ ।
ಏತಾವತ್ಕೃತವತ್ಸ್ವೈಸ್ತು ಗಣೈರ್ನಂದೀ ಸಮೇಷ್ಯತಿ ॥೩೨॥

ಹೀಗೆ ದಿಗಿಲುಗೊಂಡಿರುವ ಗಂಧರ್ವಾದಿಗಳೆಲ್ಲರೂ ತಮ್ಮ ತಮ್ಮಲ್ಲಿಯೇ, ಅಯ್ಯೋ, ಈ ದುಷ್ಟನಾದ ಯಮನು ಮುಂದಾಗುವುದೊಂದನ್ನೂ ವಿಚಾರ ಮಾಡದೇ ಈ ಕಾರ್ಯಮಾಡಿದನು. ಇದರಿಂದ ನಮ್ಮೆಲ್ಲರಿಗೂ ಈ ದುರವಸ್ಥೆಯುಂಟಾಗಿದೆ ಎಂದು ಮಾತನಾಡ ತೊಡಗಿದರು. ॥೨೮॥

ಮದಿಸಿದ ಈ ದುರಾತ್ಮನು ಮಹೇಶನಾಜ್ಞೆಯನ್ನೇ ಮರೆತನು. ಅದರಿಂದುಂಟಾದ ಅಪರಾಧದಿಂದ ದೇವತೆಗಳೆಲ್ಲರೂ ಆಗ ದುಃಖಪಡಬೇಕಾಯಿತು. ॥೨೯॥

ಅಕಾಲದಲ್ಲಿ ಉಂಟಾಗಿರುವ ಅತ್ಯದ್ಭುತವಾದ ಈ ಪ್ರಲಯಾರಂಭವು ಬಹು ಭಯಕ್ಕೆ ಕಾರಣವಾಗಿದೆ. ದೇವತೆಗಳೆಲ್ಲರನ್ನೂ ಶಿವಕಿಂಕರರು ಪಾಶಗಳಿಂದ ಕಟ್ಟಿ ತೀಕ್ಷ್ಣವಾದ ಶಸ್ತ್ರಗಳ ಸಮೂಹದ ಮೇಲೆ ತಳ್ಳಿದರು. ॥೩೦॥

ದೊಡ್ಡ ಬೆಂಕಿಯ ಜ್ವಾಲೆಯಿಂದಲೂ ದಂಡಾಘಾತ ಮತ್ತು ಚಾವಟಿಯ ಏಟು ಇವುಗಳಿಂದಲೂ ಪೀಡಿಸಲ್ಪಟ್ಟಿರುವ ಈ ದೇವತೆಗಳ ನಿರಂತರವಾದ ಗೋಳು ಎಂದಿಗೆ ಶಾಂತವಾಗುವುದೋ ಎನ್ನಿಸಿದೆ. ॥೩೧॥

ಈ ದೇವತೆಗಳಿಗುಂಟಾಗಿರುವ ಹೀನ ದೆಸೆಯು ಎಂದಿಗೆ ತೊಲಗುವುದೋ ತೋರದಾಯಿತು. ಈಗ ಬಂದಿರುವ ಶಿವಕಿಂಕರರು ಇಷ್ಟು ತೊಂದರೆ ಪಡಿಸುತ್ತಿರು

ಸ ಕಿಂ ವಾ ಕರ್ತುಮುದ್ಯುಕ್ತಸ್ತತ್ತಾವಜ್ಜ್ಞಾಯತೇ ತು ನ ।
ಗಣಶ್ರೇಷ್ಠಸ್ಯ ತಸ್ಯಾತ್ರ ಕಿಮಶಕ್ಯಂ ಸ ಶೌರ್ಯವಾನ್ ॥೩೩॥

ಕಿಂ ಚ ಸಂಪತ್ಸಮಾಯಾತು ಮಹಾಪದ್ವಾ ವಿಶೇಷತಃ ।
ಭೋಕ್ತವ್ಯಮಾಗತಂ ಸರ್ವೈರಸ್ವತಂತ್ರೈಸ್ಸುರೈರಪಿ ॥೩೪॥

ಏವಂ ವದತ್ಸು ಸರ್ವೇಷು ತತ್ತಲ್ಲೋಕನಿವಾಸಿಷು ।
ತತ್ರ ನಂದಿನಮಾಲೋಕ್ಯ ಪ್ರಣತಾಃ ಶಿವಕಿಂಕರಾಃ ॥೩೫॥

ಪ್ರಣಮ್ಯ ನಂದಿಕೇಶಂ ತಂ ಗಣಾಃ ಪ್ರೋಚುರ್ನತಾನನಾಃ ।
ಅಸ್ಮಾಭಿಃ ಕೃತ್ಯಮೇತಾವತ್ಕೃತಂ ಪಶ್ಯ ವಿಶೇಷತಃ ॥೩೬॥

ವುದೇ ಸಾಕಾಗಿದೆ. ಸಾಲದ್ದಕ್ಕೆ ಈಗ ನಂದಿಕೇಶ್ವರನು ಬೇರೆ ತನ್ನ ಗಣಗಳೊಡನೆ ಇವರನ್ನು ವಿಚಾರಿಸಲು ಬರುತ್ತಿರುವನು. ॥೩೨॥

ಈ ನಂದಿಕೇಶ್ವರನು ಬಂದು ಏನು ಮಾಡುವನೋ ತಿಳಿಯುಲಸಾಧ್ಯವಾಗಿದೆ. ಶಿವಗಣಗಳಲ್ಲೆಲ್ಲಾ ಶ್ರೇಷ್ಠನೆನಿಸಿರುವ ಇವನಿಗೆ ಏನು ತಾನೇ ಮಾಡಲು ಸಾಧ್ಯವಿಲ್ಲ. ಇವನಾದರೋ ಮಹಾ ಶೂರನು. ॥೩೩॥

ಈ ನಂದಿಕೇಶ್ವರನಿಂದ ಸಂಪತ್ತಾದರೂ ಬರಲಿ ಅಥವಾ ಮಹಾ ವಿಪತ್ತಾದರೂ ಸಂಭವಿಸಲಿ, ದೇವತೆಗಳಾದ ನಾವು ಪರಾಧೀನರಾದುದರಿಂದ ಬಂದದ್ದನ್ನೆಲ್ಲಾ ಅನುಭವಿಸಲೇ ಬೇಕು. ಇದು ಮಾತ್ರ ನಿಶ್ಚಯ. ॥೩೪॥

ಹೀಗೆ ಗಂಧರ್ವಾದಿ ಸಕಲ ದೇವತೆಗಳೂ ಹೇಳುತ್ತಿರಲು, ಈ ಸಮಯದಲ್ಲಿ ವೇಗವಾಗಿ ಬಂದ ನಂದಿಕೇಶ್ವರನನ್ನು ನೋಡಿ ಶಿವನ ಕಿಂಕರರೆಲ್ಲರೂ ನಮಸ್ಕಾರ ಮಾಡಿದರು. ॥೩೫॥

ಅನಂತರ ನಂದಿಕೇಶ್ವರನಿಗೆ ಈ ಶಿವಗಣಗಳು ನಮಸ್ಕಾರಮಾಡಿ, ವಿನಯದಿಂದ ತಲೆಬಗ್ಗಿಸಿಕೊಂಡು ಪ್ರಭೋ, ನಾವು ಇಷ್ಟು ಮಾತ್ರ ಈ ದೇವತೆಗಳಿಗೆ ಶಿಕ್ಷೆಮಾಡಿರುವೆವು. ಇದಕ್ಕಿಂತಲೂ ವಿಶೇಷವಾಗಿ ಏನಾದರೂ ಶಿಕ್ಷೆಮಾಡಬೇಕಾಗಿದ್ದರೆ ನಿನ್ನಿಷ್ಟದಂತೆ ನಡೆಯುವೆವು. ॥೩೬॥

ಯಮಮಾನುಕೂಲವಚನೈರೇತೇ ಬದ್ಧಾಃ ಸುರಾಃ ಪರಂ ।
ತಪ್ತಶೃಂಖಲಯಾ ಖಡ್ಗೈರ್ನಿಹತಾಶ್ಚಾಗ್ನಿಸಂಕುಲೈಃ ॥೩೭॥

ಯಮಸ್ತು ಪೂರ್ವಮೇವಾತ್ರ ಪ್ರಬದ್ಧಃ ಪ್ರಹತೋಽಪಿ ಚ ।
ಏತೇ ತು ಮೂರ್ಛಿತಾಃ ಸರ್ವೇ ಕಶಾಘಾತಪ್ರಪೀಡಿತಾಃ ॥೩೮॥

ಅತಃ ಪರಂ ಕಿಮಸ್ಮಾಭಿಃ ಕರ್ತವ್ಯಂ ತದ್ವದಾಽಧುನಾ ।
ತ್ವದಾಜ್ಞಾಕಾರಿಣಃ ಸರ್ವೇ ವಯಂ ತಾವದಸಂಶಯಂ ॥೩೯॥

ತತಃ ಸುರಾಸ್ತು ತಂ ದೃಷ್ಟ್ವಾ ನಂದಿಕೇಶಂ ಗಣೋತ್ತಮಂ ।
ತತಃ ಸಮುದಿತಾಸ್ಸರ್ವೇ ನಂದಿಕೇಶಾವಲೋಕನಾತ್ ॥೪೦॥

ತತ್ಕಟಾಕ್ಷಾಮೃತಾಸಿಕ್ತಾಸ್ತೇ ಸರ್ವೇ ವಿಗತಜ್ವರಾಃ ।
ವಿಚ್ಛಿನ್ನಬಂಧಾಃ ಸರ್ವೇಽಪಿ ಪ್ರಣತಾಸ್ತತ್ಪದಾಂಬುಜೇ ॥೪೧॥

ಯಮನನ್ನು ವಹಿಸಿಕೊಂಡು ಅವನಿಗೆ ಅನುಕೂಲವಾಗಿ ಮಾತನಾಡಲು ಬಂದ ಈ ದೇವತೆಗಳು ಬಂಧನಕ್ಕೊಳಗಾಗಿ ಕಾದ ಸರಪಣಿ, ಕತ್ತಿ ಮತ್ತು ಇತರ ಆಯುಧಗಳಿಗೆ ಸಿಕ್ಕಿ, ನೊಂದು ಅಗ್ನಿಯ ಜ್ವಾಲೆಗೂ ಸಿಕ್ಕಿರುವರು. ॥೩೭॥

ಯಮನು ಇವರಿಗಿಂತಲೂ ಮೊದಲೇ ಕಟ್ಟಲ್ಪಟ್ಟು ಚೆನ್ನಾಗಿ ಶಿಕ್ಷಿತನಾಗಿರುವನು. ಇತರ ದೇವತೆಗಳೆಲ್ಲರೂ ಚಾವಟಿಯ ಏಟುಗಳಿಂದ ತಾಡಿತರಾಗಿ ಮೂರ್ಛೆ ಹೊಂದಿರುವರು. ॥೩೮॥

ಇನ್ನು ಮುಂದೆ ನಾವು ಮಾಡಬೇಕಾದ ಕಾರ್ಯವೇನೆಂಬುದನ್ನು ಈಗ ನಮಗೆ ತಿಳಿಸು. ನಾವೆಲ್ಲರೂ ನಿಜವಾಗಿಯೂ ನಿನ್ನನುಜ್ಞೆಯನ್ನು ನಡೆಸುವೆವು; ಎಂದು ಹೇಳಿದರು. ॥೩೯॥

ಅನಂತರ ದೇವತೆಗಳೆಲ್ಲರೂ ಗಣಶ್ರೇಷ್ಠನಾದ ಆ ನಂದಿಕೇಶ್ವರನನ್ನು ನೋಡಿ, ಅವನ ದರ್ಶನಕ್ಕೋಸ್ಕರ ಎಲ್ಲರೂ ಗುಂಪಾಗಿ ಸೇರಿದರು. ॥೪೦॥

ನಂದಿಕೇಶ್ವರನನ್ನು ದರ್ಶನಮಾಡಿ, ಅವನ ಕರುಣಾಕಟಾಕ್ಷವೆಂಬ ಅಮೃತದಿಂದ ನೆನೆಸಲ್ಪಟ್ಟ ದೇವತೆಗಳೆಲ್ಲರೂ ಭೀತಿಯಿಲ್ಲದವರಾಗಿ, ಬಂಧನದಿಂದ ಬಿಡುಗಡೆ ಹೊಂದಿ, ನಂದಿಕೇಶ್ವರನ ಪಾದಕಮಲದಲ್ಲಿ ಒಟ್ಟಿಗೆ ನಮಸ್ಕಾರಮಾಡಿ ಹೀಗೆ ಸ್ತುತಿಸಿದರು. ॥೪೧॥

ಪಾಹಿ ಪಾಹಿ ಕೃಪಾಸಿಂಧೋ ಸಾಪರಾಧಾನಪಿ ಕ್ಷಣಂ ।
ಕಟಾಕ್ಷಕರುಣಾಸಾರೈರಭಿಷಿಂಚ ಮುಹುರ್ಮುಹುಃ ॥೪೨॥

ಶಿವಾಜ್ಞೋಲ್ಲಂಘನಂ ತಾವದಸ್ಮಾಭಿರ್ನ ಕೃತಂ ಪ್ರಭೋ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೩॥

ಶಿವಪೂಜಾಪರಿತ್ಯಾಗೋ ನ ಕೃತಃ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೪॥

ಶಿವಧ್ಯಾನಪರಿತ್ಯಾಗಃ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೫॥

ಶಿವಾರ್ಚಕಾರಾಧನಂ ಚ ನ ತ್ಯಕ್ತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಪೀದೃಶೀ ॥೪೬॥

ದಯಾಸಾಗರನಾದ ಎಲೈ ನಂದಿಕೇಶ್ವರನೇ, ಅಪರಾಧಿಗಳಾಗಿರುವ ನಮ್ಮನ್ನು ರಕ್ಷಿಸು! ರಕ್ಷಿಸು! ಒಂದು ಕ್ಷಣಕಾಲ ನಿನ್ನ ಕಟಾಕ್ಷರೂಪವಾದ ಕರುಣಾರಸವು ನಮ್ಮ ಮೇಲೆ ಬಿದ್ದರೆ ನಾವು ಧನ್ಯರಾಗುವೆವು. ಓ ದೇವನೇ, ಕೃಪಾದೃಷ್ಟಿಯಿಂದ ನಮ್ಮನ್ನು ನೋಡುವವನಾಗು. ॥೪೨॥

. ಪ್ರಭೋ, ನಾವು ಪರಶಿವನ ಆಜ್ಞೆಯನ್ನುಲ್ಲಂಘನೆ ಮಾಡಿಲ್ಲ. ಹಾಗಾದರೂ ಈ ದೇವತೆಗಳೆನಿಸಿದ ನಮಗೆ ಈ ದುರವಸ್ಥೆಯುಂಟಾಗಿದೆ. ॥೪೩॥

ದೇವತೆಗಳಾದ ನಾವು ಶಿವನನ್ನು ಪೂಜಿಸುವುದನ್ನು ಎಂದಿಗೂ ಬಿಟ್ಟಿಲ್ಲ. ಹೀಗಿದ್ದರೂ ಈ ದೇವತೆಗಳಿಗೆ ಇಂತಹ ದುರವಸ್ಥೆಯುಂಟಾಗಿದೆ. ॥೪೪॥

ಯಾವ ರೀತಿಯಲ್ಲಿಯೂ ನಾವು (ದೇವತೆಗಳು) ಪರಶಿವನ ಧ್ಯಾನವನ್ನು ಬಿಟ್ಟಿಲ್ಲ. ಹೀಗಿದ್ದರೂ ದೇವತೆಗಳಿಗೆ ಈ ಹೀನದೆಸೆಯು ಪ್ರಾಪ್ತವಾಗಿದೆ. ॥೪೫॥

ಶಿವನನ್ನು ಪೂಜಿಸುವರನ್ನು ಸಹ ನಾವು ಎಲ್ಲಾ ರೀತಿಯಲ್ಲಿಯೂ ಗೌರವಿಸುತ್ತಿರುವೆವು. ಅವರನ್ನು ಎಂದೂ ತಿರಸ್ಕರಿಸಿಲ್ಲ. ಹೀಗಿರುವ ಈ ದೇವತೆಗಳಿಗೂ ಇಂತಹ ದುರ್ದೆಸೆಯೊದಗಿದೆ. ॥೪೬॥

ಉದ್ಧೂಳನಪರಿತ್ಯಾಗೋ ನ ಕೃತಃ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೭॥

ರುದ್ರಾಕ್ಷಧಾರಣತ್ಯಾಗೋ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೮॥

ಶಿವಪೂಜಾದ್ರವ್ಯನಾಶೋ ನ ಕೃತೋ ಬುದ್ಧಿಪೂರ್ವಕಂ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೪೯॥

ಉಪೇಕ್ಷಿತಂ ಚ ನಾಸ್ಮಾಭಿರಧುನಾ ಶಿವಮಂದಿರಂ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೦॥

ಶಿವದೂಷಣವಾರ್ತಾಪಿ ನ ಶ್ರುತಾ ಕ್ವಾಪಿ ಸರ್ವಥಾ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೧॥

ಶಿವಾವಜ್ಞಾ ಕೃತಾ ಕ್ವಾಪಿ ಸರ್ವಥಾ ನ ಸುರೈರಿಹ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೨॥

ಭಸ್ಮೋದ್ಧೂಳನ ಮಾಡಿಕೊಳ್ಳುವುದನ್ನೂ ನಾವು ನಿಜವಾಗಿ ಬಿಟ್ಟಿಲ್ಲ. ಹೀಗಿದ್ದರೂ ನಮಗೆ ದುರವಸ್ಥೆಯೇ? ॥೪೭॥

ಸದಾ ರುದ್ರಾಕ್ಷವನ್ನು ಧಾರಣೆಮಾಡಿರುವೆವೇ ಹೊರತು ಎಂದೂ ಅದನ್ನು ತ್ಯಾಗಮಾಡಿಲ್ಲ. ಹಾಗಾದರೂ ದೇವತೆಗಳಾದ ನಮಗೆ ಕಷ್ಟವು ತಪ್ಪಿಲ್ಲ. ॥೪೮॥

ನಾವೆಂದಿಗೂ ಬುದ್ಧಿಪೂರ್ವಕವಾಗಿ ಶಿವಪೂಜಾಸಾಮಗ್ರಿಗಳನ್ನು ನಾಶಪಡಿಸಿಲ್ಲ. ಹಾಗಾದರೂ ನಮಗೆ ಈ ಕಷ್ಟಸ್ಥಿತಿಯೊದಗಿದೆ. ॥೪೯॥

ಈಗಲೂ ಸಹ ನಾವು ಶಿವದೇವಾಲಯದ ವಿಷಯದಲ್ಲಿ ಉದಾಸೀನತೆಯನ್ನು ತೋರಿಸುವುದಿಲ್ಲ. ಇಷ್ಟಾದರೂ ನಮಗೆ ಈ ದುರ್ದಶೆಯೇರ್ಪಟ್ಟಿರುವುದು. ॥೫೦॥

ಇತರರು ಶಿವನನ್ನು ದೂಷಣೆಮಾಡಿದ ಮಾತನ್ನು ಸಹ ನಾವೆಂದಿಗೂ ಕೇಳೆವು. ಹೀಗಿದ್ದರೂ ನಮಗೇಕೆ ಈ ದುರ್ದಸೆಯುಂಟಾಗಿದೆಯೋ ಕಾಣೆವು. ॥೫೧॥

ದೇವತೆಗಳಾದ ನಾವು ಎಂದಿಗೂ ಎಲ್ಲಿಯೂ ಶಿವನನ್ನು ತಿರಸ್ಕಾರ ಮಾಡಿಲ್ಲ. ಇಷ್ಟಾದರೂ ನಮಗೆ ಕಷ್ಟ ತಪ್ಪಲಿಲ್ಲ. ॥೫೨॥

ನ ಶಾಂಕರಗಣಾವಜ್ಞಾ ಸರ್ವಥಾಪಿ ಕೃತಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೩॥

ಶಿವತೀರ್ಥಾಟನತ್ಯಾಗೋ ನ ಕೃತಃ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೪॥

ನ ತ್ಯಕ್ತಮಧುನಾ ದೇವೈಃ ಶಿವನಿರ್ಮಾಲ್ಯಧಾರಣಂ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೇದೃಶೀ ॥೫೫॥

ಶಿವನಿಂದಕಪಾಪಿಷ್ಠಪೋಷಣಂ ನ ಕೃತಂ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೬॥

ಶಿವಾಭಿಷೇಕಪಾನೀಯಮುಪೇಕ್ಷ್ಯ ನ ಸ್ಥಿತಂ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೭॥

ದೇವತೆಗಳಲ್ಲಿ ಯಾರೂ ಎಂದಿಗೂ ಶಂಕರನ ಗಣಗಳನ್ನು ಸಹ ತಿರಸ್ಕಾರ ಮಾಡಿಲ್ಲ. ಇಷ್ಟಾದರೂ ನಮಗೇಕೆ ಈ ದುರವಸ್ಥೆಯೋ ಜಗದೀಶನೇ ಬಲ್ಲ. ॥೫೩॥

ಶಿವಪ್ರೀತಿಕರವಾದ ತೀರ್ಥಯಾತ್ರೆಗಳನ್ನು ಸಹ ನಾವು ತ್ಯಾಗಮಾಡಿಲ್ಲ. ಈಗ ಈ ಕಷ್ಟಮಾತ್ರ ತಪ್ಪಲಿಲ್ಲ. ॥೫೪॥

ಶಿವನ ನಿರ್ಮಾಲ್ಯ ಧಾರಣೆಮಾಡಿಕೊಳ್ಳುವುದನ್ನು ಸಹ ನಾವು ದೂರ ಮಾಡಿಲ್ಲ. ಆದರೂ ನಮಗೆ ಈ ದುರ್ದೆಶೆಯುಂಟಾಗಿದೆ. ಕಾರಣವೇನೋ ಪರಮಾತ್ಮನೇ ಬಲ್ಲ. ॥೫೫॥

ಶಿವನನ್ನು ನಿಂದೆಮಾಡುವ ಪಾಪಿಷ್ಠರಾರನ್ನೂ ನಾವು ಕಾಪಾಡಿಲ್ಲ. ಅಥವಾ ಪ್ರೋತ್ಸಾಹಗೊಳಿಸಿಲ್ಲ. ಇಷ್ಟಾದರೂ ನಮಗೆ ಈ ಹಿಂಸೆ ತಪ್ಪಿಲ್ಲ. ॥೫೬॥

ಶಿವನನ್ನು ಅಭಿಷೇಕಮಾಡಿದ ನಂತರ ಆ ತೀರ್ಥವನ್ನು ದೇವತೆಗಳು ಯಾವಾಗಲೂ ಪಾನಮಾಡುತ್ತಿರುವರೇ ಹೊರತು ತಿರಸ್ಕರಿಸಿಲ್ಲ. ಹೀಗಿದ್ದರೂ ಈ ದೇವತೆಗಳಿಗೆ ಇಂತಹ ದುರವಸ್ಥೆಯುಂಟಾಗಿದೆಯಲ್ಲವೇ! ॥೫೭॥

ನ ತ್ಯಕ್ತಂ ಶಿವನೈವೇದ್ಯಭೋಜನಂ ಚ ಸುರೈರಿಹ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೮॥

ಶಿವಮಾರ್ಗಮಾರ್ಜನಂ ಚ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೫೯॥

ಶಿವಮಾರ್ಗೇ ಕಂಟಕಾನಾಂ ನ ಕೃತಂ ಚಾನಿವಾರಣಂ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೬೦॥

ಶಿವಾಲಯಾಮಾರ್ಜನಂ ಚ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೬೧॥

ಶಿವಾಲಯಾಪರಿಷ್ಕಾರೋ ನ ಕೃತಃ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೬೨॥

ನಿತ್ಯವೂ ದೇವತೆಗಳು ಶಿವನಿಗೆ ನೈವೇದ್ಯಮಾಡಿದ ಪದಾರ್ಥಗಳನ್ನೇ ಭೋಜನಮಾಡುತ್ತಿರುವರು. ಒಂದು ದಿನವೂ ಮರೆತಿಲ್ಲ. ಇಷ್ಟಾದರೂ ಈ ದೇವತೆಗಳಿಗೆ ಯಾತನೆಯು ತಪ್ಪಿಲ್ಲವಲ್ಲ! ॥೫೮॥

ಪರಶಿವನು ಸಂಚರಿಸುವ ಮಾರ್ಗವನ್ನು ಪ್ರತಿನಿತ್ಯವೂ ಗುಡಿಸಿ ಶುದ್ಧಿ ಮಾಡುವುದನ್ನೂ ದೇವತೆಗಳು ತಪ್ಪಿಸಿಲ್ಲ. ಇಷ್ಟಾದರೂ ದೇವತೆಗಳಿಗೆ ಈ ಬಂಧನ ರೂಪವಾದ ಹಿಂಸೆಯು ತಪ್ಪಿಲ್ಲವಲ್ಲ! ॥೫೯॥

ಶಿವನು ಸಂಚರಿಸುವ ಮಾರ್ಗದಲ್ಲಿ ಬಿದ್ದಿರುವ ಮುಳ್ಳುಗಳನ್ನು ತೆಗೆದು ಹಾಕುತ್ತಾ, ದೇವತೆಗಳು ಎಚ್ಚರಿಕೆಯಿಂದ ಮಾರ್ಗವನ್ನು ಶೋಧಿಸುತ್ತಿರುವರು. ಅಷ್ಟಾದರೂ ಶಿವಾನುಗ್ರಹವು ನಮಗೆ ಒದಗಿಲ್ಲವೇ! ॥೬೦॥

ಶಿವದೇವಾಲಯಗಳಲ್ಲಿ ಗುಡಿಸುವುದು ಮತ್ತು ಸಾರಿಸುವುದು ಮುಂತಾದವುಗಳನ್ನು ತಪ್ಪದೇ ದೇವತೆಗಳು ನಡೆಸುತ್ತಿರುವರು. ಎಂದಿಗೂ ಮರೆತಿಲ್ಲ. ॥೬೧॥

ರಂಗವಲ್ಲೀ, ಹಸೆ ಮತ್ತು ಇತರ ಚಿತ್ರಗಳು ಇವುಗಳಿಂದ ಶಿವದೇವಾಲಯಗಳಲ್ಲಿ ಅಲಂಕಾರಮಾಡುವುದನ್ನು ದೇವತೆಗಳು ಎಂದೂ ತಪ್ಪಿಸಿಲ್ಲ. ಇಷ್ಟಾದರೂ ಈ ದೇವತೆಗಳಿಗೆ ಸಂಕಟವು ತಪ್ಪಿಲ್ಲ. ॥೬೨॥

ಶಿವದೀಪಾಪರಿಷ್ಕಾರೋ ನ ಕೃತಃ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮಪೀದೃಶೀ ॥೬೩॥

ಶಿವನೀರಾಜನಾದಾನಂ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮಪೀದೃಶೀ ॥೬೪॥

ಶಿವಧೂಪಾನರ್ಪಣಂ ಚ ನ ಕೃತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮಪೀದೃಶೀ ॥೬೫॥

ಶಿವಾನಿವೇದಿತಾನ್ನಾನಿ ನ ಭುಕ್ತಾನಿ ಸುರೈಃ ಸದಾ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮಪೀದೃಶೀ ॥೬೬॥

ಶಿವಾನಿವೇದಿತಂ ನೀರಂ ನ ಪೀತಂ ಸರ್ವಥಾ ಸುರೈಃ ।
ತಥಾಪಿ ದುರವಸ್ಥೇಯಂ ತ್ರಿದಶಾನಾಮಪೀದೃಶೀ ॥೬೭॥

ಶಿವನಿಗೋಸ್ಕರ ಭಕ್ತಿಪೂರ್ವಕವಾಗಿ ಹತ್ತಿಸುವ ದೀಪಗಳ ರಚನೆಯಲ್ಲಿ ಯಾವ ರೀತಿಯಿಂದಲೂ ವ್ಯತ್ಯಾಸ ನಡೆದಿಲ್ಲ. ಹೀಗಾದರೂ ದೇವತೆಗಳಿಂದ ನಮಗೆ ಈ ಭಯವೊದಗಿದೆಯಲ್ಲವೆ ! ॥೬೩॥

ಪರಶಿವನನ್ನುದ್ದೇಶಿಸಿ ಆಚರಿಸುವ ಮಂಗಳಾರತಿಯ ವಿಷಯದಲ್ಲಿಯೂ ನಾವು ಸರಿಯಾಗಿಯೇ ನಡೆಯುತ್ತಿರುವೆವು. ಇದರಲ್ಲಿ ಸ್ವಲ್ಪವೂ ನಮಗೆ ನ್ಯೂನಾತಿರೇಕಗಳು ತೋರವು. ಇಷ್ಟಾದರೂ ನಮಗೀದುರವಸ್ಥೆಯುಂಟಾಗಿರುವುದು. ॥೬೪॥

ಶಿವನಿಗೆ ಸಮರ್ಪಿಸುವ ಧೂಪಗಳ ವಿಷಯದಲ್ಲಿಯೂ ಸರ್ವಥಾ ನಮ್ಮಿಂದ ವ್ಯತ್ಯಾಸ ನಡೆದಿಲ್ಲ. ಇಷ್ಟಾದರೂ ನಮಗೆ ಶಾಂತಿಯು ದೊರೆತಿಲ್ಲ. ॥೬೫॥

ಪರಶಿವನಿಗೆ ನಿವೇದನಮಾಡದೇ ಯಾವವಿಧವಾದ ಅನ್ನಗಳನ್ನೂ ದೇವತೆಗಳು ಭೋಜನಮಾಡಿಲ್ಲ. ಹೀಗಾದರೂ ದೇವತೆಗಳಾದ ನಮಗೆ ಈ ದುರವಸ್ಥೆಯೇ ? ॥೬೬॥

ಶಿವನಿಗೆ ನಿವೇದನಮಾಡದೇ ಕೇವಲ ಜಲವನ್ನು ಸಹ ಈ ದೇವತೆಗಳು ಪಾನಮಾಡಿಲ್ಲ. ಹಾಗಾದರೂ ನಮಗೆ ಈ ಕಷ್ಟವೇ ? ॥೬೭॥

ಶಿವಾನಿವೇದಿತಂ ವಸ್ತ್ರಂ ನೋಪಭೋಗಾಯ ಕಲ್ಪಿತಂ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೬೮॥

ಶಿವಾನಿವೇದಿತಂ ಸೌಖ್ಯಂ ನೋಪಭೋಗಾಯ ಕಲ್ಪಿತಂ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೬೯॥

ರಂಭಾಸಂಭೋಗಕಾಲೇಽಪಿ ಶಿವವಿಸ್ಮರಣಂ ನ ನಃ।
ತಥಾಪಿ ದುರವಸ್ಥೇಯಂ ತ್ರಿದಶಾನಾಮುಪೀದೃಶೀ ॥೭೦॥

ಯಥಾಪರಾಧಮಸ್ಮಾಕಂ ವಿಧೇಯಮಪಿ ಶಾಸನಂ।
ಮಹೇಶಾನಂ ನ ಜಾನೀಮೋ ಮಹೇಶಾನಸ್ತ್ವಮೇವ ನಃ ॥೭೧॥

ಆರ್ತಾರ್ತಿಧ್ವಾಂತಹರಣೇ ಕರುಣಾತರಣಿಃ ಕ್ಷಣಂ।
ತರುಣೋ ವಾ ಸ್ತ್ವತರುಣೋ ದಕ್ಷೋ ದಕ್ಷಹರಪ್ರಿಯಃ ॥೭೨॥

ದೇವತೆಗಳು ಮೊದಲು ಶಿವನಿಗೆ ಸಮರ್ಪಿಸದೇ ಯಾವ ವಸ್ತ್ರವನ್ನೂ ತಾವು ಧಾರಣೆಮಾಡುತ್ತಿಲ್ಲ. ಹಾಗಾದರೂ ನಮಗೆ ಈ ದುರವಸ್ಥೆಯೇರ್ಪಟ್ಟಿದೆ.॥೬೮॥

ತಾವು ಅಪೇಕ್ಷಿಸುವ ಸಕಲ ಸುಖಸಂಪತ್ತುಗಳನ್ನೂ ಮೊದಲು ಶಿವನಿಗೆ ಸಮರ್ಪಿಸಿ ಅನಂತರ ತಾವು ಅನುಭವಿಸುವುದು ಈ ದೇವತೆಗಳಿಗೆ ಜನ್ಮಸಿದ್ಧ ವಾಗಿರುವುದು. ಇದರಲ್ಲಿ ವ್ಯತ್ಯಾಸವೇನೂ ನಡೆದಂತೆ ತೋರುವುದಿಲ್ಲ. ಹೀಗಾದರೂ ಈ ದೇವತೆಗಳಿಗೆ ಇಂತಹ ದುರವಸ್ಥೆಯೇಕೋ ತಿಳಿಯದು. ॥೬೯॥

ಈ ದೇವತೆಗಳು ರಂಭೆಯೊಡನೆ ಸಂಭೋಗ ಸುಖವನ್ನನುಭವಿಸುತ್ತಿರುವ ಸಮಯದಲ್ಲಿಯೂ ತಾವು ಶಿವನಾಮಸ್ಮರಣೆಯನ್ನು ಮರೆತಿಲ್ಲ. ಹಾಗಾದರೂ ನಮಗೆ ಕಷ್ಟವು ತಪ್ಪಿಲ್ಲ. ॥೭೦॥

ನಮ್ಮ ಅಪರಾಧವೇನಿದ್ದರೂ ಅದನ್ನು ವಿಚಾರಿಸಿ ಸರಿಯಾದ ಶಿಕ್ಷೆಮಾಡಲು ನೀನೇ ನಮ್ಮಪಾಲಿಗೆ ಮಹೇಶ್ವರನಾಗಿರುವೆ. ನಾವು ಸಾಕ್ಷಾನ್ಮಹೇಶ್ವರನನ್ನು ದರ್ಶನ ಮಾಡಲು ಅಸಮರ್ಥರಾಗಿರುವೆವು. ॥೭೧॥

ದುಃಖದಿಂದ ಪೀಡಿತರಾಗಿರುವ ನಮ್ಮನ್ನು ಆ ದುಃಖಮಯವಾದ ಅಂಧ ಕಾರದಿಂದ ಬಿಡುಗಡೆಮಾಡಲು, ಕ್ಷಣಕಾಲ ಕರುಣಾಮಯನಾದ ತರುಣಿಯಂತೆ (ಸೂರ್ಯನಂತೆ) ಪ್ರಕಾಶಿಸುತ್ತಿರುವನಾಗು. ಓ ನಂದಿಕೇಶ್ವರನೇ ನೀನು ವಯಸ್ಸಿನಲ್ಲಿ

ಇತಿ ದೇವವಚಃ ಶ್ರುತ್ವಾ ನಂದಿಕೇಶಃ ಕೃಪಾನಿಧಿಃ ।
ತದ್ದುರ್ದಶಾಪಹರಣಂ ಚಕಾರ ತದನಂತರಂ ॥೭೩॥

ತತಃ ಸಿಂಹಾಸನಾರೂಢೋ ವಿಮಾನಾದವತೀರ್ಯ ಸಃ ।
ಸುರೈರಾರಾಧಿತೋ ನಂದೀ ತಾನುವಾಚ ಯಥೋಚಿತಂ ॥೭೪॥

ಅಪರಾಧೋ ಯಮೇನಾದ್ಯ ಯಃ ಕೃತಸ್ತೇನ ಜೀವನಂ ।
ಅಸಂಭಾವಿತಮೇವೇತಿ ವಿಜ್ಞೇಯಮಧುನಾ ಸುರಾಃ ॥೭೫॥

ನ ಕಾಲಮಾತ್ರಪ್ರಲಯೋ ಭವತಾಮಪಿ ತದ್ವಶಾತ್ ।
ಸಂಭಾವಿತೋಽತ್ರ ಪ್ರಲಯಃ ಸ ದೈವಾದೇಶತೋಽಭವತ್ ॥೭೬॥

ನಮಗಿಂತ ತರುಣನೇ ಆಗಿರು. ಅಥವಾ ಹಿರಿಯನೇ ಆಗಿರು. ದಕ್ಷಬ್ರಹ್ಮನನ್ನು ಶಿಕ್ಷೆಮಾಡಿದ ಮಹೇಶ್ವರನಿಗೆ ಪ್ರೀತಿಪಾತ್ರನಾದ ನೀನೇ ನಮ್ಮನ್ನೂ ರಕ್ಷಿಸಲು ಸಮರ್ಥನಾಗಿರುವೆ. ನೀನಲ್ಲದೇ ನಮಗೆ ಬೇರೆಯಾರೂ ಶರಣರಿಲ್ಲ. ಪ್ರಭೋ, ದಯವಿಟ್ಟು ನಮಗುಂಟಾಗಿರುವ ವಿಪತ್ತನ್ನು ಹೋಗಲಾಡಿಸಿ ನಮ್ಮನ್ನು ಸಲಹು ಎಂದು ದೇವತೆಗಳು ನಂದಿಕೇಶ್ವರನನ್ನು ಪ್ರಾರ್ಥಿಸಿಕೊಂಡರು. ||೭೨||

ಹೀಗೆ ದೇವತೆಗಳು ವಿನಯದಿಂದ ಪ್ರಾರ್ಥಿಸಿದುದನ್ನು ಕೇಳಿ ದಯಾಶಾಲಿಯಾದ ನಂದಿಕೇಶ್ವರನು, ಕೂಡಲೇ ಆ ದೇವತೆಗಳಿಗುಂಟಾಗಿದ್ದ ದುರ್ದಶೆಯನ್ನು (ಶಿವಗಣಗಳಿಂದುಂಟಾಗಿದ್ದ ಪಾಶಾದಿಬಂಧನ ಮುಂತಾದವುಗಳನ್ನು) ಹೋಗಲಾಡಿಸಿದನು. ||೭೩||

ಹೀಗೆ ದೇವತೆಗಳ ಬಂಧನವನ್ನೆಲ್ಲಾ ಬಿಡಿಸಿ ಅನಂತರ ವಿಮಾನದಿಂದಿಳಿದು ನಂದಿಕೇಶ್ವರನು ಸಿಂಹಾಸನವನ್ನೇರಲು, ಆಗ ದೇವತೆಗಳೆಲ್ಲರೂ ನಂದಿಕೇಶ್ವರನನ್ನು ಭಕ್ತಿಪೂರ್ವಕವಾಗಿ ಪೂಜಿಸಿದರು. ಇದರಿಂದ ಸಂತುಷ್ಟನಾದ ನಂದಿಯು ದೇವತೆಗಳನ್ನು ಕುರಿತು ಸಮಯೋಚಿತವಾದ ವಾಕ್ಯಗಳಿಂದ ಹೀಗೆಂದನು. ||೭೪||

ಎಲೈ ದೇವತೆಗಳಿರಾ! ಈಗ ಈ ಯಮನು ಮಾಡಿದ ಅಪರಾಧದಿಂದ ಯಮನಿಗೆ ಜೀವಿಕೆಯೇ ಮುಂದೆ ಸಾಗಲಾರದೆಂದು ತಿಳಿಯಿರಿ. ||೭೫||

ಈ ಯಮನ ದೆಸೆಯಿಂದ ನಿಮ್ಮಗಳಿಗೂ ಕಾಲಪ್ರಳಯವೇ ಮಹಾದೇವನ ಅಪ್ಪಣೆಯಿಂದ ಉಂಟಾಗಿದ್ದಿತು. (ಅಂದರೆ ಯಮನನ್ನು ವಹಿಸಿಕೊಂಡು ಬಂದ

ಉಗ್ರೋಽಪ್ಯನುಗ್ರ ಏವಾಸೀತ್ಪ್ರಾರ್ಥನಾವಚನೈರ್ಮಮ ।
ಅನ್ಯಥಾ ಸುರವರ್ಗಸ್ಯ ಜಾತಸ್ಯ ಪ್ರಲಯಃ ಖಲು ॥೭೭॥

ಭವದ್ಭಿಃ ಸಹ ಯಾ ಮೈತ್ರೀ ಮಮ ಯಾ ಸಾ ಪರಂ ಸುರಾಃ ।
ಭವತಾಂ ರಕ್ಷಣಾಯಾಸೀದನ್ಯಥಾ ತತ್ಕಥಂ ಭವೇತ್ ॥೭೮॥

ಯಮಸ್ಯಾಪ್ಯಪರಾಧೋಽತ್ರ ವಸ್ತುತೋ ನಾಸ್ತಿ ಯದ್ಯಪಿ ।
ತಥಾಪಿ ದೂತದೌರಾತ್ಮ್ಯಂ ಯಮನಾಶಾಯ ಕಲ್ಪ್ಯತೇ ॥೭೯॥

ನ ಶಿಕ್ಷಯತಿ ಕಾಲೋಽಯಂ ಕಾಲೇಕಾಲೇ ಸ್ವಕಾನ್ಮುಹುಃ ।
ದೂತಾನತಃ ಶಿಕ್ಷಯೇತಿ ಸ ವಕ್ತುಮಿವ ಶಿಕ್ಷಿತಃ ॥೮೦॥

ನಿಮ್ಮಗಳನ್ನೂ ಸಂಹಾರಮಾಡಬೇಕೆಂದು ಪರಮೇಶ್ವರನು ಆಜ್ಞೆಮಾಡಿದ್ದನು, ॥೭೬॥

ಆ ಸಮಯದಲ್ಲಿ ಮಹಾದೇವನು ತುಂಬಾ ಉಗ್ರನಾಗಿದ್ದರೂ, ನಿಮ್ಮಪರವಾಗಿ ನಾನು ಪ್ರಾರ್ಥಿಸಿದುದರಿಂದ, ಶಂಕರನು ಶಾಂತನಾದನು. ಅಲ್ಲದೇ ಮಹೇಶ್ವರನು ಶಾಂತನಾಗದೇ ಮೊದಲಿನಂತೆಯೇ ಕುಪಿತನೇ ಆಗಿದ್ದಪಕ್ಷದಲ್ಲಿ ದೇವತೆಗಳಾದ ನಿಮ್ಮ ಸಮೂಹಕ್ಕೆಲ್ಲಾ ಪ್ರಳಯವೇ ಈ ದಿನ ಸಂಭವಿಸುತ್ತಿದ್ದಿತು. ॥೭೭॥

ನನಗೆ ನಿಮ್ಮಲ್ಲಿರುವ ಸ್ನೇಹವು ಮಾತ್ರ ಈಗ ನಿಮ್ಮಗಳ ರಕ್ಷಣೆಗೆ ಕಾರಣವಾಯಿತು. ಹೀಗೆ ಸ್ನೇಹವಿಲ್ಲದೇ ಏನಾದರೂ ವಿರೋಧವೇ ಇದ್ದಿದ್ದರೇ ಎಂದಿಗೂ ನಿಮಗೆ ಉಳಿಗಾಲವಿರಲಿಲ್ಲವೆಂದು ತಿಳಿಯಿರಿ. ॥೭೮॥

ಈ ವಿಷಯದಲ್ಲಿ ನಿಶ್ಚಯವಾಗಿ ಯಮನ ತಪ್ಪು ಇಲ್ಲವೆಂದೇ ಹೇಳಬೇಕು. ಆದರೆ ಆ ಯಮನ ಭಟರು ಮಾಡಿರುವ ದೌರ್ಜನ್ಯವು ಈ ರೀತಿ ಯಮನ ಶಿಕ್ಷೆಗೆ ಕಾರಣವಾಯಿತು. ॥೭೯॥

ಈಗ ಶಿವಕಿಂಕರರು ಯಮನನ್ನು ತೊಂದರೆಪಡಿಸಿದುದು, ಆ ಯಮನು ತನ್ನ ದೂತರನ್ನು ಸರಿಯಾಗಿ ಕಾಲಕಾಲಗಳಲ್ಲಿ ಶಿಕ್ಷಿಸಬೇಕೆಂದು ತಿಳಿಸುವುದಕ್ಕಾಗಿಯೇ. ಅದನ್ನು ಈ ರೀತಿಯಾಗಿ ತಿಳಿಸಿದೆ. ಇನ್ನುಮುಂದೆ ಯಮನು ತನ್ನ ಭಟರನ್ನು ಸರಿಯಾಗಿ ಶಿಕ್ಷಿಸಿ ಈ ರೀತಿ ಯಾವಾಗಲೂ ಮಾಡದಂತೆ ನೋಡಿಕೊಳ್ಳಬೇಕು. ಎಂದು ಹೇಳುವುದಕ್ಕೋಸ್ಕರವೇ ಈ ರೀತಿ ದಂಡಿಸಲ್ಪಟ್ಟಿದೆ. ॥೮೦॥

ಇತ್ಯುಕ್ತವಂತಂ ತಂ ದೇವಾಃ ಕಾಲೇನಾಪಿ ಸಮನ್ವಿತಾಃ ।
ಪ್ರಣತಾಃ ಪುನರೂಚುಸ್ತೇ ವಿನಯಾನತಕಂಧರಾಃ ॥೬೧॥

ಆನೀತಸ್ತಾವದಧುನಾ ಸ ತಾವನ್ನೈವ ಶಿಕ್ಷಿತಃ ।
ನ ಹತಃ ಪೀಡಿತೋ ವಾಪಿ ವಿಚಾರಃ ಕ್ರಿಯತೇಽಧುನಾ ॥೬೨॥

ಅವಿಚಾರ್ಯ ಕಥಂ ಕರ್ಮ ಕರ್ತವ್ಯಮಧುನಾ ಸುರೈಃ ।
ಅಸರ್ವಜ್ಞಾಸ್ವಭಾವೇನ ಸರ್ವಜ್ಞಃ ಕೇವಲಂ ಶಿವಃ ॥೬೩॥

ವಿನಾ ವಿಚಾರಂ ಯದ್ಯಸ್ಯ ಪೂಜನಂ ಕ್ರಿಯತೇ ತದಾ ।
ಜಾತಃ ಸ್ಯಾದಪರಾಧೋಽಪಿ ನ ಸ್ಯಾದ್ವಾ ತನ್ನ ವಿದ್ಮಹೇ ॥೬೪॥

ನಂದಿಕೇಶ್ವರನು ಈ ರೀತಿ ಹೇಳಿದುದನ್ನು ಕೇಳಿ, ದೇವತೆಗಳೆಲ್ಲರೂ ಯಮನನ್ನೂ ಜತೆಯಲ್ಲಿ ಕರೆದುಕೊಂಡು, ವಿನಯದಿಂದ ತಲೆಬಗ್ಗಿಸಿ ನಂದಿಕೇಶ್ವರನಿಗೆ ನಮಸ್ಕಾರಮಾಡಿ, ಈ ರೀತಿ ಪ್ರಾರ್ಥಿಸಿ ಕೊಂಡರು. ||೬೧||

ನಂದೀಶ್ವರನೇ, ಆ ಯಮನನ್ನು ಈಗ ಕರೆದುಕೊಂಡು ಬಂದಿರುವೆವು. ಇವನಿಗೆ ಯಾವ ಶಿಕ್ಷೆಯೂ ಅಥವಾ ಪೀಡೆಯೂ ಸಹ ಉಂಟಾಗಿಲ್ಲ. ಇವನ ವಿಚಾರದಲ್ಲಿ ಈಗ ವಿಚಾರಮಾಡಲ್ಪಡಲಿ. ||೬೨||

ನಾವು ಸರ್ವಜ್ಞರಾಗದೇ ಇರುವದರಿಂದ ಯಾವುದನ್ನೂ ವಿಚಾರಮಾಡದೇ ಕೆಲಸಮಾಡಲು ಹೇಗೆ ಸಾಧ್ಯವಾದೀತು ? ಈ ವಿಷಯದಲ್ಲಿ ಸರ್ವಜ್ಞರಾದ ಪರಮೇಶ್ವರನೊಬ್ಬನು ಸಮರ್ಥನೇ ಹೊರತು ನಾವಲ್ಲ. ನಾವು ಅವನ ಆಜ್ಞಾನುವರ್ತಿಗಳು. ||೬೩||

ಯಮನ ಅಪರಾಧವೇನು ಎಂಬುದನ್ನು ವಿಚಾರಣೆಮಾಡದೇ ಮೊದಲಿನಂತೆ ನಾವು ಈ ಯಮನನ್ನು ಪೂಜೆಮಾಡಿದರೆ ಇದರಿಂದ ನಮಗೆ ಅಪರಾಧವುಂಟೋ ಅಥವಾ ಇಲ್ಲವೋ ನಮಗೆ ಗೊತ್ತಿಲ್ಲ. ಆದುದರಿಂದ ಆವಶ್ಯಕವಾದ ವಿಚಾರಣೆ ಮಾಡಿಯೇ ಪೂಜಾದಿಗಳನ್ನು ನಡೆಸುವುದುತ್ತಮವೆಂದು ತೋರುವುದು. ||೬೪||

ಕಿಮಸ್ಯ ಪುಣ್ಯಂ ಪಾಪಂ ವಾ ಪ್ರವೃದ್ಧಂ ತದ್ವಿಚಾರ್ಯ ತು ।
ಪಶ್ಚಾತ್ಕಾರ್ಯಂ ಯಥಾಯೋಗ್ಯಂ ಕರ್ತವ್ಯಮಿತಿ ನಿಶ್ಚಯಃ ॥೮೫॥

ಗಣಾಭ್ಯಾಗಮನೇನಾಯಂ ಜ್ಞಾಯತೇ ಪುಣ್ಯವಾನಿತಿ ।
ತತ್ಪೂರ್ವಂ ತತ್ಕಥಂ ಜ್ಞೇಯಂ ಜ್ಞಾಯತೇ ಸಾಧುನಾಪಿ ತತ್ ॥೮೬॥

ಕಿಮನೇನ ಕೃತಂ ಪುಣ್ಯಂ ಭವದಾಗಮನಕ್ಷಮಂ ।
ನ ದಾನೈರಪಿ ಯಾಗೈರ್ವಾ ಭವದಾಗಮನಂ ಭವೇತ್ ॥೮೭॥

ತುಲಾದಾನಾದಿದಾನಾನಿ ಕೃತಾನಿ ಬಹುಭಿರ್ಮುಹುಃ ।
ತೇಽಪ್ಯಾಗಮ್ಯಾತ್ರ ತಿಷ್ಠಂತಿ ವಿಚಾರಃ ಕ್ರಿಯತೇ ತತಃ ॥೮೮॥

ಈ ಯಮನು ಮಹಾಪರಾಧಮಾಡಿ ಪಾಪಕ್ಕೊಳಗಾಗಿರುವನೋ ಅಥವಾ ಪುಣ್ಯವನ್ನೇ ಅಧಿಕವಾಗಿ ಗಳಿಸಿರುವನೋ ಎಂಬುದನ್ನು ಮೊದಲು ವಿಚಾರಮಾಡಿ, ಅನಂತರ ಅವನ ಯೋಗ್ಯತಾನುಸಾರ ಶಿಕ್ಷೆಯನ್ನು ಮಾಡಬೇಕೆಂದು ನಾವು ನಿಶ್ಚಯಿಸಿರುವೆವು. ||೮೫||

ಶಿವಗಣಗಳೊಡನೆ ತಾವು (ನಂದಿಕೇಶ್ವರನು) ದಯಮಾಡಿಸಿರುವುದರಿಂದಲೇ ಈ ಯಮನು ಪುಣ್ಯಶಾಲಿಯೆಂದು ತಿಳಿಯುತ್ತಿದೆ. ನಿಮ್ಮಾಗಮನಕ್ಕಿಂತಲೂ ಮೊದಲು ಇದು ತಿಳಿಯುವ ಬಗೆ ಹೇಗೆ? ಈಗಲೂ ಸಹ ಸರಿಯಾಗಿ ನಿಶ್ಚಯಿಸಲು ಸಾಧ್ಯವಿಲ್ಲವಾಗಿದೆ. ||೮೬||

"ಪೂಜ್ಯನಾದ ನೀನು ಇಲ್ಲಿಗೆ ಬರುವಷ್ಟು ಪುಣ್ಯವನ್ನು ಈ ಯಮನೇನು ಮಾಡಿದ್ದನೋ ತಿಳಿಯದು." ನಾನಾವಿಧವಾದ ದಾನಗಳಿಂದಲೂ ಯಾಗಗಳಿಂದಲೂ ಸಹ ನಿಮ್ಮಂತಹವರನ್ನು ಬರಮಾಡಿಕೊಳ್ಳಬೇಕು. ಹಾಗಿರುವಾಗ ತಾವಾಗಿಯೇ ನೀವು ಬರುವಷ್ಟು ಪುಣ್ಯವನ್ನೇನು ಮಾಡಿದ್ದನೋ ಈ ಯಮಧರ್ಮನು ನಮಗೆ ತಿಳಿಯದಾಗಿದೆ. ||೮೭||

ತುಲಾದಾನವೇ ಮುಂತಾದ ಶ್ರೇಷ್ಠವಾದ ದಾನಗಳನ್ನು ಅನೇಕವೇಳೆ ಮಾಡಿರುವ ಮಹನೀಯರೂ ಇಲ್ಲಿಗೆ ಬಂದು ನಿಂತಿರುವರು. ಅವರನ್ನು ಅನಂತರ ವಿಚಾರಮಾಡುವೆವು. ||೮೮||

ಯೋಗಾ ಅಶ್ವಮೇಧಾಂತಾಃ ಕೃತಾ ಯೈಸ್ತೇಽಪಿ ಸಂತತಂ ।
ಆಗತ್ಯಾತ್ರ ತು ತಿಷ್ಠಂತಿ ಪಶ್ಚಾತ್ತಾಸ್ಯತ್ತದ್ವಿಚಾರಣಾ ॥೮೯॥

ಅನೇಕಯುಗಪರ್ಯಂತಂ ಯೈಃ ಕೃತಂ ತಪಸಾ ಕೃಶಂ ।
ಶರೀರಂ ತೇ ಸಮಾಗತ್ಯ ತಿಷ್ಠಂತ್ಯೇತಾನ್ವಿಲೋಕಯ ॥೯೦॥

ವಿತ್ತೈರ್ಗೋಕೀಟದಾನಾನಿ ಕೃತಾನಿ ಬಹುಧಾ ಪುರಾ ।
ತಿಷ್ಠಂತ್ಯತ್ರೈವ ತೇ ಸರ್ವೇ ತಾನೇತಾನ್ಪಶ್ಯ ಸತ್ವರಂ ॥೯೧॥

ಯೈರ್ಭೂಪ್ರದಕ್ಷಿಣಂ ಪೂರ್ವಂ ಕೃತಂ ತೈರಪ್ಯನಾಕುಲೈಃ ।
ಸ್ಥೀಯತೇ ಪಶ್ಯ ಪಶ್ಯೈತಾನ್ಕೋಟಿಶೋ ನಂದಿಕೇಶ್ವರ ॥೯೨॥

ಆಯಾಸ್ಯಂತ್ಯಧುನಾ ಧನ್ಯಾ ಧನವೃಷ್ಟಿಪರಾಯಣಾಃ ।
ದೃಷ್ಟವ್ಯಾಸ್ತೇ ತ್ವಯಾ ಸ್ವಾಮಿನ್ಯೇ ತಾನ್ಯದ್ಯಾವಲೋಕಯ ॥೯೩॥

ಅನವರತವೂ ಅಶ್ವಮೇಧದ ಯಾಗವೇಕೊನೆಯಾದ ಸಕಲಯಜ್ಞಗಳನ್ನೂ ಮಾಡಿ ಈ ದೇವಲೋಕವನ್ನು ಹೊಂದಿರುವರನೇಕರು ಇಲ್ಲಿಗೆ ಬಂದು ನೆರೆದಿರುವರು. ಅನಂತರ ಅವರ ವಿಚಾರಣೆ ನಡೆಯಲಿ. ||೮೯||

ಅನೇಕ ಯುಗಗಳವರೆವಿಗೆ ಘೋರವಾದ ತಪಸ್ಸನ್ನಾಚರಿಸಿ ತಮ್ಮ ಶರೀರವನ್ನೆಲ್ಲಾ ಕೃಶಮಾಡಿಕೊಂಡು ಬಳಲಿ ಕೊನೆಗೆ ಈ ಲೋಕವನ್ನು ಪಡೆದಿರುವರನೇಕರು ಇಲ್ಲಿ ಬಂದು ನಿಂತಿರುವರು. ಇವರನ್ನು ನೋಡು ? ||೯೦||

ಇವರು ಗೋವೇ ಮುಂತಾದ ಪ್ರಾಣಿಗಳನ್ನು (ಎಮ್ಮೆ, ಆಡು, ವೃಷಭ, ಗಜ ಮುಂತಾದುವುಗಳನ್ನು) ಹಿಂದಿನ ಜನ್ಮದಲ್ಲಿ ಬಹಳವಾಗಿ ದಾನಮಾಡಿರುವರು. ಈಗ ಅವರ ಮಹಿಮೆಯಿಂದ ಈ ಲೋಕವನ್ನು ಪಡೆದು ಇಲ್ಲಿಗೆ ಬಂದಿರುವರು. ಪ್ರಭೋ, ಜಾಗ್ರತೇ ಇತ್ತ ನೋಡು. ||೯೧||

ಎಲೈ ನಂದಿಕೇಶ್ವರನೇ, ಶಾಂತಮನಸ್ಸಿನಿಂದ ಹಿಂದಿನ ಜನ್ಮದಲ್ಲಿ ಪವಿತ್ರವಾದ ಭೂಪ್ರದಕ್ಷಿಣೆಯನ್ನು ಮಾಡಿರುವ ಕೋಟ್ಯಂತರ ಮನುಷ್ಯರು ಇಗೋ ಮುಂದೆ ಬಂದು ನಿಂತಿರುವರು. ಇವರನ್ನು ನೋಡುವವನಾಗು. ||೯೨||

ದ್ರವ್ಯರೂಪವಾದ ಮಳೆಯನ್ನೇ ಹಿಂದೆ ಜನಗಳಿಗೆ ಉಂಟುಮಾಡಿ (ಅಂದರೆ ಅಪರಿಮಿತವಾದ ದ್ರವ್ಯದಾನಮಾಡಿ) ಧನ್ಯರೆನಿಸಿರುವ ಕೆಲವರು ಈಗ ಬರುತ್ತಿರುವರು. ಸ್ವಾಮಿ! ದಯವಿಟ್ಟು ಅವರ ಕಡೆ ತಮ್ಮ ಗಮನವಿರಲಿ. ||೯೩||

ಅನೇನ ಪ್ರತ್ಯಹಂ ಲಕ್ಷಂ ರತ್ನಾನಾಮೇವ ದೀಯತೇ ।
ಬ್ರಾಹ್ಮಣೇಭ್ಯಃ ಪ್ರಯತ್ನೇನ ತಿಷ್ಠತ್ಯತ್ರಾವಲೋಕಯ ॥೯೪॥

ಅನೇನ ಪ್ರತ್ಯಹಂ ಲಕ್ಷಂ ಗವಾಂ ದತ್ತಂ ಮಹಾತ್ಮನಾ ।
ಅಯಂ ಚ ಸ್ಥಾಪಿತೋಽಸ್ತ್ಯತ್ರ ತದ್ವಿಚಾರೋ ಭವಿಷ್ಯತಿ ॥೯೫॥

ಅನೇನ ಸಸ್ಯಸಂಪೂರ್ಣಾಂ ಮಹೀಂ ದತ್ವಾ ಮುಹುರ್ಮುಹುಃ ।
ಏತಸ್ಯಾಗಮನೇ ಕಾಲೇ ಭೂಯಾನೇವ ಗತಃ ಖಲು ॥೯೬॥

ವನಾನ್ಯನೇನ ಬಹುಧಾ ಸವನಾನಿ ಕೃತಾನ್ಯಪಿ ।
ಏತಾದೃಶಾಃ ಕೋಟಿಶೋಽಪಿ ತಿಷ್ಠಂತ್ಯತ್ರ ಯಮಾಲಯೇ ॥೯೭॥

ತಟಾಕಾಃ ಕಾರಿತಾಸ್ತೇನ ಕೋಟಿಶಃ ಸಾಗರೋಪಮಾಃ ।
ಏತಾದೃಶಾಃ ಕೋಟಿಶೋಽಪಿ ತಿಷ್ಠಂತ್ಯತ್ರ ಯಮಾಲಯೇ ॥೯೮॥

ಪ್ರಭೋ ! ನಂದಿಕೇಶ್ವರನೇ, ಇಗೋ, ಇಲ್ಲಿ ಮುಂದೆ ನಿಂತಿರುವ ಮಹಾನುಭಾವನು ಪ್ರತಿನಿತ್ಯವೂ ಬ್ರಾಹ್ಮಣೋತ್ತಮರಿಗೆ ಲಕ್ಷ ಸಂಖ್ಯೆಯಲ್ಲಿ ರತ್ನಗಳನ್ನು ದಾನಮಾಡುತ್ತಿರುವನು. ಇತ್ತ ನೋಡು. ||೯೪||

ಸ್ವಾಮಿಯೇ, ಈ ಮಹಾತ್ಮನು ನಿತ್ಯವೂ ಒಂದು ಲಕ್ಷ ಗೋದಾನಮಾಡಿರುವನು. ಆದುದರಿಂದ ಇವನನ್ನು ಈ ಸ್ಥಾನದಲ್ಲಿ ನಿಲ್ಲಿಸಿದೆ, ಇವನ ವಿಚಾರಣೆ ಮುಂದಾಗಲಿ ? ||೯೫||

ಸ್ವಾಮಿ ! ಈ ಮಹಾಮಹಿಮನು ಸಸ್ಯಗಳಿಂದ ಸಂಪೂರ್ಣವಾಗಿ ಶೋಭಿಸುತ್ತಿರುವ ಭೂದಾನವನ್ನು ಅನೇಕವೇಳೆ ಮಾಡಿರುವನು. ಇವನು ಈ ದೇವಲೋಕವನ್ನು ಹೊಂದಿ ಬಹುಕಾಲವಾಯಿತು. ||೯೬||

ಪ್ರಭೋ ! ಇವನು ಅನೇಕ ವನಗಳನ್ನು ನಿರ್ಮಾಣಮಾಡಿಸಿರುವನು. ಅಲ್ಲದೇ ನಾನಾ ಯಾಗಗಳನ್ನೂ ನಡೆಸಿರುವನು. ನಂದಿಕೇಶ್ವರನೇ, ಇಂತಹ ಮಹಾನುಭಾವರು ಈ ಯಮಾಲಯದಲ್ಲಿ (ಯಮಲೋಕದಲ್ಲಿ) ಕೋಟ್ಯಂತರ ಜನಗಳಿರುವರು. ||೯೭||

ಸಾಗರಗಳಂತೆ ವಿಶಾಲವೂ ಗಭೀರವೂ ಆಗಿರುವ ಕೋಟ್ಯಂತರ ತಟಾಕಗಳನ್ನು (ಕೆರೆಗಳನ್ನು) ತೋಡಿಸಿ ಕಟ್ಟಿಸಿರುವ ಮಹಾಪುರುಷರು ಈ ಯಮನ ಪಟ್ಟಣದಲ್ಲಿ ಅನೇಕಮಂದಿ ಇರುವರು. ||೯೮||

ಅತ್ಯೂಷರೇ ಮಹಾರಣ್ಯೇ ಪ್ರಪಾಸ್ತೈಃ ಕಾರಿತಾ ಮುಹುಃ ।
ಮಹಾಗ್ರೀಷ್ಮೇಽಪಿ ತಿಷ್ಠಂತಿ ಪಶ್ಯೈತಾನ್ಯಮಮಂದಿರೇ ॥೯೯॥

ಅನೇನ ಮೇರುತುಲ್ಯಾನಿ ದತ್ತಾನಿ ವಸನಾನ್ಯಪಿ ।
ದರಿದ್ರೇಭ್ಯೋ ವಿಶೇಷೇಣ ಪಶ್ಯ ತಂ ಯಮಮಂದಿರೇ ॥೧೦೦॥

ಗೋಃಕ್ಷೀರಕುಂಭಾಃ ಶತಶೋ ದತ್ತಾಸ್ತೇನ ಪ್ರಯತ್ನತಃ ।
ಪ್ರತ್ಯಹಂ ವಿಪ್ರವರ್ಗೇಭ್ಯಃ ಪಶ್ಯ ಪಶ್ಯ ಯಮಾಲಯೇ ॥೧೦೧॥

ಅನ್ನಪ್ರದಾನೈರೇತೇನ ಕೋಟಿಶಸ್ತೋಷಿತಾ ದ್ವಿಜಾಃ ।
ಏತಾದೃಶಾ ಮುಹುಃ ಪಶ್ಯ ಕೋಟಿಶೋ ಯಮಮಂದಿರೇ ॥೧೦೨॥

ಕನ್ಯಾದಾನೈರ್ವಿನೀತಸ್ತೈಃ ಕಾಲಃ ಕನಕಸಂಯುತೈಃ ।
ಏತಾದೃಶಾಃ ಕೋಟಿಶೋಽಪಿ ಸಂತಿ ಪಶ್ಯ ಯಮಾಲಯೇ ॥೧೦೩॥

ಇವರು ದೊಡ್ಡ ಮರಳುಕಾಡು ಅಥವಾ ಏನೂ ಬೆಳೆಯದ ಮರುಭೂಮಿ, ಇವುಗಳಲ್ಲಿಯೂ, ಘೋರವಾದ ಕಾಡುಗಳಲ್ಲಿಯೂ ಅರವಟ್ಟಿಗೆಗಳನ್ನು ಗ್ರೀಷ್ಮ ಋತುವಿನಲ್ಲಿ ಇಡಿಸಿ ಮಹಾಪುಣ್ಯಶಾಲಿಗಳಾಗಿರುವರು. ಇವರು ಇಗೋ, ಈ ಯಮನ ಪಟ್ಟಣದಲ್ಲಿ ಈ ಸ್ಥಾನದಲ್ಲಿರುವರು. ॥೯೯॥

ಈ ಮಹಾಮಹಿಮನು ಮೇರುಪರ್ವತಕ್ಕೆ ಸಮಾನವಾದ ವಸ್ತ್ರರಾಶಿಗಳನ್ನು ವಿಶೇಷವಾಗಿ ದರಿದ್ರರಿಗೆ ದಾನಮಾಡಿರುವನು. ಪ್ರಭೋ ! ಇಗೋ ಇವನಿಗೆ ಈ ಯಮಲೋಕದಲ್ಲಿ ಈ ಸ್ಥಾನವೇರ್ಪಟ್ಟಿದೆ ನೋಡು ? ॥೧೦೦॥

ಈ ಮಹಾಪುರುಷನು ಪ್ರತಿದಿನವೂ ಹಸುವಿನ ಹಾಲಿನಿಂದ ತುಂಬಿದ ನೂರಾರು ಕುಂಭಗಳನ್ನು ವಿಪ್ರರ ಸಮೂಹಕ್ಕೆ ದಾನಮಾಡಿರುವನು. ಇಗೋ ಇತ್ತ ನೋಡು ! ಇವನಿಗೆ ಈ ಯಮಲೋಕದಲ್ಲಿ ಇಂತಹ ಸ್ಥಾನವನ್ನು ಕೊಟ್ಟಿದೆ. ॥೧೦೧॥

ಅವನು ಕೋಟ್ಯಂತರ ಬ್ರಾಹ್ಮಣರಿಗೆ ಅನ್ನಭೋಜನಮಾಡಿಸಿ, ತೃಪ್ತಿಪಡಿಸಿರುವನು. ಇವನನ್ನು ನೋಡು ? ಪ್ರಭೋ, ಇಂತಹ ಕೋಟ್ಯಂತರ ಜನಗಳು ಈ ಯಮಲೋಕದಲ್ಲಿರುವರು. ॥೧೦೨॥

ಇತ್ತನೋಡು ! ಇವರು ಸುವರ್ಣಸಮೇತವಾಗಿ ಕನ್ಯಾದಾನಮಾಡಿ ತಮ್ಮ ಕಾಲವನ್ನು ಕಳೆದಿರುವರು. ಪ್ರಭೋ, ಇಂತಹ ಮಹಾಪುರುಷರನೇಕರು ಈ ಯಮನ ಲೋಕದಲ್ಲಿ ವಾಸಿಸುತ್ತಿರುವರು. ॥೧೦೩॥

ಆವೃತ್ತಾನಿ ಮುಹುಸ್ತೈಸ್ತು ಮಹಾದಾನಾನಿ ಕೋಟಿಶಃ ।
ನ ತೇಷಾಂ ಗಣನಾಪ್ಯಸ್ತಿ ಸರ್ವಥಾ ಯಮಮಂದಿರೇ ॥೧೦೪॥

ಗೋಕೋಟಿಪಾನಯೋಗ್ಯಾನಿ ಕುಲ್ಯಾನ್ಯಪಿ ಕೃತಾನಿ ತೈಃ ।
ಪಶ್ಯ ತಾನ್ನಂದಿಕೇಶಾದ್ಯ ಯಮಮಂದಿರಸಂಸ್ಥಿತಾನ್ ॥೧೦೫॥

ರತ್ನಪ್ರಾಸಾದದಾನಾನಿ ತೈಃ ಕೃತಾನ್ಯೇವ ಕೋಟಿಶಃ ।
ತೇಷಾಂ ನ ಗಣನಾಪ್ಯಾಪಿ ಪಶ್ಯ ಪಶ್ಯ ಯಮಾಲಯೇ ॥೧೦೬॥

ಕೃತಾನಿ ತೈಃ ಕೋಟಿಶೋಽಪಿ ಸರಾಂಸಿ ವಿಪುಲಾನ್ಯಪಿ ।
ವಾಪ್ಯಃ ಕೃತಾಶ್ಚ ಸಂಪೂರ್ಣಾಃ ಜಲೈಃ ಪಶ್ಯ ಯಮಾಂತಿಕೇ॥೧೦೭॥

ಪರ್ಯಂಕಶಯ್ಯಾದಾನಾನಿ ಕೋಟಿಶಸ್ತೈಃ ಕೃತಾನ್ಯಪಿ ।
ಪಶ್ಯ ತಾನ್ಪತಿತಾನ್ದೂರೇ ಛತ್ರದಾನಪರಾನಪಿ ॥೧೦೮॥

ನಂದಿಕೇಶ್ವರನೇ, ಇಲ್ಲಿ ನೋಡು. ಇವರು ಕೋಟ್ಯಂತರ ಮಹಾದಾನಗಳನ್ನು ಮಾಡಿರುವರು. ಇಂತಹ ಜನಗಳು ಈ ಯಮಲೋಕದಲ್ಲಿ ಅಸಂಖ್ಯಾತರಾಗಿರುವರು. ||೧೦೪||

ಕೋಟ್ಯಂತರ ಗೋವುಗಳಿಗೆ ಪಾನಮಾಡಲು ಯೋಗ್ಯವಾದ ಸಣ್ಣ ಸಣ್ಣ ಸರೋವರಗಳನ್ನು ಇಗೋ ಇವರು ಮಾಡಿಸಿ, ಈ ಸ್ಥಾನವನ್ನೈದಿರುವರು. ಓ ನಂದಿಕೇಶ್ವರಪ್ರಭೋ, ಇಲ್ಲಿ ಯಮಮಂದಿರದಲ್ಲಿರುವ ಇವರನ್ನು ನೋಡು! ||೧೦೫||

ರತ್ನಮಯವಾದ ಉಪರಿಗೆಯ ಮನೆಗಳನ್ನು ಅನೇಕವಾಗಿ ದಾನಮಾಡಿರುವ ಈ ಮಹಾಪುರುಷರನ್ನು ನೋಡು. ಪ್ರಭೋ! ಇವರನ್ನು ಎಣಿಸುವುದೇ ಈ ಯಮಮಂದಿರದಲ್ಲಿ ಅಸಾಧ್ಯವಾಗಿದೆ. ||೧೦೬||

ಎಲೈ ನಂದಿಕೇಶ್ವರಸ್ವಾಮಿಯೇ, ಪರಿಪೂರ್ಣವಾದ ನೀರುಳ್ಳ ಕೋಟ್ಯಂತರ ವಿಶಾಲವಾದ ಸರೋವರಗಳನ್ನೂ ಮತ್ತು ಬಾವಿಗಳನ್ನೂ ತೋಡಿಸಿರುವ ಮಹಾಪುರುಷರು ಇಗೋ ಯಮನ ಸಮೀಪದಲ್ಲಿ ನಿಂತಿರುವರು ನೋಡು. ||೧೦೭||

ದೇವ! ಮಂಚ ಮತ್ತು ಶಯ್ಯಾದಾನಗಳನ್ನು ಇವರು ಅನೇಕವಾಗಿ ಮಾಡಿರುವರು. ಪ್ರಭೋ ಇವರನ್ನು ನೋಡು! ಛತ್ರಧಾನಮಾಡುವುದರಲ್ಲೇ ಸದಾ ನಿರತರಾಗಿದ್ದ ಇವರು ದೂರದಲ್ಲಿ ನಿಂತಿರುವರು. ||೧೦೮||

ಧನೈರ್ಧಾನ್ಯೈಶ್ಚ ಗೋವೃಂದೈರ್ಗೃಹೋಪಕರಣೈಃ ಸಹ ।
ಗೃಹಾಸ್ತು ಕೋಟಿಶೋ ದತ್ತಾಸ್ತೈಸ್ತಾನತ್ರ ವಿಲೋಕಯ ॥೧೦೯॥

ಪಾಂಥಛಾಯಾನುಕೂಲಾಶ್ಚ ವೃಕ್ಷಾಸ್ತೈಃ ಕೋಟಿಶಃ ಕೃತಾಃ ।
ಪಾಂಥೇಭ್ಯೋ ಜಲಮನ್ನಂ ಚ ದತ್ತಂ ತೈಸ್ತಾನ್ವಿಲೋಕಯ ॥೧೧೦॥

ಸುಗಂಧಪುಷ್ಪಮಾಲಾಪಿ ದಿವ್ಯಚಂದನಕರ್ದಮೈಃ ।
ಕೋಟಿಶಸ್ತೋಷಿತಾ ವಿಪ್ರಾಸ್ತೈಸ್ತಾನತ್ರ ವಿಲೋಕಯ ॥೧೧೧॥

ಅತಃ ಪರಂ ಕದಾ ತೇಷಾಂ ವಿಚಾರೋಽಪಿ ಭವಿಷ್ಯತಿ ।
ತೇಷಾಂ ವಿನಿರ್ಗಮೋ ವಾಸ್ಯಾತ್ತೇಷಾಂ ತು ಗಣನಾಪಿ ನ ॥೧೧೨॥

ಪರಾರ್ಧಾದಪಿ ತಿಷ್ಠಂತಿ ತೇಷಾಂ ಕಿಂ ಗಣನಾಧುನಾ ।
ತಾವತಾಂ ಗಣನಾ ತಾವತ್ಕಲ್ಪಾಂತೇ ಭಾವಿ ವಾ ನ ವಾ । ॥೧೧೩॥

ಧನ, ಧಾನ್ಯ, ಗೋಸಮೂಹ ಮತ್ತು ಮನೆಯ ಸಲಕರಣೆಗಳು ಇವುಗಳ ಸಮೇತವಾಗಿ ಕೋಟ್ಯಂತರ ಗೃಹದಾನವನ್ನು ಈ ಮಹಾಪುರುಷರು ಮಾಡಿ ಇಲ್ಲಿ ಬಂದಿರುವರು. ದೇವನೇ, ಇವರನ್ನು ನೋಡು. ||೧೦೯||

ಪ್ರಯಾಣೀಕರ ವಿಶ್ರಾಂತಿಗೆ ಕಾರಣವಾದ, ಸೊಂಪಾದ ನೆಳಲನ್ನು ಕೊಡುವ ಅನೇಕವೃಕ್ಷಗಳನ್ನು ಈ ಮಹಾನುಭಾವರು ನೆಡಿಸಿ ಪ್ರಯಾಣೀಕರಿಗೆ ನೀರು ಮತ್ತು ಅನ್ನ ಇವುಗಳನ್ನು ಯಥೇಚ್ಛವಾಗಿ ಕೊಟ್ಟಿರುವರು. ಸ್ವಾಮಿ, ನಿನ್ನ ಕಟಾಕ್ಷವು ಇತ್ತಕಡೆಯೂ ಸ್ವಲ್ಪ ಬೀಳಲಿ. ||೧೧೦||

ಸುವಾಸನೆಯುಳ್ಳ ಪುಷ್ಪಮಾಲಿಕೆಯನ್ನು ದಿವ್ಯವಾದ ಚಂದನ ಗಂಧದಿಂದ ಲೇಪನಮಾಡಿ ಬಹಳವಾಗಿ ಇವುಗಳನ್ನು ಬ್ರಾಹ್ಮಣರಿಗೆ ದಾನಮಾಡಿ ಸಂತೋಷ ಪಡಿಸಿರುವರು. ಇಗೋ ಇವರನ್ನು ನೋಡು ! ||೧೧೧||

ಇನ್ನು ಮುಂದೆ ಇರುವವರ ವಿಚಾರವೇನು ಹೇಳಲಿ ? ಮುಂದೆ ಇವರ ವಿಷಯವೇನಾಗುವುದು ? ಇವರಿಗೆ ಯಾವಾಗ ಇಲ್ಲಿಂದ ಮುಕ್ತಿ ? ಅಥವಾ ಇಲ್ಲಿಯೇ ಶಾಶ್ವತವಾದ ಸ್ಥಿತಿಯೇ ? ಎಂಬುದನ್ನೂ ತಿಳಿದು ಇವರನ್ನೆಲ್ಲಾ ಎಣಿಸಲು ಅಸಾಧ್ಯವಾಗಿದೆ. ಪರಾರ್ಧವರ್ಷಗಳಿಂದಲೂ (ಅನೇಕವರ್ಷ) ಇಲ್ಲಿ ಬಂದು ನೆಲಸಿರುವ

ಏಕೈಕಸ್ಯ ವಿಚಾರೇಣ ಪುಣ್ಯಪಾಪಾನುಯೋಗತಃ ।
ಕಾಲಾಪನಯನಂ ತಾವತ್ಕಾಲಸ್ಯಾಸ್ಯ ಪ್ರಜಾಯತೇ ॥೧೧೪॥

ಜಲಪಾನಾರ್ಥಮಪ್ಯಸ್ಯ ನಾವಕಾಶಃ ಪ್ರಜಾಯತೇ ।
ಕಾಲಂ ನಯತಿ ಕಾಲೋಽಯಂ ಧರ್ಮಾಧರ್ಮವಿಚಾರಣೈಃ ॥೧೧೫॥

ಏತಾದೃಶಸ್ಯ ಕಾಲಸ್ಯ ಶಾಸನಾರ್ಥಂ ಕಿಮುದ್ಯಮಃ ।
ಯುಕ್ತೋ ಭವತಿ ಯೇನಾಸ್ಯ ತಾಡನಂ ಕೃತಮೀದೃಶಂ ॥೧೧೬॥

ಶಿವಲಿಂಗಾರ್ಚನಂ ತ್ಯಕ್ತಂ ಕಿಮನೇನಾಧುನಾಪ್ಯಯಂ ।
ಶಾಸನಾರ್ಹಃ ಕಥಂ ಯೂಯಂ ಶಾಂಕರಾಗ್ರೇಸರಾಃ ಖಲು ॥೧೧೭॥

ಇವರ ಎಣಿಕೆಯು, ಕಲ್ಪದ ಕೊನೆಯಲ್ಲಾದರೂ ಗಣನೆಮಾಡಲು ಸಾಧ್ಯವೋ ಇಲ್ಲವೋ ತೋರದು. ॥೧೧೨-೧೧೩॥

ಇವರಲ್ಲಿ ಒಬ್ಬೊಬ್ಬರನ್ನೂ ಅವರವರ ಪುಣ್ಯಪಾಪಗಳಿಗನುಸಾರವಾಗಿ ವಿಚಾರ ಮಾಡುತ್ತಾ ಕಾಲಕಳೆಯುವುದು ಈ ಯಮನೊಬ್ಬನಿಗೆ ಮಾತ್ರ ಸಾಧ್ಯವೇ ವಿನಹ ನಮಗೆ ಅಸಾಧ್ಯವೆಂದೇ ತೋರುವುದು: ॥೧೧೪॥

ಈ ಯಮನಿಗೆ ನೀರುಕುಡಿಯಲು ಸಹ ಅವಕಾಶ ದೊರೆಯುವುದಿಲ್ಲ. ಇವನು ಸದಾ ಧರ್ಮಾಧರ್ಮಗಳನ್ನು ವಿಚಾರಣೆಮಾಡುವುದರಲ್ಲಿಯೇ ಕಾಲವೆಲ್ಲ ವನ್ನೂ ಕಳೆಯುತ್ತಿರುವನು. ॥೧೧೫॥

ಇಂತಹ ಕಾರ್ಯಭಾರದಲ್ಲಿ ವ್ಯಗ್ರನಾಗಿರುವ ಈ ಯಮನನ್ನು ಶಿಕ್ಷಿಸುವ ಅಗತ್ಯವೇನಿರುವುದು? ಇವನನ್ನು ಹೊಡೆದು ಪೀಡಿಸುವುದು ನಿಜವಾಗಿಯೂ ಉಚಿತವೇ ಎಂಬುದನ್ನು ತಾವೇ ಪರಾಂಬರಿಸಬೇಕು. ॥೧೧೬॥

ಈ ಯಮನು ಈಗಲೂ ಏನಾದರೂ ಶಿವಲಿಂಗಾರ್ಚನೆಯನ್ನೇನಾದರೂ ಬಿಟ್ಟಿರುವನೇ? ತಾವೇ ಹೇಳಬೇಕು. ಹೀಗಿರುವಾಗ ಇವನಿಗೆ ಶಿಕ್ಷೆಮಾಡುವುದು ಉಚಿತವೇ! ಶಂಕರಗಣಗಳಲ್ಲಿ ಮುಖ್ಯರೆನಿಸಿದ ನೀವೇ ಈ ವಿಷಯದಲ್ಲಿ ಅಪ್ಪಣೆ ಕೊಡಿಸಬೇಕು. ॥೧೧೭॥

ಪಶ್ಯ ತ್ರಿಪುಂಡ್ರಂ ತತ್ಫಾಲೇ ಕಂಠೇ ರುದ್ರಾಕ್ಷಮಾಲಿಕಾಂ ।
ಏತಸ್ಯ ತಾಡನೇ ಭೀತಿಃ ಶಾಂಕರಾ ಭವತಾಂ ನ ಕಿಂ ॥೧೧೮॥

ಶಿವಲಿಂಗಾರ್ಚಕಾನಸ್ಮಾನ್ಭೂತಿರುದ್ರಾಕ್ಷಭೂಷಣಾನ್ ।
ಪಶ್ಯ ವ್ರಣಾನಿ ಚಾಸ್ಮಾಕಮಂಗೇಷ್ವಾಘಾತಜಾನ್ಯಪಿ ॥೧೧೯॥

ಅಸ್ಮಾಸು ದುರದೃಷ್ಟಾನಿ ಕಿಮದ್ಯಾಪಿ ಗಣೇಶ್ವರ ।
ಭೂತಿರುದ್ರಾಕ್ಷದೇಹಾನಾಂ ದುಃಖಮೇತತ್ಕಥಂ ಮತಂ ॥೧೨೦॥

ಇತ್ಯುಕ್ತ್ವಾ ವಿರತಾ ದೇವಾಃ ಪ್ರಣಿಪತ್ಯ ಪುನಃ ಪುನಃ ।
ವ್ರಣಾಪೀಡಿತಸರ್ವಾಂಗಾಸ್ತದಾಘಾತಭಯಾತುರಾಃ ॥೧೨೧॥

ಈ ಯಮಧರ್ಮರಾಜನ ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನೂ ಕುತ್ತಿಗೆಯಲ್ಲಿ ಹೊಳೆಯುತ್ತಿರುವ ರುದ್ರಾಕ್ಷಮಾಲಿಕೆಯನ್ನೂ ನೋಡುವವನಾಗು. ಹೀಗಿದ್ದರೂ, ಎಲೈ ಶಿವಕಿಂಕರರೇ, ನಿಮಗೆ ಈ ಯಮನನ್ನು ಹೊಡೆಯುವ ವಿಷಯದಲ್ಲಿ ಸ್ವಲ್ಪವೂ ಭೀತಿಯೇ ಇಲ್ಲವೇ ? ॥೧೧೮॥

ಭಸ್ಮತ್ರಿಪುಂಡ್ರ ಮತ್ತು ರುದ್ರಾಕ್ಷಗಳನ್ನು ಧರಿಸಿ ಶಿವಲಿಂಗವನ್ನು ಪೂಜಿಸುವ ನಮ್ಮನ್ನು ನೀವು ಹೊಡೆದಿರುವಿರಿ. ಇಗೋ, ನಿಮ್ಮ ಏಟುಗಳಿಂದ ಉಂಟಾಗಿರುವ ಘಾಯಗಳನ್ನೂ ಅವಯವಗಳಲ್ಲಿ ಬಿದ್ದಿರುವ ಏಟಿನ ಗುರುತುಗಳನ್ನೂ, ನೀವೇ ನೋಡಿರಿ! ಇದು ನಿಮಗೆ ನ್ಯಾಯವೇ! ॥೧೧೯॥

ಗಣೇಶ್ವರನಾದ ನಂದಿಯೇ, ನಮ್ಮಲ್ಲಿ ಇನ್ನೇನು ದುರದೃಷ್ಟವಿದೆಯೋ ಕಾಣೆವು. ಭಸ್ಮರುದ್ರಾಕ್ಷಧಾರಿಗಳಾದ ಪ್ರಾಣಿಗಳಿಗೆ ಈ ದುಃಖವು ಹೇಗೆ ಏತಕ್ಕೋಸ್ಕರ ಬಂದಿತೋ ಆ ಶಿವನಿಗೇ ಗೊತ್ತು. ॥೧೨೦॥

ಶಿವಕಿಂಕರರ ಏಟುಗಳಿಂದ ಪೀಡಿತರಾಗಿ ಮತ್ತೆ ಆ ಶಿವಭಟರ ಏಟುಗಳಿಗೆ ಹೆದರಿರುವ ದೇವತೆಗಳು ಈರೀತಿ ತಮ್ಮ ವೃತ್ತಾಂತವನ್ನೆಲ್ಲಾ ಆ ನಂದಿಕೇಶ್ವರನಿಗೆ ಭಕ್ತಿಪುರಸ್ಸರವಾಗಿ ಅರಿಕೆ ಮಾಡಿ, ಬಾರಿಬಾರಿಗೂ ನಮಸ್ಕಾರಮಾಡುತ್ತಾ ಕೊನೆಗೆ ಸುಮ್ಮನಾದರು. ॥೧೨೧॥

ಯಸ್ಯೈಶ್ವರ್ಯಮಪಾರಮಕ್ಷತಮಘಾಸಾಕ್ರಾಂತಮಂತಂ ವಿನಾ
ತಿಷ್ಠತ್ಯಪ್ರತಿಮಂ ತಮೇವ ಶರಣಂ ಮನ್ಯೇ ಕೃಪಾಸಾಗರಂ ।
ಗೌರೀಚಾರುಪಯೋಧರಾಧರವಲೀಹಾರಾವಲೀಕೇಲಿಕಾ
ಲೀಲಾಲೋಲಮಿಹಾನುವೇಲಮಕಲಂ ಶ್ರೀಕಾಲಕಾಲಂ ಭಜೇ ॥೧೨೨॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಯಮನಂದಿಕೇಶ ಸಂವಾದೇ ಯಮಾಲಯಸ್ಥ ಪುಣ್ಯಾಪುಣ್ಯಕೃತ ಪ್ರಾಣಿಗಣದರ್ಶನಂ ನಾಮ ಸಪ್ತವಿಂಶೋಽಧ್ಯಾಯಃ

ಅಪಾರವೂ, ನಾಶರಹಿತವೂ, ಪಾಪಲೇಶವೂ ಇಲ್ಲದಿರುವುದೂ, ಮತ್ತು ಕೊನೆಯಿಲ್ಲದುದೂ ಆದ ಯಾವ ಮಹೇಶ್ವರನ ಐಶ್ವರ್ಯ ಸಂಪತ್ತಿಯು ಅಸದೃಶವಾಗಿರುವುದೋ ಅಂತಹ ಕೃಪಾಸಾಗರನಾದ ಪರಶಿವನೇ ನನಗೆ ರಕ್ಷಕನು. ಗಿರಿರಾಜ ಕುಮಾರಿಯಾದ ಗೌರಿಯ ಮನೋಹರವಾದ ಕುಚಮಂಡಲದ ಮೇಲೆ ಅಲಂಕೃತವಾಗಿರುವ ಮುಕ್ತಾಹಾರ ಸಮೂಹಗಳನ್ನು ವಿಲಾಸಪೂರ್ವಕವಾದ ಕ್ರೀಡೆಯಲ್ಲಿ ಪದೇ ಪದೇ ಸ್ಪರ್ಶಮಾಡುತ್ತಾ ಲೀಲಾಮಯನಾಗಿರುವ ಮಹಾದೇವನೇ, ನೀನೇ ನಮಗೆ ಪರಮಪವಿತ್ರನು. ನೀನು ಸಾಕ್ಷಾದ್ಯಮನಿಗೂ ಯಮನಂತಿರುವವನೂ ಆಗಿರುವೆ. ಮಹೇಶ್ವರನೇ, ಸದಾ ನಿನ್ನನ್ನು ಭಜನೆಮಾಡುವೆನು. ನಮ್ಮನ್ನು ಸಲಹು. ||೧೨೨||

ಇಲ್ಲಿಗೆ ಶ್ರೀಶಿವರಹಸ್ಯದ ಹರ ಎಂಬ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಯಮ ಮತ್ತು ನಂದಿಕೇಶ್ವರ ಇವರ ಸಂವಾದಾಂತರ್ಗತವಾದ ಕಥಾಭಾಗದೊಳಗೆ ಯಮನ ಪಟ್ಟಣದಲ್ಲಿರುವ, ಪುಣ್ಯ ಮತ್ತು ಪಾಪ ಇವುಗಳನ್ನು ಮಾಡಿರುವ ಪ್ರಾಣಿಗಳ ಸಮೂಹದ ದರ್ಶನವೆಂಬ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಅಷ್ಟಾವಿಂಶೋಽಧ್ಯಾಯಃ

॥ ವ್ಯಾಸ ಉವಾಚ ॥

ಇತಿ ದೇವವಚಃ ಶ್ರುತ್ವಾ ನಂದಿಕೇಶಃ ಶಿವಂ ಸ್ಮರನ್ ।
ಶಿವಪ್ರಭಾವಂ ಸಸ್ಮಾರ ವಿಲಕ್ಷಣಮನಾಮಯಂ ॥೧॥

॥ ನಂದಿಕೇಶ್ವರ ಉವಾಚ ॥

ಶೃಣು ವಿಷ್ಣೋ ಶೃಣು ಬ್ರಹ್ಮಂಛ್ರುಣು ಕಾಲ ಶಚೀಪತೇ ।
ಶೃಣ್ವಂತ್ವನ್ಯೇ ಸುರಗಣಾಃ ಪ್ರಭಾವಂ ಶಾಂಭವಂ ಮುಹುಃ ॥೨॥

ಇಪ್ಪತ್ತೆಂಟನೆಯ ಅಧ್ಯಾಯ

ಈ ರೀತಿ ದೇವತೆಗಳ ಮಾತನ್ನು ಕೇಳಿ ನಂದಿಕೇಶ್ವರನು ಶಿವನನ್ನು ಸ್ಮರಿಸುತ್ತಾ, ವಿಲಕ್ಷಣವೂ (ಇತರ ದೇವತೆಗಳಿಗಿಂತಲೂ ಅತಿಶಯವಾದುದೂ) ಸುಖಪ್ರದವೂ ಆದ ಶಿವನ ಪ್ರಭಾವವನ್ನು ಸ್ಮರಿಸಿಕೊಂಡನು, ಎಂದು ವ್ಯಾಸರು ಮುನಿಗಳಿಗೆ ಹೇಳಿದರು. ||೧||

ವಿಷ್ಣುವೇ, ಬ್ರಹ್ಮನೇ, ಯಮನೇ, ಶಚೀಪತಿಯಾದ ಇಂದ್ರನೇ, ಮತ್ತು ಇತರ ದೇವಗಣಗಳೇ, ಎಲ್ಲರೂ ಏಕಾಗ್ರಚಿತ್ತದಿಂದ ಶಂಭುವಿನ ಮಹಿಮೆಯನ್ನು ಲಾಲಿಸಿ ಎಂದು ನಂದಿಕೇಶ್ವರನು ದೇವತೆಗಳನ್ನು ಕುರಿತು ಇಂತೆಂದನು. ||೨||

ಮಹೇಶ್ವರಃ ಸರ್ವಸುರೋತ್ತಮೋಽಯ
ಮನಾಮಯೋಽಯಂ ಜಗದೀಶ್ವರೋ ಯಃ ।
ಮೃತ್ಯುಂಜಯೋಽಯಂ ಮದನಾಂತಕೋಽಯಂ
ಕಾಲಾಂತಕೋಽಯಂ ಮಮ ಭಾಗಧೇಯಂ ॥೩॥

ಅಸ್ಮಾಕಮಾರಾಧ್ಯತಮಂ ಪ್ರಕೃಷ್ಟಂ
ವಿಶ್ವೇಶ್ವರಶ್ರೀಚರಣಾರವಿಂದಂ ।
ಆನಂದಕಂದಂ ತದಿದಂ ಪ್ರಮೋದಂ
ದದಾತು ಮಂದಂ ಸ್ಮೃತಮಪ್ಯಮಂದಂ ॥೪॥

ವಂದೇ ಮುಹುರ್ದೈವತಸಾರ್ವಭೌಮಂ
ಸೋಮಾವತಂಸಂ ಗರಲಾವತಂಸಂ ।
ತಮೇವ ವೇದಾಂತಗಣಾಸ್ಸ್ತುವಂತಿ
ತಂ ದೇವದೇವಂ ಶರಣಂ ಪ್ರಪದ್ಯೇ ॥೫॥

ಎಲೈ ಬ್ರಹ್ಮವಿಷ್ಣ್ವಾದಿದೇವತೆಗಳಿರಾ, ಈ ಮಹಾದೇವನು ಸರ್ವದೇವತೆಗಳಲ್ಲಿಯೂ ಉತ್ತಮೋತ್ತಮನೆನಿಸಿದವನು. ಪುಣ್ಯಸ್ವರೂಪನಾದ ಇವನನ್ನೇ ಜಗದೀಶ್ವರನೆನ್ನುವರು. ಮೃತ್ಯುವನ್ನು ಜಯಿಸಿದವನೂ, ಮನ್ಮಥನನ್ನು ದಹನ ಮಾಡಿದವನೂ ಈ ಮಹೇಶ್ವರನೇ. ಯಮನಿಗೂ ಅಂತಕಪ್ರಾಯನಾದ ಈ ಮಹೇಶ್ವರನೇ ನನ್ನ ಆರಾಧ್ಯದೇವನು. ॥೩॥

ಉತ್ಕೃಷ್ಟವಾದ ಶ್ರೀವಿಶ್ವೇಶ್ವರನ ಪಾದಕಮಲವು ನಮಗೆ ಶ್ರೇಷ್ಠವಾದ ಆರಾಧ್ಯಪದಾರ್ಥವಾಗಿರುವುದು. (ಅಂದರೆ ನಾವೆಲ್ಲರೂ ಶ್ರೇಷ್ಠವೂ ಪರಮ ಪವಿತ್ರವೂ ಆಗಿರುವ ವಿಶ್ವೇಶ್ವರನ ಪಾದಕಮಲಗಳನ್ನೇ ಅನವರತವೂ ಪೂಜೆಮಾಡಬೇಕು.) ಈ ಮಹಾದೇವನ ಚರಣಾರವಿಂದದ ಭಜನೆಯನ್ನೇ ಅತಿಶಯವಾಗಿ ಮಾಡುವುದರಿಂದ ನಮ್ಮ ಹೃದಯಕುಹರದಲ್ಲಿ ಆನಂದವೆಂಬ ಮೊಳಕೆ ಏರ್ಪಟ್ಟು ಅದರಿಂದ ಅತಿಶಯವಾದ ಪ್ರಮೋದವುಂಟಾಗುವುದು. ॥೪॥

ಚಂದ್ರನನ್ನು ಶಿರೋಭೂಷಣವಾಗಿ ಧರಿಸಿ ಲೋಕಕಲ್ಯಾಣಕ್ಕೋಸ್ಕರ ಕಾಲಕೂಟವಿಷವನ್ನು ನುಂಗಿ ಅದನ್ನು ಕೊರಳಲ್ಲಿ ಧಾರಣೆಮಾಡಿರುವ ಮಹಾ

ಯದಾ ಕದಾಚಿದ್ಧೃದಯಾರವಿಂದೇ
ಮಹೇಶ್ವರಶ್ರೀಚರಣಾರವಿಂದಂ।
ಕ್ಷಣಂ ಚರಂತೋ ಯದಿ ಚಿಂತಯಂತಿ
ತದಾ ಕೃತಾಂತಸ್ಯ ಪದಂ ನ ಯಾಂತಿ ॥೬॥

ಯಃ ಕಾಲಕಾಲಃ ಶ್ರುತಿಷು ಪ್ರಸಿದ್ಧ
ಸ್ತಂ ಕಾಲಕಾಲಂ ಪ್ರಣಮಂತಿ ಸಂತಃ।
ತೇ ತಾವದಂತೇ ನ ಕೃತಾಂತಭೀತಿಂ
ಪ್ರಯಾಂತಿ ಯಾಂತ್ಯೇವ ಶಿವಂ ಪ್ರಸನ್ನಂ ॥೭॥

ನ ಚಾಯಮನ್ಯಾಮರತುಲ್ಯರೂಪೋ
ಯತೋ ವಿರೂಪಾಕ್ಷ ಇತಿ ಪ್ರಸಿದ್ಧಃ।
ಕೋ ವಾ ವಿರೂಪಾಕ್ಷಸಮಕ್ಷಮೇತಿ
ವಿನಾ ವಿರೂಪಾಕ್ಷಕಟಾಕ್ಷಲೇಶಂ ॥೮॥

ದೇವನೇ, ದೇವತೆಗಳಿಗೆಲ್ಲಾ ಸಾರ್ವಭೌಮನೆನಿಸಿದ ನಿನ್ನನ್ನು ನಮಸ್ಕರಿಸುವೆನು. ಓ ದೇವದೇವನೇ, ಆ ನಿನ್ನನ್ನೇ ಸದಾ ವೇದಾಂತಸಮೂಹಗಳೂ ಎಡಬಿಡದೇ ಸ್ತುತಿಮಾಡುತ್ತಿರುವುವು. ಮಹೇಶನೇ, ಇಗೋ ನಿನ್ನ ಮೊರೆಹೊಕ್ಕಿರುವೆನು. ॥೫॥

ಒಂದುಸಾರಿಯಾದರೂ ತಮ್ಮ ಹೃದಯವೆಂಬ ಕಮಲದಲ್ಲಿ ಮಹಾದೇವನ ಸಂಪದ್ಯುಕ್ತವಾದ ಪಾದಕಮಲವನ್ನು ಧ್ಯಾನಮಾಡಿದವರು ಎಂದಿಗೂ ಯಮಲೋಕವನ್ನು ಹೊಂದಲಾರರು. ॥೬॥

ಸಾಕ್ಷಾತ್ಕಾಲಸ್ವರೂಪನಾದ ಯಮನಿಗೂ ಕಾಲಸ್ವರೂಪನೆಂದು ಶ್ರುತಿಗಳಲ್ಲಿ ಪ್ರಸಿದ್ಧನಾಗಿರುವ ಕಾಲಕಾಲಸ್ವರೂಪನಾದ ಮಹಾದೇವನನ್ನು ನಮಸ್ಕರಿಸುವ ಸಾಧುಗಳು, ಕೊನೆಯಲ್ಲಿ ಯಮನ ಭೀತಿಯಿಲ್ಲದೇ ಪ್ರಸನ್ನನಾಗಿರುವ ಶಿವನ ಸನ್ನಿಧಿಯನ್ನೇ ಪಡೆಯುವರು. ॥೭॥

ಮಹೇಶ್ವರನು ಇತರ ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಿಗೆ ಸಮಾನವಾಗದ ರೂಪುಳ್ಳವನಾದ ಕಾರಣ ಮುಕ್ಕಣ್ಣನಾದ ಇವನಿಗೆ ವಿರೂಪಾಕ್ಷನೆಂಬ ಪ್ರಸಿದ್ಧಿ ಬಂದಿದೆ. ಇಂತಹ ವಿರೂಪಾಕ್ಷನೆನಿಸಿದ ಮಹಾದೇವನ ಕೃಪಾಕಟಾಕ್ಷವು

ಧರ್ಮೈರಪಾರೈರಲಮೇವ ಯಾಗೈ
ರ್ದಾನೈರಪಾರೈರಲಮೇವ ಯೋಗೈಃ ।
ತಪೋಭಿರುಗ್ರೈರಲಮೇವ ಕಿಂ ತೈ
ಸ್ತಂ ಕಾಲಕಾಲಂ ಕಲಯೇಽನುವೇಲಂ ॥೯॥

ಧರ್ಮೋಽಪಿ ಕೋ ವಾ ತದುಮಾಸಹಾಯ
ಸ್ವರೂಪದಾನೇಽಪಿ ಸಮರ್ಥಮೇವ ।
ಏಕಂ ನವಂ ಬಿಲ್ವದಲಂ ಶಿವಾಯ
ಸಮರ್ಪಿತಂ ತತ್ತುಲನಾಂ ಪ್ರಯಾತಿ ॥೧೦॥

ಖಂಡಾನಿ ಪತ್ರಾಣ್ಯಪಿ ಚಂದ್ರಮೌಲಿ
ಶ್ಛಿನ್ನಾನಿ ಪುಷ್ಪಾಣ್ಯಪಿ ಲೀಲಯಾ ವಾ ।

ಲೇಶಮಾತ್ರವೂ ಇಲ್ಲದೇ ಇರುವ ಯಾವ ಮಾನವನು ತಾನೇ ಈ ವಿರೂಪಾಕ್ಷನ ಸಾನ್ನಿಧ್ಯವನ್ನು ಪಡೆದಾನು. (ಅಂದರೆ ಶಿವಸಾನ್ನಿಧ್ಯವೊದಗಬೇಕಾದರೆ ಲೇಶ ಮಾತ್ರವಾದರೂ ಶಿವಕಟಾಕ್ಷಕ್ಕೆ ಪಾತ್ರನಾಗಲೇ ಬೇಕು. ಇತರ ದೇವತಾದಿಗಳ ವಿಶ್ವಾಸಕ್ಕೆ ಪಾತ್ರರಾಗಿದ್ದರೂ, ಈಶ್ವರಾನುಗ್ರಹ ಇಲ್ಲದಿದ್ದರೆ ಶಿವಸಾಯುಜ್ಯವು ದುರ್ಲಭವೆಂದೇ ತಿಳಿಯಬೇಕು.) ॥೮॥

ಪರಮೇಶ್ವರನ ಧ್ಯಾನಪೂಜಾದಿಗಳ ಮುಂದೆ, ಅಪಾರವಾದ ಧರ್ಮ, ಯಾಗ, ದಾನ, ಯೋಗಾಭ್ಯಾಸ, ಉಗ್ರವಾದ ತಪಸ್ಸು ಇವುಗಳೆಲ್ಲವೂ ಅಪ್ರಯೋಜಕ ವಾದುದರಿಂದ ಆ ಕಾಲಕಾಲನೆನಿಸಿದ ಮಹಾದೇವನನ್ನೇ ನಾನು ಎಡಬಿಡದೇ ಧ್ಯಾನಮಾಡುವೆನು. ॥೯॥

ಅಪರಿಮಿತವಾದ ಧರ್ಮಗಳನ್ನು ಮಾಡುವುದರಿಂದ ಕೇವಲ ಉಮಾಪತಿ ಯಾದ ಮಹಾದೇವನ ಸ್ವರೂಪಜ್ಞಾನ ಮಾತ್ರ ಗೋಚರವಾಗುವುದು. ಹೊಸದಾದ ಒಂದೇ ಬಿಲ್ವಪತ್ರೆಯನ್ನು ಶಿವನಿಗೆ ಭಕ್ತಿಯಿಂದ ಸಮರ್ಪಣೆ ಮಾಡುವುದರಿಂದ ಶಿವಸಾಯುಜ್ಯವೇ ಉಂಟಾಗುವುದಾದರೆ, ಆ ಶಿವಪೂಜಾಮಹಿಮೆಯ ಫಲವನ್ನು ಹೇಳಬೇಕಾದ್ದೇನು ? ॥೧೦॥

ಬಹಳ ಆಯಾಸ ಸಾಧ್ಯವಾದ ಅಖಂಡ ದಾನಧರ್ಮಗಳಿಂದುಂಟಾಗುವ ಮುಕ್ತಿರೂಪವಾದ ಫಲವನ್ನು ಮಹೇಶ್ವರನು, ತುಂಡಾದ ಪತ್ರೆಗಳನ್ನೂ ಮತ್ತು

ಕ್ಷಿಪ್ತಾನಿ ಗೃಹ್ಣಾತಿ ಶುಭಂ ದದಾತಿ
ಮುಕ್ತಿಂ ದದಾತಿ ಪ್ರತಿಭೂಃ ಸಧರ್ಮೇ ॥೧೧॥

ಕಿಮಶ್ವಮೇಧಾದಿಕಯಾಗಬೃಂದೈ
ರ್ಗತೈಃ ಶಿವಾರಾಧನಪುಣ್ಯರಾಶೇಃ ।
ಲೇಶೋಽಸ್ತಿ ಯಃ ಸೂಕ್ಷ್ಮತರೋ ನಿತಾಂತಂ
ತೇನಾಪಿ ತುಲ್ಯಾ ನ ಭವಂತಿ ತೇ ತು ॥೧೨॥

ಗೋಕೋಟಿದಾನೈರಪಿ ಕಿಂ ಫಲಂ ಸ್ಯಾ
ನ್ನ ತೇ ಶಿವಾರಾಧನಪುಣ್ಯರಾಶೇಃ ।
ಲೇಶೋಽಸ್ತಿ ಯಃ ಸೂಕ್ಷ್ಮತರೋ ನಿತಾಂತಂ
ತೇನಾಪಿ ತುಲ್ಯಾ ನ ಭವಂತಿ ತೇ ತು ॥೧೩॥

ಹೂವುಗಳನ್ನೂ ವಿನೋದಕ್ಕೋಸ್ಕರ ತನ್ನ ಮೇಲೆ ಎಸೆದರೂ, ತೆಗೆದುಕೊಂಡು ಅಂತಹವರಿಗೆ ಅನೇಕ ಶುಭ ಫಲಗಳನ್ನು ಕೊಟ್ಟು ಕೊನೆಗೆ ಮುಕ್ತಿಯನ್ನು ಕರುಣಿಸುವನು, ಎಂದ ಮೇಲೆ ಭಕ್ತಿಪೂರ್ವಕವಾಗಿ ದಳಮುರಿಯದೇ ಹೊಸದಾಗಿ ತಂದ ಬಿಲ್ವಪತ್ರೆಗಳಿಂದ ಶಿವನನ್ನು ಆರಾಧಿಸುವವರಿಗುಂಟಾಗುವ ಫಲಗಳನ್ನು ವರ್ಣಿಸಲು ಸಾಧ್ಯವೇ ? ||೧೧||

ಶಿವಾರಾಧನೆಯಿಂದುಂಟಾಗುವ ಪುಣ್ಯರಾಶಿಗಳ ಲೇಶಾಂಶದಲ್ಲಿ ಅತ್ಯಂತ ಸೂಕ್ಷ್ಮಭಾಗರೂಪವಾದ ಫಲವೂ ದೊರಕದಿರುವ ಅಶ್ವಮೇಧಾದಿ ಯಾಗಸಮೂಹಗಳನ್ನಾಚರಿಸುವುದರಿಂದತಾನೇ ಏನು ಪ್ರಯೋಜನ? ಹೀಗಿರುವಾಗ ಸಂಪೂರ್ಣವಾದ ಫಲವು ದೊರೆಯುವ ಬಗೆ ಹೇಗೆ? (ಆದುದರಿಂದ ಯಾಗಾದಿಗಳಿಂದ ಯಾವ ಪ್ರಯೋಜನವೂ ಇಲ್ಲ. ಸದಾ ಶಿವಧ್ಯಾನಪೂಜಾದಿಗಳನ್ನೇ ಮಾಡಬೇಕೆಂದು ಭಾವವು.) ||೧೨||

ಕೋಟಿ ಗೋದಾನಗಳಿಂದುಂಟಾಗುವ ಪುಣ್ಯವು, ಶಿವಾರಾಧನೆಯಿಂದುಂಟಾಗುವ ಪುಣ್ಯರಾಶಿಗಳ ಸಮೂಹದಲ್ಲಿ ಅತ್ಯಂತ ಸೂಕ್ಷ್ಮವಾದ ಒಂದು ಅಂಶಕ್ಕೂ ಸರಿಹೋಗಲಾರದು. ||೧೩||

ಕಿಮುತ್ತಮಾಶ್ವಾರ್ಬುದದಾನಸಂಘೈ
ರ್ನ ತೈಃ ಶಿವಾರಾಧನಪುಣ್ಯರಾಶೇಃ ।
ಲೇಶೋಽಸ್ತಿ ಯಃ ಸೂಕ್ಷ್ಮತರೋ ನಿತಾಂತಂ
ತೇನಾಪಿ ತುಲ್ಯಾ ನ ಭವಂತಿ ತೇ ತು ॥೧೪॥

ಕಿಂ ಕಾಂಚನಾಭ್ಯರ್ಚಿತಕನ್ಯಕಾನಾಂ
ದಾನೈರಪಾರೈರನುವಾಸರಂ ವಾ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೧೫॥

ಸಸ್ಯಾದಿಸಂಪೂರ್ಣಮಹೀಪ್ರದಾನೈಃ
ಕಿಂ ತೈರನಂತೈರಪಿ ತಾನಿ ತಾನಿ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೧೬॥

ಉತ್ತಮವಾದ ಸಾವಿರ ಕೋಟಿ (ಅರ್ಬುದ) ಕುದುರೆಗಳನ್ನು ದಾನಮಾಡುವುದರಿಂದುಂಟಾಗುವ ಫಲವು ಶಿವಾರಾಧನೆಯಿಂದುಂಟಾಗುವ ಪುಣ್ಯಸಮೂಹಗಳ ಅತ್ಯಂತ ಸೂಕ್ಷ್ಮವಾದ ಲೇಶಾಂಶಕ್ಕೂ ಸರಿತೂಗಲಾರದು. ॥೧೪॥

ಪ್ರತಿದಿನವೂ ಸುವರ್ಣಭೂಷಣಗಳಿಂದಲಂಕೃತಳಾದ ಕನ್ಯೆಯನ್ನು ದಾನ ಮಾಡುವುದರಿಂದುಂಟಾಗುವ ಫಲವು, ಸದಾಶಿವಲಿಂಗಾರ್ಚನೆಯಿಂದುಂಟಾಗುವ ಫಲಗಳ ಲೇಶಾಂಶದ ಲೇಶಾಂಶಕ್ಕೂ ಅಥವಾ ಅದರ ಲೇಶಾಂಶಕ್ಕೂ ಸರಿಹೋಗಲಾರದು. ॥೧೫॥

ಅನೇಕ ಸಸ್ಯಗಳಿಂದ ಪರಿಪೂರ್ಣವಾಗಿರುವ ಭೂಮಿಯನ್ನು ದಾನಮಾಡುವುದರಿಂದ ಉಂಟಾಗುವ ಅನಂತ ಪುಣ್ಯಫಲಗಳು, ಶಿವಲಿಂಗಾರ್ಚನೆಯಿಂದುಂಟಾಗುವ ಫಲಗಳ ಲೇಶಾಂಶದ ಅಲ್ಪಭಾಗಕ್ಕೂ ಸಮಾನವಾಗಲಾರವು. ॥೧೬॥

ವನಾನಿ ಸಾಂದ್ರಾಣಿ ವಿನಿರ್ಮಿತಾನಿ
ಕಿಂ ತಾನ್ಯನಂತಾನ್ಯಪಿ ಸಂತತಾನಿ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೧೭॥

ಕಿಮನ್ನದಾನೈರಮಿತೈರ್ವಿಚಿತ್ರೈ
ರ್ಘೃತಾದಿಕೈರ್ದ್ರವ್ಯಸಮನ್ವಿತೈರ್ವಾ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೧೮॥

ಗೋಕ್ಷೀರಪೂರ್ಣಾಮೃತಕುಂಭದಾನೈಃ
ಧನಪ್ರದಾನೈಶ್ಚ ಫಲಪ್ರದಾನೈಃ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೧೯॥

ದಟ್ಟವಾದ ಕಾಡುಗಳನ್ನು ನಿರ್ಮಿಸುವುದರಿಂದುಂಟಾಗುವ ಅನಂತವಾದ ಫಲಗಳು, ಶಿವಲಿಂಗಪೂಜೆ ಮಾಡುವುದರಿಂದ ಲಬ್ಧವಾಗುವ ಪುಣ್ಯಫಲಗಳ ಲೇಶಾಂಶದ ಅತ್ಯಂತ ಸೂಕ್ಷ್ಮವಾದ ಭಾಗಕ್ಕೂ ಅಥವಾ ಅದರ ಲೇಶಾಂಶಕ್ಕೂ ಸಮನೆನಿಸಲಾರದು. ॥೧೭॥

ತುಪ್ಪವೇ ಮುಂತಾದ ಶ್ರೇಷ್ಠ ದ್ರವ್ಯಗಳೊಡಗೂಡಿದ ಚಿತ್ರವಿಚಿತ್ರವಾದ ಭಕ್ಷ್ಯಗಳಿಂದ ಯುಕ್ತವಾದ ಅನ್ನದಾನವನ್ನು ವಿಶೇಷವಾಗಿ ಮಾಡಿಸುವುದರಿಂದುಂಟಾಗುವ ಫಲವೂ, ಈ ಶಿವಲಿಂಗಾರ್ಚನೆಯಿಂದುಂಟಾಗುವ ಫಲಗಳ ಲೇಶಾಂಶದ ಲೇಶಭಾಗಕ್ಕೂ ಸರಿತೂಗಲಾರದು. ॥೧೮॥

ಹಸುವಿನ ಹಾಲಿನಿಂದ ತುಂಬಿದ ಕೊಡಗಳು, ನೀರಿನಿಂದ ತುಂಬಿದ ಕಲಶಗಳು, ದ್ರವ್ಯ ಮತ್ತು ನಾನಾವಿಧವಾದ ಫಲಗಳು ಇವುಗಳನ್ನು ದಾನಮಾಡುವುದರಿಂದುಂಟಾಗುವ ಫಲಗಳು ಲಿಂಗಪೂಜೆ ಮಾಡುವುದರಿಂದುಂಟಾಗುವ ಫಲಗಳ ಲೇಶಾಂಶದಲ್ಲಿ ಲೇಶಾಂಶಕ್ಕೂ ಸಮಾನವಾಗಲಾರವು. ॥೧೯॥

ವಿಚಿತ್ರವಸ್ತ್ರಾಭರಣಾರ್ಬುದಾನಾಂ
ದಾನೈರಪಾರೋದಕಕುಂಭದಾನೈಃ ।
ತೇ ಲಿಂಗಾಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೨೦॥

ಸುಗಂಧಪುಷ್ಪಾಫಲಮಾಲಿಕಾನಾಂ
ದಾನೈರಪಾರೈರಪಿ ಕಿಂ ಫಲಂ ಸ್ಯಾತ್ ।
ತೇ ಲಿಂಗಪೂಜಾಫಲಲೇಶಲೇಶ
ಲೇಶೇನ ಕಿಂ ವಾ ತುಲನಾಂ ಪ್ರಯಾಂತಿ ॥೨೧॥

ಲಿಂಗೇ ಪ್ರದತ್ತಂ ಕುಸುಮಂ ದಲಂ ವಾ
ಫಲಂ ಜಲಂ ವಾ ತದುಮಾಸಹಾಯಃ ।
ಗೃಹ್ಣಾತಿ ತೇನೈವ ದದಾತಿ ಭಾಗ್ಯಮ
ನಂತಮಂತೇ ಸ ದದಾತಿ ಮುಕ್ತಿಂ ॥೨೨॥

ವಿಚಿತ್ರವಾದ ವಸ್ತ್ರಗಳೂ, ಆಭರಣಗಳೂ ಇವುಗಳನ್ನು ಅಸಂಖ್ಯಾತವಾಗಿ ದಾನಮಾಡುವುದರಿಂದಲೂ, ಅಪಾರವಾದ ಜಲಕುಂಭಗಳನ್ನು ದಾನಮಾಡುವುದರಿಂದಲೂ ದೊರೆಯುವ ಪುಣ್ಯಫಲಗಳು, ಲಿಂಗಪೂಜಾಫಲದ ಲೇಶಭಾಗದಲ್ಲಿ ಲೇಶಾಂಶಕ್ಕೂ ಸರಿಸಮನಾಗಲಾರವು. ॥೨೦॥

ಸುವಾಸನೆಯಾದ ಹೂಗಳು, ಹಣ್ಣುಗಳು ಮತ್ತು ಹೂಮಾಲೆಗಳು ಇವುಗಳನ್ನು ವಿಶೇಷವಾಗಿ ದಾನಮಾಡುವುದರಿಂದುಂಟಾಗುವ ಫಲವು ಶಿವಲಿಂಗಪೂಜೆಯನ್ನು ಮಾಡುವುದರಿಂದ ಪ್ರಾಪ್ತವಾಗುವ ಪುಣ್ಯದ ಒಂದು ಅಂಶಕ್ಕೂ ಸಮವಾಗಲಾರದು. ॥೨೧॥

ಉಮಾಪತಿಯಾದ ಪರಮೇಶ್ವರನು ತನ್ನ ಲಿಂಗದ ಮೇಲೆ ಸಮರ್ಪಣೆ ಮಾಡಿದ ಹೂವು, ಪತ್ರೆ, ಹಣ್ಣು ಮತ್ತು ನೀರು ಮುಂತಾದವುಗಳನ್ನು ಪ್ರೀತಿಯಿಂದ ಸ್ವೀಕರಿಸಿ, ಅಷ್ಟರಿಂದಲೇ ಆರಾಧಕರಿಗೆ ಅನಂತವಾದ ಭಾಗ್ಯವನ್ನು ಒದಗಿಸಿ ಕೊನೆಯಲ್ಲಿ ಶಾಶ್ವತವಾದ ಮೋಕ್ಷವನ್ನು ಕೊಡುವನು. ॥೨೨॥

ದೂರ್ವಾಂಕುರೈರ್ವಾ ಶಿವಲಿಂಗರೂಪಂ
ಸಂಪೂಜ್ಯ ಭಕ್ತಾಃ ಪ್ರಣಮಂತಿ ಯೇ ತೇ ।
ತೀರ್ತ್ವೈರ್ಣವ ಸಂಸಾರಮಹಾಂಬುಧಿಂ ತಂ
ಪ್ರಯಾಂತಿ ಸಂತಃ ಖಲು ಕಾಲಕಾಲಂ ॥೨೩॥

ಲಿಂಗೇ ಯದಲ್ಪಂ ಫಲಮಂಬುವಾನ್ಯ
ದ್ದತ್ತಂ ತದೇವಾಮಿತಪುಣ್ಯಹೇತುಃ ।
ನ ತೇನ ತುಲ್ಯಂ ಜಗತೀತಲೇಽಸ್ಮಿನ್
ಶುಭಾವಹಂ ಪಾಪವಿನಾಶಹೇತುಃ ॥೨೪॥

ಶಿವಾಯ ಯಃ ಪ್ರತ್ಯಹಮಾದರೇಣ
ದತ್ವಾ ಜಲಂ ಬಿಲ್ವದಲಾನಿ ದದ್ಯಾತ್ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೨೫॥

ಕೇವಲ ಗರಿಕೆಯ ಚಿಗುರುಗಳಿಂದಲೇ ಭಕ್ತಿಪುರಸ್ಸರವಾಗಿ ಶಿವಲಿಂಗರೂಪಿಯಾದ ಪರಮೇಶ್ವರನನ್ನು ಪೂಜೆಮಾಡಿ ನಮಸ್ಕಾರಮಾಡುವ ಭಕ್ತರು, ಈ ಘೋರವಾದ ಸಂಸಾರವೆಂಬ ಸಾಗರವನ್ನು ದಾಟಿ ಕೊನೆಗೆ ಕಾಲಸ್ವರೂಪನಾದ ಯಮನನ್ನೂ ನಿಗ್ರಹಿಸಿರುವ ಮಹಾದೇವನ ಸಾನ್ನಿಧ್ಯವನ್ನೈದುವರು. ॥೨೩॥

ಶಿವಲಿಂಗಕ್ಕೆ ಅಭಿಷೇಕಮಾಡುವ ಸ್ವಲ್ಪವಾದ ನೀರೂ, ಅಥವಾ ಪೂಜೆ ಮಾಡುವ ಪುಷ್ಪಪತ್ರಾದಿಗಳೂ, ಅಪಾರವಾದ ಪುಣ್ಯಫಲಗಳಿಗೆ ಕಾರಣಗಳಾಗುವುವು. ಈ ಪ್ರಪಂಚದಲ್ಲಿ ಇದಕ್ಕೆ ಸಮಾನವಾಗಿ ಶುಭಫಲವನ್ನುಂಟುಮಾಡಿ, ಸಕಲ ಪಾಪಗಳನ್ನೂ ಧ್ವಂಸಮಾಡುವಷ್ಟು ಸಾಮರ್ಥ್ಯವು ಮತ್ತಾವುದಕ್ಕೂ ಬರಲಾರದು. ॥೨೪॥

ಪ್ರತಿನಿತ್ಯವೂ ಭಕ್ತಿಯಿಂದ ಆದರಪೂರ್ವಕವಾಗಿ ಪರಶಿವನಿಗೆ ಪರಿಶುದ್ಧವಾದ ನೀರಿನಿಂದ ಅಭಿಷೇಕಮಾಡಿ, ಅನಂತರ ಹೊಸ ಬಿಲ್ವದಳಗಳಿಂದ ಅರ್ಚನೆ ಮಾಡಿದರೆ, ಉಂಟಾಗುವ ಪುಣ್ಯರಾಶಿಗೆ ಸಮಾನವಾದ ಪುಣ್ಯಫಲಗಳು ಮತ್ತಾವುದರಿಂದಲೂ ದೊರೆಯಲಾರವೆಂದು ಶ್ರುತಿಪ್ರಸಿದ್ಧವಾಗಿದೆ. ಮತ್ತೆಲ್ಲಿಯೂ ಅದಕ್ಕೆ ಸದೃಶವಾದುದನ್ನು ನಾವು ಕಾಣೆವು ಮತ್ತು ಕೇಳಿಲ್ಲ. ॥೨೫॥

ಶಿವಾಯ ದದ್ಯಾದ್ಯದಿ ಮುಷ್ಟಿಮಾತ್ರಂ
ಭಕ್ತ್ಯಾ ಯದನ್ನಂ ಘೃತಲೇಶಯುಕ್ತಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೨೬॥

ದೀಪಂ ಮಹೇಶಾಯ ಘೃತಾಭಿಷಿಕ್ತಂ
ಸದ್ವರ್ತಿಕಾಯುಕ್ತಮಪಿ ಪ್ರದದ್ಯಾತ್ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೨೭॥

ಧೂಪಂ ಮಹೇಶಾಯ ಘೃತೇನ ಯುಕ್ತಂ
ದದಾತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೨೮॥

ಭಕ್ತರು ಶಿವನಿಗೆ ಸಮರ್ಪಿಸುವ ಒಂದು ಹಿಡಿ ಘೃತಮಿಶ್ರ ಅನ್ನದಿಂದುಂಟಾಗುವ ಪುಣ್ಯವು ಮತ್ತೆಲ್ಲಿಯೂ ಯಾವ ಕರ್ಮದಿಂದಲೂ ದೊರೆಯಲಾರದು. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿ ಪ್ರತ್ಯಕ್ಷಗೋಚರವಾಗಿದೆ. ಅಲ್ಲದೆ ಸಕಲ ಶ್ರುತಿಗಳೂ ಅನವರತವೂ ಇದನ್ನೇ ಸಾರುತ್ತಿರುವುವು. ॥೨೬॥

ಒಳ್ಳೆಯ ಬತ್ತಿಗಳನ್ನು ಹಾಕಿದ ತುಪ್ಪದ ದೀಪವನ್ನು ಮಹೇಶ್ವರನಿಗೆ ಅರ್ಪಿಸಿದರೆ ಮತ್ತಾವುದರಿಂದಲೂ ದೊರೆಯದಷ್ಟು ಪುಣ್ಯಫಲವು ಬರುತ್ತದೆಯೆಂದು ಶ್ರುತಿಗಳಲ್ಲಿ ಪ್ರಸಿದ್ಧವಾಗಿದೆ. ಅಲ್ಲದೆ ನಮಗೂ ಪ್ರತ್ಯಕ್ಷವಾಗಿಯೇ ಗೋಚರವಾಗುತ್ತಿರುವುದು. ಮತ್ತೆಲ್ಲಿಯೂ ಇದಕ್ಕೆ ಸಮಾನವಾದ ಪುಣ್ಯವು ಈ ಕರ್ಮದಿಂದ ದೊರಕುವುದೆಂದು ಹೇಳಲು ಸಾಧ್ಯವಾಗಿಲ್ಲ. ॥೨೭॥

ತುಪ್ಪದೊಡನೆ ಬೆರೆದ ಗುಗ್ಗುಲಾದಿಧೂಪಗಳನ್ನು ಪ್ರತಿನಿತ್ಯವೂ ಆದರದಿಂದ ಮಹೇಶ್ವರನಿಗೆ ಸಮರ್ಪಣೆ ಮಾಡಿದರೆ, ಮತ್ತೆಲ್ಲಿಯೂ ಯಾವ ದಾನಧರ್ಮಾದಿ ಕರ್ಮಗಳಿಂದಲೂ ದೊರೆಯದಷ್ಟು ಪುಣ್ಯಸಮೂಹವು ಬರುತ್ತದೆಂದು ಶ್ರುತಿ ಪ್ರಸಿದ್ಧವೂ, ಪ್ರತ್ಯಕ್ಷಗೋಚರವೂ ಆಗಿರುವುದು. ॥೨೮॥

ದಧಿಪ್ರದಾನಂ ಗಿರಿಶಾಯ ಭಕ್ತ್ಯಾಃ
ಕುರ್ವಂತಿ ಯೇ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೨೯॥

ಕ್ಷೀರಪ್ರದಾನಂ ಗಿರಿಶಾಯ ಭಕ್ತ್ಯಾಃ
ಕುರ್ವಂತಿ ಯೇ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೦॥

ಘೃತಪ್ರದಾನಂ ಗಿರಿಶಾಯ ಭಕ್ತ್ಯಾಃ
ಕುರ್ವಂತಿ ಯೇ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ನ ತು ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೧॥

ಪ್ರತಿದಿವಸವೂ ಗಿರಿಶನೆನಿಸಿದ (' ಗಿರೌಶೇತೆ ಇತಿ ಗಿರಿಶಃ ' ಇದರಿಂದ ಸದಾ ಹಿಮವತ್ಪರ್ವತದ ಕೈಲಾಸಶಿಖರದಲ್ಲಿ ವಾಸಮಾಡುವವನು ಎಂಬ ಅರ್ಥಬರುವುದು.) ಶಂಕರನಿಗೆ ಆದರದಿಂದ ಭಕ್ತರು ಮೊಸರನ್ನು ಸಮರ್ಪಣೆಮಾಡಿದರೆ, ಅಪ್ರತಿಮವಾದ ಪುಣ್ಯರಾಶಿಯುಂಟಾಗುವುದೆಂದು ಪ್ರತ್ಯಕ್ಷಸಿದ್ಧವೂ ವೃದ್ಧಸಂಮತವೂ ಮತ್ತು ಆಗಮಗಳಲ್ಲಿ ಪ್ರಸಿದ್ಧವೂ ಆಗಿದೆ. ॥೨೯॥

ದಿನದಿನವೂ ಗಿರಿಶನಾದ ಮಹಾದೇವನಿಗೆ ಭಕ್ತಜನಗಳು ಆದರದಿಂದ ಹಾಲನ್ನು ನಿವೇದನಮಾಡಿದರೆ, ಅಪಾರವಾದ ಪುಣ್ಯವು ಲಭಿಸುವುದು. ಇದಕ್ಕೆ ಸಮವಾದ ಪುಣ್ಯಫಲಗಳು ಮತ್ತಾವುದರಿಂದಲೂ ದೊರೆಯಲಾರವು. ಇದು ಪ್ರತ್ಯಕ್ಷಸಿದ್ಧವಾದುದು. ಮತ್ತು ದೊಡ್ಡವರೂ ಇದನ್ನೇ ಹೇಳುವರು. ಅಲ್ಲದೇ ಶ್ರುತಿಗಳೂ ಇದನ್ನೇ ಎಡಬಿಡದೆ ಹೇಳುತ್ತಿರುವುವು. ॥೩೦॥

ಭಕ್ತಿವಿಶ್ವಾಸಗಳಿಂದ ಪ್ರತಿನಿತ್ಯವೂ ಗಿರಿಶನಿಗೆ ತುಪ್ಪವನ್ನು ಸಮರ್ಪಣೆ ಮಾಡುವುದರಿಂದ ಅಸದೃಶವಾದ ಪುಣ್ಯರಾಶಿಯುಂಟಾಗುವುದೆಂದು, ಪ್ರತ್ಯಕ್ಷ ಅನುಮಾನ ಮತ್ತು ಶಬ್ದ ಈ ಮೂರು ಪ್ರಮಾಣಗಳಿಂದಲೂ ನಿಶ್ಚಯಿಸಬಹುದು. ॥೩೧॥

ಸಿತಾಪ್ರದಾನಂ ಗಿರಿಶಾಯ ಭಕ್ತಾಃ
ಕುರ್ವಂತಿ ಯೇ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ನ ತು ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೨॥

ಫಲಪ್ರದಾನಾನಿ ಮೃಡಾಯ ಭಕ್ತಾಃ
ಕುರ್ವಂತಿ ಯೇ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ನ ತು ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೩॥

ಮಧುಪ್ರದಾನಾನಿ ಭವಾಯ ಭಕ್ತ್ಯಾ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೪॥

ಭಕ್ತರು, ಅನವರತವೂ ಗಿರಿಶನಿಗೆ ಕಲ್ಲುಸಕ್ಕರೆಯನ್ನು ಪ್ರೀತಿವಿಶ್ವಾಸಗಳಿಂದ ಸಮರ್ಪಣೆಮಾಡಿದರೆ, ಅದರಿಂದುಂಟಾಗುವ ಪುಣ್ಯವು ಮತ್ತಾವುದಕ್ಕೂ ಸಮನಾಗಲಾರದು. ಇದು ಪ್ರತ್ಯಕ್ಷಸಿದ್ಧವೂ ಮತ್ತು ದೊಡ್ಡವರ ವಚನವೂ ಆಗಿರುವುದು. ಅಲ್ಲದೇ ಶ್ರುತಿಗಳೂ ಇದನ್ನೇ ಹೇಳುತ್ತಿರುವುವು. ॥೩೨॥

ಪ್ರತಿ ದಿವಸವೂ ಮೃಡಸಂಜ್ಞಕನಾದ ಮಹಾದೇವನಿಗೆ ಉತ್ತಮವಾದ ಫಲಗಳನ್ನು ಭಕ್ತಜನರು ಭಕ್ತಿಶ್ರದ್ಧಾದಿಗಳಿಂದ ಸಮರ್ಪಣೆಮಾಡಬೇಕು. ಇದರಿಂದ ಅಸದೃಶವಾದ ಪುಣ್ಯರಾಶಿಯುಂಟಾಗುತ್ತದೆ. ಇದಕ್ಕೆ ಪ್ರತ್ಯಕ್ಷವಾಗಿಯೂ ವೃದ್ಧಸಂಮತಿಯಿಂದಲೂ ಪ್ರಮಾಣವಿರುವುದಲ್ಲದೆ ಎಲ್ಲಾ ಶ್ರುತಿಗಳೂ ಇದನ್ನೇ ಅತಿಯಾಗಿ ವರ್ಣಿಸುತ್ತಿರುವುವು. ॥೩೩॥

ಭವಸಂಜ್ಞಕನಾದ ಮಹಾದೇವನಿಗೆ ಭಕ್ತಿಯಿಂದ ಮಧುವನ್ನು (ಜೇನುತುಪ್ಪವನ್ನು) ಪ್ರತಿನಿತ್ಯವೂ ಸಮರ್ಪಣೆಮಾಡುವುದರಿಂದ, ಇನ್ನೆಲ್ಲಿಯೂ ಮತ್ತಾವುದರಿಂದಲೂ ದೊರೆಯದಷ್ಟು ಪುಣ್ಯಫಲಗಳುಂಟಾಗುವುವೆಂದು, ಪ್ರತ್ಯಕ್ಷಾನುಮಾನ ಮತ್ತು ಶಬ್ದಪ್ರಮಾಣಗಳು ಸಾರುತ್ತಿರುವುವು. (ಅಂದರೆ, ಇಲ್ಲಿ ದೃಷ್ಟವೆಂಬ ಪದದಿಂದ ದರ್ಶನಯೋಗ್ಯವೆಂಬರ್ಥಮಾಡಿ ಪ್ರತ್ಯಕ್ಷವೆಂದೂ, ಶ್ರುತವೆಂಬುದ

ತಾಂಬೂಲದಾನಂ ಗಿರಿಶಾಯ ಭಕ್ತ್ಯಾ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೫॥

ಏಲಾಲವಂಗಾದಿಕಮಾದರೇಣ
ದದಾತಿ ಯಃ ಪ್ರತ್ಯಹಮೀಶ್ವರಾಯ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೬॥

ದದಾತಿ ಯೋ ದರ್ಪಣಮೀಶ್ವರಾಯ
ಮನೋಹರಂ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೭॥

ರಿಂದ ವೃದ್ಧವಚನರೂಪವಾದ ಉಪದೇಶದಿಂದ ಅನುಮಾನವೆಂದೂ, ಶ್ರುತಿ ಎಂಬುದರಿಂದ ಶಬ್ದಪ್ರಮಾಣವೆಂದೂ ನಿಷ್ಕರ್ಷೆಮಾಡಿದೆ.) ॥೩೪॥

ಭಕ್ತಿಯಿಂದ ಗಿರಿಶನಿಗೆ ಪ್ರತಿನಿತ್ಯವೂ ಆದರಪೂರ್ವಕವಾಗಿ ತಾಂಬೂಲವನ್ನು ಸಮರ್ಪಣೆ ಮಾಡಿದರೆ ಅಪರಿಮಿತವಾದ ಪುಣ್ಯಫಲವುಂಟಾಗುವುದು. ಇದಕ್ಕೆ ಸಮಾನವಾದ ಪುಣ್ಯವು ಮತ್ತಾವ ಯಾಗಾದಿಗಳಿಂದಲೂ ಅಥವಾ ಇತರ ಧರ್ಮಾಚರಣೆಯಿಂದಲೂ ದೊರೆಯಲಾರದು. ಇದು ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಈ ಮೂರು ಪ್ರಮಾಣಗಳಿಂದಲೂ ತಿಳಿದುಬರುತ್ತಿದೆ. ॥೩೫॥

ಭಕ್ತಜನರು, ಏಲಕ್ಕೀ, ಲವಂಗ ಮುಂತಾದುವುಗಳನ್ನು ಆದರದಿಂದ ಪ್ರತಿದಿನವೂ ಮಹೇಶ್ವರನಿಗೆ ಸಮರ್ಪಣೆಮಾಡಿದರೆ, ಮತ್ತಾವ ಕರ್ಮದಿಂದಲೂ ದೊರೆಯದಿರುವಷ್ಟು ಪುಣ್ಯವುಂಟಾಗುವುದೆಂದು, ಪ್ರತ್ಯಕ್ಷ, ಅನುಮಾನ ಮತ್ತು ಶಬ್ದ ಈ ಮೂರು ಪ್ರಮಾಣಗಳಿಂದಲೂ ಸಿದ್ಧವಾಗುವುದು. ॥೩೬॥

ಪ್ರತಿ ನಿತ್ಯವೂ ಭಕ್ತಿ ಆದರಗಳಿಂದ ಮಹೇಶ್ವರನಿಗೆ ಮನೋಹರವಾದ ಕನ್ನಡಿಯನ್ನು ಸಮರ್ಪಿಸುವವನು, ಅನನ್ಯಲಭ್ಯವೂ ಅಸದೃಶವೂ, ಆದ ಪುಣ್ಯರಾಶಿ

ಕರೋತಿ ಯಶ್ಚಾಮರವೀಜನೇನ
ವಾತಪ್ರಸಾದಂ ಗಿರಿಶಾಯ ನಿತ್ಯಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೮॥

ಛತ್ರಪ್ರದಾನಂ ನಿಯಮೇನ ನಿತ್ಯಂ
ಕರೋತಿ ಯಃ ಸರ್ವಸುರೋತ್ತಮಾಯ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೩೯॥

ಧ್ವಜಪ್ರದಾನಂ ಗಿರಿಶಾಯ ನಿತ್ಯಂ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ನ ತು ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೦॥

ಗಳನ್ನು ಹೊಂದುವನೆಂಬುದಕ್ಕೆ ಪ್ರತ್ಯಕ್ಷಾನುಮಾನ ಶಬ್ದರೂಪವಾದ ಮೂರು ಪ್ರಮಾಣಗಳೂ ನಿದರ್ಶನವಾಗಿರುವುವು. ॥೩೭॥

ಪ್ರತಿನಿತ್ಯವೂ ಆದರದಿಂದ ಚಾಮರವನ್ನು ಬೀಸುತ್ತಾ ಮಹೇಶ್ವರನಿಗೆ ಗಾಳಿಹಾಕುವ ಭಕ್ತನು, ಪಡೆಯುವ ಪುಣ್ಯವು ಮತ್ತಾವುದಕ್ಕೂ ಸಮವಾಗಲಾರದು. ಇದಕ್ಕೆ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದಗಳೆಂಬ ಮೂರು ಪ್ರಮಾಣಗಳೂ ಸಹಾಯಕವಾಗಿವೆ. ॥೩೮॥

ನಿಯಮಪೂರ್ವಕವಾಗಿ ನಿತ್ಯವೂ ಸಕಲ ದೇವತೆಗಳಲ್ಲಿಯೂ ಉತ್ತಮನೆನಿಸಿದ ಮಹಾದೇವನಿಗೆ, ಛತ್ರಿಯನ್ನು ಸಮರ್ಪಣೆಮಾಡುವ ಭಕ್ತನಿಗೆ ದೊರೆಯುವ ಪುಣ್ಯಕ್ಕೆ ಸಮಾನವಾದ ಪುಣ್ಯವು ಮತ್ತಾವುದೂ ಇಲ್ಲವೆಂಬುದರಲ್ಲಿ ಪ್ರತ್ಯಕ್ಷಾನುಮಾನ ಮತ್ತು ಶಬ್ದ ಈ ಮೂರು ಪ್ರಮಾಣಗಳೂ ನಿದರ್ಶನವಾಗಿವೆ. ॥೩೯॥

ಪ್ರತಿದಿನವೂ ಗಿರಿಶನಿಗೆ ಆದರದಿಂದ ಧ್ವಜವನ್ನು ಸಮರ್ಪಣೆಮಾಡುವುದರಿಂದುಂಟಾಗುವ ಪುಣ್ಯಕ್ಕೆ ಸಮಾನವಾದ ಪುಣ್ಯವಾವುದೂ ಬೇರೆ ಇಲ್ಲವು. ಇದಕ್ಕೆ ಪ್ರತ್ಯಕ್ಷಾನುಮಾನ ಮತ್ತು ಶಬ್ದಗಳೆಂಬ ಮೂರು ಪ್ರಮಾಣಗಳೂ ನಿದರ್ಶನವಾಗಿರುವುವು. ॥೪೦॥

ನಾಟ್ಯಪ್ರದಾನಂ ಗಿರಿಶಾಯ ನಿತ್ಯಂ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೧॥

ತೂರ್ಯಪ್ರದಾನಂ ಗಿರಿಶಾಯ ನಿತ್ಯಂ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೨॥

ಸಂಮಾರ್ಜನಂ ಶಂಕರಮಂದಿರಸ್ಯ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೩॥

ಪ್ರತಿನಿತ್ಯವೂ ಗಿರಿಶನ ಮುಂದೆ ನಾಟ್ಯವನ್ನು ಮಾಡಿಸಿ ಸಂತೋಷಪಡಿಸುವ ಭಕ್ತನು ಹೊಂದುವ ಪುಣ್ಯರಾಶಿಯು ಮತ್ತಾವುದಕ್ಕೂ ಸಮಾನವಾಗಲಾರದು. ಇದಕ್ಕೆ ಪ್ರತ್ಯಕ್ಷಾನುಮಾನ ಮತ್ತು ಶಬ್ದರೂಪವಾದ ಮೂರು ಪ್ರಮಾಣಗಳುಂಟು. ॥೪೧॥

ನಿತ್ಯವೂ ಆದರದಿಂದ ಪರಮೇಶ್ವರನ ತೃಪ್ತ್ಯರ್ಥವಾಗಿ ತೂರ್ಯವೆಂಬ ವಾದ್ಯ (ತುತ್ತೂರಿ) ವನ್ನು ಬಾರಿಸುವುದರಿಂದ ಉಂಟಾಗುವ ಪುಣ್ಯವು ಅಸದೃಶ ವಾದುದು. ಇಂತಹ ಪುಣ್ಯವು ಮತ್ತಾವುದರಿಂದಲೂ ಬರಲಾರದು. ನಾವು ಇಲ್ಲಿಯವರೆವಿಗೆ ನೋಡಿಲ್ಲ, ಕೇಳಿಯೂ ಇಲ್ಲ. ಇದು ಶ್ರುತಿಗಳಲ್ಲಿ ಪ್ರಸಿದ್ಧಿ ಯಾಗಿರುವುದು. ॥೪೨॥

ಶಂಕರನ ದೇವಾಲಯವನ್ನು ಪ್ರತಿನಿತ್ಯವೂ ಭಕ್ತಿಶ್ರದ್ಧೆಗಳಿಂದ ಆದರ ಪೂರ್ವಕವಾಗಿ ಗುಡಿಸುವುದರಿಂದ ಉಂಟಾಗುವ ಪುಣ್ಯಕ್ಕೆ ಸಮವಾದ ಪುಣ್ಯವು ಮತ್ತಾವುದರಿಂದಲೂ ದೊರೆಯಲಾರದು. ಹಾಗೆ ಪುಣ್ಯವನ್ನು ಸಂಪಾದಿಸಿದವರು ಅನೇಕ ಮಂದಿ ಪ್ರಸಿದ್ಧರಾಗಿರುವರು. ॥೪೩॥

ದೀಪಾವಲೀಂ ಶಂಕರಮಂದಿರೇಷು
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೪॥

ದುಕೂಲದಾನಂ ಗಿರಿಶಾಯ ಭಕ್ತ್ಯಾ
ಕರೋತಿ ಯಃ ಪ್ರತ್ಯಹಮಾದರೇಣ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೫॥

ಕರೋತಿ ಯಃ ಪುಷ್ಪವಿತಾನದಾನಂ
ಭಕ್ತ್ಯಾ ಮಹೇಶಾಯ ವಿಶೇಷಕಾಲೇ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೬॥

ಶಿವದೇವಾಲಯಗಳಲ್ಲಿ ಪ್ರತಿದಿನವೂ ಆದರದಿಂದ ದೀಪಪಂಕ್ತಿಗಳನ್ನು ಹತ್ತಿಸುವುದರಿಂದುಂಟಾಗುವ ಪುಣ್ಯಕ್ಕೆ ಸಮಾನವಾದುದು ಬೇರೆ ಯಾವುದೂ ಇಲ್ಲ. ಇದಕ್ಕೆ ಸಮಾನವಾದುದನ್ನು ನಾವು ನೋಡಿಯೂ ಇಲ್ಲ; ಅಥವಾ ಕೇಳಿಯೂ ಇಲ್ಲ. ಈ ಶಿವಸೇವೆಯಿಂದುಂಟಾಗುವ ಫಲವು ಶ್ರುತಿಗಳಲ್ಲಿ ಹಾಗೇ ಪ್ರಸಿದ್ಧವಾಗಿದೆ. ॥೪೪॥

ಗಿರಿಶನೆನಿಸಿದ ಮಹಾದೇವನಿಗೆ ಪ್ರತಿದಿನವೂ ಭಕ್ತಿವಿಶ್ವಾಸಗಳಿಂದ ದುಕೂಲ (ಪಟ್ಟೆವಸ್ತ್ರಗಳನ್ನು) ದಾನಮಾಡಿದರೆ ಉಂಟಾಗುವ ಪುಣ್ಯಕ್ಕೆ ಸಮಾನವಾದುದನ್ನು ನಾವು ನೋಡಿಯೂ ಇಲ್ಲ, ಅಥವಾ ಕೇಳಿಯೂ ಇಲ್ಲ. ಅಲ್ಲದೇ ತತ್ಸದೃಶವಾದ ಮತ್ತೊಂದು ಕರ್ಮವು ವೇದಗಳಲ್ಲಿ ಪ್ರಸಿದ್ಧವಾಗಿಯೂ ಇಲ್ಲ. (ಅಂದರೆ ಈ ಶಿವ ಪೂಜಾಫಲಕ್ಕೆ ಸಮಾನವಾದ ಫಲಗಳು ಇತರ ಯಾಗಾದಿ ಕರ್ಮಗಳಿಂದ ಬರುತ್ತ ವೆಂದು ಶ್ರುತಿಗಳಲ್ಲಿ ಹೇಳಿಲ್ಲವೆಂದು ತಿಳಿಯಬೇಕು.) ॥೪೫॥

ಮಹೇಶ್ವರನಿಗೆ ವಿಶೇಷ ಉತ್ಸವಾದಿ ದಿನಗಳಲ್ಲಿ (ಅಂದರೆ ಶಿವರಾತ್ರಿ ಮುಂತಾದ ದಿನಗಳಲ್ಲಿ) ಹೂವಿನ ಛತ್ರಿ (ಚಪ್ಪರ) ಯನ್ನು ಮಾಡಿಸಿ ಭಕ್ತಿಯಿಂದ ಸಮರ್ಪಣೆ ಮಾಡುವವನಿಗೆ ಉಂಟಾಗುವ ಪುಣ್ಯಕ್ಕೆ ಸಮಾನವಾದ ಪುಣ್ಯಫಲ

ವಸಂತಕಾಲೇ ನವಚಂದನೇನ
ಕರೋತಿ ಲಿಂಗೇಷ್ವನುಲೇಪನಾನಿ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೭॥

ದಧ್ಯನ್ನದಾನೇನ ಕರೋತಿ ಪೂಜಾಂ
ನಿತ್ಯಂ ಮಹೇಶಾಯ ತು ಸೋಪದಂಶಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೮॥

ವನ್ನು ನೋಡಿಯೂ ಇಲ್ಲ. ಕೇಳಿಯೂ ಇಲ್ಲ. ಅಥವಾ ವೇದಗಳಲ್ಲಿ ಪ್ರಸಿದ್ಧವೂ ಆಗಿಲ್ಲ. (ಇಲ್ಲ ವಿತಾನವೆಂಬ ಪದಕ್ಕೆ ಛತ್ರಿಯೆಂದೇ ಅರ್ಥವಾಡಿದೆ. ಏಕೆಂದರೆ ಛತ್ರಿಯಂತೆಯೇ ದೇವರಮೇಲೆ ಚೌಕಟ್ಟಾದ ಒಂದು ಉತ್ತಮವಾದ, ಬಿಸಿಲು ಬರದಿರುವಂತೆ ಹಿಡಿದುಕೊಳ್ಳುವ ಬಟ್ಟೆಗೆ ವಿತಾನವೆನ್ನುವರು. ಇದನ್ನು ನಾಲ್ಕು ಮೂಲೆಗಳಲ್ಲಿಯೂ ನಾಲ್ಕುಮಂದಿ, ಕೋಲುಗಳ ಸಹಾಯದಿಂದ ಹಿಡಿದುಕೊಂಡು ಹೋಗುವರು.) ॥೪೬॥

ವಸಂತಋತುವಿನ ಸಮಯದಲ್ಲಿ ಹೊಸ ಚಂದನದಿಂದ ಶಿವಲಿಂಗಕ್ಕೆ ಅನುಲೇಪನೆ ಮಾಡುವುದರಿಂದುಂಟಾಗುವ ಪುಣ್ಯವು ಇತರ ಪುಣ್ಯಗಳಿಗೆ ಸರಿತೂಗಲಾರದೆಂದು ವೇದಗಳಲ್ಲಿ ಹೇಳಿದೆ. ಇದಕ್ಕೆ ಸಮಾನವಾದುದನ್ನು ನಾವು ನೋಡಿಯೂ ಇಲ್ಲ. ಕೇಳಿಯೂ ಇಲ್ಲ. ॥೪೭॥

ಪ್ರತಿನಿತ್ಯವೂ ಮೊಸರನ್ನವನ್ನು ಮಾಡಿ, ಮಹಾದೇವನಿಗೆ, ಆ ಮೊಸರನ್ನವನ್ನು ಉಪದಂಶದೊಡನೆ (ಉಪ್ಪಿನಕಾಯಿ ಮುಂತಾದ ನೆಂಚಿಕೊಳ್ಳುವ ಪದಾರ್ಥಗಳೊಡನೆ) ಭಕ್ತಿಯಿಂದ ನಿವೇದನಮಾಡಿ ಪೂಜೆಮಾಡುವುದರಿಂದ ಉಂಟಾಗುವ ಪುಣ್ಯಕ್ಕೆ ಇತರ ಪುಣ್ಯಗಳು ಸಮಾನವಾಗಲಾರವು. ಇದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ವೃದ್ಧರೂ ಇದನ್ನು ಒಪ್ಪುವರು. ವೇದಗಳೂ ಸಹ ಇದನ್ನೇ ಸದಾ ಹೇಳುತ್ತಿರುವುವು. ॥೪೮॥

ಕ್ಷೀರಾನ್ನದಾನೇನ ಕರೋತಿ ಪೂಜಾಂ
ನಿತ್ಯಂ ಮಹೇಶಾಯ ತು ಸೋಪದಂಶಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೪೯॥

ಘೃತಾನ್ನದಾನೇನ ಕರೋತಿ ಪೂಜಾಂ
ನಿತ್ಯಂ ಮಹೇಶಾಯ ಚ ಸೋಪದಂಶಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೫೦॥

ಮಧ್ವನ್ನದಾನೇನ ಕರೋತಿ ಪೂಜಾಂ
ನಿತ್ಯಂ ಮಹೇಶಾಯ ಚ ಸೋಪದಂಶಂ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೫೧॥

ನಿತ್ಯವೂ ಮಹೇಶ್ವರನಿಗೆ ಭಕ್ತಿಯಿಂದ ಉಪದಂಶಸಮೇತವಾದ ಕ್ಷೀರಾನ್ನವನ್ನು ನಿವೇದನಮಾಡಿ, ಪೂಜಿಸುವುದರಿಂದ ಉಂಟಾಗುವ ಪುಣ್ಯವು ಇತರ ಕರ್ಮಗಳಿಂದುಂಟಾಗುವ ಪುಣ್ಯಕ್ಕಿಂತಲೂ ಅತಿಶಯವಾದುದೆಂದು ಶ್ರುತಿಗಳು ಸಾರುತ್ತಿರುವುವು. ಇಂತಹ ಪುಣ್ಯಪ್ರದವಾದ ಕರ್ಮವೊಂದನ್ನು ನಾವೂ ನೋಡಿಲ್ಲ ಮತ್ತು ಕೇಳಿಯೂ ಇಲ್ಲ. ॥೪೯॥

ಪ್ರತಿದಿನವೂ ಮಹೇಶ್ವರನಿಗೆ ಭಕ್ತಿಯಿಂದ ಉಪದಂಶಸಮೇತವಾದ ತುಪ್ಪದನ್ನವನ್ನು ನಿವೇದನಮಾಡಿ ಪೂಜಿಸುವುದರಿಂದುಂಟಾಗುವ ಪುಣ್ಯಫಲಕ್ಕೆ ಸಮಾನವಾದ ಪುಣ್ಯವು ಮತ್ತಾವುದರಿಂದಲೂ ಬರಲಾರದೆಂದು ಶ್ರುತಿಗಳಲ್ಲಿ ಪ್ರಸಿದ್ಧವಾಗಿರುವುದು. ದೊಡ್ಡವರೂ ಹೀಗೆಯೇ ಹೇಳುವರು. ಅಲ್ಲದೇ ನಾವೂ ನೋಡಿಲ್ಲ. ॥೫೦॥

ಜೇನುಮಿಶ್ರವಾದ ಅನ್ನವನ್ನು ಪ್ರತಿನಿತ್ಯವೂ ಮಹೇಶ್ವರನಿಗೆ ಇತರ ವ್ಯಂಜನಸಾಮಗ್ರಿಗಳೊಡನೆ ನಿವೇದನಮಾಡುತ್ತಾ ಪೂಜಿಸುವುದರಿಂದುಂಟಾಗುವ ಫಲವು ಇತರ ಪುಣ್ಯಫಲಗಳಿಗಿಂತ ಅಧಿಕವಾದುದೆಂದು ಶ್ರುತಿಗಳಲ್ಲಿ ಪ್ರಸಿದ್ಧವಾ

ಮಹೇಶನೈವೇದ್ಯವಿಶೇಷದಾನೈ
ರ್ಯಶ್ಶಂಕರಂ ತೋಷಯತಿ ಪ್ರಯತ್ನಾತ್ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೫೨॥

ಮಹೇಶದತ್ತೈರ್ವಸನೈರ್ಧನೈರ್ವಾ
ಯಶ್ಶಂಕರಂ ತೋಷಯತಿ ಪ್ರಯತ್ನಾತ್ ।
ತತ್ಪುಣ್ಯತುಲ್ಯಂ ತು ನ ಪುಣ್ಯಮಸ್ತಿ
ದೃಷ್ಟಂ ಶ್ರುತಂ ವಾ ಶ್ರುತಿಷು ಪ್ರಸಿದ್ಧಂ ॥೫೩॥

ಕಿಂ ಲಿಂಗಾರ್ಚನಪುಣ್ಯತುಲ್ಯಮನಘಂ ಪುಣ್ಯಂ ಶ್ರುತಂ ತದ್ಯತಃ
ಪುಣ್ಯಾನಾಮಪಿ ಪುಣ್ಯಮುತ್ತಮತಮಂ ತತ್ಸರ್ವಪುಣ್ಯಾಲಯಂ ।
ತನ್ಮೃತ್ಯುಂಜಯತೋಷಕಾರಣಮಿತಿ ಜ್ಞಾತಂ ತದೇವೋತ್ತಮಂ
ತದ್ವೇದಾಂತಶಿರೋಮಣಿಶೃತಿಮತಂ ಕಿಂ ತೇನ ತುಲ್ಯಂ ಸುರಾಃ ॥೫೪॥

ಗಿರುವುದು. ಪ್ರತ್ಯಕ್ಷವಾಗಿಯೂ ಹೀಗೇ ತೋರುವುದು. ವೃದ್ಧರೂ ಇದನ್ನೇ ಹೇಳಿರುವರು. ॥೫೧॥

ಮಹೇಶ್ವರನಿಗೆ ವಿಶೇಷವಾಗಿ ಬಗೆಬಗೆಯಾದ ನೈವೇದ್ಯಗಳನ್ನು ಸಮರ್ಪಿಸಿ ಶಂಕರನನ್ನು ಪ್ರಯತ್ನಪೂರ್ವಕವಾಗಿ (ಶ್ರದ್ಧೆಯಿಂದ) ಸಂತೋಷಪಡಿಸುವವನಿಗೆ ದೊರೆಯುವ ಪುಣ್ಯಕ್ಕೆ ಸಮಾನವಾದುದೇ ಈ ಪ್ರಪಂಚದಲ್ಲಿಲ್ಲ. ಇದು ವೇದ ಗಳಲ್ಲಿ ಪ್ರಸಿದ್ಧವಾಗಿ ದೊಡ್ಡವರಿಂದಲೂ ಹೇಳಲ್ಪಟ್ಟಿದೆ. ॥೫೨॥

ಮಹೇಶ್ವರನಿಗೆ ಅಮೂಲ್ಯವಾದ ವಸ್ತ್ರಗಳು ಮತ್ತು ದ್ರವ್ಯ ಇವುಗಳನ್ನು ಸಮರ್ಪಿಸಿ, ಮಂಗಳಕರನಾದ ಶಂಕರನು ಸಂತೋಷಹೊಂದುವಂತೆ ನಿಯಮ ಪೂರ್ವಕವಾಗಿ ಆಚರಿಸುವವನಿಗುಂಟಾಗುವ ಪುಣ್ಯಕ್ಕೆ ಸಮಾನವಾದ ಪುಣ್ಯವು ಮತ್ತಾವುದೂ ಇಲ್ಲ. ವೇದಗಳಲ್ಲಿಯೂ ಇದನ್ನೇ ತುಂಬಾ ಹೊಗಳಿರುವರು. ದೊಡ್ಡವರೂ ಹೀಗೆಯೇ ಹೇಳುತ್ತಿರುವರು. ॥೫೩॥

ಓ ದೇವತೆಗಳಿರಾ! ಲಿಂಗಾರ್ಚನೆಯಿಂದುಂಟಾಗುವ ಪುಣ್ಯಕ್ಕೆ ಸಮಾನ ವಾದ ಪುಣ್ಯವನ್ನು ನೀವೆಲ್ಲಾದರೂ ಕೇಳಿರುವಿರಾ! ಈ ಲಿಂಗಾರ್ಚನೆಯಿಂ ದುಂಟಾಗುವ ಪುಣ್ಯವು ಇತರ ಎಲ್ಲಾವಿಧವಾದ ಪುಣ್ಯಗಳಿಗಿಂತಲೂ ಉತ್ತಮೋ

ರೇ ರೇ ಸುರಾಶ್ಶಿವಪದಾಂಬುಜಪೂಜನೇನ
ತುಲ್ಯಂ ನ ಪುಣ್ಯಮತುಲಂ ತದಪಾರಪುಣ್ಯೈಃ ।
ಸಾಧ್ಯಂ ತದೇವ ಸುಕರಂ ಕರವೀರಪುಷ್ಪೈಃ
ದೂರ್ವಾಂಕುರೈರಪಿ ಕೃತಂ ವಿತನೋತಿ ಮುಕ್ತಿಂ ॥೫೫॥

ವಿಶ್ವಾಸಃ ಶಿವಪೂಜನೇಽಪ್ಯಗಣಿತೈಃ ಪುಣ್ಯೈಃ ಪರಂ ಜಾಯತೇ
ಜಾತಸ್ಯಾಪ್ಯನುವರ್ತನಂ ಬಹುತರೈಃ ಪುಣ್ಯಾಬ್ಧಿಭಿರ್ಜಾಯತೇ ।
ತತ್ಪೂಜಾಕರಣೇನ ಸರ್ವನಿಧಯಃ ಪ್ರಾಪ್ತಾಃ ಸಮಸ್ತಾಸ್ತದಾ
ಕಲ್ಯಾಣಾಂಬುಧಯೋಽಪ್ಯಪಾರವಿಭವಾಃ ಪ್ರಾಪ್ತಾಃ ಪರಾರ್ಧಾಧಿಕಾಃ ॥೫೬॥

ತ್ತಮವೆಂದೂ, ಸಕಲ ಇತರ ಪುಣ್ಯಗಳಿಗೂ ಇದೇ ಆಶ್ರಯಸ್ಥಾನವೆಂದೂ ತಿಳಿಯಿರಿ. ಆದಕಾರಣ ಈ ಲಿಂಗಾರ್ಚನೆ, ಶಿವಧ್ಯಾನ ಮುಂತಾದವುಗಳು ಉತ್ತಮವಾದವುಗಳೆಂದು ತಿಳಿದು, ಇದರಿಂದ ಆ ಮೃತ್ಯುಂಜಯನೆನಿಸಿದ ಮಹಾದೇವನಿಗೆ ಸಂತೋಷವುಂಟಾಗುವಂತೆ ನಡೆಯಿರಿ! ಸಕಲ ವೇದಾಂತಗಳಿಗೂ ಶಿರೋಮಣಿಸ್ಥಾನವಾಗಿರುವ ವೇದಗಳಲ್ಲಿ ಈ ಪುಣ್ಯಕ್ಕಿಂತಲೂ ಅಧಿಕವಾದ ಅಥವಾ ಸಮಾನವಾದ ಕರ್ಮವೊಂದು ಹೇಳಿಯೇ ಇಲ್ಲ. ॥೫೪॥

ಓ ದೇವತೆಗಳಿರಾ, ಈ ಶಿವನ ಪಾದಕಮಲಗಳನ್ನು ಅರ್ಚನೆಮಾಡುವುದರಿಂದ ದೊರೆಯುವ ಪುಣ್ಯವು ಅಪಾರವಾದುದು. ಮತ್ತು ಅಸದೃಶವಾದುದು. ಈ ಶಿವಾರ್ಚನೆಯಾದರೋ ಅಪಾರಪುಣ್ಯಕರ್ಮಗಳಿಂದ ಲಭಿಸುವುದೇ ಕಷ್ಟ. ಅಸಾಧ್ಯವೂ ಅಪರಿಮಿತವೂ ಆದ ಇತರ ಕರ್ಮಾಚರಣೆಯಿಂದುಂಟಾಗುವ ಪುಣ್ಯಫಲಗಳನ್ನು ಈ ಮಹಾದೇವನು ತನ್ನನ್ನು ಕೇವಲ ಕಣಿಗಲೇಹೂ ಮತ್ತು ಗರಿಕೆ ಇವುಗಳಿಂದ ಪೂಜಿಸಿದರೆ, ಸುಲಭವಾಗಿ ಕೊಡುವನಲ್ಲದೇ ವಿಶೇಷವಾಗಿ ಕೊನೆಗೆ ತನ್ನ ಭಕ್ತರಿಗೆ ಮೋಕ್ಷವನ್ನೂ ಉಂಟುಮಾಡುವನು. ॥೫೫॥

ಮೊದಲು ಶಿವಪೂಜೆಯಲ್ಲಿ ವಿಶ್ವಾಸಹುಟ್ಟಬೇಕಾದರೆ ಅಪರಿಮಿತವಾದ ಪುಣ್ಯಕರ್ಮಗಳನ್ನು ಮಾಡಬೇಕು. ಹೀಗೆ ವಿಶ್ವಾಸವುಂಟಾದರೂ ಅದನ್ನು ಸರಿಯಾಗಿ ಆಚರಿಸಬೇಕಾದರೆ ಮತ್ತೂ ಹೆಚ್ಚಿನ ಸುಕೃತವನ್ನು ಗಳಿಸಬೇಕಾಗಿದೆ. ಹೀಗೆ ವಿಶ್ವಾಸವುಂಟಾದ ಮೇಲೆ, ನಿಯಮದಿಂದ ಭಕ್ತಿಶ್ರದ್ಧಾಪುರಸ್ಸರವಾಗಿ ಶಿವನನ್ನು ಪೂಜಿಸಿದರೆ ಸಕಲ ಅಣಿಮಾದ್ಯಷ್ಟಸಿದ್ಧಿಗಳೂ, ಒಂಬತ್ತು ಮಹಾನಿಧಿ

ಕಾಮಂ ಕಾಯವಿಶೋಷಣಾಯ ಮುನಿಭಿಸ್ತಪ್ತಂ ತತಃ ಕಿಂ ತತೋ
ಲಿಂಗಾರಾಧನಮಂತರೇಣ ಮರಣೇ ಭೋಗಸ್ಯ ಮುಕ್ತೇರಪಿ ।
ವಾರ್ತಾ ನೇತ್ಯವಧಾರಿತಂ ಶ್ರುತಿಗಣೈರ್ಲಿಂಗಾರ್ಚನಂ ಕಾಮದಂ
ಸರ್ವೇಷಾಮಿತಿ ನಿಶ್ಚಿತಂ ತದಿತರತ್ಸರ್ವಂ ತುಷಾನ್ವೇಷಣಂ ॥೫೭॥

ಏಕಂ ಬಿಲ್ವದಲಂ ನವಂ ಶಿಥಿಲಮಪ್ಯಮ್ಲಾನಮಪ್ಯಲ್ಪವ
ತ್ಯಲ್ಪಂ ಯಚ್ಛಿವಲಿಂಗಭಾಗನಿಹಿತಂ ಹಂತ್ಯಾಪದಾಂಭೋನಿಧೀನ್ ।
ಕಲ್ಯಾಣಾಂಬುಧಿಪಂಕ್ತಿಮಪ್ಯನುದಿನಂ ತಾವತ್ಕರೋತ್ಯನ್ವಹಂ
ಮೋದಾಂಭೋಧಿವಿವರ್ಧನಂ ಚ ಬಹುಧಾ ಮುಕ್ತಿಂ ತನೋತ್ಯಂತತಃ॥೫೮॥

ಗಳೂ ಸಹ ಸುಲಭವಾಗಿ ಪ್ರಾಪ್ತವಾಗುವುವು. ಅಲ್ಲದೇ ಅಪಾರವಾದ ಐಶ್ವರ್ಯ ಪರಂಪರೆಗಳೊಡನೆ ಸಕಲ ಕಲ್ಯಾಣಗಳೂ ಅಪರಿಮಿತವಾಗಿ ಲಭಿಸುವುವು. ||೫೬||

ಮಹರ್ಷಿಗಳು ಯಥೇಚ್ಛವಾಗಿ ತಮ್ಮ ಶರೀರವನ್ನು ಕೃಶಮಾಡಿ ಘೋರವಾದ ತಪಸ್ಸುಗಳನ್ನಾಚರಿಸಿದರೂ ಲಿಂಗಾರ್ಚನೆಮಾಡದೇ ಹೋದಪಕ್ಷದಲ್ಲಿ ಆ ತಪಸ್ಸುಗಳು ಕೇವಲ ಶರೀರಕ್ಲೇಶ ಮಾತ್ರ ಫಲವಾಗುವುವು. ಇವರು ಮುಂದೆ ಮರಣಹೊಂದಿದರೂ, ದಿವ್ಯಭೋಗಗಳನ್ನಾಗಲೀ, ಅಥವಾ ಮೋಕ್ಷವನ್ನಾಗಲೀ ಪಡೆಯಲಾರರು. ಇದು ನಿಶ್ಚಯ ಎಂದು ಶ್ರುತಿಗಳು ಸದಾ ಹೇಳುತ್ತಿರುವುವು. ಆದುದರಿಂದ ಈ ಮಹೇಶ್ವರನ ಲಿಂಗಾರ್ಚನೆಯೇ ಸಕಲ ಇಷ್ಟಾರ್ಥಗಳನ್ನೂ ಕೊಡುವುದು. ಉಳಿದ ತಪಸ್ಸು, ಯಜ್ಞಯಾಗಾದಿಗಳೆಲ್ಲವೂ ಕೇವಲ ತುಷಾನ್ವೇಷಣರೂಪವಾಗಿರುವುದೆಂದು ತಿಳಿಯಿರಿ. (ಅಂದರೆ ಉತ್ಕೃಷ್ಟವಾದ ಪ್ರಯೋಜನವನ್ನುಂಟುಮಾಡುವ ಕಟ್ಟಿಗೆ ಮುಂತಾದವುಗಳಿದ್ದರೂ, ಹೊಟ್ಟನ್ನು ಹುಡುಕುವುದು ಹೇಗೋ ಹಾಗೆಂದು ತಿಳಿಯಬೇಕು.) ||೫೭||

ಒಂದೇ ಒಂದು ಹೊಸದಾದ ಮತ್ತು ಬಾಡದೇ ಸುಂದರವಾಗಿರುವ ಬಿಲ್ವದಲವನ್ನು ಅಲ್ಪವಾದುದೆಂದು ಭಾವಿಸಿ ಶಿವಲಿಂಗದ ಮೇಲೆ ಪೂಜೆಮಾಡಿದರೂ, ಆ ಬಿಲ್ವದಳವೇ ಮಹೇಶ್ವರನ ಮಹಿಮೆಯಿಂದ ವಿಪತ್ತುಗಳೆಂಬ ಸಮುದ್ರಗಳನ್ನೇ ನಾಶಪಡಿಸುವುದು. ಮಾನವನ ಆನಂದವೆಂಬ ಸಮುದ್ರವು ಅಭಿವೃದ್ಧಿಯಾಗುವಂತೆ ಮಾಡಿ ಕೊನೆಗೆ ಮುಕ್ತಿಯನ್ನುಂಟುಮಾಡುವುದು. ||೫೮||

ಸತ್ಯಂ ಸತ್ಯಮಿಹೋಚ್ಯತೇ ಸುರಗಣಾಃ ಸತ್ಯಂ ಪುನಃ ಸರ್ವಥಾ
ಪ್ರೃದ್ಧೃತ್ಯಾಶು ಭುಜದ್ವಯಂ ಶಪಥಮಪ್ಯಂಬಾಪದಾಂಭೋರುಹೇ ।
ಕೃತ್ವಾ ಶಂಕರಚಾರುಚಾರುಚರಣಾಂಭೋಜೇಽಪಿ ಲಿಂಗಾರ್ಚನಂ
ಸರ್ವಾಭೀಷ್ಟದಮೇವ ತೇನ ಸದೃಶಂ ಪುಣ್ಯಂ ನ ಲೋಕತ್ರಯೇ ॥೫೯॥

ಯತ್ತಲ್ಲಿಂಗಸಮರ್ಚನಂ ಮುನಿಜನಾಶಾಸ್ಯಂ ರಹಸ್ಯಂ ಪರಂ
ವಕ್ತವ್ಯಂ ಶಿವಪೂಜನೋತ್ಸವರಸಾವಿರ್ಭಾವತುಷ್ಟಾಯ ತು ।
ಇಷ್ಟಾಯಾಮಿತಪುಣ್ಯಕೀರ್ತಿವಿಭವಾಕಾರಾಪಹಾರಾಯ ತನ್ನಾ
ನ್ಯಸ್ಮೈ ಶಿವನಿಂದಕಾಯ ಶಪಥಃ ಶಂಭೋಃ ಪ್ರಭೋಃ ಪಾದಯೋಃ ॥೬೦॥

ಎಲೈ ದೇವಗಣಗಳಿರಾ, ಲಾಲಿಸಿರಿ. ಜಗದಂಬಿಕೆಯ ಪಾದಕಮಲದಲ್ಲಿಯೂ ಮತ್ತು ಶಂಕರನ ಮನೋಹರವಾದ ಪಾದಪದ್ಮಗಳಲ್ಲಿಯೂ ಎರಡು ತೋಳುಗಳನ್ನೂ ನಿಲ್ಲಿಸಿ ಶಪಥಮಾಡಿ ಹೇಳುವೆನು. ಮೂರು ಲೋಕಗಳಲ್ಲಿಯೂ ಈ ಶಂಕರನ ಲಿಂಗಾರ್ಚನೆಯೇ ಸಕಲ ಅಭೀಷ್ಟಗಳನ್ನೂ ಕೊಡತಕ್ಕುದು. ಇದಕ್ಕೆ ಸಮಾನವಾದ ಪುಣ್ಯವು ಇನ್ನೆಲ್ಲಿಯೂ ಸತ್ಯವಾಗಿಯೂ ಇಲ್ಲ. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಓ ದೇವತೆಗಳಿರಾ, ಇಗೋ ನಾನಾಡುತ್ತಿರುವ ಮಾತು ನಿಜವಾಗಿ ಪರಮ ಸತ್ಯಸ್ವರೂಪವು. ॥೫೯॥

ಎಲೈ ದೇವತೆಗಳಿರಾ, ಈ ಶಿವಲಿಂಗಾರ್ಚನೆಯನ್ನು ಮುನಿವರೇಣ್ಯರು ಸದಾ ಹೊಗಳುತ್ತಿರುವರು. ಇದು ಪರಮ ರಹಸ್ಯವೂ ಮತ್ತು ಉತ್ಕೃಷ್ಟವೂ ಆಗಿರುವುದು. ಈ ಶಿವಲಿಂಗಾರ್ಚನೆಯ ವಿಧಿಯನ್ನು ಶಿವಪೂಜೆಯಲ್ಲಿ ಶ್ರದ್ಧೆಯಿಂದ ಕೂಡಿ, ಭಕ್ತಿರಸದಿಂದ ಸಂತೋಷಹೊಂದುವ ಪರಶಿವಭಕ್ತನಿಗೆ ಉಪದೇಶಮಾಡಬೇಕು. ಅವನು ಪರಶಿವನಿಗೆ ಪ್ರೀತಿಪಾತ್ರನಾಗಿರಬೇಕು. ಹಾಗಲ್ಲದೇ ಅಪಾರವಾದ ಪುಣ್ಯಕೀರ್ತಿಗಳನ್ನೂ ಮತ್ತೂ ಐಶ್ವರ್ಯವನ್ನೂ ಹಾಳುಮಾಡಿ ಸದಾ ಪರಶಿವನನ್ನು ನಿಂದೆಮಾಡುವನಿಗೆ ಮಾತ್ರ ಎಂದಿಗೂ ದಾನಮಾಡಬಾರದು. ಇದು ಸರ್ವಸಮರ್ಥನಾದ ಶಂಭುವಿನ ಪಾದಗಳಮೇಲೆ ಕೈಯಿಟ್ಟು ಮಾಡುವ ಪ್ರತಿಜ್ಞೆಯೆಂದು ಭಾವಿಸಿರಿ; ಎಂದು ನಂದಿಕೇಶ್ವರನು ದೇವತೆಗಳಿಗೆಲ್ಲಾ ಪರಶಿವನ ಲಿಂಗಾರ್ಚನ ಪ್ರಭಾವವನ್ನು ವರ್ಣಿಸಿದನು. ॥೬೦॥

|| ವ್ಯಾಸ ಉವಾಚ ||

ನಂದೀಶ್ವರವಚೋವೀಚೀಪಾನಪೀನಾತ್ಮನಿಗ್ರಹಾಃ ।
ಶಿವಾನುಗ್ರಹಮಾಸಾದ್ಯ ಪ್ರಾಪುರಾನಂದಮುದ್ಭುತಂ ॥೬೧॥

ತತಃ ಪರಮುನೇನಾಪಿ ದೂತಾನೀಕೇನ ಕಿಂ ಪುರಾ ।
ಪುಣ್ಯಂ ಕೃತಂ ವದಾಸ್ಮಾಭಿರ್ನ ಜ್ಞಾತಮಿತಿ ಚೋಚಿರೇ ॥೬೨॥

|| ನಂದಿಕೇಶ್ವರ ಉವಾಚ ||

ಕಿಂ ವಕ್ತವ್ಯಂ ಮಯಾ ದೇವಾಸ್ತ್ರಿನೇತ್ರಸ್ಯಾದ್ಭುತಂ ಖಲು ।
ಚರಿತ್ರಂ ತತ್ಪವಿತ್ರಂ ಹಿ ಪವಿತ್ರಾಣಾಂ ವಿಶೇಷತಃ ॥೬೩॥

ಹರಸ್ಯಾಮರವೀರಸ್ಯ ಶಂಕೇಷ್ವಪ್ಯವಿಶಂಕಯಾ ।
ಅನುಗ್ರಹಸ್ತದುಗ್ರಾಣಾಂ ಪರಮಾನಂದಸಾಧನಂ ॥೬೪॥

ನಂದಿಕೇಶ್ವರನ ಮಾತುಗಳೆಂಬ ಅಮೃತಪ್ರವಾಹವನ್ನು ಪಾನಮಾಡಿ ಸಂತುಷ್ಟರಾಗಿರುವ ದೇವತೆಗಳು ಶಿವನ ಅನುಗ್ರಹವನ್ನು ನಂದಿಕೇಶ್ವರನ ಮುಖಾಂತರ ಪಡೆದು ಅತಿಶಯವಾದ ಆನಂದವನ್ನು ಪಡೆದರು. ಮತ್ತು ಆ ನಂದಿಕೇಶ್ವರನನ್ನು ಕುರಿತು ಪ್ರಭೋ, ಹೀಗೆ ದೂತರು ಕರೆದುಕೊಂಡುಬಂದ ಆ ಮನುಷ್ಯನು ತನ್ನ ಹಿಂದಿನ ಜನ್ಮದಲ್ಲಿ ಯಾವ ಪುಣ್ಯಮಾಡಿದ್ದನು ? ಅದನ್ನು ನಮಗೆ ತಿಳಿಸು ಎಂಬುದಾಗಿ ದೇವತೆಗಳು ಪ್ರಾರ್ಥಿಸಿದರೆಂದು ವ್ಯಾಸರು ಮುನಿಗಳಿಗೆ ಹೇಳಿದರು. ||೬೧-೬೨||

ಎಲೈ ದೇವತೆಗಳಿರಾ, ಪವಿತ್ರವಾದ ವಸ್ತುಗಳಲ್ಲೆಲ್ಲಾ ಅತ್ಯಂತ ಪವಿತ್ರವೆನಿಸಿರುವ ಅತ್ಯದ್ಭುತವಾದ ಪರಮೇಶ್ವರನ ಚರಿತ್ರೆಯನ್ನು ವಿಶೇಷವಾಗಿ ನಾನು ಹೇಗೆಂದು ವರ್ಣಿಸಲಿ! ಮಹೇಶ್ವರನ ಚರಿತ್ರೆಯು ಅತ್ಯದ್ಭುತವೂ ವರ್ಣಿಸಲಸಾಧ್ಯವೂ ಆಗಿರುವುದಲ್ಲವೆ ? ||೬೩||

ದೇವವೀರನೆನಿಸಿದ ಈ ಮಹಾದೇವನು ತುಂಬಾ ದುಷ್ಟರೆನಿಸಿದವರಿಗೂ ಅನುಗ್ರಹಮಾಡುವನು. ಅಲ್ಲದೇ ಸಾಧುಗಳಿಗೂ ಪರಮಾನಂದವುಂಟಾಗುವಂತೆ ಮಾಡುವನು. ಮಹಾದೇವನ ನಿಗ್ರಹಾನುಗ್ರಹಗಳು ಇಂತಹವರಿಗೇ ಪ್ರಾಪ್ತವಾಗುವುದೆಂದು ಹೇಳಲು ಸಾಧ್ಯವಿಲ್ಲ. ||೬೪||

ಸ್ವತಂತ್ರಃ ಸ ಮಹಾದೇವೋ ಯಂ ಪಶ್ಯತಿ ದಯಾರ್ಣವಃ ।
ತೇನ ತೀರ್ಣಃ ಸ ಸಂಸಾರಃ ಪಾಪನಕ್ರಾಕರಃ ಖಲು ॥೬೫॥

ಪ್ರಭುಚಿತ್ತಾನುಸಾರೇಣ ಕಿಂಕರಾಣಾಂ ತು ವರ್ತನಂ ।
ಅನ್ಯಥಾ ವಿಪರೀತಂ ಸ್ಯಾದಿತಿ ನಿಶ್ಚಿತಮೇವ ಹಿ ॥೬೬॥

ತದುಕ್ತಿರೇವ ವೇದಾರ್ಥೋ ವೇದವಕ್ತಾ ಸ ಏವ ಹಿ ।
ಪ್ರಾಮಾಣ್ಯಮಪಿ ವೇದಾನಾಂ ನ ಸ್ವತಃ ಪರಮಾರ್ಥತಃ ॥೬೭॥

ಪರಂ ತು ಶಿವವಾಕ್ಯತ್ವಸ್ವರೂಪೇಣೇತಿ ನಿಶ್ಚಿತಂ ।
ವೇದಾಸ್ತು ಶಿವವಾಕ್ಯಾನಿ ಪ್ರಾಮಾಣ್ಯಂ ತೇಷು ಸರ್ವಥಾ ॥೬೮॥

ಸರ್ವಸ್ವತಂತ್ರನೂ, ದಯಾಸಮುದ್ರನೂ ಆದ ಆ ಮಹಾದೇವನು ತನ್ನ ಕೃಪಾದೃಷ್ಟಿಯಿಂದ ಯಾರನ್ನು ನೋಡುವನೋ ಆ ಮಾನವನು ಪಾಪಗಳೆಂಬ ಮೊಸಳೆಗಳಿಂದ ತುಂಬಿದ ಈ ಸಂಸಾರವೆಂಬ ಸಾಗರವನ್ನು ನಿಶ್ಚಯವಾಗಿಯೂ ದಾಟಿ ಮುಕ್ತನಾಗುವನೆಂದೇ ತಿಳಿಯಬೇಕು. ॥೬೫॥

ಸೇವಕರು ತನ್ನ ಸ್ವಾಮಿಯ ಮನಸ್ಸನ್ನು ಅನುಸರಿಸಿ ನಡೆಯುವುದೇ ನ್ಯಾಯ. ಅಲ್ಲದೇ ಪ್ರಭುವಿಗೆ ವಿರುದ್ಧವಾಗಿ ನಡೆದರೆ ನಿಶ್ಚಯವಾಗಿಯೂ ಎಲ್ಲವೂ ವಿಪರೀತವಾಗುವುದೆಂದು ತಿಳಿದೇ ಇದೆ. (ಈಗ ಯಮನು ವಿಪರೀತವಾಗಿ ನಡೆದು ದರಿಂದ ಅವನು ಅನುಭವಿಸುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ.) ॥೬೬॥

ಈ ಮಹಾದೇವನ ಮಾತುಗಳೇ ವೇದಾರ್ಥಗಳು. ವೇದವನ್ನು ಮೊದಲು ಹೇಳಿದವನೇ ಮಹೇಶ್ವರನು. ವೇದಗಳಿಗೆ ಸ್ವತಃ ಪ್ರಾಮಾಣ್ಯವಿಲ್ಲ. ಪರಮೇಶ್ವರನ ವಚನರೂಪವಾದುದರಿಂದಲೇ ಅದಕ್ಕೆ ಪ್ರಾಮಾಣ್ಯವು ದೊರೆತಿದೆ. ॥೬೭॥

ಶಿವನ ವಾಕ್ಯಸ್ವರೂಪವಾಗಿರುವುದರಿಂದಲೇ ಈ ವೇದಗಳಿಗೆ ಶ್ರೇಷ್ಠತೆ ಯುಂಟಾಗಿದೆ. ಶಿವನ ವಚನರೂಪವಾಗಿರುವುದರಿಂದಲೇ ಈ ವೇದಗಳಿಗೆ ಪ್ರಾಮಾಣ್ಯವು ದೊರೆತಿದೆ. ॥೬೮॥

ಧರ್ಮತತ್ತ್ವಂ ಮಹೇಶೇನ ಜ್ಞಾಯತೇ ನಾಮರೈರಪಿ ।
ಕಿನ್ನರೈರ್ವಾ ನ ಗಂಧರ್ವೈರ್ನರಾಣಾಂ ತತ್ರ ಕಾ ಕಥಾ ॥೬೯॥

ನಿತ್ಯಂ ಸರ್ವಜ್ಞಮೂರ್ತಿತ್ವಾದಷ್ಟಮೂರ್ತಿಃ ಪರಂ ಸ್ವತಃ ।
ಜಾನಾತಿ ತತ್ತ್ವಂ ಧರ್ಮಾಣಾಂ ಸರ್ವೇಷಾಮಪಿ ವಸ್ತುತಃ ॥೭೦॥

ಅಯಮೇತಾದೃಶೋ ಧರ್ಮಃ ಫಲಮಸ್ಯೇದಮಿತ್ಯಪಿ ।
ಜಾನಾತಿ ಭಗವಾಂಛಂಭುಃ ಸಾಂಬಃ ಸಂಸಾರಮೋಚಕಃ ॥೭೧॥

ತನ್ಮಾಯಯಾ ಪರಂ ವಿಶ್ವಂ ಮೋಹಿತಂ ತಚ್ಚರಾಚರಂ ।
ಸಂಸಾರೇ ಪಾತಯತ್ಯೇವ ಪುನಃ ಪುನರನೇಕಧಾ ॥೭೨॥

ಧರ್ಮತತ್ತ್ವವನ್ನೆಲ್ಲಾ ತಿಳಿದವನು ಈ ಮಹೇಶನೊಬ್ಬನೇ ಹೊರತು ದೇವತೆಗಳು, ಕಿನ್ನರರು ಮತ್ತು ಗಂಧರ್ವರು ಇವರಾರೂ ಅಲ್ಲ. ಹೀಗಿರುವಾಗ ಈ ಧರ್ಮತತ್ತ್ವಗಳನ್ನು ಮಾನವರು ತಿಳಿಯುವ ಬಗೆ ಹೇಗೆ! ॥೬೯॥

ಅಷ್ಟಮೂರ್ತಿಯೆನಿಸಿದ ಈ ಮಹಾದೇವನು ಸ್ವತಃ ನಿತ್ಯಸಂಪೂರ್ಣ ಸರ್ವಜ್ಞ ಮೂರ್ತಿಯಾಗಿರುವುದರಿಂದ ಸಕಲ ಧರ್ಮತತ್ತ್ವಗಳನ್ನೂ ಸಂಪೂರ್ಣವಾಗಿ ತಿಳಿದಿರುವನು. ॥೭೦॥

ಇದು ಇಂತಹ ಧರ್ಮವು, ಇದಕ್ಕೆ ಇಂತಹ ಫಲವೇ ಉಂಟಾಗುವುದು ಎಂಬುವ ಸಕಲ ಧರ್ಮಗಳನ್ನೂ ಮತ್ತು ಅವುಗಳ ಫಲಗಳನ್ನೂ ಸಹ, ಸಂಸಾರ ವೆಂಬ ದುಃಖವನ್ನು ಹೋಗಲಾಡಿಸುವ ಭಗವಂತನಾದ ಅಂಬಾಸಮೇತನಾದ ಶಂಭುವೊಬ್ಬನೇ ತಿಳಿಯಬಲ್ಲನು ಮತ್ತು ಹೇಳಬಲ್ಲನು. ॥೭೧॥

ಸ್ಥಾವರಜಂಗಮಾತ್ಮಕವಾದ ಈ ಪ್ರಪಂಚವೆಲ್ಲವೂ ಈ ಮಹಾದೇವನ ಮಾಯೆಯಿಂದಲೇ ಮೋಹಗೊಂಡಿರುವುದು. ಇಂತಹ ತನ್ನ ಮಾಯೆಗೆ ಒಳಗಾ ಗಿರುವ ಜನಗಳನ್ನು ಮಹಾದೇವನು ಪುನಃ ಪುನಃ ಅನೇಕವೇಳೆ ಈ ಸಂಸಾರದಲ್ಲಿ ಬಿದ್ದು ನರಳುವಂತೆ ಮಾಡುವನು. ॥೭೨॥

ಅಹೋ ಮಹೇಶ್ವರೈಶ್ವರ್ಯಮಪಾರಮತುಲಂ ಖಲು ।
ತತ್ಕೇನ ಜ್ಞಾಯತೇ ಲೋಕೇ ವೇದೈರ್ನ ಜ್ಞಾಯತೇ ಯತಃ॥೭೩॥

ತದುಕ್ತವಚಸೈರ್ವೇದೈಸ್ತದ್ರೂಪಾವಗಮಃ ಕಥಂ ।
ಅಸ್ಮದುಕ್ತೇನ ವಾಕ್ಯೇನ ನಾಸ್ಮಜ್ಞಾನಂ ಯಥಾ ತಥಾ ॥೭೪॥

ವೇದಾಂತಗೋಚರಂ ರೂಪಂ ಸಚ್ಚಿದಾನಂದಲಕ್ಷಣಂ ।
ತದಸ್ಮಾಭಿಃ ಕಥಂ ಜ್ಞೇಯಂ ದುರ್ಜ್ಞೇಯತ್ವಾವಧಾರಣಾತ್ ॥೭೫॥

ಯೇ ಲೀಲಾವಿಗ್ರಹಾಃ ಶಂಭೋಃ ತೇಪ್ಯನಂತಾಸ್ತಥಾವಿಧಾಃ ।
ತದ್ಜ್ಞಾನಮಪ್ಯಶಕ್ಯಂ ಹಿ ಸರ್ವಥೈವ ಸ್ವಭಾವತಃ ॥೭೬॥

ಏಕೈಕೋ ವಿಗ್ರಹಸ್ತಸ್ಯ ನಾಸ್ಮನ್ನಯನಗೋಚರಃ ।
ತೇಜಃಪುಂಜಸಮಾಕ್ರಾಂತಸ್ತೇಜಃ ಪುಂಜಾಃ ಸ್ವಭಾವತಃ ॥೭೭॥

ಅಹೋ! ಮಹೇಶ್ವರನ ಐಶ್ವರ್ಯಸಂಪತ್ತಿಯು ಅಪಾರವೂ ಅಪ್ರತಿಮವೂ ಆಗಿರುವುದು. ವೇದಗಳೂ ಸಹ ಈ ಮಹಾದೇವನ ಸಂಪತ್ತು ಇಷ್ಟೇ ಎಂದು ತಿಳಿಯಲಾರವು. ಹೀಗಿರುವಾಗ ಇತರ ಸಾಧಾರಣನಾದ ಮನುಷ್ಯನಿಗೆ ಅದು ಗೊತ್ತಾಗುವ ಬಗೆ ಹೇಗೆ! ॥೭೩॥

ನಾವು ಹೇಳಿದ ವಚನಗಳಿಂದ ನಮ್ಮ ಸ್ವರೂಪವು ಒಂದೊಂದು ವೇಳೆ ಹೇಗೆ ತಿಳಿಯಲಾರದೋ, ಅದರಂತೆ ಮಹೇಶ್ವರನ ವಾಕ್ಯರೂಪವಾದ ವೇದಗಳಿಂದ ಆ ಮಹಾದೇವನ ಸ್ವರೂಪವನ್ನು ತಿಳಿಯುವುದು ಅಸಾಧ್ಯವಾಗಿರುವುದು. ॥೭೪॥

ಸತ್, ಚಿತ್, ಮತ್ತು ಆನಂದವೆಂಬ ಮೂರು ಲಕ್ಷಣಗಳಿಂದ ಯುಕ್ತವಾಗಿ ವೇದಾಂತಾಭ್ಯಾಸದಿಂದ ಗೋಚರವಾಗುವ ಈ ಮಹಾದೇವನ ರೂಪವು ತಿಳಿಯಲು ಹೇಗೆ ಸುಲಭಸಾಧ್ಯವಾದೀತು? ಹೀಗಿರುವಾಗ ಏನೂ ಅರಿಯದ ನಮಗೆ ಅದು ಹೇಗೆ ತಾನೇ ಗೋಚರವಾದೀತು? ॥೭೫॥

ಶಂಭುವಿನ ಲೀಲಾಮಯವಾದ ವಿಗ್ರಹಗಳು ಅನಂತವಾಗಿರುವುವು. ಅವುಗಳ ರೂಪವು ಪರಮೇಶ್ವರನಂತೆಯೇ ಇರುವುವು. ಅವುಗಳನ್ನು ತಿಳಿಯುವುದಂತೂ ನಮಗೆ ಸ್ವಭಾವಸಿದ್ಧವಾಗಿಯೇ ಅಸಾಧ್ಯವಾಗಿರುವುದು. ॥೭೬॥

ತೇಜಸ್ಸಿನ ಸಮೂಹಗಳಿಂದ ತುಂಬಿ ಕೇವಲ ತೇಜಃ ಪುಂಜಸ್ವರೂಪದಂತಿ

ದ್ವಿಬಾಹವೋ ವಿಗ್ರಹಾಸ್ತು ಕೋಟಿಶಃ ಪರಮಾತ್ಮನಃ ।
ತಸ್ಯೈವ ಕೋಟಿಶಸ್ತಾವತ್ತೇ ಚತುರ್ಬಾಹವಃ ಪರಾಃ ॥೭೮॥

ಕೇಚಿದಷ್ಟಭುಜಾಸ್ತಸ್ಯ ಕೇಚಿಚ್ಚ ದಶಬಾಹವಃ ।
ಸಹಸ್ರಬಾಹವಃ ಕೇಚಿತ್ ಕೇಚಿತ್ತೇ ಲಕ್ಷಬಾಹವಃ ॥೭೯॥

ತೇ ಕೋಟಿಬಾಹವಃ ಕೇಚಿತ್ಕೇಚಿದರ್ಬುದಬಾಹವಃ ।
ಪರಾರ್ಧಬಾಹವಃ ಕೇಚಿನ್ಮಹಾದೇವಸ್ಯ ವಿಗ್ರಹಾಃ ॥೮೦॥

ದಿವ್ಯಾಭರಣಸಂಪನ್ನಾಸ್ತೇ ಸರ್ವೇ ಮೇರುಸನ್ನಿಭಾಃ ।
ದುಕೂಲಸಂವೃತಾಸ್ಸರ್ವೇ ದಿವ್ಯಚಂದನಚರ್ಚಿತಾಃ ॥೮೧॥

ರುವ ಈ ಮಹಾದೇವನ ಒಂದೊಂದು ವಿಗ್ರಹಗಳೂ ನಮಗೆ ಗೋಚರವಾಗಲಾರವು. ॥೭೭॥

ಪರಮಾತ್ಮನ ಮೂರ್ತಿಗಳಲ್ಲಿ ಕೋಟ್ಯಂತರ ವಿಗ್ರಹಗಳಿಗೆ ಎರಡು ಬಾಹುಗಳುಂಟು. ಅದೇ ರೀತಿ ನಾಲ್ಕು ಬಾಹುಗಳಿಂದ ಕೂಡಿದ ಮಹಾದೇವನ ವಿಗ್ರಹಗಳೂ ಕೋಟ್ಯಂತರವಿರುವುವು. ॥೭೮॥

ಈ ಮಹೇಶ್ವರನ ವಿಗ್ರಹಗಳಲ್ಲಿ ಕೆಲವಕ್ಕೆ ಎಂಟು ಭುಜಗಳು. ಕೆಲವು ಹತ್ತು ತೋಳುಳ್ಳವು. ಕೆಲವಕ್ಕೆ ಸಾವಿರ ತೋಳುಗಳೂ ಮತ್ತೆ ಕೆಲವಕ್ಕೆ ಲಕ್ಷ ಬಾಹುಗಳೂ ಇರುವುವು. ॥೭೯॥

ಮಹಾದೇವನ ಆಕಾರಗಳಲ್ಲಿ ಕೆಲವು ಕೋಟಿ ಬಾಹುಗಳುಳ್ಳವು. ಕೆಲವು ನೂರುಕೋಟಿ ಬಾಹುಗಳಿಂದ ಶೋಭಿಸುತ್ತಿರುವುವು. ಮತ್ತೆ ಕೆಲವಕ್ಕೆ ಸಾವಿರ ಕೋಟಿ ಬಾಹುಗಳೂ ಪ್ರಕಾಶಿಸುತ್ತಿರುವುವು. ॥೮೦॥

ಈ ಮಹಾದೇವನ ವಿಗ್ರಹಗಳೆಲ್ಲವೂ ಮೇರುವಿಗೆ ಸಮಾನವಾದ ಕಾಂತಿಯಿಂದ ಶೋಭಿಸುತ್ತಿರುವುವಲ್ಲದೆ ದಿವ್ಯವಾದ ಆಭರಣಗಳಿಂದ ಅಲಂಕೃತವಾಗಿವೆ. ಎಲ್ಲಾ ವಿಗ್ರಹಗಳೂ ರೇಷ್ಮೆಯ ವಸ್ತ್ರಗಳನ್ನು ಧರಿಸಿವೆ. ಚಂದನದಿಂದ ಲೇಪನ ಮಾಡಲ್ಪಟ್ಟಿವೆ. ॥೮೧॥

ಉಮಾರ್ಧವಿಗ್ರಹಾಃ ಸರ್ವೇ ತ್ರಿಶೂಲವರಬಾಹವಃ ।
ತೇ ಸರ್ವೇ ಚಂದ್ರರೇಖಾಂಕಾಃ ನೀಲಕಂಠಾಃ ಕಪರ್ದಿನಃ ॥೮೨॥

ಕೈಲಾಸಭುವನಾಗಾರಂ ವ್ಯಾಪ್ಯ ಸರ್ವೇ ವ್ಯವಸ್ಥಿತಾಃ ।
ಪರಮಾನಂದಸಂಪೂರ್ಣಾಸ್ತೇ ಸರ್ವೇಽಪಿ ಕೃಪಾರ್ಣವಾಃ ॥೮೩॥

ತತ್ಪ್ರಭಾವಾರ್ಣವಾಂಸ್ತೋತುಂ ನ ವೇದೈರಪಿ ಶಕ್ಯತೇ ।
ತಜ್ಞಾನಮಸ್ಮದಾದೀನಾಂ ಸುತರಾಮಪಿ ದುರ್ಲಭಂ ॥೮೪॥

ಏತೇಷಾಂ ವಿಗ್ರಹಾಣಾಂ ತು ಸರ್ವೇಷಾಂ ಮೂಲವಿಗ್ರಹಃ ।
ಚಿದ್ಘನಃ ಶಿವ ಏವೇತಿ ತಜ್ಞಾನಮತಿದುರ್ಲಭಂ ॥೮೫॥

ಈ ವಿಗ್ರಹಗಳೆಲ್ಲಾ ಅರ್ಧಭಾಗದಲ್ಲಿ ಉಮಾದೇವಿಯನ್ನು ಹೊಂದಿಯೇ ಇರುವುವು. ಮಹೇಶ್ವರನು ಸರ್ವಾಕಾರಗಳಲ್ಲಿಯೂ ಉಮಾಮಹೇಶ್ವರನೆನಿಸಿರುವನು. ಅಲ್ಲದೇ ಎಲ್ಲಾ ವಿಗ್ರಹಗಳ ಕೈಯಲ್ಲಿಯೂ ಉತ್ತಮವಾದ ತ್ರಿಶೂಲಾಯುಧವು ಶೋಭಿಸುತ್ತಿರುವುದು. ಮತ್ತು ಬಾಲಚಂದ್ರನನ್ನು ತಲೆಯಲ್ಲಿ ಧರಿಸಿ, ಕಪ್ಪಾದ ಕುತ್ತಿಗೆಯಿಂದ ಕೂಡಿರುವುವಲ್ಲದೇ ಜಟಾಧಾರಿಗಳಾಗಿರುವುವು. ||೮೨||

ಮಹಾದೇವನ ಮೂರ್ತಿಗಳೆಲ್ಲಾ ಈ ಎಲ್ಲಾ ಕೈಲಾಸಪರ್ವತದ ಪ್ರದೇಶವೆಂಬ ಮನೆಯನ್ನು ವ್ಯಾಪಿಸಿ ನೆಲಸಿರುವುವು. ಅವೆಲ್ಲವೂ ಪರಮಾನಂದ ಸ್ವರೂಪಗಳೇ, ಕೃಪಾಸಮುದ್ರದಂತೆಯೇ ತೋರಿಬರುವುವು. ||೮೩||

ಆ ಮಹಾದೇವನ ಮೂರ್ತಿಗಳ ಮಹಿಮೆಯೆಂಬ ಸಮುದ್ರವನ್ನು ಸ್ತೋತ್ರ ಮಾಡಲು ವೇದಗಳಿಂದಲೂ ಅಸಾಧ್ಯ. ಹೀಗಿರುವಾಗ ಅಂತಹ ಸಾಮರ್ಥ್ಯವು ನಮಗೆ ಸುತರಾಂ ಇಲ್ಲವೇ ಇಲ್ಲವೆಂದು ತಿಳಿಯಬೇಕು. ||೮೪||

ಈ ವಿಗ್ರಹಗಳಿಗೆಲ್ಲಾ ಮೂಲಭೂತವಾದ ವಿಗ್ರಹವು ಚಿದ್ಘನರೂಪವಾದುದು (ಕೇವಲ ಜ್ಞಾನಸ್ವರೂಪವಾದುದು) ಅದನ್ನೇ ಶಿವನೆಂದು ತಿಳಿಯಬೇಕು. ಈ ಚಿದ್ಘನಸ್ವರೂಪನಾದ ಪರಶಿವನನ್ನು ತಿಳಿಯುವುದು ಕಷ್ಟಸಾಧ್ಯ. ||೮೫||

ತಜ್ಞಾನಮಸ್ಮದಾದೀನಾಂ ಸುತರಾಮಪಿ ದುರ್ಲಭಂ ।
ತತ್ರ ದ್ವಿಬಾಹುರೀಶಾನವಿಗ್ರಹೋ ದೃಶ್ಯತೇ ಮಯಾ ॥೮೬॥

ಕಥಂಚಿದ್ಘೋರತಪಸಾ ಕೃಪಯಾಪಿ ಶಿವಸ್ಯ ಮೇ ।
ಶಿವಯಾ ಸ ಯದಾ ಯುಕ್ತಸ್ತದಾ ತದ್ದರ್ಶನಂ ಪರಂ ॥೮೭॥

ಕುಮಾರಸ್ಯ ಗಣೇಶಸ್ಯ ತದನ್ಯೇಷಾಂ ತು ದುರ್ಲಭಂ ।
ಸ ವಿಹಾರಾರ್ಥಮಾಯಾತಿ ಯದಾ ಬಹಿರುಮಾಂ ವಿನಾ ॥೮೮॥

ತದಾ ಸ ಕರುಣಾಪೂರೋ ಹರೋ ಲೋಚನಗೋಚರಃ ।
ತಸ್ಯೈವ ಲೀಲಯಾ ಸೃಷ್ಟಿಃ ಸ್ಥಿತಿಃ ಸಂಹಾರ ಇತ್ಯಪಿ ॥೮೯॥

ನಮ್ಮಂತಹವರಿಗೆ ಆ ಶಿವನ ಜ್ಞಾನವು ಸುತರಾಂ ಇಲ್ಲವೇ ಇಲ್ಲವೆಂದು ಹೇಳಬೇಕು. ಆದರೆ ನಾನು ಮಾತ್ರ ಎರಡು ಬಾಹುಗಳಿಂದ ಶೋಭಿಸುತ್ತಿರುವ ಈಶಾನಮೂರ್ತಿಯನ್ನು ಉಪಾಸನೆ ಮಾಡುತ್ತಿರುವೆನು. ||೮೬||

ನಾನು ಬಹಳ ಪ್ರಯಾಸಪಟ್ಟು ಘೋರವಾದ ತಪಸ್ಸುಮಾಡಿ, ಪರಮೇಶ್ವರನ ದಯೆಗೇನಾದರೂ ಪಾತ್ರನಾದರೆ ಆಗ, ಅಂಬಿಕಾಸಮೇತನಾದ ಆ ಪರಮೇಶ್ವರನ ದರ್ಶನವು ನನಗೊದಗುವುದು. ||೮೭||

ಷಣ್ಮುಖಸ್ವಾಮಿ ಮತ್ತು ಗಣಪತಿ ಇವರಿಗೆ ಮಾತ್ರ ಆ ಶಿವನ ದರ್ಶನವು ಒಂದೊಂದು ವೇಳೆ ನನ್ನಂತೆಯೇ ಉಂಟಾಗುವುದು. ಇತರರಿಗೆ ಶಿವದರ್ಶನವು ಬಹಳ ದುರ್ಲಭ. ಮಹಾದೇವನು ಉಮಾದೇವಿಯನ್ನು (ಕೈಲಾಸದ) ಅರಮನೆಯಲ್ಲಿಯೇ ಬಿಟ್ಟು ತಾನೊಬ್ಬನೇ ಯಾವಾಗಲಾದರೂ ವಿಹಾರಕ್ಕೋಸ್ಕರ ಹೊರಗಡೆ ಬಂದಾಗ ನನಗೆ ದರ್ಶನ ದೊರೆಯುವುದು. ಕರುಣಾಮಯನಾದ ಆ ಉಮಾಮಹೇಶ್ವರನ ಲೀಲೆಯೇ, ಈ ಸ್ಥಾವರಜಂಗಮಾತ್ಮಕವಾದ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರರೂಪ ಗಳಾಗಿವೆ. (ಅಂದರೆ ಮಾಯಾವಿರಹಿತವಾದ ಈಶ್ವರನ ಶುದ್ಧಸ್ವರೂಪವು ಅರಿಯ ಬೇಕಾದರೆ ಮೊದಲು ಆಜನ್ಮಸಿದ್ಧವಾದ ಅಜ್ಞಾನವು ಹರಿಯಬೇಕು. ಅಂತಹ ಮಾಯಾಸಂಬಂಧದಿಂದಲೇ ಪರಶಿವನಲ್ಲಿಯೂ ಪ್ರಪಂಚಧರ್ಮಗಳು ತೋರಿಬರು ತ್ತವೆ.) ||೮೮-೮೯||

ಸ ಕಥಂಚಿದ್ವೇದವಾಕ್ಯೈರ್ವಿರೂಪಾಕ್ಷೋ ನಿರೂಪಿತಃ ।
ತದಾಜ್ಞಾವಶಗಂ ಸರ್ವಮಿದಂ ಬ್ರಹ್ಮಾಂಡಮಂಡಲಂ ॥೯೦॥

ವಾತಿ ವಾತಸ್ತತೋ ಭೀತಃ ಶಂಕರಾದುಗ್ರಶಾಸನಾತ್ ।
ಉಗ್ರೋಗ್ರಶಾಸನಾದೇವ ಭೀತಃ ಸೂರ್ಯೋಽಪ್ಯುದೇತ್ಯಯಂ ॥೯೧॥

ಭೀಷಾಸ್ಮಾದಗ್ನಿರಿಂದ್ರಶ್ಚ ಮೃತ್ಯುರ್ಧಾವತಿ ಪಂಚಮಃ

ಏತಾದೃಶಂ ಮಹಾದೇವಂ ಸರ್ವಶ್ರುತ್ಯಂತಸಂಸ್ತುತಂ । ॥೯೨॥
ಸ್ಮೃತ್ವಾಪಿ ಮುಚ್ಯತೇ ಘೋರೈರಪಾರೈರಘಸಾಗರೈಃ

ಅರ್ಚನಂ ಸ್ಮರಣಂ ಧ್ಯಾನಂ ವಂದನಂ ಕೀರ್ತನಂ ತಥಾ ॥೯೩॥
ಜಪೋಽಪಿ ಶಿವಲಿಂಗಾಗ್ರೇ ಶಿವಸ್ಯಾನಂತಮುಚ್ಯತೇ ॥೯೪॥

ವೇದವಾಕ್ಯಗಳಲ್ಲಿ, ಹೇಗೋ ಪರಮೇಶ್ವರನ ಅಂಶಸ್ವರೂಪನಾದ ವಿರೂಪಾಕ್ಷನೆಂಬುವನು ಪ್ರತ್ಯೇಕವಾಗಿ ವರ್ಣಿಸಲ್ಪಟ್ಟಿರುವನು. (ಅಂದರೆ ಮೂಲಭೂತನಾದ ಶಂಕರನು ಮಾತ್ರ ವೇದಗಳಿಗೂ ಅಗೋಚರನು ಎಂಬ ಭಾವ.) ಈ ಬ್ರಹ್ಮಾಂಡ ಮಂಡಲವೆಲ್ಲವೂ ಆ ಮಹಾದೇವನ ಆಜ್ಞಾನುಸಾರವಾಗಿಯೇ ನಡೆಯುತ್ತಿರುವುದು. ॥೯೦॥

ಕಠಿನವಾದ ಅಪ್ಪಣೆಯುಳ್ಳ ಶಂಕರನಿಗೆ ಹೆದರಿ ವಾಯುವು ಸರಿಯಾಗಿ ಸಂಚರಿಸುತ್ತಿರುವನು. ಸೂರ್ಯನೂ ಸಹ ಪ್ರಚಂಡವಾದ ಕೋಪವುಳ್ಳ ಮಹೇಶ್ವರನ ಕಟ್ಟಪ್ಪಣೆಯ ಭಯದಿಂದಲೇ ಪ್ರತಿನಿತ್ಯವೂ ಉದಯವಾಗುತ್ತಿರುವನು. ॥೯೧॥

ಅಗ್ನಿ ಮತ್ತು ಇಂದ್ರ ಇವರಿಬ್ಬರೂ ಈ ಮಹಾದೇವನ ಭಯದಿಂದಲೇ ತಮ್ಮ ತಮ್ಮ ಉದಯಾಸ್ತಗಳನ್ನು ತಪ್ಪದೆ ನಡೆಸಿಕೊಂಡು ಹೋಗುತ್ತಿರುವರು. ಐದನೆಯವನಾದ ಯಮನೂ (ಮೃತ್ಯುವೂ) ಓಡಾಡುತ್ತಾ ತನ್ನ ಕಾರ್ಯದಲ್ಲಿ ವ್ಯಗ್ರನಾಗಿರುವನು. ಇಂತಹ ಸಕಲ ವೇದಾಂತಗಳಲ್ಲಿಯೂ ಸ್ತೋತ್ರಾರ್ಹನಾಗಿರುವ ಮಹಾದೇವನನ್ನು ಸ್ಮರಣಮಾಡಿದ ಮಾತ್ರದಿಂದಲೇ ಮಾನವನು ಘೋರವಾದ ಈ ಸಂಸಾರವೆಂಬ ಸಾಗರದಿಂದ ಮುಕ್ತನಾಗುವನು. ॥೯೨-೯೩॥

ಶಿವನ ಅರ್ಚನೆ (ಪೂಜೆ) ಸ್ಮರಣೆ, ಧ್ಯಾನ, ನಮಸ್ಕಾರ ಮತ್ತು ಸದಾ ಶಿವನಾಮಸಂಕೀರ್ತನೆ, ಇವುಗಳು ಈ ಸಂಸಾರವೆಂಬ ಬಂಧವನ್ನು ಹೋಗಲಾಡಿಸಿ

ಶಿವಚರಣಸರೋಜಾಭ್ಯರ್ಚನಧ್ಯಾನದಾನ
ಸ್ಮರಣಭಜನಗಾನಾರಾಧನಾಲಾಪನಾದ್ಯೈಃ ।
ಅನುಪದಮನುಧಾವಂತ್ಯಾದರಾದಿಂದಿರಾದ್ಯಾಃ
ಕನಕರುಚಿರದಂಡಾಖಂಡಚಂಡಾತಪತ್ರೈಃ ॥೯೫॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ದೇವಗಣಾನ್ಪ್ರತಿ ಶಿವಧರ್ಮಶಿವಮೂರ್ತಿಭೇದವರ್ಣನಂ ನಾಮ ಅಷ್ಟಾವಿಂಶೋಽಧ್ಯಾಯಃ

ಶಾಶ್ವತವಾದ ಮುಕ್ತಿಯನ್ನುಂಟುಮಾಡುವುವು. ಅಲ್ಲದೇ ಶಿವಲಿಂಗದ ಮುಂದೆ ಶಿವಮಂತ್ರಗಳನ್ನು ಜಪಿಸುವುದರಿಂದಲೂ ಅನಂತವಾದ ಶಿವನ ಸಾಯುಜ್ಯವು ದೊರೆಯುವುದೆಂದು ಹೇಳಿದೆ. ॥೯೪॥

ಪರಶಿವನ ಪಾದಕಮಲವನ್ನು, ಪೂಜಿಸುವುದು, ಧ್ಯಾನಮಾಡುವುದು, ಶಿವನ ಪ್ರೀತ್ಯರ್ಥವಾಗಿ ಬಗೆಬಗೆಯ ದಾನಮಾಡುವುದು, ಸದಾ ಶಿವನಾಮಸ್ಮರಣೆ, ಭಜನೆ, ಗಾನ, ಆರಾಧನೆ ಮತ್ತು ಸದಾ ಶಿವನ ಮಹಿಮೆಗಳ ಆಲಾಪ ಇವೇ ಮುಂತಾದವುಗಳಿಂದ, ಪರಮೇಶ್ವರನನ್ನು ಸೇವೆಮಾಡುವವರ ಸಮೀಪಕ್ಕೆ, ಲಕ್ಷ್ಮಿಯೇ ಮುಂತಾದವರು ತಾವಾಗಿಯೇ ಚಿನ್ನದಿಂದ ರಚಿಸಿದ ಮನೋಹರವಾದ ದಂಡದಿಂದ ಯುಕ್ತವಾದ ಶ್ವೇತಚ್ಛತ್ರಿಯನ್ನು ಹಿಡಿದುಕೊಂಡು ಓಡಿಬರುವರು. (ಅಂದರೆ ಶಿವನನ್ನು ಪೂಜಿಸುವರಿಗೆ ಐಶ್ವರ್ಯ, ವಿದ್ಯ ಮುಂತಾದ ಸಕಲ ಸಂಪತ್ತುಗಳೂ ಕೂಡಲೇ ತಪ್ಪದೇ ಉಂಟಾಗುವುವೆಂದು ಭಾವವು.) ॥೯೫॥

ಇಲ್ಲಿಗೆ ಶ್ರೀ ಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ದೇವತೆಗಳ ಗಣಗಳನ್ನು ಕುರಿತು ಶಿವನಧರ್ಮ, ಶಿವನಮೂರ್ತಿಗಳ ಭೇದ ಇವುಗಳ ವರ್ಣನೆಯೆಂಬ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಏಕೋನತ್ರಿಂಶೋಽಧ್ಯಾಯಃ

॥ ವ್ಯಾಸ ಉವಾಚ ॥

ತತಃ ಪರಂ ಸುರಾಃ ಸರ್ವೇ ಪ್ರಣತಾಃ ಪ್ರೀತಿಪೂರ್ವಕಂ ।
ಶಿವಧರ್ಮಾಕರ್ಣನಾರ್ಥಮುದ್ಯುಕ್ತಾಃ ಪ್ರೀತಿಪೂರ್ವಕಂ ॥೧॥

ತತಃ ಕೃತಾಂಜಲಿಪುಟಾಃ ಸುರಾಸ್ತೇ ನತಕಂಧರಾಃ ।
ಶಿವಧರ್ಮಾನ್ವದಸ್ವೇತಿ ತಂ ಮುಹುರಾದರಾತ್ ॥೨॥

ಸುರಾಣಾಂ ಗಿರಮಾಕರ್ಣ್ಯ ಸ ಧೀರೋ ನಂದಿಕೇಶ್ವರಃ ।
ಶಿವಧರ್ಮಂ ಮಣಿಶ್ರೇಣೀ ಭೂಷಣಃ ಪ್ರಾಹ ತಾನ್ ಸುರಾನ್ ॥೩॥

ಇಪ್ಪತ್ತೊಂಬತ್ತನೆಯ ಅಧ್ಯಾಯ

ವ್ಯಾಸರು ಮುಂದಿನ ಕಥೆಯನ್ನು ವಿವರಿಸುತ್ತಾ ಹೀಗೆಂದರು:—ಬಳಿಕ ಆ ಎಲ್ಲಾ ದೇವತೆಗಳೂ ಪ್ರೀತಿಯಿಂದ ನಮಸ್ಕಾರ ಮಾಡಿ, ಶಿವಧರ್ಮವನ್ನು ಕೇಳುವುದಕ್ಕಾಗಿ ಪ್ರೀತಿಯಿಂದ ಸನ್ನದ್ಧರಾದರು. ॥೧॥

ಮತ್ತು ಆ ದೇವತೆಗಳೆಲ್ಲರೂ ಕೈಮುಗಿದುಕೊಂಡು ತಲೆಬಾಗಿದವರಾಗಿ ಶಿವ ಧರ್ಮವನ್ನು ಹೇಳೆಂದು ನಂದೀಶ್ವರನನ್ನು ಕುರಿತು ಪುನಃ ಪುನಃ ಕೇಳಿ ಕೊಂಡರು. ॥೨॥

ದೇವತೆಗಳು ಹಾಗೆ ಹೇಳಿದ ಮಾತನ್ನು ಕೇಳಿ ನಂದಿಕೇಶ್ವರನು ಮಣಿಶ್ರೇಣಿ ಗಳಿಂದ ಭೂಷಿತನಾಗಿ ಶಿವಧರ್ಮವನ್ನು ಹೇಳತೊಡಗಿದನು. ॥೩॥

ನಾನಾಧರ್ಮಫಲಾಸಾರರಸಃ ಶಾಂಕರಪೂಜನಂ ।
ನ ತಸ್ಮಾದಧಿಕಂ ಪುಣ್ಯಂ ಶ್ರುತಂ ಸ್ವರ್ಗಾಪವರ್ಗದಂ ॥೪॥

ಶಿವಪೂಜನಮೇವೈತದ್ಬಹುಧಾ ಶ್ರುತಿಕೀರ್ತಿತಂ ।
ತತ್ಕೀರ್ತನೇನ ವೇದಾಶ್ಚ ಪಾವನಾ ಇತಿ ಕೀರ್ತಿತಾಃ ॥೫॥

ಶಿವಧ್ಯಾನಪರಾ ಪೂಜಾ ಶಂಕರಸ್ಯ ಮಹಾತ್ಮನಃ ।
ತೇನ ಧ್ಯಾನೇನ ಮುಚ್ಯಂತೇ ಸಂಸಾರಾದಘಸಾಗರಾತ್ ॥೬॥

ಹಿರಣ್ಯಬಾಹುರಿತ್ಯಾದಿಶ್ರುತಿಕೋಟಿಪ್ರತಿಶ್ರುತಂ ।
ಸ್ವರೂಪಂ ಶಂಕರಸ್ಯೇದಂ ಧ್ಯೇಯಂ ನೋಹಂ ವಿನಾ ಮುಹುಃ ॥೭॥

ಮುಹುರ್ಮುಹುರುಮಾಕಾಂತಂ ನಿತಾಂತಂ ಶಾಂತವಿಗ್ರಹಂ ।
ಧ್ಯಾತ್ವಾ ಧ್ಯಾನಪ್ರಭಾವೇನ ಮುಚ್ಯತೇ ಭವಬಂಧನಾತ್ ॥೮॥

ನಾನಾ ವಿಧವಾದ ಹಣ್ಣುಗಳನ್ನು ಸಮರ್ಪಿಸಿ ಮಾಡಿದ ಶಿವಭಕ್ತನ ಪೂಜೆಗಿಂತಲೂ ಮಿಗಿಲಾಗಿ ಸ್ವರ್ಗ, ಮುಕ್ತಿ ಮುಂತಾದ ಫಲಗಳನ್ನು ಕೊಡತಕ್ಕದು ಬೇರೆ ಯಾವುದೂ ಇಲ್ಲ. ॥೪॥

ಈಶ್ವರಪೂಜೆಯೊಂದೇ ಸಕಲ ಫಲಪ್ರದವಾದದ್ದೆಂದು ಅನೇಕ ಕಡೆ ಹೇಳಿದೆ. ಮತ್ತು ವೇದ ಪ್ರಸಿದ್ಧವೂ ಆಗಿದೆ. ಶಿವನ ಧ್ಯಾನದಿಂದಲೇ (ಶಿವನಾಮ ಪ್ರತಿಪಾದನ) ವೇದಗಳೂ ಪವಿತ್ರಗಳಾಗಿವೆ ಎಂದು ಹೇಳುತ್ತಾರೆ. ॥೫॥

ಶಿವನ ಪೂಜೆಯು ಶಿವಧ್ಯಾನ ಪ್ರಚುರವಾಗಿರಬೇಕು. ಆ ಶಿವಧ್ಯಾನದಿಂದ ಮನುಷ್ಯನು ಪಾಪ ಸಮೂಹಗಳಿರುವ ಸಂಸಾರದಿಂದ ಮುಕ್ತಿಯನ್ನು ಹೊಂದುತ್ತಾನೆ. ॥೬॥

ಹಿರಣ್ಯ ಬಾಹುವೇ ಮೊದಲಾಗಿ ವೇದರಾಶಿಗಳಲ್ಲಿ ಪ್ರಸಿದ್ಧವಾದ ಆ ಶಿವನ ಸ್ವರೂಪವನ್ನು ಸ್ಥಿರಮತಿಯಿಂದ ಚಿಂತಿಸಬೇಕು. ॥೭॥

ಪುನಃಪುನಃ ಶಾಂತಮೂರ್ತಿಯಾದ ಮತ್ತು ಉಮಾಪ್ರಿಯನಾದ ಶಂಕರನನ್ನು ಭಕ್ತಿಯಿಂದ ಧ್ಯಾನಮಾಡಬೇಕು. ಆ ಧ್ಯಾನದ ಮಹಿಮೆಯಿಂದ ಮನುಷ್ಯನು ನಿಜವಾಗಿಯೂ ಸಂಸಾರಬಂಧನದಿಂದ ಮುಕ್ತನಾಗುವನು. ॥೮॥

ಬಹುಜನ್ಮಾರ್ಜಿತೈಃ ಪುಣ್ಯೈರ್ಭವೇಭಕ್ತಿಃ ಪ್ರಜಾಯತೇ ।
ತಯಾ ಭಕ್ತ್ಯಾ ಮಹಾದೇವಂ ಧ್ಯಾತ್ವಾ ಮುಕ್ತೋ ಭವೇನ್ನರಃ ॥೯॥

ಸಾ ಭಕ್ತಿರ್ದುರ್ಲಭಾ ಲೋಕೇ ತಪಸಾಪ್ಯಮರಾಸ್ತತಃ ।
ಶಂಕರಾನುಗ್ರಹಾದೇವ ಸಾ ಭಕ್ತಿರ್ಭವತಿ ಧ್ರುವಂ ॥೧೦॥

ಶ್ರುತ್ಯುಕ್ತೇನ ಪ್ರಕಾರೇಣ ಧ್ಯಾತ್ವಾ ಲಿಂಗೇ ಸದಾಶಿವಂ ।
ಪೂಜಾ ಕಾರ್ಯಾ ಪ್ರಯತ್ನೇನ ಪ್ರತ್ಯಹಂ ಪ್ರೀತಿಪೂರ್ವಕಂ ॥೧೧॥

ಬಿಲ್ವೈಃ ಪ್ರಸೂನೈರ್ದರ್ಭೈರ್ವಾ ನವದೂರ್ವಾಂಕುರೈರಪಿ ।
ನೀರೈರ್ವಾ ಪೂಜಯೇಲ್ಲಿಂಗಂ ಸರ್ವಮಂಗಳದಾಯಕಂ ॥೧೨॥

ಭಸ್ಮನೋದ್ಧೂಲ್ಯ ಸರ್ವಾಂಗಂ ಕೃತ್ವಾ ರುದ್ರಾಕ್ಷಧಾರಣಂ ।
ಶಿವಲಿಂಗಮುಪಸ್ಪೃಶ್ಯ ಚರಂ ವಾಚರಮೇವ ವಾ ॥೧೩॥

ಅನೇಕ ಜನ್ಮಗಳಲ್ಲಿ ಮಾಡಿದ ಪುಣ್ಯ ಕರ್ಮಗಳಿಂದ ಈಶ್ವರನಲ್ಲಿ ಭಕ್ತಿಯು ಹುಟ್ಟುತ್ತದೆ. ಹಾಗೆ ಭಕ್ತಿಯಿಂದ ಈಶ್ವರನನ್ನು ಚಿಂತಿಸಿದವನಿಗೆ ಮುಕ್ತಿಯು ನಿಜವಾಗಿ ಲಭಿಸುತ್ತದೆ. ||೯||

ಆ ಭಕ್ತಿಯು ತಪಸ್ಸಿನಿಂದ ಹೊಂದುವುದು ಸುಲಭವಲ್ಲ. ಅದು ಶ್ರೀ ಶಿವನ ಅನುಗ್ರಹದಿಂದಲೇ ಉಂಟಾಗಬೇಕು. ಇದು ನಿಶ್ಚಯ. ||೧೦||

ಪ್ರತಿದಿನವೂ ಭಕ್ತಿಯಿಂದ ವೇದದಲ್ಲಿ ಹೇಳಿರುವಂತೆ ಶಿವನನ್ನು ಈಶ್ವರ ಲಿಂಗದಲ್ಲಿ ಭಾವಿಸಿ ಪೂಜೆಮಾಡಬೇಕು. ||೧೧||

ಬಿಲ್ವಪತ್ರೆ, ದರ್ಭೆ, ಹೊಸಗರಿಕೆಯ ಎಸಳು, ಅಥವಾ ಜಲ ಇವುಗಳಿಂದ ಸಮಸ್ತ ಕಲ್ಯಾಣವನ್ನು ಕೊಡಬಲ್ಲ ಶಿವಲಿಂಗವನ್ನು ಪೂಜಿಸಬೇಕು. ||೧೨||

ಚರವಾದ (ಭಕ್ತನನ್ನೇ ಚರಲಿಂಗವೆನ್ನುವರು) ಅಥವಾ ಸ್ಥಿರವಾದ ಶಿವಲಿಂಗ ವನ್ನು ಭಸ್ಮದಿಂದ ಎಲ್ಲಾ ಅವಯುವಗಳನ್ನೂ ಲೇಪಿಸಿ ರುದ್ರಾಕ್ಷಗಳಿಂದ ಅಲಂಕರಿಸಿ, ಪೂಜಿಸಬೇಕು. ||೧೩||

ಸದ್ಯೋಜಾತಾದಿಭಿರ್ಮಂತ್ರೈರಾವಾಹ್ಯ ಗಿರಿಜಾಪತಿಂ ।
ರುದ್ರಾಧ್ಯಾಯೇನ ಸೂಕ್ತೈಶ್ಚ ರೌದ್ರೈರೀಶಾಭಿಷೇಚನಂ ॥೧೪॥

ಗೋಕ್ಷೀರದಧಿಮಧ್ವಾಜ್ಯೈಃ ಶರ್ಕರಾಫಲಸಂಯುತೈಃ ।
ಜಲೈಶ್ಚ ಶೀತಲೈರ್ಧಾರಾವಿಚ್ಛಿನ್ನಾಂ ಪ್ರಕಲ್ಪಯೇತ್ ॥೧೫॥

ತತೋ ವಿಭೂತಿಂ ದತ್ವಾ ತು ದದ್ಯಾಚ್ಚಂದನಮಾದರಾತ್ ।
ತತೋ ಬಿಲ್ವದಳಂ ದದ್ಯಾತ್ ಅಕ್ಷತಾನಪಿ ಸಾದರಂ ॥೧೬॥

ತತೋ ಧೂಪಂ ಚ ದೀಪಂ ಚ ನೈವೇದ್ಯಂ ಚ ಮನೋಹರಂ ।
ಪಾನೀಯಂ ಚಾಥ ತಾಂಬೂಲಮೇಲಾಕರ್ಪೂರಸಂಯುತಂ ॥೧೭॥

ಲವಂಗಾದಿಯುತಂ ದದ್ಯಾತ್ ದುಕೂಲಂ ಚ ತತಃ ಪರಂ ।
ಪಶ್ಚಾದಾಭರಣಂ ದದ್ಯಾತ್ ದೀಪನೀರಾಜನಂ ತತಃ ॥೧೮॥

ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಈ ಐದು ದೇವತಾ ಮಂತ್ರಗಳಿಂದ ಗೌರೀಶಂಕರನನ್ನು ಆವಾಹನಮಾಡಬೇಕು. ಬಳಿಕ ರುದ್ರಾಧ್ಯಾಯದಲ್ಲಿ ಹೇಳಿದ ರುದ್ರಸಂಬಂಧವಾದ ಸೂಕ್ತಗಳಿಂದ ಅಭಿಷೇಕಮಾಡಬೇಕು. ॥೧೪॥

ಆಕಳಹಾಲು, ಮೊಸರು, ಜೇನು, ತುಪ್ಪ, ಸಕ್ಕರೆ, ಫಲ ಇವೇ ಮೊದಲಾದ ಪಂಚಾಮೃತವಸ್ತುಗಳ ಮತ್ತು ಸ್ವಾದೂದಕ ಇವುಗಳ ಧಾರೆಗಳಿಂದ ಅವಿಚ್ಛಿನ್ನವಾಗಿ ಲಿಂಗದಮೇಲೆ ಅಭಿಷೇಕಮಾಡಬೇಕು. ॥೧೫॥

ಅನಂತರ ವಿಭೂತಿಯಿಂದ ಅಲಂಕರಿಸಿ ಬಳಿಕ ಚಂದನವನ್ನು ಲೇಪಿಸಿ ಅಲಂಕರಿಸಬೇಕು. ಆಮೇಲೆ ಬಿಲ್ವಪತ್ರೆ, ಅಕ್ಷತೆ ಇವುಗಳನ್ನು ಅರ್ಪಿಸಬೇಕು. ॥೧೬॥

ಬಳಿಕ ಧೂಪಹಾಕಿ ದೀಪದಿಂದ ನೀರಾಜಿಸಬೇಕು. ಅನಂತರ ಮನೋಹರವಾದ ನೈವೇದ್ಯವನ್ನೂ ಪಾನೀಯವನ್ನು ಸಮರ್ಪಿಸಬೇಕು. ಆ ಮೇಲೆ ಏಲಕ್ಕಿ, ಕರ್ಪೂರ ಇವುಗಳಿಂದ ಕೂಡಿದ ತಾಂಬೂಲವನ್ನು ನಿವೇದಿಸಬೇಕು. ॥೧೭॥

ಲವಂಗವನ್ನು ತಾಂಬೂಲದೊಡನೆ ಸೇರಿಸಿ ನಿವೇದನಮಾಡಬೇಕು. ಹಾಗೆಯೇ ಒಳ್ಳೆ ವಸ್ತ್ರವನ್ನು ಉಡಿಸಬೇಕು. ಆಮೇಲೆ ಆಭರಣಗಳನ್ನು ತೊಡಿಸಿ ಮಂಗಳಾರತಿಯನ್ನು ಮಾಡಬೇಕು. ॥೧೮॥

ದರ್ಪಣಂ ಚಾಮರಂ ಛತ್ರಂ ವ್ಯಜನಂ ಚ ತತಃ ಪರಂ ।
ದತ್ವಾ ಪ್ರಣಮ್ಯ ಬಹುಧಾ ನಾಟ್ಯನಿಾಶಾಯ ಕಲ್ಪಯೇತ್ ॥೧೯॥

ಪುನರ್ಜಲಂ ಗಂಧಯುತಂ ಶೀತಳಂ ಚ ಮನೋಹರಂ ।
ದತ್ವಾ ಧೂಪಂ ಚ ದೀಪಂ ಚ ಕರ್ಪೂರೇಣ ಮನೋಹರಂ ॥೨೦॥

ಪಶ್ಚಾದ್ಗುರೂಪದಿಷ್ಟೇನ ಮಾರ್ಗೇಣಾತಿಥಿರಾಸನಃ ।
ಪಂಚಾಕ್ಷರಜಪಂ ಕೃತ್ವಾ ಶಾಂಕರಾನ್ಭೋಜಯೇತ್ತತಃ ॥೨೧॥

ಸ್ವಯಂ ಚ ಶಿವನೈವೇದ್ಯಂ ಭುಕ್ತ್ವಾ ಮೌನಪುರಃಸರಂ ।
ತತಃ ಶಿವಕಥಾಂ ಪುಣ್ಯಾಂ ವಾಚಯಿತ್ವಾ ಪುನಃ ಶಿವಾಂ ॥೨೨॥

ಪುನರಾರಾಧನಂ ಕುರ್ಯಾದುಕ್ತಮಾರ್ಗೇಣ ಸಾದರಂ ।
ಏವಂ ಕೃತ್ವಾ ಪುನಃ ಪೂಜಾಂ ಮಧ್ಯರಾತ್ರೇ ಪುನಃ ಪುನಃ ॥೨೩॥

ಆಮೇಲೆ ಕನ್ನಡಿ, ಕುಂಚ, ಛತ್ರಿ, ಬೀಸಣಿಗೆ ಇವುಗಳಿಂದ ಉಪಚರಿಸಿ ನಮಸ್ಕಾರಮಾಡಬೇಕು. ಅನಂತರ ನರ್ತನದಿಂದ ಸ್ವಾಮಿಯನ್ನು ತೃಪ್ತಿಗೊಳಿಸಬೇಕು. ॥೧೯॥

ಮತ್ತೆ ಶುದ್ಧೋದಕ, ಗಂಧೋದಕ ಇವನ್ನು ಅರ್ಪಿಸಿ ಮತ್ತೆ ಕರ್ಪೂರಾರತಿಯನ್ನು ಮಾಡಬೇಕು. ॥೨೦॥

ಬಳಿಕ ಗುರುವು ಉಪದೇಶಮಾಡಿದರೀತಿಯಂತೆ ಪಂಚಾಕ್ಷರೀಮಂತ್ರವನ್ನು ಜಪಿಸಿ, ಈಶ್ವರಭಕ್ತರಾದ ಅತಿಥಿಗಳಿಗೆ ಊಟಮಾಡಿಸಬೇಕು. ॥೨೧॥

ಆಮೇಲೆ ತಾನೂ ಮೌನದಿಂದ ಶಿವನೈವೇದ್ಯವನ್ನು ಭುಂಜಿಸಿ, ಬಳಿಕ ಪವಿತ್ರವಾದ ಶಿವಕಥೆಯನ್ನು ಹೇಳಿಸಬೇಕು. ಆಮೇಲೆ ಬಾರಿ ಬಾರಿಗೂ ಆ ಕಥೆಯನ್ನು ಕೇಳತಕ್ಕದ್ದು. ॥೨೨॥

ಮತ್ತೆ ಪುನಃ ಪೂಜೆಯನ್ನು ವಿಧ್ಯುಕ್ತ ರೀತಿಯಿಂದ ಅರ್ಧರಾತ್ರಿಯ ಪರ್ಯಂತ ಮಾಡಬೇಕು. ॥೨೩॥

ತತಃ ಶಯನಸಾಮಗ್ರೀಂ ಸಂಕಲ್ಪ್ಯ ಶಿವಯೋಃ ಸ್ವಯಂ।
ಕೃತ್ವಾ ಶಯನಮಾಶಾನಂ ಸ್ಮೃತ್ವೋತ್ಥಾಯಾರ್ಚಯೇತ್ತತಃ ॥೨೪॥

ಏವಮಾಮರಣಂ ಕುರ್ಯಾತ್ ಸದೋಪನಯನೋತ್ತರಂ।
ಇದಂ ನಿತ್ಯಂ ಬ್ರಾಹ್ಮಣಾನಾಂ ರಾಜ್ಞಾಂ ವೈಶ್ಯಸ್ಯ ಚಾಮರಾಃ ॥೨೫॥

ಸುರಾಣಾಂ ಚ ವಿಶೇಷೇಣ ಮುನೀನಾಮಪ್ಯನುಕ್ಷಣಂ।
ಶಿವಾರ್ಚನಂ ಪರೋ ಧರ್ಮಃ ಕಿನ್ನರಾಣಾಂ ವಿಶೇಷತಃ ॥೨೬॥

ಗಂಧರ್ವಾಣಾಂ ಚ ಸರ್ಪಾಣಾಂ ಸಿದ್ಧಾನಾಂ ಚ ವಿಶೇಷತಃ।
ನರಾಣಾಂ ಚ ಪರೋ ಧರ್ಮಃ ಶಿವಪೂಜನಮಾಸ್ತಿಕಾಃ ॥೨೭॥

ಶೂದ್ರಾಣಾಮಿತರೇಷಾಂ ಚ ಲೌಕಿಕಂ ಶಿವಪೂಜನಂ।
ಶಿವಾರ್ಚನಂ ವಿನಾ ಭಕ್ತ್ಯಾ ದರಿದ್ರೋ ಭವತಿ ಧ್ರುವಂ ॥೨೮॥

ಅರ್ಧರಾತ್ರಿಯ ಹೊತ್ತಿಗೆ ಆ ಪಾರ್ವತೀ ಪರಮೇಶ್ವರರನ್ನು ಶಯನೋತ್ಸವ ದಿಂದ ಉಪಚರಿಸಿ ತಾನೂ ಹಾಸಿಗೆ ಸಾಮಗ್ರಿಯನ್ನು ಸಿದ್ಧಪಡಿಸಿಕೊಂಡು ಮಲಗ ಬೇಕು. ಬಳಿಕ ಮುಂಜಾನೆಯಲ್ಲಿ ಈಶ್ವರಸ್ಮರಣೆ ಮಾಡುತ್ತಾ ಹಾಸಿಗೆಯಿಂದೆದ್ದು ಮಡಿಮಾಡಿಕೊಂಡು, ಮತ್ತೆ ಶಿವನನ್ನು ಪೂಜಿಸಬೇಕು. ॥೨೪॥

ಎಲೈ ದೇವತೆಗಳಿರಾ, ಹೀಗೆ ತಾನು ಉಪನೀತನಾದ ಮೊದಲ್ಗೊಂಡು ಮರ ಣದ ವರೆಗೂ ದ್ವಿಜರೆನಿಸಿದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ತಪ್ಪದೆ ಈಶ್ವರಾರಾಧನೆ ಯನ್ನು ಆಚರಿಸಬೇಕು. ॥೨೫॥

ಇದೇ ಕ್ರಮವು ದೇವತೆಗಳಿಗೂ, ವಿಶೇಷವಾಗಿ ಮುನಿಗಳಿಗೂ, ಕಿನ್ನರರಿಗೂ ಕೂಡ ಶ್ರೇಷ್ಠವಾದ ಧರ್ಮ ವೆನಿಸಿರುವುದು. ॥೨೬॥

ಗಂಧರ್ವರು, ಸರ್ಪಗಳು, ಸಿದ್ಧರು, ಮನುಷ್ಯರು, ಇವರೆಲ್ಲರಿಗೂ ಶಿವಪೂಜೆ ಯೇ ಪರಮಧರ್ಮವಾಗಿದೆ. ॥೨೭॥

ಶೂದ್ರರೂ ಇತರರೂ ಪುರಾಣದಲ್ಲಿ ಹೇಳಿರುವಂತೆ ಆಚರಿಸಬೇಕು. (ದ್ವಿಜರಿಗೆ ಮಾತ್ರ ವೇದದಲ್ಲಿ ಹೇಳಿರುವಹಾಗೆ ವೇದೋಕ್ತ ಶಿವ ಪೂಜೆಯು ವಿಹಿತವಾಗಿದೆ.) ಒಟ್ಟಿನಲ್ಲಿ ಯಾರಿಗೇ ಆಗಲಿ ಭಕ್ತಿಯಿಲ್ಲದ ಶಿವಪೂಜೆಯಿಂದ ದಾರಿದ್ರ್ಯವು ಲಭಿಸು ತ್ತದೆ. ಇದು ಖಂಡಿತ. ॥೨೮॥

ಅಂತೇ ನರಕಮಾಪ್ನೋತಿ ಶಿವಾರ್ಚನವಿವರ್ಜಿತಃ ।
ಸಂಸಾರಬಂಧನಾನ್ಮುಕ್ತೋ ನ ಭವತ್ಯೇವ ಸರ್ವಥಾ ॥೨೯॥

ಸಂಸಾರಸಾಗರೇ ಮಗ್ನಃ ಶಿವಪೂಜನಲಕ್ಷಣಂ ।
ಆಧಾರಂ ದುರ್ಲಭಂ ಪ್ರಾಪ್ಯ ಸಮುತ್ತಿಷ್ಠತಿ ಮಾನವಃ ॥೩೦॥

ಸಂಸಾರಬಂಧವಿಚ್ಛೇದಃ ಶಿವಾರ್ಚನಮಹಾಸಿಭಿಃ ।
ತದ್ವಿಚ್ಛೇದಕಮನ್ಯತ್ತು ದೃಶ್ಯತೇ ನ ಜಗತ್ತ್ರಯೇ ॥೩೧॥

ಜಾಯಂತೇ ಬಹವಸ್ತಾವನ್ಮ್ರಿಯಂತೇ ಚ ಪುನಃ ಪುನಃ ।
ಶಿವಾರ್ಚನವಿಹೀನಾಸ್ತೇ ಜನ್ಮಕೋಟಿಷು ದುಃಖಿತಾಃ ॥೩೨॥

ತೇ ಗರ್ಭನರಕಾವಾಸಾಃ ಯೇ ಶರ್ವಾನರ್ಚಕಾ ನರಾಃ ।
ಸೂಕರಾಣಾಂ ಚ ತೇಷಾಂ ಚ ವಿಶೇಷಾಸ್ತು ನ ಸರ್ವಥಾ ॥೩೩॥

ಕೊನೆಗೆ ಶಿವಪೂಜೆ ಮಾಡದವನು ನರಕವನ್ನು ಹೊಂದುತ್ತಾನೆ. ಮತ್ತು ಅವನು ಯಾವಾಗಲೂ ಸಂಸಾರಬಂಧನದಿಂದ ಬಿಡುಗಡೆ ಆಗುವುದೇ ಇಲ್ಲ. ॥೨೯॥

ಸಂಸಾರ ಸಮುದ್ರದಲ್ಲಿ ಮುಳುಗಿರುವ ಮನುಷ್ಯನು ಶಿವಪೂಜಾಸ್ವರೂಪವಾದ ಆಲಂಬನವನ್ನು ಹಿಡಿದು ಮೇಲಕ್ಕೆ ಏಳುವನು. ಆದರೆ ಅಂತಹ ಅವಲಂಬನವು ಮೊದಲು ದೊರಕುವುದೇ ಕಷ್ಟ. ॥೩೦॥

ಸಂಸಾರವೆಂಬ ಕಟ್ಟು ಶಿವಪೂಜೆಯೆಂಬ ಕತ್ತಿಗಳಿಂದ ತುಂಡಿಸಲ್ಪಡುತ್ತದೆ. ಆದರೆ ಆ ಶಿವಪೂಜಾರೂಪವಾದ ಖಡ್ಗವನ್ನು ನಾಶಮಾಡತಕ್ಕದ್ದು ಈ ಮೂರು ಲೋಕದಲ್ಲಿ ಯಾವುದೂ ಕಾಣುವುದಿಲ್ಲ. ॥೩೧॥

ಪ್ರಪಂಚದಲ್ಲಿ ಅನೇಕರು ಹುಟ್ಟುವರು ಮತ್ತು ಸಾಯುವರು. ಶಿವಪೂಜಾಹೀನರಾದ ಅವರು ಹೀಗೆ ಒಂದು ಕೋಟಿ ಜನ್ಮದವರೆಗೂ, ಅಂತಹ, ದುಃಖಗಳನ್ನು ಅನುಭವಿಸುತ್ತಲೇ ಇರುವರು. ॥೩೨॥

ಹೀಗೆ ಶಿವಪೂಜೆ ಮಾಡದಿರುವವರು ಗರ್ಭವಾಸವೆಂಬ ನರಕವನ್ನು ಅನುಭವಿಸಲೇಬೇಕು. ಆ ಶಿವಪೂಜೆಮಾಡದಂತಹ ನಾಸ್ತಿಕರಿಗೂ ಹಂದಿಗೂ ಯಾವ ರೀತಿಯಲ್ಲಿಯೂ ಏನೂ ಭೇದವಿಲ್ಲ. ॥೩೩॥

ಮಲಾಶನಂ ಯತಸ್ತೇಷಾಂ ತೇಷಾಮಪ್ಯವಿಶೇಷತಃ ।
ತೇಽಪಿ ಸೂಕರಗರ್ಭೇಷು ಜಾಯಂತೇ ಚ ಪುನಃ ಪುನಃ ॥೩೪॥

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ಅಪಾರವೇದರಾಶಿಸ್ಥವೇದವೇದಾಂತಪಾರಗಃ ॥೩೫॥

ಪುರಾ ಕಶ್ಚಿದಭೂದ್ವಿಪ್ರೋ ಧನಧಾನ್ಯಸಮನ್ವಿತಃ ।
ಪೂರ್ವಾರ್ಜಿತೇನ ಪುಣ್ಯೇನ ಪುತ್ರಪೌತ್ರಾದಿಸಂಯುತಃ ॥೩೬॥

ಸ ಭುಂಕ್ತೇ ವಿವಿಧಾನ್ ಭೋಗಾನ್ ಶಿವಾನರ್ಚನತತ್ಪರೈಃ ।
ಅಸಂಖ್ಯಾತೈಃ ಸಹಾತ್ಯಂತಂ ನಾಟ್ಯಗಾನಾದರಃ ಸದಾ ॥೩೭॥

ದದಾತಿ ತೇಭ್ಯೋ ವಿತ್ತಾನಿ ಬಹೂನಿ ವಿವಿಧಾನ್ಯಪಿ ।
ರತ್ನಾನಿ ತೇನ ದತ್ತಾನಿ ದುಕೂಲಾನ್ಯಪಿ ಕೋಟಿಶಃ ॥೩೮॥

ಹೇಗೆ ಹಂದಿಯು ಕೊಳಕುವಸ್ತುವನ್ನು ಭಕ್ಷಿಸುವುದೋ, ಹಾಗೆ ಶಿವಪೂಜಾ ರಹಿತನು ಅಶುದ್ಧನೆನಿಸುವನು. ಅಲ್ಲದೇ ಅವರು ಹಂದಿಯ ಗರ್ಭದಿಂದಲೇ ಬಾರಿ ಬಾರಿಗೂ ಹುಟ್ಟುವರು. ॥೩೪॥

ಈ ವಿಷಯದಲ್ಲಿ ಹಿಂದೆ ನಡೆದ ಒಂದು ಇತಿಹಾಸವನ್ನು ಉದಾಹರಿಸುತ್ತೇನೆ. ಕೇಳಿರಿ. ಹಿಂದೆ ಅನಂತ ವೇದವೇದಾಂತಗಳಲ್ಲಿ ಪಾರಂಗತನೆನಿಸಿದ ಪಂಡಿತನೊಬ್ಬನಿದ್ದನು. ॥೩೫॥

ಆತನು ಜಾತಿಯಲ್ಲಿ ಬ್ರಾಹ್ಮಣನು. ಪೂರ್ವಜನ್ಮದಲ್ಲಿ ಆಚರಿಸಿದ ಪುಣ್ಯ ವಿಶೇಷದಿಂದ ಆ ಜನ್ಮದಲ್ಲಿ ಅವನು ಧನ, ಧಾನ್ಯ, ಹೆಂಡಿರು, ಮಕ್ಕಳು ಇವರಿಂದ ತುಂಬಿ ಸಂಪದ್ಭರಿತನೆನಿಸಿದ್ದನು. ॥೩೬॥

ಆತನು ಈಶ್ವರಪೂಜೆ ಮಾಡದಿರುವವರೊಂದಿಗೆ ಅನೇಕವಿಧವಾದ ಸುಖಗಳನ್ನು ಅನುಭವಿಸುತ್ತಾ ಯಾವಾಗಲೂ ನಾಟ್ಯ, ಸಂಗೀತ ಮುಂತಾದ ಕಲೆಗಳಲ್ಲಿ ಆಸಕ್ತನಾಗಿದ್ದನು. ॥೩೭॥

ಅಂತಹವರಿಗೆ ನಾನಾವಿಧವಾದ ರತ್ನಗಳನ್ನೂ, ಹಣಗಳನ್ನೂ, ವಸ್ತ್ರಗಳ ಕೋಟಿ ಕೋಟಿ ರಾಶಿಗಳನ್ನೂ ದಾನರೂಪವಾಗಿ ಕೊಡುತ್ತಿದ್ದನು. ॥೩೮॥

ಅಶಾಂಕರೈಃ ಸಹ ಪ್ರೀತಿಸ್ತೇಭ್ಯೋ ದತ್ತಂ ಧನಂ ಬಹು ।
ಗಾವಃ ಸಹಸ್ರಶೋ ದತ್ತಂ ತೇಭ್ಯ ಏವ ದುರಾತ್ಮನಾ ॥೩೯॥

ಮಹಿಷೀಣಾಂ ಸಹಸ್ರಾಣಿ ತೇಭ್ಯೋ ದತ್ತಾನಿ ಕೋಟಿಶಃ ।
ಅಶ್ವಾಶ್ಚ ದತ್ತಾಸ್ತೇನೈವ ಬಲೀವರ್ದಾಶ್ಚ ಕೋಟಿಶಃ ॥೪೦॥

ಅನ್ನಾನಾಂ ರಾಶಯೋ ದತ್ತಾಸ್ತೇಭ್ಯ ಏವಂ ಪ್ರಯತ್ನತಃ ।
ಅಶಾಂಭವೈಃ ಸಹಾವಾಸಃ ಸಲ್ಲಾಪೋ ಭೋಜನಂ ಚಯಃ ॥೪೧॥

ಅಶಾಂಭವಂ ಮಂದಿರಂ ಚ ತಸ್ಯ ಭಾತಿ ಸ್ಮಶಾನವತ್ ।
ನ ತಸ್ಯ ಮಂದಿರೇ ಶೈವಃ ಶಿವಲಿಂಗಂ ಮನೋಹರಂ ॥೪೨॥

ತಚ್ಚಾಂಡಾಲಸ್ಮಶಾನೇನ ತುಲ್ಯಮಿತ್ಯವಗಮ್ಯತಾಂ ।
ಯನ್ನ ಶಾಂಕರಸಂಕೀರ್ಣಂ ಯಲ್ಲಿಂಗೇನ ವಿವರ್ಜಿತಂ ॥೪೩॥

ಆತನಿಗೆ ಅಶೈವರನ್ನು ಕಂಡರೆ ಬಹು ಪ್ರೀತಿ. ಅವರಿಗೆ ಬೇಕಾದಷ್ಟು ದ್ರವ್ಯ ಸಹಾಯ ಮಾಡುವನು. ಆ ದುಷ್ಟನು ಅಂತಹ ಶಿವದ್ವೇಷಿಗಳಿಗೆ ಅನೇಕಸಾವಿರ ಗೋವುಗಳನ್ನು ದಾನಮಾಡಿದನು. ॥೩೯॥

ಆ ಶೈವಬಾಹ್ಯರಿಗೆ ಒಂದುಸಾವಿರ ಗೋವುಗಳನ್ನೂ, ಮತ್ತು ಕೋಟಿ ಅಶ್ವಗಳನ್ನೂ, ಹಾಗೆಯೇ ಕೋಟಿ ವೃಷಭಗಳನ್ನೂ ದಾನವಾಗಿ ಕೊಟ್ಟನು. ॥೪೦॥

ಅನ್ನರಾಶಿಗಳನ್ನೂ ಅಶಾಂಭವರಿಗೆ ಅರ್ಪಿಸಿದನು. ಅಲ್ಲದೇ ಯಾವಾಗಲೂ ಅವರೊಂದಿಗೇ ಕೂಡಿ ಮಾತನಾಡುತ್ತಾ, ಊಟ ನಿದ್ದೆಗಳನ್ನೂ ಸಹ ಅವರೊಂದಿಗೆ ನೆರವೇರಿಸುತ್ತಿದ್ದನು. ॥೪೧॥

ಈಶ್ವರಾರಾಧಕನು ವಾಸಿಸುವ ಮನೆಯನ್ನೂ ಅವನು ಸುಡುಗಾಡೆಂದು ತಿಳಿದಿದ್ದನು. ಆತನ ಮನೆಯಲ್ಲಿ ಶೈವನಾಗಲೀ ಶಿವಲಿಂಗವಾಗಲೀ ಎಲ್ಲಿಯೂ ಕಾಣುತ್ತಲೇ ಇರಲಿಲ್ಲ. ॥೪೨॥

ಎಲೈ ದೇವತೆಗಳಿರಾ, ಯಾವ ಮನೆಯಲ್ಲಿ ಶೈವನೂ, ಶಿವಲಿಂಗವೂ ಇರುವುದಿಲ್ಲವೋ ಅಂತಹವನೂ ಹೊಲೆಯನಿಗೆ ಸಮಾನನು. ಆತನ ಮನೆ ಸುಡುಗಾಡಿಗೆ ಸಮ. ॥೪೩॥

ಶಿವಲಿಂಗವಿಹೀನಸ್ಯ ಮಂದಿರೇ ಯದಿ ಮೋಹಿತಃ ।
ನಿವಸೇತ್ಸೋಽಪಿ ಚಂಡಾಲಃ ಪ್ರತಿಜನ್ಮನಿ ಜಾಯತೇ ॥೪೪॥

ಅಶಾಂಭವೋದಕಂ ಪೀತ್ವಾ ಮೂತ್ರಪ್ರಾಯಂ ಪ್ರಯತ್ನತಃ ।
ಮೂತ್ರಕುಂಡೇ ಪತತ್ಯೇವ ಜನ್ಮಕೋಟಿಷು ಮಾನವಃ ॥೪೫॥

ಅಶಾಂಭವಾನ್ನಂ ಮೋಹೇನ ಯೋ ಭುಂಕ್ತೇ ಮೋಹತೋಽಪಿ ವಾ ।
ಸ ತಪ್ತಮಲಕುಂಡೇಷು ಪತತ್ಯೇವ ನ ಸಂಶಯಃ ॥೪೬॥

ಅಶಾಂಭವೈಃ ಸಹ ಪ್ರೀತಿಂ ಭೋಜನಾದ್ಯೈಃ ಕರೋತಿ ಯಃ ।
ಸ ಚಂಡಾಲತ್ವಮಾಸಾದ್ಯ ವಿಷ್ಠಾಯಾಂ ಜಾಯತೇ ಕ್ರಿಮಿಃ ॥೪೭॥

ಮಹಾಪಾತಕಸಂಸರ್ಗೋ ಪರಂ ಸ್ವರ್ಗವಿನಾಶಕಃ ।
ಅಶಾಂಕರೈಃ ಸಹಾವಾಸೋ ನ ಪರಂ ದುಃಖಸಾಧನಂ ॥೪೮॥

ಶಿವಲಿಂಗವಿಲ್ಲದಿರುವ ಮನೆಯನ್ನು ಅಕಸ್ಮಾತ್ ಮರೆತು ಹೊಕ್ಕವನು ಪ್ರತಿಜನ್ಮದಲ್ಲಿಯೂ ಹೊಲೆಯನಾಗಿ ಹುಟ್ಟುವನು. ॥೪೪॥

ಶೈವನಲ್ಲದವನು ಮುಟ್ಟಿದ ನೀರು ಮೂತ್ರಕ್ಕೆ ಸಮಾನ. ಅದನ್ನು ಕುಡಿದ ಮನುಷ್ಯನು ಒಂದು ಕೋಟಿ ಜನ್ಮ ಪರ್ಯಂತ ಮೂತ್ರ ಕುಂಡದಲ್ಲಿ ಬೀಳುವನು. ॥೪೫॥

ಶಿವಭಕ್ತನಲ್ಲದವನು ಕೊಟ್ಟ ಅನ್ನವನ್ನು ಯಾವನಾದರೂ ಅಜ್ಞಾನದಿಂದ ತಿಂದರೂ ಆತನು ಕಾದ ಮಲಕುಂಡದಲ್ಲಿ ಬೀಳುವನು. ಇದರಲ್ಲಿ ಸಂದೇಹವಿಲ್ಲ. ॥೪೬॥

ಯಾವನು ಅಶೈವರೊಡನೆ ಸೇರಿ ಊಟ ಮೊದಲಾದವನ್ನು ನಡೆಸಬೇಕೆಂದು ಇಷ್ಟಪಡುವನೋ, ಆತನು ಹೊಲೆಯನಾಗಿ ಜನಿಸಿ, ಅನಂತರ ಮಲದಲ್ಲಿ ಕ್ರಿಮಿಯಾಗಿ ಹುಟ್ಟುವನು. ॥೪೭॥

ಸ್ವರ್ಗಸುಖವನ್ನು ಹಾಳು ಮಾಡತಕ್ಕ ಮಹಾ ಪಾಪಗಳು (ಬ್ರಹ್ಮಹತ್ಯ, ಸ್ವರ್ಣಸ್ತೇಯ, ಗುರುತಲ್ಪಗಮನ, ಸುರಾಪಾನ ಉಪಪಾತಕಗಳು) ಕೂಡ ಈ ದುಃಖ ಸಾಧಕವಾದ ಅಶೈವರ ಸಹವಾಸಕ್ಕಿಂತ ಮೇಲು. ॥೪೮॥

ಚಂಡಾಲೈರಪಿ ಸಂವಾಸೋ ಯದ್ಯಾಪದಿ ತದಾ ವರಂ।
ಸ ತಾವತ್ ಸ್ವರ್ಗಮಾರ್ಗಸ್ಯ ಸರ್ವಥಾ ನ ನಿವಾರಕಃ ॥೪೯॥

ಭೋಗಃ ಸ್ವರ್ಗಾಪವರ್ಗಾಣಾಮಶಾಂಭವಕುಲಾನ್ವಯೇ ।
ದೂರೇ ಕಥಾ ಪ್ರತ್ಯುತಾತ್ರ ಪರತ್ರಾಪಿ ಮಹದ್ಭಯಂ ॥೫೦॥

ಸ ತಾದೃಶೋ ಮೃತೋ ದೈವಾತ್ ಸಕಲತ್ರೋಽಗ್ನಿಮಾಪ ಸಃ ।
ತೇನ ಭುಕ್ತಾನಿ ಘೋರಾಣಿ ನರಕಾಣಿ ಪುನಃ ಪುನಃ ॥೫೧॥

ಯೈರ್ಯೈಸ್ತಸ್ಯ ಧನಂ ಪ್ರಾಪ್ತಂ ತಸ್ಯ ಮಿತ್ರಾಣಿ ಯಾನಿ ಚ ।
ತೈಃ ಸಹಾತ್ಯಂತಘೋರೇಷು ನರಕೇಷು ಸ್ಥಿತಃ ಸ ತು ॥೫೨॥

ಸ ಸಾರಮೇಯಜನ್ಮಾನಿ ಭುಕ್ತ್ವಾ ಭುಕ್ತ್ವಾ ಸಹಸ್ರಶಃ ।
ಪಿಶಾಚರೂಪತಾಂ ಪ್ರಾಪ್ತೋ ವನೇ ಜಲವಿವರ್ಜಿತೇ ॥೫೩॥

ಆಪತ್ಕಾಲದಲ್ಲಿ ಹೊಲೆಯರೊಡನೆ ವಾಸಿಸಬಹುದು ; ಅದು ಸ್ವರ್ಗದ ದಾರಿಯನ್ನು ಕಟ್ಟಲಾರದು. ಆದರೆ ಈಶ್ವರ ದ್ವೇಷಿಯೊಡನೆ ಮಾತ್ರ ಎಂದೂ ಸೇರಬಾರದು. ॥೪೯॥

ಅಶೈವನ ಕುಲದಲ್ಲಿ ಹುಟ್ಟುವಿಕೆಯು ಕೇವಲ ಸ್ವರ್ಗ, ಮುಕ್ತಿ ಸುಖಗಳನ್ನು ಕಳೆದುಕೊಳ್ಳುವಮಾರ್ಗವಲ್ಲದೆ, ಅದು ಮುಂದಿನ ಜನ್ಮಾಂತರದ ಸುಖಗಳನ್ನೂ ತಡೆಯುತ್ತದೆ. ॥೫೦॥

ಅಂತಹ ಆ ಶೈವದ್ವೇಷಿಯು ಆಕಸ್ಮಾತ್ ಸತ್ತನು. ಆತನ ಹೆಂಡತಿಯೂ ಮೃತಪಟ್ಟಳು. ಕೊನೆಗೆ ಆತನು ಭೀಕರವಾದ ನರಕಯಾತನೆಯನ್ನು ಅನುಭವಿಸಲು ಸಿದ್ಧನಾದನು. ॥೫೧॥

ಯಾರು ಯಾರು ಆತನ ಧನವನ್ನು ಹೊಂದಿದ್ದರೋ, ಮತ್ತು ಆತನಿಗೆ ಮಿತ್ರರು ಯಾರಾಗಿದ್ದರೋ, ಅವರೆಲ್ಲರೊಂದಿಗೂ ಸಹ ಅವನು ಭಯಂಕರ ನರಕದಲ್ಲಿ ದುಃಖಪಟ್ಟನು. ॥೫೨॥

ಆತನು ಒಂದು ಸಾವಿರಬಾರಿ ನಾಯಿ ಜನ್ಮವನ್ನು ಹೊಂದಿ, ಅನಂತರ ನೀರಿಲ್ಲದ ಕಾಡಿನಲ್ಲಿ ಪಿಶಾಚಿರೂಪವನ್ನು ತಾಳಿದನು. ॥೫೩॥

ತತ್ರಾರ್ತಃ ಕ್ಷುಧಯಾ ಸೋಽಪಿ ತೃಷಾರ್ತೋಽಪ್ಯನುವಾಸರಂ ।
ದುಃಖೇನ ಕಾಲನಯನಂ ಕೃತಂ ತೇನ ದುರಾತ್ಮನಾ ॥೫೪॥

ಏತಾದೃಶಂ ಕೋಟಿಶಸ್ತು ವಿಪಿನಂ ಸಮುಪಾಶ್ರಿತಾಃ ।
ತೃಷಾರ್ತಾಶ್ಚ ಕ್ಷುಧಾರ್ತಾಶ್ಚ ದಗ್ಧಾಶ್ಚ ಜರಯಾಗ್ನಿನಾ ॥೫೫॥

ತದಾಕ್ರೋಶೈರ್ವನಂ ವ್ಯಾಪ್ತಂ ಮೃಗೈರ್ಭೀತೈಸ್ಸಹಸ್ರಧಾ ।
ತೈಃ ಶಬ್ದೈಃ ಕರ್ಣಶಸ್ತ್ರಾಭೈರ್ವನಂ ತ್ಯಕ್ತಮನಂತಧಾ ॥೫೬॥

ತಸ್ಮಿನ್ವನೇ ಮನೋಜ್ಞಾನಿ ಫಲಾನಿ ವಿಪುಲಾನ್ಯಪಿ ।
ತೈರ್ನ ದೃಷ್ಟಾನಿ ರಮ್ಯಾಣಿ ಜಲಾನ್ಯಪಿ ವಿಶೇಷತಃ ॥೫೭॥

ತೈರ್ನ ದೀಪಃ ಶಂಕರಾಯ ದತ್ತಃ ಶಾಂಕರಮಂದಿರೇ ।
ತೇನ ಪಾಪೇನ ತೇ ಸರ್ವೇಽಪ್ಯಂಧಾಃ ಸರ್ವಾತ್ಮನಾ ಸುರಾಃ ॥೫೮॥

ಹೀಗೆ ಪಿಶಾಚಿರೂಪದಿಂದ ಆತನು ದುಃಖಿತನಾಗಿ ಪ್ರತಿದಿನವೂ ಹಸಿವೆ ಬಾಯಾರಿಕೆಗಳಿಂದ ಪೀಡಿತನಾಗಿ ಕಾಲವನ್ನು ಕಳೆಯುತ್ತಿದ್ದನು. ||೫೪||

ಇಂತಹವರು ಕೋಟಿಗಟ್ಟಲೆ ಜನರು ಅಂತಹ ಕಾಡನ್ನು ಹೊಂದಿ ಹಸಿವು ಬಾಯಾರಿಕೆಗಳಿಂದಲೂ ಮತ್ತು ವಾರ್ಧಕ್ಯದಿಂದಲೂ ಪೀಡಿತರಾಗಿದ್ದರು. ||೫೫||

ಇವರ ಆ ಹಸಿವು ಬಾಯಾರಿಕೆಗಳಿಂದ ಬಾಯ್ಬಿಡುವ ಶಬ್ದಗಳನ್ನು ಕೇಳಿ, ಆವನವಲ್ಲಿ ನೆಲಸಿರುವ ಮೃಗಗಳೆಲ್ಲಾ ಕಠೋರಶಬ್ದಗಳನ್ನು ಕೇಳಿದವುಗಳಂತೆ ದಿಕ್ಕು ದಿಕ್ಕಿಗೆ ಚದುರಿದುವು. ||೫೬||

ಆ ಕಾಡಿನಲ್ಲಿ ಮಧುರವಾದ ಹಣ್ಣುಗಳು ಹೇರಳವಾಗಿದ್ದುವು. ಅಲ್ಲದೇ ರಮ್ಯವಾದ ಒಳ್ಳೊಳ್ಳೆ ಜಲಾಶಯಗಳೂ ಇದ್ದುವು. ಆದರೂ ಆ ಪಿಶಾಚಿಗಳಾದ ಶೈವದ್ವೇಷಿಗಳು ಅವನ್ನು ನೋಡಲಾಗಲಿಲ್ಲ. ||೫೭||

ಅವರು ಶಿವದೇವಾಲಯದಲ್ಲಿ ಎಂದೂ ದೀಪವನ್ನು ಹಚ್ಚಲಿಲ್ಲ. ಅಂತಹ ಪಾಪದಿಂದ ಅಲ್ಲಿ ಸೇರಿದ್ದ ಪಿಶಾಚಿಗಳೆಲ್ಲರೂ ಸಹ ಎಲ್ಲಾ ವಿಧದಲ್ಲೂ ಕುರುಡರಾಗಿದ್ದರು. ||೫೮||

ಯೈಶ್ಚ ದೀಪೋ ಮಹೇಶಾಯ ನ ದತ್ತೋ ಭಕ್ತಿಪೂರ್ವಕಂ ।
ತೇ ಸರ್ವೇಽಪಿ ಜಾತ್ಯಂಧಾ ಭವಂತ್ಯೇವ ನ ಸಂಶಯಃ ॥೫೯॥

ಯೈರ್ನ ದತ್ತಂ ಮಹೇಶಾಯ ಶೀತಲಂ ಜಲಮುತ್ತಮಂ ।
ತೇ ಕ್ಷುಧಾರ್ತಾ ನ ಪಶ್ಯಂತಿ ಜಲಂ ಚ ನಿಕಟೇ ಸ್ಥಿತಂ ॥೬೦॥

ಯೈರ್ನ ದತ್ತಂ ಮಹೇಶಾಯ ಚಂದನಂ ಚ ಮನೋಹರಂ ।
ತೇ ದುರ್ಗಂಧಸಮಾಕ್ರಾಂತತನವೋಽಪಿ ಭವಂತಿ ಹಿ ॥೬೧॥

ಯೈರ್ನ ದತ್ತಂ ಮಹೇಶಾಯ ವಸನಂ ಪ್ರೀತಿಪೂರ್ವಕಂ ।
ತೇ ತು ನ ಪ್ರಾಪ್ನುವಂತ್ಯೇವ ವಸನಾನಿ ವಿಶೇಷತಃ ॥೬೨॥

ಯೈರ್ನ ದತ್ತಂ ಮಹೇಶಾಯ ವಸನಂ ಪ್ರೀತಿಪೂರ್ವಕಂ ।
ತೇ ತು ನ ಪ್ರಾಪ್ನುವಂತ್ಯನ್ನಂ ನ ಪಶ್ಯಂತ್ಯವಿದೂರತಃ ॥೬೩॥

ಯಾರು ಶಿವದೇವಾಲಯದಲ್ಲಿ ಭಕ್ತಿಯಿಂದ ದೀಪವನ್ನು ಹಚ್ಚುವುದಿಲ್ಲವೋ ಆ ಎಲ್ಲರೂ ಹುಟ್ಟುಕುರುಡರಾಗುತ್ತಾರೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ॥೫೯॥

ಶಿವನಿಗೆ ತಣ್ಣಗಿರುವ ಉತ್ತಮವಾದ ನೀರನ್ನು ಅರ್ಪಿಸದಿರುವವರು ಬಾಯಾರಿಕೆಯಿಂದ ಪೀಡಿತರಾಗಿ ನೀರು ಸಮೀಪದಲ್ಲಿದ್ದರೂ ಅದನ್ನು ಕಾಣಲಾರರು.॥೬೦॥

ಯಾರು ಶೀತಲವಾದ ಮತ್ತು ಮನೋಹರವಾದ ಚಂದನವನ್ನು ಈಶ್ವರನಿಗೆ ಅರ್ಪಿಸುವುದಿಲ್ಲವೋ, ಅವರ ದೇಹವು ಕೆಟ್ಟ ವಾಸನೆಯುಳ್ಳದ್ದಾಗುವುದು. ॥೬೧॥

ಶಿವನಿಗೆ ಪ್ರೀತಿಪುರಸ್ಸರವಾಗಿ ವಸ್ತ್ರವನ್ನು ಧರಿಸದವರು ತಮ್ಮ ಜೀವನ ಕಾಲದಲ್ಲಿ ಬಟ್ಟೆಯನ್ನು ಹೊಂದಲಾರರು. ॥೬೨॥

ಶಿವನಿಗೆ ಭಕ್ತಿಯಿಂದ ನೈವೇದ್ಯಮಾಡದವರು ಇನ್ನೊಂದು ಜನ್ಮದಲ್ಲಿ ಹೊಟ್ಟೆಗೆ ಅನ್ನವಿಲ್ಲದವರಾಗುವರು. ಮತ್ತು ಅನ್ನವು ಹತ್ತಿರದಲ್ಲಿ ಇದ್ದರೂ ಅದು ಅವರಿಗೆ ಕಾಣಿಸುವುದಿಲ್ಲ. ॥೬೩॥

ಯೈರ್ನ ಮಂದಿರಂ ಮಹೇಶಾಯ ನ ಕೃತಂ ಭಕ್ತಿಪೂರ್ವಕಂ ।
ತೇ ತು ನ ಪ್ರಾಪ್ನುವಂತ್ಯೇವ ಸದನಂ ಸರ್ವಥಾ ಸುರಾಃ ॥೬೪॥

ರುಚಿರಾಣಿ ಮನೋಜ್ಞಾನಿ ಪವಿತ್ರಾಣಿ ಫಲಾನಿ ವಾ ।
ಜಲಾನಿ ವಾ ಮಹೇಶಾಯ ದತ್ವಾ ಕಾಮಾನವಾಪ್ನುಯಾತ್ ॥೬೫॥

ಜಲಂ ಚುಲುಕಮಾತ್ರಂ ವಾ ಯೋ ದದ್ಯಾದ್ಗಿರಿಶಾಯ ಸಃ ।
ಊಷರೇಪಿ ಜಲಂ ಪ್ರಾಪ್ನೋತ್ಯತಿಗ್ರೀಷ್ಮೇಪ್ಯಸಂಶಯಂ ॥೬೬॥

ಜಲಂ ದತ್ವಾ ಮಹೇಶಾಯ ತದ್ಭಕ್ತಾಯ ಶಾಂಭವಾಯ ಚ ।
ಸುಧಾಸಾಗರಮಾಸಾದ್ಯ ಮೋದಂತೇ ಮನುಜಾಃ ಸುರಾಃ ॥೬೭॥

ಅನ್ನಂ ದತ್ವಾ ಮಹೇಶಾಯ ತದ್ಭಕ್ತಾಯ ಶಾಂಭವಾಯ ಚ ।
ಅನ್ನಪರ್ವತಮಾಸಾದ್ಯ ಮೋದಂತೇ ಮಾನವಾಸ್ಸುರಾಃ ॥೬೮॥

ಶಿವಾಲಯವನ್ನು ಕಟ್ಟಿಸದವರು ಜನ್ಮಾಂತರದಲ್ಲಿ ಖಂಡಿತವಾಗಿಯೂ ಮನೆಯನ್ನು ಹೊಂದಲಾರರು. ನಿರ್ಗತಿಕರಾಗಿ ಜೀವಿಸುವವರು. ೬೪॥

ರುಚಿಕರವಾದ ಹಣ್ಣುಗಳು, ಪವಿತ್ರವಾದ ಫಲಗಳು, ಸಿಹಿನೀರು ಇವುಗಳನ್ನು ಭಕ್ತಿಯಿಂದ ಮಹೇಶನಿಗೆ ಸಮರ್ಪಿಸಿದವನು ತನ್ನ ಇಷ್ಟಾರ್ಥವನ್ನೆಲ್ಲಾ ಹೊಂದುತ್ತಾನೆ. ॥೬೫॥

ಅಂಗೈಮಧ್ಯದಲ್ಲಿ ನಿಲ್ಲುವಷ್ಟು ನೀರನ್ನಾದರೂ ಶಿವನಿಗೆ ಸಮರ್ಪಿಸಿದವನು ಮರುಭೂಮಿಯಲ್ಲಿಯಾದರೂ ಅಥವಾ ಬೇಸಿಗೆಯಲ್ಲಾದರೂ ಶೀತಲೋದಕವನ್ನು ಹೊಂದುತ್ತಾನೆ. ॥೬೬॥

ಶಿವನಿಗೂ ಮತ್ತು ಶಿವಭಕ್ತನಿಗೂ ಜಲವನ್ನು ಕೊಟ್ಟ ಮನುಷ್ಯರು ಅಮೃತಸಾಗರವನ್ನು ಹೊಂದಿ ಸಂತೋಷಪಡುತ್ತಾರೆ. ॥೬೭॥

ಶಿವನಿಗೆ ಮಧುರಾನ್ನವನ್ನು ನೈವೇದ್ಯಮಾಡಿ ಶೈವನಿಗೆ ಅನ್ನದಾನಮಾಡಿದ ಮನುಷ್ಯರು ಜೀವಮಾನದಲ್ಲಿ ಅನ್ನರಾಶಿಯನ್ನು ಹೊಂದಿ ಸಂತೋಷ - ಪಡುತ್ತಾರೆ. ॥೬೮॥

ದುಗ್ಧಂ ದತ್ವಾ ಮಹೇಶಾಯ ತದ್ದತ್ವಾ ಶಾಂಭವಾಯ ಚ ।
ಕ್ಷೀರಸಾಗರಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೬೯॥

ದಧಿ ದತ್ವಾ ಮಹೇಶಾಯ ತದ್ದತ್ವಾ ಶಾಂಭವಾಯ ಚ ।
ದಧಿಸಾಗರಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೦॥

ಘೃತಂ ದತ್ವಾ ಮಹೇಶಾಯ ತದ್ದತ್ವಾ ಶಾಂಭವಾಯ ಚ ।
ಘೃತಸಾಗರಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೧॥

ಶಿವಾಯ ಶರ್ಕರಾಂ ದತ್ವಾ ತದ್ದತ್ವಾ ಶಾಂಕರಾಯ ಚ ।
ಶರ್ಕರಾಗಿರಿಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೨॥

ಫಲಂ ದತ್ವಾ ಮಹೇಶಾಯ ತದ್ದತ್ವಾ ಶಾಂಭವಾಯ ಚ ।
ಫಲಪರ್ವತಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೩॥

ಶಿವಾಯ ಚಂದನಂ ದತ್ವಾ ತದ್ದತ್ವಾ ಶಾಂಭವಾಯ ಚ ।
ಚಂದನಹ್ರದಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೪॥

ಶಿವನಿಗೆ ಹಾಲನ್ನು ಸಮರ್ಪಿಸಿ ಶೈವನಿಗೆ ಕ್ಷೀರದಾನ ಮಾಡಿದವರು, ಹಾಲಿನ ಕಡಲನ್ನು ಹೊಂದಿ ಸುಖಪಡುತ್ತಾರೆ. ॥೬೯॥

ಶಿವನಿಗೆ ಮೊಸರನ್ನು ನೈವೇದ್ಯಮಾಡಿ, ಹಾಗೆಯೇ ಅದನ್ನು ಶೈವನಿಗೆ ಅರ್ಪಿಸಿದವರು ದಧಿ ಸಮುದ್ರವನ್ನು ಹೊಂದಿ ಸೌಖ್ಯವನ್ನನುಭವಿಸುವರು. ॥೭೦॥

ಎಲೈ ದೇವತೆಗಳೇ, ಶಿವನಿಗೆ ತುಪ್ಪವನ್ನು ಅರ್ಪಿಸಿದವರು ಹಾಗೂ ಶೈವನಿಗೆ ತುಪ್ಪವನ್ನು ದಾನಮಾಡಿದವರೂ ತುಪ್ಪದ ಸಮುದ್ರವನ್ನು ಹೊಂದಿ ಸುಖಿಗಳಾಗುವರು. ॥೭೧॥

ಈಶ್ವರನಿಗೆ ಸಕ್ಕರೆಯನ್ನರ್ಪಿಸಿ, ಹಾಗೆಯೇ ಅದನ್ನು ಶಂಕರಭಕ್ತನಿಗೆ ಸಮರ್ಪಿಸುವುದರಿಂದ ಸಕ್ಕರೆ ಪರ್ವತವನ್ನು ಹೊಂದಿ ಸಂತೋಷಿಸುವರು. ॥೭೨॥

ಶಂಕರನಿಗೆ ಹಣ್ಣನ್ನು ಸಮರ್ಪಿಸಿ, ಅದನ್ನು ಶೈವನಿಗೆ ಕೊಟ್ಟಂತಹವರು ಹಣ್ಣು ಹಂಪಲುಗಳಿಂದ ತುಂಬಿದ ಪ್ರದೇಶವನ್ನು ಪಡೆದು ಸುಖಿಗಳಾಗುವರು. ॥೭೩॥

ಶಂಭುವಿಗೆ ಚಂದನವನ್ನು ಸಮರ್ಪಿಸಿ, ಅದನ್ನು ಶಿವಭಕ್ತನಿಗೆ ದಾನಮಾಡಿದ ಮನುಷ್ಯರು ಚಂದನರಸವುಳ್ಳ ಕೊಳದಲ್ಲಿ ವಿಹರಿಸುವರು. ॥೭೪॥

ಶಿವಾಯ ಕುಸುಮಂ ದತ್ವಾ ತದ್ದತ್ವಾ ಶಾಂಭವಾಯ ಚ ।
ಕುಸುಮಾಚಲಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೫॥

ಶಿವಾಯ ವಸನಂ ದತ್ವಾ ತದ್ದತ್ವಾ ಶಾಂಭವಾಯ ಚ ।
ವಸನಾಚಲಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೬॥

ಶಿವಾಯಾಭರಣಂ ದತ್ವಾ ತದ್ದತ್ವಾ ಶಾಂಕರಸ್ಯ ಚ ।
ಭೂಷಣಾಚಲಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೭॥

ದತ್ವಾ ಸುವರ್ಣಮೀಶಾಯ ತದ್ದತ್ವಾ ಶಾಂಕರಾಯ ಚ ।
ಸುವರ್ಣಾಚಲಮಾಸಾದ್ಯ ಮೋದಂತೇ ಮಾನವಾಃ ಸುರಾಃ ॥೭೮॥

ದತ್ವಾ ಛತ್ರಂ ಮಹೇಶಾಯ ತದ್ದತ್ವಾ ಶಾಂಕರಾಯ ಚ ।
ರತ್ನಛತ್ರಸಮಾಕೀರ್ಣಃ ಪ್ರಯಾತಿ ಶಿವಮಂದಿರಂ ॥೭೯॥

ಉಮಾಪತಿಗೆ ಹೂವನ್ನು ಅಲಂಕಾರಮಾಡಿ ಅದನ್ನು ಶೈವನಿಗೆ ಕೊಟ್ಟವರು ಪುಷ್ಪಭರಿತವಾದ ಪರ್ವತಗಳಲ್ಲಿ ಕ್ರೀಡಿಸುತ್ತಾರೆ. ॥೭೫॥

ಮಹಾದೇವನಿಗೆ ವಸ್ತ್ರವನ್ನು ಧರಿಸಿ ಅದನ್ನು ಶಂಕರನಿಗೆ ದಾನಮಾಡಿದರೆ ಅಂತಹ ಮಾನವರು ವಸ್ತ್ರಗಳ ರಾಶಿಯನ್ನೇ ಹೊಂದುವರು. ॥೭೬॥

ಗೌರೀಶನಿಗೆ ಒಡವೆಯನ್ನು ತೊಡಿಸಿ ಅದನ್ನು ಶೈವನಿಗೆ ದಾನಮಾಡಿದ ಮನುಷ್ಯನು, ಜನ್ಮಾಂತರದಲ್ಲಿ ಭೂಷಣರಾಶಿಗಳನ್ನು ಹೊಂದಿ ಭೋಗಪಡುತ್ತಾನೆ. ॥೭೭॥

ಬಂಗಾರವನ್ನು ಶಿವನಿಗೆ ಅರ್ಪಿಸಿ ಹಾಗೆಯೇ ಅದನ್ನು ಶಾಂಭವನಿಗೆ ಅರ್ಪಿಸಿದವರು ಬಂಗಾರದ ಗಣಿಯನ್ನೇ ಹೊಂದಿ ಸುಖಿಸುತ್ತಾರೆ. ॥೭೮॥

ಈಶ್ವರನಿಗೆ ಛತ್ರಿಯನ್ನು ಹಿಡಿದು ಅದನ್ನು ಶಂಕರನಿಗೆ ದಾನಮಾಡಿದವನು ರತ್ನಮಯವಾದ ಛತ್ರಿಹಿಡಿಸಿಕೊಂಡು ಶಿವನ ಲೋಕಕ್ಕೆ ಹೋಗುವನು. ॥೭೯॥

ಶಿವಾಯ ವಾಹನಂ ದತ್ವಾ ತದ್ದತ್ವಾ ಶಾಂಕರಾಯ ಚ ।
ರತ್ನಪುಷ್ಪಕಮಾಸಾದ್ಯ ಪ್ರಯಾತಿ ಶಿವಮಂದಿರಂ ॥೮೦॥

ಶಿವಾಯ ಚಾಮರಂ ದತ್ವಾ ತದ್ದತ್ವಾ ಶಾಂಕರಾಯ ಚ ।
ಸ ವಸೇದ್ಭಾಗ್ಯಸಂಪನ್ನಃ ಸರ್ವಾನ್ಕಾಮಾನವಾಪ್ನುಯಾತ್ ॥೮೧॥

ಯದ್ಯದ್ದ್ರವ್ಯಂ ಮಹೇಶಾಯ ದತ್ವಾ ತಚ್ಛಾಂಭವಾಯ ಚ ।
ಸರ್ವಸೌಭಾಗ್ಯಸಂಪನ್ನಃ ಶಿವಲೋಕಮವಾಪ್ನುಯಾತ್ ॥೮೨॥

ಅಶಾಂಭವಾಯ ದತ್ತಾನಿ ಮೇರುತುಲ್ಯಧನಾನ್ಯಪಿ ।
ವ್ಯರ್ಥಾನಿ ತಾನಿ ಸರ್ವಾಣಿ ಚೋರನೀತಿಸಮಾನಿ ಹಿ ॥೮೩॥

ಅಶಾಂಭವಾಶ್ಚ ಚೋರಾಶ್ಚ ಪುಲ್ಕಸಾಶ್ಚ ಸಮಾಃ ಸುರಾಃ ।
ತತೋ ನ ತೇ ದಾನಪಾತ್ರಮಪಾತ್ರತ್ವಮತೋಽಚ್ಛ್ರಿತಾಃ ॥೮೪॥

ಶಿವನಿಗೆ ವಾಹನವನ್ನು ಅರ್ಪಣೆಮಾಡಿ, ಅದನ್ನು ಶಾಂಕರನಿಗೆ ಸಮರ್ಪಿಸಿದವನು, ರತ್ನಮಯವಾದ ಪುಷ್ಪಕವಿಮಾನವನ್ನು ಏರಿ ಶಿವನ ಭವನಕ್ಕೆ ಹೋಗುತ್ತಾರೆ. ॥೮೦॥

ಶಂಕರನಿಗೆ ಚಾಮರವನ್ನು ಸಮರ್ಪಣೆಮಾಡಿ ಅದನ್ನು ಶೈವನಿಗೆ ದಾನಮಾಡಿದವನು ಎಲ್ಲಾ ಇಷ್ಟಾರ್ಥವನ್ನೂ ಹೊಂದುವನು. ॥೮೧॥

ಯಾವ ಯಾವ ದ್ರವ್ಯವನ್ನು ಶಂಕರನಿಗೆ ಅರ್ಪಿಸಿ ಶೈವನಿಗೆ ದಾನಮಾಡುತ್ತಾನೋ, ಅವನು ಸಮಸ್ತ ಸೌಭಾಗ್ಯವನ್ನೂ ಹೊಂದಿ ಶಿವಲೋಕವನ್ನು ಸೇರುವನು. ॥೮೨॥

ಶೈವರಲ್ಲದವರಿಗೆ ಮೇರುಪರ್ವತದ ಎತ್ತರ ಹಣವನ್ನು ರಾಶಿಹಾಕಿ ದಾನಮಾಡಿದರೂ ವ್ಯರ್ಥಗಳೇ, ಮತ್ತು ಕಳ್ಳರ ನೀತಿಗೆ ಅವು ಸಮನಾದವುಗಳು. ॥೮೩॥

ಶೈವಬಾಹ್ಯರೂ, ಕಳ್ಳರೂ, ಕ್ಷುದ್ರಜಾತಿಯವರೂ ಇವರೆಲ್ಲರಿಗೂ ಗುಣದಲ್ಲಿ ವ್ಯತ್ಯಾಸವಿಲ್ಲ. ಆದುದರಿಂದ ದಾನಮಾಡಲು ಅವರು ಅರ್ಹರಲ್ಲ. ಆದುದರಿಂದಲೇ ಅವರನ್ನು ಅಪಾತ್ರರೆನ್ನುವರು. ॥೮೪॥

ಅತಸ್ತೇನ ಧನಂ ಪ್ರಾಪ್ಯಾಪ್ಯಭಾಗ್ಯೇನ ದುರಾತ್ಮನಾ ।
ಅಶಾಂಭವೇಭ್ಯಸ್ತದ್ದತ್ತಂ ತೇನ ದುಃಖಮವಾಪ ಸಃ ॥೮೫॥

ತತ್ತುಲ್ಯಾಸ್ತೇ ವನೇ ತಸ್ಮಿನ್ಮಿಲಿತಾಶ್ಚ ಪರಸ್ಪರಂ ।
ಮುಹುರಾಕ್ರೋಶನಂ ಕೃತ್ವಾ ಸನಿಂದಾವಚನೈಃ ಸ್ಥಿತಾಃ ॥೮೬॥

ಆಕ್ರೋಶಾತ್ತು ವನೇ ತೇಷು ಸಾ ಬಭೂವಾಶರೀರವಾಕ್ ।
ಅಶೈವಾನಾಂ ಗತಿರಿಯಂ ಕಿಮತ್ರ ಕ್ರೋಶನೈಃ ಫಲೈಃ ॥೮೭॥

ಅಹೋ ಗತಂ ಧನಂ ವ್ಯರ್ಥಂ ಅಶೈವೇಭ್ಯೋಽತಿಮೋಹಿತಃ ।
ದತ್ತಂ ಪಾತ್ರತ್ವಬುದ್ಧ್ಯಾಪಿ ನಾಪಾತ್ರತ್ವಂ ವಿನಿಶ್ಚಿತಂ ॥೮೮॥

ಊಷರೇ ಪ್ರದರೇ ಗರ್ತೇ ಪುರೀಷೇಷ್ವಪಿ ಪಾತಿತಂ ।
ಯಥಾ ವೃಥಾ ತಥಾ ಜಾತಂ ಅಶೈವೇಷ್ವಪಿ ತದ್ಧನಂ ॥೮೯॥

ಆದುದರಿಂದ ಆತನು ಧನಿಕನಾದರೂ, ಅಶೈವರಿಗೆ ಧನವನ್ನು ದಾನಮಾಡಿದುದರಿಂದ ಬಡವನಾಗಿ ದುಃಖವನ್ನನುಭವಿಸಿದನು. ॥೮೫॥

ಆತನಿಗೆ ಸರಿಸಮರಾದ ಇತರರೂ ಆ ಕಾಡಿನಲ್ಲಿ ಸೇರಿ, ಬಾರಿಬಾರಿಗೂ ಕೂಗುತ್ತಾ ಅನೇಕವಿಧವಾಗಿ ಬೈಯುತ್ತಾ ಇರುತ್ತಿದ್ದರು. ॥೮೬॥

ಹೀಗೆ ಆ ಪಿಶಾಚರೂಪರಾದ ಶಿವನಿಂದಕರು ಆ ವನದಲ್ಲಿ ಕೂಗುತ್ತಿರಲು "ಶಿವಭಕ್ತರಲ್ಲದವರಿಗೆ ಇಂತಹ ಗತಿಯು ಆಗುವುದು. ಸುಮ್ಮನೆ ಬಾಯ್ಬಿಡುವುದರಿಂದ ಫಲವಿಲ್ಲ" ಎಂದು ಅಶರೀರವಾಣಿಯಾಯಿತು ಹಾಗೆಯೇ ಮುಂದುವರಿಯುತ್ತಾ,
॥೮೭॥

"ಆಹಾ! ಅಶೈವರಿಗೆ ದಾನಮಾಡಿದ ಹಣವೆಲ್ಲಾ ಹಾಳಾಯಿತಲ್ಲಾ, ತಿಳಿಯದೇ ದಾನಮಾಡಿದಿರಿ, ಅಲ್ಲದೆ ಪಾತ್ರರೆಂದು ಕೊಟ್ಟರಿ. ಅವರು ಅಪಾತ್ರರೆಂಬುದು ಗೊತ್ತಾಗಲಿಲ್ಲವಲ್ಲಾ! ॥೮೮॥

ಮರುಳುಭೂಮಿ, ಪೊದೆ, ಗುಂಡಿ (ಹಳ್ಳ) ಮಲ ಇವುಗಳಲ್ಲಿ ಹಾಕಿದ ಹಣ ಹೇಗೆ ಪ್ರಯೋಜನಕ್ಕೆ ಇಲ್ಲವೋ, ಹಾಗೆ ಅಶೈವರಿಗೆ ಕೊಟ್ಟ ಆ ಧನವು ವ್ಯರ್ಥವಾಯಿತು. ॥೮೯॥

ಆಕ್ರೋಶಮಪಿ ಕುರ್ವಂತಿ ಸರ್ವಾಸ್ತಾ ಧನದೇವತಾಃ ।
ಅಶೈವಾಧೀನತಾಂ ಪ್ರಾಪ್ತಾಸ್ತೇನ ಕಷ್ಟಂ ಗತಾ ಇತಿ ॥೯೦॥

ಅಧರ್ಮಪ್ರವಣಂ ಜಾತಮಶೈವಜನಸಂಗಮಾತ್ ।
ಧನಂ ಸರ್ವಂ ಗತಂ ವ್ಯರ್ಥಂ ತೇಭ್ಯೋ ದತ್ತಮಸಂಶಯಂ ॥೯೧॥

ಜನ್ಮಮಧ್ಯೇ ಕದಾಚಿದ್ವಾ ಜಲಂ ವಾ ಶಾಂಭವಾಯ ಕಿಂ ।
ನ ದತ್ತಂ ತೇನ ಪಾಪೇನ ಪಿಶಾಚತ್ವಮುಪಾಗತಾಃ ॥೯೨॥

ನ ದತ್ತಂ ಶಾಂಭವಾಯಾನ್ನಂ ಶುಲ್ಕಂ ವಾ ಮೋಹತೋಽಪಿ ವಾ ।
ತತೋ ವನೇ ಪಿಶಾಚತ್ವಂ ಭವದ್ಭಿಃ ಪ್ರಾಪ್ತಮೀದೃಶಂ ॥೯೩॥

ನ ದತ್ತಂ ವಸನಂ ವಾ ಪಿ ಶಾಂಭವಾಯ ಮಹಾತ್ಮನೇ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಭವಾದೃಶೈಃ ॥೯೪॥

ಎಲ್ಲಾ ಧನಾಭಿಮಾನದೇವತೆಗಳೂ ಶಿವಪೂಜಕರಲ್ಲದವರಿಗೆ ಅಧೀನರಾಗಿ ಅಯ್ಯೋ! ನಾವು ಕಷ್ಟಕ್ಕೆ ಸಿಕ್ಕಿದೆವು ಎಂದು ದುಃಖಪಡುತ್ತಾರೆ. ॥೯೦॥

ಶಿವದ್ವೇಷಿಗಳೊಡನೆ ಸೇರಿದುದರಿಂದ ಅಧರ್ಮವು ಹೆಚ್ಚಿತು. ಮತ್ತು ಎಲ್ಲಾ ಐಶ್ವರ್ಯವೂ ನಷ್ಟವಾಯಿತು. ಹಾಗೆ ದಾನಮಾಡಿದುದರಿಂದಲೇ ನಿರ್ಧನರಾದಿರಿ. ಇದರಲ್ಲಿ ಸಂಶಯವಿಲ್ಲ. ॥೯೧॥

ನೀವು ಜನ್ಮಕಾಲದ ಮಧ್ಯದಲ್ಲಾದರೂ, ಶಿವನಿಗೆ ಜಲವನ್ನೂ, ಅಥವಾ ಶಾಂಕರನಿಗೆ ನೀರನ್ನಾಗಲಿ ಅರ್ಪಿಸಲಿಲ್ಲ. ಆದುದರಿಂದ ನೀವೆಲ್ಲಾ ಧನಾಭಿಮಾನ ಪೀಡಿತರಾಗಿ ಪಿಶಾಚರೂಪವನ್ನು ಹೊಂದಿದಿರಿ. ॥೯೨॥

ಶಿವಭಕ್ತನಿಗೆ ಅಜ್ಞಾನದಿಂದಾದರೂ, ಅನ್ನವನ್ನಾಗಲಿ, ದಕ್ಷಿಣೆಯನ್ನಾಗಲಿ ಕೊಡಲಿಲ್ಲ. ಆದುದರಿಂದ ನೀವು ಈಗ ವನದಲ್ಲಿ ಪಿಶಾಚಿಗಳಾಗಿದ್ದೀರಿ. ॥೯೩॥

ಶಿವಭಕ್ತನಿಗೆ ಬಟ್ಟೆಯನ್ನೂ ಕೂಡ ದಾನಮಾಡಲಿಲ್ಲ. ಆದುದರಿಂದ ಆ ಪಾಪಿಯು ಪಿಶಾಚಿಯಾದನು. ನಿಮ್ಮಂತಹವರೂ ಆತನ ಸಹವಾಸದಿಂದ ಪಿಶಾಚಿಗಳಾಗಿದ್ದೀರಿ. ॥೯೪॥

ಅಶಾಂಭವಕಥಾಸಕ್ತ್ಯೈರ್ನ ಶ್ರುತಾ ಶಾಂಭವೀ ಕಥಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೯೫॥

ನ ದತ್ವಾ ದೀಪಮಾಲಾಪಿ ಮಹಾದೇವಸ್ಯ ಮಂದಿರೇ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೯೬॥

ಅನ್ಯದತ್ತಾಪಿ ದೀಪಾನಾಂ ಮಾಲಾ ನೈವಾವಲೋಕಿತಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೯೭॥

ಪೂಜನಂ ನ ಕೃತಂ ಭಕ್ತ್ಯಾಃ ಶಂಭೋಃ ಶೈವಸ್ಯ ವಾ ಮುದಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೯೮॥

ನ ಕೃತಂ ಮಂದಿರಂ ಶಂಭೋರ್ಧನಂ ಸತ್ಯಪಿ ಮೋಹತಃ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೯೯॥

ನೀವು ಯಾವಾಗಲೂ ಶಿವಭಕ್ತರಲ್ಲದವರ ಕಥೆಯಲ್ಲಿ ಆಸಕ್ತರಾಗಿದ್ದರಿ. ನೀವು ಶೈವಕಥೆಯನ್ನು ಕೇಳಿದವರಲ್ಲ. ಆ ಪಾಪದಿಂದ ಈ ಕಾಡಿನಲ್ಲಿ ಪಿಶಾಚಿಗಳಾಗಿದ್ದೀರಿ. ॥೯೫॥

ಶಿವದೇವಸ್ಥಾನದಲ್ಲಿ ದೀಪೋತ್ಸವವನ್ನಾದರೂ ಮಾಡಿಸಲಿಲ್ಲ. ಆ ಪಾಪದಿಂದ ಈ ಘೋರಾರಣ್ಯದಲ್ಲಿ ಪಿಶಾಚಿಗಳಾಗಿದ್ದೀರಿ. ॥೯೬॥

ಇತರರು ಹಚ್ಚಿಸಿದ ದೀಪಮಾಲೆಯನ್ನೂ ಸಹ ನೀವು ನೋಡಲಿಲ್ಲ. ಆ ಪಾಪದಿಂದ ದೊಡ್ಡ ಕಾಡಿನಲ್ಲಿ ಪಿಶಾಚಿಗಳಾಗಿರುತ್ತೀರಿ. ॥೯೭॥

ಈಶ್ವರ ಭಕ್ತರ ಪೂಜೆಯನ್ನಾದರೂ ಆಚರಿಸಲಿಲ್ಲ. ಶಿವಪೂಜೆಯೂ ಮಾಡಲ್ಪಡಲಿಲ್ಲ. ಆ ಪಾಪದಿಂದಲೇ ದೊಡ್ಡ ಕಾಡಿನಲ್ಲಿ ಈಗ ಪಿಶಾಚಜನ್ಮವು ನಿಮಗೆ ಬಂದಿದೆ. ॥೯೮॥

ಬೇಕಾದಷ್ಟು ಹಣವಿದ್ದರೂ ನೀವು ಶಿವದೇವಾಲಯವನ್ನು ಕಟ್ಟಿಸಲಿಲ್ಲ. ಆ ಪಾಪದಿಂದ ಈಗ ಈ ಮಹಾರಣ್ಯದಲ್ಲಿ ಪಿಶಾಚಜನ್ಮವನ್ನು ಪಡೆದಿದ್ದೀರಿ. ॥೯೯॥

ಶಿವಕ್ಷೇತ್ರಾಟನೋದ್ಯೋಗೋ ನ ಕೃತಃ ಪಾಪಯೋಗತಃ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೧೦೦॥

ನ ದತ್ತಂ ಶಿವಲಿಂಗೇಷು ಪತ್ರಂ ವಾ ಪುಷ್ಪಮೇವ ವಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೧೦೧॥

ಗ್ರೀಷ್ಮಕಾಲೇ ನೀರಧಾರಾ ಲಿಂಗೇಷು ನ ಕೃತಾ ಮುದಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೧೦೨॥

ಲಿಂಗೇ ಪರಿಮಳದ್ರವ್ಯಂ ಚಂದನಂ ಚಾರ್ಪಿತಂ ನ ಹಿ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೧೦೩॥

ವಾಣೀ ನ ಮಧುರಾಪ್ಯುಕ್ತಾ ಶಾಂಭವಾಯ ಮನೋಹರಾ ।
ತೇನ ಪಾಪೇನ ಸಂಪ್ರಾಪ್ತಂ ಪಿಶಾಚತ್ವಂ ಮಹಾವನೇ ॥೧೦೪॥

ಇತಿ ವಾಣೀಂ ಮುಹುಃ ಶ್ರುತ್ವಾ ಶಿರಸ್ತಾಡನಪೂರ್ವಕಂ ।
ಪರಸ್ಪರಂ ಮಹೀಪೃಷ್ಠೇ ಪತಿತಾಶ್ಚುಕ್ರುಶುರ್ಭೃಶಂ ॥೧೦೫॥

ನೀವು ಶಿವದೇವಾಲಯವಿರುವ ತೀರ್ಥಕ್ಷೇತ್ರಗಳ ಯಾತ್ರೆಮಾಡಲಿಲ್ಲ. ಆದುದರಿಂದ ಈ ದೊಡ್ಡ ಕಾಡಿನಲ್ಲಿ ಪಿಶಾಚರೂಪವನ್ನು ಪಡೆದಿರುತ್ತೀರಿ. ||೧೦೦||

ಶಿವಲಿಂಗಕ್ಕೆ ಹೂ ಅಥವಾ ಪತ್ರೆಯನ್ನು ಸಮರ್ಪಿಸಲಿಲ್ಲ. ಆ ಪಾಪದಿಂದ ನಿಮಗೆ ಈ ಗೊಂಡಾರಣ್ಯದಲ್ಲಿ ಪಿಶಾಚ ಜನ್ಮ ಲಭಿಸಿದೆ. ||೧೦೧||

ಬೇಸಗೆ ಕಾಲದಲ್ಲಿಯಾದರೂ ಶಿವಲಿಂಗಕ್ಕೆ ಶೀತಲೋದಕದಿಂದ ಅಭಿಷೇಕ ಮಾಡಲಿಲ್ಲ. ಆ ಪಾಪದಿಂದ ಈ ಮಹಾರಣ್ಯದಲ್ಲಿ ಪಿಶಾಚ ಜನ್ಮವನ್ನು ಹೊಂದಿರುತ್ತೀರಿ. ||೧೦೨||

ಶಿವಲಿಂಗದಲ್ಲಿ ಪರಿಮಳ ದ್ರವ್ಯ, ಅಥವಾ ಚಂದನ ಇವನ್ನು ನೀವು ಅರ್ಪಿಸಲಿಲ್ಲ. ಆ ಪಾಪದಿಂದಲೇ ಗೊಂಡಾರಣ್ಯದಲ್ಲಿ ಈಗ ಪಿಶಾಚತ್ವ ಪ್ರಾಪ್ತವಾಗಿದೆ.||೧೦೩||

ಶಿವಭಕ್ತನೊಂದಿಗೆ ಪ್ರಿಯವಾದ ಒಳ್ಳೆಯ ಮಾತನ್ನು ನೀವು ಆಡಿದವರಲ್ಲ. ಆ ಪಾಪದಿಂದ ನಿಮಗೆ ಈ ದೊಡ್ಡಬನದಲ್ಲಿ ಪಿಶಾಚರೂಪವು ಉಂಟಾಗಿದೆ."||೧೦೪||

ಹೀಗೆಂದ ಆಕಾಶವಾಣಿಯನ್ನು ಎಲ್ಲರೂ ಕೇಳಿ ತಲೆಯನ್ನು ಚಚ್ಚಿಕೊಂಡು, ಭೂಮಿಯಲ್ಲಿ ಬೀಳುತ್ತಾ ಅನೇಕ ಬಾರಿ ಪ್ರಲಾಪಿಸಿದರು. ||೧೦೫||

ತದಾನೀಮಾಗತಃ ಕೋಽಪಿ ಶಾಂಕರಸ್ತದ್ವನಂ ಪ್ರತಿ।
ಬಿಲ್ವಪತ್ರಾರ್ಥಮುದ್ಯುಕ್ತಸ್ತಾಂ ಶುಶ್ರಾವ ಗಿರಂ ತದಾ ॥೧೦೬॥

ತತೋ ಬಿಲ್ವಾನ್ಯುಪಾದಾಯ ಸತ್ವರಂ ಮಂದಿರಂ ಯಯೌ।
ತಾಮುವಾಚ ಗಿರಂ ತೇಭ್ಯಃ ಸ್ವಕೀಯೇಭ್ಯೋಽತಿವಿಸ್ಮಿತಃ ॥೧೦೭॥

ತದ್ಗ್ರಾಮವಾಸಿನಃ ಸರ್ವೇ ಶ್ರುತ್ವಾ ವಿಸ್ಮಯಮಾಗತಾಃ।
ತದಾ ಪ್ರಭೃತಿ ಸರ್ವೇಽಪಿ ಶಾಂಕರತ್ವಮುಪಾಗತಾಃ ॥೧೦೮॥

ತತಃ ಕಶ್ಚಿನ್ಮೃತಸ್ತತ್ರ ಗ್ರಾಮೇ ಭಸ್ಮವಿಭೂಷಣಃ।
ತದಾನೀಮಾಗತಾಃ ಶಂಭೋರ್ದೂತಾಸ್ತಾನ್ನೇತುಮಾದರಾತ್ ॥೧೦೯॥

ಸ ತಸ್ಮಿನ್ನೇವ ದಿವಸೇ ಭಕ್ತ್ಯಾ ಭಸ್ಮವಿಭೂಷಣಃ।
ಶ್ರುತ್ವಾ ವಾರ್ತಾಂ ತದುಕ್ತಾಂ ತಾಂ ಅಶೈವತ್ವಂ ಜಹೌ ತದಾ ॥೧೧೦॥

ಆಗ ಅಷ್ಟುಹೊತ್ತಿಗೆ ಒಬ್ಬ ಶಿವಭಕ್ತನು ಬಿಲ್ವಪತ್ರೆಗಾಗಿ ಆ ಕಾಡಿಗೆ ಬಂದನು. ಬಂದವನು ಈ ಅಶೈವರ ಗೋಳನ್ನು ಕೇಳಿದನು. ॥೧೦೬॥

ಬಳಿಕ ಬಿಲ್ವಪತ್ರೆಗಳನ್ನು ತೆಗೆದುಕೊಂಡು ಶೈವನು ಮನೆಗೆ ಹೋದನು. ಮತ್ತು ಅರಣ್ಯದಲ್ಲಿ ಕೇಳಿದ ಆಕ್ರಂದನವನ್ನು ತನ್ನವರಿಗೆಲ್ಲಾ ಹೇಳಿದನು. ॥೧೦೭॥

ಆ ಊರಿನವರೆಲ್ಲಾ ಶಾಂಕರನು ಹೇಳಿದುದನ್ನು ಕೇಳಿ ಆಶ್ಚರ್ಯಪಟ್ಟರು. ಮತ್ತು ಅದು ಮೊದಲುಗೊಂಡು ಎಲ್ಲರೂ ಈಶ್ವರಪೂಜಕರೇ ಆದರು. ॥೧೦೮॥

ಬಳಿಕ ಆ ಊರಿನಲ್ಲಿ ವಿಭೂತಿಭೂಷಿತನಾದ ಒಬ್ಬನು ಮರಣ ಹೊಂದಿದನು. ಆಗ ಶಿವದೂತರು ಆತನನ್ನು ಕರೆದುಕೊಂಡು ಹೋಗಲು ಬಂದರು. ॥೧೦೯॥

ಆ ಭಸ್ಮಭೂಷಣನಾಗಿದ್ದವನು ಹಿಂದೆ ಅಶೈವನಾಗಿದ್ದನು. ಹಿಂದೆ ಆತನು ವಿಭೂತಿಯನ್ನು ಲೇಪಿಸಿಕೊಂಡು ಆ ಶೈವನು ಹೇಳಿದ ಸಮಾಚಾರವನ್ನು ಕೇಳಿದ್ದನು. ಆದುದರಿಂದ ಆತನು ಅಶೈವತ್ವವನ್ನು ಬಿಟ್ಟು ಶೈವನಾಗಿದ್ದನು. ॥೧೧೦॥

ತದುಕ್ತವಾರ್ತಾಶ್ರವಣಾದನುತಪ್ತಃ ಪ್ರತಿಕ್ಷಣಂ ।
ವೃದ್ಧೇನಾತಃಪರಂ ಕಾರ್ಯಮಿತ್ಯತ್ಯಂತದುಃಖಿತಃ ॥೧೧೧॥

ಮರಣಾವಸರೇ ಸೇಯಂ ಶ್ರುತಾ ವಾರ್ತಾ ಶುಭಾವಹಾ ।
ಅತಃ ಪರಂ ಪೂಜನೇ ಚ ಲಿಂಗೇ ಶಕ್ತಿಃ ಕಥಂ ಭವೇತ್ ॥೧೧೨॥

ಶ್ರುತ್ವಾ ಶಿವಕಥಾ ಕಾಪಿ ನ ಪುರಾ ಪಾಪನಾಶಿನೀ ।
ಅತಃ ಪರಂ ತು ವೃದ್ಧೇನ ಕಿಂ ಕರ್ತವ್ಯಂ ಶಿವಾರ್ಚನಂ ॥೧೧೩॥

ಶೈವೋ ನ ಕೋಽಪ್ಯಾಗತೋಽಪಿ ಭೋಜಿತೋಽಪಿ ನ ಭಕ್ತಿತಃ ।
ಪಾಪಗ್ರಾಮನಿವಾಸೇನ ಪಾಪಮೇವಾರ್ಜಿತಂ ಮಯಾ ॥೧೧೪॥

ಧಿಗ್ಧಿಗ್ಧಿಗಯಂ ಗ್ರಾಮಃ ಶಿವಲಿಂಗವಿವರ್ಜಿತಃ ।
ಅಶಾಂಭವಜನಾಕ್ರಾಂತಃ ಶಿವಭಸ್ಮವಿವರ್ಜಿತಃ ॥೧೧೫॥

ಶೈವನಿಂದ ಸಮಾಚಾರವನ್ನು ಕೇಳಿದ, ಮುದುಕನಾದ ಆತನು ಪ್ರತಿಕ್ಷಣವೂ ಮುಂದೆ ನಾನು ಏನು ಮಾಡಬೇಕು ಎಂದು ಯೋಚಿಸಿ ದುಃಖಪಡುತ್ತಿದ್ದನು. ॥೧೧೧॥

ಆತನು ಪ್ರಾಣಬಿಡುವ ಸಮಯಕ್ಕೆ ಈ ಶುಭಸಮಾಚಾರವನ್ನು ಕೇಳಿದನು. ಅನಂತರ ಈ ಲಿಂಗಪೂಜೆಯಲ್ಲಿ ಹೇಗೆ ಶಕ್ತಿಯು ಲಭಿಸುವುದು ಎಂದು ಯೋಚಿಸಿದನು. ॥೧೧೨॥

ನಾನು ಹಿಂದೆ ಪಾಪಗಳನ್ನು ಹೋಗಲಾಡಿಸಬಲ್ಲ ಶಿವಕಥೆಯನ್ನು ಕೇಳಲಿಲ್ಲ. ಈಗ ಮುದುಕನಾಗಿದ್ದೇನೆ. ಹೇಗೆ ಶಿವಾರ್ಚನೆಮಾಡಲಿ? ನನಗೆ ಶಕ್ತಿಯಿಲ್ಲವಲ್ಲಾ ॥೧೧೩॥

ಶಿವಭಕ್ತನಾವನನ್ನೂ ನಾನು ಸತ್ಕರಿಸಲಿಲ್ಲ. ಮತ್ತು ಆದರದಿಂದ ಆತನಿಗೆ ಊಟಮಾಡಿಸಲಿಲ್ಲ. ಪಾಪಗ್ರಾಮದಲ್ಲಿ ವಾಸಿಸುತ್ತಿರುವ ನಾನು ಪಾಪವನ್ನೇ ಸಂಪಾದಿಸಿದೆನು. ॥೧೧೪॥

ಶಿವಲಿಂಗವಿಲ್ಲದ ಮತ್ತು ಅಶೈವರಿಂದ ತುಂಬಿದ ಈ ಊರಿಗೆ ಧಿಕ್ಕಾರವಿರಲಿ. ಇಲ್ಲಿ ಶಿವಪ್ರೀತಿಕರವಾದ ಭಸ್ಮವೂ ಇಲ್ಲ. ಅದರಿಂದಲೂ ಇದಕ್ಕೆ ಧಿಕ್ಕಾರವಿರಲಿ. ॥೧೧೫॥

ಧಿಗ್ಧಿಗ್ಧಿಗಿದಂ ವೇಶ್ಮಂ ಶಿವಭಕ್ತಿವಿವರ್ಜಿತಂ।
ಧನಂ ಧಾನ್ಯಂ ಗವಾಂ ವೃಂದಂ ದುಕೂಲಾನಾಂ ಕುಲಂ ತಥಾ ॥೧೧೬॥

ಅಶೈವಭುಕ್ತಮೇತಾವದಶೈವಪರಿವೇಷ್ಟಿತಂ ।
ಇದಾನೀಮಪಿ ದಾನಾರ್ಥಂ ಶಾಂಭವೋ ನ ಹಿ ಸರ್ವಥಾ ॥೧೧೭॥

ಪರಮಾನ್ನೇನ ಸಾಜ್ಯೇನ ಪಕ್ವಾನ್ನೈರ್ವಿವಿಧೈರಪಿ ।
ಶಾಂಕರೋ ಭೋಜಿತೋ ನಾತ್ರ ಗೇಹೇ ಧಿಕ್ ಧಿಕ್ ಗೃಹಂ ಗೃಹಂ॥೧೧೮॥

ಇತಿ ಪ್ರಲಪ್ಯ ಬಹುಧಾ ಭೋ ಶಂಭೋ ಪಾಹಿ ಮಾಮಿತಿ ।
ಉದ್ಧೂಲ್ಯ ಭಸ್ಮನಾಂಗಾನಿ ಲೌಕಿಕೇನ ಮೃತಸ್ತತಃ ॥೧೧೯॥

ನೀತ್ವಾ ದಗ್ಧೋಮೃತಸ್ತಾವತ್ ತತ್ಪುತ್ರೈರಪಿ ತಾದೃಶೈಃ ।
ತತಃ ಸಮಾಗತಂ ಸರ್ವೈಃ ಸ್ವಗೃಹಂ ಪ್ರತಿವಿಸ್ಮಿತೈಃ ॥೧೨೦॥

ಶಿವಸಾನ್ನಿಧ್ಯವಿಲ್ಲದಿರುವ, ಅಥವಾ ಶಿವಭಕ್ತಿಯಿಲ್ಲದಿರುವ ಮನೆ, ಧಾನ್ಯ ಗೋವು, ವಸ್ತ್ರ, ಫಲ ಇವೆಲ್ಲಾ ವ್ಯರ್ಥಗಳೇ. ಇವುಗಳಿಗೆಲ್ಲಾ ಧಿಕ್ಕಾರವಿರಲಿ. ||೧೧೬||

ಇದುವರೆಗೆ ನಾನು ಅಶೈವರೊಡನೆ ಭುಂಜಿಸಿದೆನು. ಅಶೈವರ ಸಂಗಡ ಕಳೆ ತೆನು. ಈಗಲೂ ಕೂಡ ದಾನಮಾಡೋಣವೆಂದರೆ ಅಂತಹ ಆಸ್ತಿಕಶೈವನು ಖಂಡಿತ ಸಿಗಲಾರನು. ||೧೧೭||

ಪಾಯಸ, ಪೊಂಗಲು, ಮತ್ತು ಅನೇಕ ವಿಧವಾದ ಭಕ್ಷ್ಯಗಳು ಇವುಗಳನ್ನು ಶಂಕರನಿಗೆ ನಾನು ಬಡಿಸಿ ಊಟಮಾಡಿಸಲಿಲ್ಲ. ಅಂತಹ ಮನೆಗೆ ಧಿಕ್ಕಾರವಿರಲಿ. ||೧೧೮||

ಹೀಗೆ ಆತನು ಬಹುವಿಧವಾಗಿ ಗೋಳಾಡಿ ಅಯ್ಯಾ! ಶಂಕರ! ನನ್ನನ್ನು ಕಾಪಾಡು ಎಂದು ಹೇಳಿ ಲೌಕಿಕಭಸ್ಮದಿಂದ ಶರೀರವನ್ನು ಲೇಪಿಸಿಕೊಂಡು ಮೃತ ಪಟ್ಟನು. ||೧೧೯||

ಬಳಿಕ ಆತನ ಮಕ್ಕಳು ಅವನ ದೇಹವನ್ನು ದಹನಮಾಡಿ, ಅವನ ಮರಣಕ್ಕೆ ಆಶ್ಚರ್ಯಪಡುತ್ತಾ ಅವರೆಲ್ಲಾ ಮನೆಗೆ ಬಂದರು. ||೧೨೦||

ತತಸ್ತದ್ದಹನೋದ್ಭೂತೋಧೂಮಸ್ತದ್ವನಸಂಗತಃ ।
ಆಕ್ರಾಂತಾಸ್ತೇನ ಧೂಮೇನ ಪಿಶಾಚಾಸ್ತದ್ವನಾಶ್ರಿತಾಃ ॥೧೨೧॥

ತತಸ್ತದ್ಧೂಮಸಂಗೇನ ತೇ ಸರ್ವೇ ಗತಕಲ್ಮಷಾಃ ।
ಶಿವಲೋಕಮನುಪ್ರಾಪ್ತಾಃ ಪುಷ್ಪಕೇಷು ಸ್ಥಿತಾಃ ಸುರಾಃ ॥೧೨೨॥

ಸಹ ತೇನಾಪಿ ವೃದ್ಧೇನ ಶಿವವಾರ್ತಾಸಮುತ್ಸುಕಾಃ ।
ಪ್ರಶಂಸಾಂ ಶಾಂಕರಸ್ಯೈವ ಶೃಣ್ವಂತಃ ಪುನರಾದರಾತ್ ॥೧೨೩॥

ಅತೋ ಮಹೇಶಮಹಿಮಾ ಮಹಾನೇವ ಮಹಾತ್ಮನಾಂ ।
ಮಹಾನಂದಕರೋ ನಿತ್ಯಂ ಮಹಾಪಾತಕನಾಶಕಃ ॥೧೨೪॥

ಯಸ್ಯಾನುತಾಪಮಾತ್ರೇಣ ಮುಕ್ತಾ ಚಾಸೀನ್ಮರುದ್ಗಣಾ ।
ತದ್ಧೂಮಸಂಗಾನ್ಮುಕ್ತಾಸ್ತೇ ಪಿಶಾಚಾಸ್ತೇತಿಪಾಪಿನಃ ॥೧೨೫॥

ಅನಂತರ ಆತನನ್ನು ಸುಟ್ಟ ಅಗ್ನಿಯ ಹೊಗೆಯು ಆ ಕಾಡಿನಲ್ಲೆಲ್ಲಾ ಹಬ್ಬಿತು. ಅಲ್ಲದೆ ಆ ಕಾಡಿನಲ್ಲಿ ವಾಸಿಸುತ್ತಿರುವ ಪಿಶಾಚಿಗಳಿಗೂ ತಗಲಿತು. ॥೧೨೧॥

ಬಳಿಕ ಆ ಹೊಗೆಯ ಸ್ಪರ್ಶದಿಂದ ಆ ಪಿಶಾಚಿಗಳಾಗಿದ್ದವರೆಲ್ಲಾ ತಮ್ಮ ಪಾಪವನ್ನು ಕಳೆದುಕೊಂಡು ತಮ್ಮ ತಮ್ಮ ರೂಪಗಳಿಂದ ಪುಷ್ಪಕವಿಮಾನಗಳನ್ನು ಏರಿ ಶಿವಲೋಕಕ್ಕೆ ಹೋದರು. ॥೧೨೨॥

ಉಳಿದ ಅವರೆಲ್ಲ ಶಿವಕಥೆಯನ್ನು ಕೇಳಬೇಕೆಂದು ಉತ್ಸಾಹಿಗಳಾಗಿ ಆ ಮುದುಕನೊಡನೆ ಕೂಡಿ ಶಿವಭಕ್ತನನ್ನು ಹೊಗಳುತ್ತಾ, ಹಾಗೂ ಶಿವಕಥೆಯನ್ನು ಕೇಳುತ್ತಾ ಹೊರಟರು. ॥೧೨೩॥

ಆದುದರಿಂದ ಶಿವನ ಮಹಿಮೆಯು ಅತಿಶಯವಾದುದು. ಅದು ಸತ್ಪುರುಷರಿಗೆ ಸಂತೋಷವನ್ನೂ ಆನಂದವನ್ನೂ ಉಂಟುಮಾಡುತ್ತದೆ. ಮಹಾಪಾಪಗಳನ್ನೂ ನಾಶಮಾಡುತ್ತದೆ. ॥೧೨೪॥

ಯಾವನ ದಯಾಮಾತ್ರದಿಂದ ದೇವತೆಗಳೆಲ್ಲಾ ಮುಕ್ತಿಯನ್ನು ಹೊಂದಿದರೋ, ಆತನ ಹೊಗೆಯು ಸಂಪರ್ಕದಿಂದ ಅತಿ ಪಾಪಿಗಳಾದ ಪಿಶಾಚಿಗಳೆಲ್ಲರೂ ಮುಕ್ತರಾದರು. ॥೧೨೫॥

ಏತಾವತಾಪಿ ಭಗವಾನ್ಮಹಾದೇವಃ ಕೃಪಾನಿಧಿಃ ।
ದದಾತಿ ಸ್ಥಾನಮುತ್ಕೃಷ್ಟಂ ಯೋಗಿನಾಮಪಿ ದುರ್ಲಭಂ ॥೧೨೬॥

ಅಘೋರನರಕಾವಾಸಂ ಕೃತ್ವಾ ಕಲ್ಪಶತೇಷ್ವಪಿ ।
ಪಿಶಾಚತ್ವಮನುಪ್ರಾಪ್ಯ ಮುಕ್ತಾಸ್ತದ್ಧೂಮಸಂಗಮಾತ್ ॥೧೨೭॥

ಸೋಽಪಿ ಕಿಂಶಾಂಭವಃ ಕಿಂ ತು ಪತಿತಾಗ್ರೇಸರೋ ಯತಃ ।
ಕದಾಪಿ ನ ಕೃತಂ ತೇನ ಮಹಾದೇವಸ್ಯ ಪೂಜನಂ ॥೧೨೮॥

ಪೂಜಿತಂ ಶಿವಲಿಂಗಂ ಚ ನ ದೃಷ್ಟಂ ತೇನ ಸರ್ವಥಾ ।
ನ ದೃಷ್ಟಃ ಶಾಂಭವಸ್ತೇನ ತತ್ಸಂಗಸ್ತಸ್ಯ ದೂರತಃ ॥೧೨೯॥

ಮರಣಾಭಿಮುಖೋ ವೃದ್ಧಃ ಸೋಽನುತಾಪೇನ ಕೇವಲಂ ।
ಮೃತೋ ಭಸ್ಮಕಣಾಕ್ರಾಂತೋ ತಸ್ಯ ಸಾ ಗತಿರುತ್ತಮಾ ॥೧೩೦॥

ಅಷ್ಟರಿಂದಲೇ ದಯಾಳುವಾದ ಶಂಕರನು ಯೋಗಿಗಳಿಗೂ ಸಿಗದಿರುವ ಉತ್ತಮ ಪದವಿಯನ್ನು ಕೊಡುತ್ತಾನೆ. ॥೧೨೬॥

ಶಿವಮಹಿಮೆಯನ್ನರಿಯದ ಅವರು ನೂರಾರುಕಲ್ಪಗಳವರೆಗೂ ಆ ಭಯಂಕರವಾದ ನರಕದಲ್ಲಿ ಯಾತನೆಯನ್ನು ಅನುಭವಿಸಿ, ಅನಂತರ ಪಿಶಾಚಿಗಳಾದರು. ಕಡೆಗೆ ಆ ವೃದ್ಧನ ದೇಹದ ಹೊಗೆಯ ಸಂಗದಿಂದ ಪವಿತ್ರರಾಗಿ ಮುಕ್ತಿ ಪಡೆದರು. ॥೧೨೭॥

ಆ ಕುತ್ಸಿತನಾದ ಶಾಂಭವನು ಪಾಪಿಗಳೊಳಗೆ ಅಗ್ರಗಣ್ಯನೆನಿಸಿದ್ದನು. ಆತನು ಯಾವಾಗಲೂ ಶಿವಪೂಜೆಯನ್ನು ಮಾಡಿದವನಲ್ಲ. ॥೧೨೮॥

ಮತ್ತೊಬ್ಬರು ಪೂಜಿಸಿದ ಶಿವಲಿಂಗವನ್ನಾದರೂ ನೋಡಲಿಲ್ಲ. ಅಲ್ಲದೆ ಶಂಕರಭಕ್ತನ ದರ್ಶನವನ್ನೂ ಮಾಡಲಿಲ್ಲ. ಅವರ ಸಹವಾಸವಂತೂ ಆತನಿಗೆ ಗೊತ್ತೇ ಇಲ್ಲ. ॥೧೨೯॥

ಇಂತಹ ವೃದ್ಧನಿಗೆ ಮರಣ ಸಮೀಪಿಸಲು ಆಗ ಆತನ ಮನಸ್ಸು ಬಹುವಾಗಿ ಕರಗಿತು. ಆದರಿಂದ ಭಸ್ಮವನ್ನು ಮಾತ್ರ ಲೇಪಿಸಿಕೊಂಡಿದ್ದ ಆತನಿಗೆ ಮೃತಿಯುಂಟಾಗಿ ಒಡನೆಯೇ ಸದ್ಗತಿಯು ಲಭಿಸಿತು. ಅಂದಮೇಲೆ ಶಿವಪ್ರಭಾವವನ್ನು ಇನ್ನೇನೆಂದು ಹೇಳಲಿ ? ॥೧೩೦॥

ಯಂ ಧ್ಯಾತ್ವಾ ಮುನಯಃ ಕದಾಪ್ಯವಿರತಾಃ ಸ್ತುತ್ವಾ ಚ ವೇದಾಃ ಪರಂ
ನತ್ವಾ ದೇವಗಣಾಃ ಕಲತ್ರಸಹಿತಾಃ ಪುತ್ರೈಃ ಸ್ವಮಿತ್ರೈರ್ಯುತಾಃ ।
ತಂ ದೇವೋತ್ತಮುಮಾಕಲಯ್ಯ ಮನಸಾ ಸ್ಮೃತ್ವಾ ಕ್ಷಣಂ ವಾ ಕ್ಷಣೈಃ
ಸಂಪೂರ್ಣಾ ಕ್ಷಣದಾ ಧಿಯಾರ್ಥಕಲಯಾ ಕಾಮಂ ಮುದಂ
ಪ್ರಾಪ್ನುಯುಃ ॥೧೩೧॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶಿವಧರ್ಮಕಥನಂ ನಾಮ ಏಕೋನತ್ರಿಂಶೋಽಧ್ಯಾಯಃ

ಯಾವ ಒಬ್ಬನನ್ನು ಧ್ಯಾನಮಾಡುತ್ತಾ ಋಷಿಗಳೆಲ್ಲಾ ತಮ್ಮ ಕಾಲವನ್ನು ಕಳೆಯುವರೋ ಅಂತಹವನನ್ನು ವೇದಗಳೂ ಸ್ತೋತ್ರಮಾಡುತ್ತವೆ. ಅಲ್ಲದೆ ದೇವತೆಗಳು ಆ ದೇವದೇವನನ್ನೇ ವಂದಿಸಿ, ಪತ್ನೀ, ಮಿತ್ರ, ಪುತ್ರ ಇವರುಗಳಿಂದ ಕೂಡಿ ಸುಖಪಟ್ಟರು. ಅಂತಹ ಈಶ್ವರನನ್ನು ಸ್ತುತಿಮಾಡಿದವನು, ಮಿಂಚಿನ ಕಲೆಯು ನಿಲ್ಲುವಷ್ಟು ಕಾಲದಲ್ಲಿ ಅಂದರೆ ಒಂದೇ ಒಂದು ಕ್ಷಣದಲ್ಲಿ ಸಕಲೇಷ್ಟಾರ್ಥವನ್ನು ಹೊಂದಿ, ಆನಂದದಲ್ಲಿ ಮುಳುಗುವನು. ಇದರಲ್ಲಿ ಸಂದೇಹವಿಲ್ಲ. ಎಂದು ನಂದೀಶ್ವರನು ದೇವತೆಗಳಿಗೆ ಹೇಳಿದನು. ॥೧೩೧॥

ಇಲ್ಲಿಗೆ ಶ್ರೀ ಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
ದೇವತೆಗಳ ಗಣಗಳನ್ನು ಕುರಿತು ನಂದೀಶನು ಶೈವನಧರ್ಮ, ಶಿವನಮೂರ್ತಿಗಳ
ಭೇದ ಇವುಗಳನ್ನು ವರ್ಣಿಸಿದ ಇಪ್ಪತ್ತೊಂಬತ್ತನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ತ್ರಿಂಶೋಽಧ್ಯಾಯಃ

॥ ದೇವಾ ಊಚುಃ ॥

ಆಜ್ಞಾಪಯಾಸ್ಮಾನ್ಭಗವನ್ ಅಸ್ಮಾಕಮಪಿ ಶಂಕರಃ ।
ಆರಾಧ್ಯಸ್ತತ್ಪದಾಂಭೋಜಸ್ಮರಣಂ ಕ್ರಿಯತೇ ಸದಾ ॥೧॥

ತಸ್ಯೈವಾನುಚರಾಃ ಸರ್ವೇ ತದಾಜ್ಞಾಕಾರಿಣಃ ಸದಾ ।
ತಂ ವಿನಾ ಗತಿರಸ್ಮಾಕಮನ್ಯೋ ನಾಸ್ತೀತಿ ನಿಶ್ಚಿತಂ ॥೨॥

ತತ್ಪಾದಸ್ಮರಣೇನೈವ ನೀಯಂತೇ ದಿವಸಾಃ ಖಲು ।
ಜೀವನಂ ತಾವದಸ್ಮಾಕಂ ಸ್ಮೃತಂ ತಚ್ಚರಣಾಂಬುಜಂ ॥೩॥

ಮೂವತ್ತನೆಯ ಅಧ್ಯಾಯ

"ಪೂಜ್ಯನೇ, ನಾವೂಕೂಡ ಆ ಶಂಕರನ ಪಾದಕಮಲಗಳನ್ನು ಪೂಜಿಸುತ್ತೇವೆ. ಯಾವಾಗಲೂ ಆತನ ಸ್ಮರಣೆ ಮಾಡುತ್ತೇವೆ. ನಮಗೆ ಅಪ್ಪಣೆಕೊಡು. ॥೧॥

ನಾವೆಲ್ಲರೂ ಆ ಶಿವನ ಸೇವಕರು. ಆತನ ಅಪ್ಪಣೆಯನ್ನು ನಡೆಸುವವರು, ಅಲ್ಲದೆ ಆತನನ್ನು ಬಿಟ್ಟರೆ ಬೇರೆ ಮತ್ತಾರೂ ನಮ್ಮನ್ನು ಕಾಪಾಡುವವರಿಲ್ಲವೆಂದು ನಂಬಿದ್ದೇವೆ. ॥೨॥

ಆತನ ಪಾದಗಳನ್ನು ಸ್ಮರಿಸುತ್ತಾ ನಾವು ದಿವಸಗಳನ್ನು ಕಳೆಯುತ್ತೇವೆ. ನಮಗೆ ಆ ಶಿವನ ಪಾದಗಳನ್ನು ಸ್ಮರಿಸಿಕೊಳ್ಳುವುದೇ ಒಂದುಜೀವನ ವಾಗಿದೆ. ॥೩॥

ಭವದುಕ್ತಕಥಾಧಾರಸುಧಾಪಾನೇನ ಮನ್ಮನಃ ।
ಪೀನಂ ದಿನೇ ದಿನೇ ವೃದ್ಧಿಂ ಪ್ರಯಾಸ್ಯತಿ ನ ಸಂಶಯಃ ॥೪॥

ಸ್ವಾಮಿನ್ನಗಣಿತಂ ದ್ರವ್ಯಮೇತೈರ್ದತ್ತಂ ದುರಾತ್ಮಭಿಃ ।
ಅಶಾಂಭವೇಭ್ಯಃ ಕಾ ತೇಷಾಂ ಭವಿತ್ರೀ ಕುಗತಿರ್ವದ ॥೫॥

ಕಿಂ ಚ ತದ್ದಾನಪಾತ್ರತ್ವಂ ಯೇ ಗತಾಸ್ತೇಽಪ್ಯಶಾಂಭವಾಃ ।
ತೇಷಾಂ ಕಾ ವಾ ಗತಿಸ್ಸ್ಯಾತ್ತು ದುರ್ಜ್ಞೇಯಾ ಖಲು ಮಾದೃಶೈಃ॥೬॥

ಸಹಸ್ರಯೋಜನಾಯಾಮಂ ಸಂಕೀರ್ಣಂ ಯಮಮಂದಿರಂ ।
ಅಶೈವೈರೇವ ತೇ ತಾವದುದಾರಾಧಾನದಾನತಃ ॥೭॥

ಧನವೃಷ್ಟಿಃ ಕೃತಾ ತೈಸ್ತು ಬ್ರಾಹ್ಮಣೇಭ್ಯಃ ಪರಂ ತು ತೈಃ ।
ಅಶಾಂಭವಾಸ್ತಾವತಾಪಿ ತದ್ದತ್ತಂ ತದ್ವ್ಯಥಾಗತಂ ॥೮॥

ನೀನು ಹೇಳಿದ ಕಥೆಯೆಂಬ ಅಮೃತಪಾನದಿಂದ ನಮ್ಮ ಮನಸ್ಸು ಉಬ್ಬಿ ಹೋಗಿದೆ. ಪ್ರತಿದಿನವೂ ವೃದ್ಧಿಯನ್ನು ಹೊಂದುತ್ತಲೂ ಇದೆ. ಇದು ನಿಜ. ॥೪॥

ಸ್ವಾಮಿಯೇ, ಶಿವಪೂಜಕರಲ್ಲದವರಿಗೆ ಕೊಟ್ಟ ಹಣಗಳನ್ನು ಆ ದುಷ್ಟರು ಲೆಕ್ಕಕ್ಕಿಡಲಿಲ್ಲ. ಆದರೆ ಹೀಗೆ ಅಶೈವರಿಗೆ ದಾನಮಾಡಿದ ಅವರಿಗೆ ಮುಂದೇನು ಗತಿಯಾಯಿತು ಎಂಬುದನ್ನು ದಯೆಯಿಂದ ತಿಳಿಸಬೇಕು. ॥೫॥

ಮತ್ತು ಯಾರುದಾನ ಸ್ವೀಕಾರಕ್ಕೆ ಅರ್ಹರು? ಅಂದರೆ ನಾವು ಎಂತಹವರಿಗೆ ದಾನಮಾಡಬೇಕು? ಅಪಾತ್ರರಿಗೆ ದಾನಮಾಡಿದವರಿಗೆ ಏನು ಗತಿಯಾಯಿತು? ಇವೆಲ್ಲವನ್ನೂ ಕೂಡ ನಾವು ತಿಳಿಯಲಾರೆವು. ॥೬॥

ಯಮನ ಮನೆಯು ಒಂದುಸಾವಿರ ಯೋಜನದಷ್ಟು ವಿಶಾಲವಿರುವುದು. ಅದಷ್ಟೂ ಅಶೈವರಿಂದ ತುಂಬಿ ಪಾಪಿಗಳಿಂದ ಪರಿವೃತವಾಗಿದೆಯಲ್ಲವೆ. ॥೭॥

ಆ ದುರಾತ್ಮರು ವಿಶೇಷವಾಗಿ ದಾನಮಾಡಿದರು. ಆದರೂ ಮಳೆಸುರಿದಂತೆ ಅವರು ಶಿವಪೂಜಕರಲ್ಲದವರಿಗೆ ದಾನಮಾಡಿದುದರಿಂದ ಅದು ಪ್ರಯೋಜನಕಾರಿಯಾಗಲಿಲ್ಲ. ॥೮॥

ಯಾಗಾದಿಕಾನಾಂ ತದ್ಧರ್ಮನಿರತಾಸ್ತೇ ತಥಾಪಿ ತೈಃ ।
ಅಶಾಂಭವಾಸ್ತತಸ್ತೇಷಾಂ ಗತಿಃ ಕಾ ವಾ ಭವೇದ್ವದ ॥೯॥

ಶಿವಾಲಯವಿಹೀನೇಷು ದೇಶೇಷು ಸ್ಥಿತಮಾದರಾತ್ ।
ಅಶೈವಧರ್ಮಮಾಶ್ರಿತ್ಯ ಧರ್ಮಾಂತರಪರಾಯಣಾಃ ॥೧೦॥

ಏತಾದೃಶಾನಾಂ ಸರ್ವೇಷಾಂ ವಿಚಾರಾರ್ಥಮಯಂ ಯಮಃ ।
ಪ್ರವೃತ್ತಸ್ತೇನ ಕಾಲೋಽಸ್ಯ ಭೂಯಾನೇವ ಭವಿಷ್ಯತಿ ॥೧೧॥

ಏತಾದೃಶವಿಚಾರೇಣ ಕ್ಷೀಣಮಾಯುರ್ದಿನೇ ದಿನೇ ।
ಏತಸ್ಯ ಶಿವಪೂಜಾಪಿ ತ್ವರಯಾ ಸಂಪ್ರಜಾಯತೇ ॥೧೨॥

ತೇನ ತೇನ ವಿಚಾರೇಣ ದುಃಖಿತಃ ಸರ್ವದಾ ಯಮಃ ।
ತದ್ದುಃಖಶಮನೋಪಾಯಂ ನಂದಿಕೇಶ ವದಾಧುನಾ ॥೧೩॥

ಯಾಗಮಾಡುವವರು, ಮತ್ತು ಯಾಗಕ್ಕೆ ಸಂಬಂಧಪಟ್ಟ ನಿಯಮಗಳನ್ನು ಪಾಲಿಸುವವರು, ಅಶಾಂಭವರೇ ಆಗಿದ್ದರೆ, ಅವರಿಗೆ ಎಂತಹಗತಿಯು ಒದಗಬಹುದು ? ಎಂಬುದನ್ನು ತಿಳಿಸಬೇಕು. ॥೯॥

ಶಿವ ದೇವಾಲಯವಿಲ್ಲದ ಊರಿನಲ್ಲಿ ವಾಸಮಾಡಿ, ಅಶೈವಧರ್ಮವನ್ನು ಅವಲಂಬಿಸಿ ಕೊನೆಗೆ ಅದನ್ನು ಬಿಟ್ಟು ಬೇರೇ ಧರ್ಮವನ್ನು ಆಶ್ರಯಿಸುವವರಿಗೆ ಯಾವಗತಿ ಲಭಿಸಬಹುದು ? ॥೧೦॥

ಇಂತಹವರನ್ನು ವಿಚಾರಣೆ ಮಾಡಲು ಯಮನು ಪ್ರಾರಂಭಿಸುವನು. ಈ ವಿಚಾರದಿಂದ ಆತನಿಗೆ ಅನೇಕ ಕಾಲಗಳು ಕಳೆಯುವುವು. ॥೧೧॥

ಇಂತಹ ವಿಚಾರದಿಂದ ದಿನ ದಿನಕ್ಕೂ ಅವನ ಆಯುಸ್ಸು ನಷ್ಟವಾಗುವುದು. ಯಮನಾದರೋ ಅದಕ್ಕಾಗಿ ಶಿವಪೂಜೆಯನ್ನು ನಡೆಸುವ ಸಮಯವನ್ನು ನಿರೀಕ್ಷಿಸುವನು. ॥೧೨॥

ನಂದೀಶ್ವರನೇ, ಈ ಸನ್ನಿವೇಶದಿಂದ ಯಮನಿಗೆ ಬಹಳ ತೊಂದರೆಯಾಗುತ್ತದೆ. ಆದುಃಖಶಾಂತಿಯ ವಿಚಾರವನ್ನು ನಮಗೆ ಹೇಳು.” ಹೀಗೆಂದು ದೇವತೆಗಳು ನಂದಿಕೇಶ್ವರನನ್ನು ಪ್ರಾರ್ಥಿಸಿಕೊಂಡರು. ॥೧೩॥

॥ ನಂದಿಕೇಶ್ವರ ಉವಾಚ ॥

ತುಷಖಂಡನಕಲ್ಪಸ್ಯ ವಿಚಾರಸ್ಯಾಸ್ತಿ ಕಿಂ ಫಲಂ ।
ಅಶಾಂಭವಾಃ ಪಾತನೀಯಾಃ ಕುಂಭಿಪಾಕೇಷು ಯತ್ನತಃ ॥೧೪॥

ಅಶಾಂಭವಕೃತಾನ್ ಧರ್ಮಾನ್ ಅಧರ್ಮಾನಿತಿ ಸಂಸ್ಮರ ।
ಚಂಡಾಲೈಃ ಕಿಂ ಕೃತೋ ಯಾಗಃ ಸ್ವರ್ಗಾಯ ಸ್ವರ್ಗಸಾಧನಃ ॥೧೫॥

ಯದಿ ಪುಲ್ಕಸನಾರೀಭಿರ್ವೇದಸ್ಯಾಧ್ಯಯನಂ ಕೃತಂ ।
ತೇನಾಧ್ಯಯನಜಂ ಪುಣ್ಯಂ ತಾಸು ಸಂಭಾವಿತಂ ಚ ನ ॥೧೬॥

ಅತಃ ಸರ್ವೇ ಪಾತನೀಯಾಃ ಕುಂಭಿಪಾಕೇಷು ತೇ ಯಮ ।
ಆಕಲ್ಪಾಂತೇಷು ತೇ ಸ್ಥಿತ್ವಾ ಪ್ರಯಾಸ್ಯಂತಿ ಪಿಶಾಚತಾಂ ॥೧೭॥

ಆಗ ನಂದೀಶ್ವರನು ವಿಷಯವನ್ನು ಹೀಗೆ ಮುಂದುವರಿಸಿದನು. " ಹೊಟ್ಟಿನಂತೆ ನಿಸ್ಸಾರವಾದ ಆ ಅಶಾಂಭವರ ವಿಚಾರದಿಂದೇನು ಫಲ? ಅಂತಹ ಅಶೈವರನ್ನು ಕುಂಭೀಪಾಕದಲ್ಲಿ ಹಾಕಬೇಕು. ಅವರೇ ಕುಂಭೀಪಾಕವೆಂಬ ನರಕಕ್ಕೆ ಯೋಗ್ಯರಾದವರು. ॥೧೪॥

ಅಶೈವರ ಧರ್ಮಗಳನ್ನು ಆಚರಿಸಿದರೆ ಅವು ಧರ್ಮಗಳಾಗಲಾರವು. ಹೊಲೆಯನು ಯಾಗಮಾಡಿದರೆ ಆ ಯಾಗದಿಂದ ಸ್ವರ್ಗವು ಲಭಿಸುವುದೇನು ? ಎಂದಿಗೂ ಇಲ್ಲ. ಹಾಗೆಯೇ ಶಿವಧರ್ಮವನ್ನು ಬಿಟ್ಟಿರುವವರು ಯಾವ ಧರ್ಮವನ್ನು ಅವಲಂಬಿಸಿದರೂ ಅದರಿಂದ ಪ್ರಯೋಜನವಿಲ್ಲ. ॥೧೫॥

ಪುಲ್ಕಸ (ಬೇಡರ) ಜಾತಿಯ ಯುವತಿಯರು ಎಷ್ಟೇ ವೇದಾಧ್ಯಯನ ಮಾಡಿದರೂ ಅವರು ಅದರಿಂದ ಫಲವನ್ನು ಹೊಂದಲಾರರು. ಹಾಗೆಯೇ ಅಶೈವರು ಮಾಡಿದ ಧರ್ಮ ಕೃತ್ಯಗಳಿಗೆ ಫಲವಿಲ್ಲ. ॥೧೬॥

ಎಲೈ! ಯಮನೇ ! ಆದುದರಿಂದ ಅವರನ್ನು ಕುಂಭೀಪಾಕನರಕದಲ್ಲಿ ಕೆಡಹಬೇಕು. ಅವರು ಕಲ್ಪಾಂತದವರೆಗೂ ಅಲ್ಲಿದ್ದು ಅನಂತರ ಪಿಶಾಚಿಗಳಾಗುವರು. ॥೧೭॥

ಅತಃ ಪರಂ ಪೂಜನೀಯಾನ್ವದಾಮಿ ಬಹುಧಾ ಪರಂ ।
ಶೃಣುಧ್ವಂ ಸಾವಧಾನೇನ ಶಿವಭಕ್ತಾನ್ವಿಶೇಷತಃ ॥೧೮॥

ಹೇ ವಿಶ್ವನಾಥ ಮದನಾಂತಕ ಕಾಲಕಾಲ
ಗೌರೀಪತೇ ಗಿರಿಶ ಚಂದ್ರಕಲಾವತಂಸ ।
ಶೈಲೇಂದ್ರಜಾಹೃದಯಪಂಕಜರಾಜಹಂಸ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೧೯॥

ಕಾಶೀಪತೇ ಹರ ಭವಾಮರಸಾರ್ವಭೌಮ
ಭೀಮ ಸ್ಮರಾಂಧಕರಿಪೋ ಗಿರಿಶ ತ್ರಿಣೇತ್ರ ।
ಭೋ ಭೂತಿಗಾತ್ರ ವೃಷಭಾಧಿಪ ಪಾತ್ರಗಾತ್ರ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೦॥

ಇನ್ನುಮುಂದೆ ಪೂಜೆಗೆ ಅರ್ಹರಾದ ಶೈವರ ವಿಷಯವನ್ನು ಹೇಳುತ್ತೇನೆ. ಸಾವಧಾನದಿಂದ ಕೇಳಿರಿ. ॥೧೮॥

"ಎಲೈ, ದೇವದೇವನೇ, ನೀನು ಲೋಕದ ಒಡೆಯನು. ಮನ್ಮಥನನ್ನು ನಾಶ ಮಾಡಿದವನು. ಅಲ್ಲದೆ ಕಾಲನಿಗೂ ಕಾಲನು. ಗೌರೀಪತಿಯೂ ನೀನೇ ಆಗಿರುವೆ. ಚಂದ್ರಕಲೆಯನ್ನು ಶಿರಸ್ಸಿನಲ್ಲಿ ಧರಿಸಿರುತ್ತೀಯೆ. ಗೌರಿಯಮನಸ್ಸೆಂಬ ಸರೋವರಕ್ಕೆ ನೀನು ರಾಜಹಂಸದಂತಿರುವೆ! ಅಂತಹ ಶಂಕರನೇ ನನ್ನನ್ನು ಕಾಪಾಡು ಎಂದು ಯಾವನು ಸದಾ ಹೇಳುತ್ತಾನೋ ಆವನೇ ಈಶ್ವರ ಭಕ್ತನು." ಎಂದು ತಿಳಿಯಿರಿ. ॥೧೯॥

"ಎಲೈ ವೃಷಭಧ್ವಜನೇ, ನೀನು ಕಾಶೀಪತಿಯೆನಿಸಿರುವೆ. ಭಕ್ತರ ದುಃಖ ಗಳನ್ನು ನಾಶಮಾಡಿ ಮುಕ್ತಿಯನ್ನು ಕೊಟ್ಟು ಹರ, ಭವ, ಎಂಬ ಹೆಸರುಗಳನ್ನು ಪಡೆದಿರುವೆ. ದೇವತೆಗಳಿಗೆ ಚಕ್ರವರ್ತಿಯೂ ನೀನೇ ಆಗಿದ್ದೀಯೆ. ಭಯಂಕರನೂ, ಮನ್ಮಥ ಮತ್ತು ಅಂಧಕ ಇವರನ್ನು ನಾಶಪಡಿಸಿದವನೂ, ಗಿರಿಜೆಯ ವಲ್ಲಭನೂ, ತ್ರಿಲೋಚನನೂ ನೀನೇ ಅಲ್ಲವೆ! ವಿಭೂತಿಭೂಷಣನಾದ ದೇವನೇ, ನೀನು ನನ್ನನ್ನು ಕಾಪಾಡು" ಎಂದು ಯಾರು ಈಶ್ವರನನ್ನು ಸದಾ ಬೇಡುವರೋ ಅಥವಾ ಸ್ಮರಿಸುವರೋ, ಅಂತಹವರೇ ನಿಜವಾದ ಶಾಂಭವರು. ॥೨೦॥

ವಿಶ್ವೇಶ್ವರ ತ್ರಿದಶನಾಯಕ ಚಂದ್ರಮೌಳೇ
ಲೀಲಾತಿಲೋಲವಿಕಟಾಘುಟಿತಾರ್ಧದೇಹ ।
ಸಿದ್ಧೇಶ್ವರೀರಮಣ ಚಂದ್ರಪತೇ ಮುಹುರ್ಮಾಂ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೧॥

ಭೋ ಸಂಕಟಾರಮಣ ಶೂಲಕರ ಸ್ಮರಾರೇ
ಶ್ರೀಶೀತಲಾರಮಣ ಭೋ ಕಲಶೇಶ ಶಂಭೋ ।
ಜ್ಯೋತಿಃಸ್ವರೂಪ ಭಗವನ್ಮಣಿಕೀರ್ಣಕೋಶ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೨॥

ಪುಣ್ಯಾವಿಮುಕ್ತಪರಮೇಶ್ವರ ನಂದಿಕೇಶ
ಶ್ರೀಮನ್ಮಹೇಶ್ವರ ಮಹೇಶ ಪಿನಾಕಪಾಣೇ ।
ಶ್ರೀಕಾಲಕೂಟವಿಷನೀಲಕರಾರ್ಧಕಂಠ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೩॥

ವಿಶ್ವೇಶ್ವರನೇ, ದೇವತೆಗಳಿಗೆ ಒಡೆಯನೂ, ಶಿರಸ್ಸಿನಲ್ಲಿ ಚಂದ್ರನನ್ನು ಧರಿಸಿದವನೂ, ಲೀಲೆಯಿಂದ ಸಂಚರಿಸುವವನೂ, ವಿಲಕ್ಷಣನೂ, ಪಾರ್ವತಿಯೊಡನೆ ಕೂಡಿರುವವನೂ, ಸಿದ್ಧೇಶ್ವರಿಯ ಕಾಂತನೂ ಆದ ಚಂದ್ರಮೌಳಿಯೇ, ಸದಾ ನನ್ನನ್ನು ಕಾಪಾಡು ಎಂದು ಸ್ತೋತ್ರಮಾಡತಕ್ಕವನೇ ಶಿವಭಕ್ತನೆನಿಸುವನು. ॥೨೧॥

ಎಲೈ ಕಷ್ಟನಿವಾರಕನಾದ ಪಾರ್ವತೀಪತಿಯೇ, ಶೂಲಧರನೇ, ಮನ್ಮಥನನ್ನು ನಾಶಮಾಡಿದಾತನೇ, ನೀನು ನನ್ನನ್ನು ಕಾಪಾಡು. ಶ್ರೀ ಶೀತಲಾದೇವಿಗೆ ವಲ್ಲಭನೂ, ಕಲಶೇಶನೂ, ತೇಜಃಸ್ವರೂಪಿಯೂ, ಪೂಜ್ಯನೂ, ರತ್ನಭೂಷಿತನೂ ಆದ ನೀನಲ್ಲದೆ ಬೇರೆ ನನಗೆ ರಕ್ಷಕರಾರು ? ಎಂದು ಯಾವನು ಹೇಳುವನೋ ಅವನೇ ಶಿವಭಕ್ತನೆಂದು ತಿಳಿ. ॥೨೨॥

ನಂದಿಕೇಶ್ವರನೇ, ಮಹೇಶ್ವರನೇ, ಸುವರ್ಣಮಯವಾದ ಪಿನಾಕವೆಂಬ ಧನುಸ್ಸನ್ನು ನೀನು ಹಿಡಿದಿರುವೆ. ಕಾಲಕೂಟ ವಿಷವನ್ನು ಕುಡಿದು ನಿನ್ನ ಅರ್ಧಕಂಠ ಕಪ್ಪಾಗಿದೆ. ದೇವನೇ, ನೀನು ನನ್ನನ್ನು ಸರ್ವದಾ ಕಾಪಾಡು ಎಂದು ಸ್ತೋತ್ರಮಾಡುವಾತನು ಶಿವಭಕ್ತನೆನಿಸುವನು. ॥೨೩॥

ಉದ್ಧೂಲನಾತಿರುಚಿರಾಂಗಲಸತ್ತ್ರಿಪುಂಡ್ರ
ಲೇಖಾಲಲಾಟಫಲಕಾಂಧಕಮರ್ದಕೇಶ ।
ಆಮರ್ದಕೇಶ್ವರ ಮಹಾಘವಿನಾಶಕೇಶ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೪॥

ಶ್ರೀವೃದ್ಧಕಾಲವೃಷಭಧ್ವಜ ಕೃತ್ತಿವಾಸ
ಶ್ರೀಲಿಂಗಲಿಂಗನಿಲಯಾಮ್ನಯ ಮೃತ್ಯುಮೃತ್ಯೋ ।
ಶ್ರೀವಕ್ರತುಂಡಗಣನಾಯಕಡುಂಢಿರಾಜ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೫॥

ಕೇದಾರನಾಯಕ ಸದಾಶಿವ ಸೋಮನಾಥ
ಜ್ಞಾನೇಶ ದಕ್ಷಹರ ನಾಯಕ ದಕ್ಷನಾಥ ।
ಸಿದ್ಧೇಶ ಧರ್ಮಗಣನಾಯಕ ಚಂಡಿಕೇಶ
ಪಾಹೀತಿ ಯೋ ವದತಿ ತಂ ಶಿವಭಕ್ತಮಾಹುಃ ॥೨೬॥

ಭಸ್ಮದ ಉದ್ಧೂಲನದಿಂದ ಶೋಭಿತವಾದ ಅವಯವವುಳ್ಳವನೇ! ಸರ್ವದಾ ಹೊಳೆಯುತ್ತಿರುವ ತ್ರಿಪುಂಡ್ರರೇಖೆಯುಳ್ಳವನೇ, ವಿಶಾಲವಾದ ಲಲಾಟವುಳ್ಳ ದೇವನೇ, ಆಮರ್ದಕೇಶನೇ, ಮಹಾಪಾಪಗಳನ್ನು ನಾಶಮಾಡತಕ್ಕ ದೇವನೇ, ನೀನು ನನ್ನನ್ನು ಕಾಪಾಡು ಎಂದು ಯಾವನು ಸ್ಮರಿಸುವನೋ ಅವನೇ ಹರಭಕ್ತನೆಂದು ತಿಳಿ. ||೨೪||

ಪುರಾಣಪುರುಷನೇ, ವೃಷಭವೇ ಧ್ವಜವಾಗಿರುವವನೇ, ನೀನು ಚರ್ಮಾಂಬರ ಧಾರಿಯಲ್ಲವೆ! ಶ್ರೀ ಶಿವಲಿಂಗದ ಲಿಂಗವೇ ನಿನ್ನ ಮನೆಯಾಗಿದೆ. ನೀನು ಮೃತ್ಯುವಾದ ಯಮನಿಗೂ ಯಮನಾಗಿರುವೆ. ವಕ್ರತುಂಡನೂ, ಗಣನಾಯಕನೂ, ಡುಂಢಿರಾಜನೂ ನೀನೇ ಆಗಿರುವೆ. ಅಂತಹ ನೀನು ನನ್ನನ್ನು ಕಾಪಾಡು ಎಂದು ಭಾವಿಸುವವನು ಪರಶಿವಭಕ್ತನೆನಿಸುವನು. ||೨೫||

ದೇವದೇವನೆ, ನೀನು ಕೇದಾರೇಶ್ವರ, ಸದಾಶಿವ, ಸೋಮನಾಥ, ಜ್ಞಾನೇಶ ದಕ್ಷ, ಹರ, ನಾಯಕ, ದಕ್ಷನಾಥ, ಸಿದ್ಧೇಶ್ವರ, ಧರ್ಮಗಣನಾಯಕ, ಚಂಡಿಕೇಶ್ವರ ಎಂದು ಮುಂತಾದ ಅನೇಕ ನಾಮಗಳಿಂದ ಕರೆಯಿಸಿಕೊಳ್ಳಲ್ಪಡುವೆ.

ಏತಾದೃಶಾಃ ಸಂತತಮರ್ಚನೀಯಾಃ
ಸುರೈರಪಾರೈರಪಿ ಕಿನ್ನರಾದ್ಯೈಃ ।
ತತ್ಪೂಜಯಾ ಪೂಜಿತ ಏವ ನೂನಂ
ಗೌರೀಸಹಾಯಃ ಸಮಯೋ ಮಮಾಯಂ ॥೨೭॥

ಲಿಂಗಂ ವಿಲೋಕ್ಯ ಸಹಸಾ ಪ್ರಣತಃ ಫಲಂ ವಾ
ಪರ್ಣಂ ಚ ನೀರಮುಪಕೃತ್ಪ್ರಯತಃ ಪ್ರದದ್ಯಾತ್ ।
ರುದ್ರಾಕ್ಷಭಸ್ಮಕಣಭೂಷಿತಪುಣ್ಯದೇಹೋ
ದೇಹಾವಸಾನಮಧಿಗತ್ಯ ಶಿವಂ ಪ್ರಯಾತಿ ॥೨೮॥

ಏತಾದೃಶಾನತಿನಿಗೂಢಶಿವಾರ್ಚನಾದಿ
ದ್ರವ್ಯಾಸಪಾರಗುಣಸಾಗರಸಾಗರಾಂಸ್ತು ।
ದೂರಾದ್ವಿಲೋಕ್ಯ ಮುಹುರಾದರತೋಽಪಿ ನತ್ವಾ
ತುಷ್ಟಾ ಭವಂತಿ ಮುನಯೋಽಪಿ ಗಣಾಶ್ಚ ಸಿದ್ಧಾಃ ॥೨೯॥

ಅಂತಹ ನೀನು ನನ್ನನ್ನು ಕಾಪಾಡು ಎಂದು ಹೇಳುವವನೇ ಶಿವಭಕ್ತನೆಂದು ತಿಳಿ. ॥೨೬॥

ಹೀಗೆ ಸದಾ ಶಂಕರನನ್ನು ಧ್ಯಾನಿಸುವ ಭಕ್ತರನ್ನು ಪೂಜಿಸಬೇಕು. ದೇವತೆಗಳು, ಕಿನ್ನರರು ಇವರೇ ಮೊದಲಾದನೇಕರು ಅವರ ಪೂಜೆಮಾಡಿದುದರಿಂದಲೇ ಈಗ ಇತರರಿಂದ ಪೂಜಿಸಲ್ಪಡುತ್ತಿರುವರು. ನಾನೂ ಸಹ ಗೌರೀ ಸಮೇತನಾದ ಶಿವನ ಪ್ರಸಾದವನ್ನು ಹೊಂದಿದೆನು. ॥೨೭॥

ಶಿವಲಿಂಗ ದರ್ಶನವನ್ನು ಮಾಡಿ, ಹಣ್ಣನ್ನಾಗಲೀ, ಬಿಲ್ವಪತ್ರೆಯನ್ನಾಗಲೀ, ಜಲವನ್ನಾಗಲೀ ಲಿಂಗಕ್ಕೆ ಸಮರ್ಪಿಸಬೇಕು, ಹಾಗೆಯೇ ತಲೆಬಾಗಬೇಕು. ಹೀಗೆ ಮಾಡಿದವನು ದೇಹಾವಸಾನದಲ್ಲಿ ರುದ್ರಾಕ್ಷಿ, ಭಸ್ಮ ಇವುಗಳಿಂದ ಶೋಭಿತನಾಗಿ ಶಂಕರನ ಸಮೀಪವನ್ನು ತೆರಳುವನು. ॥೨೮॥

ಶಿವನನ್ನು ಪೂಜಿಸುವ ಭಕ್ತರನ್ನು ಮುನಿಗಳು ಸಿದ್ಧರು, ಗಣಗಳು, ಇಂತಹವರು ದೂರದಿಂದಲೇ ದರ್ಶನಮಾಡಿ ಕೈಮುಗಿದು ಸಿದ್ಧಿಯನ್ನು ಹೊಂದುವರು. ॥೨೯॥

ಯೇನಾರ್ಚಿತಂ ಸಕೃದುಮಾಪತಿಲಿಂಗಮೇಕಂ
ತೇನಾಶು ಶೋಕಜಲಧಿಃ ಖಲು ತೀರ್ಣ ಏವ ।
ತೂರ್ಣಂ ಪ್ರಯಾತಿ ಗಿರಿಜಾರಮಣಂ ಸ ತಾವತ್
ವಂದ್ಯಃ ಸತಾಮನುದಿನಂ ಸುಕೃತಾರ್ಣವತ್ವಾತ್ ॥೩೦॥

ಆಕರ್ಣಿತಾ ಶಿವಕಥಾ ಕ್ಷಣಮಾಕ್ಷಣಂ ವಾ
ಪ್ರಕ್ಷೀಣಪಾತಕಮಹಾಂಬುಧಿರೇವ ಸೋಽಪಿ ।
ತತ್ಪೂಜನೇನ ಗಿರಿಜಾರಮಣೋಽಪಿ ಹೃಷ್ಟಃ
ಕಷ್ಟಾನಿ ನಾಶಯತಿ ಸತ್ಯಮಿದಂ ಯಮೋಕ್ತಂ ॥೩೧॥

ಯಃ ಪಶ್ಯತಿ ಸ್ಮರಹರಪ್ರಿಯಲಿಂಗಪೂಜಾಂ
ಭಕ್ತ್ಯಾ ಪ್ರಮೋದಮುಪಯಾತಿ ವಿಲೋಕನೇನ ।
ರೋಮಾಂಚಚಿಹ್ನಿತವಪುಃ ಸ್ಮೃತಚಂದ್ರಮೌಳಿಃ
ತಂ ಶಾಂಭವಂ ವಿದುರಘಾಂಬುಧಿನಾಶಹೇತುಂ ॥೩೨॥

ಯಾವನು ಒಂದು ಬಾರಿಯಾದರೂ ಶಿವಲಿಂಗವನ್ನು ಭಕ್ತಿಯಿಂದ ಪೂಜೆ ಮಾಡುವನೋ ಆತನ ದುಃಖವು ನಾಶವಾದಂತೆಯೇ ಸರಿ. ವಿಶೇಷ ಪುಣ್ಯಶಾಲಿಯಾಗಿರುವುದರಿಂದ, ಆತನನ್ನು ಮೊದಲು ನಮಸ್ಕರಿಸಬೇಕು. ॥೩೦॥

ಈಶ್ವರನ ಕಥೆಯನ್ನು ಒಂದು ಮಿಂಚು ಮಿನುಗುವಷ್ಟು ಹೊತ್ತಾದರೂ ಕೇಳಿದವನು ಮಹಾಪಾಪಗಳಿಂದ ಬಿಡುಗಡೆಹೊಂದುವನು. ಆತನನ್ನು ಪೂಜೆಮಾಡುವುದರಿಂದ ಶಿವನು ಪ್ರಸನ್ನನಾಗಿ ಸರ್ವ ಕಷ್ಟಗಳನ್ನು ನಾಶಮಾಡುತ್ತಾನೆ. ಯಮನು ಹೇಳಿದ ಈ ಮಾತು ನಿಜವಾಗಿದೆ. ॥೩೧॥

ಮನ್ಮಥನಾಶಕವಾದ ಶಿವಲಿಂಗಪೂಜೆಯನ್ನು ನೋಡಿದೊಡನೆ ಯಾವನು ಭಕ್ತಿಯಿಂದ ಕೈಜೋಡಿಸುವನೋ, ಮತ್ತು ಮೈತುಂಬ ರೋಮಾಂಚವನ್ನು ಹೊಂದಿ ಸಂತೋಷದಿಂದ ಹೇ ಚಂದ್ರಶೇಖರ ಎಂದು ಧ್ಯಾನಮಾಡುವನೋ, ಅವನನ್ನು ಶಾಂಭವನೆನ್ನಬೇಕು. ಆತನೇ ಸಂಸಾರದುಃಖವನ್ನು ನಾಶಮಾಡಲು ಸಮರ್ಥನು. ॥೩೨॥

ತಂ ಪುಣ್ಯಕೃತ್ತಮವರೇಣ್ಯಮಿತಿ ಸ್ಮರಾಮಿ
ಯಃ ಕಾಲಕಾಲಚರಣಾಂಬುಜಭಕ್ತಿಯುಕ್ತಃ ।
ಯುಕ್ತಃ ಸಯೋಗನಿಯಮಾದಿಭಿರಿತ್ಯಮೈಮಿ
ತಸ್ಮಾನ್ನಕೋಽಪಿ ಭುವನೇಷ್ವಧಿಕೋ ನರೇಷು ॥೩೩॥

ಏತಾದೃಶಾಃ ಸಂತತಮರ್ಚನೀಯಾಃ
ಸುರೈರಪಾರ್ಯೈರಪಿ ಕಿಂನರಾದ್ಯೈಃ ।
ತತ್ಪೂಜಯಾ ಪೂಜಿತ ಏವ ನೂನಂ
ಗೌರೀಸಹಾಯಃ ಸಮಯೋ ಮಮಾಯಂ ॥೩೪॥

ಯಃ ಪ್ರಾತರಿಂದುಶಕಲಾಭರಣಾರ್ಚನೇನ
ಪ್ರೀತಃ ಸ್ಮರನ್ ಸ್ಮರಹರಂ ಫಲಪುಷ್ಪದಾನೈಃ ।
ತಂ ಪೂಜಯಂತಿ ಮುನಯೋಽಪಿ ಮುಹುಃ ಸ ಧನ್ಯೋ
ಮಾನ್ಯೋಽಸ್ಮದಾದಿಭಿರಿತಿ ಪ್ರಣಮಂತಿ ಧೀರಾಃ ॥೩೫॥

ಯಾವಾಗಲೂ ಶ್ರೀ ಶಂಕರನಲ್ಲಿ ಭಕ್ತಿಯುಳ್ಳವರಾಗಿ, ಯಮನಿಯಮಾದಿಗಳಿಂದ ಕೂಡಿ ಯೋಗಿಗಳೆನಿಸಿ, ಶಂಕರನನ್ನು ಸ್ಮರಿಸುವವರೇ ಶ್ರೇಷ್ಠರಾದವರು. ಅವರಿಗಿಂತಲೂ ಉತ್ತಮರು ಇನ್ನೊಬ್ಬರಿಲ್ಲವೆಂದೇ ತಿಳಿಯುತ್ತೇನೆ. ||೩೩||

ಇಂತಹ ಶೈವರನ್ನು ಯಾವಾಗಲೂ ಪೂಜಿಸಬೇಕು. ಅಲ್ಲದೇ ಅವರು ದೇವತೆಗಳಿಗೂ ಕಿಂಪುರುಷಾದಿಗಳಿಗೂ ಪೂಜ್ಯರೆನಿಸುವರು. ಅವರು ಈಶ್ವರಪೂಜೆ ಮಾಡಿದುದರಿಂದಲೇ ಅವರಿಗೆ ಸಕಲ ಗೌರವವೂ ಲಭಿಸುವುದು. ನಾನೂ ಶ್ರೀ ಶಂಕರನಿಗೆ ಬೇಕಾದವನಾದುದು ಅದರಿಂದಲೇ. ||೩೪||

ಪ್ರಾತಃಕಾಲ ಎದ್ದು ಭಕ್ತಿಯಿಂದ ಶಿವನನ್ನು ಪೂಜೆಮಾಡಿ ಅವನನ್ನು ಕೊಂಡಾಡಿ, ಹಣ್ಣು, ಹೂ ಇವುಗಳನ್ನು ದಾನಮಾಡಿದ ಮನುಷ್ಯನನ್ನು ಮುನಿಗಳೂ ಸಹ ನಮಗಿಂತಲೂ ಈತನೇ ಧನ್ಯನೆಂದು ತಿಳಿದು ನಮಸ್ಕಾರಮಾಡುತ್ತಾರೆ.||೩೫||

ಯೇ ಶಂಕರಾರ್ಚನಪರಾಃ ಶಿವ ಕಾಲಕಾಲ
ಮನ್ನಾಥ ಮಜ್ಜನಕ ಮೇ ಪರಮಾಪ್ತ ಬಂಧೋ ।
ಮತ್ಪ್ರಾಣರಕ್ಷಕ ಮಹೇಶ್ವರ ಮಾಮವಾವ
ನ ತ್ವಾಂ ವಿನಾ ಗತಿರಿತಿ ಪ್ರವದಂತಿ ಶೈವಾಃ ॥೩೬॥

ದಾರಾಸ್ತವೈವ ತನಯಾಸ್ತವ ಚಂದ್ರಮೌಳೇ
ಧಾನ್ಯಂ ತವೈವ ಧನಮಶ್ವಗವಾದಯೋಽಪಿ ।
ಸರ್ವಂ ತ್ವಮೇವ ತವ ಸರ್ವಮಿತಿ ಸ್ಮರಂತಃ
ಸಂಸಾರಭೀತಿಮಪಹಾಯ ಶಿವಂ ಪ್ರಯಾಂತಿ ॥೩೭॥

ಧನ್ಯಂ ಮನಃ ಶಿವಪದಸ್ಮರಣಾನುರಕ್ತಂ
ಧನ್ಯಂ ವಿಶಾಲನಯನಾಂಬುಜಜೀವನಂ ಚ ।
ತಲ್ಲಿಂಗಪೂಜನವಿಲೋಕನಲೋಲಮೇವ
ತಸ್ಮಾತ್ಕಿಮನ್ಯದಧಿಕಂ ಭುವಿ ಚಾನ್ಯದಸ್ತಿ ॥೩೮॥

ಶಿವನ ಪೂಜೆಯಲ್ಲಿ ಆಸಕ್ತರಾದ ಶೈವರು ಶಿವನೇ, ಕಾಲಕಾಲನೇ, ನನ್ನೊಡೆಯನೇ, ನನ್ನ ತಂದೆಯೇ, ನನಗೆ ಪರಮಬಂಧುವಾದವನೇ, ನನ್ನ ಜೀವವನ್ನು ಕಾಪಾಡುವ ಮಹೇಶ್ವರನೇ, ನನ್ನನ್ನು ಸಲಹು. ಕಾಪಾಡು. ನಿನ್ನನ್ನು ಬಿಟ್ಟರೆ ಬೇರೆ ನನಗೆ ಗತಿಯಾರು ? ಎಂದು ಮೊರೆಯಿಡುವರು. ॥೩೬॥

ಎಲೈ ಶಿವನೇ, ಈ ನನ್ನ ಹೆಂಡಶಿ, ಮಕ್ಕಳು, ಧಾನ್ಯ, ಹಸು, ಕುದುರೆ ಮೊದಲಾದ ಸಂಪತ್ತು ಇವೆಲ್ಲಾ ನಿನ್ನವೇ ಆಗಿವೆ. ಎಂದು ಸಕಲ ವಸ್ತುವನ್ನೂ ಈಶ್ವರಾರ್ಪಣ ಮಾಡುತ್ತಾ ಸಂಸಾರದ ಭೀತಿಯನ್ನು ಬಿಟ್ಟು ಕೊನೆಗೆ ಈಶ್ವರನನ್ನು ಹೊಂದುವರು. ॥೩೭॥

ಈಶ್ವರನ ಪಾದಕಮಲಗಳನ್ನು ಸ್ಮರಿಸುವುದರಲ್ಲಿ ತೊಡಗಿದ ಈ ಮನಸ್ಸು ಧನ್ಯವಾಯಿತು. ವಿಶಾಲವಾದ ಈ ಕಣ್ಣು ಶಿವನ ಲಿಂಗಪೂಜೆಯ ದರ್ಶನದಿಂದ ಸಾರ್ಥಕತೆಯನ್ನು ಹೊಂದಿತು. ಇದಕ್ಕಿಂತಲೂ ಬೇರೆ ಧನ್ಯವಾದ ವಸ್ತುವು ಯಾವುದೂ ಇಲ್ಲ. ॥೩೮॥

ಧನ್ಯಾ ಹಿ ತಸ್ಯ ಜನನೀ ಜನಕೋಽಪಿ ಧನ್ಯೋ
ಧನ್ಯಂ ಕುಲಂ ಚ ರಮಣೀ ತನಯಾಶ್ಚ ಭೃತ್ಯಾಃ ।
ದಾಸ್ಯಶ್ಚ ಯಸ್ಯ ಶಿವಲಿಂಗಸಮರ್ಚನೇನ
ಸದ್ಯಃ ಪ್ರಸನ್ನಮಪಿ ಮಾನಸಮಿತ್ಯವೈಮಿ ॥೪೦॥

ಉನ್ಮತ್ತವದ್ವದತಿ ಶಂಕರನಾಮ ದೃಷ್ಟ್ವಾ
ಲಿಂಗಾರ್ಚನಂ ಕುಸುಮಚಂದನಧೂಪದೀಪ್ಯೈಃ ।
ಪಕ್ವಾನ್ನರಾಶಿಭಿರಮಂದಮುದಾ ಯ ಏವ
ತತ್ಪಾದುಕಾಸ್ಮರಣಮಪ್ಯಘನಾಶಕಂ ಹಿ ॥೪೦॥

ಯಃ ಕಶ್ಚಿದೇವ ಭುವನೇಷ್ವಮಿತಪ್ರಭಾವೋ
ಭಾವೋ ನ ಭಾವಸದೃಶೋ ಭುವನತ್ರಯೇಽಪಿ ।
ಭಾವಸ್ಯ ಭಾವಭಯಲೇಶವಿಹೀನವೃತ್ತೇಃ
ಭೂಯೋ ಭವೋ ನ ಭವತೀತಿ ಭವೋಽಪಿ ಮೇನೇ ॥೪೨॥

ಶಿವಲಿಂಗವನ್ನು ಪೂಜಿಸಿ ಸಂತೋಷದಿಂದ ಯಾವನ ಮನಸ್ಸು ನೈರ್ಮಲ್ಯವನ್ನು ಹೊಂದುವುದೋ ಆತನ ತಾಯಿ, ತಂದೆ, ಕುಲ, ಹೆಂಡತಿಮಕ್ಕಳು, ಆಳುಗಳು, ಇವರೆಲ್ಲಾ ಕೃತಾರ್ಥರಾಗುವರೆಂದು ತಿಳಿದಿದ್ದೇನೆ. ॥೪೦॥

ಹೂವು, ಧೂಪ ಇವುಗಳಿಂದ ಪೂಜೆಮಾಡಿದ ಶಿವಲಿಂಗವನ್ನು ದರ್ಶನ ಮಾಡಿದೊಡನೆಯೇ ಹುಚ್ಚನಂತೆ ಶಿವನಾಮವನ್ನು ಹೇಳುತ್ತಾ ಪಾಯಸ, ಶಾಲ್ಯಾನ್ನ ಇವುಗಳನ್ನು ಸಮರ್ಪಿಸಿ ಆ ಶಿವನಲ್ಲಿ ನಟ್ಟಮನಸ್ಸುಳ್ಳವರ ಪಾದಸ್ಮರಣೆಯೇ, ಮನುಷ್ಯರ ಪಾಪವನ್ನು ನಾಶಮಾಡುವುದು. ॥೪೧॥

ಲೋಕದಲ್ಲಿ ಹೆಚ್ಚು ಮಹಿಮೆಯುಳ್ಳವನು ಯಾವನಾದರೂ ಇರಲಿ. ಆತನು ಶೈವನ ಒಳ್ಳೆಯ ಭಾವನೆಗಿಂತ ಹೆಚ್ಚಿಗೆ ಮಹಿಮೆಯನ್ನು ಪಡೆಯಲಾರನು. ಶೈವನು ಸೋಽಹಂಭಾವನೆಯಿಂದ ಸಂಸಾರದುಃಖವನ್ನು ನೀಗಿರುವನಲ್ಲದೇ ಆತನಿಗೆ ಪುನಃ ಜನ್ಮವಿಲ್ಲವೆಂದು ಶಿವನೇ ಹೇಳಿರುತ್ತಾನೆ. ॥೪೨॥

ಸಂಸಾರಭಾರಪರಿಹಾರವಿಹಾರಹಾರ
ಹಾರೋಪಿಹಾರಪರಮಾದರಮಾದರೇಣ ।
ದೂರಾದನಾದರಮುಪಾಸ್ಯ ನಮಂತಿ ದಾರೈಃ
ಧೀರಾಶ್ಚ ಕಿಂನರವರಾಃ ಸಹ ತೇ ಕುಮಾರೈಃ ॥೪೩॥

ಕಿಂ ವರ್ಣಯಾಮಿ ಶಿವಭಕ್ತಜನಪ್ರಭಾವಂ
ಗೌರೀಪತಿಃ ಪ್ರಿಯತಮಃ ಶಿವಭಕ್ತ ಏವ ।
ತಂ ಪುಣ್ಯಪುಂಜಮಜಪೂಜ್ಯತಮಂ ವಿದಿತ್ವಾ
ತತ್ಪೂಜನಾಯ ನಿಯತೋ ಭವ ನಿತ್ಯಮೇವ ॥೪೪॥

ಯೇ ಶಂಕರಸ್ಮರಣಮಾತ್ರಪವಿತ್ರಗಾತ್ರಾಃ
ತಾನ್ಸ್ತ್ವಂ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೪೫॥

ಸಂಸಾರ ಭಾರವನ್ನು ನಾಶಮಾಡತಕ್ಕ ಶಿವನ ಸಂಬಂಧವಾದ ಅರ್ಚನೆ, ನಾಟ್ಯ ಮೊದಲಾದ ಆಟ, ನೈವೇದ್ಯ, ಉಪಹಾರ ಇವುಗಳನ್ನು ಭಕ್ತಿಯಿಂದ ಶಿವನಿಗೆ ಅರ್ಪಿಸಿದವರನ್ನು ಕಿಂನರರೂ ಸಹ ಸಪತ್ನೀಕರಾಗಿ ಭಕ್ತಿಯಿಂದ ನಮಸ್ಕರಿಸುವರು. ॥೪೩॥

ಸದಾ ಶಿವಪೂಜಕರ ಮಹಿಮೆಯನ್ನು ಎಷ್ಟೆಂದು ವರ್ಣಿಸಲಿ. ಆ ಗೌರೀಪತಿಯಾದ ಶಂಕರನೂ ಸಹ ಭಕ್ತಪರಾಧೀನನಾಗಿ ಶೈವನೆನಿಸುವನು. ಏಕೆಂದರೆ ಆ ಶೈವನನ್ನು ಪುಣ್ಯಾತ್ಮನೆಂದೂ ಬ್ರಹ್ಮಾದಿಗಳಿಂದ ಪೂಜಿಸಲ್ಪಡತಕ್ಕವನೆಂದೂ ತಿಳಿದು ಶಂಕರನು ತಾನೂ ಆತನನ್ನು ಪೂಜಿಸುವನು. ॥೪೪॥

ಶಿವಸ್ಮರಣೆಯಿಂದಲೇ ಪರಿಶುದ್ಧರಾದವರು ಶಿವನ ನಿಲಯದಲ್ಲಿ ವಾಸಿಸುವರೆಂದು ತಿಳಿ. ಎಲೈ ಯಮನೇ, ನೀನು ಅಂತಹವರ ಮನೆಗೆ ಹೋಗಬೇಡ. ಅವರನ್ನು ಪೂಜಿಸಬೇಕು. ಆದುದರಿಂದ ಅವರ ನಿಜತತ್ತ್ವವನ್ನು ನಿನಗೆ ತಿಳಿಸಿದ್ದೇನೆ. ॥೪೫॥

ಶ್ರುತ್ಯುಕ್ತಸಿದ್ಧಸಿತಭಸ್ಮಪವಿತ್ರಗಾತ್ರಾನ್
ತಾಂಸ್ತ್ವಂ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೪೬॥

ಶ್ರೀಬಿಲ್ವಪತ್ರಶಿವಲಿಂಗಸಮರ್ಚನಾರ್ಥಾನ್
ತಾಂ ಸ್ತ್ವಂ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೪೭॥

ರುದ್ರಾಕ್ಷಭೂಷಣ ವಿಭೂಷಿತಪುಣ್ಯದೇಹಾನ್
ತಾಂ ಸ್ತ್ವಂ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೪೮॥

ಎಲೈ ಯಮನೇ, ವೇದದಲ್ಲಿ ಹೇಳಿರುವ ಕ್ರಮದಲ್ಲಿ ಸಿದ್ಧಪಡಿಸಿದ ವಿಭೂತಿಯನ್ನು ಧರಿಸಿದವರು ಶಿವನ ನಿಲಯದಲ್ಲಿ ವಾಸಿಸುವರೆಂದು ತಿಳಿ. ಅವರ ಮನೆಗೆ ನೀನು ಹೋಗಬೇಡ. ಅವರನ್ನು ಪೂಜಿಸಲು ತತ್ತ್ವವಿಚಾರವನ್ನು ನಿನಗೆ ಹೇಳುತ್ತೇನೆ. ॥೪೬॥

ಬಿಲ್ವಪತ್ರೆಗಳಿಂದ ಶಿವಲಿಂಗವನ್ನು ಅರ್ಚಿಸತಕ್ಕವರು ಶಿವನ ಸನ್ನಿಧಿಯನ್ನು ಸೇರತಕ್ಕವರೆಂದು ಭಾವಿಸು. ಅವರ ಮನೆಗೆ ನೀನು ಹೋಗಬಾರದು. ಅವರು ಪೂಜ್ಯರು. ಆ ತತ್ವವಿಚಾರವನ್ನು ಹೇಳಿರುವೆನು. ॥೪೭॥

ರುದ್ರಾಕ್ಷಮಾಲೆಗಳಿಂದ ಶೋಭಿತರಾದವರು ಈಶ್ವರನ ಸನ್ನಿಧಿಯನ್ನು ಹೊಂದುವರೆಂಬುದನ್ನು ಮರೆಯಬೇಡ. ಎಲೈ ಯಮನೆ, ಅಂತಹವರ ಮನೆಗೆ ನೀನು ಕಾಲಿಡಲಾಗದು. ಅವರು ಪೂಜೆಗೆ ಅರ್ಹರು. ಆ ತತ್ವವಿಚಾರವನ್ನು ತಿಳಿಸುತ್ತೇನೆ. ॥೪೮॥

ಶ್ರೀಶೈಲನಾಯಕಸಮರ್ಚನಪೂತಚಿತ್ತಾನ್
ತಾಂ ಸ್ತ್ವಂ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೪೯॥

ಶ್ರೀಕಾಲಹಸ್ತಿಪರಿಪೂಜನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೦॥

ಏಕಾಮ್ರನಾಯಕವಿಲೋಕನಪೂತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೧॥

ಎಲೈ ಯಮನೇ, ಶ್ರೀಗೌರೀಶಂಕರರನ್ನು ಪೂಜೆಮಾಡಿ ಶುದ್ಧಚಿತ್ತರಾದ ಮನುಜರು ಕೈಲಾಸಕ್ಕೆ ಹೋಗತಕ್ಕವರು. ಅವರ ಮನೆಗೆ ನೀನು ಹೋಗಬೇಡ. ಅವರನ್ನು ಗೌರವಿಸಲು ಈ ತತ್ವವೇ ಕಾರಣ. ॥೪೯॥

ಶ್ರೀಕಾಲಹಸ್ತಿಯಲ್ಲಿ ಶಿವಪೂಜೆಯಲ್ಲಿ ಆಸಕ್ತರಾದವರು ಕೈಲಾಸವಾಸಿಗಳಾಗುವರೆಂದು ತಿಳಿ. ಅವರ ಮನೆಗೆ ಹೋಗುವುದು ನಿನಗೆ ಸರಿಯಲ್ಲ. ಅವರನ್ನು ಪೂಜಿಸಲು ಈ ತತ್ವವನ್ನು ತಿಳಿಸಿದೆನು. ॥೫೦॥

ಎಲೈ ಯಮನೇ, ಏಕಾಮ್ರನಾಯಕನಾದ ಪರಶಿವನ ಪೂಜೆಮಾಡುವವರು ಯೋಗ್ಯರು. ಅವರಿಗೆ ಶಿವನ ವಸತಿಯು ಲಭಿಸುವುದು. ನೀನು ಆವರ ಮನೆಗೆ ಹೆಜ್ಜೆ ಇಡಬೇಡ. ಏಕೆಂದರೆ ಅವರು ಪೂಜ್ಯರು. ಇದು ಮುಖ್ಯತತ್ವವೆಂದು ತಿಳಿ. ॥೫೧॥

ಈಡ್ಯಾರುಣಾಚಲವಿಲೋಕನಲೋಲಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೨॥

ಶ್ರೀಮಚ್ಚಿದಂಬರವಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೩॥

ಮಧ್ಯಾರ್ಜುನೇಶ್ವರವಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೪॥

ಶ್ರೀಕುಂಭಕೋಣಪತಿಪೂಜನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೫॥

ಪೂಜ್ಯವಾದ ಅರುಣಾಚಲದಲ್ಲಿ ನೆಲಸಿರುವ ಶಿವನನ್ನು ದರ್ಶನಮಾಡುವುದರಲ್ಲಿ ಆಸಕ್ತರಾದವರು ಶಿವಲೋಕವನ್ನು ಹೊಂದುವರು. ಎಲೈ ಕೃತಾಂತನೇ, ಅವರ ಮನೆಗೆ ಹೋಗಬೇಡ. ಈ ತತ್ವದಿಂದ ಅವರು ಪೂಜೆಗೆ ಅರ್ಹರಾಗಿದ್ದಾರೆ. ||೫೨||

ಶ್ರೀಮಚ್ಚಿದಂಬರೇಶ್ವರನನ್ನು ದರ್ಶನಮಾಡಬೇಕೆಂದು ಆಸೆಯುಳ್ಳವರು ಕೈಲಾಸವನ್ನು ಹೊಂದುವರೆಂದು ತಿಳಿ. ಅವರು ಇರುವ ಸ್ಥಳಕ್ಕೆ ನೀನು ಹೋಗಬೇಡ. ಅವರು ಗೌರವಕ್ಕೆ ಅರ್ಹರಾದವರು. ಇದೇ ಒಂದು ತತ್ವ. ||೫೩||

ಎಲೈ ಯಮನೇ ನೀನು, ಮಧ್ಯಾರ್ಜುನ, ಕುಂಭಕೋಣೇಶ್ವರ, ಮತ್ತು ನಂದಿಮಂಡಲ, ಇಲ್ಲಿರುವ ಈಶ್ವರಮೂರ್ತಿಗಳನ್ನೂ ದರ್ಶನ ಮಾಡಬೇಕೆಂದು

ಶ್ರೀನಂದಿಮಂಡಲನಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೬॥

ಭೂತಿಂ ವಿಚಿಂತ್ಯ ಸತತಂ ಭ್ರಮರಾಂಬಿಕಾಯಾಃ
ತುಷ್ಟಾ ಭವಂತಿ ಸುಕೃತೈರಮಿತೈರ್ಯಜನಾತಃ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೭॥

ಶ್ರೀಛಂದಲಾಚರಣಪೂಜನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೮॥

ತೀರ್ಥೇಶಲಿಂಗನಿಲಯಾರ್ಚನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೫೯॥

ಆಸೆಯಿಂದ ಕೂಡಿದವರು ದೇಹಾಂತ್ಯದಲ್ಲಿ ಕೈಲಾಸಗಾಮಿಗಳಾಗುವರೆಂದು ತಿಳಿ. ಈ ತತ್ವವನ್ನು ನಿನಗೆ ಹೇಳುತ್ತೇನೆ. ||೫೪-೫೫-೫೬||

ಆ ಭ್ರಮರಾಂಬಿಕೆಯ ಅಷ್ಟವಿಭೂತಿಗಳನ್ನು ಸ್ಮರಿಸಿ ಯಾರು ಸಂತೋಷ ಪಡುವರೋ ಅವರು ಪುಣ್ಯಶಾಲಿಗಳು. ನೀನು ಅವರಿದ್ದ ಕಡೆ ಹೋಗಬೇಡ. ಅವರ ಪೂಜೆಗೆ ಇದು ಮುಖ್ಯ ಫಲವೆಂದು ಹೇಳುತ್ತೇನೆ. ||೫೭||

ಎಲೈ! ಯಮನೇ! ಶ್ರೀ ಛಂದಲಾದೇವಿಯನ್ನು ಪೂಜಿಸತಕ್ಕವರು, ತೀರ್ಥೇಶ ಲಿಂಗವನ್ನು ಅರ್ಚಿಸುವವರೂ, ಕಾಶೀಪ್ರದೇಶದಲ್ಲಿ ವಾಸಮಾಡುವವರೂ ಇವರೆಲ್ಲಾ

ಕಾಶೀಪ್ರದೇಶವಸನಾನಸಪುಣ್ಯದೇಹಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೦॥

ವಿಶ್ವೇಶ್ವರಾರ್ಚನ ವಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೧॥

ಶುದ್ಧಾವಿಮುಕ್ತಪತಿಪೂಜನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೨॥

ಆನಂದಭೈರವವಿಲೋಕನಪೂತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೩॥

ಪುಣ್ಯಶಾಲಿಗಳಾದುದರಿಂದ ಕೈಲಾಸವು ಇವರಿಗೆ ಮನೆಯಾಗುವುದು, ನೀನು ಅವರಿದ್ದಕಡೆ ಸುಳಿಯಬೇಡ. ಅವರೆಲ್ಲರೂ ಪೂಜ್ಯರು. ||೫೮-೫೯-೬೦||

ಎಲೈ! ಯಮನೇ! ವಿಶ್ವೇಶ್ವರಲಿಂಗ ಮತ್ತು ಶುದ್ಧಾವಿಮುಕ್ತವಲ್ಲಭನಾದ ವಿಶ್ವೇಶ್ವರಮೂರ್ತಿ ಇವರ ಅರ್ಚನೆಯಲ್ಲಿ ಆಸಕ್ತರಾದವರೂ, ಆನಂದಭೈರವನ ಸಂದರ್ಶಮಾಡಿದವರೂ ಇವರೆಲ್ಲಾ ದೇಹಾಂತ್ಯದಲ್ಲಿ ಕೈಲಾಸಕ್ಕೆ ಹೋಗತಕ್ಕವರು. ಅವರ ಮನೆಗೆ ನೀನು ಹೋಗಬೇಡ, ಅವರು ಪೂಜ್ಯರೆಂಬ ತತ್ವವನ್ನು ಈಗ ಹೇಳುತ್ತೇನೆ. ||೬೧-೬೨-೬೩||

ಶ್ರೀಮುಕ್ತಿಮುಂಟಪವಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೪॥

ಭಕ್ತ್ಯಾ ಕಥಂಚಿದನುವಾಸರಮನ್ನಪೂರ್ಣಾ
ಪಾದಾರವಿಂದಭಜನಪ್ರವಣಾಃ ಶಿವಾಸ್ತೇ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೫॥

ಶ್ರೀಡುಂಢಿರಾಜಚರಣಾರ್ಚನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೬॥

ವಿಶ್ವೇಶ್ವರಾರ್ಚನವಿಲೋಕನಪೂತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೬೭॥

ಶ್ರೀ ಮುಕ್ತಿಮುಂಟಪದ ದರ್ಶನಮಾಡುವುದರಲ್ಲಿ ಆಸಕ್ತರಾದವರೂ, ಪ್ರತಿದಿನವೂ ಅನ್ನಪೂರ್ಣೆಯ ಪಾದಾರವಿಂದವನ್ನು ಭಜಿಸುವವರೂ, ಕೈಲಾಸವನ್ನು ಸೇರತಕ್ಕವರೆಂದು ತಿಳಿ. ನೀನು ಅವರ ಮನೆಗೆ ಹೋಗಬಾರದು. ಅವರು ಪೂಜ್ಯರೆಂಬ ತತ್ವವನ್ನು ಹೇಳುತ್ತೇನೆ. ||೬೪-೬೫||

ಯಮನೇ! ದುಂಢಿರಾಜನ ಪಾದಪೂಜೆಯಲ್ಲಿ ಆಸಕ್ತರಾದವರು, ಮತ್ತು ಶ್ರೀ ವಿಶ್ವೇಶ್ವರಸೇವೆಯಲ್ಲಿ ನಿರತರಾದವರು, ಅಲ್ಲವೇ ಓಂಕಾರನಾಯಕನ ಸಂದರ್ಶನದಲ್ಲಿ ನಿರತರಾದವರೂ, ಇವರೆಲ್ಲಾ ಕೈಲಾಸವನ್ನು ಸೇರತಕ್ಕವರಾಗಿದ್ದಾರೆ. ಆದುದರಿಂದ

ಓಂಕಾರನಾಯಕವಿಲೋಕನಸಕ್ತಚಿತ್ತಾನ್
ತಾಂಸ್ತಾನ್ ತ್ರಿಣೇತ್ರನಿಲಯಾನ್ ಯಮ ಪಶ್ಯ ಪಶ್ಯ ।
ತನ್ಮಂದಿರೇಷು ಗಮನಂ ನ ತವಾಪಿ ಯುಕ್ತಂ
ತತ್ಪೂಜನಾರ್ಥಮಪಿ ತತ್ತ್ವಮಿದಂ ವದಾಮಿ ॥೧೯॥

ದೂತಾಸ್ತವಾತಿಕಠಿನಾಃ ಖಲು ಶಿಕ್ಷಣೀಯಾಃ
ತೇ ಧರ್ಮಬುದ್ಧಿರಹಿತಾಃ ದುರಿತಪ್ರವೃತ್ತಾಃ ।
ತದ್ಯೋಗತಸ್ತವ ವಿಶೇಷತ ಏವ ಧರ್ಮೋ
ನಾಶಂ ಪ್ರಯಾಸ್ಯತಿ ಸ ತೇ ಸ ಶಿವಾಪರಾಧಃ ॥೨೦॥

ದೂತಾಶ್ಚರಂತಿ ಯದಿ ತೇ ಶಿವಮಂದಿರೇಷು
ಶೈವೇಷು ತತ್ಸದನಮಾರ್ಗಮಹಾರ್ಹದೇಶೇ ।
ತರ್ಹಿ ಪ್ರಕುಪ್ಯತಿ ಶಿವೋಪಿ ಯಮಾತ ಏವ
ತೇ ತಾವದಾದರತ ಏವ ನಿವಾರಣೀಯಾಃ ॥೨೧॥

ಯೇ ಶಂಕರಸ್ಮರಣಮಾತ್ರವಿಧೂತಪಾಪಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।

ಅವರಿರುವಕಡೆ ನೀನು ಹೋಗಬೇಡ. ಅಲ್ಲದೆ ಅವರಿಗೆ ಗೌರವ ಕೊಡಬೇಕೆಂಬ ಈ ತತ್ವವನ್ನು ನಿನಗೆ ಹೇಳುವನು. ||೧೭-೧೮-೧೯||

ಎಲೈ ಯಮನೇ! ನಿನ್ನ ದೂತರು ಬಹಳ ಕ್ರೂರರು. ಅವರನ್ನು ಶಿಕ್ಷಿಸಬೇಕು. ಅವರು ಧರ್ಮಬುದ್ಧಿಯಿಲ್ಲದವರು. ಮತ್ತು ಪಾಪಮಾಡುವುದರಲ್ಲಿ ಆಸಕ್ತರಾಗುತ್ತಾರೆ. ಅವರಿಂದ ನಿನ್ನ ಎಲ್ಲಾ ಧರ್ಮವೂ ಹಾಳಾಗುತ್ತದೆ. ಅದರಿಂದ ಶಿವಾಪರಾಧವು ಉಂಟಾಗುತ್ತದೆ. ||೨೦||

ಯಮನೇ ! ನಿನ್ನ ದೂತರು ಇನ್ನು ಮುಂದೆ ಶಿವದೇವಾಲಯವನ್ನು ಮತ್ತು ಶೈವರ ಮನೆಯನ್ನೂ ಪ್ರವೇಶಮಾಡಬಾರದು. ಪ್ರವೇಶಮಾಡಿದರೆ ಶಿವನು ಸಿಟ್ಟಾಗುವನು. ಆದುದರಿಂದ ಅವರನ್ನು ಆದರದಿಂದಲೇ ತಡೆಯಬೇಕು. ||೨೧||

ಶ್ರೀ ಶಿವನಪಾದಸ್ಮರಣೆಯಿಂದ ಪಾಪಗಳನ್ನು ನಾಶಮಾಡಿಕೊಂಡಿರುವ ಆ ಶಾಂಭವರನ್ನು ನೀನು ಪೂಜಿಸಬೇಕು. ಅವರ ಮನೆಗೆ ಇರುವ ದಾರಿಯನ್ನೂ ಸಹ

ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೭೨॥

ಯೇ ಲಿಂಗಪೂಜನರತಾಃ ಸತತಂ ಪ್ರಹೃಷ್ಟಾಃ
ತೇ ಶಾಂಭವಾಸ್ತವ ಯಮಾಸ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೭೩॥

ಉದ್ಧೂಲನಪ್ರಭವಪುಣ್ಯಸಮೃದ್ಧಚಿತ್ತಾನ್
ತೇ ಶಾಂಭವಾಸ್ತವ ಯಮಾಸ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೭೪॥

ಯೇ ಬಿಲ್ವಮೂಲಶಿವಲಿಂಗಕೃತಪ್ರಣಾಮಾನ್
ತೇ ಶಾಂಭವಾಸ್ತವ ಯಮಾನ್ಮಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೭೫॥

ನಿನ್ನ ದೂತರು ತುಳಿಯಕೂಡದು. ಎಲ್ಲಿಹೋದರೂ ಅಜ್ಞಾನದಿಂದಲಾದರೂ ಅವರ ಮನೆಗೆ ಪ್ರವೇಶಮಾಡಕೂಡದು. ॥೭೨॥

ಶಿವಲಿಂಗಪೂಜೆಯಲ್ಲಿ ಆಸಕ್ತರಾದ ಶೈವರನ್ನು ನೀನು ಪೂಜಿಸತಕ್ಕದ್ದು. ನಿನ್ನ ಭಟರು ಅವರ ಮನೆಯನ್ನು ಪ್ರವೇಶಿಸದಿರಲಿ. ಅಲ್ಲದೇ ಅವರ ಮನೆಯಿರುವ ದಾರಿಯನ್ನೂ ಸಹ ನೋಡದಿರಲಿ. ॥೭೩॥

ಭಸ್ಮವನ್ನು ಲೇಪಿಸಿಕೊಂಡುದರಿಂದ ಪವಿತ್ರರಾದ, ಮತ್ತು ಬಿಲ್ವವೃಕ್ಷದ ಬುಡದಲ್ಲಿರುವ ಶಿವಲಿಂಗವನ್ನು ನಮಸ್ಕರಿಸಿದಂತಹ ಶೈವರನ್ನು ನೀನು ಪೂಜಿಸಬೇಕು. ಅವರ ಮನೆಗೆ ನಿನ್ನ ಭಟರು ಪ್ರವೇಶಮಾಡದಿರಲಿ. ಅಜ್ಞಾನದಿಂದಲೂ ಅವರ ಮನೆಯಿರುವ ದಾರಿಯಕಡೆಯಾದರೂ ಹೆಜ್ಜೆ ಹಾಕಕೂಡದು. ॥೭೪-೭೫॥

ಯೇ ಬಿಲ್ವಪತ್ರಲವನಾಹತಕಂಟಕಾಗ್ರಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೨೬॥

ಯೇ ಬಿಲ್ವಪಲ್ಲವಕೃತೋನ್ನತಲಿಂಗಪೂಜಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೨೭॥

ಯೇ ವೈ ತ್ರಿಪುಂಡ್ರರುಚಿರಾಮಲಭಾಲಭಾಗಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೨೮॥

ರುದ್ರಾಕ್ಷಭೂಷಣವಿರಾಜಿತಕಂಠದೇಶಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೨೯॥

ಬಿಲ್ವಪತ್ರವನ್ನು ಕೊಯ್ಯುವಾಗ ಅದರ ಮುಳ್ಳಿನಿಂದ ಗಾಯವಾದ ದೇಹವುಳ್ಳವರನ್ನೂ ಬಿಲ್ವ ಚಿಗುರುಗಳಿಂದ ಶಿವಲಿಂಗವನ್ನು ಪೂಜೆಮಾಡುವ ಶೈವರನ್ನು ನೀನು ಯಾವಾಗಲೂ ಪೂಜಿಸಬೇಕು. ಅವರ ಮನೆಯಿರುವಕಡೆ ನಿನ್ನ ದೂತರು ಹೋಗದಿರಲಿ. ಮತ್ತು ಅವರ ಮನೆಗೆ ಹೋಗುವದಾರಿಯಕಡೆಗೂ ನಿನ್ನ ದೂತರು ಸುಳಿಯದಿರಲಿ. ॥೨೬-೨೭॥

ಭಸ್ಮತ್ರಿಪುಂಡ್ರದಿಂದ ಪ್ರಕಾಶಿಸುವ ಹಣೆಯುಳ್ಳ, ಮತ್ತು ರುದ್ರಾಕ್ಷಮಾಲೆಯಿಂದ ಶೋಭಿತವಾದ ಕಂಠಪ್ರದೇಶವುಳ್ಳ ಶೈವರನ್ನು ನೀನು ಪೂಜೆಮಾಡಬೇಕು. ಅಲ್ಲದೆ ನಿನ್ನ ಭಟರು ಅವರ ಮನೆಯನ್ನು ಪ್ರವೇಶಿಸಕೂಡದು. ತಿಳಿಯದೆಯೂ ಅವರ ಮನೆಗೆ ಹೋಗುವದಾರಿಯನ್ನು ಸಹ ತುಳಿಯಬಾರದು. ॥೨೮-೨೯॥

ಯೇ ಲಿಂಗಪೂಜನಮಹೋತ್ಸವಲೋಲಚಿತ್ತಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೮೦॥

ಯೇ ಶಾಂಭವಾರ್ಚನಸಮಾರ್ಜಿತವಿತ್ತಭಾರಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೮೧॥

ಯೇ ಶಂಕರಸ್ಮರಣವಿಸ್ಮೃತಕಾರ್ಯಚೇಷ್ಟಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೮೨॥

ಯೇ ಶಂಭುಲಿಂಗನಿಹತೇಕ್ಷಣರಶ್ಮಿಜಾಲಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೮೩॥

ಲಿಂಗಪೂಜೆಯ ಉತ್ಸವದಲ್ಲಿ ಆಸಕ್ತರಾದವರೂ, ಶೈವರನ್ನು ಪೂಜಿಸಿ ತಮ್ಮ ಹಣವನ್ನೆಲ್ಲಾ ಅರ್ಪಿಸಿದವರೂ ಆದ ಶೈವರನ್ನು ನೀನು ಪೂಜಿಸಬೇಕು. ಅಲ್ಲದೆ ನಿನ್ನ ಸೇವಕರು ಅವರ ಮನೆಗೆ ಹೋಗಬಾರದಲ್ಲದೇ ಅವರ ಮನೆಯಿರುವಕಡೆ ತೋರುವ ದಾರಿಯನ್ನೂ ತುಳಿಯಕೂಡದು. ॥೮೦-೮೧॥

ಯಾರು ಶ್ರೀ ಶಂಕರನ ಸ್ಮರಣೆಯನ್ನು ಮಾಡುತ್ತಾ ತಮ್ಮ ಇತರ ಗೃಹ ಕೃತ್ಯಾದಿಗಳನ್ನು ಮರೆಯುವರೋ, ಮತ್ತು ಶ್ರೀ ಶಂಭುಲಿಂಗೇಶ್ವರನಿಗೆ ದೀಪೋತ್ಸವ ವನ್ನೂ ಮಾಡಿಸುವರೋ ಅಂತಹ ಶಾಂಭವರನ್ನು ನೀನು ಪೂಜಿಸಬೇಕು. ಅವರ ಮನೆಗೆ ನಿನ್ನ ಭಟರು ಪ್ರವೇಶಮಾಡದಿರಲಿ. ಅಲ್ಲದೆ ಅವರ ಮನೆಯ ಕಡೆ ಹೋಗುವ ದಾರಿಯನ್ನೂ ತಿಳಿಯದೆಯಾದರೂ ತುಳಿಯದಿರಲಿ. ॥೮೨-೮೩॥

ಯೇ ಚಂದ್ರಚೂಡಕಲನಾಮೃತಪಾನಲೋಲಾಃ
ತೇ ಶಾಂಭವಾಸ್ತವ ಯಮಾನ್ವಹಮರ್ಚನೀಯಾಃ ।
ತೇಷಾಂ ಗೃಹೇಷು ನ ಕದಾಪಿ ಭಟಾಃ ಪ್ರಯಾಂತು
ತದ್ಗೇಹಮಾರ್ಗಮಪಿ ತೇ ನ ವಿಶಂತು ಮೋಹಾತ್ ॥೮೪॥

ಧನ್ಯಾ ಶಂಕರನಾಮಧೇಯಸುಸುಧಾಧಾರಾಧರಾಸಾರಭೂಃ
ಜಿಹ್ವಾ ಜಿಹ್ವಗರಾಜರಾಜನಿನುತಾ ಧನ್ಯೇತಿ ಮಾನ್ಯೇತಿ ಚ ।
ಸಾ ಜಿಹ್ವಾ ಬಹುಜನ್ಮಸಂಚಿತಚಿರಾಭ್ಯಸ್ತಾತಿಪುಣ್ಯಾರ್ಜಿತಾ
ಸೇಯಂ ಪುಣ್ಯಸುಧಾನಿಧಿಃ ಖಲು ಸುಸಂಲಭ್ಯಾಃ ಶಿವಾನುಗ್ರಹಾತ್ ॥೮೫॥

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಯಮಂ ಪ್ರತಿ ಶಿವಭಕ್ತವರ್ಣನಪೂರ್ವಕಂ ನಂದಿಕೇಶಾಜ್ಞಾಪನಂ ನಾಮ
ತ್ರಿಂಶೋಽಧ್ಯಾಯಃ

ಶ್ರೀ ಚಂದ್ರಶೇಖರನ ನಾಮಾಮೃತವನ್ನು ಪಾನಮಾಡುವುದರಲ್ಲಿ ಆಸಕ್ತರಾದ ಶೈವರನ್ನು ನೀನು ಪೂಜಿಸಬೇಕು. ಅಲ್ಲದೆ ಅವರು ಇರುವ ಮನೆಗೆ ನಿನ್ನ ದೂತರು ಹೋಗದಿರಲಿ. ಮತ್ತು ಅವರ ಮನೆ ಕಡೆ ಇರುವ ದಾರಿಯನ್ನು ಸಹ ತಿಳಿಯದೆ ಯಾದರೂ ತುಳಿಯದಿರಲಿ. ||೮೪||

ಶ್ರೀಶಂಕರನ ನಾಮಧೇಯವು ಅಮೃತಕ್ಕೆ ಸಮವಾಗಿರುವುದು. ಆ ನಾಮಾಮೃತದ ಧಾರೆಯನ್ನು ನಾಲಿಗೆಯು ಮಾತ್ರ ಧರಿಸಿ ಅದರ ಸವಿಯನ್ನು ನೋಡಬಲ್ಲದು. ಅಂತಹ ಈ ರಸನೆಯು ಶಿವನಾಮವನ್ನು ಕೀರ್ತನೆಮಾಡಿದರೆ ಅದನ್ನು ಮಹಾಶೇಷನೂ ಸಹ ನೀನೇ ಧನ್ಯ, ಮಾನ್ಯ ಎಂದು ಕೊಂಡಾಡುವುದರಲ್ಲಿ ಸಂದೇಹವಿಲ್ಲ. (ಅಂದರೆ ಬಹುಜನ್ಮಾರ್ಜಿತವಾದ ಪುಣ್ಯವಿಶೇಷದಿಂದ ಮನುಷ್ಯ ಜನ್ಮವೂ ಲಭಿಸುವುದು. ಆದರಲ್ಲೂ ಬ್ರಾಹ್ಮಣನಾಗಿ ಶೈವನಾಗಿರುವುದು ದುರ್ಲಭ. ಹೀಗೆ ಅವಕಾಶ ಸಿಕ್ಕಿರುವಾಗ ಆ ಜನ್ಮಸಾರ್ಥಕಗೊಳ್ಳುವುದು ಉತ್ತಮವಾಗಿದೆ. ಶ್ರೀಭಗವನ್ನಾಮಸ್ಮರಣೆಯಿಂದಲಾದರೂ ಸಮಸ್ತ ಪಾಪಗಳನ್ನೂ ಪರಿಹರಿಸಿಕೊಳ್ಳುವುದು ಮನುಷ್ಯನ ಕರ್ತವ್ಯ.) ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯದಿಂದ ಲಭಿಸಿದ ಈ ಶಿವನಾಮಾಮೃತದ ರುಚಿ ನೋಡಿದ ಜಿಹ್ವೆಯು ಶ್ರೀಶಿವನ ಅನುಗ್ರ

ದಿಂದ ಕೃತಾರ್ಥತೆಯನ್ನು ಹೊಂದುವುದು. ಆದುದರಿಂದ ಭಗವಂತನ ನಾಮಸ್ಮರಣೆಯನ್ನು ಬಿಟ್ಟು ಸಾಧಕನಿಗೆ ಇನ್ನೊಂದು ಪಾಪನಾಶಕವೂ ಅನುಗ್ರಹಕರವೂ ಆದುದು ಇದೆಯೇ? ಎಂದು ನಂದೀಶ್ವರನು ಹೇಳಿದನು. ||೮೫||

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಹರನೆಂಬ ಮೂರನೆಯ ಅಂಶದೊಳಗೆ ಪೂರ್ವಾರ್ಧದಲ್ಲಿ ಯಮನೊಡನೆ ಶಿವಭಕ್ತನ ಲಕ್ಷಣ ವರ್ಣನ ಮೊದಲ್ಗೊಂಡು ನಂದಿಕೇಶ್ವರನ ಆಜ್ಞಾಪನೆಯನ್ನು ತಿಳಿಸುವ ಮೂವತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಏಕತ್ರಿಂಶೋಽಧ್ಯಾಯಃ

|| ವ್ಯಾಸ ಉವಾಚ ||

ಇತ್ಯುಕ್ತಂ ತದ್ವಚಶ್ಶ್ರುತ್ವಾ ಪ್ರಹೃಷ್ಟಾಸ್ತೇ ಸುರಾಸ್ತದಾ ।
ವಿಶ್ವಸ್ಯ ತಂ ಪುನರ್ನತ್ವಾ ಕೃತಾಂಜಲಿಪುಟಾ ಜಗುಃ ॥೧॥

|| ದೇವಾ ಊಚುಃ ||

ಶ್ರೀನಂದಿಕೇಶ್ವರಸ್ವಾಮಿನ್ ಶಿವವಿಜ್ಞಾನಸಾಗರ ।
ಅನೇನ ಕಿಂ ಕೃತಂ ಪುಣ್ಯಂ ತದ್ಗೋಪ್ಯಮಪಿ ಸಂವದ ॥೨॥

ಮೂವತ್ತೊಂದನೆಯ ಅಧ್ಯಾಯ

ಹಿಂದೆ ಹೇಳಿದ ಪ್ರಕಾರ ನಂದಿಕೇಶನು ಶಿವಭಕ್ತಲಕ್ಷಣವೇ ಮೊದಲಾದವುಗಳನ್ನು ವಿವರಿಸಲು ದೇವತೆಗಳು ಅದನ್ನು ಕೇಳಿ, ಬಹಳ ಸಂತುಷ್ಟರಾದರು. ಅನಂತರ ಇನ್ನೂ ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ ಪುನಃ ನಂದಿಕೇಶನನ್ನು ವಿಶ್ವಾಸಪೂರ್ವಕವಾಗಿಯೂ ನಮಸ್ಕಾರ ಪೂರ್ವಕವಾಗಿಯೂ ಹೀಗೆ ವಿಜ್ಞಾಪಿಸಿ ಕೊಂಡರು. ||೧||

"ಎಲೈ ನಂದಿಕೇಶನೇ, ನೀನು ಪರಮಶಿವಭಕ್ತನಿರುವೆ. ನಿನಗೆ ಶಿವತತ್ವಗಳೂ ಸಂಪೂರ್ಣವಾಗಿ ತಿಳಿದಿರುವುವು. ನಮ್ಮ ಅಭಿಲಾಷೆಯನ್ನು ನೀನು ಪೂರೈಸಬಲ್ಲೆ. ಆದುದರಿಂದ ಸೋಮಪ್ರದೋಷಪೂಜೆಮಾಡಿದರೆ ಏನೇನು ಫಲಗಳು ದೊರೆಯುವುವು ಎಂಬುದನ್ನು ರಹಸ್ಯವಾಗಿದ್ದರೂ ನಮ್ಮ ಮೇಲೆ ದಯೆಯಿಟ್ಟು

|| ನಂದಿಕೇಶ್ವರ ಉವಾಚ ||

ತತ್ಪುಣ್ಯಶ್ರವಣಾದೇವ ಭವತಾಂ ವಿಸ್ಮಯೋ ಭವೇತ್ ।
ತತ್ತ್ವಜ್ಞಾನವಿಹೀನಾನಾಂ ಸರ್ವಮಾಶ್ಚರ್ಯಸಾಧನಂ ||೩||

ಶಿವಪೂಜಾಪ್ರಭಾವಾಬ್ಧಿಬಿಂದುಜ್ಞಾನವಿವರ್ಜಿತಾಃ ।
ಭವಂತಸ್ತಾಪಸಾಸ್ಸಿದ್ಧಾ ಗಂಧರ್ವಾಃ ಕಿನ್ನರಾ ಅಪಿ ||೪||

ಶಿವಪ್ರಭಾವರೂಪಾಣಾಂ ರತ್ನಾನಾಂ ಸಾಗರಶ್ಶಿವಃ ।
ಅತಶ್ಶಿವೋ ವಿಜಾನಾತಿ ಸ್ವತತ್ತ್ವಂ ನೇತರೋ ಜನಃ ||೫||

ಅಸ್ಮಾಭಿರಪಿ ತತ್ತತ್ತ್ವಂ ಲೇಶತಸ್ತತ್ಪ್ರಸಾದತಃ ।
ಜ್ಞಾತಂ ಕಥಂಚಿದನ್ಯೇನ ಕಥಂ ಜ್ಞೇಯಂ ಸುರಾದಿಭಿಃ ||೬||

ಹೇಳಬೇಕು.” ಆವಿಜ್ಞಾಪನೆಯನ್ನು ಕೇಳಿ ನಂದೀಶ್ವರನು ಸೋಮಪ್ರದೋಷ ವ್ರತಮಹಿಮೆಯನ್ನೂ ವಿವರಿಸತೊಡಗಿದನು. ||೨||

ಆ ಮಹಾವ್ರತವಾದ ಸೋಮಪ್ರದೋಷಪೂಜೆಯ ಫಲಗಳನ್ನು ಎಷ್ಟೆಂದು ಪರಿಗಣಿಸಿ ಹೇಳಲಿ! ಆದನ್ನೆಲ್ಲಾ ಕೇಳಿದರೆ ನಿಮಗೆ ಅತ್ಯಂತ ವಿಸ್ಮಯವಾಗುವುದರಲ್ಲಿ ಸಂಶಯವಿಲ್ಲ. ತತ್ವಜ್ಞಾನದ ಅರಿವಿಲ್ಲದವರಿಗೆ ಎಲ್ಲವೂ ಆಶ್ಚರ್ಯಕರವಾಗಿಯೇ ಇರುವುದು ಸ್ವಾಭಾವಿಕ. ||೩||

ಶಿವಪೂಜಾಪ್ರಭಾವವು ತಿಳಿಯದಿರುವುದು ನಿಮಗೆ ಮಾತ್ರವೇ ಅಲ್ಲ. ಮಹಾ ಮಹಾ ತಪಸ್ವಿಗಳಿಗೂ ಇದು ಗಹನವಾಗಿರುವುದು. ಸಿದ್ಧರಿಗೂ ಗಂಧರ್ವರಿಗೂ ಕಿನ್ನರರಿಗೂ ಈ ಪೂಜೆಯ ಫಲ ವಿಷಯದಲ್ಲಿ ಜ್ಞಾನ ಲವಲೇಶವೂ ಇರುವುದಿಲ್ಲ. ||೪||

ಶಿವಮಾಹಾತ್ಮ್ಯಗಳೆಂಬ ರತ್ನಗಳಿಗೆ ಸಮುದ್ರಪ್ರಾಯನಾಗಿ ರತ್ನಾಕರನೆನಿಸಿದನು ಶಿವನೊಬ್ಬನೇ. ಆದುದರಿಂದ ತನ್ನ ತತ್ವವನ್ನೂ ಮಹಿಮೆಯನ್ನೂ ಆ ಪರಮೇಶ್ವರನು ಒಬ್ಬನೇ ತಿಳಿದಿರುವನು. ಬೇರೆಯವರಿಗೆ ಇದರ ಸಂಪೂರ್ಣ ಜ್ಞಾನವೇ ಇರುವುದಿಲ್ಲ. ||೫||

ನನಗೂ ಸಹ ಆ ಮಹಿಮೆಯು ಲೇಶವೇ ಗೊತ್ತಿರುವುದು. ಅದನ್ನು ಬಹಳ ಪ್ರಯಾಸಪಟ್ಟು ಆ ಪರಮೇಶ್ವರನ ಸತತ ಸೇವೆಮಾಡಿ ಅವನ ಅನುಗ್ರಹದಿಂದ

ಅಪೂರ್ವಮಣಯೋ ಯೇನ ಸಂಚಿತಾಸ್ಸ್ವಗೃಹೇ ಸ್ವತಃ ।
ಸ ತತ್ತತ್ತ್ವವಿದನ್ಯಸ್ತು ತತ್ತತ್ತ್ವಂ ವೇದ ಕಿಂ ಸುರಾಃ ॥೭॥

ಯಸ್ಯ ರತ್ನಸ್ಯ ಯನ್ಮೌಲ್ಯಂ ತತ್ತೇನ ಜ್ಞಾಯತೇ ಪರಂ ।
ರತ್ನತತ್ತ್ವಂ ವಿಜಾನಾತಿ ಸ ತು ರತ್ನಪರೀಕ್ಷಕಃ ॥೮॥

ಸ ಚ ರತ್ನಪರೀಕ್ಷಾಯಾಂ ಸರ್ವೇ ದಕ್ಷಾಸ್ಸ್ವಭಾವತಃ ।
ದಾಕ್ಷಾಯಣೀವಲ್ಲಭಸ್ತು ನಿತ್ಯಸ್ಸರ್ವಜ್ಞ ಏವ ಹಿ ॥೯॥

ಸ ತಾವನ್ನಿತ್ಯಸರ್ವಜ್ಞಶಿರೋಮಣಿರಿತಿ ಶ್ರುತಃ ।
ಶೂಲಪಾಣಿಸ್ತತಸ್ಸೋಽಯಂ ತತ್ತತ್ತ್ವಂ ವೇದ ವಸ್ತುತಃ ॥೧೦॥

ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿರುವೆನು. ಅಂದಮೇಲೆ ಪರಮೇಶ್ವರನ ಸಂಪರ್ಕವಿಲ್ಲದೆ ದೇವತೆಗಳಿಗೆ ಈ ವಿಚಾರಗಳು ಹೇಗೆತಾನೆ ತಿಳಿದಾವು? ॥೬॥

ಶಿವತತ್ವಗಳೆಂಬ ಅಮೂಲ್ಯವಾದ ರತ್ನನಿಚಯಗಳನ್ನೂ ಪರಶಿವನು ತನ್ನ ಮನೆಯಲ್ಲಿ ಕೂಡಿಟ್ಟು ಕೊಂಡಿರುವನು. ಅದರ ಬೆಲೆಯು ಮತ್ತೊಬ್ಬರಿಗೆ ತಿಳಿಯುವುದು ಹೇಗೆ? ॥೭॥

ಯಾವ ಯಾವ ರತ್ನಗಳಿಗೆ ಎಷ್ಟೆಷ್ಟು ಬೆಲೆ ಎಂಬುದು ಸಾಧಾರಣ ಜನರಿಗೆ ಹೇಗೆ ಗೊತ್ತಾದೀತು? ಯಾವನು ಅದೇ ರತ್ನಗಳ ವ್ಯಾಪಾರಿಯೂ ಪರೀಕ್ಷೆಮಾಡುವವನೂ ಆಗಿರುತ್ತಾನೆಯೋ, ಅವನಿಗೇ ಆಯಾಯ ರತ್ನಗಳ ಬೆಲೆ ಎಷ್ಟೆಂಬುದು ಗೊತ್ತು. ॥೮॥

ಸ್ವಾಭಾವಿಕವಾಗಿ ಯಾವ ಅನುಭವವೂ ಇಲ್ಲದೇ ಯಾರಿಗೂ ರತ್ನಗಳನ್ನು ಪರೀಕ್ಷೆಮಾಡಲು ಸಾಧ್ಯವಾಗುವುದಿಲ್ಲ. ಬೆಲೆ ಕಟ್ಟಲೂ ಆಗುವುದಿಲ್ಲ. ಕಟ್ಟಿದರೂ ಅದು ಯಥಾರ್ಥವಾಗಿರುವುದಿಲ್ಲ. ಹಾಗೆಯೇ ಶಿವಪೂಜೆಯ ಮಹಿಮೆ ಎಷ್ಟೆಂದು ಎಲ್ಲರಿಂದಲೂ ಹೇಳುವುದಕ್ಕೆ ಸಾಧ್ಯವಿಲ್ಲ. ಅದು ಆ ಪರಶಿವನಿಗೊಬ್ಬನಿಗೇ ಗೊತ್ತು. ಅದರಲ್ಲಿಯೂ ಆ ದಾಕ್ಷಾಯಣೀಪತಿಯಾದ ಶಂಕರನು, ಸರ್ವವನ್ನೂ ತಿಳಿದವನು, ನಿತ್ಯನು ಎಂಬುದು ಸಿದ್ಧ ವಿಷಯ. ॥೯॥

ಆ ಶೂಲಪಾಣಿಯೇ ಸಕಲ ನಿತ್ಯವಸ್ತುಗಳಲ್ಲಿಯೂ ಸರ್ವಜ್ಞವಸ್ತುಗಳಲ್ಲಿಯೂ ಮೂರ್ಧನ್ಯನಾಗಿರುವನೆಂಬುದನ್ನು ವೇದಗಳು ಸಾರುತ್ತವೆಂದು ಎಲ್ಲರಿಗೂ ತಿಳಿದಿರು

ರತ್ನೇಷು ಚ ವಿಚಿತ್ರೇಷು ತೇಷು ದ್ವಿತ್ರಾಣಿ ಕಾನಿಚಿತ್ ।
ರತ್ನಾನಿ ಶಾನ್ಯನೌಲ್ಯಾನಿ ತಾನಿ ದೇಯಾನಿ ಸಾಮುರಾಃ ॥೧೧॥

ಶಿವಧರ್ಮಾತ್ಮಕಂ ರತ್ನಂ ಗೋಪನೀಯಂ ವಿಶೇಷತಃ ।
ಅತಿಭಕ್ತಾಯ ದಾತವ್ಯಂ ನಾಭಕ್ತಾಯ ಕದಾಚನ ॥೧೨॥

ಅತ್ಯಲ್ಪಸ್ಯ ರಸಸ್ಯಾಪಿ ಸ್ಪರ್ಶಾದೇವ ಕಥಂಚನ ।
ಲೋಹಾಚಲಸ್ಸುವರ್ಣತ್ವಂ ಪ್ರಾಪ್ನೋತೀತ್ಯವಧಾರಿತಂ ॥೧೩॥

ಅಗ್ನಿಲೇಶೇನ ತೂಲಾದ್ರಿರ್ಭಸ್ಮಸಾಜ್ಜಾಯತೇ ಕ್ಷಣಾತ್ ।
ಅತ್ಯಲ್ಪೇನೌಷಧೇನಾಪಿ ಮಹಾವ್ಯಾಧಿರ್ಲಯೋ ಭವೇತ್ ॥೧೪॥

ವುದು. ಆದ್ದರಿಂದ ಆತನ ಮಹಿಮೆಯನ್ನು ಯಥಾರ್ಥವಾಗಿ ಸಂಪೂರ್ಣವಾಗಿ ತಿಳಿದಿರುವವನು ಅವನೊಬ್ಬನೇ ಸರಿ. ॥೧೦॥

ಪ್ರಪಂಚದಲ್ಲಿ ನಾನಾವಿಧವಾದ ರತ್ನಗಳಿವೆ. ಅವುಗಳಲ್ಲಿ ಎಲ್ಲಿಯೋ ಎರಡು ಮೂರು ರತ್ನಗಳೇ ಶ್ರೇಷ್ಠವಾದವುಗಳೆಂದೂ ಅಮೂಲ್ಯಗಳೆಂದೂ ಹೇಳುವರು. ಹಾಗೆಯೇ ಮಹಿಮಾಶಾಲಿಯಾದವರು ಅನೇಕರು ಇದ್ದರೂ ಎಲ್ಲರಿಗಿಂತಲೂ ಶ್ರೇಷ್ಠನೂ ಮಹಿಮನೂ ಶಂಕರನೊಬ್ಬನೇ ಆಗಿರುವನು. ॥೧೧॥

ಈ ಶಿವಧರ್ಮವೆಂಬುದು ಬಹಳ ಅಮೂಲ್ಯವಾದುದು ಮತ್ತು ಬಹಳ ಗೋಪನೀಯವಾದದ್ದು. ಇದು ಯಾವಾಗಲೂ ರಹಸ್ಯವಾಗಿಯೇ ಇರತಕ್ಕದ್ದು. ಈ ಧರ್ಮವನ್ನು ಶಿವನ ಪರಮಭಕ್ತರಿಗೆ ಮಾತ್ರವೇ ಉಪದೇಶ ಮಾಡಬೇಕು. ಆಸ್ತಿಕರಲ್ಲದವರಿಗೆ ಇದನ್ನು ಹೇಳಲೇ ಕೂಡದು. ॥೧೨॥

ರಸಭಸ್ಮವು ಸ್ವಲ್ಪವೇ ಆದರೂ ಅದನ್ನು ಯಾವುದಾದರೊಂದು ಲೋಹಕ್ಕೆ ಸ್ಪರ್ಶಮಾಡಿಸುವುದರಿಂದ ಅದಷ್ಟು ಲೋಹರಾಶಿಯೂ ಸುವರ್ಣವೇ ಆಗಿಬಿಡುವುದೆಂದು ಎಲ್ಲರಿಗೂ ಗೊತ್ತೇ ಇದೆ. ॥೧೩॥

ಹತ್ತಿಯು ಪರ್ವತಾಕಾರವಾಗಿದ್ದರೂ ಒಂದು ಸಣ್ಣ ಬೆಂಕಿಕಡ್ಡಿಯಿಂದ ಅದೆಲ್ಲವೂ ಸುಟ್ಟು ಭಸ್ಮವಾಗುವುದು. ವೀರ್ಯವತ್ತಾದ ಔಷಧವು ಸ್ವಲ್ಪವೇ ಆಗಿದ್ದರೂ ಅದರಿಂದ ಮಹಾವ್ಯಾಧಿಯು ಪರಿಹೃತವಾಗುವುದು. ॥೧೪॥

ಸೂಕ್ಷ್ಮಾಸಿರಪ್ಯಂಗಮಧ್ಯೇ ಪ್ರವಿಷ್ಟೋಽಂಗವಿನಾಶಕಃ ।
ವಿಷಮಪ್ಯಲ್ಪಮೇವಾಂಗೇ ಯುಕ್ತಂ ದೇಹವಿನಾಶಕಂ ॥೧೫॥

ತಥೈವ ಶಿವಧರ್ಮೋಽಪಿ ಸೂಕ್ಷ್ಮಃ ಪಾಪಾದ್ರಿನಾಶಕಃ ।
ಪುಣ್ಯಸಂಪತ್ಸಮೃದ್ಧಿಂ ಚ ಸ ಕರೋತಿ ನ ಸಂಶಯಃ ॥೧೬॥

ಧರ್ಮಾಣಾಮುತ್ತಮೋ ಧರ್ಮಃ ಶಿವಧರ್ಮಸ್ಸನಾತನಃ ।
ಸರ್ವೋತ್ತಮೋತ್ತಮತ್ವೇನ ಯಥಾ ಗೀತಸ್ಸದಾಶಿವಃ ॥೧೭॥

ಯಥಾ ಸಾಂಬೋ ಮಹಾದೇವಸ್ಸರ್ವದೇವಶಿಖಾಮಣಿಃ ।
ತಥಾಯಂ ಶಿವಧರ್ಮೋಽಪಿ ಸರ್ವಧರ್ಮಶಿರೋಮಣಿಃ ॥೧೮॥

ಕತ್ತಿಯು ಚಿಕ್ಕದೇ ಆಗಿದ್ದರೂ ಶರೀರದ ಮರ್ಮಸ್ಥಾನಕ್ಕೆ ಚುಚ್ಚಿದ್ದೇ ಆದರೆ, ಶರೀರವನ್ನೇ ಧ್ವಂಸಮಾಡುವುದು. ಹಾಗೆಯೇ ಕೊಂಚವೇ ವಿಷವು ಶರೀರವನ್ನು ವ್ಯಾಪಿಸಿದರೂ ಪ್ರಾಣಕ್ಕೆ ಹಾನಿ ತರುವುದು. ॥೧೫॥

ಮೇಲೆ ಹೇಳಿದ ವಸ್ತುಗಳು ಸೂಕ್ಷ್ಮಗಳೇ ಆಗಿದ್ದರೂ ಹೇಗೆ ತಮ್ಮ ತಮ್ಮ ಕೆಲಸಗಳನ್ನು ವೇಗವಾಗಿ ನಡೆಸಿ ಬಿಡುವವೋ, ಹಾಗೆಯೇ ಶಿವಧರ್ಮ ತತ್ತ್ವವು ಅತ್ಯಂತ ಸೂಕ್ಷ್ಮವಾಗಿದ್ದರೂ ಅದನ್ನು ತಿಳಿದುಕೊಂಡವರ ಪಾಪಗಳು ಮಹಾರಾಶಿಯಾಗಿದ್ದರೂ ನಾಶವಾಗುವುವು. ಅಲ್ಲದೇ ಅಕ್ಷಯವಾದ ಪುಣ್ಯಸಮೃದ್ಧಿಯೂ ಸಿದ್ಧಿಸುವುದು. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ. ॥೧೬॥

ವೇದಗಳಲ್ಲಿಯೂ ಸ್ಮೃತಿಗಳಲ್ಲಿಯೂ ಹೇಗೆ ಸದಾಶಿವನು ಎಲ್ಲಾ ದೇವತೆಗಳಿಗಿಂತಲೂ ಶ್ರೇಷ್ಠನೆಂದು ಪ್ರಸಿದ್ಧವಾಗಿದೆಯೋ, ಹಾಗೆಯೇ ಶಿವಧರ್ಮವು ಸಕಲ ಧರ್ಮಗಳಿಗಿಂತಲೂ ಶ್ರೇಷ್ಠವಾದುದು ಮತ್ತು ಎಲ್ಲುದಕ್ಕಿಂತಲೂ ಪುರಾತನವಾದುದೆಂದು ಶಿವನೇ ಹೇಳಿರುವನು. ॥೧೭॥

ಅಂಬಿಕಾಪತಿಯಾದ ಪರಮೇಶ್ವರನು ಹೇಗೆ ಸಕಲ ದೇವತೆಗಳಿಗೂ ಮೂರ್ಧನ್ಯ ಶಿಖಾಮಣಿ ಎಂತಲೂ ಮಹಾದೇವನೆಂತಲೂ ಕರೆಸಿಕೊಳ್ಳುವನೋ, ಹಾಗೆಯೇ ಶಿವಧರ್ಮವೂ ಸಕಲಧರ್ಮಗಳಿಗೂ ಶಿರೋಮಣಿ ಎಂದೂ ಶ್ರೇಷ್ಠವೆಂದೂ ಹೇಳಲಾಗಿದೆ. ॥೧೮॥

ಶಿವಧರ್ಮಾತ್ಪರೋ ಧರ್ಮೋ ನಾಸ್ತಿ ನ ಶ್ರೂಯತೇಽಪಿ ಚ ।
ಸತ್ಯಮೇತತ್ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ ॥೧೯॥

ಶಿವಧರ್ಮಾನ್ಯಧರ್ಮೇಷು ಧರ್ಮಾಭಾಸತ್ವನಿಶ್ಚಯಾತ್ ।
ತದ್ಧರ್ಮಾಚರಣಾತ್ಕಿಂ ವಾ ಫಲಂ ಸಂಭಾವಿತಂ ಸುರಾಃ ॥೨೦॥

ಶಿವಧರ್ಮಾನವಿಜ್ಞಾಯ ಧರ್ಮಾಭಾಸರತಾ ನರಾಃ ।
ಕುರ್ವಂತು ತಾನ್ವಿಮೋಹೇನ ನ ತೇಭ್ಯಃ ಫಲಮಶ್ನುತೇ ॥೨೧॥

ರತ್ನಭ್ರಮೇಣ ಸ್ಫಟಿತಂ ಕಾಚಂ ಗೃಹ್ಣಾತಿ ಯೋ ನರಃ ।
ಸ ತೇನ ರತ್ನಾಭರಣಧಾರಣೋತ್ಪನ್ನಧರ್ಮವಾನ್ ॥೨೨॥

ಶಿವಧರ್ಮಕ್ಕಿಂತಲೂ ಶ್ರೇಷ್ಠವಾದ ಬೇರೆ ಮತ್ತೊಂದು ಧರ್ಮವೆಂಬುದಿಲ್ಲ. ಅನ್ಯಧರ್ಮವು ಹಾಗೆ ಶ್ರೇಷ್ಠವೆಂದು ಕೇಳಿಯೂ ಇಲ್ಲ. ಎಲೈ ದೇವತೆಗಳಿರಾ! ಈಗ ನಾನು ಹೇಳುತ್ತಿರುವುದು ಸತ್ಯವಾದ ಮಾತೆಂಬುದು ಗಮನದಲ್ಲಿರಲಿ. ಅದನ್ನೆ ಪುನಃ ಸತ್ಯವಾದದ್ದೆಂದು ಭುಜವನ್ನೆತ್ತಿ ನಾನು ಹೇಳಬಲ್ಲೆ. ಅದರಲ್ಲಿ ಮುಖ್ಯವಾದ ಒಂದು ಸ್ವಲ್ಪಭಾಗವನ್ನು ಮಾತ್ರ ನಿಮಗೆ ಹೇಳುವೆನು. ॥೧೯॥

ಶಿವಧರ್ಮಾತಿರಿಕ್ತಧರ್ಮವು ಕೇವಲ ಆಭಾಸವಾದ ಧರ್ಮವೆಂದು ಆಯಾಯಾ ಪ್ರಮಾಣದಿಂದಲೂ ಅನುಭವದಿಂದಲೂ ಸಿದ್ಧಾಂತಿತವಾಗಿದೆ. ಅವುಗಳಲ್ಲಿ ಪಾರ್ಯಂತಿಕವಾದ ಧರ್ಮವೇ ಇರುವುದಿಲ್ಲ. ನೋಡುವುದಕ್ಕೆ ಧರ್ಮದಂತೆ ತೋರುವುವು. ಇಂತಹ ಧರ್ಮಗಳಿಂದ ಮೋಕ್ಷಫಲವು ಸಿದ್ಧಿಸುವುದೆಂದು ನಿಶ್ಚಯವಾಗಿ ಹೇಳುವುದು ಹೇಗೆ? ಎಲ್ಲವೂ ಸಂಶಯಾಸ್ಪದವಾಗಿಯೇ ಇದೆ. ॥೨೦॥

ಹೀಗೆ, ಶ್ರೇಷ್ಠವಾದ ಶಿವಧರ್ಮವನ್ನು ಅರಿತುಕೊಳ್ಳದೇ, ಆಚರಿಸದೇ, ಧರ್ಮಾಭಾಸಗಳಾದ ಬೇರೆ ಧರ್ಮಗಳನ್ನು ಆಚರಿಸತಕ್ಕ ಜನರು ಮೂಢರೇ ಸರಿ. ಒಂದುವೇಳೆ ಮೋಹಬುದ್ಧಿಯಿಂದ ಅನ್ಯ ಧರ್ಮಗಳನ್ನು ಅನುಷ್ಠಿಸಿದರೂ ಅವುಗಳಿಂದ ಆತ್ಯಂತಿಕವಾದ ಪುಣ್ಯಫಲಗಳು ಸಿದ್ಧಿಸುವುದಾದರೂ ಹೇಗೆ? ಇಲ್ಲವೆಂದೇ ಹೇಳಬಹುದು. ॥೨೧॥

ಯಾವನಾದರೊಬ್ಬನು ರತ್ನದಂತೆ ಮಿಂಚುತ್ತಿರುವ ಗಾಜಿನಚೂರನ್ನು ರತ್ನವೆಂತಲೇ ತಿಳಿದು, ಕೂಡಲೇ ಅದನ್ನು ತೆಗೆದುಕೊಂಡು, ಅದರಿಂದ ಅಲಂಕಾರ ಮಾಡಿಸಿಕೊಂಡರೆ, ಅವನು ರತ್ನಾಭರಣವನ್ನು ತೊಟ್ಟಂತಾಗುತ್ತದೆಯೇ ? ॥೨೨॥

ಅತಿಸ್ವಚ್ಛಸ್ಯ ರತ್ನಸ್ಯ ಕ್ರಯಸ್ಸ್ಯಾದ್ಧನಕೋಟಿಭಿಃ ।
ತತಸ್ತದ್ರತ್ನಮುತ್ಕೃಷ್ಟಂ ತದ್ಧನಾಪೇಕ್ಷಯಾ ಖಲು ॥೨೩॥

ಕಿಂ ಚ ದೇವಾಧಿದೇವಸ್ಯ ಯತ್ಪ್ರಿಯಂ ತತ್ಪರಂ ಸ್ಮೃತಂ ।
ತದನ್ಯತ್ಸರ್ವಮವರಮಸದಾಚಾರದೂಷಿತಂ ॥೨೪॥

ಅಯಂ ತು ಭಿಲ್ಲತನಯಸ್ತತ್ಪಿತಾ ಪಾಪಭಾಜನಂ ।
ತನ್ಮಾತಾ ಭ್ರಾತರಸ್ತಸ್ಯ ತತ್ಕುಲಂ ಚ ನ ಸಂಶಯಃ ॥೨೫॥

ಅಯಂ ಛಿನ್ನಂ ಕಂಟಕಾರಿಪ್ರಸೂನಂ ಲಿಂಗಮಸ್ತಕೇ ।
ಮರಣಾವಸರೇ ಪ್ರಾಪ್ತೇ ಪಾತಯಿತ್ವಾ ಮೃತಸ್ಸುರಾಃ ॥೨೬॥

ಅತ್ಯಂತ ಶುದ್ಧವಾದ ರತ್ನಕ್ಕೆ ಬೆಲೆಯು ಕೋಟ್ಯಂತರ ವರಹಗಳಾಗುವುವು. ಆದುದರಿಂದಲೇ ಕಮ್ಮಿಬೆಲೆಯ ರತ್ನಗಳಿಗಿಂತ ಅದನ್ನು ಶ್ರೇಷ್ಠವೆಂದು ಹೇಳುವುದು. ಅಲ್ಲದೆ ಅದಕ್ಕೆ ಬೆಲೆಯಾಗಿರುವ ವರಹಗಳ ಸಮೂಹಕ್ಕಿಂತಲೂ ಆ ರತ್ನವು ಶ್ರೇಷ್ಠವಾದುದಷ್ಟೆ. ॥೨೩॥

ಮತ್ತು ಸೂಕ್ಷ್ಮವಾಗಿ ಹೇಳಬಹುದಾದರೆ, ಯಾವ ಕರ್ಮವು ಪರಮೇಶ್ವರನಿಗೆ ಪ್ರೀತಿಯೋ ಅದನ್ನೇ ಶ್ರೇಷ್ಠಕರ್ಮವೆಂತಲೂ ಶ್ರೇಷ್ಠಧರ್ಮವೆಂತಲೂ ಹೇಳಬಹುದು. ಪರಮೇಶ್ವರನ ಪ್ರೀತಿಗೆ ಪಾತ್ರವಾಗದಿರುವ ಮತ್ತೆಲ್ಲ ಧರ್ಮಕರ್ಮಗಳೂ ನಿಕೃಷ್ಟವೆಂತಲೂ ಸತ್ಪುರುಷರ ಆಚರಣೆಗೆ ಅಯೋಗ್ಯವೆಂತಲೂ ತಿಳಿಯತಕ್ಕದ್ದು. ॥೨೪॥

ಎಲೈ ದೇವತೆಗಳಿರಾ! ಈ ಧರ್ಮಕರ್ಮಗಳ ಶ್ರೇಷ್ಠತ್ವ ವಿಚಾರದಲ್ಲಿ ಇದನ್ನೇ ದೃಷ್ಟಾಂತವನ್ನಾಗಿ ತಿಳಿಯಿರಿ. ಈ ಭಿಲ್ಲನ (ಬೇಡ) ಮಗನು ನಿಜವಾಗಿಯೂ ಪಾಪಿಯು. ಅವನ ತಂದೆಯು ಪಾಪಾಚಾರ ನಡೆಸಿದ್ದುದರಿಂದ ಪಾಪಿಷ್ಠನಾಗಿದ್ದನು. ಹಾಗೆಯೇ ಇವನ ತಾಯಿಯೂ ಮತ್ತು ಸಹೋದರರೂ ಪಾಪಿಗಳೇ ನಿಜ. ಅಂದಮೇಲೆ ಅವನ ವಂಶವೇ ಪತಿತವಾದದ್ದಾಗಿಯೂ ಪಾಪಿಷ್ಠವಾಗಿಯೂ ಆಯಿತು. ಆದರೂ ಈ ಹುಡುಗನಿಗೆ ಯಾವಗತಿ ಸಿಕ್ಕಿತು, ನೋಡಿರಿ. ॥೨೫॥

ಆ ಹುಡುಗನಿಗೆ ಮರಣ ಸಮಯವು ಬಂದಾಗ, ಅಕಸ್ಮಾತ್ ಒಂದು ಬೃಹತೀಪುಷ್ಪವು (ಹೆಗ್ಗುಳ್ಳ ಹೂವು) ಶಿವಲಿಂಗದ ಮೇಲೆ ಅರಿವಿಲ್ಲದೆ ಇವನ ಕೈಯಿಂದ ಜಾರಿಬಿದ್ದಿತು. ಒಡನೆಯೇ ಮೃತಿಹೊಂದಿದನು. ॥೨೬॥

ಲಿಂಗಪೂಜನಮೇತೇನ ಕುಸುಮೇನ ಕೃತಂ ಯಮಃ ।
ಅಪವರ್ಗದಮಿತ್ಯೇವಂ ಜ್ಞಾತ್ವಾ ತೇನ ನಿಪಾತಿತಂ ॥೨೭॥

ಜ್ಞಾತ್ವಾ ಧರ್ಮಸ್ಯ ಕರಣೇ ಶಿವಪೂಜಾತ್ಮಕಸ್ಯ ತು ।
ಫಲಂ ಯದ್ಭಾವಿತಂ ತಾವದ್ವೇದೈರಪಿ ನ ನಿಶ್ಚಿತಂ ॥೨೮॥

ಅಜ್ಞಾತ್ವಾಪಿ ಕೃತೋ ಧರ್ಮಃ ಶಿವಪೂಜಾತ್ಮಕಸ್ಸ ತು ।
ಸರ್ವಾಭೀಷ್ಟಪ್ರದೋ ನೂನಮಿತಿ ವೇದೈರ್ವಿನಿಶ್ಚಿತಂ ॥೨೯॥

ಅನೇನೈವ ಹಿ ಧರ್ಮೇಣ ಗಣತ್ವಂ ಪ್ರಾಪ್ಯ ಬಾಲಕಃ ।
ಶಿವಪ್ರಿಯತಮೋ ಭೂತ್ವಾ ಸ್ಥಾಸ್ಯತ್ಯೇವ ನ ಸಂಶಯಃ ॥೩೦॥

ಆಗ ಈ ಪಾಪಿಷ್ಠನನ್ನು ನರಕಕ್ಕೆ ಒಯ್ಯಬೇಕೆಂದು ಯಮಧರ್ಮನು ಯೋಚಿಸಿ ಪರಿಸ್ಥಿತಿಯನ್ನು ವಿಚಾರಮಾಡಿದನು. ಈ ಹುಡುಗನು ಪಾಪಿಯಾಗಿದ್ದರೂ ತನ್ನ ಜನ್ಮದಲ್ಲಿ ಒಂದುಸಲ ಹೂವಿನಿಂದ ಶಿವಲಿಂಗಪೂಜೆಯನ್ನು ಮಾಡಿರುವುದರಿಂದ ಈತನನ್ನು ನರಕಕ್ಕೆ ಒಯ್ಯಲಾಗುವುದಿಲ್ಲ. ಇವನು ಬುದ್ಧಿಪೂರ್ವಕ ಪೂಜೆಮಾಡದೇ ಇದ್ದರೂ, ಹೂವನ್ನು ಲಿಂಗದ ಮೇಲೆ ಹಾಕಿದ್ದರಿಂದಲೇ ಮುಕ್ತಿಗೆ ಅರ್ಹನೆಂದು ನಿಶ್ಚಯಿಸಿ ಯಮನು ಅವನನ್ನು ಅಲ್ಲಿಯೇ ಬಿಟ್ಟುಹೋದನು. ॥೨೭॥

ಈ ರೀತಿ ಯಥಾಕಥಂಚಿತ್ ಪೂಜೆಯಿಂದಲೇ ಅಷ್ಟು ಉತ್ತಮ ಫಲವು ದೊರೆತಿರುವಾಗ ಶಿವಧರ್ಮವನ್ನು ತಾತ್ತ್ವಿಕವಾಗಿ ಅರಿತುಕೊಂಡು, ಶಿವಪೂಜೆಯನ್ನು ಮಾಡಿದರೆ ಎಷ್ಟು ಉತ್ಕೃಷ್ಟ ಫಲವು ಸಿದ್ಧಿಸುವುದೆಂದು ಹೇಳುವುದು? ಈ ವಿಚಾರವನ್ನು ವೇದಗಳೂ ಕೂಡ ನಿರ್ಣಯಿಸಲಾರವು. ॥೨೮॥

ಇಷ್ಟು ಮಹಿಮಾಶಾಲಿಯಾದ ಶಿವಪೂಜೆಯನ್ನೂ ಶಿವಧರ್ಮವನ್ನೂ ಅರಿತುಕೊಂಡಾಗಲಿ, ಅರಿಯದೆಯಾಗಲಿ ಹೇಗೇ ಆಚರಿಸಿದರೂ ಸಕಲ ಮನೋರಥಗಳ ಸಿದ್ಧಿಯೂ ಆಗುವುದು. ಹೀಗೆಂದು ವೇದಗಳೂ ಸಹ ನಿಸ್ಸಂದೇಹವಾಗಿ ಸಾರುತ್ತಿವೆ. ॥೨೯॥

ಈ ಧರ್ಮವು ಅಷ್ಟು ಶ್ರೇಷ್ಠವಾದುದರಿಂದಲೇ ಮೇಲೆ ಹೇಳಿದ ಬೇಡರ ಹುಡುಗನು ಶಿವಪೂಜೆಯನ್ನು ಅರಿಯದೇ ಮಾಡಿದ್ದರೂ ಸದ್ಗತಿಯಿಂದ ಶಿವಗಣವನ್ನು ಸೇರಿದನಲ್ಲದೇ ಶಿವನ ಅತ್ಯಂತ ಪ್ರೀತಿಗೂ ಪಾತ್ರನಾಗಿರುವನು ಮತ್ತು

ಪುರಾ ಪಾಪರತಃ ಕಶ್ಚಿತ್ ವಿಂಧ್ಯದೇಶೇಷು ಸಂಸ್ಥಿತಃ ।
ತೇನ ಪಾಪೇನ ನೀತಾನಿ ದಿನಾನಿ ಪ್ರತಿವತ್ಸರಂ ॥೩೧॥

ತೇನ ಯಾವತ್ಕೃತಂ ಪಾಪಂ ತತ್ಪಾಪಗಣನಾಪಿ ನ ।
ಪುನಃ ಪುನಸ್ಸಪಾಪೇಷು ನಿರತೋ ವಿರತೋಽಪಿ ನ ॥೩೨॥

ಸ ಜಾರಜಸ್ಸ್ವಭಾವೇನ ಜಾರಿಣೀನಿರತೋಽಪಿ ಸಃ ।
ತದುಚ್ಛಿಷ್ಟಾಶನೋ ನಿತ್ಯಂ ಕರ್ಮಾಂತರವಿವರ್ಜಿತಃ ॥೩೩॥

ತೇನೈವೋತ್ಪಾದಿತಾ ಕಾಪಿ ಜಾರಿಣ್ಯಾಂ ಕನ್ಯಕಾ ತಯಾ ।
ರೇಮೇ ಸ ಪಾಪನಿರತೋ ಯೌವನಾಕ್ರಾಂತಯಾ ಮುಹುಃ ॥೩೪॥

ಪೂಜೆಗಳ ಶ್ರೇಷ್ಠತೆಯನ್ನು ತೋರಿಕೊಡುವ ಇನ್ನೊಂದು ಸಂಗತಿಯನ್ನು ಹೇಳುವೆನು, ಕೇಳಿರಿ. ॥೩೦॥

"ಹಿಂದೆ ಒಬ್ಬನು ವಿಂಧ್ಯಪರ್ವತದಲ್ಲಿ ವಾಸಿಸುತ್ತಿದ್ದನು. ಆತನು ಯಾವಾಗಲೂ ಪಾಪಕರವಾದ ಕರ್ಮಗಳನ್ನೇ ಆಚರಿಸುತ್ತಾ, ಪರಮಪಾಪಿಯಾಗಿ ಅಲ್ಲಿಯೇ ಅನೇಕ ಸಂವತ್ಸರಗಳನ್ನು ಕಳೆದನು. ॥೩೧॥

ಆ ಮನುಷ್ಯನು ಯಾವ ಯಾವ ರೀತಿಯಲ್ಲಿ ಎಷ್ಟೆಷ್ಟು ಪಾಪಗಳನ್ನು ಮಾಡಿದನೆಂಬುದಕ್ಕೆ ಲೆಕ್ಕವೇ ಇಲ್ಲ. ಅಲ್ಲದೇ ಆತನು ಹಿಂದಿನ ಪಾಪಗಳನ್ನು ಸ್ವಲ್ಪವೂ ಲೆಕ್ಕಿಸದೆ ಮತ್ತೂ ಮತ್ತೂ ಪಾಪಕರ್ಮಗಳನ್ನೇ ಮಾಡುತ್ತ ಹೋಗುತ್ತಿದ್ದನು. ಅವನ ಪಾಪಕ್ಕೆ ಸ್ವಲ್ಪವೂ ವಿಚ್ಛತ್ತಿಯೇ ಇರಲಿಲ್ಲ. ॥೩೨॥

ಆತನು ವ್ಯಭಿಚಾರಿಯ ಮಗನು. ಆದುದರಿಂದ ಆತನೂ ವ್ಯಭಿಚಾರಿಯೇ ಆಗಿದ್ದನು. ಹಾಗೆಯೇ ವೇಶ್ಯಾಸ್ತ್ರೀಯ ಸಂಬಂಧದಿಂದ ಆ ಜಾರಿಣಿಯ ಎಂಜಲನ್ನೇ ತಿನ್ನುವನು. ಯಾವ ಸಂಕೋಚವೂ ಲಜ್ಜೆಯೂ ಅವನಿಗೆ ಇರಲಿಲ್ಲ. ಪಾಪಾಚರಣೆಯಲ್ಲದೇ ಬೇರೆ ಕೆಲಸವೇ ಆತನಿಗಿರಲಿಲ್ಲ. ॥೩೩॥

ಆತನಿಗೆ ಆ ಜಾರಿಣಿಯಲ್ಲಿ ಒಬ್ಬ ಮಗಳು ಜನಿಸಿದಳು. ಆ ಹುಡುಗಿಗೆ ವಯಸ್ಸು ತುಂಬಿ ಆಕೆಯು ಯುವತಿಯಾಗಲು ಆ ಪಾಪಿಯು ತನ್ನ ಮಗಳನ್ನೇ ಕೂಡಿಕೊಂಡು ರತಿಕ್ರೀಡೆ ನಡೆಸಿದನು. ॥೩೪॥

ತಸ್ಯಾಮುತ್ಪಾದಯಾಮಾಸ ಕನ್ಯಕಾಂ ಸಾಪಿ ಸುಂದರೀ ।
ಯೌವನೇನ ಸಮಾಕ್ರಾಂತಾ ತಯಾ ರೇಮೇ ಸ ಪಾಪಧೀಃ ॥೩೫॥

ತಸ್ಯಾಂ ಚ ಜನಯಾಮಾಸ ಕನ್ಯಕಾಂ ಸೋಽಪಿ ಪಾಪಧೀಃ ।
ತಯಾಪಿ ರೇಮೇ ಸಾ ಪ್ರಾಹ ತಂ ಕದಾಚಿನ್ಮನೋಹರಾ ॥೩೬॥

॥ ಕನ್ಯಕಾ ಉವಾಚ ॥

ಶಯನೇ ಕುಸುಮಾಪೇಕ್ಷಾ ಜಾಯತೇ ಮಮ ತಾನಿ ಮೇ ।
ಆನಯಾದ್ಯಾನ್ಯಥಾ ಕ್ರೀಡಾ ತವ ನಾದ್ಯ ಭವಿಷ್ಯತಿ ॥೩೭॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ಶಿವಾರಾಮಂ ಯಯೌ ನಿಶಿ ।
ಸ ಶಿವಾರ್ಚನಯೋಗ್ಯಾನಿ ದೃಷ್ಟ್ವಾ ಪುಷ್ಪಾಣಿ ವಿಸ್ಮಿತಃ ॥೩೮॥

ಆ ಪಾಪಿಷ್ಠನು ಜಾರಿಣಿಯಾದ ತನ್ನ ಮಗಳಲ್ಲಿಯೇ ರಮಿಸಿ, ಆಕೆಯಲ್ಲಿ ಒಂದು ಸ್ತ್ರೀರತ್ನವನ್ನು ಪಡೆದನು. ಆ ಹುಡುಗಿಯೂ ಸುಂದರಿಯಾಗಿದ್ದಳು. ಅವಳು ಯುವತಿಯಾದ ಕೂಡಲೇ ಆತನು ಪಾಪಬುದ್ಧಿಯವನಾಗಿ ಆಕೆಯೊಡನೆಯೂ ವಿಲಾಸ ಭೋಗಗಳನ್ನು ಅನುಭವಿಸಿದನು. ॥೩೫॥

ಆ ಪರಮಪಾಪಿಷ್ಠನು ತನ್ನ ಮೊಮ್ಮಗಳನ್ನೇ ಉಪಭೋಗಿಸಿ, ಆಕೆಯಲ್ಲಿಯೂ ಒಬ್ಬಳು ಹೆಣ್ಣು ಮಗಳನ್ನು ಪಡೆದನು. ಅವಳೂ ಯೌವನದಿಂದ ಮನೋಹರಳಾಗಿ ಕಂಡುಬಂದಳು. ಆಗ ಆಕೆಯನ್ನೂ ಉಪಭೋಗಿಸಲು, ಒಂದು ದಿವಸ ಆ ಹುಡುಗಿಯು ಅವನೊಡನೆ ಹೀಗೆಂದಳು. ॥೩೬॥

"ನನಗೆ ಈದಿನ ಹೂವಿನ ಹಾಸಿಗೆಯಮೇಲೆ ಮಲಗಿಕೊಳ್ಳಲು ಅಪೇಕ್ಷೆಯಾಗುತ್ತಿದೆ. ಆದುದರಿಂದ ನನಗೆ ಹೂಗಳನ್ನು ತಂದುಕೊಡು. ಇಲ್ಲದಿದ್ದರೆ ನಿನಗೆ ಇಂದು, ಕ್ರೀಡೆಯು ದೊರೆಯಲಾರದು." ॥೩೭॥

ಆ ಮೊಮ್ಮಗಳ ಮಗಳು ಹೇಳಿದ ಮಾತಿನಂತೆ ಹೂವನ್ನು ತರುವುದಕ್ಕೆ ಹೊರಟನು. ಆಗ ರಾತ್ರಿವೇಳೆಯಾಗಿತ್ತು. ಅವನು ಹೂಗಳನ್ನು ಹುಡುಕಿಕೊಂಡು ಮುಂದುವರಿದು ಪರಮೇಶ್ವರನ ಸಂಬಂಧವಾದ ಉದ್ಯಾನಕ್ಕೆ ಹೋದನು. ಅಲ್ಲಿ ಬೇಕಾದಷ್ಟು ಹೂಗಳಿದ್ದವು. ಅವು ಉತ್ಕೃಷ್ಟಗಳಾಗಿದ್ದು ಶಿವಾರ್ಚನೆಗೆ ಅತ್ಯಂತ ಯೋಗ್ಯಗಳಾಗಿದ್ದವು. ಆ ಮನುಷ್ಯನು ಸುಂದರವಾದ ಆ ಹೂಗಳನ್ನು ನೋಡಿ ವಿಸ್ಮಯಪಟ್ಟನು. ॥೩೮॥

ಅತಃಪರಂ ಪ್ರಯತ್ನೇನ ಸರ್ವಂ ಪುಷ್ಪವನಂ ಮಯಾ ।
ಸಮೂಲಂ ಭವನಂ ನೇಯಂ ವನಂ ಸ್ಯಾನ್ಮಮ ಮಂದಿರೇ ॥೩೯॥

ಏತಾದೃಶಾನಿ ಪುಷ್ಪಾಣಿ ನಾನ್ಯತ್ರ ಭುವನತ್ರಯೇ ।
ಅತಸ್ಸರ್ವಾಣಿ ನೇಯಾನಿ ಮೂಲೈಃ ಪುಷ್ಪವನಾನಿ ತು ॥೪೦॥

ತತ್ರೈಕಂ ಪುಷ್ಪಮಾದಾಯ ಸುಗಂಧಮತಿಸುಂದರಂ ।
ವನಾದ್ವಿನಿರ್ಗತಃ ಪಾಪೀ ಧಾವನೇನ ಯಯೌ ಗೃಹಂ ॥೪೧॥

ತತ್ಪುಷ್ಪಗಂಧಸಂಬಂಧವಾತಪೋತಜಿಘೃಕ್ಷಯಾ ।
ದಂದಶೂಕೋ ಮಹಾಕಾಯೋ ಸ್ವಬಿಲಾನ್ನಿರ್ಗತಸ್ಸರಾಃ ॥೪೨॥

ಆ ಸೊಗಸಾದ ಹೂಗಳನ್ನು ಕಂಡು ಆತನ ಆಸೆಯು ಅತಿಯಾಯಿತು. ಅವನು ಹೇಗಾದರೂ ಮಾಡಿ ಈ ಉದ್ಯಾನವನ್ನೇ ಕಿತ್ತುಕೊಂಡು ಮನೆಗೆ ಹೋಗಬೇಕೆಂದೂ ಆದರಿಂದ ಮನೆಯಲ್ಲಿಯೂ ಒಂದು ಸುಂದರನಾದ ಉದ್ಯಾನವು ಇದ್ದಂತಾಗುವುದೆಂದೂ ಯೋಚಿಸಿದನು. ॥೩೯॥

ಇಷ್ಟು ಮನೋಹರವಾದ ಹೂಗಳು ಮೂರುಲೋಕದಲ್ಲಿ ಎಲ್ಲಿಯೂ ದೊರೆಯಲಾರವು. ಆದುದರಿಂದ ಈ ಪುಷ್ಪವನವನ್ನೇ ಮೂಲಸಹಿತವಾಗಿ ಕಿತ್ತುಕೊಂಡು ಹೋಗಬೇಕು ಎಂದು ನಿಶ್ಚಯಿಸಿದನು. ॥೪೦॥

ಆ ಮೂಢನು ಮೇಲೆ ಹೇಳಿದಂತೆ ಯೋಚಿಸಿಕೊಂಡು, ಉದ್ಯಾನವನ್ನು ಕಿತ್ತುಕೊಂಡು ಹೋಗಲು ಮತ್ತೊಮ್ಮೆ ಸಿದ್ಧತೆ ಮಾಡಿಕೊಂಡು ಬರಬೇಕೆಂಬ ಸಂಕಲ್ಪದಿಂದ, ಆಗ ಕೇವಲ ಒಂದೇ ಹೂವನ್ನು, ಸುಂದರವೂ ಪರಿಮಳವೂ ಆಗಿರುವುದನ್ನು ಆರಿಸಿ ಕುಯಿದುಕೊಂಡು, ಅತ್ಯಂತ ಉತ್ಸಾಹದಿಂದ ಮನೆಗೆ ಓಡುತ್ತ ಓಡುತ್ತಾ ಬರುತ್ತಿದ್ದನು. ॥೪೧॥

ಎಲೈ ದೇವತೆಗಳಿರಾ! ಆಗ ನಡೆದ ಅದ್ಭುತವನ್ನೇನು ಹೇಳಲಿ! ಆ ಮೂಢನು ಹೂವನ್ನು ಕೈಯ್ಯಲ್ಲಿಟ್ಟುಕೊಂಡು ಓಡುತ್ತಾ ಮನೆಯನ್ನು ಸೇರಿದನು. ಆ ಹೂವಿನ ಪರಿಮಳವು ಸುತ್ತಲೂ ಬಹಳ ದೂರದವರೆಗೂ ವ್ಯಾಪಿಸುತ್ತಿತ್ತು. ಆಗ ಸಮೀಪದಲ್ಲಿದ್ದ ಒಂದು ದೊಡ್ಡ ಸರ್ಪವು ಪರಿಮಳದಿಂದ ಕೂಡಿದ ಗಾಳಿಯನ್ನು ಸೇವಿಸಬೇಕೆಂದು ಬಿಲದಿಂದ ಹೊರಹೊರಟಿತು. ॥೪೨॥

ಆಘ್ರಾಯಾಘ್ರಾಯ ತಂ ಗಂಧಂ ಸರ್ಪಸ್ತನ್ಮಂದಿರಂ ಗತಃ ।
ತಂ ಪುಷ್ಪಕರಮಾಲೋಕ್ಯ ತತ್ಕಾಯೇ ಸಮುಪಾವಿಶತ್ ॥೪೩॥

ತತಸ್ಸರ್ಪಸಮಾಕ್ರಾಂತಃ ಸುಭೀತೋ ಬಹಿರಾಗತಃ ।
ಸರ್ಪೇಣ ದಷ್ಟಸ್ತತ್ಪುಷ್ಪಂ ಪತಿತಂ ಲಿಂಗಮಸ್ತಕೇ ॥೪೪॥

ತತ್ರ ದೈವಾತ್ಸಮಾನೀತಂ ನಾರ್ಮದಂ ಲಿಂಗಮುತ್ತಮಂ ।
ಕೇನಚಿತ್ಪೂಜನಂ ಕರ್ತುಂ ತತ್ರೈವ ಸ್ಥಾಪಿತಂ ಸ್ಥಿತಂ ॥೪೫॥

ಸ ಸರ್ಪೋ ಲಿಂಗಮಾವೇಷ್ಟ್ಯ ತತ್ಪುಷ್ಪಾಘ್ರಾಣನಪ್ರಿಯಃ ।
ಲಿಂಗೇ ಸಂಪಾದಯಾಮಾಸ ಶೀತಲತ್ವಂ ಸುವೇಷ್ಟನೈಃ ॥೪೬॥

ಸರ್ಪವು ಪರಿಮಳದ ಗಾಳಿಯನ್ನೇ ಅನುಸರಿಸಿ ಬರುತ್ತ ಬರುತ್ತಾ ಆ ಪಾಪಿಯ ಮನೆಗೇ ಬಂದುಬಿಟ್ಟಿತು. ಇನ್ನೂ ಆ ಹೂವನ್ನು ಅವನ ಕೈಯ್ಯಲ್ಲೇ ಇಟ್ಟುಕೊಂಡಿದ್ದನು. ಸರ್ಪವು ವಾಸನೆಯ ಅಪೇಕ್ಷೆಯಿಂದ ಮುಂದೆಬಂದು, ಹೂವನ್ನು ಹಿಡಿದು ಕೊಂಡಿದ್ದ ಅವನ ಸಮೀಪವನ್ನೇ ಸೇರಿತು. ॥೪೩॥

ಸರ್ಪವು ಆ ಪಾಪಿಯ ಹತ್ತಿರಕ್ಕೆ ಬಂದು ಆತನ ಮೈಗೆ ಸುತ್ತಿಕೊಂಡೇ ಬಿಟ್ಟಿತು. ಆಗ ಅವನು ಬಹಳ ಹೆದರಿ ಅಲ್ಲಿ ಇಲ್ಲಿ ಕಿರಿಚಿಕೊಳ್ಳುತ್ತಾ ಮನೆಯ ಹೊರಗಡೆ ಬಂದನು. ಆದರೂ ಸರ್ಪವು ಆತನನ್ನು ಬಿಡದೆ ಬೆನ್ನುಹತ್ತಿ ಕಚ್ಚಿ ಬಿಟ್ಟಿತು. ಆಗ ಆತನ ಕೈಯ್ಯಲ್ಲಿದ್ದ ಹೂವು ಅಕಸ್ಮಾತ್ ಅಲ್ಲಿಯೇ ಕೆಳಗಡೆ ಇದ್ದ ಒಂದು ಶಿವಲಿಂಗದ ಮೇಲೆ ಬಿದ್ದಿತು. ॥೪೪॥

ಧರ್ಮಕರ್ಮಸಂಯೋಗದಿಂದ ಅಲ್ಲಿದ್ದುದು ನರ್ಮದಾನದಿಯ ಶ್ರೇಷ್ಠವಾದ ಲಿಂಗವೇ ಆಗಿತ್ತು. ಆ ಲಿಂಗವನ್ನು ಯಾವನೋ ಪುಣ್ಯಾತ್ಮನು ಹಿಂದೆ ಪೂಜೆ ಮಾಡಲು ತಂದಿದ್ದನು. ಅದು ಅಲ್ಲಿ ಸ್ಥಾಪಿತವಾಗಿತ್ತು. ॥೪೫॥

ಹೂವು ಲಿಂಗದಮೇಲೆ ಬಿದ್ದೊಡನೆ ಆ ಸರ್ಪವೂ ಹೂವಿನ ಆಸೆಯಿಂದ ಆ ಪಾಮರನ ಶರೀರವನ್ನು ಬಿಟ್ಟುಬಿಟ್ಟು ಶಿವಲಿಂಗಕ್ಕೆ ಸುತ್ತಿಕೊಂಡು, ತನ್ನ ದೇಹದ ತಂಪನ್ನೂ ಶಿವಲಿಂಗಕ್ಕೆ ಸಮರ್ಪಿಸಿತು. ॥೪೬॥

ತತಸ್ಸಸರ್ಪಸಂದಷ್ಟೋ ಮೃತಸ್ತದ್ವಿಷಸಂಶ್ರಯಾತ್ ।
ತದಾ ಮಹೇಶಸ್ತಂ ದೃಷ್ಟ್ವಾ ಬಭಾಷೇ ಗಿರಿಜಾಂ ಪ್ರತಿ ॥೪೭॥

॥ ಸದಾಶಿವ ಉವಾಚ ॥

ಗೌರಿ ಕೌತುಕಮಸ್ತ್ಯೇಕಂ ತದ್ವಕ್ಷ್ಯೇ ಸಾದರಂ ಶೃಣು ।
ಯತ್ಕಥಾಶ್ರವಣಾತ್ಸದ್ಯೋ ಭಕ್ತಿರ್ಮತ್ಪೂಜನೇ ಭವೇತ್ ॥೪೮॥

ಅಸ್ತಿ ಪುಷ್ಪವನಂ ರಮ್ಯಂ ವಿಂಧ್ಯದೇಶೇ ಮನೋಹರಂ ।
ತತ್ರ ಪುಷ್ಪಾಣ್ಯನಂತಾನಿ ತದ್ಗಂಧೋಽಪ್ಯತಿಸುಂದರಃ ॥೪೯॥

ತತ್ರ ವಾತಪ್ರಸಾರೋಽಪಿ ನ ಭವಿಷ್ಯತಿ ಸರ್ವಥಾ ।
ಮದ್ಭಕ್ತೇನ ಕೃತಂ ರಮ್ಯಂ ತದ್ವನಂ ಗೌರಿ ಸುಂದರಂ ॥೫೦॥

ಅನಂತರ ಆ ಹಾವಿನಿಂದ ಕಚ್ಚಿಸಿಕೊಂಡ ಪಾಪಿಯು ವಿಷವ್ಯಾಪನೆಯಿಂದ ಅಲ್ಲಿಯೇ ಸತ್ತು ಬಿದ್ದನು. ಈ ವಿಚಿತ್ರವಾದ ಘಟನೆಗಳನ್ನೆಲ್ಲಾ ನೋಡಿಕೊಂಡಿದ್ದ ಪರಮೇಶ್ವರನು ಈ ಆಶ್ಚರ್ಯವನ್ನು ಪ್ರಸ್ತಾಪಿಸಿ ಗಿರಿಜೆಗೆ ಹೀಗೆ ಹೇಳಿದನು. ||೪೭||

ಎಲೌ ಗಿರಿಜೆಯೇ, ಒಂದು ಅತ್ಯಂತ ಕುತೂಹಲಕಾರಿಯಾದ ಸಂಗತಿ ನಡೆದಿದೆ. ಹೇಳುವೆನು. ಗಮನವಿಟ್ಟು ಕೇಳು. ಈ ಕಥೆಯನ್ನು ಕೇಳಿದಕೂಡಲೇ ನನ್ನ ಪೂಜೆಮಾಡುವುದರಲ್ಲಿ ನನ್ನ ಭಕ್ತರಿಗೆ ಭಕ್ತಿ ಹೆಚ್ಚುವುದು. ||೪೮||

ವಿಂಧ್ಯಪರ್ವತದ ಸಮೀಪದಲ್ಲಿ ಒಂದು ಸುಂದರವಾದ ಪುಷ್ಪೋದ್ಯಾನವಿದೆ. ಅಲ್ಲಿ ಹೇರಳವಾಗಿ ಹೂಗಳು ಅರಳರಳಿ ನಿಂತಿರುತ್ತವೆ. ಅವುಗಳ ಗಂಧವೂ ಬಹಳ ಪರಿಮಳವನ್ನು ಬೀರುತ್ತಾ ಸರ್ವವ್ಯಾಪಿಯಾಗಿರುವುದು. ||೪೯||

ಆ ಉದ್ಯಾನವು ನನ್ನ ಭಕ್ತನೊಬ್ಬನಿಂದ ಬೆಳೆಸಲ್ಪಟ್ಟಿದೆ. ಆತನು ತನ್ನ ಶಿವ ಪೂಜೆಗೆ ಬೇಕಾಗುವುದೆಂದು ಉತ್ಕೃಷ್ಟವಾದ ಹೂಗಿಡಗಳನ್ನೆಲ್ಲಾ ಪೋಷಿಸಿ, ಕಾದಿರುತ್ತಾನೆ. ಈಯುದ್ಯಾನಕ್ಕೆ ಯಾರೂ ಪ್ರವೇಶಿಸುವಹಾಗಿಲ್ಲ. ವಾಯುವೂ ಸಹ ಅಲ್ಲಿ ತನ್ನ ರಭಸತೆಯನ್ನು ತೋರಿಸಲಾರನು. ||೫೦||

ಭೂಮಂಡಲೇ ನ ಕುತ್ರಾಪಿ ತಾದೃಶಂ ವನಮಂಬಿಕೇ ।
ಸಗಂಧಾ ಏವ ತದ್ಗಂಧೈರ್ವ್ಯತಿಕಂಟಕಭೂರುಹಾಃ ॥೫೧॥

ತೇ ಚಂದನತರುಸ್ಪರ್ಧಾಂ ಕುರ್ವಂತಿ ಪ್ರತ್ಯಹಂ ಶಿವೇ ।
ಸ್ವಗಂಧಸದೃಶೋ ಗಂಧೋ ನ ಭವತ್ವಿತಿ ಶೈಲಜೇ ॥೫೨॥

ಸುಚಂದನತರುತ್ವೇನ ತರವಸ್ತೇ ಮತಾ ಜನೈಃ ।
ತತ್ಪುಷ್ಪೇಷ್ವಪಿ ಯೋ ಗಂಧಸ್ಸೋಽಪಿ ತಾವನ್ಮನೋಹರಃ ॥೫೩॥

ಮಂದಾರಪ್ರಸವೋತ್ಪನ್ನಗಂಧಸ್ಪರ್ಧಾಂ ಕರೋತಿ ಸಃ ।
ಗಂಧೋಽಪಿ ಕಂಟಕತರುಃ ಪ್ರಸವಾಧಿಷ್ಠಿತಃ ಸದಾ ॥೫೪॥

ತತ್ರ ನ ಭ್ರಮರಾಣಾಂ ವಾ ಪ್ರವೇಶಶ್ಶೈಲಕನ್ಯಕೇ ।
ತತ್ಪುಷ್ಪದ್ರುಮಮೂಲೇಷು ಕುಲ್ಯಾಸ್ಸಂತಿ ಮನೋಹರಾಃ ॥೫೫॥

ಅಲ್ಲಿ ಬಿಟ್ಟಿರುವ ಹೂವಿನ ಪರಿಮಳಪ್ರಸಾರದಿಂದ, ಅಲ್ಲಿರುವ ಮರ, ಬಳ್ಳಿ, ಮುಳ್ಳು, ಎಲ್ಲವೂ ಸುವಾಸನೆಯುಳ್ಳದೇ ಆಗಿರುತ್ತವೆ. ಇಷ್ಟು ಉತ್ಕೃಷ್ಟವಾದ ಪುಷ್ಪೋದ್ಯಾನವು ಭೂಮಿಯಲ್ಲಿ ಮತ್ತೆಲ್ಲಿಯೂ ಕಾಣುವುದಿಲ್ಲ. ॥೫೧॥

ಅಲ್ಲಿರತಕ್ಕ ಹೂ ಬಳ್ಳಿಗಳು ತಮ್ಮಲ್ಲಿರುವ ಪರಿಮಳಕ್ಕೆ ಸದೃಶವಾದ ಪರಿಮಳವು ಮತ್ತೆಲ್ಲಿಯೂ ಇರಕೂಡದೆಂಬ ಆಗ್ರಹದಿಂದಲೋ ಎಂಬಂತೆ, ಗಂಧವೇ ಪ್ರಧಾನವಾದ ಚಂದನ ವೃಕ್ಷಗಳೊಡನೆಯೂ ಸ್ಪರ್ಧೆಗೆ ನಿಂತಂತಿವೆ. ॥೫೨॥

ಅಲ್ಲಿ ಬೆಳೆದಿರುವ ಮರಗಳೆಲ್ಲವೂ ಚಂದನವೃಕ್ಷಗಳೋ ಎಂಬಂತೆ ಜನರಿಗೆ ಭ್ರಾಂತಿಯುಂಟಾಗುತ್ತಿರುವುವು. ಅಲ್ಲದೇ ಆ ಮರಗಳ ಹೂಗಳೂ ಸಹ ಅತ್ಯಂತ ಪರಿಮಳವುಳ್ಳವುಗಳೇ ಆಗಿರುತ್ತವೆ. ॥೫೩॥

ಆ ಉದ್ಯಾನದಲ್ಲಿ ವ್ಯಾಪ್ತವಾದ ಗಂಧವು, ದೇವಲೋಕದ ಮಂದಾರಪುಷ್ಪದ ಪರಿಮಳವನ್ನು ಮೀರಿಸುತ್ತದೆ. ಆ ಉದ್ಯಾನದಲ್ಲಿ ಯಾವಾಗಲೂ ಹಲಸಿನ ಮರಗಳು ಫಲವನ್ನು ಕೊಡುತ್ತಲಿವೆ. ॥೫೪॥

ಅಲ್ಲಿ ಕಾವಲು ಬಲವಾಗಿರುವುದರಿಂದ ಹೂಗಳಮೇಲೆ ಭ್ರಮರಗಳಿಗೂ ಧಾಳಿ ಮಾಡಲು ಸಾಧ್ಯವಿಲ್ಲ. ಅಲ್ಲದೇ ಆ ಪುಷ್ಪಫಲಭರಿತವಾದ ಮರಗಳ ಮಧ್ಯೆ ಮಧ್ಯೆ ಸುಂದರಗಳಾದ ಚಿಕ್ಕ ಚಿಕ್ಕ ಕೊಳಗಳಿವೆ. ॥೫೫॥

ಸುಗಂಧಜಲಕಲ್ಲೋಲಮಾಲಾಕುಲಸಮಾಕುಲಾಃ ।
ಪ್ರತ್ಯೇಕಮಾಲವಾಲಂ ಚ ದ್ರುಮಾಣಾಂ ವಿಸ್ಮಯಾವಹಂ ॥೫೬॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ಗೌರೀ ಸಂತುಷ್ಟಮಾನಸಾ ।
ಶಿವೇನ ಸಹ ಸಂಪ್ರಾಪ ತದ್ವನಂ ಪುಷ್ಪಕಾಶ್ರಿತಾ ॥೫೭॥

ತಸ್ಮಿನ್ ವನೇ ದೀರ್ಘಿಕಾಪಿ ರತ್ನಸೋಪಾನಸಂಕುಲಾ ।
ತತ್ತೀರೇ ರತ್ನಸಂಬದ್ಧಂ ಶಿವಮಂದಿರಮುತ್ತಮಂ ॥೫೮॥

ರತ್ನಪ್ರಾಸಾದಶೋಭಾಭಿರಲಂಕೃತಮಿವಾದರಾತ್ ।
ತನ್ಮಂದಿರೇ ಬಭೌ ದೇವಃ ಸಾಂಬಸ್ತತ್ರಸಮಾಗತಃ ॥೫೯॥

ಆ ಸರೋವರಗಳು ಸುಗಂಧವಾದ ನೀರಿನಿಂದ ಯಾವಾಗಲೂ ತುಂಬಿರುತ್ತವೆ. ಅಲ್ಲಿ ಮಂದಮಾರುತವು ಬೀಸಿದಾಗ ತರಂಗಗಳನ್ನು ನೋಡಲು ಮನೋಹರ ವಾಗಿರುವುದು. ಪ್ರತಿಯೊಂದು ಮರದ ಬುಡದಲ್ಲಿಯೂ ಕಟ್ಟೆ ಮತ್ತು ಪಾತಿಗಳು ಇರುವುವು. ಇವು ನೋಡುವವರಿಗೆ ಆಶ್ಚರ್ಯವನ್ನುಂಟುಮಾಡುವುವು. ॥೫೬॥

ಪರಮೇಶ್ವರನು ಮಾಡಿದ ಆ ಉದ್ಯಾನದ ವರ್ಣನೆಯನ್ನು ಗಿರಿಜೆಯು ಕೇಳಿ ಸಂತುಷ್ಟಳಾದಳಲ್ಲದೇ, ಅದನ್ನು ನೋಡಲು ಮತ್ತು ಕುತೂಹಲವುಳ್ಳವಳಾಗಿ ಕೂಡಲೇ ನೋಡಬೇಕೆಂದು ಪರಮೇಶ್ವರನೊಡನೆ ಪುಷ್ಪಕವಿಮಾನದಲ್ಲಿ ಹೊರಟಳು. ॥೫೭॥

ಆ ಉದ್ಯಾನವನದಲ್ಲಿ ಒಂದು ಬಾವಿ ಇದ್ದಿತು. ಆ ಬಾವಿಯ ಸುತ್ತಲೂ ರತ್ನ ಮಯವಾದ ಸೋಪಾನಗಳಿದ್ದವು. ಅದರ ಹತ್ತಿರವೇ ದಡದಲ್ಲಿ ರತ್ನದಿಂದ ನಿರ್ಮಿತವಾದ ಶಿವದೇವಾಲಯವೂ ಇದ್ದಿತು. ॥೫೮॥

ಆ ಶಿವಾಲಯವು ಅತ್ಯಂತ ಸುಂದರವಾಗಿದ್ದುದರಿಂದ, ನೋಡುವುದಕ್ಕೆ ರತ್ನದ ಉಪ್ಪರಿಗೆಯನ್ನೇ ಕಟ್ಟಿದ್ದಾರೆಯೋ ಎನ್ನುವಹಾಗೆ ತೋರುತ್ತಿತ್ತು. ಪಾರ್ವತೀ ಪರಮೇಶ್ವರರು ಅಲ್ಲಿಯೇ ಶಿವಮಂದಿರದ ಹತ್ತಿರ ವಿಮಾನದಿಂದ ಬಂದಿಳಿದರು. ॥೫೯॥

ತತಸ್ತಲ್ಲಿಂಗಮಾಲೋಕ್ಯ ಶಂಕರೋ ಗಿರಿಜಾನ್ವಿತಃ ।
ಆಲಿಂಗ್ಯ ಭಕ್ತ್ಯಾ ತಲ್ಲಿಂಗಂ ಸ್ಥಿತಂ ತತ್ರ ಕ್ಷಣಂ ಸ್ಥಿತಃ ॥೬೦॥

ತಾನಿ ಪುಷ್ಪಾಣಿ ಸಂವೀಕ್ಷ್ಯ ಶಂಕರೋ ಲಿಂಗಮಸ್ತಕೇ ।
ರತ್ನೋಚ್ಚಯೇನ ತುಲ್ಯಾನಿ ಸಂತುಷ್ಟಶ್ಶಿವಯಾ ಸಹ ॥೬೧॥

ಅಪಾರದೀಪಮಾಲಾಶ್ಚ ದೃಷ್ಟ್ವಾಸ್ತತ್ರ ಶಿವಾಲಯೇ ।
ರತ್ನಸ್ತಂಭೇಷು ಚಿತ್ರಾಣಿ ದದರ್ಶ ಗಿರಿಜಾಪತಿಃ ॥೬೨॥

ತತೋ ಬಹಿರ್ವಿನಿಷ್ಕ್ರಮ್ಯ ತರುಮೂಲೇಷು ಸಂಸ್ಥಿತಃ ।
ತದಾ ತತ್ತರುಜಾಪಾರಕುಸುಮಾಸಾರಸಂವೃತಃ ॥೬೩॥

ತತ್ಕುಲ್ಯಾಜಲಮಾಸಾದ್ಯ ಫಲಾನಿ ವಿಮಲಾನ್ಯಪಿ ।
ತತ್ರ ಗಂಧಫಲೀಗಂಧಂ ಸಮಾಘ್ರಾಯ ಪುನಃಪುನಃ ॥೬೪॥

ಪರಮೇಶ್ವರನು ಗಿರಿಜೆಯೊಡನೆ ಶಿವಮಂದಿರದೊಳಕ್ಕೆ ಹೋಗಿ ಅಲ್ಲಿದ್ದ ಲಿಂಗವನ್ನು ಭಕ್ತಿಯಿಂದ ಆಲಿಂಗಿಸಿಕೊಂಡನು. ಮತ್ತು ಕ್ಷಣಕಾಲ ಅಲ್ಲಿಯೇ ಇದ್ದನು. ॥೬೦॥

ಸುಗಂಧ ಮನೋಹರವಾದ ಹೂಗಳನ್ನು ಶಿವಲಿಂಗದ ಮೇಲೆ ಧರಿಸಲಾಗಿತ್ತು. ಆ ಹೂಗಳು ರತ್ನದರಾಶಿಯಂತೆ ಕಾಣುತ್ತಿದ್ದವು. ಅದನ್ನೆಲ್ಲಾ ನೋಡಿ ಶಂಕರ ಪಾರ್ವತಿಯರು ಅತ್ಯಂತ ಸಂತುಷ್ಟರಾದರು. ॥೬೧॥

ಆ ಶಿವಾಲಯದಲ್ಲಿ ಅನೇಕ ದೀಪಮಾಲಿಕೆಗಳು ಇದ್ದುವು. ಅಲ್ಲಿನ ರತ್ನದ ಕಂಬಗಳಲ್ಲಿ ನಾನಾವಿಧವಾದ ಚಿತ್ರಗಳು ಬರೆಯಲಾಗಿದ್ದವು. ಅವೆಲ್ಲವನ್ನೂ ಶಂಕರನು ನೋಡಿದನು. ॥೬೨॥

ಆ ದೇವಾಲಯದ ಸೊಬಗನ್ನು ನೋಡುತ್ತ ನೋಡುತ್ತಾ ಸಂತುಷ್ಟನಾಗಿ, ಮಂದಿರದ ಹೊರಕ್ಕೆ ಬಂದನು. ಹಾಗೆಯೇ ಅಲ್ಲಿನ ಶಾಂತವಾತಾವರಣವನ್ನು ನೋಡುತ್ತಾ ಮರಗಳ ಕೆಳಭಾಗದಲ್ಲಿ ನಿಂತಿದ್ದನು. ಆಗ ಮರಗಳ ಮೇಲಿಂದ ಹೂಗಳು ಪರಮೇಶ್ವರನ ಮೇಲೆ ಬೀಳುತ್ತಿದ್ದುವು. ॥೬೩॥

ಹಾಗೆಯೇ ಕೊಂಚ ಬಾಯಾರಿಕೆ ಎಂದು ತೋರಿದಾಗ, ಅಲ್ಲಿನ ಸರೋವರದಲ್ಲಿ ನೀರನ್ನು ಕುಡಿದನು. ಒಳ್ಳೊಳ್ಳೆಯ ಕೆಲವು ಹಣ್ಣುಗಳನ್ನೂ ತಿಂದನು. ಅಲ್ಲೆಲ್ಲಾ

ಸ್ವರ್ಣಗಂಧಫಲೀಪುಷ್ಪಸಂಕುಲಂ ತದ್ವನಂ ಸುರಾಃ ।
ರೇಜೇ ಮನೋಹರಂ ವ್ಯಾಪ್ತಂ ಸ್ಥೂಲೈರ್ಗಂಧಫಲೀಫಲೈಃ ॥೬೫॥

ತಾನ್ಯಾಘ್ರಾಯ ಮಹಾದೇವಃ ಪೀತ್ವಾ ತದ್ರಸಮಾದರಾತ್ ।
ಸುಧಾವಧಾರಣಂ ಚಕ್ರೇ ಧಿಕ್ಧಿಗ್ರಸಸುಧೇತಿ ಚ ॥೬೬॥

ತತಸ್ಸುದೂರೇಽಪ್ಯತ್ರಾಸ್ತಿ ನಾರ್ಮದಂ ಲಿಂಗಮುತ್ತಮಂ ।
ಸರ್ಪವೇಷ್ಟಿತಮಾಲೋಕ್ಯ ತತ್ರ ಗಂತುಂ ಮನೋ ದಧೇ ॥೬೭॥

ಬಾಣಲಿಂಗಮಿದಂ ರಮ್ಯಂ ಮದ್ಭಕ್ತಾನೀತಮಾದರಾತ್ ।
ತತ್ರ ಕ್ಷಣಂ ವಸಾಮ್ಯದ್ಯ ತದ್ಯತೋ ಮಮ ಮಂದಿರಂ ॥೬೮॥

ಹರಡಿಕೊಂಡಿದ್ದ ಗಂಧಫಲಿಯ ಇಂಪಾದ ಪರಿಮಳವನ್ನು ಸಹ ಮತ್ತೆ ಮತ್ತೆ ಆಘ್ರಾಣಿಸಿ ಆನಂದಿಸುತ್ತಿದ್ದನು. ॥೬೪॥

ಆ ಉದ್ಯಾನದಲ್ಲಿ ಪ್ರಿಯಂಗು (ಪ್ರೇಂಕಣದ) ವೃಕ್ಷಗಳು ಹೇರಳವಾಗಿದ್ದವು. ಆ ಮರಗಳಲ್ಲೆಲ್ಲಾ ಹೂಗಳೂ ಹಣ್ಣುಗಳೂ ಯಥೇಷ್ಟವಾಗಿ ಬಿಟ್ಟಿದ್ದವು. ಆ ಹಣ್ಣು ಹೂಗಳ ಪರಿಮಳವು ಸುತ್ತಲೂ ಹರಡುತ್ತಿತ್ತು. ॥೬೫॥

ಪರಮೇಶ್ವರನು ಆ ಪ್ರಿಯಂಗು ವೃಕ್ಷದ ಹೂಗಳ ಪರಿಮಳವನ್ನೂ, ಫಲಗಳ ರಸವನ್ನೂ ಆಸ್ವಾದಿಸಿ, ಇದೇ ನಿಜವಾದ ಅಮೃತವೆಂದು ಊಹಿಸಿದನು. ಸಕಲ ಇಂದ್ರಿಯಗಳಿಗೂ ಆಪ್ಯಾಯನಕರವಾದ ಈ ವಸ್ತುವಿರಲು ಆ ದೇವಲೋಕದ ಅಮೃತವು ವ್ಯರ್ಥವೆಂದು ಭಾವಿಸಿದನು. ॥೬೬॥

ಆ ಉದ್ಯಾನಕ್ಕೆ ಸ್ವಲ್ಪ ದೂರದಲ್ಲಿಯೇ ಮೇಲೆಹೇಳಿದ ನಾರ್ಮದ ಲಿಂಗವು ಶೋಭಿಸುತ್ತಿತ್ತು. ಆ ಲಿಂಗಕ್ಕೆ ಹೂವಿನವಾಸನೆಯ ಆಸೆಯಿಂದ ಮೊದಲೇ ಸರ್ಪವು ಸುತ್ತಿಕೊಂಡಿತ್ತಷ್ಟೆ! ಆ ಸನ್ನಿವೇಶವನ್ನೂ ನೋಡಬೇಕೆಂದು ಪರಮೇಶ್ವರನಿಗೆ ಮನಸ್ಸಾಯಿತು. ॥೬೭॥

ಆ ದೇವಾಲಯದಲ್ಲಿರುವುದು ಉತ್ತಮವೂ ಮನೋಹರವೂ ಆದ ಬಾಣಲಿಂಗ. ಅದನ್ನು ನನ್ನ ಭಕ್ತನು ಪೂಜೆ ಮಾಡಬೇಕೆಂದು ಅತ್ಯಾದರದಿಂದ ತಂದು ಪ್ರತಿಷ್ಠೆ ಮಾಡಿರುತ್ತಾನೆ. ಅದೂ ನನ್ನ ಆವಾಸಸ್ಥಾನವೇ ಆಗಿರುತ್ತದೆಯಷ್ಟೆ! ಅಲ್ಲಿಯೂ ಸ್ವಲ್ಪ ಕಾಲ ವಾಸಿಸುವೆನು. ಹೀಗೆಂದು ಪರಮೇಶ್ವರನು ಯೋಚಿಸಿದನು. ॥೬೮॥

ನ ರತ್ನಮಂದಿರೇ ಪ್ರೀತಿರ್ಮಣಿಲಿಂಗೇಷು ವಾ ಪುನಃ ।
ರೇವಾಲಿಂಗೇ ಪರಾ ಪ್ರೀತಿಸ್ತಲ್ಲಿಂಗಂ ಮಂಗಲಾವಹಂ ॥೬೯॥

ತಲ್ಲಿಂಗಾಲೋಕನಾದೇವ ಮಮಾನಂದಃ ಪ್ರವರ್ಧತೇ ।
ತಲ್ಲಿಂಗಸದೃಶಂ ಲಿಂಗಂ ನಾಸ್ತಿ ಬ್ರಹ್ಮಾಂಡಗೋಲಕೇ ॥೭೦॥

ಇತಿ ಕೃತ್ವಾ ಮತಿಂ ದೇವಾಃ ಶಿವಯಾ ಸಂಯುತಶ್ಶಿವಃ ।
ಯಯೌ ತನ್ನಾರ್ಮದಂ ಲಿಂಗಂ ತತ್ರಾಪಿ ಕ್ಷಣಮಾಸ್ಥಿತಃ ॥೭೧॥

ತತ್ಪುಷ್ಪಂ ತು ಸಮಾಘ್ರಾಯ ನಿತ್ಯಗಂಧಂ ಮನೋಹರಂ ।
ಯೇನ ಪುಣ್ಯವತಾ ದತ್ತಂ ಪುಷ್ಪಮೇತನ್ಮನೋಹರಂ ॥೭೨॥

ನನಗೆ ರತ್ನಮಯವಾದ ಮಂದಿರದಲ್ಲಿ ಪ್ರೀತಿಯಿಲ್ಲ. ಅಥವಾ ಮಣಿಮಯವಾದ ಲಿಂಗದಲ್ಲಿಯೂ ನನಗೆ ಮಮತೆ ಇಲ್ಲ. ಆದರೆ ನರ್ಮದಾನದಿಯಲ್ಲಿ ಹುಟ್ಟಿದ ಶಿವಲಿಂಗವೇ ನನಗೆ ಅತ್ಯಂತ ಪ್ರೀತಿಕರವಾದದ್ದು. ಆ ಲಿಂಗವು ಅತ್ಯಂತ ಮಂಗಲಪ್ರದವಾದದ್ದು. ॥೬೯॥

ನರ್ಮದಾನದಿಯ ಲಿಂಗಕ್ಕೆ ಸದೃಶವಾದ ಲಿಂಗವು ಬೇರೆ ಈ ಬ್ರಹ್ಮಾಂಡದಲ್ಲಿಯೇ ಇರುವುದಿಲ್ಲ. ಆ ಲಿಂಗವು ಅಷ್ಟು ಶ್ರೇಷ್ಠವಾದದ್ದು. ಆದುದರಿಂದಲೇ ರೇವಾಲಿಂಗವನ್ನು ನೋಡಿದೊಡನೆ ನನ್ನ ಆನಂದವು ಇಮ್ಮಡಿಸುತ್ತದೆ. ॥೭೦॥

ಎಲೈ ದೇವತೆಗಳಿರಾ! ಈ ಪ್ರಕಾರವಾಗಿ ಯೋಚಿಸಿ ಶಂಕರನು ಪಾರ್ವತಿಯೊಡನೆ ಆ ರೇವಾಲಿಂಗವಿದ್ದೆಡೆಗೆ ಹೋಗಿ ಅಲ್ಲಿಯೇ ಸ್ವಲ್ಪ ಹೊತ್ತು ಇದ್ದನು. ॥೭೧॥

ಮೊದಲೇ ಆ ಲಿಂಗದಮೇಲೆ ಪಾಪಿಯ ಕೈಯ್ಯಿಂದ ಬಿದ್ದಿದ್ದ ಹೂವು ಬಹಳ ಮನೋಹರವಾಗಿದ್ದಿತು. ಪರಮೇಶ್ವರನು ಅತ್ಯಂತ ಆನಂದದಿಂದ, "ಯಾವನೋ ಪುಣ್ಯಾತ್ಮನು ಈ ಪುಷ್ಪವನ್ನು ಪೂಜೆಮಾಡಿರುವನಲ್ಲಾ, ಭಲೇ" ಎಂದು ಶ್ಲಾಘಿಸುತ್ತಾ ಅದರ ವಾಸನೆಯನ್ನು ಸ್ವೀಕರಿಸಿದನು. ॥೭೨॥

ರೇವಾಲಿಂಗೇ ಸ್ವಯಂಭೂತೇ ತಸ್ಯ ಮುಕ್ತಿರ್ಭವಿಷ್ಯತಿ ।
ಸಂತೋಷಂ ಪರಮಂ ಪ್ರಾಪ ತಯಾ ಗಿರಿಜಯಾ ಸಹ ॥೭೩॥

ಪುನಃ ಪುನಃ ಪರಂ ಗಂಧಂ ಸಮಾಘ್ರಾಯ ಮಹೇಶ್ವರಃ ।
ಸರ್ಪಸಂವೇಷ್ಟಿತೇ ಲಿಂಗೇ ನಿವಾಸಂ ಚ ಚಕಾರ ಸಃ ॥೭೪॥

ಏತದ್ಗಂಧಂ ಸಮಾಘ್ರಾಯ ಕೋಽಪಿ ಕಾಕೋದರೋ ಮಹಾನ್ ।
ಚಕಾರ ಶೀತಲಂ ಲಿಂಗಂ ಸ್ವಕಾಯಪರಿವೇಷ್ಟನೈಃ ॥೭೫॥

ಏತದ್ವೇಷ್ಟನಹೇತುತ್ವಮಪರಂ ಮುಕ್ತಿಸಾಧನಂ ।
ಭೋಗಿಭೂಷಣತಾ ತೇನ ಸಿದ್ಧಾ ಕಿಲ ಮಮಾಧುನಾ ॥೭೬॥

ಇತ್ಯುಕ್ತ್ವಾ ಕುಣಪಂ ದೂರಾಚ್ಛಿವಕಿಂಕರವೇಷ್ಟಿತಂ ।
ದದರ್ಶ ತಂ ವಿಮಾನಸ್ಥಂ ಮೃತಂ ಚಕ್ರುರ್ಗಣೇಶ್ವರಾಃ ॥೭೭॥

ಇಂಥ ಅಕೃತ್ರಿಮವಾದ ಮತ್ತು ಸ್ವಯಂ ಉದ್ಭವಿಸಿದ ರೇವಾಲಿಂಗವನ್ನು ಅರ್ಚಿಸಿದ ಮೇಲೆ ಆ ಭಕ್ತನಿಗೆ ಮುಕ್ತಿಯೇ ದೊರೆಯುವುದು. ಅವನು ಇನ್ನು ಸಾಂಸಾರಿಕ ಬಂಧನಗಳಿಗೊಳಗಾಗಲಾರನು. ಹೀಗೆಂದು ಶ್ಲಾಘಿಸುತ್ತಾ ಪಾರ್ವತಿಯೊಡನೆ ಬಹು ಸಂತೋಷ ಪಟ್ಟನು. ॥೭೩॥

ಪರಮೇಶ್ವರನು ಆ ಪುಷ್ಪದ ಪರಿಮಳವನ್ನು ಪುನಃ ಪುನಃ ಆಘ್ರಾಣಿಸಿ ಸಂತೋಷಪಡುತ್ತಾ ಸರ್ಪವೇಷ್ಟಿತವಾದ ಆ ಲಿಂಗದಲ್ಲಿ ಸ್ವಲ್ಪಹೊತ್ತು ಅಧ್ಯಾಸೀನನಾದನು. ॥೭೪॥

ಇಲ್ಲಿ ಒಂದು ಡೊಡ್ಡ ಸರ್ಪವೂ ಇದೆಯಲ್ಲವೇ! ಬಹುಶಃ ಈ ಹೂವಿನ ಪರಿಮಳದ ಆಸೆಯಿಂದ ಬಂದಿರಬೇಕು. ಈ ಸರ್ಪವು ಲಿಂಗಕ್ಕೆ ಸುತ್ತಿಕೊಂಡು ತನ್ನ ಶರೀರದ ಶೈತ್ಯದಿಂದ ಲಿಂಗವನ್ನೂ ಶೀತಲವನ್ನಾಗಿ ಮಾಡಿದೆ. ॥೭೫॥

ಈ ರೀತಿ ಶ್ರೇಷ್ಠಪುಷ್ಪವನ್ನು ಪೂಜೆಮಾಡಿ, ಸರ್ಪವೂ ಬರುವಂತೆ ಮಾಡಿರುವುದು ಅವನ ಅತಿಶಯ ಭಕ್ತಿಗೆ ಕಾರಣವಾಗಿದೆ. ಈ ಸರ್ಪವು ಬಂದು ಲಿಂಗಕ್ಕೆ ಸುತ್ತಿಕೊಂಡಿರುವುದರಿಂದ ನನಗೆ ಸರ್ಪಾಭರಣ ಪೂಜೆಯ ಸೇವೆಯನ್ನು ಮಾಡಿದಂತಾಯಿತು. ಅಂದಮೇಲೆ ಪೂಜೆಮಾಡಿದವನು ಮಹಾಭಕ್ತನಿರಬೇಕು. ॥೭೬॥

ಹೀಗೆಂದು ಯೋಚಿಸುತ್ತಾ, ಸ್ವಲ್ಪ ದೂರದಲ್ಲಿಯೇ ಬಿದ್ದಿರುವ ಶವವನ್ನು ನೋಡಿದನು. ಅದು ಮೊದಲು ಹೇಳಿದ ಪರಮ ವ್ಯಭಿಚಾರಿಯೂ ಪಾಪಿಯೂ

ತತಃ ಪರಂ ಯಯೌ ಸಾಂಬಸ್ತಮುತ್ಸವಮನೇಕಧಾ ।
ದೃಷ್ಟ್ವಾ ಪ್ರಹೃಷ್ಟಸ್ತದ್ರಮ್ಯಮಾರಾಮಂ ಪ್ರತಿ ಸತ್ವರಂ ॥೭೮॥

ತಸ್ಮಾಲ್ಲಿಂಗಾರ್ಚನಂ ಶ್ರೇಷ್ಠಂ ಯಸ್ಯ ಕಸ್ಯಾಪಿ ಮುಕ್ತಿದಂ ।
ಲಿಂಗಾರ್ಚನಸಮಂ ಪುಣ್ಯಂ ನ ಭೂತಂ ನ ಭವಿಷ್ಯತಿ ॥೭೯॥

ಶಿವಾರ್ಚನಜಪುಣ್ಯೇನ ಪುಣ್ಯವಾನಯಮಿತ್ಯತಃ ।
ಏತಸ್ಯಾಗಮನಂ ತಾವದಯುಕ್ತಂ ಯಮಮಂದಿರೇ ॥೮೦॥

ಆಗಿದ್ದವನ ಶವವಾಗಿತ್ತು. ಅದರ ಸುತ್ತಲೂ ಶಿವಗಣವು ನೆರೆದಿತ್ತು. ಆ ಗಣಗಳು ಅವನನ್ನು ವಿಮಾನದ ಮೇಲೆ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದುಕೊಂಡು ಹೋಗುವುದನ್ನು ಪರಮೇಶ್ವರನು ನೋಡುತ್ತಾ ಇದ್ದನು. ॥೭೭॥

ಮೊದಲು ಪಾಪಿಯಾಗಿದ್ದರೂ ಕೊನೆಗಾಲದಲ್ಲಿ ಶಿವಾರ್ಚನೆ ಮಾಡಿ ಸತ್ತಿರುವನೆಂದು ಅವನನ್ನು, ಬಹಳ ಉತ್ಸವದಿಂದ ಕರೆದುಕೊಂಡು ಹೋಗುತ್ತಿದ್ದರು. ಪರಮೇಶ್ವರನು ಇದನ್ನೂ ಆ ಸುಂದರವಾದ ಉದ್ಯಾನವನ್ನೂ ನೋಡುತ್ತಾ, ಬಹಳ ಸಂತೋಷಪಟ್ಟು, ಕೊನೆಗೆ ಅಲ್ಲಿಂದ ಮುಂದೆ ಪ್ರಯಾಣಮಾಡಿದನು. ॥೭೮॥

ಆದುದರಿಂದ ಶಿವಲಿಂಗಾರ್ಚನೆಯು ಅತ್ಯಂತ ಶ್ರೇಷ್ಠವಾದುದು. ಲಿಂಗಾರ್ಚನೆಯನ್ನು ಯಾರೇ ಮಾಡಲಿ ಅವರು ಖಂಡಿತವಾಗಿಯೂ ಸಂಸಾರಬಂಧನದಿಂದ ಮುಕ್ತರಾಗುವರು. ಲಿಂಗಾರ್ಚನೆಯಿಂದ ಲಭಿಸುವ ಪುಣ್ಯಕ್ಕೆ ಸದೃಶವಾದ ಪುಣ್ಯವು ಯಾವುದರಿಂದಲೂ ಲಭಿಸಲಾರದು. ಮುಂದೆ ಎಂದೂ ದೊರಕಲಾರದು. ॥೭೯॥

ಯಾವ ಮನುಷ್ಯನು ತನ್ನ ಮಗಳನ್ನೂ ಮೊಮ್ಮಗಳನ್ನೂ ಅವಳ ಮಗಳನ್ನೂ ಸಂಭೋಗಿಸಿ, ಬೇರೆ ಅನೇಕ ಅತ್ಯಾಚಾರಗಳನ್ನು ಮಾಡಿ ಪರಮ ಪಾಪಿಯಾಗಿದ್ದನೋ, ಅವನು ಒಂದುಸಲ ಶಿವಲಿಂಗಕ್ಕೆ ಒಂದು ಹೂವನ್ನು ಹಾಕಿದ್ದರಿಂದಲೇ ಪುಣ್ಯವಂತನಾಗಿ, ಯಮನ ನರಕಕ್ಕೆ ಹೋಗದೇ, ಕೈಲಾಸಕ್ಕೆ ಹೋದನೆಂದ ಮೇಲೆ ಶಿವಾರ್ಚನೆಯ ಪುಣ್ಯಮಹಿಮೆಯನ್ನು ಎಷ್ಟೆಂದು ಹೇಳುವುದು ? ॥೮೦॥

ಅತ್ರೇತಿಹಾಸಂ ವಕ್ಷ್ಯಂತಿ ಯೇ ಪುರಾಣವಿದೋ ಜನಾಃ ।
ಪುರಾ ಕಶ್ಚಿದ್ದರಿದ್ರೋಭೂತ್ತತ್ರ ಶ್ರೀಶೈಲಮಂಡಲೇ ॥೮೧॥

ತೇನ ಪಾಪಾಣ್ಯಪಾರಾಣಿ ದ್ವಿಜೇನಾಪಿ ಕೃತಾನಿ ಹಿ ।
ಭಿಲ್ಲಾಗಾರೇಷು ವಿಚರನ್ ಕರೋತಿ ಕಣಯಾಚನಂ ॥೮೨॥

ತೈಃ ಕಣೈರ್ಜೀವನಂ ತಸ್ಯ ಕಂಟಿಕಾರಿಫಲೈರಪಿ ।
ಫಲಾನಿ ತಾನಿ ಯತ್ನೇನ ಸಮಾನೀಯ ದಿನೇ ದಿನೇ ॥೮೩॥

ರಾಶಿಂ ಕರೋತಿ ಭಾಗ್ಯೇನ ನರ್ಮದಾಲಿಂಗಮಸ್ತಕೇ ।
ತಾನ್ಯಾನೀಯ ಸ ಪಕ್ವಾನಿ ಭಿತ್ವಾ ಪಕ್ತ್ವಾ ಪ್ರಯತ್ನತಃ ॥೮೪॥

ಈ ಶಿವಾರ್ಚನೆ ಮತ್ತು ಅದರ ಪುಣ್ಯ ಇವುಗಳ ಮಹಿಮೆಯ ವಿಷಯದಲ್ಲಿ ಮತ್ತೊಂದು ಅದ್ಭುತವಾದ ಪ್ರಾಚೀನೇತಿಹಾಸವನ್ನು ತಿಳಿದವರು ಹೇಳುವರು. ಎಲೈ ದೇವತೆಗಳಿರಾ, ಆ ಕಥೆಯನ್ನು ಹೇಳುವೆನು, ಕೇಳಿರಿ. ಹಿಂದೆ ಶ್ರೀಶೈಲ ಕ್ಷೇತ್ರದಲ್ಲಿ ಒಬ್ಬ ಅತ್ಯಂತ ದರಿದ್ರನು ವಾಸಿಸುತ್ತಿದ್ದನು. ॥೮೧॥

ಆ ದರಿದ್ರನು ತಾನು ಬ್ರಾಹ್ಮಣನಾಗಿದ್ದರೂ ಅತ್ಯಂತ ಕುತ್ಸಿತವಾದ ಪಾಪ ಕಾರ್ಯಗಳನ್ನೆಲ್ಲಾ ಮಾಡುತ್ತಿದ್ದನು. ನೀಚಜಾತಿಯವರಾದ ಭಿಲ್ಲರ ಮನೆಗಳಿಗೆಲ್ಲಾ ಹೋಗಿ ಭಿಕ್ಷೆಬೇಡಿಕೊಂಡು ಧಾನ್ಯ ಮುಂತಾದುವನ್ನು ತರುತ್ತಿದ್ದನು. ॥೮೨॥

ದರಿದ್ರನು ಹೀಗೆ ಭಿಕ್ಷವೆತ್ತಿ ತಂದ ಧಾನ್ಯಗಳನ್ನೂ, ಬೃಹತೀಫಲಗಳನ್ನೂ ತಿಂದು ಜೀವನ ನಡೆಸಿಕೊಂಡಿದ್ದನು. ತನ್ನ ಆಹಾರವನ್ನು ಸಂಗ್ರಹಿಸಲು ಹುಡುಕಿ ಹುಡುಕಿ ಬೃಹತೀಫಲಗಳನ್ನು (ಹೆಗ್ಗುಳ್ಳದ ಫಲಗಳನ್ನು) ತಂದು ಶೇಖರಿಸಿಕೊಳ್ಳುತ್ತಿದ್ದನು. ॥೮೩॥

ಅದೃಷ್ಟವಶದಿಂದ, ಆ ಬ್ರಾಹ್ಮಣನು ತಾನು ತಂದ ಬೃಹತೀ ಫಲಗಳನ್ನೆಲ್ಲಾ ರೇವಾಲಿಂಗದ ಮೇಲೆಯೇ ರಾಶಿಹಾಕಿಕೊಂಡಿರುತ್ತಿದ್ದನು. ಅವನಿಗೆ ಆ ಕಲ್ಲು ಶಿವ ಲಿಂಗವೆಂಬ ಪರಿಜ್ಞಾನವೇ ಇರಲಿಲ್ಲ. ಹೀಗೆಯೇ ನಿತ್ಯವೂ ತಂದುರಾಶಿ ಹಾಕುವನು. ಹಣ್ಣಾಗಿದ್ದುದನ್ನು ನೋಡಿ ನೋಡಿ ಆರಿಸಿ ಮುರಿದು ಬೇಯಿಸಿ ಆ ಲಿಂಗದ ಹತ್ತಿರವೇ ಇಟ್ಟುಕೊಂಡು ತಿನ್ನುವನು. ॥೮೪॥

ನರ್ಮದಾಲಿಂಗನಿಕಟೇ ಸ ಭಕ್ಷಯತಿ ಸಾದರಂ ।
ಏವಂ ಸಂವಸತಸ್ತಸ್ಯ ಪ್ರದೋಷೇ ಸಮುಪಸ್ಥಿತೇ ॥೮೫॥

ತತ್ರ ಸ್ನಾತ್ವಾ ನದೀತೀರೇ ಸ್ವೇದಾಪನಯನಾಯ ಸಃ ।
ತತಃ ಪರಂ ಯಥಾಪೂರ್ವಂ ಕಂಟಕಾರಿಫಲೈರ್ಜಲೈಃ ॥೮೬॥

ಪ್ರೋಕ್ಷಿತೈಃ ಪೂರ್ವವತ್ತತ್ರ ರಾಶಿಂ ತಾವಚ್ಚಕಾರ ಸಃ ।
ಪಶ್ಚಾದ್ದೂರ್ವಾಂಕುರೈಸ್ತಾನಿ ಛಾದಯಾಮಾಸ ಸತ್ವರಂ ॥೮೭॥

ವಿಲಂಬೇನಾದ್ಯ ತತ್ಪಾಕೋ ಮಾಸ್ತ್ವಿತ್ಯೇವ ವಿನಿಶ್ಚಯಾತ್ ।
ತತಃ ಕೃತ್ವಾ ಕಣೈರನ್ನಂ ನಾರ್ಮದಾಲಿಂಗಸನ್ನಿಧೌ ॥೮೮॥
ಶ್ರಾಂತಶ್ಚಕಾರ ಶಯನಂ ಕಾಷ್ಠೈಃ ಪ್ರಜ್ವಾಲ್ಯ ಪಾವಕಂ ।

ಇದೇ ರೀತಿಯಾಗಿ ಆ ದರಿದ್ರನು ಜೀವನ ಮಾಡಿಕೊಂಡು ಕಾಲಕಳೆಯುತ್ತಿರಲು, ಒಂದುದಿನ ಮಹಾಪ್ರದೋಷವು ಬಂದಿತು. ಪ್ರದೋಷದ ವಿಚಾರವೇನೋ ಅವನಿಗೇನೂ ತಿಳಿಯದು. ಆದರೂ ಅವನು ಅಂದು ತನ್ನ ಮೈ ಬೆವರಿ ಕೊಳೆಯಾಗಿದೆಯೆಂದು ಭಾವಿಸಿ ಅದರ ಪರಿಹಾರಕ್ಕಾಗಿ ನದಿಯಲ್ಲಿ ಸ್ನಾನಮಾಡಿ ಶುದ್ಧನಾಗಿ ಬಂದನು. ಅನಂತರ ಯಥಾಕ್ರಮವಾಗಿ ತನ್ನ ಆಹಾರ ಮತ್ತು ಜಲ ಇವುಗಳ ಸಿದ್ಧತೆಗಾಗಿ ಹವಣಿಸತೊಡಗಿದನು. ॥೮೫-೮೬॥

ಮೊದಲು ನೀರಿನಿಂದ ಆ ಸ್ಥಳವನ್ನು ಚೊಕ್ಕಟಮಾಡಿ ಅಲ್ಲಿಯೇ ಬೃಹತೀ ಫಲಗಳನ್ನು ರಾಶಿಹಾಕಿದನು. ಆ ಬೃಹತೀಫಲಗಳು ಜಾಗ್ರತೆ ಹಣ್ಣಾಗಲೆಂದು ಯೋಚಿಸಿ ಒಂದಷ್ಟು ಹುಲ್ಲನ್ನು ತಂದು ಆ ರಾಶಿಯ ಮೇಲೆ ಹಾಕಿದನು. ಅಲ್ಲಿ ರೇವಾಲಿಂಗವಿದ್ದದ್ದೇ ಅವನಿಗೆ ತಿಳಿದಿರಲಿಲ್ಲ. ಕಾಯಿಗಳನ್ನು ಬೇಗ ಹಣ್ಣುಮಾಡಿಕೊಳ್ಳಬೇಕೆಂಬ ಇಚ್ಛೆಯಿಂದ, ಮೇಲೆ, ಕೆಳಗೆ ಎಲ್ಲಾ ದೂರ್ವೆಯನ್ನು ಹಾಕಿ ಒತ್ತಿ ಇಟ್ಟನು. ॥೮೭॥

ಅನಂತರ ಅಡಿಗೆ ಮಾಡಿಕೊಳ್ಳುವ ಉದ್ದೇಶದಿಂದ ಅಲ್ಲಿಯೇ ಬೆಂಕಿಯನ್ನು ಹೊತ್ತಿಸಿಕೊಂಡು ಆ ಲಿಂಗದ ಹತ್ತಿರವೇ ಅನ್ನಮಾಡಿಟ್ಟುಕೊಂಡನು. ಆದರೆ ಅಷ್ಟುಹೊತ್ತಿಗೆ ಬಹಳ ಕೆಲಸಮಾಡಿ ಅವನಿಗೆ ಆಯಾಸವಾಗಿದ್ದುದರಿಂದ ಅಲ್ಲಿಯೇ ಸ್ವಲ್ಪಹೊತ್ತು ಮಲಗಿಕೊಂಡನು. ॥೮೮॥

ಸೋಮತ್ರಯೋದಶೀ ದೈವಾದಾರ್ದ್ರಾನಕ್ಷತ್ರಸಂಯುತಾ ॥೮೯॥

ತಸ್ಯಾಃ ಪ್ರದೋಷಸಮಯೇ ತದಾಸೀಚ್ಛಿವಪೂಜನಂ ।
ನಾಮ್ಲಾನಿ ಚ ಭವಂತ್ವದ್ಯ ಫಲಾನೀತಿ ಜಲಾನ್ವಯಃ ॥೯೦॥

ಕೃತೋ ದೂರ್ವಾನ್ವಯೋಽಪೀತಿ ನಾಸ್ಥಾ ತಸ್ಯ ಶಿವಾರ್ಚನೇ ।
ಪರಂ ತು ನಾರ್ಮದೇ ಲಿಂಗೇ ತತ್ಸರ್ವಂ ತೇನ ಕಲ್ಪಿತಂ ॥೯೧॥

ಪೂಜಾತ್ವೇನೈವ ನಿಷ್ಪನ್ನಮನ್ನಂ ನೈವೇದ್ಯತಾಂ ಗತಂ ।
ದೀಪತ್ವೇನೈವ ನಿಷ್ಪನ್ನಾ ಕಾಷ್ಠಜ್ವಾಲಾ ಮನೋಹರಾ ॥೯೨॥

ಪ್ರಣಾಮತ್ವೇನ ನಿಷ್ಪನ್ನಂ ಶಯನಂ ತಸ್ಯ ತತ್ತದಾ ।
ತಸ್ಯ ಭಾಗ್ಯವಶಾದೇವಂ ಸಂಪನ್ನಂ ಶಿವಪೂಜನಂ ॥೯೩॥

ದೈವಯೋಗದಿಂದ ಅಂದು, ಸೋಮವಾರ, ತ್ರಯೋದಶೀ, ಆರ್ದ್ರಾನಕ್ಷತ್ರ, ಇವೆಲ್ಲವೂ ಸೇರಿದ್ದುವು. ಅಲ್ಲದೇ ಅದು ಮಹಾ ಪ್ರದೋಷ ಸಮಯವೂ ಆಗಿತ್ತು. ಅಂತೂ ಅದೇಸಮಯದಲ್ಲಿ ಯಥಾ ಕಥಂಚಿತ್ ಆ ದರಿದ್ರನ ಕೈಯಿಂದ ಶಿವ ಪೂಜೆಯು ನಡೆದುಹೋಯಿತು. ||೮೯||

ಹಣ್ಣುಗಳು ಹುಳಿಯಾಗುವುದು ಬೇಡವೆಂಬ ಅಭಿಪ್ರಾಯದಿಂದ ಆ ಫಲ ರಾಶಿಯ ಮೇಲೆ ನೀರನ್ನು ಸುರಿದಿದ್ದನು. ಮತ್ತು ದೂರ್ವೆಯನ್ನು ತಂದು ಹೊದಿ ಸಿದ್ದನು. ನೀರನ್ನು ಹಾಕಿದ್ದೂ, ದೂರ್ವೆಯನ್ನು ಮುಚ್ಚಿದ್ದೂ ಅವನು ಶಿವಪೂಜೆಯ ಉದ್ದೇಶದಿಂದೇನೂ ಅಲ್ಲ. ಆದರೆ ಅವನು ಆ ಕೆಲಸಗಳನ್ನು ಅದೇ ರೇವಾಲಿಂಗದ ಮೇಲೆಯೇ ಮಾಡಿದ್ದರಿಂದ ಅದು ಪೂಜಾಕ್ರಮದಲ್ಲಿ ಸೇರಿಹೋಯಿತು. ||೯೦-೯೧||

ಅವನು ನೀರು ಹಾಕಿದ್ದು ಲಿಂಗಕ್ಕೆ ಅಭಿಷೇಕ ಮಾಡಿದಂತಾಯಿತು. ದೂರ್ವೆ ಹಾಕಿದ್ದು ಪೂಜೆಮಾಡಿದಂತಾಯಿತು. ಅನ್ನವನ್ನು ಅಲ್ಲಿಯೇ ಇಟ್ಟಿದ್ದು ನೈವೇದ್ಯ ಮಾಡಿದಂತಾಯಿತು. ಹತ್ತಿರದಲ್ಲಿ ಬೆಂಕಿಯನ್ನು ಉರಿಸಿದ್ದರಿಂದ ಅದೇ ದೀಪ ಸೇವೆಯಾಯಿತು. ||೯೨||

ಅವನು ಆಯಾಸಗೊಂಡು ಅಲ್ಲಿಯೇ ಮಲಗಿಕೊಂಡದ್ದು ಸಾಷ್ಟಾಂಗ ಪ್ರಣಾಮವನ್ನು ಮಾಡಿದಂತಾಯಿತು. ||೯೩||

ತೇನ ತುಷ್ಟೋ ಮಹಾದೇವಃ ಕರುಣಾಸಾಗರಃ ಪ್ರಭುಃ ।
ತತಃ ಪರಂ ದದರ್ಶಾಯಂ ಸ್ವಪ್ನಂ ಸರ್ವಾರ್ಥಕಾಮದಂ ॥೯೪॥

ಸ್ವಪ್ನೇ ದೂರ್ವಾರ್ಚಿತಂ ಲಿಂಗಂ ನಾರ್ಮದಂ ತದ್ದದರ್ಶ ಸಃ ।
ಫಲೈರಪ್ಯರ್ಚಿತಂ ಲಿಂಗಂ ನೈವೇದ್ಯೇನ ಸಮನ್ವಿತಂ ॥೯೫॥

ದೀಪಜ್ವಾಲಾದೀಪಿತಂ ಚ ಸ ಪಶ್ಚಾದುತ್ಥಿತಸ್ಸುರಾಃ ।
ಪರಿತೋ ರತ್ನಸದನಂ ರತ್ನಪ್ರಾಕಾರಸಂವೃತಂ ॥೯೬॥

ದಿವ್ಯಭೋಗಸಮಾಕೀರ್ಣಂ ರತ್ನಜ್ವಾಲಾವಿರಾಜಿತಂ ।
ದಿವ್ಯನಾರೀಸಮಾಕೀರ್ಣಮನ್ನರಾಶಿವಿರಾಜಿತಂ ॥೯೭॥

ಈ ರೀತಿ ತನ್ನ ಆರಾಧನೆಯು ನಡೆದಿದ್ದರಿಂದ ಪರಮೇಶ್ವರನು ಸಂತುಷ್ಟನಾದನು. ಆ ಶಂಕರನು ದಯಾಸಾಗರನಾದ್ದರಿಂದ ಆ ಪಾಪಿ ದರಿದ್ರನನ್ನು ಉದ್ಧರಿಸಲು ಪ್ರಸನ್ನನಾಗಿ ಅವನಿಗೆ ಶುಭಸೂಚಕವಾದ ಒಂದು ಸ್ವಪ್ನವನ್ನು ಅನುಗ್ರಹಿಸಿದನು. ॥೯೪॥

ಆ ದರಿದ್ರನ ಸ್ವಪ್ನದಲ್ಲಿ ಶ್ರೇಷ್ಠವಾದ ನರ್ಮದಾಲಿಂಗವು ತೋರುತ್ತಿದೆ. ತಾನು ದೂರ್ವೆಗಳಿಂದಲೂ ಹಣ್ಣುಹಂಪಲುಗಳಿಂದಲೂ ಪೂಜೆಮಾಡುತ್ತಿದ್ದಾನೆ. ನೈವೇದ್ಯವನ್ನೂ ಮಾಡಿ, ಸಾಷ್ಟಾಂಗ ಪ್ರಣಾಮಮಾಡುತ್ತಿದ್ದಾನೆ. ॥೯೫॥

ಶಿವಲಿಂಗದ ಸುತ್ತಲೂ ದೀಪವನ್ನೂ ಹಚ್ಚಿಸಿ ಇಡಲಾಗಿದೆ. ಹೀಗೆ ಅದ್ಭುತವಾಗಿರುವ ಸ್ವಪ್ನವನ್ನು ಕಂಡು ವಿಸ್ಮಯದಿಂದ ಆ ದರಿದ್ರನು ಎಚ್ಚರಗೊಂಡು, ಮೇಲಕ್ಕೆದ್ದು ಸುತ್ತಲೂ ನೋಡುತ್ತಾನೆ. ಒಂದು ರತ್ನಮಯವಾದ ಮತ್ತು ಸುಂದರವಾಗಿರುವ ಮನೆಯು ಕಾಣುತ್ತಿದೆ. ಆದರ ಸುತ್ತಲೂ ರತ್ನಮಯವಾದ ಪ್ರಾಕಾರವೂ ಇದೆ. ॥೯೬॥

ಆ ಮನೆಯಲ್ಲಿ ಸುಖಸಾಮಗ್ರಿಗಳು ತುಂಬಿವೆ. ವಜ್ರಮಯವಾದ ಅನೇಕ ಅಲಂಕಾರವಸ್ತುಗಳು ಬೇಕಾದಷ್ಟಿವೆ. ಸುಂದರಿಯರಾದ ಅನೇಕ ಸ್ತ್ರೀಯರೂ ಇದ್ದಾರೆ. ಅತ್ಯಂತ ಸ್ವಾದಿಷ್ಟವಾದ ಆಹಾರಸಾಮಗ್ರಿಗಳೂ ತುಂಬಿವೆ. ॥೯೭॥

ಗೋಕೋಟಿವೃಂದಸಂಯುಕ್ತಪುಷ್ಪಕೋಟಿಸಮನ್ವಿತಂ ।
ಗಜಕೋಟಿಸಮಾಕೀರ್ಣಂ ಭೃತ್ಯಕೋಟಿಸಮನ್ವಿತಂ ॥೯೮॥

ದಾಸೀಕೋಟಿಸಮಾಕೀರ್ಣಂ ರತ್ನಾಭರಣಮಂಡಿತಂ ।
ಇದಮತ್ಯದ್ಭುತಂ ದೃಷ್ಟ್ವಾ ಪ್ರಹೃಷ್ಟೋ ವಿಸ್ಮಯಂ ಗತಃ ॥೯೯॥

ದಿವ್ಯನಾರೀಮುಖಂ ದೃಷ್ಟ್ವಾ ಬಭಾಷೇ ವಚನಂ ಮುದಾ ।
ಕಾಸಿ ತ್ವಂ ಚಂಚಲಾಪಾಂಗಿ ಕಮಲಾಮಲಲೋಚನೇ ॥೧೦೦॥

ಕಸ್ಯಾಂಗನಾಸಿ ಸದನಂ ಕಸ್ಯೇದಂ ಮಣಿಮಂದಿರಂ ।
ಅಶ್ವಾಃ ಕಸ್ಯ ಗಜಾಃ ಕಸ್ಯ ದಾಸಾಃ ಕಸ್ಯ ವರಾನನೇ ॥೧೦೧॥

ಏತಾದೃಶಂ ಮಹಾಭಾಗ್ಯಂ ಕಸ್ಯ ಪುಣ್ಯಾತ್ಮನಸ್ಯ ವಾ ।
ತ್ವಯಾ ಕಿಮಾಗತಂ ಭವ್ಯೇ ಮತ್ಪಾರ್ಶ್ವಮತಿಸುಂದರಿ ॥೧೦೨॥

ದಿವ್ಯಚಾಮರವಾತೇನ ಮಾಂ ತೋಷಯಸಿ ಸಾದರಂ ।
ಪ್ರತಿಕ್ಷಣಂ ಶರೀರಂ ಮೇ ನವನೀವ ಪ್ರಜಾಯತೇ ॥೧೦೩॥

ಆ ಮನೆಯಲ್ಲಿ ಕೋಟ್ಯಂತರ ಹಸುಗಳಿವೆ. ಅಲ್ಲದೇ ಅಶ್ವಗಳು, ಗಜಗಳು ಸೇವಕರೂ ಬೇಕಾದಷ್ಟು ನೆರೆದುಹೋಗಿವೆ. ॥೯೮॥

ಅನೇಕ ಜನ ದಾಸಿಯರೂ ಇದ್ದಾರೆ. ಅಪಾರ ರತ್ನಾಭರಣಗಳೂ ರಂಜಿಸುತ್ತಿವೆ. ಈ ಅದ್ಭುತಗಳನ್ನು ನೋಡಿ ಆ ದರಿದ್ರನು ಅತ್ಯಾಶ್ಚರ್ಯಪಟ್ಟನು. ಮತ್ತು ಅತ್ಯಂತ ಸಂತೋಷಪಟ್ಟನು. ॥೯೯॥

ಅಲ್ಲಿ ದಿವ್ಯಸುಂದರಿಯೊಬ್ಬಳನ್ನು ನೋಡಿ ಸಂತೋಷದಿಂದ ಹೀಗೆ ಮಾತನಾಡಿಸಿದನು. ಎಲೌ ಚಂಚಲಾಕ್ಷಿ, ನೀನು ಯಾರು? ನಿನ್ನ ಪುರುಷನು ಯಾರು? ಈ ಮಣಿಮಂದಿರವು ಯಾರದ್ದು? ಈ ದಾಸದಾಸಿಯರು, ಅಶ್ವಗಳು, ಗಜಗಳು, ಇವೆಲ್ಲಾ ಯಾರವು? ಇಷ್ಟು ವೈಭವವನ್ನು ಯಾವ ಪುಣ್ಯಾತ್ಮನು ಪಡೆದುಕೊಂಡಿರುವನು? ಎಲೌ ಸುಂದರೀ, ನೀನು ನನ್ನ ಪಾರ್ಶ್ವದಲ್ಲಿ ಏತಕ್ಕೆ ನಿಂತಿರುವೆ? ॥೧೦೦-೧೦೧-೧೦೨॥

ದಿವ್ಯವಾದ ಚಾಮರದಿಂದ ಬೀಸುತ್ತಾ ಏತಕ್ಕೆ ಆದರಿಸುವೆ? ಹಾಗೂ

ಸೌಂದರ್ಯವೃದ್ಧಿರಪ್ಯಸ್ಯ ನವಮೇವ ಪ್ರತಿಕ್ಷಣಂ ।
ಇತಿ ತದ್ವಚನಂ ಶ್ರುತ್ವಾ ಸಾ ತಮಾಹ ಮನೋಹರಾ ॥೧೦೪॥

ಸಂಪಾದಯಂತೀತಿ ಚಿತ್ತೇ ಪರಮಾನಂದಸಾಗರಂ ।
ಭಾಗ್ಯಾಧಿದೇವತಾ ಸಾಹಂ ಪ್ರೇಷಿತಾ ಶಂಕರೇಣ ಹಿ ॥೧೦೫॥

ತ್ವತ್ಸೇವಾರ್ಥಂ ನಿಯುಕ್ತಾಸ್ಮಿ ಮತ್ತುಲ್ಯಾಸ್ಸಂತಿ ಕೋಟಿಶಃ ।
ತ್ವಯಾದ್ಯ ನಾರ್ಮದೇ ಲಿಂಗೇ ಪ್ರದೋಷಸಮಯೇ ಶಿವಃ ॥೧೦೬॥

ಜಲೈಸ್ಸಮರ್ಚಿತಶ್ಶುದ್ಧೈಃ ಕಂಟಕಾರಿಫಲೈರಪಿ ।
ದೂರ್ವಾಂಕುರೈಶ್ಚ ದೀಪೈಶ್ಚ ನೈವೇದ್ಯೇನಾಪಿ ಪೂಜಿತಃ ॥೧೦೭॥

ಇದೇನು ನನ್ನ ಶರೀರದಲ್ಲಿ ನೂತನತೆಯೂ ತಾರುಣ್ಯವೂ ಅಭಿವೃದ್ಧವಾಗುತ್ತಿದೆ ಯಲ್ಲಾ! ॥೧೦೩॥

ನನ್ನ ಶರೀರವು ಇದೇನು ಹೊಸ ಹೊಸದಾದ ಸೌಂದರ್ಯವನ್ನು ಪಡೆಯು ತ್ತಿದೆ? ಹೀಗೆಂದು ವಿಸ್ಮಯದಿಂದ ಅವನು ಪ್ರಶ್ನೆಮಾಡಲು ಆ ಸ್ತ್ರೀಯು ಹೀಗೆ ಹೇಳಿದಳು. ॥೧೦೪॥

ನಾನು ಭಾಗ್ಯದೇವತೆಯು. ನಿನ್ನಮೇಲೆ ಪ್ರಸನ್ನನಾದ ಪರಮೇಶ್ವರನು ನಿನ್ನ ಸೇವೆ ಮಾಡಿ ಸಂತೋಷಗೊಳಿಸಬೇಕೆಂದು ನನ್ನನ್ನು ಕಳುಹಿಸಿರುವನು. ॥೧೦೫॥

ನಿನ್ನ ಸೇವೆಯನ್ನು ಮಾಡಬೇಕೆಂದೇ ನನಗೆ ಅಪ್ಪಣೆ ಆಗಿರುವುದು. ಅಲ್ಲದೆ ನನ್ನಂತೆಯೇ ಇನ್ನೂ ಅನೇಕ ಸ್ತ್ರೀ ಪುರುಷರು ನಿನ್ನ ಸೇವೆಗಾಗಿಯೇ ಇಲ್ಲಿ ಸಿದ್ಧರಾಗಿರುವರು. ಅದಕ್ಕೆ ಕಾರಣವೇನೆಂದರೆ — ನೀನು ಇಂದು ಸೋಮಪ್ರದೋಷ ಸಮಯದಲ್ಲಿ ನರ್ಮದಾಲಿಂಗವನ್ನು ಪೂಜಿಸಿದ್ದೀಯೆ. ॥೧೦೬॥

ಅಂತಹ ಪುಣ್ಯಸಮಯದಲ್ಲಿ ನೀನು ಶುದ್ಧವಾದ ಜಲದಿಂದಲೂ, ಬೃಹತೀ ಫಲಗಳಿಂದಲೂ, ದೂರ್ವಾಪತ್ರಗಳಿಂದಲೂ ಪೂಜಿಸಿ, ದೀಪ, ನೈವೇದ್ಯಮುಂತಾದವು ಗಳನ್ನೂ ಅರ್ಪಿಸಿದ್ದೀಯೆ. ॥೧೦೭॥

ಪ್ರಣಾಮೇನಾಪಿ ಸಮಯಸ್ತೋಽಯಂ ಪುಣ್ಯತಮಃ ಸ್ಮೃತಃ ।
ಏತಾದೃಶೋ ಮಹಾಯೋಗೋ ದುರ್ಲಭೋ ದೇಹಿನಾಮತಃ ॥೧೦೮॥

ಅಸ್ಮಿನ್ ಯೋಗೇ ಪೂಜಿತೋತ್ರ ತುಷ್ಟೋ ಭವತಿ ಶಂಕರಃ ।
ಶಿವದೇವೇಷು ಭಾಗ್ಯೇಷು ಭಾಗ್ಯಮಲ್ಪಮಿದಂ ತ್ವಯಾ ॥೧೦೯॥

ಪ್ರಾಪ್ತಂ ಪ್ರಾಪ್ತವ್ಯಮಗ್ರೇ ತು ಭಾಗ್ಯಂ ಸಂಖ್ಯಾವಿವರ್ಜಿತಂ ॥೧೧೦॥

ಅಗಣಿತಮಹಿಮಾಯಂ ದೇವದೇವೋ ಮಹೇಶಃ
ಗಿರಿವರತನಯಾಂಗಾಲಿಂಗಿತೋ ಮಂಗಲಾನಿ ।
ವಿತರತಿ ಬಹುಕಾಲಾನಂದಯೋಗ್ಯಾನಿ ನಿತ್ಯಂ
ಶಿವವಿಭವಮಹಾಬ್ಧಿಪ್ರಾತಸಂಖ್ಯಾ ನ ನೂನಂ ॥೧೧೧॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಸೋಮಪ್ರದೋಷಪೂಜಾಫಲನಿರೂಪಣಂ ನಾಮ
ಏಕತ್ರಿಂಶೋಽಧ್ಯಾಯಃ

ನೀನು ಲಿಂಗಕ್ಕೆ ಪೂಜೆಯನ್ನು ಮಾಡಿದ್ದಲ್ಲದೇ ಕೊನೆಗೆ ಸಾಷ್ಟಾಂಗ ಪ್ರಣಾಮವನ್ನೂ ಮಾಡಿದ್ದೀಯೆ. ನೀನು ಪೂಜೆಮಾಡಿದ ಸಮಯವು ಅತ್ಯಮೋಘವಾದುದು. ಈ ಎಲ್ಲ ಯೋಗವೂ ಸಾಮಾನ್ಯ ಜನರಿಗೆ ಸಿಕ್ಕತಕ್ಕದ್ದಲ್ಲ. ॥೧೦೮॥

ಹೀಗೆ ಒಂದೇ ಸಮಯದಲ್ಲಿ, ಸೋಮವಾರ, ತ್ರಯೋದಶಿ, ಆರ್ದ್ರಾನಕ್ಷತ್ರ ಮತ್ತು ಪ್ರದೋಷಕಾಲ ಇಷ್ಟು ಕೂಡಿರುವುದು ದುರ್ಲಭ. ಇಂತಹ ಯೋಗದಲ್ಲಿ ಆರಾಧನೆ ಮಾಡಿದರೆ ಶಂಕರನು ಅತ್ಯಂತ ಪ್ರಸನ್ನನಾಗುವನು. ಆದುದರಿಂದ ನಿನ್ನನ್ನು ಆತನೇ ಅನುಗ್ರಹಿಸಿರುವನು. ಈ ನಿನ್ನ ವೈಭವವು ಆ ಅನುಗ್ರಹದ ಲೇಶಮಾತ್ರವಾಗಿದೆ. ॥೧೦೯॥

ಈಗ ಎಲ್ಲಿಯೋ ಸ್ವಲ್ಪ ಸುಖ ಸೌಭಾಗ್ಯವನ್ನು ಅನುಭವಿಸಲು ತೊಡಗಿರುವೆ. ಇನ್ನೂ ಮುಂದೆ ಇದಕ್ಕಿಂತಲೂ ಎಷ್ಟೋಪಾಲು ಹೆಚ್ಚು ಸುಖವನ್ನು ನೀನು ಅನುಭವಿಸತಕ್ಕವನಿದ್ದೀಯೆ. ॥೧೧೦॥

ಆ ಪರಮೇಶ್ವರನ ಅನುಗ್ರಹದ ಮಹಿಮೆಯನ್ನೇನು ಹೇಳಲಿ! ಎಷ್ಟು ಹೇಳಿದರೂ ತೀರುವುದಿಲ್ಲ. ಶಿವಪೂಜಾಪುಣ್ಯದಿಂದ ಲಭಿಸಿದ ಸಂಪತ್ತೆಂಬ ಸಮುದ್ರ

ಸ್ತೋಮಕ್ಕೆ ಎಣಿಕೆಯೇ ಇಲ್ಲ. ಕೊನೆಯೂ ಇಲ್ಲ. ಏಕೆಂದರೆ ಆ ಶಂಕರನು ಅಂತಹ ಮಹಾ ಪರಮ ದೈವವಾಗಿದ್ದಾನೆ. ಅವನ ಮಹಿಮೆಯನ್ನು ಸಂಪೂರ್ಣವಾಗಿ ಕಂಡವರೇ ಇಲ್ಲ. ಆತನೇ ಸಮಸ್ತದೇವತೆಗಳಿಗೂ ದೇವನಾಗಿರುವನು. ಅವನು ಮಹಾದೇವಿಯಾದ ಗಿರಿಜೆಯ ಸಾಕ್ಷಾತ್ ವಲ್ಲಭನೇ ಆಗಿದ್ದಾನೆ. ಇಂಥ ಪರಮ ದೈವವಾಗಿರುವುರಿಂದಲೇ ಪರಮೇಶ್ವರನು ಎಂದೂ ಅನುಭವದಿಂದ ಮುಗಿಯದ ಸುಖವನ್ನೂ ಮಂಗಳವನ್ನೂ ಕೊಡುವನು. ಈ ಸುಖವು ಅನೇಕಕಾಲ ಸ್ಥಿರವಾಗಿ ಇರುವುದಾದ್ದರಿಂದ ಯಥೇಷ್ಟವಾಗಿ ಆನಂದವನ್ನು ಅನುಭವಿಸಬಹುದು. ಎಂದು ಹೇಳುತ್ತಾ ಆ ಭಕ್ತನಿಗೆ ಆನಂದವನ್ನುಂಟುಮಾಡಿದಳು. ||೧೧೧||

ಇಲ್ಲಿಗೆ ಶ್ರೀ ಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ
ಸೋಮಪ್ರದೋಷಪೂಜಾಫಲನಿರೂಪಣವೆಂಬ
ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ದ್ವಾತ್ರಿಂಶೋಽಧ್ಯಾಯಃ

|| ನಂದಿಕೇಶ್ವರ ಉವಾಚ ||

ಇತ್ಯಾಕರ್ಣ್ಯ ವಚಸ್ತಸ್ಯಾಸ್ತಾಂ ಪ್ರಣಮ್ಯಾತಿಭಕ್ತಿತಃ ।
ಆನಂದಧಾರಾಸಂಕ್ರಾಂತೋ ಬಭಾಷೇ ವಚನಂ ಮುದಾ ॥೧॥

ಕಿಯತ್ಕಾಲಮಿದಂ ಭಾಗ್ಯಂ ದೇಪಿ ಮದ್ವಶಮೇಷ್ಯತಿ ।
ಶಂಕರಸ್ಯ ಪ್ರಸಾದೋಽಯಂ ಮಯಿ ಜಾತಃ ಕಥಂ ವದ ॥೨॥

ಇತ್ಯುಕ್ತಂ ತದ್ವಚಶ್ಶ್ರುತ್ವಾ ಬಭಾಷೇ ಸಾ ಮನೋರಮಾ ।
ರಮಾರಮಣನೇತ್ರಾಬ್ಜಪೂಜ್ಯಾಂಘ್ರಿಸ್ಮರಣೋದ್ಯತಾ ॥೩॥

ಮೂವತ್ತೆರಡನೆಯ ಅಧ್ಯಾಯ

ಹಾಗೆ ಹೇಳಿದ ಭಾಗ್ಯಾಧಿದೇವತೆಯ ಮಾತನ್ನು ಕೇಳಿ ಆ ದರಿದ್ರನು ಆಕೆಗೆ ಅತ್ಯಂತ ಭಕ್ತಿಯಿಂದ ನಮಸ್ಕರಿಸಿದನು. ಆ ವಿಧವಾದ ಅನುಗ್ರಹಲಾಭದಿಂದ ಅವನಿಗೆ ಅತ್ಯಂತ ಆನಂದವಾಯಿತು. ಆಗ ಅವನು ಸಂತೋಷದಿಂದ ನಗುತ್ತಾ ಹೀಗೆಂದನು. ||೧||

"ಎಲೌ ಭಾಗ್ಯಾಧಿದೇವತೆಯೇ, ಈ ಎಲ್ಲಾ ಸೌಭಾಗ್ಯಗಳನ್ನೂ ನಾನು ಎಷ್ಟು ದಿವಸ ಅನುಭವಿಸುತ್ತೇನೆ? ಪರಮೇಶ್ವರನ ಇಷ್ಟೊಂದು ಅನುಗ್ರಹವು ನನ್ನ ಮೇಲೆ ಏಕಾಯಿತು ಹೇಳು" ||೨||

ಎಂಬ ಆತನ ಪ್ರಶ್ನೆಯನ್ನು ಕೇಳಿದ ಕೂಡಲೇ ಆಕೆಗೆ ಶಿವಲಿಂಗದ ಪೂಜೆ, ಧ್ಯಾನ ಮುಂತಾದುವೆಲ್ಲಾ ಸ್ಮರಣೆಗೆ ಬಂದವು. ಪರಮೇಶ್ವರನು ಮಹಾಮಹಿಮನು

ಸಂಪಾದಯಂತೀ ಬಹುಧಾ ವಿಸ್ಮಯಂ ಸುಸ್ಮಿತಾನನಾ ।
ಶಿವಲಿಂಗಾರ್ಚನಧ್ಯಾನಸ್ಪರ್ಶನಸ್ಮರಣೋತ್ಸುಕಾ ॥೪॥

ತ್ವಯಾ ಯದ್ಯಪಿ ಪೂಜಾಯಾಃ ಸ್ವರೂಪಂ ವಿದಿತಂ ನ ತು ।
ತಥಾಪಿ ಕೃಪಯಾ ಶಂಭೋಃ ಕೃತಾರ್ಥೋಽಸಿ ನ ಸಂಶಯಃ ॥೫॥

ಕಂಟಕಾರಿಫಲಾನಾಂ ತು ರಕ್ಷಣಾಯ ಫಲಂ ತೃಣೈಃ ।
ಆಚ್ಛಾದನಂ ಕೃತಂ ಸಾಯಂ ತಜ್ಜಾತಂ ಶಿವಪೂಜನಂ ॥೬॥

ತದಿದಂ ಲಿಂಗಮುತ್ಕೃಷ್ಟಂ ಕ್ಷೇತ್ರಮುಪ್ಯುತ್ತಮೋತ್ತಮಂ ।
ಕಾಲೋಽಪಿ ಸೋಽಯಮುತ್ಕೃಷ್ಟಶ್ಶಿವಪೂಜನಸಾಧನಂ ॥೭॥

ಆತನನ್ನು ಪೂಜಿಸಲು ಲಕ್ಷ್ಮೀರಮಣನು ತನ್ನ ಕಣ್ಣುಗಳನ್ನೇ ಕಮಲಗಳನ್ನಾಗಿ ಮಾಡಿಕೊಂಡನು. ಹೀಗೆಂದು ಸ್ಮರಿಸುತ್ತಾ ಮಂದಹಾಸದಿಂದ ಉತ್ತರ ಹೇಳಿದಳು. ॥೩-೪॥

ಎಲೈ ಬ್ರಾಹ್ಮಣನೇ, ಯದ್ಯಪಿ ನೀನೇನೂ ಶಿವಪೂಜೆಯ ಸ್ವರೂಪವನ್ನು ತಿಳಿದುಕೊಂಡಿರಲಿಲ್ಲ. ಅಥವಾ ಪೂಜೆಯನ್ನು ಆಸಕ್ತಿಯಿಂದಲೂ ಮಾಡಲಿಲ್ಲ. ಆದರೂ ನಿನ್ನ ಕೈಯಿಂದ ಹೇಗೋ ಪೂಜೆ ನಡೆದಮಾತ್ರದಿಂದಲೇ ಪರಮೇಶ್ವರನ ಕೃಪೆಯಿಂದ ಖಂಡಿತವಾಗಿಯೂ ನೀನು ಕೃತಾರ್ಥನಾಗಿರುವೆ. ॥೫॥

ನೀನು ಬೃಹತೀಫಲಗಳನ್ನು ರಕ್ಷಣೆಮಾಡುವ ಉದ್ದೇಶದಿಂದ, ಮತ್ತು ಕಾಯಿಗಳು ಜಾಗ್ರತೆಯಾಗಿ ಮಾಗಿ ಹಣ್ಣಾಗಲೆಂಬ ಆಸೆಯಿಂದ, ಆ ಕಾಯಿರಾಶಿಯ ಮೇಲೆ ಹುಲ್ಲನ್ನು ತಂದು ಮುಚ್ಚಿದೆ. ಅದೇ ನಿನ್ನ ಅದೃಷ್ಟದಿಂದ ಶಿವಪೂಜೆಯಾಗಿ ಪರಿಣಮಿಸಿತು. ॥೬॥

ನಿನ್ನ ಬೃಹತೀಕಾಯಿಗಳ ಕೆಳಗಡೆ ಇದ್ದ ಲಿಂಗವು ಬಹಳ ಶ್ರೇಷ್ಠವಾದ ರೇವಾಲಿಂಗವೇ ಆಗಿದ್ದಿತು. ಆ ಕ್ಷೇತ್ರವೂ ಅತ್ಯುತ್ತಮವಾದದ್ದು. ದೈವಯೋಗ ದಿಂದ ನೀನು ಲಿಂಗಕ್ಕೆ ಮಾಡಿದ ಪೂಜೆಯಸಮಯದಲ್ಲಿ ಶಿವಪೂಜೆಗೆ ಪ್ರಶಸ್ತವಾದ ಯೋಗಾವಳಿಯೂ ಒದಗಿದ್ದಿತು. ॥೭॥

ಮಹಾದೇವಸ್ಸಭಗವಾನ್ ದೀನವತ್ಸಲ ಇತ್ಯತಃ ।
ನಿಮಿತ್ತಂ ಕಿಂಚಿದಾಲೋಕ್ಯ ದದೌ ಭಾಗ್ಯಮನುತ್ತಮಂ ॥೮॥

ಏತಸ್ಮಿನ್ ಸಮಯೇ ಭಕ್ತ್ಯಾ ಜ್ಞಾತ್ವಾ ಲಿಂಗಾರ್ಚನವ್ರತಂ ।
ಕರೋತಿ ಪೂಜಾಂ ಯೋ ಮರ್ತ್ಯಸ್ಸ ಸಾಕ್ಷಾದೀಶ್ವರೋ ಭವೇತ್ ॥೯॥

ಏತಾದೃಶಃ ಪುಣ್ಯಕಾಲೋ ದುರ್ಲಭಃ ಖಲು ದೇಹಿನಾಂ ।
ದುರ್ಲಭಂ ಚ ಭವೇದೇವ ಮಹಾದೇವಾರ್ಚನಂ ಪರಂ ॥೧೦॥

ಅಜ್ಞಾತ್ವಾ ವಿವಿಧಂ ಯಸ್ತು ಕರೋತಿ ಶಿವಪೂಜನಂ ।
ತತ್ಕಾಮದಂ ಭವತ್ಯೇವ ಜ್ಞಾತಂ ಚೇತ್ಕಿಂ ವದಾಧುನಾ ॥೧೧॥

ಆ ಪರಮೇಶ್ವರನು ಅತ್ಯುದಾರನೂ ದೀನಜನವತ್ಸಲನೂ ಆಗಿರುವುದರಿಂದ ಯಥಾಕಥಂಚಿತ್ ನೆರವೇರಿಸಿದ ಆ ಪೂಜೆಯನ್ನೇ ದೊಡ್ಡದೆಂದು ಭಾವಿಸಿ ನಿನಗೆ ಅತ್ಯಂತ ಸೌಭಾಗ್ಯವನ್ನೂ ಅಪಾರ ಸಂಪತ್ತನ್ನೂ ಕರುಣಿಸಿರುವನು. ||೮||

ಹೀಗೆ ಪರಮೇಶ್ವರನ ಪೂಜೆಯ ಮಹಿಮೆಯನ್ನೂ, ಯೋಗಾವಳಿಯಿಂದ ಕೂಡಿದ ಕಾಲವಿಶೇಷದ ಶ್ರೇಷ್ಠತೆಯನ್ನೂ ಪರ್ಯಾಲೋಚಿಸಿ, ಯಾವ ಮನುಷ್ಯನು ಆಸಕ್ತಿಯಿಂದ ಲಿಂಗಾರ್ಚನೆಯ ಮೂಲಕ ಪರಮೇಶ್ವರನನ್ನು ಆರಾಧಿಸುತ್ತಾನೆಯೋ ಆತನು ಸಾಕ್ಷಾತ್ ಈಶ್ವರನೇ ಆಗುವನು. ||೯||

ನೀನು ಯಾವ ಯೋಗಾವಳಿಯ ಕಾಲದಲ್ಲಿ ಲಿಂಗಾರ್ಚನೆಯನ್ನು ಮಾಡಿರುವೆಯೋ ಅಂಥ ಸಮಯವು ಸಾಮಾನ್ಯಜನರಿಗೆ ಸುಲಭವಾಗಿ ಸಿಕ್ಕತಕ್ಕುದಲ್ಲ. ಮಾನವ ಶರೀರವು ಕ್ಷಣಭಂಗುರವಾದದ್ದು. ಅನೇಕ ವಿಘ್ನಗಳಿಂದಲೂ ಕಂಟಕಗಳಿಂದಲೂ ತುಂಬಿಕೊಂಡಿರುತ್ತದೆ. ಹೀಗಿರಲು ಪ್ರಶಸ್ತವಾದ ಕಾಲದಲ್ಲಿ ಶಿವಪೂಜೆ ನಡೆಯುವುದು ಅತ್ಯಂತ ಅಮೋಘವಾದುದಲ್ಲವೇ ! ||೧೦||

ಶಿವಪೂಜಾವಿಧಿಯನ್ನು ತಿಳಿಯದೇ, ಹೇಗೆ ಮಾಡಿದರೂ ಶಿವಪೂಜೆಯು ಸಕಲ ಪುರುಷಾರ್ಥಗಳನ್ನೂ ಸಿದ್ಧಪಡಿಸಿಕೊಡುತ್ತದೆ. ಅಂದಮೇಲೆ ಆ ಪೂಜೆಯ ಮರ್ಮಗಳನ್ನು ತಿಳಿದುಕೊಂಡು ಶಿವಪೂಜೆಯನ್ನು ಮಾಡಿದರೆ ಅದರ ಫಲವನ್ನು ಎಷ್ಟೆಂದು ಹೇಳುವುದು ? ||೧೧||

ಅತಃ ಪರಂ ಪ್ರಮಾದೇನ ವಿನಾ ಶಂಕರಪೂಜನಂ ।
ಕುರು ಭಾಗ್ಯಮಿದಂ ತೇನ ಸ್ಥಿರಂ ತವ ಭವಿಷ್ಯತಿ ॥೧೨॥

ಯಸ್ಮಿನ್ ದಿನೇ ಪ್ರಮಾದಸ್ತೇ ಭವಿಷ್ಯತಿ ಶಿವಾರ್ಚನೇ ।
ತಸ್ಮಿನ್ನೇವ ದಿನೇ ಭಾಗ್ಯಮೇತದನ್ಯತ್ರ ಯಾಸ್ಯತಿ ॥೧೩॥

ಭಾಗ್ಯಾಂಗನಾಸ್ತು ಸತತಂ ಶಿವಪೂಜನತತ್ಪರಾನ್ ।
ವಿಚಾರ್ಯ ಸಂಚರಂತೀತಿ ಪ್ರಮಾದೋ ಮಾಸ್ತು ಸರ್ವಥಾ ॥೧೪॥

ಯಾದೃಶಸ್ತಾದೃಶೋ ವಾಸ್ತು ಶಿವಾರಾಧನತತ್ಪರಃ ।
ತಂ ತಾವದನುಸೃತ್ಯೈವ ಭಾಗ್ಯಂ ತಿಷ್ಠತಿ ಕೇವಲಂ ॥೧೫॥

ಎಲೈ ಬ್ರಾಹ್ಮಣನೇ! ಶಿವಪೂಜಾಮಹಿಮೆಯು ಇಷ್ಟು ಮಹತ್ತರವಾದುದು. ಇನ್ನುಮುಂದಕ್ಕಾದರೂ ಶಿವಪೂಜೆಯನ್ನು ಚೆನ್ನಾಗಿ ಅರಿತುಕೊಂಡು ಮಾಡು. ಶಿವಪೂಜೆಯನ್ನು ಯಾವ ಕೊರತೆಯೂ ಇಲ್ಲದಂತೆ ನೀನು ಮಾಡುತ್ತ ಬಂದರೆ ಈ ನಿನ್ನ ಭಾಗ್ಯವು ಸ್ಥಿರವಾಗಿ ನಿಲ್ಲುವುದು. ॥೧೨॥

ಯಾವ ದಿನ ನಿನ್ನ ಶಿವಪೂಜೆಯು ಯಾವ ವಿಘ್ನವೂ ಇಲ್ಲದೇ ಸಮಗ್ರವಾಗಿ ನಡೆಯುವುದಿಲ್ಲವೋ, ಯಾವದಿನದಲ್ಲಿ ನಿನಗೆ ಶಿವಪೂಜಾವಿಷಯದಲ್ಲಿ ಅನಾದರ ಹುಟ್ಟುವುದೋ ಆ ದಿನವೇ ಈ ನಿನ್ನ ಸಕಲ ಸಂಪತ್ತುಗಳೂ ಮಾಯವಾಗುವುವು. ॥೧೩॥

ಭಾಗ್ಯದೇವತೆಗಳು ಶಿವಪೂಜಾತತ್ಪರರಾದ ಜನರಲ್ಲಿ ಮಾತ್ರವೇ ಸೇರಿಕೊಳ್ಳುತ್ತಾರೆ. ಈ ಎಲ್ಲಾ ವಿಷಯಗಳ ಮಹತ್ವವನ್ನೂ ಚೆನ್ನಾಗಿ ತಿಳಿದುಕೊಂಡು, ಶಿವಪೂಜೆಯನ್ನು ಭಕ್ತಿಶ್ರದ್ಧೆಗಳಿಂದ ತಪ್ಪದೇ ಮಾಡು. ಪೂಜೆಯನ್ನು ಎಂದೂ ಮರೆಯಬೇಡ. ॥೧೪॥

ಪರಶಿವಭಕ್ತನು ಹೇಗೇ ಇರಲಿ, ಯಾವ ಜಾತಿಯವನೇ ಆಗಿರಲಿ, ಯಾವ ಸ್ಥಿತಿಯಲ್ಲೇ ಇರಲಿ, ಭಾಗ್ಯಗಳು ಆತನನ್ನೇ ಅನುಸರಿಸಿಕೊಂಡು ಅವನಲ್ಲಿ ಸೇರಿಕೊಳ್ಳುತ್ತವೆ. ॥೧೫॥

ಭಾಗ್ಯಾಂಗನಾವಿಹಾರಸ್ಯ ಸ್ಥಲಂ ಶಂಕರಮಂದಿರಂ ।
ತದ್ವಿಹಾಯ ನ ಕುತ್ರಾಪಿ ಯಾಂತಿ ಭಾಗ್ಯಾಧಿದೇವತಾಃ ॥೧೬॥

ಯಥಾ ಧನಿಕಮಾಲೋಕ್ಯ ಯಾತಿ ವಾರಾಂಗನಾ ತಥಾ ।
ಹಾರಂ ವಿಲೋಕ್ಯ ಭಾಗ್ಯಾನಿ ಸವಿಹಾರಾಣಿ ಯಾಂತಿ ತಂ ॥೧೭॥

ಭಾಗ್ಯಾಂಗನಾಮಂದಿರಂ ತು ಮನ್ಯೇ ಶಾಂಕರಮಂದಿರಂ ।
ಅತಶ್ಶಾಂಕರತಾಂ ಪ್ರಾಪ್ಯ ಕುರು ಶಾಂಕರಪೂಜನಂ ॥೧೮॥

ಅಕುಲೀನಃ ಕುಲೀನೋ ವಾ ಜ್ಞಾನೀ ವಾ ಜ್ಞಾನವರ್ಜಿತಃ ।
ಶಿವಾರಾಧನಮಾತ್ರೇಣ ಭವೇದ್ಭಾಗ್ಯಾಂಗನಾಪತಿಃ ॥೧೯॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಂ ।
ಶಿವಪೂಜಾರತ್ನತತ್ತ್ವಜ್ಞಾನರಾಶಿವಿಜೃಂಭಿತಂ ॥೨೦॥

ಭಾಗ್ಯಾಧಿದೇವತೆಯಾದ ಲಕ್ಷ್ಮಿಗೆ ವಿಹಾರಸ್ಥಾನವು ಶಿವಮಂದಿರವೇ. ಅಲ್ಲಿಯೇ ಭಾಗ್ಯವು ಅಧಿವಾಸಮಾಡಿಕೊಂಡಿರುವುದು. ಭಾಗ್ಯವು ಶಿವಮಂದಿರವನ್ನು ಬಿಟ್ಟು ಮತ್ತೆಲ್ಲಿಗೂ ಹೋಗುವುದಿಲ್ಲ. ॥೧೬॥

ವೇಶ್ಯಾಸ್ತ್ರೀಯು ಶ್ರೀಮಂತನಲ್ಲಿ ಮಾತ್ರವೇ ಅನುರಕ್ತಳಾಗುವಳು ಧನಿಕನಿಗೆ ಆದರ ತೋರುವಳು. ದರಿದ್ರನನ್ನು ಕಣ್ಣೆತ್ತಿ ನೋಡುವುದೂ ಇಲ್ಲ. ಹಾಗೆಯೇ ಭಾಗ್ಯಗಳೂ ಸಹ ಈಶಭಕ್ತನನ್ನು ಮಾತ್ರವೇ ಸೇರುವುವು. ಶಿವಾನುರಾಗಿಯಲ್ಲಿ ತನ್ನ ವಿಶಿಷ್ಟಪರಿವಾರದೊಡನೆ ನೆಲಸುವುವು. ॥೧೭॥

ಶಿವಾಲಯವೂ, ಶಿವಭಕ್ತರ ಗೃಹವೂ, ಭಾಗ್ಯದ ಆವಾಸಸ್ಥಾನವೆನಿಸಿರುವುದು. ಆದುದರಿಂದ ಎಲೈ ಬ್ರಾಹ್ಮಣನೇ ! ನೀನು ಸದಾ ಶಿವಭಕ್ತನಾಗಿರು. ಸದಾ ಶಿವಾರ್ಚನೆಯನ್ನು ಮಾಡು. ॥೧೮॥

ಸತ್ಕುಲಪ್ರಸೂತನೇ ಆಗಿರಲಿ, ದುಷ್ಕುಲಪ್ರಸೂತನೇ ಆಗಿರಲಿ, ಜ್ಞಾನಿಯಾಗಿರಲಿ, ಅಜ್ಞಾನಿಯಾಗಿರಲಿ, ಯಾವನಾದರೂ ಸಹ ಶಿವಪೂಜಾಮಂತ್ರದಿಂದ ಭಾಗ್ಯಾಂಗನೆಗೆ ಅಧಿಪತಿಯೇ ಆಗುವನು. ॥೧೯॥

ಈ ಶಿವಪೂಜೆಯ ಮಹಿಮೆಯನ್ನು ಕುರಿತು ಮತ್ತೊಂದು ಪುರಾತನವಾದ ಇತಿಹಾಸವನ್ನು ಹಿರಿಯರು ಹೇಳುವರು. ಆ ಇತಿಹಾಸವು ಶಿವಪೂಜಾತತ್ವವನ್ನು ಚೆನ್ನಾಗಿ ಪ್ರತಿಪಾದಿಸುವುದು. ॥೨೦॥

ಪುರಾ ಕಶ್ಚಿದಭೂದ್ರಾಜಾ ಸರ್ವಭಾಗ್ಯಸಮನ್ವಿತಃ ।
ಧನಧಾನ್ಯಾದಿಸಂಪೂರ್ಣಂ ಮಂದಿರಂ ತಸ್ಯ ಸರ್ವದಾ ॥೨೧॥

ಗಜಾಶ್ವಕುಲಸಂಪೂರ್ಣಂ ಸಂಕೀರ್ಣಂ ಮಹಿಷೀಗಣೈಃ ।
ದಾಸೀನಾಂ ಚ ಮನೋಜ್ಞಾನಾಂ ಸಮೂಹೇನ ಸಮಾವೃತಂ ॥೨೨॥

ಏವಂ ಸೌಭಾಗ್ಯಸಂಪನ್ನೋ ವಿಸ್ಮೃತ್ಯ ಶಿವಪೂಜನಂ ।
ನಿದ್ರಾಕ್ರೀಡಾದಿನಿರತೋ ಯುವತೀಜನಸಂವೃತಃ ॥೨೩॥

ತಾದೃಶಸ್ಯ ಮಹದ್ಭಾಗ್ಯಂ ಕ್ಷಣೇನ ವಿಲಯಂ ಯಯೌ ।
ಶಿವಪೂಜಾಪರಿತ್ಯಾಗಸ್ತನ್ಮಹಾಭಾಗ್ಯನಾಶಕಃ ॥೨೪॥

ಪೂರ್ವಕಾಲದಲ್ಲಿ ಒಬ್ಬ ರಾಜನಿದ್ದನು. ಅವನಲ್ಲಿ ಸಕಲ ಭಾಗ್ಯಗಳೂ ನೆಲೆಯಾಗಿದ್ದವು. ಸಕಲ ಐಶ್ವರ್ಯದಿಂದಲೂ ಪರಿಪೂರ್ಣನಾಗಿದ್ದನು. ಆತನ ಅರಮನೆಯಲ್ಲಿ ಧನಕನಕವಸ್ತುವಾಹನಗಳೂ ಧಾನ್ಯಗಳೂ ಸಮೃದ್ಧಿಯಾಗಿ ತುಂಬಿದ್ದವು. ||೨೧||

ಆತನ ಪರಿವಾರವು ವಿಶಾಲವಾಗಿದ್ದಿತು. ಆನೆಗಳು, ಕುದುರೆಗಳು, ಗೋವುಗಳು, ಎಮ್ಮೆಗಳೂ, ಅಪರಿಮಿತವಾಗಿದ್ದುವು. ಆತನ ಸೇವೆಮಾಡಲು ಅತ್ಯಂತ ಸುಂದರಿಯರಾದ ಅನೇಕ ದಾಸಿಯರೂ ಇದ್ದರು. ||೨೨||

ಆ ರಾಜನು ಸಕಲ ವೈಭವದಿಂದ ಮತ್ತನಾಗಿ ಯಾವಾಗಲೂ ಸುಖಲೋಲುಪನಾಗಿದ್ದನು. ಒಂದು ಸಮಯದಲ್ಲಿ ನಿದ್ರಾಲೀನನಾಗಿರುವನು. ಒಂದುವೇಳೆಯಲ್ಲಿ ಕ್ರೀಡಾಸಮಾಸಕ್ತನಾಗಿರುವನು. ಮತ್ತೊಂದು ಕಾಲದಲ್ಲಿ ಸ್ತ್ರೀಯರೊಡನೆ ವಿಲಾಸ ವಿಹಾರಗಳಲ್ಲಿ ಮಗ್ನನಾಗಿರುವನು. ಈ ರೀತಿ ಯಾವಾಗಲೂ ವಿಷಯಗಳ ಚಿಂತನ ಸೇವನಗಳಲ್ಲೇ ಕಾಲವನ್ನು ಕಳೆದು ಶಿವಪೂಜೆಯನ್ನು ಮರೆತುಬಿಟ್ಟನು. ||೨೩||

ಅಂತಹ ರಾಜನು ಅಷ್ಟೈಶ್ವರ್ಯಪರಿಪೂರ್ಣನಾಗಿದ್ದರೂ ಕೂಡ ಶಿವಪೂಜೆಯನ್ನು ಮಾಡದಿದ್ದುದರಿಂದ ಸ್ವಲ್ಪ ಕಾಲದಲ್ಲಿ ಎಲ್ಲಾ ವೈಭವಗಳೂ ಒಂದೊಂದಾಗಿ ಕ್ರಮೇಣ ಸರ್ವವೂ ನಾಶವಾದವು. ಸಂಪತ್ತೆಲ್ಲಾ ಮಾಯವಾಯಿತು. ಶಿವಪೂಜಾತ್ಯಾಗವೇ ಸಕಲ ಭಾಗ್ಯಗಳ ನಾಶಕ್ಕೂ ಕಾರಣ. ಯಾವನು ಶಿವಪೂಜೆಯನ್ನು ಮಾಡುವುದಿಲ್ಲವೋ, ಶಿವನನ್ನು ಮರೆಯುತ್ತಾನೋ ಆತನು ಸರ್ವಸ್ವವನ್ನೂ ಕಳೆದುಕೊಳ್ಳುವನು. ||೨೪||

ತದ್ರತ್ನನಿರ್ಮಿತಾಗಾರಾಃ ಸಪ್ರಾಕಾರಾ ಲಯಂ ಗತಾಃ ।
ಗಜಾನಾಂ ಚ ಕುಲಂ ನಷ್ಟಮಶ್ವಾನಾಮಪಿ ಸತ್ವರಂ ॥೧೫॥

ದಾಸೀನಾಂ ಚ ಕುಲಂ ನಷ್ಟಂ ಭೃತ್ಯಾನಾಮಪಿ ಸತ್ವರಂ ।
ದಾರಾಸ್ತಸ್ಯ ಮಹೋದಾರಾ ಹಾರಾಸ್ತಸ್ಯ ಲಯಂ ಗತಾಃ ॥೧೬॥

ತದನ್ನರಾಶಯೋ ನಷ್ಟಾಸ್ತಥೈವ ಧನರಾಶಯಃ ।
ವಿನಷ್ಟಂ ಗೋಕುಲಂ ತಸ್ಯ ಮಹಿಷೀಕುಲಸಂಕುಲಂ ॥೧೭॥

ಅಕಸ್ಮಾಜ್ಜಾತಮೇವಂ ಕಿಂ ಸರ್ವಂ ನಷ್ಟಮಿದಂ ಕಥಂ ।
ಅನರ್ಥಹೇತುರತ್ರಾಸ್ತಿ ಕೋ ವಾ ಸೋಽಪಿ ನ ದೃಶ್ಯತೇ ॥೧೮॥

ಇಂದ್ರೇಣಾಪಿ ಖಲು ಸ್ಪರ್ಧಾ ಕೃತಾ ಪೂರ್ವಂ ಮಯಾ ಧನೈಃ ।
ಧನಸ್ಯ ತಸ್ಯ ನಾಶೋಽಭೂತ್ಕಥಮದ್ಯ ಕ್ಷಣಾಂತರೇ ॥೧೯॥

ಸುತ್ತಲೂ ಸುಂದರವಾದ ಪ್ರಾಕಾರಗಳಿಂದ ಸುತ್ತುವರಿದ ರತ್ನದ ಉಪ್ಪರಿಗೆ ಮನೆಗಳೂ ಹಾಳಾದವು. ಗಜಗಳು, ಅಶ್ವಗಳು ಎಲ್ಲವೂ ಕೊಂಚಕಾಲದಲ್ಲಿಯೇ ನಾಶಹೊಂದಿದವು. ॥೧೫॥

ಆ ರಾಜನ ದಾಸದಾಸಿಯರು, ಪತ್ನೀಪುತ್ರರು, ಹಾರವಲಯಗಳು, ಹೀಗೆ ಸಕಲ ವಸ್ತುವಾಹನಗಳೂ ಏಕಕಾಲದಲ್ಲಿಯೇ ಮಾಯವಾದುವು. ॥೧೬॥

ಆತನ ಭಕ್ಷ್ಯಭೋಜ್ಯಾದಿ ಸಕಲ ಆಹಾರವೈಭವವೂ, ಧನಕನಕಗಳೂ, ಗೋಸಮೂಹವೂ, ಮಹಿಷೀಗಣಗಳೂ ಎಲ್ಲವೂ ನಷ್ಟವಾದವು. ॥೧೭॥

ಈ ರೀತಿ ಒಂದೊಂದಾಗಿ ಸಮಸ್ತ ವೈಭವವೂ ನಾಶಹೊಂದಲು ಆಗ ಆ ರಾಜನಿಗೆ ಕಳವಳವುಂಟಾಯಿತು. ಆತನು ಅತ್ಯಂತ ವ್ಯಥೆಯಿಂದ ಹೀಗೆ ಯೋಚಿಸಿದನು—"ಇದೇನು ನನ್ನ ದೌರ್ಭಾಗ್ಯ! ಅಕಸ್ಮಾತ್ ನನ್ನ ಸಂಪತ್ತುಗಳೆಲ್ಲಾ ಕಳೆದುಹೋದುವು. ಈ ರೀತಿಯಾಗಲು ಏನೋ ಕಾರಣವಿರಲೇಬೇಕು. ಆ ಕಾರಣವು ಎಷ್ಟು ಯೋಚನೆಮಾಡಿದರೂ ಗೊತ್ತಾಗುತ್ತಿಲ್ಲವಲ್ಲ. ಏನುಮಾಡಲಿ! ಮೊದಲು ಇಂದ್ರನೊಡನೆ ಸ್ಪರ್ಧಿಸುವಷ್ಟು ಐಶ್ವರ್ಯವು ನನ್ನಲ್ಲಿ ಇದ್ದಿತಲ್ಲಾ! ಅಷ್ಟೊಂದು ಐಶ್ವರ್ಯವು ಈಗ ಎಲ್ಲಿಗೆ ಹೋಯಿತು? ಅದರ ನಾಶಕ್ಕೆ ಕಾರಣವೇನು? ॥೧೮-೧೯॥

ಇತಿ ದುಃಖೇನ ಸಂವಿಷ್ಟೋ ವನಮಾಪ ದುರಾಸದಂ ।
ಕ್ಷುಧಾರ್ತಸ್ತೃಷಿತಃ ಶ್ರಾಂತಶ್ಚಿಂತಾಶೋಕಸಮಾಕುಲಃ ॥೩೦॥

ದದರ್ಶ ಶಾಂಭವಂ ತತ್ರ ಬಿಲ್ವಮೂಲೇ ಮಹಾವನೇ ।
ಶಿವಲಿಂಗಾರ್ಚನರತಂ ಭಸ್ಮೋದ್ಧೂಳಿತವಿಗ್ರಹಂ ॥೩೧॥

ಭಸ್ಮತ್ರಿಪುಂಡ್ರರೇಖಾಂಕಂ ರುದ್ರಾಕ್ಷಭರಣಾಶ್ರಯಂ ।
ನಿಮೀಲಿತಾಕ್ಷಂ ಧ್ಯಾಯಂತಂ ಮಹಾದೇವಮನಾಮಯಂ ॥೩೨॥

ತಂ ದೃಷ್ಟ್ವಾ ಸ ತು ಭೂಪಾಲಃ ಶಾಂಭವೋತ್ತಮಮಾದರಾತ್ ।
ಪ್ರಣಮ್ಯ ದಂಡವದ್ಭೂಮೌ ಉವಾಚ ಸ ಕೃತಾಂಜಲಿಃ ॥೩೩॥

ಈರೀತಿ ಅತ್ಯಂತ ಚಿಂತೆಯಿಂದ ವ್ಯಾಕುಲನಾಗಿ ಒಂದು ಕಡೆ ನಿಲ್ಲಲೂ ಅವಕಾಶವಿಲ್ಲದೆ ದುರ್ಗತಿಯಿಂದ ದುರ್ಗಮವಾದ ಒಂದು ಅರಣ್ಯಕ್ಕೆ ಹೋದನು. ಅಲ್ಲಿಯೂ ಸಹ ಹೊಟ್ಟೆಗೆ ಏನೂ ಸಿಕ್ಕದೇ ಅತ್ಯಂತ ಹಸಿವು ಬಾಯಾರಿಕೆಗಳಿಂದ ಬಹಳ ಕಷ್ಟವನ್ನನುಭವಿಸಿದನು. ಎಲ್ಲವನ್ನೂ ಕಳೆದುಕೊಂಡಿದ್ದರಿಂದ ಆತನಿಗೆ ಅತ್ಯಂತ ಚಿಂತೆಯೂ ದುಃಖವೂ ಆಗುತ್ತಿತ್ತು. ॥೩೦॥

ಹೀಗೆ ಆರಾಜನು ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ಆ ಅರಣ್ಯದಲ್ಲಿ ಅಲೆದಾಡುತ್ತಿರುವಾಗ ಅಲ್ಲಿ ಒಬ್ಬ ಶಿವಪೂಜೆಮಾಡುತ್ತಿದ್ದ ಭಕ್ತನೊಬ್ಬನನ್ನು ಕಂಡನು. ಆ ಭಕ್ತನು ಒಂದು ಬಿಲ್ವವೃಕ್ಷದ ಕೆಳಗೆ ಶಿವಲಿಂಗವನ್ನು ಸ್ಥಾಪಿಸಿ, ಪೂಜೆಮಾಡುತ್ತಿದ್ದನು. ಶೈವ ಸೂಚಕವಾದ ಭಸ್ಮ ರುದ್ರಾಕ್ಷಿಗಳನ್ನು ಧರಿಸಿದ್ದನು. ॥೩೧॥

ಆ ಭಕ್ತನು ವಿಧಿಗನುಗುಣವಾಗಿ ಭಸ್ಮವನ್ನು ತ್ರಿಪುಂಡ್ರಾಕಾರವಾಗಿ ಹಚ್ಚಿಕೊಂಡಿದ್ದನು. ಕಂಠವೇ ಮೊದಲಾದ ಅಂಗಗಳಲ್ಲಿ ರುದ್ರಾಕ್ಷಿಯ ಮಾಲೆಯನ್ನು ಧರಿಸಿದ್ದನು. ಕಣ್ಣುಗಳನ್ನು ಮುಚ್ಚಿಕೊಂಡು ಒಂದೇ ಮನಸ್ಸಿನಿಂದ ಆ ಸಕಲ ಜರಾಮರಣವ್ಯಾಧಿವಿನಿರ್ಮುಕ್ತನಾದ ಪರಮೇಶ್ವರನನ್ನು ಧ್ಯಾನಿಸುತ್ತಾ ಕುಳಿತಿದ್ದನು. ॥೩೨॥

ಈ ರೀತಿ ಪೂಜೆಯಲ್ಲಿ ಆಸಕ್ತನಾದ ಆ ಭಕ್ತನಿಗೆ ರಾಜನು ದಂಡಾಕಾರವಾಗಿ ನಮಸ್ಕಾರಮಾಡಿ, ಅತ್ಯಂತವಿನಯದಿಂದ ಕೈಮುಗಿದುಕೊಂಡು ಹೀಗೆ ಹೇಳಿದನು. ॥೩೩॥

|| ರಾಜೋವಾಚ ||

ಭಗವನ್ ಶಾಂಭವಶ್ರೇಷ್ಠ ನೀಲಕಂಠಸ್ಸ ನಿಷ್ಠುರಃ ।
ತೇನಾಪ್ಯ ಸಂಹೃತಂ ಭಾಗ್ಯಮಭಾಗ್ಯಸ್ಯ ದುರಾತ್ಮನಃ ||೩೪||

ಯದಸ್ತಿ ಸಹಮಾನತ್ವಂ ಮಹಾದೇವೇ ಶ್ರುತಿಶ್ರುತಂ ।
ತಸ್ಮಿನ್ ತಿಷ್ಠತಿ ನಿತ್ಯೇ ತು ಸ ಕಥಂ ಮಯಿ ನಿಷ್ಠುರಃ ||೩೫||

ಅನ್ಯಸ್ಯ ಸಹಮಾನತ್ವಂ ನ ಶ್ರುತಂ ನಾಪಿ ವಸ್ತುತಃ ।
ಕಿಂ ಚಾನ್ಯಸ್ತಾದೃಶಃ ಕೋ ವಾ ಯನ್ನೈಷ್ಠುರ್ಯೇಣ ದುರ್ಭಗಃ ||೩೬||

ಇತಿ ತದ್ವಚನಂ ಶ್ರುತ್ವಾ ಹೃಷ್ಟೋ ರುಷ್ಟೋಽಪಿ ಶಾಂಕರಃ ।
ತಮುವಾಚ ಮಹಾಧೀರೋ ರಾಜಾನಂ ದೀನವತ್ಸಲಃ ||೩೭||

ಶಿವಭಕ್ತೋತ್ತಮನಾದ ಎಲೈ ಪೂಜ್ಯನೇ! ನೀನು ಪೂಜಿಸುತ್ತಿರುವ ಪರಮೇಶ್ವರನು ಅತ್ಯಂತ ನಿಷ್ಠುರನು, ನಿಷ್ಕರುಣಿಯು ಆಗಿದ್ದಾನೆ. ಏಕೆಂದರೆ— ನಾನು ಅತ್ಯಂತ ವಿಭವಶಾಲಿಯಾದ ರಾಜನಾಗಿದ್ದೆ. ನಾನೇನೋ ಪರಮಪಾಪಿ. ಹಾಗೂ ದುರದೃಷ್ಟವಂತನೂ ಆಗಿದ್ದೇನೆ. ಆದರೆ ಆ ಭಗವಂತನೂ ನನ್ನಲ್ಲಿ ಕೊಂಚವೂ ದಯೆತೋರದೇ ನನ್ನ ಸಕಲ ಸಂಪತ್ತುಗಳನ್ನು ಸಂಹರಿಸಿದ್ದಾನೆ.||೩೪||

ಆ ಪರಮೇಶ್ವರನು ಅತ್ಯಂತ ಸಹನಶೀಲನು, ಕ್ಷಮಾಶೀಲರಿಗೆಲ್ಲಾ ಮೂರ್ಧನ್ಯನು, ದಯಾಮಯನು ಹೀಗೆಂದು ಉದ್ಘೋಷಿಸುವ ಶ್ರುತಿಗಳು, ಸರ್ವದಾ ಹೊಗಳುತ್ತಿವೆ. ಹೀಗಿದ್ದರೂ ನನ್ನ ವಿಷಯದಲ್ಲಿ ಆ ಭಗವಂತನು ಏತಕ್ಕೋ ಏನೋ ಅತ್ಯಂತ ಕಠಿಣನಾಗಿರುತ್ತಾನೆ. ಸ್ವಲ್ಪವೂ ದಯೆ ತೋರಲಿಲ್ಲ. ನನ್ನ ಸರ್ವಸ್ವವನ್ನೂ ಹರಣಮಾಡಿದನು. ||೩೫||

ಆ ಪರಮೇಶ್ವರನಂತೆ ಕ್ಷಮಾಶೀಲನೂ, ಶತ್ರುನಿಗ್ರಹಕರ್ತನೂ ಬೇರೆ ಯಾವ ಒಬ್ಬನೂ ವಸ್ತುತಃ ಇರುವುದಿಲ್ಲೆಂದು ಹೇಳುತ್ತಾರೆ. ಆದರೆ ಈಗ ಆ ಪರಮೇಶ್ವರನಷ್ಟು ನಿರ್ದಯನೂ ಯಾರೂ ಇಲ್ಲವೆಂದು ನನಗನಿಸುತ್ತಿದೆ.'' ||೩೬||

ಆ ರಾಜನ ಮಾತನ್ನು ಕೇಳಿ ಭಕ್ತನಿಗೆ ಸಂತೋಷವೂ ಆಯಿತು. ಕೋಪವೂ ಬಂದಿತು. ಏತಕ್ಕೆಂದರೆ ಆತನು ಶಂಕರನನ್ನು ಹೊಗಳಿಯೂ ಇದ್ದನು. ದೂಷಿಸಿಯೂ ಇದ್ದನು. ಆಗ ಆ ಭಕ್ತನು ಸಮಾಧಾನದಿಂದ ಗಂಭೀರನಾಗಿ ರಾಜನ ದೈನ್ಯವನ್ನು ನೋಡಿ ಹೀಗೆ ಹೇಳಿದನು. ||೩೭||

|| ಶಾಂಭವ ಉವಾಚ ||

ಯದುಕ್ತಂ ಸಹಮಾನತ್ವಂ ಮಹಾದೇವೇ ಸನಾತನೇ ।
ತದ್ವೇದೋಕ್ತಮತಸ್ತಸ್ಯ ನಿಷ್ಠುರತ್ವಮಸಂಗತಂ ॥೩೮॥

ಕೃತಾ ಶಿಕ್ಷಾ ಮಹೇಶೇನ ದುರ್ವೃತ್ತಸ್ಯ ತವಾಧುನಾ ।
ಶಂಕರಸ್ಮರಣಂ ತ್ಯಕ್ತಂ ತಥಾ ಶಂಕರಪೂಜನಂ ॥೩೯॥

ಉದಾರದಾರಸಂಭೋಗೇ ಭೋಗವಾನವಿಚಕ್ಷಣಃ ।
ವಿರೂಪಾಕ್ಷೋ ನ ಸ್ಮೃತೋ ಹಿ ತ್ವಯಾ ಭೋಗಾಕುಲೇನ ತು॥೪೦॥

ಯತ್ತತ್ಪರಿಮಳದ್ರವ್ಯಂ ಕಸ್ತೂರೀರಸಭೂಷಿತಂ ।
ತದನರ್ಪಿತಮಾಶಾಯ ಸ್ವೋಪಭೋಗಾಯ ಕಲ್ಪಿತಂ ॥೪೧॥

"ಎಲೈ ರಾಜನೇ, ನೀನು ಹೇಳಿದ ಮಾತನ್ನು ವಿಮರ್ಶಿಸಬೇಕು. ಬಲಾಬಲಗಳನ್ನು ಪರೀಕ್ಷಿಸಬೇಕು. ಪರಮೇಶ್ವರನು ಕ್ಷಮಾಶೀಲನೂ ಪರಮ ಕಾರುಣಿಕನೂ ಆಗಿರುವನೆಂದು ವೇದಗಳಲ್ಲಿ ಹೇಳಿರುತ್ತದೆ. ಆದುದರಿಂದ ಆತನು ಕಾರುಣಿಕನೆಂಬುದೇ ಸತ್ಯವಾದದ್ದು. ನೀನು ಹೇಳುವಂತೆ ಆತನು ನಿರ್ದಯನಾಗಿರುವುದಿಲ್ಲ. ನಿನ್ನ ಮಾತಿಗೆ ವೇದದಲ್ಲಿ ವಿರೋಧವಿರುತ್ತದೆ. ||೩೮||

ನೀನು ಕೇವಲ ವಿಲಾಸಮಗ್ನನಾಗಿ ಮತ್ತತೆಯಿಂದ ಆ ಶಂಕರನನ್ನು ಧ್ಯಾನಿಸುವುದನ್ನೇ ಬಿಟ್ಟುಬಿಟ್ಟಿದ್ದೆ. ಆ ಶಂಕರನ ಪೂಜೆಯ ಕಡೆಗೆ ಕೊಂಚವೂ ಗಮನಕೊಡಲಿಲ್ಲ. ಆರೀತಿ ನೀನು ಅಜ್ಞಾನದಿಂದ ಮೋಹಿತನಾಗಿ ದುರಾಚಾರಿಯಾಗಿದ್ದೆ. ನೀನು ಸನ್ಮಾರ್ಗವನ್ನು ಬಿಟ್ಟು ದುರ್ಮಾರ್ಗಕ್ಕೆ ಇಳಿದಿದ್ದರಿಂದ ಶಂಕರನು ನಿನಗೆ ಈಗ ಶಿಕ್ಷೆ ವಿಧಿಸಿರುವನು. ||೩೯||

ನೀನು ಯುಕ್ತಾಯುಕ್ತ ವಿವೇಚನೆಯನ್ನು ಸಹ ಮಾಡದೇ ಯಾವ ನಿಯಮಗಳಿಗೂ ಒಳಪಡದೇ ಸರ್ವದಾ ಸ್ತ್ರೀಯರೊಡನೆ ಭೋಗವಿಲಾಸದಲ್ಲಿ ಮಗ್ನನಾಗಿದ್ದೆ. ಆ ಸುಖಸಾಮ್ರಾಜ್ಯದಲ್ಲಿ ನಿನಗೆ ಪರಮೇಶ್ವರನು ಇರುವನೋ ಇಲ್ಲವೋ ಎಂಬುದನ್ನಷ್ಟನ್ನೂ ಯೋಚಿಸುವ ಆವಶ್ಯಕತೆ ತೋರಲಿಲ್ಲ. ಆಗ ನೀನು ಒಂದುಸಲವೂ ಆ ಭಗವಂತನನ್ನು ಧ್ಯಾನಮಾಡಲಿಲ್ಲ. ||೪೦||

ಕಸ್ತೂರಿಯೇ ಮೊದಲಾದ ಉತ್ತಮ ಪರಿಮಳದ್ರವ್ಯಗಳನ್ನು ಪರಮೇಶ್ವರನಿಗೆ ಅರ್ಪಿಸದೇ, ಕಳ್ಳನಂತೆ ನಿನ್ನ ಸ್ವಾರ್ಥಕ್ಕೇ ಉಪಯೋಗಿಸಿಕೊಳ್ಳುತ್ತಿದ್ದೆ.

ದುಕೂಲಾನ್ಯತಿರಮ್ಯಾಣಿ ಶಂಕರಾನರ್ಪಿತಾನ್ಯಪಿ ।
ಕಲ್ಪಿತಾನಿ ಪ್ರಮತ್ತೇನ ಸ್ವೋಪಭೋಗಾಯ ಕೇವಲಂ ॥೪೨॥

ಸಹಸಾ ಸ್ವೋಪಭೋಗಾಯ ಕಲ್ಪಿತಾನಿ ನವಾನ್ಯಪಿ ।
ಭೂಷಿತಾನಿ ವಿಚಿತ್ರಾಣಿ ಶಂಕರಾನರ್ಪಿತಾನ್ಯಪಿ ॥೪೩॥

ಯದನ್ನಂ ಕ್ಷೀರಸಂಯುಕ್ತಂ ಶಂಕರಾಯಾನಿವೇದಿತಂ ।
ತದ್ಭುಕ್ತಮದ್ಯ ತುಷ್ಟೇನ ತೇನ ಜಾತೋಽಸಿ ದುರ್ಭಗಃ ॥೪೪॥

ಯದನ್ನಪತಯೇ ದತ್ತಂ ತದನ್ನಮಮೃತಂ ಖಲು ।
ತದ್ಭಿನ್ನಂ ವಿಷಮೇವೇತಿ ವಿಷಭೋಗೇ ಕುತಸ್ಸುಖಂ ॥೪೫॥

ಭಾಗ್ಯನಾಶೇನ ನಷ್ಟಾಶ್ಚ ಪ್ರಾಣಾಸ್ಸರ್ವೇಽಪ್ಯಸಂಶಯಂ ।
ಅತಃ ಪ್ರಾಣವಿಹೀನಸ್ತು ಮೃತ ಇತ್ಯವಧಾರಿತಃ ॥೪೬॥

ರಮಣೀಯಗಳಾದ ಪಟ್ಟೆವಸ್ತ್ರಗಳನ್ನು ಆ ಶಂಕರನಿಗೆ ಧರಿಸದೇ ಕೇವಲ ವಿಲಾಸಮಗ್ನನಾಗಿ ನೀನೇ ಧರಿಸುತ್ತಿದ್ದೆ. ॥೪೧-೪೨॥

ಸಮಸ್ತ ಕಾಮೋಪಭೋಗಗಳೂ ಪರಮೇಶ್ವರಾನುಗ್ರಹದಿಂದ ಪ್ರಾಪ್ತವಾಗಿವೆ ಎಂಬ ವಿಚಾರವನ್ನು ತಂದುಕೊಳ್ಳದೇ, ಪ್ರಥಮತಃ ಶಂಕರನಿಗೆ ಅರ್ಪಿಸಬೇಕಾಗಿದ್ದಂತಹ ನೂತನವಾದ ರತ್ನಾಭರಣಗಳನ್ನು ಕೇವಲ ನಿನ್ನ ಉಪಭೋಗಕ್ಕೆ ಉಪಯೋಗಿಸಿಕೊಂಡೆ. ಕ್ಷೀರಾನ್ನ, ದಧ್ಯನ್ನ, ಮೊದಲಾದ ಭಕ್ಷ್ಯಭೋಜ್ಯಗಳನ್ನು ಪರಮೇಶ್ವರನಿಗೆ ನಿವೇದನ ಮಾಡದೇ ನೀನೇ ಭುಂಜಿಸುತ್ತಿದ್ದೆ. ॥೪೩-೪೪॥

ಸಕಲ ಆಹಾರದ್ರವ್ಯಗಳಿಗೂ ಒಡೆಯನು ಪರಮೇಶ್ವರನು. ಆತನು ಅನುಗ್ರಹಿಸಿದ ಅನ್ನವನ್ನು ಆತನಿಗೆ ಮೊದಲು ನಿವೇದಿಸಿ ಅನಂತರ ಆತನ ಪ್ರಸಾದವನ್ನು ಭುಂಜಿಸಿದರೆ ಆ ಅನ್ನವು ಅಮೃತವಾಗುವುದು. ಹಾಗಿಲ್ಲದೇ ಶಂಕರನಿಗೆ ನೈವೇದ್ಯಮಾಡದ ಅನ್ನವನ್ನು ಭುಂಜಿಸಿದರೆ ಅದು ಸಮಸ್ತ ಯೋಗಾವಳಿಯನ್ನೂ ನಾಶಮಾಡುವ ವಿಷವಾಗುವುದು. ಅಂದಮೇಲೆ ಅಂಥ ವಿಷವನ್ನೇ ತಿನ್ನತಕ್ಕವನಿಗೆ ಸುಖವು ಎಲ್ಲಿಂದ ದೊರೆಯುವುದು ? ॥೪೫॥

ಯಾವಾತನ ಭಾಗ್ಯಗಳೂ ಸಂಪತ್ತುಗಳೂ ನಾಶಹೊಂದಿವೆಯೋ, ಆತನ ಪ್ರಾಣಗಳೂ ನಷ್ಟವಾದಂತೆಯೇ ಸರಿ. ಭಾಗ್ಯಗಳು ಪ್ರಾಣಧಾರಣೆಗೆ ಅತ್ಯಂತ

ದರಿದ್ರಸ್ಯ ಮೃತಸ್ಯಾಪಿ ನಾಂತರಂ ಖಲು ದೃಶ್ಯತೇ ।
ದರಿದ್ರೋ ಮೃತ ಏವೇತಿ ತಸ್ಯ ಸೌಖ್ಯಂ ಕುತೋ ಭವೇತ್ ॥೪೭॥

ಅಸೌಖ್ಯನಿಧಿರೇವಾಯಮುಶಾಂಭವ ಇತಿ ಸ್ಮೃತಃ ।
ಅತಸ್ತ್ಯಜಾಧುನಾ ತಾವದಾಶಾಂ ಸೌಖ್ಯಾವಗಾಹಿನೀಂ ॥೪೮॥

ಯೇನ ದತ್ತಂ ಮಹದ್ಭಾಗ್ಯಂ ತದ್ವಿಸ್ಮರಣಮೇವ ತೇ ।
ಅಶನಿಸ್ತ್ವೇನ ನಿಷ್ಪನ್ನಮತಸ್ತತ್ಕೇನ ನಶ್ಯತಿ ॥೪೯॥

ಸಾಮಿಾಪ್ಯವಾದ ಸಲಕರಣೆಗಳು. ಹೀಗಿರುವಲ್ಲಿ ಭಾಗ್ಯನಾಶದಿಂದ ಪ್ರಾಣನಾಶವು ಒದಗಿದಮೇಲೆ ಮನುಷ್ಯನು ಬದುಕಿದ್ದರೂ ಮೃತನಾದಂತೆಯೇ ಸರಿ. ||೪೬||

ಭಾಗ್ಯಗಳೆಲ್ಲಾ ನಷ್ಟವಾದ ದರಿದ್ರನಿಗೂ ಮತ್ತು ಮೃತನಿಗೂ ಏನೂ ವ್ಯತ್ಯಾಸವಿರುವುದಿಲ್ಲ. ಮೃತನಾದವನಿಂದ ಪ್ರಪಂಚದಲ್ಲಿ ಯಾವ ಆಗುಹೋಗುಗಳೂ, ಯಾವ ನ್ಯೂನಾತಿರೇಕಗಳೂ ಹೇಗೆ ಸಂಭವಿಸುವುದಿಲ್ಲವೋ, ಹಾಗೆಯೇ ದರಿದ್ರನಿಂದಲೂ ಯಾವ ಪ್ರಾಪಂಚಿಕ ರಂಗದಲ್ಲಿಯೂ ಕೆಲಸ ನಡೆಯುವುದಿಲ್ಲ. ಅಂದಮೇಲೆ ಮೃತಪ್ರಾಯನಾದ ದರಿದ್ರನಿಗೆ ಏತಕ್ಕೆತಾನೇ ಹೇಗೆತಾನೇ ಸುಖವು ದೊರೆಕೀತು ? ||೪೭||

ಈರೀತಿ ಶಿವಭಕ್ತಿಪರಾಙ್ಮುಖನಿಗೆ ಎಲ್ಲಿಯೂ ಸುಖವಿರುವುದಿಲ್ಲ. ಯಾವನು ಶಿವನಿಗೆ ಭಕ್ತನಾಗಿಲ್ಲವೋ, ಆತನು ಸಕಲ ದುಃಖಗಳಿಗೂ ತುತ್ತಾಗುವನು. ಆದುದರಿಂದ ಎಲೈ ರಾಜನೇ! ಕೇವಲ ವಿಲಾಸಲಾಲಸೆಯ ವ್ಯಾಮೋಹವನ್ನು ಬಿಟ್ಟುಬಿಡು. ಶಿವಭಕ್ತಿ ಇಲ್ಲದ ಕೇವಲ ಸುಖದ ಆಸೆಯಿಂದ ದುಃಖವೇ ಪ್ರಾಪ್ತವಾಗುವುದಲ್ಲದೇ ಎಂದೂ ಸುಖ ದೊರೆಯುವುದಿಲ್ಲ. ||೪೮||

ಯಾವ ಪರಮೇಶ್ವರನು ನಿನಗೆ ಸೌಭಾಗ್ಯಸಾಮ್ರಾಜ್ಯಗಳನ್ನೂ ಅನುಗ್ರಹಿಸಿ ಕೊಟ್ಟಿದ್ದನೋ ಅಂತಹವನನ್ನು ನೀನು ಅನಾದರದಿಂದ ಮರೆತುಬಿಟ್ಟೆ. ಆತನ ವಿಸ್ಮೃತಿಯೇ ನಿನ್ನ ಸಕಲ ಸಂಪತ್ತುಗಳ ಧ್ವಂಸಕವಾದ ಸಿಡಿಲಾಯಿತು. ಅಂತಹ ಘೋರವಾದ ಸಿಡಿಲನ್ನು ನಾಶಮಾಡಲು ಯಾರ ಕೈಯ್ಯಿಂದ ಸಾಧ್ಯವಾಗುವುದು ? ||೪೯||

ಭಾಗ್ಯಂ ಪ್ರಾಪ್ಯ ಖಲೂನ್ಮತ್ತಾಃ ಭಾಗ್ಯದಂ ವಿಸ್ಮರಂತ್ಯತಃ ।
ಅಭಾಗ್ಯಾ ಏವ ತೇ ತಾವದ್ಭವಿಷ್ಯಂತಿ ನ ಸಂಶಯಃ ॥೫೦॥

ಕ್ವ ತೇ ದಾರಾ ಮಹೋದಾರಾಸ್ಸಹಾರಾ ಹಾರತಾಲಯೇ ।
ಹಾರತ್ವೇ ಸತಿ ತತ್ಸರ್ವಂ ಭವಿಷ್ಯತಿ ನ ಸಂಶಯಃ ॥೫೧॥

ಆಯುಷ್ಮಂತೋ ಭಾಗ್ಯವಂತೋ ರೂಪವಂತೋ ವಿಶೇಷತಃ ।
ಶಾಂಭವಾ ಏವ ತತ್ಸರ್ವಂ ಶಾಂಭವಾನನುಧಾವತಿ ॥೫೨॥

ಜನರು ತಮಗೆ ಭಾಗ್ಯಲಾಭವಾದಾಗ, ಕೇವಲ ಸುಖಲೋಲುಪರಾಗುತ್ತಾರೆ. ತಮ್ಮ ಭಾಗ್ಯಕ್ಕೆ ಕಾರಣರು ಯಾರು ? ಆ ಪರಮೇಶ್ವರನೇ ಭಾಗ್ಯವನ್ನು ಕೊಟ್ಟಿರುವನು, ಎಂಬ ವಿವೇಕವನ್ನು ಮರೆತು ಉನ್ಮತ್ತರಂತೆ ಕೃತಘ್ನರಾಗುತ್ತಾರೆ. ಯಾವಾಗ ಪರಮೇಶ್ವರನನ್ನು ಮರೆಯುವರೋ ಆಗ ಸಕಲ ಭಾಗ್ಯಗಳೂ ನಾಶವಾಗುವುವು. ಆದುದರಿಂದ ಇಂಥ ಅವಿವೇಕಿಗಳು ಅಭಾಗ್ಯರು ಎಂಬುದರಲ್ಲಿ ಸಂದೇಹವಿಲ್ಲ. ॥೫೦॥

ನೀನು ಯಾವಾಗ ಶಂಕರಭಜನವನ್ನು ಬಿಟ್ಟೆಯೋ ಆ ಕೂಡಲೇ ನಿನ್ನ ಪತ್ನೀಪುತ್ರರೂ ದಾಸದಾಸಿಯರೂ ಸಕಲ ಸಂಪತ್ತುಗಳೂ ನಾಶವಾದವು. ಎಲ್ಲಾ ಮಾಯವಾದವು ! ಶಿವಭಜನವಿದೂರನ ಎಲ್ಲಾ ವೈಭವಗಳೂ ಹೀಗೆ ನಾಶವನ್ನೇ ಪಡೆಯುವುವು. ನೀನು ಶಿವಪೂಜಾನಿರತನಾದರೆ ಮತ್ತೆ ಆ ಎಲ್ಲಾ ಸಂಪತ್ತುಗಳೂ ಸಮೃದ್ಧವಾಗಿ ಬಂದು ಸೇರುವುವು. ॥೫೧॥

ಯಾರು ದೀರ್ಘವಾದ ಆಯುಸ್ಸನ್ನು ಪಡೆದಿದ್ದಾರೆಯೋ, ಯಾರು ಭಾಗ್ಯವನ್ನು ಹೊಂದಿರುವರೋ, ಯಾರು ಸುಂದರವಾದ ರೂಪವನ್ನು ಪಡೆದಿರುವರೋ, ಅವರೆಲ್ಲಾ ಶಿವಭಕ್ತಿಯಿಂದ ಪ್ರಕಾಶಿಸುವವರೇ. ಪುರಾಕೃತವಾದ ಶಿವಭಜನೆಯ ಪುಣ್ಯದಿಂದಲೇ ಅವರು ಆ ಸಂಪತ್ತುಗಳನ್ನು ಅನುಭವಿಸುವುದು. ಸಕಲ ಸೌಭಾಗ್ಯಗಳೂ ಶಿವಭಕ್ತನನ್ನು ಮಾತ್ರವೇ ಹುಡುಕಿಕೊಂಡು ಹೋಗಿ ಆತನಲ್ಲಿ ಸೇರುವುವು. ॥೫೨॥

ಏತಾವದ್ಭಾಗ್ಯಸಮಯೇ ಕಥಂ ನಾರಾಧಿತಶ್ಶಿವಃ ।
ಕದಾಪಿ ನ ಕೃತಂ ರಾಜನ್ ತದಾ ಶಂಕರಪೂಜನಂ ॥೫೩॥

ನಾಕಾರಿತಂ ಮಂದಿರಂ ವಾ ರತ್ನಮಂಡಲಮಂಡಿತಂ ।
ಮಹೇಶ್ವರವಿಹಾರಾಯ ರತ್ನಾಭರಣಭೂಷಿತಂ ॥೫೪॥

ದೀಪಮಾಲಾಶ್ಚ ನ ಕೃತಾಃ ಕೋಟಿಶಶ್ಶಿವಮಂದಿರೇ ।
ನ ಚಾನ್ನರಾಶಿಭಿರ್ದತ್ತಂ ನೈವೇದ್ಯಂ ಶಂಕರಾಯ ತು ॥೫೫॥

ನ ಕೃತಾ ಘೃತಕುಲ್ಯಾಪಿ ಶಿವನೈವೇದ್ಯಕಲ್ಪನೇ ।
ಮಧುಕುಲ್ಯಾಪಿ ನ ಕೃತಾ ಕ್ಷೀರಕುಲ್ಯಾ ವಿಶೇಷತಃ ॥೫೬॥

ಅಷ್ಟೊಂದು ಪರಿವಾರ ಸಮೇತವಾದ ಐಶ್ವರ್ಯವಿದ್ದಾಗಲೂ, ಪರಮೇಶ್ವರನ ಪೂಜೆಯನ್ನು ಮಹಾವೈಭವದಿಂದ ಮಾಡಲು ಸಕಲ ಅನುಕೂಲವೂ ಒದಗಿದ್ದಾಗಲೂ, ನೀನು ಆತನನ್ನು ಆರಾಧಿಸಿಲ್ಲವಲ್ಲಾ! ಅಯ್ಯೋ ಅಜ್ಞಾನವೇ! ಅಷ್ಟೊಂದು ಭಾಗ್ಯವು ತುಂಬಿಕೊಂಡಿದ್ದರೂ ನೀನು ಒಂದು ಸಲವೂ ಶಿವಪೂಜೆಯನ್ನು ಮಾಡಿಲ್ಲವೆಂದು ತೋರುವುದು. ॥೫೩॥

ನೀನು ಅಷ್ಟೈಶ್ವರ್ಯ ಸಂಪನ್ನನಾಗಿದ್ದರೂ ಒಂದು ಶಿವಾಲಯವನ್ನು ಸ್ಥಾಪಿಸಲಿಲ್ಲ. ನಿನ್ನ ಯೋಗ್ಯತೆಗೆ ತಕ್ಕಂತೆ ಪರಮೇಶ್ವರನ ವಿಹಾರಕ್ಕೆ ರತ್ನಪ್ರಾಕಾರ ಪರಿಚ್ಛದಯುಕ್ತವಾದ ಮಂದಿರವನ್ನೂ ಉದ್ಯಾನವನ್ನೂ ಕಟ್ಟಿಸಬಹುದಾಗಿತ್ತು. ಶಿವಮಂದಿರದಲ್ಲಿ ಕೋಟಿಕೋಟಿ ಸಾಲುದೀಪಗಳನ್ನು ಹತ್ತಿಸಿ ಉತ್ಸವ ನಡೆಸಬಹುದಾಗಿತ್ತು. ದಿವ್ಯವಾದ ಅನ್ನಗಳನ್ನೂ ಭಕ್ಷ್ಯಭೋಜ್ಯಗಳನ್ನೂ ತಯಾರಿಸಿ ನೈವೇದ್ಯ ಮಾಡಬಹುದಾಗಿತ್ತು. ಆದರೆ ನೀನು ಅಂತಹ ಒಂದು ಸೇವೆಯನ್ನೂ ಮಾಡಲಿಲ್ಲ. ॥೫೪-೫೫॥

ನೀನು ಶಿವನೈವೇದ್ಯಕ್ಕೆ ವಿಶೇಷವೆಂದು ಹೇಳಿರುವ ಘೃತಕುಲ್ಯ (ತುಪ್ಪದ ಕೊಡ) ವನ್ನೇ ಸಮರ್ಪಿಸಬಹುದಾಗಿತ್ತು. ಹಾಗೆಯೇ ದ್ರಾಕ್ಷಾರಸ, ಮಧುರವಾದ ಮಧುರಸ ಮತ್ತು ಕ್ಷೀರರಸ ಇವುಗಳ ಪ್ರವಾಹವನ್ನೇ ಕಲ್ಪಿಸಿ ಅರ್ಪಿಸಬಹುದಾಗಿತ್ತು. ಆದರೆ ನೀನು ಕಾಮಮೋಹಿತನಾಗಿ ಯಾವುದನ್ನೂ ಮಾಡಲಿಲ್ಲ. ॥೫೬॥

ಶ್ರೀಮಹಾದೇವನೈವೇದ್ಯಂ ನ ಭುಕ್ತಂ ಭಕ್ತಿಪೂರ್ವಕಂ ।
ನ ಶಾಂಭವಸಮೂಹೇಭ್ಯೋ ದತ್ತಮನ್ನಂ ವಿಶೇಷತಃ ॥೫೭॥

ನ ಚ ರತ್ನಾನಿ ದತ್ತಾನಿ ದಿವ್ಯಾನ್ಯಾಭರಣಾನ್ಯಪಿ ।
ದುಕೂಲಾನಿ ನ ದತ್ತಾನಿ ಶಿವಪ್ರೀತ್ಯರ್ಥಮಾದರಾತ್ ॥೫೮॥

ಯೋ ಮಹದ್ಭಾಗ್ಯಸಮಯೇ ನಾರಾಧಯತಿ ಶಂಕರಂ ।
ಸ ದುರ್ಭಗೋ ಭವತ್ಯೇವ ಶೀಘ್ರಂ ಭಾಗ್ಯವಿವರ್ಜಿತಃ ॥೫೯॥

ಅಭಾಗ್ಯಾಂಬುಧಿಮಗ್ನಾನಾಂ ಭಕ್ತಿಶ್ಶಂಭೌ ನ ಜಾಯತೇ ।
ಕೇವಲಂ ಭಾಗ್ಯಸಂಪನ್ನಾಸ್ತೇ ಕುರ್ವಂತಿ ಶಿವಾರ್ಚನಂ ॥೬೦॥

ನೀನು ಮಹಾದೇವನಿಗೆ ಅರ್ಪಿತವಾದ ಅನ್ನವನ್ನು ಭಕ್ತಿಯಿಂದ ಭುಂಜಿಸಲಿಲ್ಲ. ಶಂಕರಭಕ್ತರಿಗೂ ದರಿದ್ರರಿಗೂ ಅನ್ನವನ್ನು ದಾನಮಾಡಲಿಲ್ಲ. ॥೫೭॥

ನೀನು ಪರಮೇಶ್ವರ ಭಕ್ತರಿಗೂ, ನಿರ್ಗತಿಕರಾದ ಬಡವರಿಗೂ, ಬೇಕಾದ ವಸ್ತುಗಳನ್ನು ದಾನಮಾಡಬಹುದಾಗಿತ್ತು. ರತ್ನಗಳನ್ನು ಕೊಡಬಹುದಾಗಿತ್ತು. ದಿವ್ಯವಾದ ಆಭರಣಗಳನ್ನೂ, ಪಟ್ಟೆವಸ್ತ್ರಗಳನ್ನು ಶಿವಾರ್ಪಣವಾಗಲೆಂದು ತ್ಯಾಗ ಮಾಡಬಹುದಾಗಿತ್ತು. ಆದರೆ ನೀನು ಯಾವುದನ್ನೂ ದಾನಮಾಡಲಿಲ್ಲ. ಕೇವಲ ಸ್ವಾರ್ಥಪರಾಯಣನಾಗಿ ವಿಲಾಸಿಯಾಗಿದ್ದೆ. ॥೫೮॥

ಯಾವಾತನು ತನಗೆ ಬೇಕಾದಷ್ಟು ಸಂಪತ್ಸಾಧನವಿದ್ದರೂ ಪರಮೇಶ್ವರನ ಪ್ರೀತಿಗೆ ಕಾರಣವಾದ ಪೂಜೆಗಳನ್ನೂ, ದಾನಧರ್ಮಗಳನ್ನೂ ಮಾಡುವುದಿಲ್ಲವೋ, ಆತನ ಎಲ್ಲಾ ಸಂಪತ್ತುಗಳೂ ಶೀಘ್ರವಾಗಿಯೇ ನಾಶವಾಗುವುವು. ಆತನು ನಿರ್ಭಾಗ್ಯನಾಗಿ ನಿರ್ಗತಿಕನಾಗಿ ಕಾಡುಪಾಲಾಗುವನು. ॥೫೯॥

ಆಪತ್ತೆಂಬ ಸಮುದ್ರದಲ್ಲಿ ಮುಳುಗಿರುವ ಜನರಿಗೆ ಶಂಕರನಲ್ಲಿ ಭಕ್ತಿಯುಂಟಾಗುವುದು ದುರ್ಲಭ. ಕೇವಲ ತಮ್ಮ ದುರವಸ್ಥೆಯನ್ನು ಕುರಿತು ಚಿಂತಿಸುತ್ತಾ ದುಃಖದಿಂದ ಅವರು ಕಾಲಕಳೆಯುವರು. ಭಾಗ್ಯಸಂಪನ್ನರಾದವರೇ ಯಾವಾಗಲೂ ವಿವೇಕವನ್ನು ಕಳೆದುಕೊಳ್ಳದೇ ಎಚ್ಚರಿಕೆಯಿಂದ ಶಿವಪೂಜೆಮಾಡಲು ತಪ್ಪುವುದಿಲ್ಲ. ಭಾಗ್ಯವಿದ್ದರೇನೇ ಶಿವಪೂಜೆಯು ಯೋಗವಿರುವುದು. ಅಂತಹ ವಿವೇಕಶಾಲಿ

ಶಿವನಾಮೋಚ್ಚಾರಣೇನ ನಯಂತಿ ಸಮಯಂ ಮುಹುಃ ।
ತೇ ತಾವದತಿಧನ್ಯಾಸ್ತೇ ಪೂಜನೀಯಾಃ ಪ್ರಯತ್ನತಃ ॥೬೧॥

ಅತಃಪರಂ ಗತೇ ಭಾಗ್ಯೇ ಶಿವಪೂಜಾರ್ಚನೇ ಮತಿಃ ।
ನ ಭವಿಷ್ಯತಿ ದುಃಖೇನ ದುಃಖಾಂಬುನಿಧಿಮಜ್ಜನೈಃ ॥೬೨॥

ಯದಿ ದುಃಖೇಽಪಿ ಸಂಪ್ರಾಪ್ತೇ ಕರೋತಿ ಶಿವಪೂಜನಂ ।
ತದಾಪಿ ದುಃಖಹಾನಿಃ ಸ್ಯಾತ್ ಭಕ್ತಿಶ್ಚೇದ್ಗಿರಿಶೇ ತದಾ ॥೬೩॥

ಅಧುನಾ ವಾ ಮಹಾದೇವಂ ಸ್ಮರಾಪಸ್ಮಾರನಾಶಕಂ ।
ಸ್ಮರ ಸ್ಮರಾವಿಲಂಬೇನ ಸಾಂಬಂ ಸಂಸಾರಮೋಚಕಂ ॥೬೪॥

ಗಳಾದ ಭಾಗ್ಯವಂತರು ಯಾವಾಗಲೂ ಶಿವಭಜನದಿಂದ ಕಾಲಕಳೆಯುವರು. ಅದರಿಂದ ಅವರ ಭಾಗ್ಯವು ಮತ್ತೂ ಅಭಿವೃದ್ಧಿಹೊಂದುವುದು. ಅಂತಹ ಜನರೇ ನಿಜವಾಗಿ ಧನ್ಯರೆನಿಸುವರು. ಅಂತಹ ಭಕ್ತರನ್ನು ಸರ್ವದಾ ಗೌರವಿಸಬೇಕು. ||೬೦-೬೧||

ಸಕಲ ಸಂಪತ್ತುಗಳೂ ನಷ್ಟವಾಗಿ ದಾರಿದ್ರ್ಯವು ಬಂದೊದಗಿದಾಗ ಶಿವಾರ್ಚನೆಯನ್ನು ಮಾಡಬೇಕೆಂಬ ಬುದ್ಧಿ ಹುಟ್ಟುವುದು ಅಸಾಧ್ಯ. ಆ ದರಿದ್ರನು ಯಾವಾಗಲೂ ಕಷ್ಟವನ್ನು ಅನುಭವಿಸುತ್ತಾ ಕ್ಲೇಶಪಡುವನು. ತನ್ನ ದುರವಸ್ಥೆಯನ್ನೂ ದೌರ್ಭಾಗ್ಯವನ್ನೂ ಅತಿಯಾಗಿ ನಿಂದಿಸಿಕೊಂಡು ದುಃಖದಿಂದ ಕೊರಗುವನು. ಶಿವಪೂಜೆ ಮಾಡಲು ಆತನಿಗೆ ಮನಶ್ಶಾಂತಿಯೂ ವಿವೇಕವೂ ಉಳಿಯುವುದು ಹೇಗೆ? ||೬೨||

ಕಷ್ಟಬಂದಾಗಲಾದರೂ ಮನುಷ್ಯನು ವಿವೇಕವನ್ನು ತಂದುಕೊಂಡು ಧೈರ್ಯವಾಗಿ ಭಕ್ತಿಯಿಂದ ಶಿವಪೂಜೆಯನ್ನು ಮಾಡುತ್ತ ಬಂದರೆ, ಆಗಲೂ ಸಹ ಅವನಿಗೆ ಅನುಕೂಲವಾಗುವುದು. ಪರಮೇಶ್ವರನು ಆತನಲ್ಲಿ ದಯೆದೋರುವನು. ಆಗ ಆತನ ಸಕಲ ದುಃಖವೂ ಪರಿಹೃತವಾಗುವುದು. ||೬೩||

ಎಲೈ ರಾಜನೇ, ಈಗಲಾದರೂ ಆ ಪರಮೇಶ್ವರನೇ ಶರಣೆಂದು ಆರಾಧಿಸು. ಆ ಶಂಕರನು ಮನ್ಮಥನೆಂಬ ಅಪಸ್ಮಾರರೋಗಕ್ಕೆ ನಾಶಕನಾಗಿರುವನು. ನೀನು ವಿಷಯವಾಸನೆಯಿಂದ ವಿಲಾಸಮತ್ತನಾಗಿ, ಆತನನ್ನು ಮರೆತಿರುವೆ. ಈಗ ಆತನನ್ನು

ಸಂಸಾರದೃಢಮೂಲಾನಾಂ ವಿಚ್ಛೇದಃ ಶಂಕರಾರ್ಚನಾತ್ ।
ಮಹಾಪರಶುರೂಪಸ್ಸ್ಯಾದನ್ಯಥಾ ಸ ಕಥಂ ಭವೇತ್ ॥೬೫॥

ಶಿವನಾಮಾಗ್ನಿಸಂದಗ್ಧಾಸ್ಸಂಸಾರತರವಃ ಪುನಃ ।
ನ ಪ್ರರೋಹಂತಿ ಸಹಸಾ ನಿರ್ಮೂಲಾಸ್ತೇ ಯತಸ್ತತಃ ॥೬೬॥

ವಿಷಮಪ್ಯಮೃತಂ ನಾಮ ಶಾಂಕರಂ ಕಾರ್ಯಭೇದತಃ ।
ಪಾಪಮೂರ್ತೇರ್ವಿಷಂ ಮನ್ಯೇ ಪುಣ್ಯಮೂರ್ತೇಸ್ಸುಧಾ ಪರಂ ॥೬೭॥

ದೃಢಸಂಸಾರಪಾಶಾನಾಂ ಛೇದನಾಯ ಶಿವಾರ್ಚನಂ ।
ದೃಢಂ ಸಂಪನ್ನಿಧಾನಾನಾಂ ಸಂಬಂಧಾಯ ಚ ಜಾಯತೇ ॥೬೮॥

ಧ್ಯಾನಿಸು. ನಿನ್ನ ಸಕಲ ತಾಪತ್ರಯಗಳೂ ನಾಶವಾಗುವುವು. ಆತನ ಕೃಪೆಯಿಂದ ಜನನಮರಣ ಬಂಧನವೂ ತಪ್ಪುವುದು. ||೬೪||

ಜನನಮರಣವೆಂಬ ಸಂಸಾರವು ಅನಾದಿಯಾಗಿ ಅವಿಚ್ಛಿನ್ನವಾಗಿ ಬರುತ್ತಿರುವುದು. ಅದರ ಮೂಲವು ದೃಢತರವಾದ ಬೇರಿನಂತೆ ಭದ್ರವಾಗಿ ಹೆಣೆದುಕೊಂಡಿರುತ್ತದೆ. ಇಂಥ ಪ್ರಬಲವಾದ ಸಂಸಾರದ ದುಃಖಗಳಿಗೂ ಶಿವಾರ್ಚನೆಯು ಕೊಡಲಿಯಂತಿರುತ್ತದೆ. ಕೊಡಲಿಯು ಹೇಗೆ ಬೇರುಗಳನ್ನು ಮೂಲಸಮೇತವಾಗಿ ಕತ್ತರಿಸಿಬಿಡುವುದೋ, ಹಾಗೆಯೇ ಶಿವಾರ್ಚನೆಯಿಂದ ಸಂಸಾರತಾಪತ್ರಯಗಳು ಕತ್ತರಿಸಿಹೋಗುವುವು. ಶಿವಾರ್ಚನೆಯ ಮಹಿಮೆಯು ಅತ್ಯಮೋಘವಾದುದು. ಹಾಗಿಲ್ಲದಿದ್ದರೆ ಅಂತಹ ಸಂಸಾರಬಂಧನವು ಕತ್ತರಿಸಿಹೋಗುವುದು ಹೇಗೆತಾನೆ ಶಕ್ಯವಾಗುವುದು ? ||೬೫||

ಶಿವನಾಮಭಜನದಿಂದ ಸಂಸಾರವೆಂಬ ಮರವು ಸುಟ್ಟು ಭಸ್ಮವಾಗುವುದು. ಈರೀತಿ ಸುಟ್ಟ ಸಂಸಾರವೃಕ್ಷವು ಮತ್ತೆ ಚಿಗುರಿ ಬೆಳೆಯಲಾರದು. ಏಕೆಂದರೆ, ಆ ಸಂಸಾರವೃಕ್ಷದ ಮೂಲಬೇರುಗಳೂ ಶಿವಪೂಜೆಯಿಂದ ಸುಟ್ಟುಹೋಗುವುವು. ||೬೬||

ವಿಷಕ್ಕೂ ಅಮೃತಕ್ಕೂ ಆ ಹೆಸರು ಬಂದಿರುವುದು ಅವುಗಳಿಂದ ಆಗುವ ಕಾರ್ಯಗಳಿಂದ. ವಸ್ತುತಃ ಅವುಗಳಲ್ಲಿ ಭೇದವಿಲ್ಲ. ಆದರೂ ಪಾಪಿಷ್ಠನ ಪಾಲಿಗೆ ಎಲ್ಲವೂ ವಿಷವಾಗಿ ಪರಿಣಮಿಸುವುದು. ಪುಣ್ಯಾತ್ಮರಿಗೆ ಎಲ್ಲವೂ ಅಮೃತವಾಗಿ

ತಥಾ ಚ ಪಾಪನಾಶಾರ್ಥಂ ತತ್ಸಂಪತ್ಸಂಗಮಾಯ ಚ ।
ಕರ್ತವ್ಯಮತಿಯತ್ನೇನ ಲಿಂಗೇ ಶಂಕರಪೂಜನಂ ॥೯೯॥

ಲಿಂಗಾನಿ ಬಹುಧಾ ಸಂತಿ ಭುಕ್ತಿಮುಕ್ತಿಪ್ರದಾನ್ಯಪಿ ।
ತೇಷು ಲಿಂಗೇಷು ಸರ್ವೇಷು ನಾರ್ಮದಂ ಲಿಂಗಮುತ್ತಮಂ ॥೨೦॥

ಯದ್ದತ್ತಂ ನಾರ್ಮದೇ ಲಿಂಗೇ ಜಲಂ ಕುಸುಮಮೇವ ವಾ ।
ಫಲಂ ಬಿಲ್ವದಳಂ ವಾಪಿ ತದಾನಂದಾಂಬುಧಿಪ್ರದಂ ॥೨೧॥

ದುರ್ಲಭಂ ನಾರ್ಮದಂ ಲಿಂಗಂ ದುರ್ಲಭಾ ಬಿಲ್ವಮಂಜರೀ ।
ದುರ್ಲಭಾ ಶಾಂಭವೀ ವಿದ್ಯಾ ದುರ್ಲಭಶ್ಶಾಂಕರಃ ಕಲೌ ॥೨೨॥

ತೋರಿಬರುವುದು. ಹಾಗೆಯೇ ಶಿವಾರ್ಚನೆಯೂ ಸಂಸಾರಬಂಧನವೆಂಬುದಕ್ಕೆ ವಿಷವಾಗಿ ಅದನ್ನು ನಾಶಮಾಡುವುದು. ಅದೇ ಶಿವಭಜನೆಯು ಸಂಪತ್ತುಗಳ ಸಂಬಂಧವನ್ನೂ ಸಂಸಾರಕ್ಕೆ ಅಮೃತದಂತೆ ಏರ್ಪಡಿಸುತ್ತದೆ. ||೬೭-೬೮||

ಶಿವಪೂಜೆಯು ಇಷ್ಟು ಮಹತ್ತರವಾಗಿದೆ ಎಂದಮೇಲೆ ಅದನ್ನು ಸರ್ವ ಪ್ರಯತ್ನದಿಂದಲೂ ಮಾಡಲು ಸಿದ್ಧನಾಗಬೇಕು. ಸಕಲ ಪಾಪಗಳ ನಾಶಕ್ಕಾಗಿಯೂ ಸಮಸ್ತ ಸೌಭಾಗ್ಯಗಳ ಪ್ರಾಪ್ತಿಗಾಗಿಯೂ ಶಿವಲಿಂಗಪೂಜೆಯ ಮೂಲಕ ಶಂಕರಾರಾಧನೆಯನ್ನು ಎಷ್ಟೇ ಕಷ್ಟವಾದರೂ ಮಾಡಲೇಬೇಕು. ||೯೯||

ಪ್ರಪಂಚದಲ್ಲಿ ಅನೇಕವಿಧಗಳಾದ ಶಿವಲಿಂಗಗಳು ಇರುತ್ತವೆ. ಅವುಗಳಲ್ಲಿ ಯಾವುದನ್ನು ಪೂಜಿಸುತ್ತಾ ಬಂದರೂ ಅಶನ, ಅವ್ಯಸನಗಳೂ, ಕೀರ್ತಿಮುಕ್ತಿಗಳೂ ಲಭಿಸುವುವು. ಆದರೆ ಎಲ್ಲಾ ಲಿಂಗಗಳಿಗಿಂತಲೂ ನರ್ಮದಾನದಿಯಲ್ಲಿ ಹುಟ್ಟಿದ ಶಿವಲಿಂಗವು ಅತ್ಯಂತ ಶ್ರೇಷ್ಠವಾದುದು. ಶಿವಪೂಜೆಗೆ ಅದು ಅತ್ಯಂತ ಪ್ರಶಸ್ತವಾದುದು. ||೨೦||

ನರ್ಮದಾಲಿಂಗದಲ್ಲಿ ಪೂಜಿಸಿ ಅರ್ಪಿತವಾದ ಜಲವೇ ಆಗಲಿ, ಕುಸುಮವೇ ಆಗಲಿ, ಫಲವೇ ಆಗಲಿ, ಬಿಲ್ವದಳವೇ ಆಗಲಿ ಎಲ್ಲವೂ ಅತ್ಯಂತ ಸೌಭಾಗ್ಯಗಳನ್ನು ತರುವುದು. ||೨೧||

ಈ ಪಾಪಭೂಯಿಷ್ಠವಾದ ಕಲಿಯುಗದಲ್ಲಿ ಸತ್ಪುರುಷರೂ, ಸದ್ವ್ಯವಹಾರಿಗಳೂ, ಸದಾಚಾರರೂ, ಬಹಳ ವಿರಳ. ಆದುದರಿಂದಲೇ ನರ್ಮದಾಲಿಂಗವು ಬಹಳ ಅಪರೂಪವಾಗಿ ಎಲ್ಲಾಕಡೆಯೂ ಸಿಕ್ಕಲಾರದು. ಅದರಂತೆ ಬಿಲ್ವ ಕಿಸಲಯ

ಶಾಂಕರತ್ವಂ ಸಮಾಸಾದ್ಯ ರೇವಾಲಿಂಗೇ ಮನೋಹರೇ ।
ಬಿಲ್ವಾದ್ಯೈರರ್ಚನಂ ಕೃತ್ವಾ ಮುಕ್ತೋ ಭವತಿ ಮಾನವಃ ॥೨೩॥

ಅತ್ರಾಪಿ ಸಂತಿ ಲಿಂಗಾನಿ ಶ್ರೀಶೈಲೇ ಶಂಕರಾಲಯೇ ।
ಪರ್ವತಾರಾಧಿತಂ ಲಿಂಗಂ ತ್ರಿಪುರಾಂತಕಸಂಜ್ಞಿತಂ ॥೨೪॥

ತಲ್ಲಿಂಗಪೂಜನಾದೇವ ಮುಕ್ತಿಃ ಸ್ಯಾದಘಸಾಗರಾತ್ ।
ತಸ್ಯ ದರ್ಶನಮಾತ್ರೇಣ ಮುಕ್ತಿಃ ಸ್ಯಾದಘಸಾಗರಾತ್ ॥೨೫॥

ಮಂಜರಿಗಳೂ, ದೊರೆಯುವುದು ಕಡಮೆ. ಅದೇರೀತಿ ಈ ಕಾಲದಲ್ಲಿ ಶಿವತತ್ತ್ವ ರಹಸ್ಯಗಳ ಮಹತ್ತ್ವವನ್ನರಿತುಕೊಂಡು ಪಂಚಾಕ್ಷರಿಯೇ ಮೊದಲಾದ ಶೈವ ವಿದ್ಯೆಗಳನ್ನು ಅನುಷ್ಠಾನಮಾಡುವವರೂ, ಉಪದೇಶಮಾಡುವವರೂ, ದುರ್ಲಭ. ಹಾಗೆಯೇ ಶಿವನಲ್ಲಿ ಭಕ್ತಿಯಿಟ್ಟಿರುವವರೂ ಈ ಕಾಲದಲ್ಲಿ ಅತ್ಯಂತ ವಿರಳರಾಗಿದ್ದಾರೆ. ||೨೨||

ಇಂತಹ ಕಾಲದಲ್ಲಿ ನಿಯಮವನ್ನಿಟ್ಟುಕೊಂಡು ಶಿವಪೂಜೆಯನ್ನು ಶಿವ ಭಜನೆಯನ್ನು ಮಾಡಿದರೆ ವಿಶೇಷವಾದ ಫಲ ದೊರೆಯುವುದರಲ್ಲಿ ಸಂಶಯವಿಲ್ಲ. ಈ ಕಾಲದಲ್ಲಿ ನರ್ಮದಾಲಿಂಗಕ್ಕೆ ಬಿಲ್ವಾದಿಗಳಿಂದ ಪೂಜೆಮಾಡಿ ಶೈವದೀಕ್ಷೆಯಿಂದ ಈಶ್ವರಾರಾಧನೆ ಮಾಡಿದರೆ, ಆ ಮನುಷ್ಯನು ಸಕಲ ಸಂಸಾರಬಂಧನಗಳಿಂದಲೂ ಮುಕ್ತನಾಗಿ ಸುಖಿಯಾಗುವನು. ||೨೩||

ಈ ಶ್ರೀಶೈಲಕ್ಷೇತ್ರದಲ್ಲಿ ಶಿವಮಂದಿರವೂ ಶಿವಲಿಂಗಗಳೂ ಇರುತ್ತವೆ. ಇಲ್ಲಿರುವ ಲಿಂಗಕ್ಕೆ ತ್ರಿಪುರಾಂತಕ ಎಂದು ಹೆಸರಿದೆ. ಈ ಲಿಂಗವನ್ನು ಶ್ರೀಶೈಲದ ಪರ್ವತರಾಜನು ಪೂರ್ವದಲ್ಲಿ ಭಕ್ತಿಯಿಂದ ಪೂಜಿಸಿ ಪ್ರತಿಷ್ಠೆಮಾಡಿದ್ದನು. ||೨೪||

ಈ ಕ್ಷೇತ್ರದಲ್ಲಿರುವ ಶಿವಲಿಂಗವೂ ಅತ್ಯಂತ ಶ್ರೇಷ್ಠವಾದುದು. ಈ ತ್ರಿಪುರಾಂತಕ ಲಿಂಗವನ್ನು ಭಕ್ತಿಯಿಂದ ಪೂಜಿಸಿದರೆ ಸಕಲ ದುಃಖಗಳ ಬಂಧನವೂ ತಪ್ಪಿ ಹೋಗುವುದು. ಈ ಲಿಂಗದ ದರ್ಶನವನ್ನು ಮಾಡಿದರೆ ಸಕಲ ಪಾಪಪರಂಪರೆಗಳೂ ನಾಶವಾಗುವುವು. ||೨೫||

ತ್ರಿಪುರಾಸುರಸಂಹಾರಂ ಕೃತ್ವಾ ಫಾಲವಿಲೋಚನಃ ।
ಲಿಂಗಾಕಾರಂ ಸಮಾಸಾದ್ಯ ಸ್ಥಿತಃ ಶ್ರೀಪರ್ವತೇ ಖಲು ॥೨೬॥

ಭೂಮಂಡಲೇಷು ತೀರ್ಥಾನಿ ಯಾನಿ ತಾನಿ ವಿಶೇಷತಃ ।
ಶ್ರೀಶೈಲಮೂರ್ತಿಮಾಸಾದ್ಯ ತಿಷ್ಠಂತ್ಯೇವ ನ ಸಂಶಯಃ ॥೨೭॥

ತಲ್ಲಿಂಗಾರ್ಚನಜಂ ಪುಣ್ಯಂ ಸಂಪನ್ಮುಕ್ತಿಕರಂ ಪರಂ ।
ತತ್ರ ಯೇನಾರ್ಪಿತಂ ದ್ರವ್ಯಂ ತದನಂತಫಲಂ ಮತಂ ॥೨೮॥

ದೂರ್ವಾಂಕುರೈರ್ಬಿಲ್ವಪತ್ರೈರ್ನೀರೈ ರ್ವಾ ತ್ರಿಪುರಾಂತಕಂ ।
ಯಃ ಪೂಜಯತಿ ಪುಷ್ಪೇಣ ಸ ಮುಕ್ತೋ ಭವತಿ ಧ್ರುವಂ ॥೨೯॥

ಪೂರ್ವಕಾಲದಲ್ಲಿ ಪರಮೇಶ್ವರನು ತ್ರಿಪುರವೆಂಬ ರಾಕ್ಷಸರನ್ನು ಸಂಹಾರ ಮಾಡಿದ್ದನು. ಆಗ ಶ್ರೀಶೈಲನ ಪ್ರಾರ್ಥನೆಯಂತೆ ಶ್ರೀಶಂಕರನು ಲಿಂಗರೂಪವನ್ನು ಧರಿಸಿ ಬಂದು ಈ ಕ್ಷೇತ್ರದಲ್ಲಿ ನೆಲೆಸಿದನು. ॥೨೬॥

ಪ್ರಪಂಚದಲ್ಲಿ ಯಾವ ಯಾವ ಪುಣ್ಯಕ್ಷೇತ್ರಗಳಲ್ಲಿ ಯಾವ ಯಾವ ಪುಣ್ಯ ತೀರ್ಥಗಳು ಇವೆಯೋ, ಯಾವ ತೀರ್ಥಗಳ ದರ್ಶನವೂ ಸೇವನೆಯೂ ಪಾಪನಾಶಕ ವೆಂದು ಪ್ರಾಜ್ಞರು ಹೇಳುವರೋ, ಆ ಎಲ್ಲಾ ತೀರ್ಥಗಳೂ ಈ ತ್ರಿಪುರಾಂತಕಲಿಂಗ ದಲ್ಲಿ ತಮ್ಮ ಸಾನ್ನಿಧ್ಯದಿಂದ ನೆಲೆಸಿರುವುವು. ॥೨೭॥

ಈ ತ್ರಿಪುರಾಂತಕ ಲಿಂಗದ ಪೂಜೆಯಿಂದ ಅತ್ಯಮೋಘವಾದ ಪುಣ್ಯವು ಲಭಿಸುವುದು. ಆ ಪುಣ್ಯದಿಂದ ಅನೇಕ ಸಂಪತ್ತುಗಳೂ ದುಃಖಮುಕ್ತಿಯೂ ಪ್ರಾಪ್ತವಾಗುವುವು. ಈ ಲಿಂಗಕ್ಕೆ ಅರ್ಪಿತವಾದ ಯಾವ ದ್ರವ್ಯವಾದರೂ ಅಕ್ಷಯ ವಾದ ಪುಣ್ಯಫಲವನ್ನು ದೊರಕಿಸಿಕೊಡುವುದು. ॥೨೮॥

ಈ ತ್ರಿಪುರಾಂತಕ ಲಿಂಗವನ್ನು ಯಾವಾತನು ದೂರ್ವೆಯಿಂದ, ಬಿಲ್ವದಳ ದಿಂದ, ಶುದ್ಧೋದಕದಿಂದ ಅಥವಾ ಹೂವಿನಿಂದ, ಯಾವುದರಿಂದಲೇ ಆಗಲಿ, ಭಕ್ತಿಯಿಂದ ಪೂಜಿಸುವನೋ ಆತನು ಮುಕ್ತನೂ ಸಂಸಾರದುಃಖವಿದೂರನೂ ಆಗುವುದರಲ್ಲಿ ಸಂಶಯವಿಲ್ಲ. ॥೨೯॥

ತತ್ರ ಗೋಕ್ಷೀರಕಲಶಂ ಯೋ ದದ್ಯಾದ್ಭಕ್ತಿಪೂರ್ವಕಂ ।
ಶಾಂಭವಾಯ ಸ ಪುಣ್ಯಾತ್ಮಾ ಸುಧಾಸಾಗರರಾಡ್ಭವೇತ್ ॥೮೦॥

ಶ್ರೀಪರ್ವತೇ ಶಾಂಭವಾಯ ಯೋ ದದ್ಯಾದನ್ನಮಾದರಾತ್ ।
ಸ ತಾವದನ್ನರಾಶೀನಾಮಧಿಪೋ ಭವತಿ ಧ್ರುವಂ ॥೮೧॥

ತತ್ರ ರತ್ನಾನಿ ಯೋ ದದ್ಯಾದ್ಭಕ್ತ್ಯಾ ಶಿವಪರಾಯ ಸಃ ।
ಸ ರತ್ನಕೋಶಾಧಿಪತಿರ್ಭವತ್ಯೇವ ನ ಸಂಶಯಃ ॥೮೨॥

ತ್ರಿಪುರಾಂತಕಮುದ್ದಿಶ್ಯ ಸುವರ್ಣಂ ಯಃ ಪ್ರಯಚ್ಛತಿ ।
ಸ ಸುವರ್ಣಾಧಿಪತಿರ್ಭೂತ್ವಾ ಮುಕ್ತೋ ಭವತಿ ಮಾನವಃ ॥೮೩॥

ಈ ಕ್ಷೇತ್ರದಲ್ಲಿ ಭಕ್ತಿಯಿಂದ ಶಿವಲಿಂಗಕ್ಕೆ ಕ್ಷೀರದಿಂದ ಅಭಿಷೇಕವನ್ನು ಮಾಡಿ, ಶಿವಭಕ್ತನಿಗೆ ಕ್ಷೀರಕುಂಭವನ್ನು ಯಾವನು ದಾನಮಾಡುತ್ತಾನೆಯೋ ಆತನು ಅನೇಕ ಪುಣ್ಯಗಳನ್ನು ಪಡೆಯುವನಲ್ಲದೇ ಕ್ಷೀರಸಾಗರಕ್ಕೆ ಒಡೆಯನೆನಿಸುತ್ತಾನೆ. ಆತನಿಗೆ ಕ್ಷೀರದ ಕೊರತೆ ಕೊಂಚವೂ ಇರುವುದಿಲ್ಲ. ॥೮೦॥

ಈ ಶಿವಸನ್ನಿಧಿಯಲ್ಲಿ ಅನ್ನವನ್ನು ಪರಮೇಶ್ವರನಿಗೆ ನಿವೇದನಮಾಡಿ, ಅದನ್ನು ಭಕ್ತರಿಗೆ ದಾನಮಾಡಿದರೆ ಆತನು ಅನ್ನರಾಶಿಗಳಿಗೇ ಅಧಿಪತಿಯಾಗುವನು. ಆತನಿಗೆ ಯಾವ ಅನ್ನದ ಮತ್ತು ಭಕ್ಷ್ಯಭೋಜ್ಯಗಳ ಕೊರತೆಯೂ ಬರುವುದಿಲ್ಲ. ॥೮೧॥

ಈ ಕ್ಷೇತ್ರದಲ್ಲಿ ಶಿವಭಕ್ತಿಪರನಾಗಿ ಈಶ್ವರಭಕ್ತರಿಗೆ ರತ್ನಗಳನ್ನು ದಾನಮಾಡಿದರೆ ನಿಸ್ಸಂಶಯವಾಗಿಯೂ ಸಕಲ ರತ್ನಗಳ ಆಧಿಪತ್ಯವೇ ಆತನಿಗೆ ದೊರೆಯುವುದು. ॥೮೨॥

ಶಿವಭಕ್ತಿಪರಾಯಣನಾಗಿ ಶಿವಾರ್ಪಣಬುದ್ಧಿಯಿಂದ ಸುವರ್ಣವನ್ನು ದರಿದ್ರರಿಗೆ ದಾನಮಾಡಿದರೆ ಸಕಲ ಸುವರ್ಣನಿಧಿಗಳ ಆಧಿಪತ್ಯವೇ ದೊರೆಯುವುದು. ಸ್ವಲ್ಪವೂ ಸುವರ್ಣದ ಕೊರತೆಯು ಉಳಿಯುವುದಿಲ್ಲ. ಅಲ್ಲದೇ ದಾರಿದ್ರ್ಯ ದುಃಖದಿಂದಲೂ ಬಿಡುಗಡೆಯಾಗುವನು. ॥೮೩॥

ಶಿವಚಿಂತನಶೀಲಾನಾಂ ಯೋ ದದ್ಯಾದ್ವಿತ್ತಮಂತತಃ ।
ಸೋಽಪಿ ವಿತ್ತೇಶತಾಂ ಯಾತಿ ಋಷಿವರ್ಯೈರಪಿ ಸ್ತುತಃ ॥೮೪॥

ಘಂಟಾಕರ್ಣೇಶ್ವರಂ ನಾಮ ಲಿಂಗಮಸ್ತ್ಯೇಕಮುತ್ತಮಂ ।
ತತ್ಪೂಜನೇನ ಪಾಪಾನಿ ವಿನಶ್ಯಂತಿ ನ ಸಂಶಯಃ ॥೮೫॥

ತತ್ರಾಪಿ ಕುಂಡಮಸ್ತ್ಯೇಕಂ ಸುಧಾಕುಂಡಮಿತಿ ಶ್ರುತಂ ।
ತತ್ರ ಸ್ನಾತ್ವಾ ನರಸ್ಸದ್ಯಃ ಶುದ್ಧೋ ಭವತಿ ಸರ್ವಥಾ ॥೮೬॥

ತತ್ಕುಂಡಜಲಮಧ್ಯಸ್ಥೋ ಘಂಟಾಕರ್ಣೇಶ್ವರಂ ಸ್ಮರನ್ ।
ಸರ್ವಪಾಪವಿನಾಶಾನಾಂ ಹೇತುರೇವ ಪ್ರಜಾಯತೇ ॥೮೭॥

ಈ ಪುಣ್ಯಕ್ಷೇತ್ರದಲ್ಲಿ ಶಿವಭಕ್ತರಾದ ಬಡಜನರಿಗೆ ದ್ರವ್ಯ ದಾನಮಾಡಿ ಸಹಾಯ ಮಾಡಿದರೆ ಆತನು ದ್ರವ್ಯಗಳಿಗೆಲ್ಲಾ ಅಧಿಪತಿಯಾಗುವನು. ಆತನು ಸಕಲ ಐಶ್ವರ್ಯವನ್ನೂ ಪಡೆಯುವನಲ್ಲದೇ, ಋಷಿಶ್ರೇಷ್ಠರ ಸ್ತೋತ್ರಗಳಿಗೂ ಪಾತ್ರನಾಗುತ್ತಾನೆ. ||೮೪||

ಇದೇ ಕ್ಷೇತ್ರದಲ್ಲಿ ಮತ್ತೊಂದು ಶ್ರೇಷ್ಠವಾದ ಶಿವಲಿಂಗವಿರುವುದು. ಅದನ್ನು ಘಂಟಾಕರ್ಣೇಶ್ವರ ಎಂದು ಕರೆಯುತ್ತಾರೆ. ಆ ಲಿಂಗವನ್ನು ಪೂಜಿಸಿದರೆ ಸಕಲ ಪಾಪಗಳೂ ನಾಶಹೊಂದುವುದರಲ್ಲಿ ಸಂಶಯವಿಲ್ಲ. ಅಂಥ ಲಿಂಗಗಳನ್ನು ಭಕ್ತಿಯಿಂದ ಆರಾಧಿಸಬೇಕು. ||೮೫||

ಆ ಲಿಂಗದ ಹತ್ತಿರದಲ್ಲಿಯೇ ಒಂದು ಕುಂಡರೂಪವಾದ ತೀರ್ಥವಿರುತ್ತದೆ. ಆ ತೀರ್ಥಕ್ಕೆ ಸುಧಾಕುಂಡವೆಂದು ಹೆಸರು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಸಕಲ ಪಾಪಗಳೂ ನಾಶವಾಗಿ ಮನುಷ್ಯನು ಪರಿಪೂತನಾಗುತ್ತಾನೆ. ||೮೬||

ಆ ತೀರ್ಥದಲ್ಲಿ ಸ್ನಾನಮಾಡಿ, ಅದೇ ನೀರಿನಲ್ಲಿ ನಿಂತುಕೊಂಡು ಆ ಘಂಟಾಕರ್ಣೇಶ್ವರನನ್ನು ಧ್ಯಾನಮಾಡಿದರೆ ಎಲ್ಲಾ ಮಹಾಪಾಪಗಳೂ ಸಹ ಧ್ವಂಸವಾಗುವುವು. ||೮೭||

ಘಂಟಾಕರ್ಣೇಶ್ವರಂ ನತ್ವಾ ಸಂಪೂಜ್ಯ ಕುಸುಮಾದಿಭಿಃ ।
ತತ್ಪುಷ್ಪಸಂಖ್ಯಯಾ ತತ್ರ ಸಂಪತ್ಪ್ರಾಪ್ನೋತಿ ಮಾನವಃ ॥೮೮॥

ಸಾಗರೇಶ್ವರಮಾಲೋಕ್ಯ ತತ್ರ ಸ್ನಾತ್ವಾತಿಪಾವನೇ ।
ತತ್ಸರೋಜಲಪಾನೇನ ಮುಕ್ತೋ ಭವತಿ ಮಾನವಃ ॥೮೯॥

ಪುಣ್ಯಕೋಟಿಸಮಾಕ್ರಾಂತಃ ಶಿಖರೇಶ್ವರಪೂಜನಂ ।
ಕರೋತಿ ಪುಣ್ಯಕಾಲೇಷು ಬಿಲ್ವದೂರ್ವಾದಿಭಿರ್ಮುದಾ ॥೯೦॥

ವಿಭೂತಿಕುಂಡಮಸ್ತ್ಯೇಕಂ ತತ್ತು ಪಾವನಪಾವನಂ ।
ತಸ್ಮಿನ್ ಕುಂಡೇ ಪ್ರವಿಷ್ಟಾನಿ ತೀರ್ಥಾನಿ ವಿಮಲಾನ್ಯಪಿ ॥೯೧॥

ತತ್ಕುಂಡಜಲಯೋಗೇನ ತೀರ್ಥಾನಾಂ ತೀರ್ಥತಾ ಮತಾ ।
ತತಸ್ಸರ್ವಾಣಿ ತೀರ್ಥಾನಿ ತತ್ರ ಯಾಂತಿ ದಿನೇ ದಿನೇ ॥೯೨॥

ಆ ಘಂಟಾಕರ್ಣೇಶ್ವರನನ್ನು ಭಕ್ತಿಯಿಂದ ನಮಸ್ಕರಿಸಿ ಪುಷ್ಪಗಳಿಂದ ಪೂಜಿಸಬೇಕು. ಎಷ್ಟು ಪುಷ್ಪಗಳಿಂದ ಪೂಜಿಸುವನೋ ಅಷ್ಟಷ್ಟು ಸಂಪತ್ತುಗಳನ್ನು ಪಡೆಯುವನು. ಹಾಗೆಯೇ ಶ್ರೇಷ್ಠವಾದ ಸಾಗರೇಶ್ವರಲಿಂಗವನ್ನು ಪೂಜಿಸಿ ನಮಸ್ಕರಿಸಿ, ಆ ತೀರ್ಥದಲ್ಲಿ ಸ್ನಾನಮಾಡಿ ಅದೇ ತೀರ್ಥದ ಜಲವನ್ನು ಯಾವನು ಪಾನಮಾಡಿಕೊಂಡಿರುತ್ತಾನೆಯೋ ಆತನು ಮುಕ್ತಿಯನ್ನೇ ಪಡೆಯುವನು.॥೮೮-೮೯॥

ಆ ಕ್ಷೇತ್ರದಲ್ಲಿ ಶಿಖರೇಶ್ವರವೆಂಬ ಮತ್ತೊಂದು ಲಿಂಗವಿದೆ. ಆ ಲಿಂಗಕ್ಕೆ ಗ್ರಹಣ, ಸಂಕ್ರಮಣ ಮುಂತಾದ ಪರ್ವಕಾಲಗಳಲ್ಲಿ ಬಿಲ್ವದಳ, ದೂರ್ವಾಪತ್ರ ಮುಂತಾದುವುಗಳಿಂದ ಭಕ್ತಿಯುತನಾಗಿ ಪೂಜೆಮಾಡಿದರೆ ಕೋಟಿ ಕೋಟಿ ಪುಣ್ಯ ಫಲಗಳು ಲಭಿಸುವುವು. ॥೯೦॥

ಆ ಕ್ಷೇತ್ರದಲ್ಲಿ ವಿಭೂತಿಕುಂಡವೆಂಬ ಮತ್ತೊಂದು ತೀರ್ಥವಿದೆ. ಅದು ಅತ್ಯಂತ ಪಾವನವಾದುದು. ಪ್ರಪಂಚದ ಮತ್ತೆಲ್ಲಾ ತೀರ್ಥಗಳೂ ಆ ತೀರ್ಥದಲ್ಲಿ ಸೇರಿಕೊಂಡಿವೆ. ಅಲ್ಲದೇ ಆ ತೀರ್ಥದ ಪಾವನಜಲ ಸಂಬಂಧದಿಂದಲೇ ಮತ್ತೆಲ್ಲಾ ತೀರ್ಥಗಳೂ ತೀರ್ಥಗಳಾಗಿರುತ್ತವೆ. ಅದಕ್ಕಾಗಿ ಎಲ್ಲಾ ತೀರ್ಥಗಳೂ ಪ್ರತಿನಿತ್ಯವೂ ಅದರಲ್ಲಿ ತಮ್ಮ ಸಾನ್ನಿಧ್ಯವನ್ನು ಪಡೆದುಕೊಂಡಿರುವುವು. ॥೯೧-೯೨॥

ಶ್ರೀಶೈಲೋ ದುರ್ಲಭೋ ಲೋಕೇ ಭಸ್ಮಕುಂಡಂ ಚ ದುರ್ಲಭಂ ।
ತ್ರಿಪುರಾಂತಕಲಿಂಗಂ ಚ ದುರ್ಲಭಂ ಜಗತೀತಲೇ ॥೯೩॥

ಶಿಖರೇಶ್ವರಮಾಲೋಕ್ಯ ವಿಮುಕ್ತಃ ಪಾಪಪಂಜರಾತ್ ।
ಪಶ್ಚಾನ್ಮುಕ್ತೋ ಭವತ್ಯೇವ ಯತ್ರ ಕುತ್ರಾಪಿ ವಾ ಮೃತಃ ॥೯೪॥

ತತ್ರಾಸ್ತಿ ಹಾಟಕೇಶಾಖ್ಯಂ ಲಿಂಗಂ ಹಾಟಕನಿರ್ಮಿತಂ ।
ತತ್ರಾಸ್ತಿ ಹಾಟಕಂ ಕುಂಡಂ ತಜ್ಜಲಂ ಪಾಪನಾಶನಂ ॥೯೫॥

ತತ್ರ ಸ್ನಾತ್ವಾ ಪ್ರಯತ್ನೇನ ತಲ್ಲಿಂಗಂ ಭಕ್ತಿಪೂರ್ವಕಂ ।
ಬಿಲ್ವಪತ್ರೈಸ್ಸಮಭ್ಯರ್ಚ್ಯ ಮುಕ್ತೋ ಭವತಿ ಮಾನವಃ ॥೯೬॥

ಪ್ರಪಂಚದಲ್ಲಿ ಇರುವ ಎಲ್ಲಾ ಪರ್ವತಗಳೂ ಶ್ರೀಶೈಲಗಳಾಗುವುದಿಲ್ಲ. ಈ ಶೈಲವು ಅತ್ಯಂತ ಮಹಿಮೆಯುಳ್ಳದ್ದು. ಈ ಪರ್ವತದ ಮಹಿಮೆಯು ಮತ್ತೆ ಯಾವ ಪರ್ವತಕ್ಕೂ ಬರಲಾರದು. ಹಾಗೆಯೇ ಪ್ರಪಂಚದ ಎಲ್ಲಾ ತೀರ್ಥಗಳಿಗಿಂತಲೂ ಭಸ್ಮಕುಂಡ ತೀರ್ಥವು ಶ್ರೇಷ್ಠವಾದುದು. ಈ ಕ್ಷೇತ್ರದಲ್ಲಿರುವ ತ್ರಿಪುರಾಂತಕ ಲಿಂಗದ ಮಾಹಾತ್ಮ್ಯೆಯೂ ಅತ್ಯಂತ ಅದ್ಭುತವಾದುದು. ಇಂಥ ಶ್ರೇಷ್ಠವಾದ ಲಿಂಗವು ಮತ್ತೆಲ್ಲಿಯೂ ಇರಲಾರದು. ಆದುದರಿಂದ ಮಾನವನು ಈ ಕ್ಷೇತ್ರಯಾತ್ರೆಯನ್ನೂ ತೀರ್ಥಸ್ನಾನವನ್ನೂ ಲಿಂಗಪೂಜೆಯನ್ನೂ ಆಸ್ಥೆಭಕ್ತಿಗಳಿಂದ ಅವಶ್ಯವಾಗಿ ಮಾಡಬೇಕು. ॥೯೩॥

ಈ ಕ್ಷೇತ್ರದ ಯಾತ್ರೆಯನ್ನೂ, ಶ್ರೀ ಶಿಖರೇಶ್ವರಲಿಂಗದ ದರ್ಶನ ಮತ್ತು ಪೂಜನವನ್ನೂ ಮಾಡಿದರೆ ಮನುಷ್ಯನು ಸಕಲ ಪಾಪಬಂಧನದಿಂದಲೂ ಬಿಡುಗಡೆ ಹೊಂದುವನು. ಅಲ್ಲದೆ ತನ್ನ ಜನ್ಮದಲ್ಲಿ ಒಂದುಸಲ ಈ ಕ್ಷೇತ್ರದ ಯಾತ್ರೆಯನ್ನು ಮಾಡಿದರೆ ಮನುಷ್ಯನು, ಅನಂತರ ಎಲ್ಲಿ ಮೃತಿಹೊಂದಿದರೂ ಸಂಸಾರಬಂಧನದಿಂದ ಮುಕ್ತನೇ ಆಗುವನು. ॥೯೪॥

ಇದೇ ಶ್ರೀಶೈಲಕ್ಷೇತ್ರದಲ್ಲಿ ಹಾಟಕೇಶ್ವರವೆಂಬ ಶಿವಲಿಂಗವಿದೆ. ಇದು ಅತ್ಯಂತ ಶ್ರೇಷ್ಠವಾದುದು. ಇದು ಕೇವಲ ಸುವರ್ಣಮಯವೇ ಆಗಿದೆ. ಮತ್ತು ಅಲ್ಲಿಯೇ ಹಾಟಕಕುಂಡವೆಂಬ ಪುಣ್ಯತೀರ್ಥವೂ ಇದೆ. ಈ ತೀರ್ಥದಲ್ಲಿ ಸ್ನಾನಮಾಡಿ ಹಾಟಕಲಿಂಗಪೂಜೆಯನ್ನು ಬಿಲ್ವಪತ್ರೆಗಳಿಂದ ಭಕ್ತಿಪೂರ್ವಕವಾಗಿ ಮಾಡಿದರೆ,

ಶ್ರೀಶೈಲೇ ಭ್ರಮರಾಂಬಾಯಾಃ ಕೃತ್ವಾ ದರ್ಶನಮಾದರಾತ್ ।
ಸರ್ವಪಾಪವಿನಿರ್ಮುಕ್ತಸ್ಸಂಪನ್ನಾಥೋ ಭವಿಷ್ಯತಿ ॥೯೭॥

ಭ್ರಮರಾಂಬಾಪದಾಂಭೋಜಂ ಕೋಮಲೈರ್ಬಿಲ್ವಪಲ್ಲವೈಃ ।
ಸಮಭ್ಯರ್ಚ್ಯ ಪ್ರಯತ್ನೇನ ಸರ್ವರಾಷ್ಟ್ರಾಧಿಪೋ ಭವೇತ್ ॥೯೮॥

ಭ್ರಮರಾಂಬಾಂ ಸಮಭ್ಯರ್ಚ್ಯ ಯಸ್ತು ರಾತ್ರೌ ಪ್ರದಕ್ಷಿಣಂ ।
ಕರೋತಿ ತತ್ಕರಸ್ಥಃಸ್ಯಾತ್ ಸರ್ವಸಂಪದ್ವರಾಂಗನಾ ॥೯೯॥

ತಸ್ಯ ಸ್ಯಾನ್ಮಹದೈಶ್ವರ್ಯಂ ಸಂತತಿಸ್ತಸ್ಯ ವರ್ಧತೇ ।
ಯಚ್ಚಿತ್ತಂ ಭ್ರಮರಾಂಬಾಯಾಶ್ಚರಣಾಂಬುರುಹಾರ್ಚನೇ ॥೧೦೦॥

ಮನುಷ್ಯನ ಸಕಲ ಮಹಾಪಾಪಗಳು ನಾಶವಾಗುವುವಲ್ಲದೇ ಸಂಸಾರದಿಂದ ಮುಕ್ತಿಯನ್ನೂ ಪಡೆಯುವನು. ॥೯೫-೯೬॥

ಇದೇ ಕ್ಷೇತ್ರದಲ್ಲಿ ಭ್ರಮರಾಂಬೆ ಎಂಬ ಹೆಸರಿನಿಂದ ಸಾಕ್ಷಾತ್ ಪಾರ್ವತಿಯು ತನ್ನ ಪೂರ್ಣ ಸಾನ್ನಿಧ್ಯದಿಂದ ವಿರಾಜಿಸುತ್ತಿದ್ದಾಳೆ. ಈ ಕ್ಷೇತ್ರಯಾತ್ರೆ ಮಾಡಿ ಶ್ರೀ ಭ್ರಮರಾಂಬೆಯ ದರ್ಶನವನ್ನೂ ಮಾಡಿದರೆ ಮನುಷ್ಯನು ಕೃತಕೃತ್ಯನಾಗುವನು. ಆತನ ಸಕಲ ಅಪರಾಧಗಳೆಲ್ಲವೂ ನಾಶವಾಗುವುವು. ಅಲ್ಲದೆ ಅಮೋಘವಾದ ಸಂಪತ್ತುಗಳನ್ನೂ ಪಡೆದುಕೊಂಡು ಸುಖಿಯಾಗುವನು. ॥೯೭॥

ಯಾವನು ಶ್ರೀ ಭ್ರಮರಾಂಬಿಕೆಯ ಪಾದಾರವಿಂದಗಳಿಗೆ ಕೋಮಲವಾದ ಬಿಲ್ವಪತ್ರದ ಚಿಗುರುಗಳಿಂದ ಭಕ್ತಿಪೂರ್ವಕವಾಗಿ ಪೂಜೆಮಾಡುವನೋ ಆತನು ಸಕಲ ದೇಶಗಳಿಗೂ ರಾಷ್ಟ್ರಗಳಿಗೂ ಅಧಿಪತಿಯೇ ಆಗುವನು. ॥೯೮॥

ಈ ಭ್ರಮರಾಂಬಿಕೆಯನ್ನು ಭಕ್ತಿಯಿಂದ ಪೂಜೆಮಾಡಿ, ರಾತ್ರಿ, ದೇವಿಯನ್ನು ಪ್ರದಕ್ಷಿಣೆಮಾಡಿ ನಮಸ್ಕಾರ ಮಾಡುವ ನಿಯಮವನ್ನು ಇಟ್ಟವನು, ಸಂಪತ್ತಿನ ಅಧಿದೇವತೆಯೇ ಆಗುವನು. ಯಾವಾತನ ಮನಸ್ಸು ಸರ್ವದಾ ಭ್ರಮರಾಂಬಿಕೆಯ ಧ್ಯಾನದಲ್ಲಿಯೂ ಪೂಜೆಯಲ್ಲಿಯೂ ಆಸಕ್ತವಾಗಿರುವುದೋ, ಆತನಿಗೆ ಅಷ್ಟೈಶ್ವರ್ಯಗಳ ಲಾಭವೂ ಆಗುವುದು. ಅವನ ವಂಶವು ಅವಿಚ್ಛಿನ್ನವಾಗಿ ಬೆಳೆಯುವುದು. ॥೯೯-೧೦೦॥

ತಸ್ಯ ತಾವದ್ವಿಪತ್ತಿಃ ಸ್ಯಾದ್ಯಾವನ್ನಾರಾಧಿತಾ ಶಿವಾ ।
ಆರಾಧಿತಾಯಾಂ ತಸ್ಯಾಂ ತು ಸಂಪದ್ವೃದ್ಧಿರ್ದಿನೇದಿನೇ ॥೧೦೧॥

ತತ್ರ ಸಂಪತ್ಪ್ರದಾನಾಯ ದೀಕ್ಷಿತಾ ಭ್ರಮರಾಂಬಿಕಾ ।
ತತ್ಪಾದಾಂಬುರುಹೋತ್ಪನ್ನಾ ಸರ್ವದಾ ಸರ್ವಸಂಪದಃ ॥೧೦೨॥

ಸಂಪತ್ಖನಿರಿತಿ ಖ್ಯಾತಾ ಶ್ರೀಶೈಲೇ ಭ್ರಮರಾಂಬಿಕಾ ।
ತಸ್ಯಾಃ ಪ್ರಭಾವೋ ವೇದೈರ್ವಾ ನ ಜ್ಞಾತಸ್ಸರ್ವದಾ ಖಲು ॥೧೦೩॥

ಅಲಮಲಮಭಿಲಾಷೈರಿಂದುಮೌಳಿಪ್ರಸಾದಾತ್
ಸಕಲಭುವನನಾಥೋ ಜಾಯತೇ ಮಾನವೋಽಪಿ ।
ಇತಿ ಮನಸಿ ವಿಚಿಂತ್ಯಾನುಗ್ರಮುಗ್ರಂ ವಿದಿತ್ವಾ
ಭಜ ಭಜ ಭಗವಂತಂ ಪಾರ್ವತೀಕಾಂತಮೇಕಂ ॥೧೦೪॥

ಎಲ್ಲಿಯ ವರೆಗೆ ಮನುಷ್ಯನು ಶ್ರೀಭ್ರಮರಾಂಬಿಕೆಯನ್ನು ಪೂಜಿಸುವುದಿಲ್ಲವೋ ಅಲ್ಲಿಯವರೆಗೂ ದಾರಿದ್ರ್ಯದುಃಖವನ್ನು ಅನುಭವಿಸುವನು. ಶ್ರೀಭ್ರಮರಾಂಬಿಕೆಯ ದರ್ಶನವನ್ನೂ ಪೂಜೆಯನ್ನೂ ಯಾವಾಗ ಮಾಡುವನೋ ಆ ಕೂಡಲೇ ಸಕಲ ದುಃಖಗಳೂ ನಾಶವಾಗುವುವಲ್ಲದೇ ದಿನದಿಂದ ದಿನಕ್ಕೆ ಐಶ್ವರ್ಯವು ಬೆಳೆಯುತ್ತದೆ. ಈ ಭ್ರಮರಾಂಬಿಕೆಯು ಭಕ್ತರಿಗೆ ಸಂಪತ್ತನ್ನು ಅನುಗ್ರಹಮಾಡುವುದಕ್ಕೆ ಸಿದ್ಧಳಾಗಿ ನಿಂತಿರುವಳು. ಏಕೆಂದರೆ ಸಕಲ ಸಂಪತ್ತುಗಳಿಗೂ ಮೂಲಸ್ಥಾನರೂಪಳು ಈ ದೇವಿಯೇ ಆಗಿರುವಳು. ||೧೦೧-೧೦೨||

ಈ ಭ್ರಮರಾಂಬಿಕೆಯನ್ನು ಸಮಸ್ತ ಸಂಪತ್ತುಗಳಿಗೂ ಗಣಿ ಎಂದೇ ಹೇಳುವರು. ಅಂಥಾ ಮಹಾಮಹಿಮೆಯಾದ ಭ್ರಮರಾಂಬಿಕೆಯು ಶ್ರೀಶೈಲಕ್ಷೇತ್ರದಲ್ಲಿ ತನ್ನ ಸಾನ್ನಿಧ್ಯವನ್ನು ದಯಪಾಲಿಸುವಳು. ಆಕೆಯ ಮಾಹಾತ್ಮ್ಯವು ವೇದಗಳಿಗೂ ಸಹ ಈ ವರೆಗೂ ತಿಳಿದಿರುವುದಿಲ್ಲ. ಈಕೆಯನ್ನು ದರ್ಶನ ಮಾಡಿ ಆರಾಧಿಸಲೇ ಬೇಕು. ||೧೦೩||

ಎಲೈ ರಾಜನೇ, ಎಷ್ಟೆಂದು ಹೇಳುತ್ತಾ ಹೋದರೂ ಈ ಶಿವಪೂಜೆಯ ಮತ್ತು ಶ್ರೀಶೈಲದ ಮಹಿಮೆಯು ಹೇಳಿ ಪೂರೈಸುವುದಿಲ್ಲ. ಎಷ್ಟು ಹೇಳುತ್ತಾ ಹೋದರೂ ಮತ್ತೂ ಮತ್ತೂ ಹೇಳೋಣವೆನಿಸುತ್ತದೆ. ಹೇಗೇ ಆದರೂ

ಇತಿ ಶ್ರೀಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಶ್ರೀಶೈಲಮಹಿಮಾವರ್ಣನಂ ನಾಮ ದ್ವಾತ್ರಿಂಶೋಽಧ್ಯಾಯಃ

ಮನುಷ್ಯನು ತನ್ನ ಜೀವಮಾನದಲ್ಲಿ ಒಂದುಸಲವಾದರೂ ಶ್ರೀಶೈಲದ ಯಾತ್ರೆಯನ್ನು ಮಾಡಿದರೆ ಅನಂತ ಪುಣ್ಯವನ್ನು ಪಡೆಯುವನು. ಆ ಪರಮೇಶ್ವರನ ಅನುಗ್ರಹದಿಂದ ಸಮಸ್ತ ಜಗತ್ತಿಗೂ ಅಧಿಪತಿಯೇ ಆಗುತ್ತಾನೆ. ಈ ಎಲ್ಲಾ ಮಹತ್ತ್ವ ಸಂಗತಿಗಳನ್ನೂ ತಿಳಿದುಕೊಂಡರೆ, ನೀನೂ ಸಹ ಪರಮೇಶ್ವರನು ಉಗ್ರನೆಂಬ ಹೆಸರನ್ನು ಪಡೆದುಕೊಂಡಿದ್ದರೂ ಪರಮದಯಾಶಾಲಿಯಾಗಿದ್ದಾನೆಂದು ಅಭಿಪ್ರಾಯಪಟ್ಟುಕೊಳ್ಳುವೆ. ಆತನು ಪಾಪಿಗಳಿಗೂ, ದ್ರೋಹಿಗಳಿಗೂ, ಉಗ್ರನಾಗಿರುವನಲ್ಲದೆ, ಭಕ್ತರ ಮೇಲೆ ಎಂದೂ ಉದಾಸೀನನಾಗುವುದಿಲ್ಲ. ಅದುದರಿಂದ ಆ ಪಾರ್ವತೀರಮಣನಾದ ಭಗವಂತನನ್ನೇ ನಂಬಿ ಶರಣೆಂದು ಭಜಿಸು, ಧ್ಯಾನಿಸು, ಪೂಜಿಸು, ಆರಾಧಿಸು. ನಿನಗೆ ಒದಗಿರುವ ಎಲ್ಲಾ ಕಷ್ಟಗಳೂ ಪರಿಹಾರವಾಗುವುವು. ಮತ್ತೆ ಸಂಪತ್ತನ್ನೂ ಆನಂದವನ್ನೂ ಪಡೆಯುವೆ. ಎಂದು ಶಾಂಭವನು ರಾಜನಿಗೆ ಶಿವಪೂಜಾಮಹಿಮೆಯನ್ನು ವಿವರಿಸಿದನು. ||೧೦೪||

ಇಲ್ಲಿಗೆ ಶ್ರೀಶಿವರಹಸ್ಯದಲ್ಲಿ ಹರನೆಂಬ ಮೂರನೆಯ ಅಂಶದೊಳಗೆ ಪೂರ್ವಾರ್ಧದಲ್ಲಿ ಶ್ರೀಶೈಲಮಹಿಮಾವರ್ಣನೆ ಎಂಬ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ತ್ರಯಸ್ತ್ರಿಂಶೋಽಧ್ಯಾಯಃ

॥ ರಾಜೋವಾಚ ॥

ಪ್ರಮತ್ತೇನ ಮಯಾ ಪೂರ್ವಂ ತ್ಯಕ್ತಂ ಶಂಕರಪೂಜನಂ ।
ತತ್ತ್ಯಾಗೇನ ಗತಂ ಭಾಗ್ಯಂ ನ ಪೂಜಾಸಾಧನಾನ್ಯಪಿ ॥೧॥

ನ ಪಂಚಾಮೃತಸಾಮಗ್ರೀ ನ ವಾ ನೈವೇದ್ಯಸಾಧನಂ ।
ನ ದೀಪದಾನಸಾಮಗ್ರೀ ನ ವಾ ಶ್ರೀಚಂದನಾದಿಕಂ ॥೨॥

ಮೂವತ್ತುಮೂರನೆಯ ಅಧ್ಯಾಯ

ನಾನು ಐಶ್ವರ್ಯಮದದಿಂದಲೂ ವಿಲಾಸದ ಮೋಹದಿಂದಲೂ ಈಶ್ವರನನ್ನು ಮರೆತುಬಿಟ್ಟೆನು. ಆತನನ್ನು ಒಂದು ದಿನವೂ ಧ್ಯಾನಮಾಡಲಿಲ್ಲ. ಅತ್ಯಂತ ವೈಭವದಿಂದ ಪೂಜಿಸಲು ನನಗೆ ಆಗ ಸಾಧ್ಯವಾಗುತ್ತಿದ್ದರೂ ಅವಿವೇಕದಿಂದ ಮೂಢನಾಗಿ ಒಂದು ದಿವಸವೂ ಈಶ್ವರನನ್ನು ಪೂಜಿಸಲಿಲ್ಲ. ಆ ಪರಮೇಶ್ವರನ ಪೂಜಾತ್ಯಾಗದಿಂದಲೇ ನನಗೆ ಈ ದುರವಸ್ಥೆಯು ಪ್ರಾಪ್ತವಾಯಿತು. ನನ್ನ ಎಲ್ಲಾ ಭಾಗ್ಯಗಳೂ ನಾಶವಾದವು. ಈಗ ಏನು ಮಾಡಲಿ? ಆ ಪರಮೇಶ್ವರನನ್ನು ಆರಾಧಿಸಲು ಯಾವ ಸಲಕರಣೆಗಳೂ ನನ್ನ ಹತ್ತಿರ ಉಳಿದಿಲ್ಲವಲ್ಲಾ ಎಂದು ರಾಜನು ಪರಿತಾಪಪಡುತ್ತಾ ಹೀಗೆ ಹೇಳತೊಡಗಿದನು. ॥೧॥

ಈಗ ಪೂಜಾಸಾಮಗ್ರಿಗಳು ನನ್ನ ಹತ್ತಿರ ಏನೂ ಇಲ್ಲವಲ್ಲ. ಪಂಚಾಮೃತ ಸಾಮಗ್ರಿಗಳೂ ಇಲ್ಲ. ನೈವೇದ್ಯ ಮಾಡೋಣವೆಂದರೆ ಯಾವ ಭಕ್ಷ್ಯಭೋಜ್ಯಗಳೂ ಇಲ್ಲ. ದೀಪಸೇವೆ ಮಾಡಲೂ ಸಹ ಈಗ ಸಹಾಯವಿಲ್ಲ. ನನ್ನ ಸಂಗಡ ದೀಪ

ಏವಂ ಸತಿ ಕಥಂ ಪೂಜಾ ಕರ್ತವ್ಯಾ ಪ್ರೀತಿಪೂರ್ವಕಂ ।
ಭಾವನಾ ಕಥಮುಂಶಾನಾಮುಪೇಕ್ಷಾಂ ನ ಕರೋತಿ ಕಿಂ ॥೩॥

ಸ್ಮರಣಂ ಕಥಮುಂಶೇನ ವಿನಾ ಕಿಂ ಕರಣಂ ಭವೇತ್ ।
ಕಥಮುಂಶವಿಮುಕ್ತೇನ ಕರಣೇನ ಕುತಃ ಫಲಂ ॥೪॥

ಫಲಂ ಸಂಭಾವಿತಂ ಕಿಂ ವಾ ಶುದ್ಧಗೋದೋಹನಾದಿನಾ ।
ಕಿಂ ಪ್ರಯೋಗಾಪ್ರವಿಷ್ಟೇನ ತೇನ ಗೋದೋಹನೇನ ವಾ ॥೫॥

ಕಿಂ ಸಾನ್ನಾಯ್ಯೇನ ವಾ ದಧ್ನಾ ಕೇವಲಾಜ್ಯೇನ ವಾ ಫಲಂ ।
ಪತ್ನ್ಯವೇಕ್ಷಿತಮೇವಾಜ್ಯಂ ಪ್ರಯೋಗಾಂಗಂ ನ ಕೇವಲಂ ॥೬॥

ಸಾಧನಗಳು ಯಾವುವೂ ಇಲ್ಲ. ಗಂಧವೂ ಇಲ್ಲದ್ದರಿಂದ ಗಂಧವನ್ನೂ ಅರ್ಪಿಸಲು ಸಾಧ್ಯವಿಲ್ಲ. ॥೨॥

ಹೀಗೆ ನಾನು ಅತ್ಯಂತ ರಿಕ್ತಹಸ್ತನಾಗಿರಲು ಪರಮೇಶ್ವರನನ್ನು ಪೂಜಿಸಲು ಹೇಗೆ ಸಾಧ್ಯವಾದೀತು ? ಉಪಕರಣಗಳು ಒಂದೂ ಇಲ್ಲದಮೇಲೆ ಭಕ್ತಿಯನ್ನು ಹೇಗೆ ತೋರಿಸುವುದು ? ಭಕ್ತಿಭಾವನೆಯ ಪ್ರಕಟಣೆಗೂ ಅಭಿವೃದ್ಧಿಗೂ ಉಪಕರಣಗಳ ಆವಶ್ಯಕತೆ ಇರುತ್ತದೆಯಷ್ಟೆ. ॥೩॥

ಪೂಜಾಸಾಮಗ್ರಿಗಳು ಪೂಜೆಯ ಅಂಗಗಳಷ್ಟೆ. ಅಂಥ ಪೂಜಾಸಾಮಗ್ರಿಗಳು ಇಲ್ಲದ ಮೇಲೆ ಶಂಕರನನ್ನು ಹೇಗೆ ಧ್ಯಾನಮಾಡುವುದು ? ಅಂಗಗಳು ಇಲ್ಲದಿರುವಾಗ ಅಂಗಿಯನ್ನು ಸಾಧಿಸುವುದು ಸಾಧ್ಯವೆ ? ಮಾಡುವುದು ತಾನೇ ಹೇಗೆ ? ಅಂಗಗಳು ವಿನಾಕೃತವಾಗಲು ಫಲವು ಹೇಗೆತಾನೆ ಲಭಿಸುವುದು ? ॥೪॥

ಸರ್ವಸಾಮಾನ್ಯವಾಗಿ ಹಸುವನ್ನು ಕರೆಯಿಸಿ ಹಾಲು ಹಿಂಡಿದರೆ ಅದರಿಂದ ಯಾವ ಫಲವೂ ಸಿದ್ಧಿಸುವುದಿಲ್ಲ. ಅಗ್ನಿಹೋತ್ರಕ್ಕೆ ಅಂಗವಾಗಿ ಹಸುವನ್ನು ಹಾಲನ್ನು ಹಿಂಡಿದರೆ ಮಾತ್ರ ಅದರಿಂದ ಫಲವು ದೊರೆಯುವುದು. ಅಗ್ನಿಹೋತ್ರದಲ್ಲಿ ಈ ಗೋದೋಹನವನ್ನು ಮಾಡದೇಹೋದರೂ ಅಂಗಶೂನ್ಯತೆಯುಂಟಾಗುವುದರಿಂದ ಫಲ ಲಭಿಸಲಾರದಷ್ಟೆ. ॥೫॥

ಯಾಗಕ್ಕೆ ಅಂಗವಾಗದ ಸಾನ್ನಾಯ್ಯ (ಮೊಸರು ಮತ್ತು ಹಾಲು ಎರಡೂ ಕೂಡಿದ್ದು) ದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಹಾಗೆ ಉದಾಸೀನವಾದ

ಜಘಾನೀವತ್ಕಿಮೇತಸ್ಯಾಪ್ಯಜಸ್ಯಾಂಗತ್ವಮೀಪ್ಸಿತಂ ।
ತತ್ಕಾವತ್ಕಥಮಂಶೋಽಪಿ ಕರಣಾಪೇಕ್ಷಿತಃ ಖಲು ॥೭॥

ಏವಂ ಚ ಕರಣೇನಾಪಿ ಶ್ರೀಮಹಾದೇವಪೂಜಯಾ ।
ನಿಷ್ಪತ್ತಿಃ ಫಲಜಾತಸ್ಯ ಕಥಮಂಶೈರ್ವಿನಾ ತು ನ ॥೮॥

ಇತಿ ತದ್ವಚನಂ ಶ್ರುತ್ವಾ ತಮಾಹ ಪ್ರೀತಿಪೂರ್ವಕಂ ॥೯॥

॥ ಶಾಂಕರ ಉವಾಚ ॥

ಸಂಪತ್ಕಾಲೇ ಕಥಂ ತ್ಯಕ್ತಂ ತ್ವಯಾ ಶಂಕರಪೂಜನಂ ।
ಸಂಪದ್ವಿಲಯಕಾಲೀನೋಽಪ್ಯನುತಾಪಸ್ತವಾಧುನಾ ॥೧೦॥

ದಧಿಯಿಂದಲೂ ಆಜ್ಯದಿಂದಲೂ ಯಾವ ಫಲವೂ ಸಿದ್ಧಿಸುವುದಿಲ್ಲ. ಕೇವಲ ಯಜಮಾನನ ಪತ್ನಿಯು ಯಾವ ಆಜ್ಯದಲ್ಲಿ ತನ್ನ ಮುಖಪ್ರತಿಬಿಂಬವನ್ನು ನೋಡಿಕೊಂಡಿರುತ್ತಾಳೆಯೋ ಆ ಆಜ್ಯವೇ ಯಾಗಕ್ಕೆ ಅಂಗವಾಗುವುದು. ಮತ್ತು ಅದೃಷ್ಟವನ್ನೂ ಹುಟ್ಟಿಸುವುದು. ಆದುದರಿಂದ ಫಲ ದೊರೆಯಬೇಕಾದರೆ ಕರ್ಮವನ್ನು ಸಮಗ್ರಾಂಗದೊಡನೆ ಅನುಷ್ಠಾನ ಮಾಡಬೇಕಾಗುವುದು. ॥೬॥

ಅಂಗಗಳಿಂದೊಡಗೂಡಿದ ಅಂಗಿಯೇ ಕಾರ್ಯಯೋಗ್ಯವಾದುದು. ಅಂಗಿಯಿಂದ ಉಂಟಾಗುವ ಫಲವು ಒಂದೊಂದೇ ಅಂಗದಿಂದ ತಯಾರಾಗಿ, ಕೊನೆಗೆ ಎಲ್ಲಾ ಅಂಗಗಳಿಂದ ಫಲವು ಸಮಗ್ರವಾಗುವುದು. ಅಂತೂ ಅಂಗಗಳಿಗೂ ಫಲಕ್ಕೂ ಅತ್ಯಾವಶ್ಯಕವಾದ ಸಂಬಂಧವಿರುತ್ತದೆ. ಅಂದಮೇಲೆ ಪೂಜೆಗೆ ಸಾಮಗ್ರಿಗಳು ಅಂಗವಾಗಿರಲು ಆ ಸಾಮಗ್ರಿಗಳಿಲ್ಲದೇ ಪೂಜೆಯನ್ನು ನಡೆಸಿದರೆ ಫಲವು ಹೇಗೆ ಹುಟ್ಟುವುದು ? ಪೂಜೆಯಲ್ಲೂ ಉಪಕರಣಗಳು ಅತ್ಯಪೇಕ್ಷಿತಗಳಷ್ಟೆ. ॥೭-೮॥

ಈರೀತಿಯಾಗಿ ರಾಜನು ಆಶಂಕೆಯೊಡನೆ ಮಾತನಾಡಲು ಅದನ್ನು ಕೇಳಿ ಆ ಶಿವಭಕ್ತನು ಪ್ರೀತಿಪುರಸ್ಸರವಾಗಿ ಉತ್ತರ ಹೇಳಿದನು. ॥೯॥

" ಎಲೈ ರಾಜನೇ, ಅಷ್ಟೊಂದು ಐಶ್ವರ್ಯವಿದ್ದಾಗ ಮೌಢ್ಯದಿಂದ ಶಿವಪೂಜೆಯನ್ನು ಬಿಟ್ಟುಬಿಟ್ಟೆ. ಈಗ ಈರೀತಿ ದೀನನಾಗಿರುವೆ. ಈಗ ಹೀಗೆ ಆಶಂಕೆ ಮಾಡಿದರೆ ಏನನ್ನು ಹೇಳುವುದು ? ಆಗ ಶಿವಪೂಜೆಯನ್ನು ಏತಕ್ಕೆ ಬಿಟ್ಟೆ ? ಬಿಡುವುದಕ್ಕೆ ಮನಸ್ಸಾದರೂ ಹೇಗೆ ಬಂದಿತು ? ಅಥವಾ ಈಗ ದಾರಿದ್ರ್ಯವು ಬಂದು

ಕಥಂಚಿತ್ಪುಣ್ಯಸಾಮಗ್ರೀಂ ಸಂಪಾದಯಿತುಮರ್ಹಸಿ ।
ಕಥಮನ್ನಾನಿ ದಿವ್ಯಾನಿ ಕಥಂ ವಾ ರತ್ನಪರ್ವತಾಃ ॥೧೧॥

ಸ್ಥಿತಾಸ್ತ್ವೈರೀಶಪೂಜಾಯಾಂ ನ ಜಾತಾ ಭಕ್ತಿರುದ್ಧತಾ ।
ಪುನರ್ಭಾಗ್ಯೇಽಪಿ ಸಂಪ್ರಾಪ್ತೇ ಸೋನ್ಮಾದೇನ ತ್ವಯಾ ಕಥಂ ॥೧೨॥

ಮಹಾದೇವಾರ್ಚನಂ ಕಾರ್ಯಂ ವಿಪತ್ಕುಲವಿನಾಶಕಂ ।
ಆಪತ್ಕಾಲೇ ಯಥಾ ಭಕ್ತಿಸ್ಸಂಪತ್ಕಾಲೇ ಭವೇತ್ತಥಾ ॥೧೩॥

ಮುತ್ತಿಕೊಂಡಿರಬೇಕಾದರೆ ನಿನಗೆ ಪಶ್ಚಾತ್ತಾಪವು ಹೇಗೆ ಬಂದಿತು? ಪಶ್ಚಾತ್ತಾಪದಿಂದ ಕೇವಲ ಕೊರಗಿದರೆ ಏನು ಪ್ರಯೋಜನ? ॥೧೦॥

ಈಗ ಹೇಗಾದರೂ ಕಷ್ಟಪಟ್ಟು ಪೂಜೆಗೆ ಬೇಕಾದ ಸಾಮಗ್ರಿಗಳನ್ನು ಸಂಪಾದಿಸಬೇಕು. ಈಗ ಆ ದಿವ್ಯವಾದ ಅನ್ನಗಳೇ ಬೇಕೆಂದರೆ ಎಲ್ಲಿಂದ ದೊರೆತಾವು? ಆ ರತ್ನಪರ್ವತಗಳೂ ಆ ರತ್ನಾಭರಣಗಳೂ ಪೂಜೆಗೆ ಬೇಕೆಂದರೆ ತಾನೇ ಎಲ್ಲಿಂದ ದೊರಕುವುವು? ಅವು ಯಾವುವೂ ಸಿಕ್ಕುವಹಾಗಿಲ್ಲ. ಹೇಗೋ ಕಷ್ಟಪಟ್ಟು ಸಂಪಾದನೆಗೆ ಪ್ರಯತ್ನಿಸು. ॥೧೧॥

ಸಕಲ ಸಂಪತ್ತುಗಳೂ ಹತ್ತಿರವಿದ್ದಾಗ ನೀನು ಅವಜ್ಞೆಯಿಂದ ಪರಮೇಶ್ವರನಲ್ಲಿ ಭಕ್ತಿತೋರಲಿಲ್ಲ. ಆತನನ್ನು ಪೂಜಿಸಲಿಲ್ಲ. ನೀನು ಅತ್ಯಂತ ಚಪಲಚಿತ್ತನು. ನಿನಗೆ ಮತ್ತೊಮ್ಮೆ ಐಶ್ವರ್ಯವು ದೊರೆತರೂ ಇಂದ್ರಿಯಚಾಪಲ್ಯದಿಂದ ಪರಮೇಶನ ಪೂಜೆಯನ್ನು ಮಾಡುವೆಯೋ ಅಥವಾ ಮರತೇಬಿಡುವೆಯೋ? ಆದುದರಿಂದ ನಿನಗೆ ಈಗ ದಾರಿದ್ರ್ಯವೇ ಯುಕ್ತವಾದದ್ದು. ದಾರಿದ್ರ್ಯದುಃಖದಿಂದಾದರೂ ಕೊಂಚ ಭಕ್ತಿಯಿಂದ ಪೂಜಿಸಲು ತೊಡಗುವೆ. ॥೧೨॥

ದಾರಿದ್ರ್ಯದಿಂದ ಕಷ್ಟಪಡುತ್ತಿದ್ದರೂ ಶಿವಧ್ಯಾನವನ್ನೂ ಶಿವಾರಾಧನೆಯನ್ನೂ ಭಕ್ತಿಯಿಂದ ಮಾಡಲೇಬೇಕು. ಭಕ್ತಿಯಲ್ಲೇನೂ ತಾರತಮ್ಯವಿರುವುದಿಲ್ಲ. ಸಂಪತ್ಕಾಲದಲ್ಲಿ ಹೇಗೆ ಭಕ್ತಿ ಇರಬಲ್ಲದೋ ಹಾಗೆಯೇ ಆಪತ್ಕಾಲದಲ್ಲಿಯೂ ಭಕ್ತಿ ಇದ್ದೇ ಇರುತ್ತದೆ. ಎಲ್ಲಾ ಸಾಮಗ್ರಿಗಳಿಗಿಂತಲೂ ಭಕ್ತಿಯೇ ಶ್ರೇಷ್ಠವಾದುದು. ಆ ಭಕ್ತಿಯೇ ವಿಪತ್ತುಗಳನ್ನೂ, ಬಂದೊದಗಿದ ಸಕಲ ಕಷ್ಟಗಳನ್ನೂ ನಾಶಮಾಡುವುದು. ಆದುದರಿಂದ ನೀನು ಭಕ್ತಿಯಿಂದ ಆರಾಧಿಸು. ॥೧೩॥

ಸ ತರತ್ಯೇವ ಸಂಸಾರಂ ದಿವ್ಯಸಾಧನಪೂಜಯಾ ।
ತೇ ರತ್ನಪರ್ವತಾ ನಷ್ಟಾಃ ತ್ವಯಾ ಯೇ ಸಮುಪಾರ್ಜಿತಾಃ ॥೧೪॥

ತತಃ ಕಥಂ ತ್ವಯಾ ಕಾರ್ಯಂ ರತ್ನೈರ್ಲಿಂಗಸ್ಯ ಪೂಜನಂ ।
ರತ್ನೇನೈಕೇನ ಯಃ ಕುರ್ಯಾತ್ ಶ್ರೀಮಹಾದೇವಪೂಜನಂ ॥೧೫॥

ಸ ಸಂಪದ್ರಾಶಿಸಂಪನ್ನಃ ಕಲ್ಪಾಂತೇಽಪಿ ಭವಿಷ್ಯತಿ ।
ತಾನಿ ರತ್ನಾನಿ ದಗ್ಧಾನಿ ಶಂಕರಾನರ್ಪಿತಾನ್ಯತಃ ॥೧೬॥

ತೇಽಪ್ಯನ್ನರಾಶಯೋ ದಗ್ಧಾಶ್ಶಂಕರಾಯಾನಿವೇದಿತಾಃ ।
ಗೋಕ್ಷೀರಘೃತಕುಲ್ಯಾಶ್ಚ ಶಂಕರಾನರ್ಪಿತಾಃ ಸ್ವತಃ ॥೧೭॥

ಶುಷ್ಕಾ ಏವ ಜಲಾನಾಂ ಚ ಕುಲ್ಯಾಶ್ಶಲ್ಯಾಕುಲಾ ಇವ ।
ದಗ್ಧಂ ಪುಷ್ಪವನಂ ಸರ್ವಂ ಯೈಃ ಪುಷ್ಪೈರೀಶಪೂಜನಂ ॥೧೮॥

ಪೂಜೆಗೆ ದಿವ್ಯಸಾಧನವಾದ ಭಕ್ತಿಯೊಂದಿದ್ದರೂ ಭಕ್ತನು ಸಂಸಾರದ ಸಕಲ ದುಃಖಗಳನ್ನೂ ದಾಟಿ ಆನಂದವನ್ನು ಪಡೆಯುವನು. ನೀನು ಮೊದಲು ಅನೇಕಾನೇಕ ರತ್ನರಾಶಿಗಳನ್ನೇ ಸಂಪಾದಿಸಿ ಇಟ್ಟುಕೊಂಡಿದ್ದೆ. ಅಂತಹ ಅಪೂರ್ವವಾದ ಸಂದರ್ಭವು ಒದಗಿದ್ದರೂ ನೀನು ಪರಮೇಶ್ವರನನ್ನು ಆ ರತ್ನಗಳಿಂದ ಪೂಜಿಸಲಿಲ್ಲ. ಒಂದೇ ಒಂದು ರತ್ನವನ್ನು ಅರ್ಪಿಸಿ ಶಂಕರನನ್ನು ಆರಾಧಿಸಿದರೂ ಕೂಡ ಕಲ್ಪಾಂತ್ಯದವರೆಗೂ ಸಂಪದ್ರಾಶಿಗೇ ಅಧಿಪತಿಯಾಗಬಹುದಾಗಿತ್ತು. ಆದರೆ ನೀನು ಅದನ್ನೂ ಅಜ್ಞಾನದಿಂದ ಅಂಧನಾಗಿ ಮಾಡಲಿಲ್ಲ. ಆದುದರಿಂದಲೇ ನಿನ್ನ ಎಲ್ಲಾ ಐಶ್ವರ್ಯಗಳೂ ನಾಶವಾದವು. ||೧೪-೧೫-೧೬||

ನೀನು ದಿವ್ಯವಾದ ಅನ್ನಗಳನ್ನೂ ಭಕ್ಷ್ಯಭೋಜ್ಯಗಳನ್ನೂ ಪಡೆದುಕೊಂಡಿದ್ದೆ. ಅವುಗಳನ್ನು ಶಂಕರನಿಗೆ ನಿವೇದಿಸದೇ ಚೋರನಂತೆ ಎಲ್ಲವನ್ನೂ ನೀನೇ ಭುಂಜಿಸುತ್ತ ಬಂದೆ. ಆದ್ದರಿಂದಲೇ ಆ ನಿನ್ನ ಆಹಾರರಾಶಿಗಳೆಲ್ಲಾ ಸುಟ್ಟು ನಾಶವಾದವು. ಹಾಗೆಯೇ ಹಾಲು, ಮೊಸರು, ತುಪ್ಪ ಇವುಗಳು ಬೇಕಾದಷ್ಟು ಇದ್ದರೂ ಪರಮೇಶ್ವರನಿಗೆ ಅರ್ಪಿಸದೇ ಉಪಭೋಗಿಸಿದ್ದರಿಂದ ಅವೂ ನಾಶವಾದವು. ||೧೭||

ನಿನ್ನಲ್ಲಿ ಸುಂದರವಾದ ಸರೋವರಗಳು ನಿರ್ಮಲವಾದ ನೀರಿನಿಂದ ತುಂಬಿರುತ್ತಿದ್ದರೂ ಅವುಗಳ ನೀರಿನಿಂದ ಪರಮೇಶ್ವರನ ಅಭಿಷೇಕವನ್ನು ಮಾಡಲಿಲ್ಲ.

ಭಕ್ತ್ಯಾ ನ ಕೃತಮೇವೇತಿ ದಗ್ಧಾಶ್ಚ ಫಲಸಂಚಯಾಃ ।
ಸ ಭಾಗ್ಯವಿಭವೋ ದಗ್ಧೋ ಭವಾನರ್ಚನತಸ್ತವ ॥೧೯॥

ಅತಃ ಕಿಮನುತಾಪೇನ ಫಲಮದ್ಯ ಭವಿಷ್ಯತಿ ।
ಮಹಾವಿಭವಸಂಪತ್ತ್ಯಾ ಶ್ರೀಮಹಾದೇವಪೂಜನಂ ॥೨೦॥

ಕರ್ತುಂ ಕಥಂ ಮಹೋತ್ಸಾಹೋ ನ ಕೃತೋ ದುರ್ಭಗಾಧಮ ।
ಧಿಗ್ ಧಿಗ್ ಜನ್ಮ ತವೇದಂ ತೇ ಜೀವನಂ ಧಿಗ್ ಧಿಗೇವ ತತ್ ॥೨೧॥

ಪುಷ್ಪಫಲಗಳಿಂದ ಸಮೃದ್ಧವಾದ ಉದ್ಯಾನವು ಬೇಕಾದಷ್ಟು ಇದ್ದರೂ ಆ ಹಣ್ಣು ಹೂಗಳನ್ನು ಶಂಕರನಿಗೆ ಅರ್ಪಿಸಲಿಲ್ಲ. ಎಲ್ಲವನ್ನೂ ಸ್ವಾರ್ಥನಿಷ್ಠನಾಗಿ ನೀನೇ ಅನುಭವಿಸುತ್ತಿದ್ದೆ. ಅದಕ್ಕೇ ಅವುಗಳೆಲ್ಲಾ ನಾಶವಾದವು. ||೧೮||

ಅಷ್ಟೊಂದು ವಿಶಾಲವಾದ ಸಂಪತ್ತನ್ನು ಪಡೆದುಕೊಂಡಿದ್ದರೂ, ಅತ್ಯಂತ ವೈಭವದಿಂದ ಈಶನ ಪೂಜೆಮಾಡಲು ಸಾಮರ್ಥ್ಯವಿದ್ದರೂ ಸ್ವಾರ್ಥಮೂಢನಾಗಿ ಎಲ್ಲವನ್ನೂ ನೀನೇ ಅನುಭವಿಸುತ್ತಾ ಇದ್ದೆ. ಅದಕ್ಕೇ ಅವುಗಳೆಲ್ಲಾ ನಷ್ಟವಾದವು. ಈಗ ಪಶ್ಚಾತ್ತಾಪಪಟ್ಟರೆ ಏನು ಪ್ರಯೋಜನ? ಸ್ವಯಂಕೃತ ಅಪರಾಧಕ್ಕೆ ಫಲವನ್ನು ಅನುಭವಿಸಲೇ ಬೇಕು. ||೧೯||

ನೀನು ಅಷ್ಟೊಂದು ಸಂಪತ್ತನ್ನು ಪಡೆದುಕೊಂಡಾಗ ವಿವೇಕವನ್ನು ಕಾಪಾಡಿಕೊಂಡು ಈಶಸೇವೆಯನ್ನು ಮಾಡುತ್ತಲೇ ಇರಬೇಕಾಗಿತ್ತು. ಆ ಪರಮೇಶ್ವರನನ್ನು ಅತ್ಯಂತ ವಿಜೃಂಭಣೆಯಿಂದ ಪೂಜಿಸಬೇಕಾಗಿತ್ತು. ಉತ್ಸವ, ಮೆರವಣಿಗೆ ಮುಂತಾದ ರಾಜೋಪಚಾರ ದೇವೋಪಚಾರಗಳಿಂದ ಆರಾಧಿಸಬೇಕಾಗಿತ್ತು. ಆದರೆ ನೀನು ಅವುಗಳೊಂದನ್ನೂ ಮಾಡಲಿಲ್ಲ. ಆ ಕಡೆಗೆ ಯೋಚಿಸಲೂ ಇಲ್ಲ. ಈ ರೀತಿ ನಿನಗೆ ಈಶಸೇವೆಯನ್ನು ತ್ಯಾಗಮಾಡಲು ಹೇಗಾದರೂ ಮನಸ್ಸು ಬಂದಿತು? ಧೈರ್ಯವಾದರೂ ಹೇಗೆ ಬಂದೀತು? ಇಂತಹ ಕೃತಘ್ನವಾದ ನಿನ್ನ ಜನ್ಮವನ್ನು ಸುಡಬೇಕು. ಶತಶಃ ಧಿಕ್ಕಾರ ಹಾಕಬೇಕು. ನಿನ್ನ ಜೀವನವೇ ಹಾಳಾಗಿ ಹೋಯಿತು. ||೨೦-೨೧||

ಶಿವಾನರ್ಚಕಜನ್ಮಾನಿ ನಿರಯಾಯ ಹಿ ಕೇವಲಂ ।
ಅತಃ ಪರಂ ವಾ ಪ್ರಯತ್ನೇನ ನವದೂರ್ವಾಂಕುರಾದಿಭಿಃ ॥೨೨॥

ತ್ರಿಪುರಾಂತಕಪೂಜಾಯಾಂ ನಿರತೋ ಭವ ಸತ್ವರಂ ।
ಇತ್ಯುಕ್ತಸ್ತಂ ಮುನಿಂ ನತ್ವಾ ಸ್ನಾತ್ವಾ ಸರಸಿ ಪಾವನೇ ॥೨೩॥

ದೂರ್ವಾಂಕುರೈಸ್ಸರಸಿಜೈಃ ಪೂಜಯಾಮಾಸ ಶಂಕರಂ ।
ಏವಂ ಸಂವಸತಸ್ತಸ್ಯ ಶ್ರೀಮಹಾದೇವಪೂಜಯಾ ॥೨೪॥

ಭೂಯಾನೇವ ಗತಃ ಕಾಲೋ ಕಾಲಕಾಲಕೃಪಾಂ ವಿನಾ ।
ಉನ್ಮತ್ತಾಯ ಮಹದ್ಭಾಗ್ಯಂ ನ ದಾತವ್ಯಮಿತೀಚ್ಛಯಾ ॥೨೫॥
ನ ದತ್ತಂ ಭಾಗ್ಯಮೀಶೇನ ಕೃತೇಽಪಿ ಶಿವಪೂಜನೇ ।

ಈಶಪೂಜೆಯನ್ನು ಮಾಡದವನ ಜನ್ಮವೇ ಅಸಾರ್ಥಕವಾದದ್ದು. ಅಲ್ಲದೇ ಶಿವಪೂಜೆಮಾಡದವನು ನರಕಕ್ಕೇ ಹೋಗುವನು. ಅಂತಹ ಪಾಪವನ್ನು ಮಾಡಿದವನೇ ಪರಶಿವಪೂಜೆಯನ್ನು ತ್ಯಾಗಮಾಡುವುದು. ಆದುದರಿಂದ ಎಲೈ ರಾಜನೇ, ಈಗಲಾದರೂ ವಿವೇಕವನ್ನು ತಾಳಿ ಶಿವಪೂಜೆಯನ್ನು ಮಾಡು. ಹೇಗಾದರೂ ಪರಮೇಶ್ವರನ ಪೂಜೆಯಲ್ಲಿ ಆಸಕ್ತನಾಗು, ತಡಮಾಡಬೇಡ." ||೨೨||

ಆಗ ಆ ರಾಜನು ಆ ಶಿವಭಕ್ತನ ಉಪದೇಶದಿಂದ ಎಚ್ಚರಗೊಂಡನು. ಅನಂತರ ಆ ಶಾಂಕರನಿಗೆ ನಮಸ್ಕರಿಸಿ, ಸರೋವರಕ್ಕೆ ಹೋಗಿ ಸ್ನಾನಮಾಡಿ, ಅಲ್ಲಿಯೇ ದೂರ್ವೆಗಳನ್ನೂ ಕಮಲಗಳನ್ನೂ ಸಂಗ್ರಹಿಸಿ ತಂದು ಭಕ್ತಿಯಿಂದ ಶಂಕರನನ್ನು ಪೂಜಿಸಲು ಆರಂಭಮಾಡಿದನು. ||೨೩||

ಇದೇ ರೀತಿಯಾಗಿ ಆ ರಾಜನು ಅನೇಕ ದಿವಸಗಳ ವರೆಗೂ ನಿಯಮದಿಂದಲೂ ಭಕ್ತಿಯಿಂದಲೂ ಪೂಜೆಮಾಡುತ್ತ ಬಂದನು. ಆದರೆ ಆತನಿಗೆ ಪರಮೇಶ್ವರನ ಅನುಗ್ರಹ ದೊರೆಯಲಿಲ್ಲ. ||೨೪||

ಪರಮೇಶ್ವರನು ಈ ರಾಜನ ಪ್ರಮತ್ತತೆಯನ್ನೂ ಸ್ವಾರ್ಥಪರತೆಯನ್ನೂ ಕಂಡಿದ್ದರಿಂದ ಇಂತಹ ಉನ್ಮತ್ತನಿಗೆ ಭಾಗ್ಯವನ್ನು ಅನುಗ್ರಹಿಸಕೂಡದೆಂಬ ಅಭಿಪ್ರಾಯದಿಂದ ಆತನಿಗೆ ಅನುಗ್ರಹಿಸಲಿಲ್ಲ. ಆ ರಾಜನು ಎಷ್ಟೇ ಪೂಜೆಯನ್ನು ಮಾಡುತ್ತಿದ್ದರೂ ಪರಮೇಶ್ವರನಿಗೆ ಆತನಮೇಲೆ ಕರುಣೆಯು ಬರುತ್ತಿದ್ದಿಲ್ಲ. ||೨೫||

ಅತಿಪ್ರಮತ್ತಭಾಗ್ಯಾನಿ ಹೃತಾನ್ಯೇವ ಹಿ ಲೀಲಯಾ ॥೨೬॥

ಸ್ವತಂತ್ರೇಣ ಮಹೇಶೇನ ಪ್ರಭುತ್ವಂ ಪ್ರಕಟೀಕೃತಂ ।
ಅನ್ನಾಭಾವಾನ್ನಿರಾಹಾರಃ ಸ ಚಿರಂ ಶಿವಪೂಜಯಾ ॥೨೭॥

ಕಾಲಂ ನೀತ್ವಾ ಸ್ಥಿತಸ್ತತ್ರ ತ್ರಿಪುರಾಂತಕಮಂದಿರೇ ।
ತತಃ ಪರಂ ಸ ರಾಜಾ ತು ಪ್ರದೋಷೇ ಸೋಮವಾಸರೇ ॥೨೮॥

ಆರ್ದ್ರಾನಕ್ಷತ್ರಸಂಯುಕ್ತೇ ಪೂಜಯಾಮಾಸ ಶಂಕರಂ ।
ದೂರ್ವಾಂಕುರೈರಪಾರೈಶ್ಚ ಕಮಲೈರಮಲೈರ್ಜಲೈಃ ॥೨೯॥

ತಮಗೆ ಬೇಕಾದಷ್ಟು ಇದೆ ಎಂದು ಗರ್ವಪಟ್ಟು ದಾನಧರ್ಮಗಳನ್ನು ಮಾಡದವರ ಭಾಗ್ಯವನ್ನು ಪರಮೇಶ್ವರನು ಸ್ವತಃ ತಾನೇ ನಾಶಮಾಡುವನು. ಹಾಗೆಯೇ ಈಗಲೂ ಕೂಡ ಉದ್ದೇಶಪೂರ್ವಕವಾಗಿಯೇ ಆತನಿಗೆ ದಯೆ ತೋರ ಲಿಲ್ಲ. ಅನುಗ್ರಹಮಾಡಲು ಅಥವಾ ನಾಶಮಾಡಲು ಪರಮೇಶ್ವರನು ಸ್ವತಂತ್ರನಷ್ಟೆ. ಆದ್ದರಿಂದಲೇ ಆತನು ಈಶ್ವರನು. ॥೨೬॥

ಅನಂತರ ಆ ರಾಜನು ಹೇಗಾದರೂ ಶಂಕರನ ಕೃಪೆಯನ್ನು ಸಂಪಾದಿಸ ಬೇಕೆಂದು ಹಠಮಾಡಿಕೊಂಡು ಅತ್ಯಂತ ನಿಯಮದಿಂದ ಶಿವಪೂಜೆಯನ್ನು ಮಾಡುವನು. ಕೊನೆಕೊನೆಗೆ ಆಹಾರವನ್ನೆಲ್ಲಾ ಬಿಟ್ಟು ಉಪವಾಸವಿದ್ದು ಆರಾಧನೆ ಮಾಡಲು ತೊಡಗಿದನು. ಹೀಗೆಯೇ ಆ ತ್ರಿಪುರಾಂತಕಲಿಂಗವಿರುವ ಶಿವಾಲಯದಲ್ಲಿ ಕಾಲಕಳೆಯುತ್ತಾ ಬಂದನು. ॥೨೭॥

ಹೀಗೆಯೇ ನಿಯಮದಿಂದ ಆತನು ಆರಾಧಿಸುತ್ತಿರಲು ಒಂದುದಿನ ಪ್ರದೋಷ ಬಂದಿತು. ಅದೇ ದಿನ ಸೋಮವಾರವೂ ಆರ್ದ್ರಾನಕ್ಷತ್ರವೂ ಬಂದಿತ್ತು. . ಆ ದಿವಸ ವನ್ನು ಮಹಾಪುಣ್ಯದಿವಸವೆಂದು ಅರಿತುಕೊಂಡು ಆ ರಾಜನು ಅತ್ಯಂತ ನಿಯಮ ದಿಂದಲೂ ಪರಮ ಭಕ್ತಿಯಿಂದಲೂ ಪರಮೇಶ್ವರನನ್ನು ಪೂಜಿಸತೊಡಗಿದನು. ॥೨೮॥

ಆದಿನ ವಿಪುಲಗಳಾದ ದೂರ್ವೆಗಳಿಂದಲೂ ಕಮಲಗಳಿಂದಲೂ ಭಕ್ತಿಯಿಂದ ಪೂಜಿಸಿದನು. ಶುದ್ಧವಾದ ಜಲದಿಂದ ಅಭಿಷೇಕ ಸೇವೆಯನ್ನು ಮಾಡಿದನು. ಪೂಜೆಯ ಉತ್ತರಾಂಗವಾಗಿ ಅಷ್ಟಾಂಗ ಪ್ರಣಾಮವನ್ನೂ ಕೊನೆಗೆ ಭಜನ, ನರ್ತನ

ಪ್ರಣಾಮೈರಪಿ ನೃತ್ಯೈಶ್ಚ ತೋಷಯಾಮಾಸ ಶಂಕರಂ ।
ತತಃ ಪರಂ ಮಹಾದೇವಃ ಪ್ರಸನ್ನಃ ಕರುಣಾನಿಧಿಃ ॥೩೦॥

ದದೌ ಭಾಗ್ಯಾನ್ಯನಂತಾನಿ ತಸ್ಮೈ ರಾಜ್ಞೇ ವಿಶೇಷತಃ ।
ತತಸ್ಸ ರಾಜಾ ಸಂಪ್ರಾಪ್ಯ ಭಾಗ್ಯಾನಿ ವಿವಿಧಾನ್ಯಪಿ ॥೩೧॥

ಪ್ರಹೃಷ್ಟಶ್ಶಂಕರಂ ಸ್ಮೃತ್ವಾ ಚಕಾರ ಶಿವಮಂದಿರಂ ।
ರತ್ನಪ್ರಾಕಾರಸಂಯುಕ್ತಮನಂತವಿಭವಂ ಮುದಾ ॥೩೨॥

ಸ ಭಕ್ತ್ಯಾ ಕಾರಯಾಮಾಸ ದಿವ್ಯಪುಷ್ಪವನಾನ್ಯಪಿ ।
ಕೋಟಿಶೋ ದೀಪಮಾಲಾಶ್ಚ ರತ್ನಪಾತ್ರೇಷು ಭಕ್ತಿತಃ ॥೩೩॥

ಚಕಾರ ಧೂಪಗಿರಯಃ ಕಲ್ಪಿತಾಸ್ತೇನ ವಹ್ನಿಷು ।
ಅಪಾರರತ್ನಗಿರಯಃ ಶಂಕರಾಯ ಸಮರ್ಪಿತಾಃ ॥೩೪॥

ಗಳಿಂದಲೂ ಆರಾಧಿಸಿದನು. ಕರುಣಾಳುವಾದ ಪರಮೇಶ್ವರನು ಆಗ ಆತನ ಮೇಲೆ ದಯೆ ತೋರಿದನು. ||೨೯-೩೦||

ಆ ರಾಜನ ಪೂಜೆಗೂ ಭಕ್ತಿಗೂ ಮೆಚ್ಚಿ ಪರಮೇಶ್ವರನು ಉದಾರವಾದ ಭಾಗ್ಯವನ್ನು ಆತನಿಗೆ ಕರುಣಿಸಿದನು. ಹೀಗೆ ಆ ರಾಜನಿಗೆ ಮತ್ತೆ ಎಲ್ಲಾ ಬಗೆಯ ಸಂಪತ್ತುಗಳೂ ಲಭಿಸಿದವು. ||೩೧||

ಈ ರೀತಿ ತನ್ನ ಮೇಲೆ ಶಂಕರನಿಗೆ ದಯೆ ಬಂದಿತೆಂದು ಆ ರಾಜನಿಗೆ ಬಹಳ ಆನಂದವಾಯಿತು. ಅನಂತರ ಆ ಪರಮೇಶ್ವರನು ಅನುಗ್ರಹಿಸಿದ್ದಕ್ಕೆ ಮನಸ್ಸಿನಲ್ಲಿಯೇ ಆತನನ್ನು ಬಹಳವಾಗಿ ಕೊಂಡಾಡಿದನು. ಧ್ಯಾನಿಸಿದನು. ಮತ್ತು ಭಕ್ತಿಯಿಂದ ಶಿವದೇವಾಲಯವನ್ನು ಕಟ್ಟಿಸಿದನು. ಆ ಮಂದಿರವು ಬಹಳ ವಿಶಾಲವೂ ವಿಭವಯುಕ್ತವೂ ಆಗಿದ್ದಿತು. ಸುತ್ತಲೂ ರತ್ನಮಯವಾದ ಪ್ರಾಕಾರವನ್ನೂ ಕಟ್ಟಿಸಿದನು. ||೩೨||

ಆ ರಾಜನು ತನ್ನ ಅತ್ಯಂತ ಭಕ್ತಿಯನ್ನು ಪ್ರಕಟಿಸುವುದಕ್ಕಾಗಿ ಪರಮೇಶ್ವರನ ಪೂಜೆಗೆ ಬೇಕಾದ ಹೂಗಳಿಗಾಗಿ ದಿವ್ಯವಾದ ಉದ್ಯಾನವನಗಳನ್ನು ನಿರ್ಮಿಸಿದನು. ಶಿವಾಲಯದಲ್ಲಿ ರತ್ನಪಾತ್ರೆಗಳಲ್ಲಿ ಕೋಟಿಗಟ್ಟಳೆ ದೀಪಮಾಲಿಕೆಗಳಿಂದ ಅಲಂಕರಿಸಿ

ಸುಗಂಧಕುಸುಮಾಸಾರೈಃ ಪೂಜಯಾಮಾಸ ಶಂಕರಂ ।
ನೈವೇದ್ಯಪರ್ವತೈರೀಶಂ ತೋಷಯಾಮಾಸ ಭೂಪತಿಃ ॥೩೫॥

ನಾಟ್ಯೈರ್ಗಾನೈಶ್ಚ ವಿವಿಧೈರ್ದುಕೂಲಾಭರಣಾದಿಭಿಃ ।
ಪ್ರದಕ್ಷಿಣನಮಸ್ಕಾರೈರ್ಲಲಾಟಕಿಣಕಾರಣೈಃ ॥೩೬॥

ಸ್ವೇದಧಾರಾಪರಿಶ್ರಾಂತಶ್ಚಕಾರ ಶಿವತೋಷಣಂ ।
ಭೋಜಿತಾಃ ಪ್ರತ್ಯಹಂ ತೇನ ಕೋಟಿಶಶ್ಶೈವಪುಂಗವಾಃ ॥೩೭॥

ದುಕೂಲಗಿರಯೋ ದತ್ತಾಸ್ತೇಭ್ಯ ಏವ ಪ್ರಯತ್ನತಃ ।
ಸುವರ್ಣರತ್ನಗಿರಯಸ್ತೇಭ್ಯೋ ದತ್ತಾಶ್ಚ ಭಕ್ತಿತಃ ॥೩೮॥

ದನು. ಅಹೋರಾತ್ರಿಯೂ ಮಂದಿರವು ಸುಗಂಧಿತವಾಗಿರುವಂತೆ ಬೆಂಕಿಯ ಅಗ್ಗಿಷ್ಟಿಕೆಗಳಲ್ಲಿ ಧೂಪಗಳನ್ನು ಹಾಕಿರಲು ಅನುಕೂಲಪಡಿಸಿದನು. ರತ್ನಗಳ ಬೆಟ್ಟಗಳನ್ನು ತಯಾರುಮಾಡಿಸಿ ಪರಮೇಶ್ವರನಿಗೆ ಭಕ್ತಿಯಿಂದ ಅರ್ಪಿಸಿದನು. ॥೩೩-೩೪॥

ಅತ್ಯಂತ ಸುವಾಸನೆಯುಳ್ಳ ಹೂಗಳಿಂದ ಪರಮೇಶ್ವರನಿಗೆ ಪೂಜೆಯನ್ನು ಮಾಡುತ್ತಿದ್ದನು. ಶ್ರೇಷ್ಠವಾದ ಭಕ್ಷ್ಯಭೋಜ್ಯರಾಶಿಗಳನ್ನೇ ತಯಾರುಮಾಡಿಸಿ ನೈವೇದ್ಯಮಾಡುತ್ತಿದ್ದನು. ಅಲ್ಲದೇ ಪರಮೇಶ್ವರನಿಗೆ ಪ್ರೀತಿಯಾಗುವಂತೆ ಇನ್ನೂ ಅನೇಕವಿಧವಾಗಿ ಸೇವಿಸುತ್ತಿದ್ದನು. ॥೩೫॥

ಪರಮೇಶ್ವರನ ಸನ್ನಿಧಿಯಲ್ಲಿ ನೃತ್ಯ ವಾದ್ಯಗಳ ಸೇವೆಯನ್ನೂ ಸಂಗೀತ ಗೋಷ್ಠಿಗಳನ್ನೂ ನಡೆಸುತ್ತಿದ್ದನು. ಅನೇಕ ಅತ್ಯುತ್ತಮವಸ್ತ್ರಾಲಂಕಾರಗಳನ್ನೂ ಅರ್ಪಿಸುತ್ತಿದ್ದನು. ಪ್ರದಕ್ಷಿಣ ನಮಸ್ಕಾರವನ್ನು ವಿಶೇಷವಾಗಿ ಮಾಡುತ್ತಿದ್ದನು. ಆತನು ತನ್ನ ಲಲಾಟಪ್ರದೇಶದಿಂದ ಭೂಮಿಯನ್ನು ಮುಟ್ಟಿ ಕೈಮುಗಿಯುವುದು ವಿಶೇಷವಾಗಿದ್ದುದರಿಂದ ಆ ಲಲಾಟಸ್ಥಾನವು ಜಡ್ಡುಕಟ್ಟಿದಂತಾಗಿದ್ದಿತು. ಆತನು ಸತತಪರಿಶ್ರಮವಹಿಸಿ ತನ್ನ ಶರೀರದ ಆಯಾಸವನ್ನೂ ಪರಿಗಣಿಸದೇ ಈಶನನ್ನು ಸೇವಿಸುತ್ತಿದ್ದನು. ॥೩೬॥

ರಾಜನು ವಿಶೇಷವಾಗಿ ಸಂತರ್ಪಣೆಗಳನ್ನು ನಡೆಸಿ ಅನ್ನದಾನಮಾಡುತ್ತಿದ್ದನು. ಪ್ರತಿದಿನವೂ ಕೋಟಿಗಟ್ಟಳೇ ಪರಶಿವಭಕ್ತರಿಗೆ ಭೋಜನಮಾಡಿಸುತ್ತಿದ್ದನು. ಹಾಗೂ ಆ ಭಕ್ತರಿಗೆ ರತ್ನಾಭರಣಗಳನ್ನೂ, ಸುವರ್ಣದಕ್ಷಿಣೆಗಳನ್ನೂ, ವಸ್ತ್ರಗಳನ್ನೂ ವಿಶೇಷವಾಗಿ ದಾನ ಕೊಡುತ್ತಿದ್ದನು. ॥೩೭-೩೮॥

ತದ್ದೇಶವಾಸಿನಸ್ಸರ್ವೇ ಕೃತಾಸ್ತೇನೈವ ಶಾಂಕರಾಃ ।
ಶಿವಾರ್ಚನಾನುರಾಗೇಣ ತೇನಾಹಾರೋಽಪಿ ವಿಸ್ಮೃತಃ ॥೩೯॥

ನ ದಾರೋದಾರಹಾರಾಣಾಂ ಕ್ಷಣಂ ವಾ ತಸ್ಯ ಸಂಗಮಃ ।
ವಿನಶ್ವರಮಿದಂ ಭಾಗ್ಯಮನೇನ ಯದಿ ಶಂಕರಃ ॥೪೦॥

ಪೂಜಿತಸ್ಸ್ಯಾತ್ತದಾ ಭಾಗ್ಯಂ ಪ್ರವೃದ್ಧಂ ಚ ಭವಿಷ್ಯತಿ ।
ಶಿವಪೂಜಾಪರಿತ್ಯಾಗಾತ್ ದುಃಖಂ ಭುಕ್ತಮನೇಕಧಾ ॥೪೧॥
ಅತಃ ಪರಂ ವಾ ಯತ್ನೇನ ಕರ್ತವ್ಯಂ ಶಿವಪೂಜನಂ ।

ಆ ರಾಜನು ತನ್ನ ದೇಶದ ಜನರೆಲ್ಲಾ ಶಿವಪೂಜಕರಾಗುವಂತೆ ಅಪ್ಪಣೆ ಮಾಡಿದನು. ಎಲ್ಲರಿಗೂ ಶಿವಪೂಜೆಮಾಡಲು ಉಪದೇಶಿಸಿದನು. ಆತನ ಉಪದೇಶ ದಿಂದಲೇ ಅಲ್ಲಿನ ಎಲ್ಲಾ ಜನರೂ ಶಿವಭಕ್ತರೇ ಆದರು. ಆ ರಾಜನೂ ಕೂಡ ಅತ್ಯಂತ ಭಕ್ತಿಯಿಂದ ಪರಮೇಶ್ವರನನ್ನು ಪೂಜಿಸುತ್ತಾ ಇದ್ದನು. ಆ ಭಕ್ತಿಪರವಶತೆ ಯಿಂದ ಆತನಿಗೆ ಊಟಮಾಡುವುದು ಆಹಾರ ತೆಗೆದುಕೊಳ್ಳುವುದು ಸಹ ಸ್ಮೃತಿಗೆ ಬರುತ್ತಿದ್ದಿಲ್ಲ. ॥೩೯॥

ಪತ್ನೀಪುತ್ರರೂ, ವಸ್ತ್ರಾಭರಣಗಳೂ ಎಲ್ಲವೂ ಅವುಗಳ ಉಪಭೋಗವೂ ನಶ್ವರವಾದವುಗಳು. ಇವುಗಳನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೆ ಅನರ್ಥವೇ ಆಗುವುದು. ಆದುದರಿಂದ ಇದೇ ಉಪಕರಣಗಳಿಂದ ಪರಮೇಶ್ವರನನ್ನು ಆರಾಧಿಸು ವುದೇ ಉತ್ತಮ. ಅಲ್ಲದೇ ಆತನ ಸೇವೆ ಮಾಡಿದರೆ ಈ ಸಂಪತ್ತುಗಳು ಮತ್ತೂ ಹೆಚ್ಚಾಗಿ ಅಭಿವೃದ್ಧಿಯಾಗುವುವು. ॥೪೦॥

ನಾನು ಹಿಂದೆ ಇದೇ ಶಿವಪೂಜೆಯನ್ನು ಮಾಡದೇ ಬಿಟ್ಟು ಬಹಳ ಅನುಚಿತ ಮಾಡಿದೆ. ಇದರಿಂದಲೇ ನನಗೆ ಅನೇಕ ದುಃಖಗಳು ಪ್ರಾಪ್ತವಾಗಿದ್ದವು. ಈಗ ಶಿವಪೂಜೆಯ ಪುಣ್ಯದಿಂದ ಮತ್ತೆ ಐಶ್ವರ್ಯವು ಸಿಕ್ಕಿರುತ್ತದೆ. ಈಗ ಮತ್ತೆ ಇದನ್ನು ದುರುಪಯೋಗಮಾಡದೇ ಇನ್ನುಮುಂದೆ ಮತ್ತೂ ವಿಶೇಷವಾಗಿ ಶಿವಪೂಜೆಯನ್ನು ಮಾಡಬೇಕು. ॥೪೧॥

ಯೇನಾನ್ನಮಪಿ ನ ಪ್ರಾಪ್ತಂ ಮಯಾ ತೇನಾಧುನಾ ಮಹತ್ ॥೪೨॥

ಭಾಗ್ಯಂ ಪ್ರಾಪ್ತಮಿದಂ ಭಾಗ್ಯಾತ್ ಶಂಕರಾಯ ಸಮರ್ಪಿತಂ ।
ಶಿವನೈವೇದ್ಯಮಾತ್ರೇಣ ಕಥಂಚಿಜ್ಜೀವನೇ ಸತಿ ॥೪೩॥

ಅನ್ಯದ್ಭಾಗ್ಯಂ ಮಹೇಶಾಯ ದೇಯಂ ದತ್ತಂ ಚ ತೇನ ಮೇ ।
ಅತಃ ಪರಂ ಕೃಪಾಸಿಂಧುಃ ಕುಪಿತೋ ನ ಯಥಾ ತಥಾ ॥೪೪॥

ಕರ್ತವ್ಯಮನ್ಯಥಾ ದುಃಖಂ ಭವಿಷ್ಯತ್ಯೇವ ಪೂರ್ವವತ್ ।
ಯಾವಜ್ಜೀವಮಯಂ ಧರ್ಮೋ ಮಮ ಶಂಕರಪೂಜನಂ ॥೪೫॥

ಅನೇನ ಕಾಲನಯನೇ ಕಾಲಾದಪಿ ನ ಮೇ ಭಯಂ ।
ಅಸ್ಮಾನುನ್ಮಾದಕಾಲೋಽಯಂ ಶಿವಾನುಗ್ರಹಸಾಧನಃ ॥೪೬॥

ಶಿವಪೂಜಾತ್ಯಾಗದಿಂದ ಯಾವ ನನಗೆ ಒಂದು ಹಿಡಿ ಅನ್ನವೂ ಲಭ್ಯವಾಗುತ್ತಿದ್ದಿಲ್ಲವೋ, ಅದೇ ನನಗೆ ಈಗ ಈಶನ ಅನುಗ್ರಹದಿಂದ ವಿಶಾಲವಾದ ಐಶ್ವರ್ಯವು ಲಭಿಸಿದೆ. ಇದೆಲ್ಲಾ ಆ ಪರಮೇಶ್ವರನ ಕೃಪೆಯೇ ಸರಿ. ಆದುದರಿಂದ ನಾನು ಇವುಗಳನ್ನು ಪರಮೇಶ್ವರನಿಗೇ ಅರ್ಪಿಸಿ ಪುಣ್ಯವನ್ನು ಪಡೆಯುತ್ತೇನೆ. ॥೪೨॥

ಇನ್ನುಮುಂದೆ ಜಿಹ್ವಾಚಾಪಲ್ಯಗಳಿಗೆ ಒಳಗಾಗದೇ ಪ್ರಾಣಧಾರಣೆಗೆ ಎಷ್ಟೋ ಅಷ್ಟು ಆಹಾರವನ್ನು ಮಾತ್ರ ತೆಗೆದುಕೊಳ್ಳಬೇಕು. ಆ ಆಹಾರವೂ ಕೂಡ ಶಿವನೈವೇದ್ಯಪ್ರಸಾದವೇ ಆಗಿರಬೇಕು. ಈ ಆಹಾರದಿಂದ ಶಿವಾರಾಧನೆಗೆ ಮಾತ್ರವೇ ಹೇಗೋ ಹಾಗೆ ಜೀವಿಸಿಕೊಂಡಿರಬೇಕು. ಆ ಪರಮೇಶ್ವರನು ಕೊಟ್ಟ ಎಲ್ಲಾ ಸಂಪತ್ತುಗಳನ್ನೂ ಆತನಿಗೇ ಅರ್ಪಿಸಲು ಜೀವಿಸಿರಬೇಕಾಗುವುದು. ॥೪೩॥

ಈಗ ಮೊದಲಿನಂತೆ ಅವಿವೇಕದಿಂದ ವಿಲಾಸದಲ್ಲಿ ಬಿದ್ದು ಪರಮೇಶ್ವರನ ಕೋಪಕ್ಕೆ ಪಾತ್ರನಾಗಕೂಡದು. ಹಾಗೆ ಎಲ್ಲಿಯಾದರೂ ಅಜ್ಞಾನದಿಂದ ಶಿವಪೂಜೆಯನ್ನು ಬಿಟ್ಟರೆ ಮತ್ತೆ ಮೊದಲಿನಂತೆ ಎಲ್ಲಾ ಸಂಪತ್ತುಗಳೂ ನಾಶವಾಗುವುವು. ಆದುದರಿಂದ ಬಹಳ ಸಾವಧಾನತೆಯಿಂದ ಈ ಜೀವವಿರುವವರೆಗೂ ಶಂಕರಪೂಜೆಯನ್ನು ಮಾಡುವೆನು. ಶಿವಧರ್ಮದ ಅನುಷ್ಠಾನ ಮಾಡುವೆನು. ॥೪೪-೪೫॥

ಈಗ ನಾನು ಸ್ವಲ್ಪವೂ ಉದಾಸೀನ ಮಾಡಲಾಗದು. ಮತ್ತು ಹೆಚ್ಚಾಗಿ ಪೂಜಾದಿಗಳನ್ನು ಮಾಡುತ್ತಿದ್ದರೆ! ಪರಮೇಶ್ವರನ ಸಂಪೂರ್ಣ ದಯೆಯು ಲಭಿಸು

ಭಾಗ್ಯಂ ಚಾಪ್ರತಿಮಂ ತೇನ ಕರ್ತವ್ಯಂ ಶಿವಪೂಜನಂ ।
ಇತಿ ನಿಶ್ಚಿತ್ಯ ಬಹುಧಾ ಸ ಚಕಾರ ಶಿವಾರ್ಚನಂ ।।೪೭।।

ತೇನ ಪುಣ್ಯಪ್ರಭಾವೇನ ಸಂಪದ್ವೃದ್ಧ್ಯಭೂತ್ಸದಾ ।
ತಸ್ಯ ಪುತ್ರಾಶ್ಶತಂ ತೇಽಪಿ ವೀರಾಶ್ಶಂಕರಪುಂಗವಾಃ ।।೪೮।।

ತೈಶ್ಚ ಪೂಜಾ ಕೃತಾ ನಿತ್ಯಂ ರತ್ನಾದಿಭಿರುಮಾಪತೇಃ ।
ರತ್ನೈರಪಿ ಮಹೇಶಾಯ ಮಂದಿರಾಣಿ ಕೃತಾನ್ಯಪಿ ।।೪೯।।

ಶಿವಪೂಜಾಪ್ರಸೂನಾರ್ಥಂ ವನಾನ್ಯಪಿ ಕೃತಾನಿ ತೈಃ ।
ವಿರತಾ ಏವ ಸಹಸಾ ಸಂಸಾರೇ ದುರಿತಾಕರೇ ।।೫೦।।

ವುದು. ಇದೇರೀತಿ ನಾನು ಆರಾಧನೆಯನ್ನು ನಡೆಸುತ್ತಿದ್ದರೆ ನನಗೆ ಮೃತ್ಯುಭಯವೂ ಸಹ ಇರಲಾರದು. ಆ ಪರಮೇಶ್ವರನು ಉದಾರವಾಗಿ ಸಂಪತ್ತನ್ನು ಕೊಟ್ಟಿರುವನು. ಅದೆಲ್ಲವನ್ನು ಆತನಿಗೇ ಅರ್ಪಿಸಿ ಕೃತಕೃತ್ಯನಾಗುವೆನು. ಹೀಗೆ ಆತನು ಸಮೂಲವಾಗಿ ಆಲೋಚಿಸಿ ಶಿವಾರ್ಚನೆಯನ್ನು ಅವಿಚ್ಛಿನ್ನವಾಗಿ ಮಾಡಿದನು. ।।೪೬-೪೭।।

ಆ ರಾಜನ ದೃಢಸಂಕಲ್ಪದಿಂದಲೂ ಪೂಜಾರಾಧನೆಗಳಿಂದಲೂ ಆತನಿಗೆ ಪುಣ್ಯದೊಡನೆ ವಿಪುಲವಾದ ಸಂಪದ್ವೃದ್ಧಿಯು ದಿನೇ ದಿನೇ ಬೆಳೆಯುತ್ತಿತ್ತು. ಹೀಗೆಯೇ ಕಾಲಕಳೆಯುತ್ತಿರಲು ಆತನಿಗೆ ನೂರುಜನ ಮಕ್ಕಳು ಹುಟ್ಟಿದರು. ಅವರೆಲ್ಲರೂ ಶೂರರಾಗಿದ್ದರಲ್ಲದೇ ಪರಮ ಶಿವಭಕ್ತರೂ ಆಗಿದ್ದರು. ।।೪೮।।

ಆ ರಾಜಪುತ್ರರೂ ಪ್ರತಿದಿನವೂ ಪರಮೇಶ್ವರನನ್ನು ಅತ್ಯಂತ ವೈಭವದಿಂದ ಪೂಜೆಮಾಡುತ್ತಿದ್ದರು. ದಿವ್ಯವಾದ ವಸ್ತ್ರಗಳನ್ನೂ, ರತ್ನಮಯವಾದ ಅಲಂಕಾರಗಳನ್ನೂ, ಶಂಕರನಿಗೆ ಅರ್ಪಿಸುತ್ತಿದ್ದರು. ಅಲ್ಲದೇ ಅನೇಕ ರತ್ನಮಯವಾದ ಶಿವಾಲಯಗಳನ್ನೂ ಕಟ್ಟಿಸಿದರು. ।।೪೯।।

ಅಷ್ಟೇ ಅಲ್ಲದೇ ಶಿವಪೂಜೆಗೆ ಉಪಯುಕ್ತವಾದ ಹೂಗಳನ್ನು ತಯಾರು ಮಾಡಲು ಅನೇಕ ಉದ್ಯಾನವನಗಳನ್ನು ನಿರ್ಮಿಸಿದರು. ಆ ರಾಜಕುಮಾರರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ವಿವೇಕಿಗಳಾಗಿದ್ದರು. ಈ ಸಂಸಾರವು ಸದಾ ದುಃಖಮಯವಾದದ್ದೇ ಎಂಬುದನ್ನು ಅವರು ಅರಿತು ವಿರಕ್ತರಾದರು. ।।೫೦।।

ಪುಷ್ಪಾಣಿ ಸಾಯಮಾನೀಯ ಬಿಲ್ವಪತ್ರಾಣಿ ಕೋಟಿಶಃ ।
ಅರ್ಪಿತಾನಿ ಮಹಾದೇವೇ ನೀತಃ ಕಾಲಶ್ಚ ತೈಸ್ತಥಾ ॥೫೧॥

ಭಾಗ್ಯೇಽಪಿ ವಿರತಾಸ್ಸರ್ವೇ ಶಂಕರಾರಾಧನೋತ್ಸುಕಾಃ ।
ಶಾಂಭವಾ ಏವ ತೇ ಸರ್ವೇ ಶಿವಪೂಜಾಪರಾಯಣಾಃ ॥೫೨॥

ನಾರಾಯಣಾದಿವೃಂದಾರವೃಂದವಂದಿತಪಾದುಕಾಃ ।
ಕೃತ್ವಾ ಶಿವಾರ್ಚನಂ ನಿತ್ಯಂ ವಿಹಾರಾರ್ಥಂ ಚರಂತಿ ತೇ ॥೫೩॥

ಸ್ವರ್ಗಲೋಕೇ ಬ್ರಹ್ಮಲೋಕೇ ವಿಷ್ಣುಲೋಕೇ ನಿಜೇಚ್ಛಯಾ ।
ಉತ್ತಮಾಶ್ವಂ ಸಮಾರುಹ್ಯ ತೇ ಯಾಂತಿ ಸ್ವರ್ಗಮಂದಿರಂ ॥೫೪॥

ಆ ಕುಮಾರರು ಪ್ರತಿದಿನವೂ ಸಾಯಂಕಾಲವಾಗುತ್ತಲೇ ತಮ್ಮ ಉದ್ಯಾನಗಳಿಂದ ನಾನಾ ವಿಧವಾದ ಹೂಗಳನ್ನೂ ಬಿಲ್ವಪತ್ರೆಗಳನ್ನೂ ತಂದು ಭಕ್ತಿಯಿಂದ ಶಿವಾರ್ಚನೆಯನ್ನು ಮಾಡುತ್ತಾ ಕಾಲಕಳೆಯುತ್ತಿದ್ದರು. ||೫೧||

ತಮಗೆ ಅತ್ಯಂತ ವೈಭವವಾದ ಐಶ್ವರ್ಯವಿದ್ದರೂ ತಾವು ಅವುಗಳಲ್ಲಿ ಆಸಕ್ತರಾಗದೇ ವಿರಕ್ತಿಯಿಂದ ಯಾವಾಗಲೂ ಶಿವಪೂಜೆಯನ್ನು ಮಾಡುತ್ತಿದ್ದರು. ಅಂತೆಯೇ ಪರಮ ಶೈವರೂ ಆಗಿದ್ದರು. ||೫೨||

ಆ ಕುಮಾರರು ಪರಮ ಶಿವಭಕ್ತರಾಗಿದ್ದುದರಿಂದ ದೇವತೆಗಳೆಲ್ಲರೂ ಅವರಿಗೆ ಮರ್ಯಾದೆ ಮಾಡುವರು. ನಮಸ್ಕರಿಸುವರು. ಇವರು ನಿತ್ಯವೂ ತಪ್ಪದೇ ಶಿವಾರ್ಚನೆಯನ್ನು ಮಾಡಿ ಕೊಂಚ ವಿಹಾರಕ್ಕಾಗಿ ಹೊರಕ್ಕೆ ಹೊರಡುತ್ತಿದ್ದರು. ಆಗ ಅವರು ತಮ್ಮ ಇಚ್ಛೆ ಎಲ್ಲಿಗೆಂದರೆ ಅಲ್ಲಿಗೆ ಹೋಗಬಲ್ಲವರಾಗಿದ್ದರು. ಅವರು ಉತ್ತಮವಾದ ಕುದುರೆಗಳ ಮೇಲೆ ಸವಾರಿಮಾಡಿಕೊಂಡು ಸ್ವರ್ಗಲೋಕಕ್ಕೂ, ಬ್ರಹ್ಮಲೋಕಕ್ಕೂ, ವಿಷ್ಣು ಲೋಕಕ್ಕೂ, ಎಲ್ಲಿಗೆ ಬೇಕಾದರೂ ಹೋಗುತ್ತಿದ್ದರು. ||೫೩-೫೪||

ಆ ಕುಮಾರರು ಒಂದೊಂದು ವೇಳೆ ದೊಡ್ಡ ದೊಡ್ಡ ಆನೆಗಳ ಮೇಲೆಯೂ ಹತ್ತಿಕೊಂಡು ಸಂಚರಿಸುತ್ತಿದ್ದರು. ಈ ಎಲ್ಲಾ ಸಂಪತ್ತುಗಳಿಗೂ ಶಿವಪೂಜೆಯ ಪ್ರಭಾವವೇ ಮುಖ್ಯವಾಗಿತ್ತು. ಎಲ್ಲರೂ ಅಲ್ಲಿ ಶಿವಭಕ್ತರೇ ಆಗಿದ್ದರು. ||೫೫||

ಗಜಾನಪಿ ಸಮಾರುಹ್ಯ ಕದಾಚಿದಪಿ ಶಾಂಭವಾಃ ।
ಶಿವಪೂಜಾಪ್ರಭಾವೇನ ತೇಽಪಿ ಸರ್ವೇಽಪಿ ಶಾಂಭವಾಃ ॥೫೫॥

ಅವಿಘ್ನಗಮನಾ ಏವ ಬ್ರಹ್ಮಲೋಕೇಽಪಿ ಸಂತತಂ ।
ಕದಾಚಿದಾಗತಾನ್ ದೃಷ್ಟ್ವಾ ಶಾಂಭವಾಂಸ್ತಾಂಶ್ಚತುರ್ಮುಖಃ ॥೫೬॥

ಅಭ್ಯುತ್ಥಾನಾದಿಭಿಸ್ಸಮ್ಯಕ್ ಪೂಜಯಾಮಾಸ ಸಾದರಂ ।
ತತಸ್ಸಪೃಷ್ಟ ಸ್ತತ್ರತ್ಯೈಸ್ತತ್ಸ್ವರೂಪಂ ಕಿಮಿತ್ಯಪಿ ॥೫೭॥

ತತಸ್ತಾನ್ ವಿಸ್ಮಯೇನಾಹ ತತ್ಪಿತಾಮಹವರ್ತನಂ ।
ಏತತ್ಪಿತಾಮಹಃ ಪೂರ್ವಂ ಕೀಕಟೇಷು ಸ್ಥಿತಃ ಪುರಾ ॥೫೮॥

ಸ ಭಿಲ್ಲಸ್ತೇನ ತದ್ದೇಶೇ ಶಿವಮಂದಿರಪಾಲಕಃ ।
ತದ್ದ್ವಾರೈಶ್ಚ ತದಾಹಾರೋ ನೀಯತೇ ತತ್ರ ನಿತ್ಯಶಃ ॥೫೯॥

ಈ ಕುಮಾರರು ಎಲ್ಲಿಗೆ ಬೇಕಾದರೂ ಹೋಗಬಲ್ಲವರಾಗಿದ್ದರು. ಬ್ರಹ್ಮ ಲೋಕದಲ್ಲಿಯೂ ಸಹ ಇವರನ್ನು ತಡೆಯುತ್ತಿರಲಿಲ್ಲ. ಹೀಗೆಯೇ ವಿಹಾರಕ್ಕಾಗಿ ತಿರುಗುತ್ತಾ ಇವರು ಒಂದುಸಲ ಬ್ರಹ್ಮಲೋಕದಲ್ಲಿ ಬ್ರಹ್ಮನನ್ನು ಕಾಣಲು ಹೋದರು. ಆಗ ಬ್ರಹ್ಮನು ಇವರಿಗೆ ಪ್ರತ್ಯುತ್ಥಾನಮಾಡಿ ಸ್ವಾಗತಪೂರ್ವಕ ಬರಮಾಡಿಕೊಂಡು ಇವರನ್ನು ಸತ್ಕರಿಸಿದನು. ||೫೬||

ಈ ಶಿವಭಕ್ತರಾದ ಕುಮಾರರಿಗೆ ಸತ್ಕಾರಮಾಡಿ ಕಳುಹಿಸಿದ ಮೇಲೆ ಆ ಬ್ರಹ್ಮನ ಸಭೆಯಲ್ಲಿದ್ದ ಕೆಲವರು ಇವರಿಗೆ ಲಭಿಸಿದ ಗೌರವಕ್ಕೆ ವಿಸ್ಮಯಗೊಂಡು, ಹೀಗೆ ಬ್ರಹ್ಮನೂ ಇವರಿಗೆ ಸತ್ಕಾರಮಾಡಬೇಕಾದರೆ ಇವರು ಸಾಮಾನ್ಯರಾದವರಲ್ಲ ವೆಂದು ತಿಳಿದು ಈಗ ಬಂದವರು ಯಾರೆಂದು ಬ್ರಹ್ಮನನ್ನೇ ಕೇಳಿದರು. ಆಗ ಬ್ರಹ್ಮನು ಈ ಕುಮಾರರ ಪಿತಾಮಹನ ಮೊದಲುಗೊಂಡು ಇವರ ಕಥೆಯನ್ನು ಹೇಳಲಾರಂಭಿಸಿದನು. ||೫೭||

ಈ ಕುಮಾರರ ಪಿತಾಮಹನು ಪೂರ್ವದಲ್ಲಿ ಕೀಕಟವೆಂಬ ದೇಶದಲ್ಲಿ ವಾಸಿಸುತ್ತಿದ್ದನು. ಆತನು ಭಿಲ್ಲರ ಜಾತಿಯವನು. ಅವನು ಅದೇ ದೇಶದಲ್ಲಿ ಶಿವಮಂದಿರದ ಕಾವಲುಗಾರನಾಗಿದ್ದನು. ಅದೇ ವೃತ್ತಿಯಿಂದ ಆತನ ಸಂಸಾರವು ನಡೆಯುತ್ತಿದ್ದಿತು. ||೫೮-೫೯||

ಸ ತತ್ರ ಕ್ಷುದ್ರಜಂತೂನಾಂ ಕರೋತ್ಯೇವ ನಿವಾರಣಂ ।
ಯಥಾ ನ ಕ್ಷುದ್ರಜಂತೂನಾಂ ಪ್ರವೇಶಶ್ಶಿವಮಂದಿರೇ ॥೬೦॥

ತಥಾ ಕರೋತಿ ಯತ್ನೇನ ನಿಯುಕ್ತಃ ಕೇನಚಿನ್ಮಹಃ ।
ತದಾ ತನ್ಮಂದಿರದ್ವಾರಿ ಬಲಿದಾನಾನ್ನಮಾದರಾತ್ ॥೬೧॥

ಗೃಹೀತ್ವಾ ಬುಭುಜೇ ಭಿಲ್ಲಸ್ಸದಾರೈಸ್ಸಹ ಭಕ್ತಿತಃ ।
ತದನ್ನಪರಿಪಾಕೇನ ಸ ಪುಷ್ಟೋ ರತಿತತ್ಪರಃ ॥೬೨॥

ತತೋ ದಧಾರ ತತ್ಪತ್ನೀ ಗರ್ಭೇಽಸೌ ಭಾಗ್ಯಸಂಯುತಂ ।
ತತಸ್ತಸ್ಯಾಭವತ್ಪುತ್ರೋ ರೂಪಲಾವಣ್ಯಸಂಯುತಃ ॥೬೩॥

ತತಸ್ತದ್ದೇಶರಾಜಾಪಿ ತಂ ದದರ್ಶ ಕದಾಚನ ।
ತತಃ ಪರಂ ವಿಚಾರ್ಯಾಯಂ ರಾಜಾ ಪುತ್ರವರ್ಜಿತಃ ॥೬೪॥

ಆ ಭಿಲ್ಲನು ಶಿವಮಂದಿರದೊಳಕ್ಕೆ ಕ್ಷುದ್ರಪ್ರಾಣಿಯು ಯಾವುದೂ ಬಾರದಂತೆ ನೋಡಿಕೊಳ್ಳುತ್ತಿದ್ದನು. ಒಂದುವೇಳೆ ಒಳಕ್ಕೆ ಬಂದಿದ್ದರೆ ಅವುಗಳನ್ನು ಹೊರಕ್ಕೆ ಅಟ್ಟುವನು. ಇದೇ ಅವನ ಕೆಲಸವಾಗಿತ್ತು. ಇದೇ ಕೆಲಸಕ್ಕೆ ಅವನನ್ನು ನೇಮಿಸಿ ಕೊಂಡಿದ್ದು ಆತನಿಗೆ ವೇತನ ಕೊಡುತ್ತಿದ್ದರು. ॥೬೦॥

ಆ ಶಿವಾಲಯದ ಮುಂಭಾಗದಲ್ಲಿ ಜನರು ಭೂತಬಲಿಗೆ ಎಂದು ಶಿವನಿವೇದಿತವಾದ ಅನ್ನವನ್ನು ಇಟ್ಟು ಹೋಗುತ್ತಿದ್ದರು. ಅದೇ ಅನ್ನವನ್ನು ಆ ಭಿಲ್ಲನು ಶಿವಪ್ರಸಾದವೆಂದು ಭಕ್ತಿಯಿಂದ ತೆಗೆದುಕೊಂಡು ತನ್ನ ಹೆಂಡತಿಮಕ್ಕಳೊಡನೆ ತಿನ್ನುತ್ತಿದ್ದನು. ಆ ಪವಿತ್ರವಾದ ಅನ್ನದಿಂದ ಮತ್ತು ಶಿವಪ್ರಸಾದ ಭಕ್ಷಣ ಪರಿಣಾಮದಿಂದ ಆತನು ಆನಂದವಾಗಿ ಕಾಲಕಳೆಯುತ್ತಿದ್ದನು. ॥೬೧-೬೨॥

ಹೀಗೆಯೇ ಕಾಲಕಳೆಯುತ್ತಿರಲು ಶಿವಪ್ರಸಾದಮಹಿಮೆಯಿಂದ ಆ ಭಿಲ್ಲನ ಹೆಂಡತಿಯು ಗರ್ಭವತಿಯಾದಳು. ಆ ಗರ್ಭವು ಮಹಾಭಾಗ್ಯಶಾಲಿಯಾಗಿದ್ದಿತು. ಅನಂತರ ಹತ್ತನೇ ತಿಂಗಳಲ್ಲಿ ಆತನಿಗೆ ಅತ್ಯಂತ ರೂಪವಂತನೂ ಲಾವಣ್ಯಶಾಲಿಯೂ ಆದ ಪುತ್ರನೊಬ್ಬನು ಜನಿಸಿದನು. ॥೬೩॥

ಹೀಗಿರಲು ಒಂದಾನೊಂದು ದಿನ ಆ ದೇಶದ ರಾಜನು ಆ ಭಿಲ್ಲಪುತ್ರನನ್ನು ಕಂಡನು. ಆ ರಾಜನಿಗೆ ಮಕ್ಕಳಿರಲಿಲ್ಲ. ತನ್ನ ಸಿಂಹಾಸನಕ್ಕೆ ಯೋಗ್ಯರಾದವರೊ

ತಸ್ಮೈ ರಾಜ್ಯಂ ದದೌ ಪಶ್ಚಾತ್ಸ ಮೃತೋ ಭೂಪತಿರ್ಬುಧಾಃ ।
ತತ್ತೇನ ಶಿವನೈವೇದ್ಯಬಲಿಭೋಜನಪುಣ್ಯತಃ ॥೬೫॥

ತದನ್ನಪರಿಪಾಕೇನ ತದ್ಗರ್ಭೋ ಜ್ಞಾನಸಂಯುತಃ ।
ಭುಕ್ತಂ ಮಹೇಶನೈವೇದ್ಯಂ ಜನಕಾಭ್ಯಾಂ ಮಮಾದರಾತ್ ॥೬೬॥

ತದನ್ನರಸಪುಷ್ಟೇ ಚ ಗರ್ಭೇ ತನುರಿಯಂ ಮಮ ।
ತದನ್ನರಸಪುಷ್ಟಾಭ್ಯಾಂ ಗರ್ಭಸ್ಸಂಪಾದಿತೋಹ್ಯಯಂ ॥೬೭॥

ಮಮ ಭಾಗ್ಯಸ್ಯ ನಾಂತೋಸ್ತಿ ಶಿವನೈವೇದ್ಯಭೋಜನಾತ್ ।
ಪಿತ್ರೋಸ್ತದ್ರಸಪುಷ್ಟಾಭ್ಯಾಂ ಗರ್ಭಸಂಪಾದನಂ ಕೃತಂ ॥೬೮॥

ಬ್ಬರನ್ನು ಆತನು ಹುಡುಕುತ್ತಿದ್ದನು. ಈ ಬಾಲಕನು ಅತ್ಯಂತ ರೂಪವಂತನಾಗಿಯೂ, ಗುಣಶಾಲಿಯಾಗಿಯೂ ಇರುವುದನ್ನು ಕಂಡು, ಈತನೇ ಸಿಂಹಾಸನವನ್ನೇರಲು ಯೋಗ್ಯನಾಗಿರುವನೆಂದು ಯೋಚಿಸಿ, ಆತನಿಗೆ ತನ್ನ ಸಿಂಹಾಸನವನ್ನೂ ರಾಜ್ಯವನ್ನೂ ವಹಿಸಿ, ಅನಂತರ ಆತನು ನಿಶ್ಚಿಂತನಾಗಿ ಮರಣವನ್ನು ಪಡೆದನು. ||೬೪||

ಆ ಭಿಲ್ಲನ ಕಾಲದಿಂದಲೂ ಪವಿತ್ರವೂ ಪುಣ್ಯತಮವೂ ಆದ ಶಿವನೈವೇದ್ಯಬಲಿಯನ್ನು ತಿನ್ನುತ್ತಾ ಬಂದಿದ್ದರಿಂದ ಆತನಿಗೆ ಅತ್ಯಂತ ಪುಣ್ಯವು ಲಭಿಸಿದ್ದಿತು. ಹಾಗೆಯೇ ಆ ಪುಣ್ಯವಿಪಾಕದಿಂದ ಆತನ ಗರ್ಭಸ್ಥವಾದ ಪುತ್ರನಿಗೂ ಆಗಲೇ ವಿವೇಕಜ್ಞಾನದ ಉದಯವಾಗಿದ್ದಿತು. ||೬೫||

ಆ ಬಾಲಕನು ಗರ್ಭದಲ್ಲಿರುವಾಗಲೇ ಆತನಿಗೆ ತಿಳಿವಳಿಕೆ ಬಂದಿದ್ದಿತು. ತನ್ನ ಮುಂದೆ ತಂದೆತಾಯಿಗಳು ಪರಮೇಶ್ವರನ ನೈವೇದ್ಯಾನ್ನವನ್ನು ಭಕ್ತಿಯಿಂದಲೂ ಆದರದಿಂದಲೂ ಪ್ರಸಾದವೆಂದು ಭುಂಜಿಸುತ್ತಿದ್ದುದರಿಂದ ಈ ನನ್ನ ಶರೀರವು ಬೆಳೆಯುತ್ತಿದೆ. ಈ ಶಿವಪ್ರಸಾದರೂಪವಾದ ಅನ್ನರಸದಿಂದಲೇ ನಾನು ಹುಟ್ಟಿರುವುದು. ಇದೂ ಪರಮೇಶ್ವರನ ಅನುಗ್ರಹವೇ ಸರಿ. ||೬೬-೬೭||

ನನ್ನ ತಂದೆತಾಯಿಗಳು ಮೊದಲಿನಿಂದಲೂ ತಮ್ಮ ಶರೀರವನ್ನು ಶಿವನೈವೇದ್ಯವಾದ ಅನ್ನರಸದಿಂದಲೇ ಪೋಷಿಸಿಕೊಂಡು ಈಗ ನನ್ನನ್ನು ಪಡೆದಿರುವರು. ಆ ಶಿವನೈವೇದ್ಯಸಾರದಿಂದಲೇ ಬೆಳೆಯುತ್ತಿರುವ ನಾನೇ ಧನ್ಯನು. ನನ್ನ ಭಾಗ್ಯವು

ತದನ್ನರಸಧಾರಾಯಾಸ್ಸಂಬಂಧೇನ ಮಯಾಧುನಾ ।
ಶರೀರಂ ಪಾವನಂ ಧನ್ಯಂ ಜೀವನಂ ಚ ಮಮಾಧುನಾ ॥೧೯॥

ರಾಜ್ಯಾಧಿಪತ್ಯಂ ಸಂಪ್ರಾಪ್ಯ ಕರ್ತವ್ಯಂ ಶಿವಪೂಜನಂ ।
ಶಿವನೈವೇದ್ಯಸಂಬಂಧಾದ್ಭೂಪತಿರ್ಜಾಯತೇ ಪುಮಾನ್ ॥೨೦॥

ದುರ್ಲಭಂ ಶಿವನೈವೇದ್ಯಂ ಸುರಾಣಾಮಪಿ ತದ್ಯತಃ ।
ದುರ್ಲಭಂ ಪ್ರಾಪ್ಯತೇ ತಾವದೀಶಾನುಗ್ರಹಣಾತ್ಪರಂ ॥೨೧॥

ಇತಿ ಸಂಚಿಂತ್ಯ ಸಂಚಿಂತ್ಯ ಸೋಽಪಿ ಗರ್ಭಾದ್ವಿನಿರ್ಗತಃ ।
ತತಸ್ಸ ರಾಜ್ಯಂ ಸಂಪ್ರಾಪ್ಯ ಯೌವನಂ ಪ್ರಾಪ್ಯ ದುರ್ಮದಃ ॥೨೨॥

ಅನಂತವಾದುದಾಗಿದೆ. ಆ ಪವಿತ್ರವಾದ ಅನ್ನದಿಂದ ಬೆಳೆಯುತ್ತಿರುವ ಈ ನನ್ನ ಶರೀರವೂ ಜೀವನವೂ ಕೂಡ ಧನ್ಯವಾಗಿದೆ. ॥೧೮-೧೯॥

ನನ್ನ ಜನನವಾದನಂತರ ನಾನೂ ಕೂಡ ಶಿವಪೂಜೆಯನ್ನು ಮಾಡುವೆನು. ನನ್ನ ಪುಣ್ಯದಿಂದ ನನಗೆ ರಾಜ್ಯಾಧಿಪತ್ಯವೂ ಕೂಡ ದೊರೆಯುವ ಸಂಭವವಿದೆ. ಆ ರಾಜ್ಯಾಧಿಪತ್ಯವು ಸಿಕ್ಕಿದ ಮೇಲೆ ಮತ್ತೆ ಅತಿಶಯವಾಗಿ ನಾನು ಶಿವಾರಾಧನೆಯನ್ನು ಮಾಡಬೇಕು. ಮನುಷ್ಯನಿಗೆ ಕೇವಲ ಶಿವನೈವೇದ್ಯ ಭೋಜನಮಾತ್ರದಿಂದಲೇ ಆತನು ರಾಜನಾಗುವುದರಲ್ಲಿ ಸಂದೇಹವಿಲ್ಲ. ॥೨೦॥

ಶಿವನೈವೇದ್ಯವು ಅತ್ಯಂತ ಅಮೋಘವಾದುದು. ಅದು ಅತಿ ದುರ್ಲಭವಾದುದು. ದೇವತೆಗಳಿಗೂ ಕೂಡ ಸುಲಭವಾಗಿ ಅದು ದೊರಕುವುದಿಲ್ಲ. ಅದು ಸಿಕ್ಕಬೇಕಾದರೆ ಆ ಪರಮೇಶ್ವರನ ಅನುಗ್ರಹವೇ ಬೇಕು. ಅಂದಮೇಲೆ ಅಂಥ ಅಮೋಘವಾದ ನೈವೇದ್ಯವೇ ನನಗೆ ಸಿಕ್ಕುತ್ತಿರಲು ನಾನು ಪರಮ ಧನ್ಯನು. ನನಗೆ ಅಪರಿಮಿತವಾದ ಐಶ್ವರ್ಯ ಸಿಕ್ಕುವುದರಲ್ಲಿ ಸಂಶಯವಿಲ್ಲ. ॥೨೧॥

ಈರೀತಿಯಾಗಿ ಗರ್ಭದಲ್ಲಿರುವಾಗಲೇ ಯೋಚಿಸುತ್ತಾ, ಯೋಚಿಸುತ್ತಾ, ಆತನು ಗರ್ಭದಿಂದ ಹೊರಕ್ಕೆ ಬಂದನು. ಅನಂತರ ಕ್ರಮೇಣ ಬೆಳೆಯಲು ಆತನಿಗೆ ರಾಜ್ಯವೂ ದೊರೆಯಿತು. ಆದರೆ ಆತನಿಗೆ ಯಾವಾಗ ಯೌವನವೂ ರಾಜ್ಯವೂ ಬಂದಿತೋ ಆಗ ವಿಲಾಸದಲ್ಲಿ ಮನವಾಗಿ ಕ್ರಮೇಣ ಅಧೋಗತಿಗೆ ಇಳಿದನು. ಅತ್ಯಂತ ಮದೋನ್ಮತ್ತನೂ ಆದನು. ॥೨೨॥

ನ ಶಿವಾರಾಧನೋದ್ಯೋಗಂ ಚಕಾರ ಕುಮತಿರ್ಬುಧಾಃ ।
ಉದಾರದಾರಧೀರಾಂಗಸಂಗಾಚ್ಛಂಗೋಽಪಿ ವಿಸ್ಮೃತಃ ॥೭೩॥

ರತ್ನಪ್ರಾಸಾದಮಾರುಹ್ಯ ಕ್ರೀಡಾಯಾಂ ನಿರತೋ ಮುಹುಃ ।
ತಾದೃಶೋನ್ಮಾದಸಮಯೇ ವಿಸ್ಮೃತೇ ಶಿವಪೂಜನೇ ॥೭೪॥

ತಸ್ಯ ರಾಜ್ಯಂ ಗತಂ ಸರ್ವಂ ಸೌಭಾಗ್ಯಂ ಚ ಗತಂ ತಥಾ ।
ತತಃ ಶ್ರೀಶೈಲನಾಥಸ್ಯ ಸೇವಯಾ ರಾಜ್ಯಮಾಪ ಸಃ ॥೭೫॥

ತತಃ ಪರಂ ಮಹಾದೇವಂ ಪೂಜಯಾಮಾಸ ಸಾದರಂ ।
ತತ್ಪೂಜನೇನ ಸಂಪ್ರಾಪ್ತಂ ಭಾಗ್ಯಂ ಪೂರ್ವಾಧಿಕಂ ಬುಧಾಃ ॥೭೬॥

ಅತ್ಯಂತವಾದ ಐಶ್ವರ್ಯವು ದೊರಕಿದ ಕೂಡಲೇ ಆತನು ವಿಷಯಾನುಭವದಲ್ಲಿ ಆಸಕ್ತನಾಗಿ ಮೋಹದಿಂದ ಶಿವಪೂಜೆಯನ್ನೇ ಮಾಡುವುದನ್ನು ಬಿಟ್ಟನು. ಸುಂದರಾಂಗಿಯರಾದ ಸ್ತ್ರೀಯರ ಸಂಗಮ ಸಂಭೋಗಗಳಲ್ಲಿ ನಿರತನಾಗಿ ಆ ದುರ್ಬುದ್ಧಿಯು ಈಶನ ಸ್ಮರಣೆಯನ್ನೇ ಮಾಡುತ್ತಿರಲಿಲ್ಲ. ||೭೩||

ಆತನು ಯಾವಾಗಲೂ ಅರಮನೆಯಲ್ಲಿಯೂ ಮೇಲುಪ್ಪರಿಗೆಯ ಮೇಲುಗಡೆಯಲ್ಲಿಯೂ ಸ್ತ್ರೀಯರೊಂದಿಗೆ ಕ್ರೀಡಾವಿಹಾರಗಳಲ್ಲಿಯೇ ಮಗ್ನನಾಗಿರಲಾರಂಭಿಸಿದನು. ಹೀಗೆ ಅತ್ಯಂತ ಗಾಢಾಜ್ಞಾನದಲ್ಲಿ ಬಿದ್ದು ಪರದೈವವಾದ ಶಿವನನ್ನು ಮರೆತೇಬಿಟ್ಟನು. ||೭೪||

ಈರೀತಿಯಾಗಿ ಶಿವಾರಾಧನೆಯನ್ನು ಬಿಟ್ಟುಬಿಟ್ಟಿದ್ದರಿಂದ ಶಿವನ ಔದಾಸೀನ್ಯಕ್ಕೂ ಕೋಪಕ್ಕೂ ಪಾತ್ರನಾಗಿ ಕೆಲವೇ ಕಾಲದಲ್ಲಿ ಆತನ ರಾಜ್ಯವು ನಾಶವಾಯಿತು. ಹಾಗೆಯೇ ಕ್ರಮೇಣ ಸಕಲ ಸಂಪತ್ತುಗಳೂ ನಾಶನಾದವು. ಹೀಗೆ ಸರ್ವಸ್ವವನ್ನೂ ಕಳೆದುಕೊಂಡು ಕೆಟ್ಟಮೇಲೆ ಆತನಿಗೆ ಬುದ್ಧಿ ಬಂದಿತು. ಆತನು ತನ್ನ ಅವಿವೇಕಕ್ಕೆ ಬಹು ಪಶ್ಚಾತ್ತಾಪಪಟ್ಟು, ಶ್ರೀಶೈಲಕ್ಷೇತ್ರಕ್ಕೆ ಹೋಗಿ ಪರಮೇಶ್ವರನನ್ನು ಭಕ್ತಿಯಿಂದ ಆರಾಧಿಸಿದನು. ಆಗ ಶಂಕರನು ಈತನ ಭಕ್ತಿಗೆ ಪ್ರಸನ್ನನಾಗಿ ಪುನಃ ಆತನ ರಾಜ್ಯವನ್ನೆಲ್ಲಾ ಆತನಿಗೇ ಅನುಗ್ರಹಿಸಿದನು. ||೭೫||

ಅನಂತರ ತನ್ನ ರಾಜ್ಯವು ಪ್ರಾಪ್ತವಾದಮೇಲೆ ಆ ರಾಜನು ಅತ್ಯಂತ ಭಕ್ತಿಯಿಂದ ಪರಮೇಶ್ವರನನ್ನು ಆರಾಧಿಸತೊಡಗಿದನು. ಆ ಪೂಜಾ ಮಹಿಮೆಯಿಂದ ಆತನಿಗೆ ಮೊದಲಿಗಿಂತಲೂ ಹೆಚ್ಚಾಗಿ ಭಾಗ್ಯ ದೊರಯಿತು. ||೭೬||

ತಸ್ಯ ಭಾಗ್ಯಸ್ಯ ನಾಂತೋಽಸ್ತಿ ತೇನ ಭಾಗ್ಯೇನ ಶಂಕರಂ ।
ಪೂಜಯಾಮಾಸ ವಿವಿಧೈರುಪಚಾರೈರನೇಕಧಾ ॥೭೭॥

ತಸ್ಯ ಪುತ್ರಾಃ ಕಿಲಾಯಾತಾಃ ಸರ್ವದಾ ಶಂಕರಾರ್ಚಕಾಃ ।
ಏತೈಶ್ಚ ರತ್ನನಿಲಯಾಃ ಶಂಕರಾಯ ಕೃತಾಸ್ತಥಾ ॥೭೮॥

ಯಥಾ ತುಷ್ಟೋ ಮಹಾದೇವೋ ರತ್ನಸುಂದರಮಂದಿರೈಃ ।
ವನಾನಿ ಕಾರಿತಾನ್ಯೇತೈಸ್ತೇಷು ಪುಷ್ಪಾಣಿ ಸಂತತಂ ॥೭೯॥

ತೈಃ ಪುಷ್ಪೈಃ ಪೂಜಯಂತ್ಯೇತೇ ಮಹಾದೇವಂ ಪ್ರಯತ್ನತಃ ।
ಮಹಾದೇವಪ್ರಸಾದೇನ ರಾಜ್ಯವೃದ್ಧಿಃ ಪ್ರಜಾಯತೇ ॥೮೦॥

ಆ ರಾಜನ ಭಾಗ್ಯವು ಅನಂತವಾದುದು. ಆತನ ಸಂಪತ್ತು ಅತ್ಯಂತ ವಿಶಾಲವಾದುದು. ಆ ರಾಜನು ಈ ಎಲ್ಲಾ ಸಂಪತ್ತುಗಳನ್ನೂ ಆ ಪರಮೇಶ್ವರನಿಗೇ ಅರ್ಪಿಸಿರುವನು. ಪ್ರತಿನಿತ್ಯವೂ ಅನೇಕ ವಿಧವಾದ ರಾಜೋಪಚಾರ, ದೇವೋಪಚಾರಗಳಿಂದ ಶಂಕರನನ್ನು ಆರಾಧಿಸುವನು. ॥೭೭॥

ಈಗ ಬಂದಿರುವ ಬಾಲಕರು ಅದೇ ರಾಜನ ಪುತ್ರರು. ಇವರೂ ಪರಮ ಶಿವಭಕ್ತರು. ಸರ್ವದಾ ಪರಮೇಶ್ವರನನ್ನು ಆರಾಧಿಸುತ್ತಿರುವರು. ಇವರು ಪರಮೇಶ್ವರನಲ್ಲಿ ಅತ್ಯಂತ ಭಕ್ತಿಯಿಂದ ಅನೇಕ ರತ್ನಮಯವಾದ ಶಿವಮಂದಿರಗಳನ್ನು ನಿರ್ಮಿಸಿರುವರು. ॥೭೮॥

ಪರಮೇಶ್ವರನಿಗೆ ಸಂತೃಪ್ತಿಯಾಗುವ ರೀತಿಯಲ್ಲಿ ಸುಂದರವಾದ ಶಿವಮಂದಿರಗಳನ್ನು ಕಟ್ಟಿಸಿದುದಲ್ಲದೇ, ಶಿವಾರಾಧನೆಗೆ ಬೇಕಾಗುವ ಹೂವುಗಳಿಗಾಗಿಯೂ ಶಿವವಿಹಾರಕ್ಕೆಂಬುದಾಗಿಯೂ ಅನೇಕ ಉದ್ಯಾನವನಗಳನ್ನೂ ನಿರ್ಮಿಸಿರುವರು. ಆ ಉದ್ಯಾನಗಳಲ್ಲಿ ಸರ್ವದಾ ಅತ್ಯಂತ ಸುಂದರವಾದ ಹೂಗಳು ಸಮೃದ್ಧವಾಗಿ ಇರುತ್ತವೆ. ॥೭೯॥

ಆ ಉದ್ಯಾನವನದಲ್ಲಿ ಬಿಟ್ಟಿರುವ ಹೂಗಳನ್ನು ಕೊಯಿದು ತಂದು ಪ್ರತಿನಿತ್ಯವೂ ಈ ಬಾಲಕರು ಭಕ್ತಿಯಿಂದ ಪರಮೇಶ್ವರನನ್ನು ಪೂಜಿಸುವರು. ಇವರ ಪೂಜೆಯಿಂದ ಆ ಪರಶಿವನು ತುಷ್ಟನಾಗಿರುವನು. ಆತನ ಅನುಗ್ರಹದಿಂದ ಇವರ ರಾಜ್ಯವೂ ಅಭಿವೃದ್ಧಿ ಹೊಂದುತ್ತಿದೆ. ॥೮೦॥

ತದ್ರಾಜ್ಯಧನಮಾದಾಯ ಶಿವಪೂಜಾಂ ಕರೋತಿ ಸಃ ।
ಶಿವಪೂಜನಸಾಮರ್ಥ್ಯಮನಂತೈಶ್ವರ್ಯದಂ ಬುಧಾಃ ॥೮೧॥

ತದೈಶ್ವರ್ಯಸ್ಯ ನಾಂತೋಽಸ್ತಿ ತದ್ಭಕ್ತಾನಾಂ ಚ ವಸ್ತುತಃ ।
ಶಿವಚಿಂತನಶೀಲಂ ಚೇದಮೃತಂ ಚಿತ್ತಮುಂತತಃ ॥೮೨॥

ವನೇಶಾಯಾತಿಪತಿತ್ವಂ ಪತ್ತಿಪತ್ತೇರಪಿ ಸ್ತುತಂ ।
ನಿವಾಸೋ ಮತ್ತಮಾತಂಗಕೋಟೀನಾಂ ಶಾಂಭವಾಲಯೇ ॥೮೩॥

ಉಚ್ಚೈಶ್ಶ್ರವಣಭಾಗ್ಯೇನ ಶಿವನಾಮ್ನಃ ಫಲಂ ಹಿ ತತ್ ।
ತುರಂಗಾಣಾಂ ಚ ತುಂಗಾನಾಂ ಕೋಟಿಶಃ ಶಾಂಭವಾಲಯೇ ॥೮೪॥

ಈ ಬಾಲಕರ ತಂದೆಯಾದ ರಾಜನು ತನ್ನ ರಾಜ್ಯದಿಂದ ಎಷ್ಟೆಷ್ಟು ದ್ರವ್ಯಗಳು ಆದಾಯರೂಪದಿಂದ ಬರುತ್ತವೆಯೋ, ಅವುಗಳೆಲ್ಲವನ್ನೂ ಶಿವಪೂಜೆಗೆ ವಿನಿಯೋಗಿಸುತ್ತಾನೆ. ಅದೇ ಶಿವಪೂಜಾಪ್ರಭಾವದಿಂದ ಆತನ ಸಂಪತ್ತು ಮತ್ತೂ ಹೆಚ್ಚುತ್ತಲೇ ಇರುತ್ತದೆ. ಆ ಶಿವಾರಾಧನೆಯ ಪುಣ್ಯವು ಅನಂತಸೌಖ್ಯಸೌಭಾಗ್ಯಗಳನ್ನು ಉಂಟುಮಾಡುವುದು. ॥೮೧॥

ಆ ಪರಮೇಶ್ವರಾನುಗ್ರಹದಿಂದ ಲಬ್ಧವಾದ ಐಶ್ವರ್ಯಕ್ಕೆ ಕೊನೆ ಇರುವುದಿಲ್ಲ. ಅದು ಅನಂತವಾಗಿರುವುದು. ಅದ್ಭುತವಾಗಿರುವುದು. ಹಾಗೆಯೇ ಆತನ ಭಕ್ತರ ಮಹಿಮೆಯೂ ಅತ್ಯಂತ ಮಹನೀಯವಾದುದು. ಆ ಶಿವಭಜನವು ಮನಸ್ಸಿನೊಳಗೇ ಅಮೃತವೃಷ್ಟಿಯನ್ನು ಸುರಿಸುತ್ತದೆ. ಆದುದರಿಂದಲೇ ಶಿವಾರಾಧಕನು ಅಮರನಾಗುವನು. ॥೮೨॥

ಈಶಾನುಗ್ರಹಕ್ಕೆ ಪಾತ್ರನಾದ ಶಿವಭಕ್ತನು ಸಕಲ ಸೌಭಾಗ್ಯಗಳನ್ನೂ ಪಡೆಯುವನು. ಆತನ ಮನೆಯಲ್ಲಿ ಸಾವಿರಾರು ಮದಗಜಗಳು ವಾಸವಾಗಿರುತ್ತವೆ. ಆತನ ಐಶ್ವರ್ಯಕ್ಕೆ ಚ್ಯುತಿಯೇ ಇರುವುದಿಲ್ಲ. ಅನೇಕ ಸೈನ್ಯಗಳಿಗೂ, ನಾನಾವಿಧವಾದ ಉದ್ಯಾನವನಗಳಿಗೂ ಪತಿಯೆನಿಸಿ, ಸರ್ವದಾ ಆತನ ಮನೆಯು ಸಂಪತ್ಸಮೃದ್ಧವಾಗಿ ಕಂಗೊಳಿಸುವುದು. ॥೮೩॥

ಆ ಪರಮೇಶ್ವರನ ದಿವ್ಯನಾಮಗಳನ್ನು ಭಜನಮಾಡುವುದರಿಂದಲೂ, ಭಜನೆಯನ್ನು ಕೇಳುವುದರಿಂದಲೂ ದಿವ್ಯವಾದ ಫಲವು ದೊರೆಯುವುದು. ಆ ಶಿವನ

ತದುಚ್ಚೈಃಶ್ಶಿವಪೂಜಾಯಾಃ ಫಲಮಿತ್ಯವಧಾರಿತಂ ।
ಗೋಯೂಥಾನಾಂ ಚ ನಿಲಯಃ ಶಾಂಭವಸ್ಯಾಲಯಃ ಖಲು ॥೮೫॥

ಗಿರೀಶಾರಾಧನಸ್ಯೈವ ಫಲಂ ತದಿತಿ ನಿಶ್ಚಿತಂ ।
ಯದ್ಯದ್ಭಾಗ್ಯಂ ಸಭಾಗ್ಯಾನಾಂ ತತ್ಸರ್ವಂ ಶಿವಪೂಜಯಾ ॥೮೬॥

ಸಭಾಗ್ಯತ್ವಂ ಚ ನಿರ್ಣೀತಂ ಕೇವಲಂ ಶಿವಪೂಜಯಾ ॥೮೭॥

ಕಿಂ ಚಾನುಷಂಗಿಕಮಿದಂ ಫಲಮಿತ್ಯವೈಮಿ
ಭಾಗ್ಯಂ ಸಮೃದ್ಧಧನಧಾನ್ಯಸಮೃದ್ಧಿರೂಪಂ ।
ಸತ್ಯಾದಿಲೋಕವಸತಿಶ್ಚ ಶಿವಾರ್ಚನಸ್ಯ
ಮನ್ಯೇ ಫಲಂ ಕಿಮಪಿ ತಚ್ಛಿವ ಏವ ವೇದ ॥೮೮॥

ಭಜನೆಯಿಂದಲೇ ಶಿವಭಕ್ತನ ಮನೆಯಲ್ಲಿ ಉನ್ನತೋನ್ನತಗಳಾದ ಅನೇಕ ಕುದುರೆಗಳು ವಿರಾಜಿಸುವುವು. ||೮೪||

ಸದಾ ಶಿವಭಕ್ತರ ಮನೆಯಲ್ಲಿ ಅನೇಕ ಗೋವುಗಳ ಗುಂಪುಗಳೇ ಇರುತ್ತವೆ. ನಿಜವಾಗಿ ಆ ಮಹಾಮಹಿಮನಾದ ಪರಮೇಶ್ವರನ ಪೂಜೆಯ ಪುಣ್ಯಪ್ರಭಾವ ದಿಂದಲೇ ಅಂಥ ದಿವ್ಯಫಲಗಳು ದೊರೆಯುವುವೆಂಬುದು ನಿಶ್ಚಿತವು. ||೮೫||

ಯಾವ ಯಾವ ಶ್ರೀಮಂತರ ಮನೆಗಳಲ್ಲಿ ಐಶ್ವರ್ಯಗಳೂ, ಸೌಭಾಗ್ಯಗಳೂ ಇರುತ್ತವೆಯೋ ಅವುಗಳೆಲ್ಲವೂ ಶಿವಪೂಜೆಯಿಂದಲೇ ಲಭಿಸಿರತಕ್ಕವುಗಳು. ಪ್ರಪಂಚದ ಎಲ್ಲಾ ಸೌಭಾಗ್ಯಗಳಿಗೂ ಶಿವಪೂಜೆಯೇ ಕಾರಣವಾಗಿರುವುದು. ||೮೬||

ಪ್ರಪಂಚದಲ್ಲಿ ನಿಜವಾದ ಭಾಗ್ಯವೆಂದು ಯಾವುದಕ್ಕೆ ಹೇಳುವರೋ ಅವುಗಳು ದೊರೆಯುವುದೂ ಶಿವಪೂಜಾಚರಣೆಯಿಂದಲೇ ಸರಿ. ||೮೭||

ಎಲೈ ದೇವತೆಗಳಿರಾ, ಈಗ ನಾನು ಹೇಳಿರುವ ಫಲಗಳು ಕೇವಲ ಆನು ಷಂಗಿಕಫಲಗಳು ಅಂದರೆ ಮಧ್ಯೇ ಸಂಭವಿಸುವ ಫಲಗಳು. ಇವುಗಳು ಪರಮಫಲ ಗಳಲ್ಲ. ಧನ, ಧಾನ್ಯ ಇವುಗಳು ಶಿವಪೂಜೆಗೆ ಆನುಷಂಗಿಕಫಲಗಳು. ಶಿವಪೂಜೆಗೆ ಪರಮಫಲವು ಮತ್ತೂ ಉತ್ಕೃಷ್ಟವಾದ ಫಲವು ಇನ್ನೂ ಅನೇಕವಾಗಿರುವುದು. ಆ ಶಿವಾರ್ಚನೆಗೆ ಇಹಲೋಕದಲ್ಲಿ ಐಶ್ವರ್ಯ ಸೌಭಾಗ್ಯಗಳು ಫಲವಲ್ಲದೇ ಸತ್ಯ ಲೋಕ ಮುಂತಾದ ಉತ್ತಮಲೋಕಗಳಲ್ಲಿ ವಾಸರೂಪಫಲವೂ ದೊರೆಯುವುದು.

**ಮುಖ್ಯೇ ಸತ್ಯಪಿ ಕಿಂ ಫಲೇ ತದಿತರತ್ಕಿಂಚಿತ್ಫಲಂ ಜಾಯತೇ
ಯಾನಾರೋಹಣಲಕ್ಷಣಂ ಚ ನ ಫಲಂ ಗ್ರಾಮಾಂಗಸಂಗಾತ್ಮಕೇ ।
ಮುಖ್ಯೇ ಸತ್ಯಪಿ ತತ್ಫಲೇ ಖಲು ತಥಾ ಮಲ್ಲೋಕವಾಸಃ ಫಲಂ
ಕೈಲಾಸಾನ್ವಯಮಿಚ್ಛತಾಮಪಿ ತಥಾ ತತ್ತತ್ಫಲಂ ಕಲ್ಪ್ಯತೇ ॥೮೯॥**

**ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ
ಶಿವಬಲಿಪ್ರದಾನಂ ಅನ್ನಭೋಜನಮಹಿಮಾವರ್ಣನಂ ನಾಮ
ತ್ರಯಸ್ತ್ರಿಂಶೋಽಧ್ಯಾಯಃ**

ಮತ್ತು ಆ ಫಲಗಳೆಲ್ಲವನ್ನೂ ಹೇಳಲು ನನಗೂ ಸಹ ತಿಳಿದಿರುವುದಿಲ್ಲ. ಆ ಶಿವ ಪೂಜೆಗೆ ಏನೇನು ಫಲವೆಂದು ಸಮಗ್ರವಾಗಿ ತಿಳಿದಿರುವವನು ಪರಮೇಶ್ವರನು ಒಬ್ಬನೇ ಸರಿ. ||೮೮||

ಯಾವುದಾದರೊಂದು ಹಳ್ಳಿಗೆ ಹೋಗಬೇಕೆಂದು ಹೊರಟಾಗ ಗಾಡಿಯನ್ನು ಹತ್ತುವರು. ಅದರಲ್ಲಿ ಕುಳಿತುಕೊಂಡು ದಾರಿ ಸಾಗಿಸುತ್ತಾ ಹಳ್ಳಿಯನ್ನು ಸೇರುವರು. ಅಂದರೆ ಅಲ್ಲಿ ಹಳ್ಳಿಯನ್ನು ಸೇರುವುದೇ ಮುಖ್ಯಫಲ. ಮಧ್ಯೆ ಗಾಡಿಯನ್ನೇರುವುದು ಅಮುಖ್ಯಫಲ. ಆನುಷಂಗಿಕ ಫಲವು ಹೀಗೆಯೇ ಪರಮಫಲವಿದ್ದೆಡೆಯೆಲ್ಲಾ ಮಧ್ಯೆ ಮಧ್ಯೆ ಅಮುಖ್ಯಫಲಗಳಿದ್ದೇಇರುತ್ತವೆ. ಸತ್ಯಲೋಕನಿವಾಸ ಮುಂತಾದವು ಶಿವಪೂಜೆಗೆ ಮುಖ್ಯ ಫಲವು. ಅಂದರೆ ನನ್ನ (ಬ್ರಹ್ಮನ) ಲೋಕದಲ್ಲಿ ವಾಸ ಸಿಕ್ಕಬೇಕೆಂಬ ಉದ್ದೇಶದಿಂದ ಶಿವಪೂಜೆಯನ್ನು ಮಾಡಿದರೆ ಇದು ಮುಖ್ಯ ಫಲವಾಗುವುದು. ಹಾಗೆಯೇ ಕೈಲಾಸದಲ್ಲಿ ವಾಸವು ಸಿದ್ಧಿಸಬೇಕೆಂಬ ಸಂಕಲ್ಪದಿಂದ ಪೂಜೆಮಾಡಿದರೆ ಕೈಲಾಸನಿವಾಸವೇ ಪರಮಫಲವಾಗುವುದು. ಆದುದರಿಂದ ಆನುಷಂಗಿಕ ಫಲವಲ್ಲದೇ ಶಿವಪೂಜೆಗೆ ಉದ್ದೇಶಾನುಗುಣವಾಗಿ ಆಯಾಯಾ ಫಲಗಳು ದೊರೆಯುವುವು. ಅಂತು ಶಿವಪೂಜೆಯಿಂದ ಸಕಲ ಮನೋರಥಗಳೂ ಸಿದ್ಧಿಸುವುವು ಎಂಬುದರಲ್ಲಿ ಸಂದೇಹವಿಲ್ಲ. ||೮೯||

ಇಲ್ಲಿಗೆ ಶ್ರೀ ಶಿವರಹಸ್ಯದ ಹರಾಖ್ಯವಾದ ಮೂರನೆಯ ಅಂಶದ ಪೂರ್ವಾರ್ಧದಲ್ಲಿ ಮೂವತ್ತುಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಚತುಸ್ತ್ರಿಂಶೋಽಧ್ಯಾಯಃ

॥ ನಂದಿಕೇಶ್ವರ ಉವಾಚ ॥

ಇತಿ ಭಾಗ್ಯವಚಃ ಶ್ರುತ್ವಾ ನತ್ವಾ ಭಾಗ್ಯಾಧಿದೇವತಾಂ।
ಸನ್ನಿಧಾನಂ ತವಾತ್ರಾಸ್ತು ಸೇವಯಾ ತ್ವತ್ತ ಏವ ಮೇ ॥೧॥

ಮೂವತ್ತುನಾಲ್ಕನೆಯ ಅಧ್ಯಾಯ

ಹಿಂದೆ ಒಬ್ಬ ಅತ್ಯಂತ ವ್ಯಭಿಚಾರಿಯ ಕಥೆಯು ಪ್ರಸ್ತುತವಾಗಿದ್ದಿತು. ಆ ವ್ಯಭಿಚಾರಿಯು ತನ್ನ ಮಗಳನ್ನೂ ಮೊಮ್ಮಗಳನ್ನೂ ಅವಳ ಮಗಳನ್ನೂ ಸಹ ಸಂಭೋಗಿಸಿದ್ದನು. ಒಂದು ದಿವಸ ಆ ಮೊಮ್ಮಗಳ ಮಗಳ ಮಾತಿನ ಮೇರೆಗೆ ಒಂದು ದಿವ್ಯವಾದ ಹೂವನ್ನು ತಂದಿದ್ದನು. ಅದರ ಪರಿಮಳವನ್ನು ಆಘ್ರಾಣಿಸಲು ಒಂದು ಸರ್ಪವು ಬಂದು ಆತನ ಮೈಗೆ ಸುತ್ತಿಕೊಂಡು ಆತನನ್ನು ಕಚ್ಚಿತು. ಆಗಲೂ ಆ ಹೂವು ಆತನ ಕೈಯ್ಯಲ್ಲಿಯೇ ಇದ್ದು, ಅವನು ಮೃತನಾಗುವಾಗ ಧರ್ಮಕರ್ಮ ಸಂಯೋಗದಿಂದ ಅಲ್ಲಿಯೇ ಹತ್ತಿರ ಕೆಳಗೆ ಇದ್ದ ನರ್ಮದಾಲಿಂಗದ ಮೇಲೆ ಆ ಹೂವು ಬಿದ್ದಿತು. ಅಷ್ಟರಿಂದಲೇ ಕರುಣಾಳುವಾದ ಪರಮೇಶ್ವರನು ಅನುಗ್ರಹಿಸಿ ಆತನನ್ನು ಪುನಃ ಬದುಕಿಸಿದನಲ್ಲದೇ ಆತನ ಸೇವೆಗೆ ಭಾಗ್ಯದೇವತೆಯನ್ನು ಕಳುಹಿಸಿದ್ದನು. ಆ ವ್ಯಭಿಚಾರಿಯು ಆ ಭಾಗ್ಯದೇವತೆಯ ಹತ್ತಿರ "ನೀನು ಯಾರು? ಏತಕ್ಕೆ ನನ್ನ ಹತ್ತಿರಕ್ಕೆ ಬಂದಿದ್ದೀಯೆ?" ಎಂದು ಕೇಳಲಾಗಿ ಮೇಲೆ ಹೇಳಿದ ಕಥೆ ಎಲ್ಲವನ್ನೂ ಆಕೆಯು ಹೇಳಿದಳು. ಅಂತಹ ಅದ್ಭುತವಾದ ಕಥೆಯನ್ನು ಕೇಳಿ ಆ ವ್ಯಭಿಚಾರಿಯು ಅತ್ಯಂತ ಸಂತೋಷಗೊಂಡನು. ಹಾಗೂ ಆ ಭಾಗ್ಯದೇವತೆಯನ್ನು ನಮಸ್ಕರಿಸಿದನು. ಯಾವಾಗಲೂ ನಿನ್ನ ಸನ್ನಿಧಾನವು ಇಲ್ಲಿಯೇ ಇರಬೇಕೆಂದೂ ಪ್ರಾರ್ಥಿಸಿದನು. ॥೧॥

ಮಹೇಶ್ವರಾಜ್ಞಯಾ ಪ್ರಾಪ್ತಸ್ತ್ವಯಾ ಮತ್ಸನ್ನಿಧಿಃ ಖಲು ।
ಏತಾವತಾ ಸಭಾಗ್ಯೋಽಹಂ ಇತಃ ಕಿಮಧಿಕಂ ಫಲಂ ॥೨॥

ಆರಾಧನಂ ಚ ಭವತಿ ಕರೋಮಿ ಭಗವಾನಪಿ ।
ಸಂತುಷ್ಟೋ ಯೇನ ಭಗವಾನ್ ಸೌಭಾಗ್ಯಂ ಸ್ಥಿರತಾಮಿಯಾತ್ ॥೩॥

ಇತ್ಯುಕ್ತ್ವಾ ಸೋಽಪಿ ಸಂತುಷ್ಟೋ ಭೋಗಾರಂಭಸಮಾವೃತಃ ।
ಶಿವಾರ್ಚನಪರೋ ನಿತ್ಯಂ ಶಿವನಾಮರತೋಽಭವತ್ ॥೪॥

ತೇನಾಪ್ಯುನ್ನತಮುತ್ಕೃಷ್ಟಂ ಕಾರಿತಂ ರತ್ನಮಂದಿರಂ ।
ತಸ್ಯ ನಾರ್ಮದಲಿಂಗಸ್ಯ ಸರ್ವಾಭರಣಭೂಷಿತಂ ॥೫॥

ನಾನು ಪರಮೇಶ್ವರನ ಯಾವ ಸೇವೆಯನ್ನು ಮಾಡದಿದ್ದರೂ ನನ್ನ ಮೇಲೆ ದಯೆಯಿಂದ ಆ ಶಂಕರನು ಭಾಗ್ಯದೇವತೆಯಾದ ನಿನ್ನನ್ನೇ ನನ್ನಲ್ಲಿಗೆ ಕಳುಹಿಸಿದ್ದಾನೆ. ಕೊನೆಗಾಲದಲ್ಲಿ ಕೇವಲ ಒಂದು ಹೂವನ್ನು ಲಿಂಗದಮೇಲೆ ಹಾಕಿದ್ದರಿಂದಲೇ ನನಗೆ ಎಷ್ಟು ಫಲವು ದೊರಕಿದೆ! ಹಾ ನಾನೇ ಭಾಗ್ಯಶಾಲಿಯು! ಇದಕ್ಕಿಂತಲೂ ಹೆಚ್ಚಾದದ್ದು ಇನ್ನೇನಿದೆ? ॥೨॥

ಎಲೌ ಭಾಗ್ಯದೇವತೆಯೇ! ನಿನ್ನ ಸಹಾಯದಿಂದ ಇನ್ನು ಮುಂದೆ ಪರಮೇಶ್ವರನ ಆರಾಧನೆಯನ್ನು ಮಾಡುವೆನು. ಇದರಿಂದ ಆ ಶಂಕರನು ಸಂತುಷ್ಟನಾಗಿ ಈ ನನ್ನ ಭಾಗ್ಯವು ಸ್ಥಿರವಾಗಿ ನಿಲ್ಲುವಂತೆ ಅನುಗ್ರಹಿಸುವನು. ॥೩॥

ಹೀಗೆಂದು ಹೇಳಿ ಅಕಸ್ಮಾತ್ ತನಗೆ ಅಷ್ಟು ಸಂಪತ್ತು ಪ್ರಾಪ್ತವಾದ್ದರಿಂದ ಅತ್ಯಂತ ಆನಂದವನ್ನು ಹೊಂದಿದನು. ಆತನಿಗೆ ಸಕಲ ಭೋಗಸಾಮಗ್ರಿಗಳೂ ಸಿದ್ಧವಾಗಿದ್ದುವು. ಆತನು ವಿಷಯಸುಖವನ್ನು ಅನುಭವಿಸುತ್ತಿದ್ದರೂ, ವಿವೇಕದಿಂದ ನಿತ್ಯವೂ ಶಿವಪೂಜೆಯನ್ನು ಭಕ್ತಿಯಿಂದ ಮಾಡುತ್ತಿದ್ದನು. ಸರ್ವದಾ ಶಿವನಾಮ ಭಜನವನ್ನು ಹಾಡುತ್ತಿದ್ದನು. ॥೪॥

ಆ ಭಕ್ತನು ನರ್ಮದಾ ಶಿವಲಿಂಗಕ್ಕೆ ಸುಂದರವಾದ ಮಂದಿರವನ್ನು ಕಟ್ಟಿಸಿದನು. ಆ ಮಂದಿರವು ಬಹಳ ದೊಡ್ಡದಾಗಿದ್ದಿತಲ್ಲದೇ ಸಂಪೂರ್ಣವಾಗಿ ರತ್ನಮಯವಾಗಿದ್ದಿತು. ಆ ಮಂದಿರದಲ್ಲಿ ಲಿಂಗಾಲಂಕಾರಕ್ಕೆ ಬೇಕಾದ ಸಮಸ್ತ ಆಭರಣಗಳೂ ಇದ್ದವು. ॥೫॥

ಮಣಿಮಾಲಾಸಮಾಕ್ರಾಂತರತ್ನಪ್ರಾಕಾರಸಂಯುತಂ ।
ಸ ಪಂಚಾಮೃತಕುಲ್ಯಾಭಿಶ್ಚಕ್ರೇ ಲಿಂಗಾಭಿಷೇಚನಂ ॥೬॥

ದಿವ್ಯನೀರಪ್ರವಾಹೈಶ್ಚ ಶೀತಳೈರ್ಗಂಧಸಂಯುತೈಃ ।
ಕಸ್ತೂರೀಘನಸಾರಾದಿನಾನಾದ್ರವ್ಯಸಮನ್ವಿತೈಃ ॥೭॥

ಚಂದನಂ ಚ ಘನೀಭೂತಂ ದಿವ್ಯಗಂಧಸಮನ್ವಿತಂ ।
ದತ್ತನಿಾಶಾಯ ತೇನೈವ ರತ್ನೈರಭ್ಯರ್ಚಿತಶ್ಶಿವಃ ॥೮॥

ಗೋಘೃತೇನೈವ ದಿವ್ಯೇನ ದೀಪಮಾಲಾಃ ಕೃತಾಃ ಖಲು ।
ತಾಭಿಃ ಪ್ರಭಾನ್ವಿತಂ ಜಾತಂ ಸರ್ವಂ ಬ್ರಹ್ಮಾಂಡಮಂಡಲಂ ॥೯॥

ಆ ಶಿವಮಂದಿರದ ಸುತ್ತಲೂ ರತ್ನಮಯವಾದ ಪ್ರಾಕಾರವನ್ನು ನಿರ್ಮಿಸಿ, ಅತ್ಯುತ್ತಮಗಳಾದ ಮಣಿಗಳಿಂದ ಎಲ್ಲಾ ಸ್ಥಳಗಳನ್ನೂ ಅಲಂಕರಿಸಿದನು. ಆತನು ಪಂಚಾಮೃತಾಭಿಷೇಕವನ್ನು ಮಾಡಿ ಮಾಡಿ, ಪಂಚಾಮೃತದ ಕೋಡಿಯನ್ನೇ ಹರಿಸಿದನು. ಪಂಚಾಮೃತದ ಕೊಳಗಳನ್ನೇ ತಯಾರಿಸಿದನು. ||೬||

ಆ ಭಕ್ತನು ನಿರ್ಮಲವಾದ ನೀರಿನಿಂದ ಆ ನರ್ಮದಾಲಿಂಗಕ್ಕೆ ಅಭಿಷೇಕ ವನ್ನು ಮಾಡುತ್ತಿದ್ದನು. ಅಭಿಷೇಕ ಮಾಡುವ ನೀರಿಗೆ ಸುವಾಸನಾದ್ರವ್ಯಗಳನ್ನು ಮಿಶ್ರಮಾಡಿ ಇಟ್ಟುಕೊಂಡಿರುತ್ತಿದ್ದನು. ಶೀತಲವಾಗಿಯೂ ಪರಿಮಳವಾಗಿಯೂ ಇರುವ ಅಂತಹ ಜಲದಿಂದ ಭಕ್ತಿಪೂರ್ವಕವಾಗಿ ಲಿಂಗಕ್ಕೆ ಅಭಿಷೇಕಗೈಯ್ಯುತ್ತಿದ್ದನು. ||೭||

ಪಂಚಾಮೃತಾಭಿಷೇಕವೂ, ಶುದ್ಧೋದಕದ ಅಭಿಷೇಕವೂ ಆದಮೇಲೆ ಲಿಂಗಕ್ಕೆ ಅತ್ಯಂತ ಪರಿಮಳವಾಗಿಯೂ ಘನೀಭೂತವಾಗಿಯೂ ಇರುವ ಚಂದನ ಗಂಧವನ್ನು ಲೇಪಿಸುತ್ತಿದ್ದನು. ಅನಂತರ ರತ್ನಾಭರಣಗಳಿಂದ ಅಲಂಕಾರ ಮಾಡುತ್ತಿದ್ದನು. ||೮||

ಆ ಭಕ್ತನು ಶಿವಾಲಯದಲ್ಲಿ ಅನೇಕ ಸಾಲುದೀಪಗಳನ್ನು ಹಚ್ಚಿಟ್ಟು ಅಲಂಕರಿಸುತ್ತಿದ್ದನು. ಆ ದೀಪಗಳಿಗೆ ದಿವ್ಯವಾದ ಹಸುವಿನ ತುಪ್ಪವನ್ನೇ ಹಾಕುತ್ತಿದ್ದನು. ಆ ಅನೇಕ ದೀಪಗಳಬೆಳಕಿನಿಂದ ಬ್ರಹ್ಮಾಂಡಮಂಡಲವೆಲ್ಲಾ ಪ್ರಭಾಮಯವಾಗುತ್ತಿತ್ತು. ||೯||

ಬಿಲ್ವಮಂದಾರಕುಸುಮೈಃ ಕಮಲೈರಮಲೈರಪಿ ।
ಅನ್ಯೈಶ್ಚ ವಿವಿಧೈಃ ಪುಷ್ಪೈರ್ಗಂಧಸಾರಸಮನ್ವಿತೈಃ ॥೧೦॥

ಸುವರ್ಣಪುಷ್ಪಮಾಲಾಭಿರ್ನಾನಾರತ್ನಸಮನ್ವಿತೈಃ ।
ಮುಕ್ತಾಹಾರೈರವಿರಲೈರ್ನೀಲಮಾಲಾಭಿರಾದರಾತ್ ॥೧೧॥

ಬಿಲ್ವಪಲ್ಲವಮಾಲಾಭಿರಮಲಾಭಿರ್ವಿಶೇಷತಃ ।
ಅತುಲ್ಯಾಭಿರಮೂಲ್ಯಾಭಿಃ ಪೂಜಯಾಮಾಸ ಶಂಕರಂ ॥೧೨॥

ನಾನಾವಿಧೈರ್ಧೂಪಧೂಮೈರ್ಧೂಪಯಿತ್ವಾ ಸದಾಶಿವಂ ।
ನೈವೇದ್ಯಂ ಕಲ್ಪಯಾಮಾಸ ಸ ಚಾನ್ನೈರ್ವಿವಿಧೈರಪಿ ॥೧೩॥

ಶಿವಲಿಂಗವನ್ನು ಬಿಲ್ವದಳಗಳಿಂದಲೂ ಮಂದಾರಕುಸುಮಗಳಿಂದಲೂ ಪೂಜಿಸುತ್ತಿದ್ದನು. ಅಲ್ಲದೇ ಇನ್ನೂ ಅನೇಕ ವಿಧವಾದ ಹೂಗಳಿಂದ ನಿತ್ಯವೂ ಪೂಜೆಮಾಡುತ್ತಿದ್ದನು. ಆ ಹೂಗಳಿಗೆಲ್ಲಾ ಸುವಾಸನೆಯ ಗಂಧವೂ ಲೇಪಿತವಾಗಿರುತ್ತಿತ್ತು. ॥೧೦॥

ಸುವರ್ಣಮಯವಾದ ಹೂಗಳನ್ನು ತಯಾರುಮಾಡಿಸಿ ಅವುಗಳನ್ನು ಮಾಲೆಯ ಆಕಾರಕ್ಕೆ ತಂದು, ಆ ಮಾಲೆಯಲ್ಲಿ ಮಧ್ಯೆ ಮಧ್ಯೆ ಅನೇಕ ರತ್ನಗಳನ್ನೂ ಸಹ ಪೋಣಿಸಿ ತಯಾರುಮಾಡಿದ ಹಾರಗಳಿಂದ ಪೂಜೆಮಾಡುತ್ತಿದ್ದನು. ಅಲ್ಲದೆ ಅನೇಕ ಮುತ್ತಿನ ಹಾರಗಳಿಂದಲೂ ನೀಲಪುಷ್ಪಹಾರಗಳಿಂದಲೂ ಪೂಜಿಸುತ್ತಿದ್ದನು. ॥೧೧॥

ಅಲ್ಲದೆ ಬಿಲ್ವಪತ್ರೆಯ ಮಾಲಿಕೆಗಳಿಂದ ವಿಶೇಷವಾಗಿ ಪೂಜೆಮಾಡುತ್ತಿದ್ದನು. ಆ ಬಿಲ್ವಪತ್ರೆಯ ಮಾಲಿಕೆಗಳು ಅತ್ಯಂತ ಪರಿಶುದ್ಧವಾಗಿಯೂ, ಅನುಪಮವಾಗಿಯೂ, ಅತಿಶಯವಾಗಿಯೂ, ಅನರ್ಘ್ಯವಾಗಿಯೂ ಇರುತ್ತಿದ್ದವು. ಶಿವನಿಗೆ ಬಿಲ್ವಪತ್ರೆಯು ಬಹಳ ಪ್ರಿಯಕರವೆಂಬುದಾಗಿ ಆತನು ಅರಿತಿದ್ದನು. ॥೧೨॥

ವಿಧಿಪ್ರಕಾರವಾಗಿ ಪತ್ರಪುಷ್ಪಗಳಿಂದ ಪೂಜೆಯನ್ನು ಮಾಡಿ, ಅನಂತರ ಧೂಪವನ್ನು ಅರ್ಪಿಸುತ್ತಿದ್ದನು. ಆ ಧೂಪಗಳು ಅನೇಕ ವಿಧಗಳಾಗಿರುತ್ತಿದ್ದವು. ಹಾಲುಮಡ್ಡಿಧೂಪ, ಲೋಬಾನಧೂಪ ಮುಂತಾದ ಎಲ್ಲಾ ಧೂಪಗಳನ್ನೂ ಹಚ್ಚಿ ಧೂಮಕೊಡುತ್ತಿದ್ದನು. ಅನಂತರ ನಾನಾವಿಧವಾದ ಅನ್ನಗಳನ್ನು ನಿವೇದನ ಮಾಡುತ್ತಿದ್ದನು. ॥೧೩॥

ಪರಮಾನ್ನಪ್ರವಾಹೈಶ್ಚ ಶರ್ಕರಾಜ್ಯಸಮನ್ವಿತೈಃ ।
ವಟಿಕಾದ್ಯೈರ್ಭಕ್ಷ್ಯಸಂಘೈರಪಾರೈರ್ಮಧುರೈರಪಿ ॥೧೪॥

ನಾರಿಕೇಲಜಲಾನಾಂ ಚ ಪ್ರವಾಹೈಶ್ಶೀತಲೈರ್ಜಲೈಃ ।
ಏಲಾಲವಂಗಸಂಯುಕ್ತೈಸ್ತಾಂಬೂಲೈರಮಲೈರಪಿ ॥೧೫॥

ರತ್ನಛತ್ರೈಶ್ಚಾಮರೈಶ್ಚ ದುಕೂಲೈರರ್ಪಣೈರಪಿ ।
ಪ್ರಣಾಮೈರಪಿ ನಾಟ್ಯೈಶ್ಚ ತೋಷಯಾಮಾಸ ಶಂಕರಂ ॥೧೬॥

ದಿವ್ಯಾನ್ನೈಶ್ಶಿವನೈವೇದ್ಯೈಸ್ತೋಷಯಾಮಾಸ ಕೋಟಿಶಃ ।
ಶಾಂಭವಾಗ್ರೇಸರಾನೇವ ದದೌ ತೇಭ್ಯೋ ಧನಾನ್ಯಪಿ ॥೧೭॥

ಸಕ್ಕರೆ, ತುಪ್ಪ ಇವುಗಳನ್ನು ಹಾಕಿ ತಯಾರುಮಾಡಿದ ಪರಮಾನ್ನವನ್ನು ಯಥೇಚ್ಛವಾಗಿ ನೈವೇದ್ಯಮಾಡುತ್ತಿದ್ದನು. ಆಂಬೋಡೆ, ರವೆ ಉಂಡೆ ಮೊದಲಾದ ಸಿಹಿ ಮತ್ತು ಖಾರವಾದ ಭಕ್ಷ್ಯಗಳನ್ನೂ ನಿವೇದಿಸುತ್ತಿದ್ದನು. ॥೧೪॥

ನೈವೇದ್ಯದ ಮಧ್ಯೆ ಮಧ್ಯೆ ಸ್ವಾದೂದಕಕ್ಕಾಗಿ ತೆಂಗಿನ ಎಳೆನೀರನ್ನೂ ತಂಪಾದ ನೀರನ್ನೂ ಯಥೇಚ್ಛವಾಗಿ ಅರ್ಪಿಸುತ್ತಿದ್ದನು. ಹೀಗೆ ವಿಧ್ಯುಕ್ತರೀತಿ ಯಲ್ಲಿ ನೈವೇದ್ಯವಾದ ನಂತರ ತಾಂಬೂಲವನ್ನು ಅರ್ಪಿಸುತ್ತಿದ್ದನು. ತಾಂಬೂಲದ ಜೊತೆಗೆ ಅಡಕೆ, ಏಲಕ್ಕಿ, ಲವಂಗ, ಜಾಪತ್ರೆ ಮೊದಲಾದವುಗಳನ್ನೂ ಸೇರಿಸಿ ಕೊಡು ತ್ತಿದ್ದನು. ॥೧೫॥

ಹೀಗೆ ಮಂಗಲನೀರಾಜನಾಂತವಾಗಿ ಸಮಗ್ರಪೂಜೆಯೂ ಆದಮೇಲೆ, ರತ್ನಮಯವಾದ ಛತ್ರ, ಚಾಮರ, ವಸ್ತ್ರಾಭರಣ ಮೊದಲಾದುವುಗಳಿಂದ ರಾಜೋಪ ಚಾರ ಮತ್ತು ದೇವೋಪಚಾರಗಳನ್ನೂ ಮಾಡುತ್ತಿದ್ದನು. ಆನಂತರ ಸಾಷ್ಟಾಂಗ ಪ್ರಣಾಮಗಳನ್ನೂ ಮಾಡಿ, ನರ್ತನಮಾಡುತ್ತಾ ಭಜನೆಯನ್ನು ಮುಂದುವರಿಸು ತ್ತಿದ್ದನು. ಈ ರೀತಿ ಸಕಲ ವಿಧವಾದ ಸೇವೆಗಳಿಂದಲೂ ಪರಮೇಶ್ವರನನ್ನು ಸಂತುಷ್ಟನನ್ನಾಗಿ ಮಾಡುತ್ತಿದ್ದನು. ॥೧೬॥

ಶಿವಪೂಜೆಯೆಲ್ಲಾ ಪೂರೈಸಿದ ಮೇಲೆ ಕೋಟ್ಯಂತರ ಶಿವಭಕ್ತರಿಗೆ ಶಿವನೈವೇ ದ್ಯವಾದ ಅನ್ನವನ್ನು ಭೋಜನ ಮಾಡಿಸುತ್ತಿದ್ದನು. ಅಲ್ಲದೇ ಆ ಭಕ್ತರಿಗೆ ಬೇಕಾ ದಷ್ಟು ದ್ರವ್ಯದಕ್ಷಿಣೆಗಳನ್ನೂ ಕೊಟ್ಟು ಸಂತೃಪ್ತಿಪಡಿಸುತ್ತಿದ್ದನು. ॥೧೭॥

ಗೋಸಹಸ್ರಾಣಿ ದತ್ತಾನಿ ಶೈವೇಭ್ಯಸ್ತೇನ ಸಾದರಂ ।
ವಿವಿಧಾನ್ಯಪಿ ಧಾನ್ಯಾನಿ ತೇಭ್ಯೋ ದತ್ತಾನಿ ತೇನ ತು ॥೧೮॥

ಪ್ರತ್ಯಹಂ ದೃಢಯಾ ಭಕ್ತ್ಯಾ ಪೂಜಾಮೇವಂ ವಿಧಾಯ ಸಃ ।
ಆಸಾಯಮುಪವಾಸೇನ ನಿಶಿ ಭುಂಕ್ತೇ ಶಿವಾರ್ಚಕಃ ॥೧೯॥

ಏವಂ ಸಂವಸತಸ್ತಸ್ಯ ದ್ರಷ್ಟುಂ ಸರ್ವಂ ಶಿವೋತ್ಸವಂ ।
ಸನಕಾದ್ಯೈಸ್ಸಹಾನಂತೈರ್ಮುನಿಭಿರ್ನಾರದೋ ಯಯೌ ॥೨೦॥

ಸ ದ್ವಾರೇಣೈವ ತಾನ್ ದೃಷ್ಟ್ವಾ ಭಸ್ಮೋದ್ಧೂಳಿತವಿಗ್ರಹಾನ್ ।
ರುದ್ರಾಕ್ಷಮಾಲಾಭರಣಾನ್ ಹೃಷ್ಟಃ ಸಾದರಮಾಸ್ತಿಕಃ ॥೨೧॥

ಬಂದಿರುವ ಶಿವಭಕ್ತರನ್ನು ಆದರದಿಂದ ಸತ್ಕರಿಸಿ ಅವರಿಗೆ ಅನೇಕ ಗೋವುಗಳನ್ನು ದಾನವಾಗಿ ಕೊಡುತ್ತಿದ್ದನು. ಅಲ್ಲದೇ ಬಡಬಗ್ಗರಿಗೆ ಯಥೇಚ್ಛವಾಗಿ ಧಾನ್ಯಗಳನ್ನೂ ವಸ್ತ್ರಗಳನ್ನೂ ದಾನಮಾಡುತ್ತಿದ್ದನು. ॥೧೮॥

ಪರಮಶಿವಭಕ್ತನಾದ ಆ ರಾಜನು ಇದೇ ರೀತಿ ಪ್ರತಿನಿತ್ಯವೂ ವಿಧಿಪ್ರಕಾರವಾಗಿ ಅತ್ಯಂತ ವೈಭವದಿಂದಲೂ ಪರಮಭಕ್ತಿಯಿಂದಲೂ ಶಿವಪೂಜೆಯನ್ನು ಮಾಡುವನು. ಆತನು ಇಷ್ಟು ಪೂಜೆಯನ್ನು ಉಪವಾಸನಿಯಮದಿಂದ ಮಾಡಿ, ರಾತ್ರಿಯಾದ ಮೇಲೆ ಭೋಜನ ಮಾಡುವನು. ॥೧೯॥

ಇದೇ ರೀತಿ ಶಿವಾರಾಧನೆಯಿಂದ ಆತನು ಕಾಲಕಳೆಯುತ್ತಿದ್ದನು. ಹೀಗಿರಲು ಒಂದುಸಲ ಈ ಶಿವೋತ್ಸವವನ್ನು ನೋಡಬೇಕೆಂದು ನಾರದನು ಇವನಲ್ಲಿಗೆ ಬಂದನು. ಜೊತೆಯಲ್ಲಿ ಸನಕಸನಂದಾದಿ ಅನೇಕ ಋಷಿಜನಗಳೂ ಬಂದಿದ್ದರು. ॥೨೦॥

ಆ ನಾರದನೇ ಮೊದಲಾದ ಎಲ್ಲಾ ಮುನಿಗಳೂ ಶೈವಚಿಹ್ನೆಯಾದ ರುದ್ರಾಕ್ಷಿಯೇ ಮೊದಲಾದುವುಗಳನ್ನು ಧರಿಸಿದ್ದರು. ಮೈಗೆಲ್ಲಾ ವಿಭೂತಿ, ಭಸ್ಮವನ್ನು ಹಚ್ಚಿಕೊಂಡಿದ್ದರು. ಹೀಗೆ ಸಕಲ ಶೈವಚಿಹ್ನೆಗಳಿಂದ ಶೋಭಿತರಾದ ಆ ಮುನಿಗಳು ದ್ವಾರದಲ್ಲಿ ಬರುವುದನ್ನು ಕಂಡು ರಾಜನು ಸಂತೋಷಪೂರ್ವಕವಾಗಿ ಅವರನ್ನು ಸ್ವಾಗತಿಸಿದನು. ॥೨೧॥

ತಾನಾಗತಾನ್ ಪ್ರಯತ್ನೇನ ನತ್ವಾ ಭಕ್ತಿಪುರಸ್ಸರಂ ।
ಪೂಜಾಂ ವಿಧಾಯ ವಿಹಿತಾಂ ರತ್ನಸಿಂಹಾಸನಸ್ಥಿತಾನ್ ॥೨೨॥

ಸ್ವಯಂ ಚ ಭಸ್ಮನೋದ್ಧೂಲ್ಯ ಸರ್ವಾಂಗಾನ್ಯಪಿ ಭಕ್ತಿತಃ ।
ರುದ್ರಾಕ್ಷಮಾಲಾಭರಣಃ ಪಪ್ರಚ್ಛ ಶಿವವೈಭವಂ ॥೨೩॥

ಮಹೇಶ್ವರಾರಾಧನಸ್ಯ ಪ್ರಕಾರಃ ಕಃ ಪರಃ ಶ್ರುತಃ ।
ಕಿಂ ತತ್ಫಲಂ ಚಾಧಿಕಾರೀ ಕೋ ವಾ ತನ್ಮೇ ವದಂತು ವಃ ॥೨೪॥

ಇತಿ ತದ್ವಚನಂ ಶ್ರುತ್ವಾ ನಾರದೋ ಭಕ್ತಿಪೂರ್ವಕಂ ।
ನತ್ವಾ ಮಹೇಶ್ವರಂ ಪ್ರಾಹ ಶಿವಧರ್ಮಾನ್ವಿಶೇಷತಃ ॥೨೫॥

ಆ ಮುನಿಗಳು ಬಂದ ಕೂಡಲೇ ಭಕ್ತಿಯಿಂದ ಪ್ರತ್ಯುತ್ಥಾನ, ಸ್ವಾಗತ ಮೊದಲಾದ ಗೌರವವನ್ನು ತೋರಿಸಿ ವಿಧಿವತ್ತಾಗಿ ಅವರನ್ನು ಸತ್ಕರಿಸಿ ಅವರೆಲ್ಲರನ್ನೂ ರತ್ನಮಯವಾದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ॥೨೨॥

ಆ ರಾಜನು ಮೊದಲೇ ಶೈವಚಿಹ್ನೆಗಳಿಂದ ಅಲಂಕೃತನಾಗಿದ್ದನು. ಸರ್ವಾವಯವಗಳಿಗೂ ಭಸ್ಮವನ್ನು ಲೇಪಿಸಿಕೊಂಡಿದ್ದನು. ರುದ್ರಾಕ್ಷಿಯ ಮಾಲಿಕೆಯನ್ನೂ ಧರಿಸಿದ್ದನು. ಜ್ಞಾನಿಗಳಾದ ಮುನಿಗಳನ್ನು ಉಪಚರಿಸಿ, ಶಿವಧರ್ಮವನ್ನೂ ಶಿವಮಹಿಮೆಯನ್ನೂ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿಂದ ಅವರನ್ನು ಹೀಗೆ ಪ್ರಶ್ನೆ ಮಾಡಿದನು. ॥೨೩॥

ಪರಮೇಶ್ವರನ ಆರಾಧನೆಯನ್ನು ಹೇಗೆ ಮಾಡಬೇಕು? ವೇದಗಳಲ್ಲಿ ಯಾವ ರೀತಿಯಿಂದ ಮಾಡಬೇಕೆಂದು ಹೇಳಿದೆ? ಆತನನ್ನು ಪೂಜಿಸುವುದರಿಂದ ಏನೇನು ಫಲಗಳು ದೊರೆಯುತ್ತವೆ? ಆ ಪರಮೇಶ್ವರನನ್ನು ಆರಾಧಿಸಲು ಎಂಥವನು ಅಧಿಕಾರಿಯಾಗಿರುತ್ತಾನೆ? ಇವುಗಳೆಲ್ಲವನ್ನೂ ತಾವು ನನಗೆ ಹೇಳಬೇಕು. ॥೨೪॥

ಈರೀತಿಯಾದ ಆ ರಾಜನ ಪ್ರಶ್ನೆಯನ್ನು ಕೇಳಿ ಎಲ್ಲರಿಗೂ ಬಹಳ ಸಂತೋಷವಾಯಿತು. ಶಿವಧರ್ಮವನ್ನು ಹೇಳಲು ಇಂಥವನೇ ಉತ್ತಮಾಧಿಕಾರಿ ಎಂದು ನಾರದ ಮುನಿಯು ಮನಸ್ಸಿನಲ್ಲಿಯೇ ಶ್ಲಾಘಿಸಿದನು. ಅನಂತರ ಮನಸಾ ಶಂಕರನನ್ನು ಧ್ಯಾನಿಸಿ, ನಾರದನು ಮುಖ್ಯ ಮುಖ್ಯವಾದ ಶಿವಧರ್ಮಗಳನ್ನು ಹೇಳಲುಪಕ್ರಮಿಸಿದನು. ॥೨೫॥

॥ ನಾರದ ಉವಾಚ ॥

ಸಂತಿ ಧರ್ಮಾಃ ಶ್ರುತಿಪ್ರೋಕ್ತಾಃ ಕೋಟಿಶಸ್ತ್ರೈರಲಂ ಖಲು ।
ಆಯಾಸಮಾತ್ರಫಲಕೈರತ್ಯಲ್ಪಫಲಕೈರಪಿ ॥೨೬॥

ಧನ್ಯೈರಸಾರ್ಯೈರ್ವಿವಿಧೈರ್ಯತ್ಫಲಂ ಲಭ್ಯತೇ ಜನೈಃ ।
ತದೀಶಾರ್ಚನಸಂಪ್ರಾಪ್ಯಂ ಲೀಲಯೈವ ನ ಸಂಶಯಃ ॥೨೭॥

ನ ಬಹುದ್ರವ್ಯವಿಲಯೋ ನಾತ್ಯಾಯಾಸಃ ಶಿವಾರ್ಚನೇ ।
ಪ್ರಾಪ್ಯಂತೇ ವಿಮಲಾನ್ಯೇವ ವಿಪುಲಾನಿ ಫಲಾನ್ಯಪಿ ॥೨೮॥

ಬಿಲ್ವಪತ್ರಸ್ಯ ಮಾತ್ರಸ್ಯ ಪ್ರದಾನೇ ಲಿಂಗಮಸ್ತಕೇ ।
ಯತ್ಪ್ರಾಪ್ಯತೇ ತತ್ತು ಫಲಂ ನ ಧರ್ಮಾಂತರಕೋಟಿಭಿಃ ॥೨೯॥

ವೇದದಲ್ಲಿ ನಾನಾತರಹವಾದ ಶಿವಧರ್ಮಗಳು ಅನೇಕವಾಗಿ ಉಕ್ತವಾಗಿವೆ. ಅಂತಹ ಶ್ರುತಿಗಳೂ ಕೋಟಿಗಟ್ಟಳೆ ಇರುತ್ತವೆ. ಆದರೆ ಈಗ ಅವುಗಳ ವಿಚಾರದಿಂದ ಏನು ಪ್ರಯೋಜನ? ಏಕೆಂದರೆ ಅವು ಬಹು ಗಹನವೂ, ಜಟಿಲವೂ ಆಗಿರುವುವಲ್ಲದೇ ಅನುಷ್ಠಾನಮಾಡಲು ಬಹಳ ಕಠಿನಗಳಾಗಿವೆ. ಅವುಗಳಿಗೆ ಫಲವು ಅತ್ಯಲ್ಪವಾಗಿರುವುದು. ॥೨೬॥

ನಾವು ಈಗ ಸುಲಭವಾದ ಶಿವಧರ್ಮವನ್ನು ಅರಿತುಕೊಳ್ಳಬೇಕು. ಅತ್ಯಂತ ಕಠಿನವಾಗಿಯೂ ಜಟಿಲವಾಗಿಯೂ ಇರುವ ನಾನಾ ಧರ್ಮಗಳಿಂದ ಏನೇನು ಫಲಗಳು ದೊರೆಯುತ್ತವೆಯೋ, ಆ ಎಲ್ಲಾ ಫಲಗಳೂ ಈ ಸುಲಭವಾದ ಶಿವಧರ್ಮಾನುಷ್ಠಾನದಿಂದ ದೊರೆಯುವುದು. ಅಂಥ ಶಿವಧರ್ಮವನ್ನು ಈಗ ಪರ್ಯಾಲೋಚಿಸಬೇಕು. ॥೨೭॥

ಆ ಶಿವಧರ್ಮಾನುಷ್ಠಾನಕ್ಕೆ ಹೆಚ್ಚು ದ್ರವ್ಯವೂ ಖರ್ಚಾಗುವುದಿಲ್ಲ. ಹೆಚ್ಚು ಶರೀರಶ್ರಮವನ್ನೂ ವಹಿಸಬೇಕಾದುದಿಲ್ಲ. ಅಲ್ಲದೆ ಪವಿತ್ರವಾದ ಅನೇಕ ಪುಣ್ಯ ಫಲಗಳು ದೊರಕುವುವು. ಅಂತಹ ಅತ್ಯಂತ ಲಘುವಾದ ಮತ್ತು ಮಹತ್ತರವಾದ ವಿಧಿಯೊಂದಿದೆ. ॥೨೮॥

ಕೇವಲ ಒಂದು ಬಿಲ್ವದಳವನ್ನು ಶಿವಲಿಂಗಕ್ಕೆ ಪೂಜೆಮಾಡಿದರೆ ಮಹತ್ತರವಾದ ಯಾವ ಫಲವು ದೊರಕುವುದೋ, ಆ ಫಲವು ಮತ್ತೆ ಬೇರೆ ಕೋಟಿ ಕೋಟಿ

ಲಿಂಗಸೃಷ್ಟಿಃ ಕೃತಾ ಪೂರ್ವಂ ಕರುಣಾಸಾಗರೇಣ ಹಿ ।
ತ್ರಿಶೂಲಪಾಣಿನಾ ಸೇಯಂ ಉತ್ಕೃಷ್ಟಾ ಸೃಷ್ಟಿರದ್ಭುತಾ ॥೩೦॥

ಪುರಾ ಕೈಲಾಸಭವನೇ ಸುಖಾಸೀನಂ ಮಹೇಶ್ವರಂ ।
ಹಿರಣ್ಯಬಾಹುಮೀಶಾನಂ ಸ್ವರ್ಣಸುಂದರವಿಗ್ರಹಂ ॥೩೧॥

ಶರದ್ರಾಕೇಶ್ವರಾಕಾರಂ ದುಕೂಲಪರಿವೇಷ್ಟಿತಂ ।
ಉದಾರತಾರಹಾರಾಣಾಂ ವಿಹಾರನಿಕರಂ ಪರಂ ॥೩೨॥

ಜಟಾಜೂಟತಟಿತ್ಕೋಟಿನಿಕಟೇಂದುಕಲಾಧರಂ ।
ರತ್ನಾಭರಣಶೋಭಾಭಿರಭಿತಃ ಪರಿವೇಷ್ಟಿತಂ ॥೩೩॥

ಧರ್ಮಗಳ ಅನುಷ್ಠಾನದಿಂದಲೂ ಪ್ರಾಪ್ತವಾಗಲಾರದು. ಲಿಂಗಕ್ಕೆ ಬಿಲ್ವದಳದಿಂದ ಮಾಡುವ ಪೂಜೆಯು ಅಷ್ಟು ಶ್ರೇಷ್ಠವೂ, ಪುಣ್ಯಪ್ರದವೂ ಆಗಿರುತ್ತದೆ. ॥೨೯॥

ಮನುಷ್ಯರಿಗೆ ಶಿವಾರಾಧನೆಯನ್ನು ಮಾಡಲು ಸುಲಭವಾಗುವಂತೆ ಪೂರ್ವದಲ್ಲಿ ಶಿವಲಿಂಗವನ್ನು ಪರಮೇಶ್ವರನೇ ಸೃಷ್ಟಿಮಾಡಿದ್ದಾನೆ. ಇಷ್ಟು ಸುಲಭರೀತಿಯಿಂದ ಶಿವಾರ್ಚನೆಯನ್ನು ಮಾಡಲು ಸೌಲಭ್ಯ ದೊರಕಿಸಿ ಕೊಟ್ಟ ಪರಮೇಶ್ವರನನ್ನು ಎಷ್ಟು ದಯಾಮೂರ್ತಿ ಎಂದು ಹೊಗಳಿದರೂ ಕಡಮೆಯೇ ಸರಿ. ಈ ಲಿಂಗ ಸೃಷ್ಟಿಯು ಬಹಳ ಶ್ರೇಷ್ಠವಾದ ಸೃಷ್ಟಿಯು. ಮತ್ತು ಅತ್ಯಂತ ಅದ್ಭುತವಾದದ್ದೂ ಆಗಿದೆ. ಕೇಳಿದರೆ ಆಶ್ಚರ್ಯವಾಗದೇ ಇರದು. ॥೩೦॥

ಪೂರ್ವದಲ್ಲಿ ಒಂದುಸಲ ಪರಮೇಶ್ವರನು ಕೈಲಾಸಭವನದಲ್ಲಿ ಸುಖದಿಂದ ವಿರಾಜಿಸುತ್ತಿದ್ದನು. ಆ ಪರಮೇಶ್ವರನು ಮಹಾಮಹಿಮಶಾಲಿಯು, ದೇವದೇವನು, ಈಶಾನ ಎಂಬ ಪುಣ್ಯನಾಮಧೇಯವುಳ್ಳವನು. ಆತನ ಶರೀರವು ಬಂಗಾರದಂತೆ ಸುಂದರವೂ ಕಾಂತಿಯುಕ್ತವೂ ಆಗಿರುತ್ತದೆ. ॥೩೧॥

ಆ ಶಂಕರನ ಶರೀರಲಾವಣ್ಯವು ಶರತ್ಕಾಲದ ಚಂದ್ರನಂತೆ ಅತಿ ಸ್ವಚ್ಛವಾಗಿರುವುದು. ಆತನ ಉಪಭೋಗಕ್ಕೆ ಉಪಕರಣಗಳು ಸರ್ವದಾ ಸಿದ್ಧವಾಗಿರುತ್ತವೆ. ಆತನು ದಿವ್ಯವಾದ ವಸ್ತ್ರಾಭರಣಗಳನ್ನು ಧರಿಸಿರುವನು. ಆತನ ಕಂಠದಲ್ಲಿ ಲೋಕೋತ್ತರವಾದ ಮುಕ್ತಾಹಾರಗಳು ವಿರಾಜಿಸುತ್ತಿವೆ. ॥೩೨॥

ಶಂಕರನು ಧರಿಸಿರುವ ರತ್ನಾಭರಣಗಳ ಕಾಂತಿಯು ಸುತ್ತಲೂ ಪಸರಿಸಿರುತ್ತದೆ. ಆತನ ಶಿಖೆಯು ಮಿಂಚಿನಂತೆ ರಕ್ತವಾಗಿಯೂ ಉಜ್ವಲವಾಗಿಯೂ ಇರುತ್ತದೆ. ಅಲ್ಲದೇ ಆ ಶಿಖೆಯ ಅಗ್ರಭಾಗದಲ್ಲಿ ಚಂದ್ರಕಲೆಯನ್ನು ಧರಿಸಿದ್ದಾನೆ. ॥೩೩॥

ತ್ರಿಲೋಚನಂ ನೀಲಕಂಠಂ ಸೋತ್ಕಂಠಂ ಗಿರಿಜಾನನೇ ।
ಅಪ್ರಮೇಯಮನಾದ್ಯಂತಂ ಸಚ್ಚಿದಾನಂದಲಕ್ಷಣಂ ॥೩೪॥

ಪರಮಾನಂದದಂ ಶಾಂತಂ ಮಂಗಳಾನಾಂ ಚ ಮಂಗಲಂ ।
ಪವಿತ್ರಾಣಾಂ ಪವಿತ್ರಂ ಚ ದೈವತಾನಾಂ ಚ ದೈವತಂ ॥೩೫॥

ಅಪ್ರಧೃಷ್ಯಂ ಭವಂ ಭೀಮಂ ಜರಾಮರಣವರ್ಜಿತಂ ।
ಮಹಾಮೃತ್ಯುಂಜಯಂ ಶರ್ವಂ ಮಹಾರುದ್ರಂ ಪಿನಾಕಿನಂ ॥೩೬॥

ಭಕ್ತಾನಂದದಂ ಭವ್ಯಂ ದಿವ್ಯವೇಷವಿಭೂಷಿತಂ ।
ಸ್ಮರಣೇನಾಪಿ ಭಕ್ತಾನಾಂ ಸರ್ವಾಭೀಷ್ಟಪ್ರದಾಯಕಂ ॥೩೭॥

ಪರಮೇಶ್ವರನು ಅನಿತರಸಾಧಾರಣವಾದ ಮೂರು ಲೋಚನಗಳಿಂದ ವಿರಾಜಿಸುತ್ತಾನೆ. ಆತನ ಕಂಠವು ವಿಷಪಾನಮಾಡಿದ್ದರಿಂದ ನೀಲವರ್ಣವಾಗಿದೆ. ಆ ಭಗವಂತನ ಅನುರಾಗಕ್ಕೆ ಪಾತ್ರವಾದುದು ಭಗವತಿಯಾದ ಗಿರಿಜೆಯ ಮುಖ ಕಮಲವೊಂದೇ. ಆ ಶಂಕರನೇ ಸಚ್ಚಿದಾನಂದರೂಪನಾದ ಪರಬ್ರಹ್ಮನು. ಯಾವ ಪ್ರಮಾಣಗಳಿಗೂ ಅವಿಷಯನಾಗಿರುವನು. ಆತನಿಗೆ ಆದಿಯಾಗಲಿ ಅಂತವಾಗಲಿ ಇರುವುದಿಲ್ಲ. ॥೩೪॥

ಆ ಶಂಕರನೇ ಶಾಂತಾಕಾರನಾದ ಪರಮಾನಂದಸ್ವರೂಪನು. ಸಕಲ ಮಂಗಳಗಳಿಗೂ ಮಂಗಳನು, ಮಂಗಳದಾತನು. ಸಮಸ್ತ ಪವಿತ್ರವಸ್ತುಗಳಿಗೂ ಪವಿತ್ರನು. ಪಾವನಕರನು. ಎಲ್ಲಾ ದೇವತೆಗಳಿಗೂ ಆತನೇ ದೇವರು, ಒಡೆಯನು. ॥೩೫॥

ಆ ಭವನು ಯಾರಿಂದಲೂ ಆಕ್ರಮಿಸಲ್ಪಡತಕ್ಕವನಲ್ಲ. ಯಾರಿಗೂ ಆತನೊಡನೆ ಸ್ಪರ್ಧಿಸಲು ಶಕ್ತಿ ಇರುವುದಿಲ್ಲ. ಆತನಿಗೆ ಮುಪ್ಪು ಇಲ್ಲ, ಮರಣವೆಂಬ ಹೆಸರೇ ಇಲ್ಲ. ಆತನು ಭಯಂಕರನು. ಮಹಾರುದ್ರನು, ಮೃತ್ಯುವಿಗೆ ಮೃತ್ಯುವಾಗಿದ್ದಾನೆ. ಪಿನಾಕಧನುರ್ಧಾರಿಯು. ॥೩೬॥

ಆತನು ಭೀಮನಾದರೂ ಭಕ್ತರ ವಿಷಯದಲ್ಲಿ ಅತ್ಯಂತ ಮನೋಹರನು. ಪರಮಾನಂದಪ್ರದಾತನು. ದಿವ್ಯವಾದ ಉಡುಪುಗಳಿಂದ ಶೋಭಿಸಿರುತ್ತಾನೆ. ಇಷ್ಟು ಕಲ್ಯಾಣಗುಣಪರಿಪೂರ್ಣನೆಂದು ಯಾವ ಭಕ್ತರು ಆತನನ್ನು ಧ್ಯಾನಿಸುವರೋ ಅವರ ಎಲ್ಲಾ ಮನೋರಥಗಳನ್ನೂ ಪೂರೈಸಿಕೊಡುವನು. ॥೩೭॥

ಗೌರೀವಿಹಾರನಿರತಂ ಪ್ರಸನ್ನವದನಂ ಪ್ರಭುಂ ।
ಶಂಭುಂ ವಿಲೋಕ್ಯ ಗಿರಿಜಾ ಪ್ರಾಹ ತದ್ವಾಮಭಾಗಗಾ ॥೩೮॥

॥ ಶ್ರೀ ಗೌರ್ಯುವಾಚ ॥

ಭಗವನ್ ಭವ ದೇವೇಶ ತ್ವಂ ಸರ್ವಜ್ಞಶಿರೋಮಣಿಃ ।
ಪ್ರಷ್ಟವ್ಯಮೇವಮಧುನಾ ದಯಯಾ ತದ್ವದಾಧುನಾ ॥೩೯॥

ಕೇನ ಸಿದ್ಧಿರ್ಭವೇನ್ನೄಣಾಂ ಮುಕ್ತಿಶ್ಚ ಪರಮೇಶ್ವರ ।
ಇಷ್ಟಲಾಭೋಽಪಿ ಸತತಂ ತದ್ವದಾದರಪೂರ್ವಕಂ ॥೪೦॥

ನ ಭಾವಗಣನಾ ಕಾರ್ಯಾ ನಾವಹೇಳನಖೇಲನಾ ।
ನಾನ್ಯತ್ರ ಚಿತ್ತವಿಶ್ರಾಮಃ ಕರ್ತವ್ಯಃ ಪ್ರಪುವರ್ಜಿತಃ ॥೪೧॥

ಅಂತಹ ಪರಮೇಶ್ವರನು ಸದಾ ಪ್ರಸನ್ನಚಿತ್ತನಾಗಿ ಭಗವತಿಯಾದ ಪಾರ್ವತಿಯೊಡನೆ ಕ್ರೀಡಾಲಾಪಾದಿಗಳಲ್ಲಿ ಮಗ್ನನಾಗಿದ್ದನು. ಹೀಗೆ ಸರ್ವ ವೈಭವದಿಂದ ವಿರಾಜಿಸುತ್ತಿದ್ದ ಪರಮೇಶ್ವರನನ್ನು ಅರ್ಧಾಂಗಿನಿಯಾದ ಪಾರ್ವತಿಯು ಹೀಗೆ ಪ್ರಶ್ನೆಮಾಡಿದಳು. ॥೩೮॥

"ಪ್ರಿಯನೇ, ನೀನೇ ಭಗವಂತನೆನಿಸಿರುವೆ. ಸಕಲ ದೇವತೆಗಳಿಗೂ ನೀನೇ ಅಧಿಪತಿಯಾಗಿರುವೆ. ನೀನು ಭೂತ ಭವಿಷ್ಯ ವರ್ತಮಾನಗಳೆಲ್ಲವನ್ನೂ ತಿಳಿದಿರುವ ಸರ್ವಜ್ಞನು. ಆದುದರಿಂದ ನಿನ್ನನ್ನೊಂದು ಪ್ರಶ್ನೆಯನ್ನು ಕೇಳುವೆನು. ದಯೆಯಿಟ್ಟು ನನಗೆ ಉತ್ತರ ಹೇಳಬೇಕು. ॥೩೯॥

ಪ್ರಪಂಚದಲ್ಲಿ ಮನುಷ್ಯನಿಗೆ ಸಕಲ ಇಷ್ಟಾರ್ಥಗಳೂ ಯಾವ ಉಪಾಯದಿಂದ ಸಿದ್ಧಿಸುವುವು? ಏನನ್ನು ಮಾಡಿದರೆ ಸಂಸಾರಬಂಧನದಿಂದ ಮೋಕ್ಷವು ಲಭಿಸುವುದು? ಇದನ್ನು ತಿಳಿಸು. ॥೪೦॥

ನಾನು ಏನನ್ನೋ ಕೆಲಸಕ್ಕೆಬಾರದ ಪ್ರಶ್ನೆಯನ್ನು ಕೇಳಿದೆನೆಂದು ಉದಾಸೀನ ಮಾಡಬಾರದು. ಸರಿಯಾಗಿಲ್ಲದ ಉತ್ತರವನ್ನು ಹೇಳಬಾರದು. ಪ್ರಶ್ನೆಯು ಅಸಂಗತವೆಂದು ನನ್ನನ್ನು ಜರೆಯಬೇಡ. ಈ ಪ್ರಶ್ನೆಯು ಮಾನವರಿಗೆ ಬಹಳ ಉಪಕಾರಿಯಾದುದು. ಆದುದರಿಂದ ಮನಸ್ಸಿಟ್ಟು ಯಥಾರ್ಥವಾದ ಉತ್ತರವನ್ನು ಹೇಳಬೇಕೆಂದು ಪ್ರಾರ್ಥಿಸುತ್ತೇನೆ" ॥೪೧॥

ಇತಿ ತದ್ವಚನಂ ಶ್ರುತ್ವಾ ಪ್ರಾಹ ಗೌರೀಂ ಮನೋಹರಾಂ ।
ವಚನಂ ಶ್ರುತಿತತ್ತ್ವಜ್ಞಸ್ತದಾದರಪುರಸ್ಸರಂ ॥೪೨॥

॥ ಶ್ರೀ ಸದಾಶಿವ ಉವಾಚ ॥

ಇಷ್ಟಸಾಧನಮಪ್ಯೇಕಂ ಗೋಪನೀಯಂ ಪ್ರಯತ್ನತಃ ।
ತದೇವ ತಾವದಧುನಾ ವಕ್ತವ್ಯಂ ಶ್ರುತಿಚೋದಿತಂ ॥೪೩॥

ನಿಧನೇತ್ಯಾದಿಭಿರ್ಮಂತ್ರೈರ್ಲಿಂಗಮುಕ್ತಂ ಮಮಾಂಬಿಕೇ ।
ನಮಃ ಪದಾಂತೈರ್ಮಂತ್ರೈಸ್ತೈಃ ಪೂಜಾಪ್ಯುಕ್ತಾ ವಿಶೇಷತಃ ॥೪೪॥

ಮಮೈವ ಪೂಜಾ ವಿಹಿತಾ ತೈರಾದೌ ತದನಂತರಂ ।
ಲಿಂಗಪೂಜಾಪಿ ವಿಹಿತಾ ಸಾ ಪೂಜಾ ಸುಲಭಾ ಯತಃ ॥೪೫॥

ಹೀಗೆ ಗೌರಿಯು ಅತ್ಯಂತ ಗಾಢವಾದ ಪ್ರಶ್ನೆಮಾಡಲು ಪರಮೇಶ್ವರನು ಗಂಭೀರನಾಗಿ ಉತ್ತರ ಹೇಳಲುಪಕ್ರಮಿಸಿದನು. ಗೌರಿಯ ಪ್ರಶ್ನೆಯಲ್ಲಿ ಶಂಕರನಿಗೆ ಪ್ರೀತ್ಯಾದರಗಳೇ ಉಂಟಾದುವು. ಉತ್ತರ ಹೇಳಲು ಆತನಿಗೆ ಏನೂ ಆಯಾಸವಿರುವುದಿಲ್ಲವಷ್ಟೆ. ಏಕೆಂದರೆ ಆತನೇ ಸಕಲ ಶ್ರುತಿಗಳ ತತ್ತ್ವವನ್ನೂ ಅರಿತಿರತಕ್ಕವನು.॥೪೨॥

ನೀನು ಬಹಳ ಗೂಢವಾದ ವಿಚಾರವನ್ನು ಕೇಳಿರುವೆ. ಇದು ಬಹಳ ಗುಟ್ಟಾಗಿರತಕ್ಕದ್ದು. ಇದನ್ನು ತಿಳಿದುಕೊಳ್ಳಲು ಅನೇಕರು ಬಹಳ ಪ್ರಯಾಸ ಪಡುವರು. ಈ ಇಷ್ಟಾರ್ಥಸಿದ್ಧಿಗಳೆಲ್ಲವೂ ವೇದಗಳಲ್ಲಿಯೇ ಹೇಳಿರತಕ್ಕವುಗಳು. ಅವುಗಳನ್ನೆಲ್ಲಾ ಹೇಳುವೆನು. ಸಾವಧಾನದಿಂದ ಕೇಳು. ॥೪೩॥

ನನಗೊಂದು ಲಿಂಗಸ್ವರೂಪವಿದೆ. ಆ ಲಿಂಗವೂ ನಾನಾವಿಧವಾಗಿರುತ್ತವೆ. ಇವುಗಳೆಲ್ಲಾ 'ನಿಧನಪತಯೇನಮಃ' ಎಂಬ ಮಂತ್ರಗಳಲ್ಲಿ ವಿಸ್ತಾರವಾಗಿ ಹೇಳಿರುತ್ತವೆ. ಆ ಲಿಂಗಗಳನ್ನು ಅದೇ ಮಂತ್ರಗಳಿಗೆ ಕೊನೆಯಲ್ಲಿ ನಮಃ ಎಂಬ ಶಬ್ದವನ್ನು ಸೇರಿಸಿಕೊಂಡು ಪೂಜೆ ಮಾಡಬೇಕು. ಆ ಪೂಜಾವಿಧಿಯೂ ಅನೇಕ ವಿಧವಾಗಿದೆ. ॥೪೪॥

ಅದೇ ವೇದದ ಮಂತ್ರಸಂದರ್ಭದಲ್ಲಿ ನನ್ನ ಆರಾಧನೆಯನ್ನೇ ಹೇಳಲಾಗಿದೆ. ಅಲ್ಲದೆ ಲಿಂಗಪೂಜೆಯ ವಿಧಿಯೂ ಉಕ್ತವಾಗಿರುತ್ತದೆ. ಏಕೆಂದರೆ ನನ್ನನ್ನು ಒಂದು ಅಧಿಷ್ಠಾನವಿಲ್ಲದೇ ಆರಾಧಿಸುವುದು ಬಹಳ ಕಠಿನವಾಗುವುದು. ಅದಕ್ಕಾಗಿಯೇ ಲಿಂಗಪೂಜೆಯು ಬಹಳ ಸುಲಭರೀತಿಯಿಂದ ಉಕ್ತವಾಗಿದೆ. ॥೪೫॥

ಮತ್ಸ್ವರೂಪಪರಿಜ್ಞಾನಮಶಕ್ಯಮಿತಿ ನಿಶ್ಚಯಾತ್ ।
ಮಲ್ಲಿಂಗಪೂಜನಂ ತಾವದುಕ್ತಂ ಲೋಕೋಪಕಾರಕಂ ॥೪೬॥

ಮಲ್ಲಿಂಗಪೂಜನಂ ತಾವದ್ಯಾವಜ್ಜೀವಂ ವಿಶೇಷತಃ ।
ಕರ್ತವ್ಯಮಿತಿಯತ್ನೇನ ಶ್ರುತಿಭೂತೇನ ವರ್ತ್ಮನಾ ॥೪೭॥

ಯಾವಜ್ಜೀವಂ ಶ್ರುತಿಸ್ಸೇಯಮಗ್ನಿಹೋತ್ರಾದಿಕರ್ಮಣಾಂ ।
ಶಿವಲಿಂಗಾರ್ಚನಸ್ಯಾಪಿ ನ ಸಮಾನಾ ವಿಶೇಷತಃ ॥೪೮॥

ಸಾಯಂ ಪ್ರಾತಃಶ್ರುತಿಸ್ತತ್ರ ಭಿನ್ನಾ ಕಾಲನಿಯಾಮಿಕಾ ।
ಅನುಪಾದೇಯಮತ್ರಾಂಗಂ ಕಾಲೋಪೀತ್ಯವಧಾರಿತಃ ॥೪೯॥

ಪ್ರಪಂಚದಲ್ಲಿ ಸಾಮಾನ್ಯ ಪಾಮರ ಜನರಿಗೆ ನನ್ನ ಸ್ವರೂಪವೇನು ಎಂಬುದನ್ನು ಅರಿತುಕೊಳ್ಳಲು ಅಸಾಧ್ಯವಾಗಿರುವುದು. ಅವರೆಲ್ಲರ ಉದ್ಧಾರಕ್ಕೆಂದು ನನ್ನ ಲಿಂಗಪೂಜೆಯು ವೇದದಲ್ಲಿ ವಿಶದವಾಗಿ ಹೇಳಲ್ಪಟ್ಟಿದೆ. ಲೋಕೋಪಕಾರಕ್ಕಾಗಿಯೇ ಅಲ್ಲಿ ಲಿಂಗಪೂಜಾವಿಧಿಯನ್ನು ವಿವರಿಸಿದೆ. ॥೪೬॥

ಮನುಷ್ಯನು ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಸುಲಭವಾದ ಉಪಾಯವು ಇದೇ. ಯಾವಜ್ಜೀವವೂ ನನ್ನ ಲಿಂಗಪೂಜೆಯನ್ನು ವೇದೋಕ್ತ ರೀತಿಯಲ್ಲಿ ಮಾಡಬೇಕು. ॥೪೭॥

ವೇದದಲ್ಲಿ ಅಗ್ನಿಹೋತ್ರಾದಿ ಶ್ರೌತಕರ್ಮಗಳು ಯಾವಜ್ಜೀವಪರ್ಯಂತವಾಗಿಯೂ ಮಾಡಲ್ಪಡತಕ್ಕವುಗಳು ಎಂದು ಹೇಳಿದೆ. ಹಾಗೆಯೇ ಶಿವಲಿಂಗಪೂಜೆಯೂ ಯಾವಜ್ಜೀವಪರ್ಯಂತ ಅನುಷ್ಠಿಸಲ್ಪಡತಕ್ಕದ್ದು. ಆದರೂ ಈ ಎರಡು ಶ್ರುತಿಗಳೂ ಸಮಾನವಾಗಿರುವುದಿಲ್ಲ. ಏಕೆಂದರೆ ಶಿವಲಿಂಗಪೂಜಾ ವಿಷಯದಲ್ಲಿ ವಿಧಿಯು ಸ್ವಲ್ಪ ವಿಶೇಷವಾಗಿದೆ. ॥೪೮॥

ಅಗ್ನಿಹೋತ್ರವನ್ನು ಸಾಯಂಕಾಲದಲ್ಲಿಯೂ ಮಾಡಬೇಕೆಂದು ಬೇರೆ ಬೇರೆ ವಾಕ್ಯಗಳಿಂದ ಉಕ್ತವಾಗಿದೆ. ಅಂದರೆ ಕರ್ಮಕ್ಕೆ ಕಾಲ ವಿಧಾನಮಾಡುವ ವಾಕ್ಯಗಳು ಭಿನ್ನವಾಗಿರುವುದರಿಂದ ವಾಕ್ಯಾರ್ಥವು ಸಮಂಜಸವಾಗಿ ಕೂಡದಿರಲು ಕಾಲವು ಕರ್ಮಕ್ಕೆ ಅಂಗವಲ್ಲವೆಂದು ಯದ್ಯಪಿ ಮೀಮಾಂಸಾಶಾಸ್ತ್ರದಲ್ಲಿ ಪರ್ಯಾಲೋಚನೆ ನಡೆದಿದೆ. ॥೪೯॥

ತಥಾಪಿ ವಿಧಿಶಕ್ತಿಶ್ಚ ಕಾಲಮಾದಾಯ ಕೇವಲಂ ।
ತತ್ರ ಪರ್ಯವಸನ್ನೇವ ಸಾಯಂಪ್ರಾತರಿತಿ ಶ್ರುತಿಃ ॥೫೦॥

ಪ್ರಕೃತೇ ಲಿಂಗಪೂಜಾಯಾಂ ಶ್ರುತಿಃ ಕಾಲನಿಯಾಮಿಕಾ ।
ನಾಸ್ತೀತಿ ಸರ್ವದಾ ಕಾರ್ಯಂ ಣಮುಲ್‌ಪ್ರತ್ಯಯಾನ್ವಿತಾ ॥೫೧॥

ನ ಣಮುಲ್‌ಪ್ರತ್ಯಯಸ್ಯಾಸ್ಯ ಸಂಕೋಚಾಯ ಶ್ರುತಿಸ್ತಥಾ ।
ಅಸಂಕುಚಿತ ಏವಾಯಂ ಪ್ರತ್ಯಯಃ ಸ್ವಾರ್ಥಬೋಧಕಃ ॥೫೨॥

ಶಾಸ್ತ್ರದಲ್ಲಿ ಹಾಗೆಯೇ ವಾಕ್ಯಾರ್ಥವನ್ನು ಉಪಪಾದನೆ ಮಾಡುತ್ತಾ, ವಿಧಿ ಶಬ್ದದ ವ್ಯಾಪಾರವು ಕಾಲದೊಡನೆ ಅನ್ವಯವನ್ನು ಸಾಕ್ಷಾತ್ತಾಗಿ ಪಡೆಯದಿದ್ದರೂ, ಕಾಲವಿಶೇಷ ವಿಧಿಇಲ್ಲದೆ ಅನುಷ್ಠಾನಕ್ಕೆ ನಿರ್ಣಯವು ಆಗಲಾರದೆಂದು ಈ ವಿಧಿಗೆ ಎರಡೂ ಕಾಲಗಳನ್ನೂ ವಿಧಾನ ಮಾಡುವುದರಲ್ಲಿ ತಾತ್ಪರ್ಯವಿದೆ ಎಂದು ನಿರ್ಣಯ ಮಾಡಿರುತ್ತಾರೆ. ॥೫೦॥

ಹಾಗೆಯೇ ಲಿಂಗಪೂಜಾ ವಿಷಯದಲ್ಲಿಯೂ ಯಾವಜ್ಜೀವಂ ಎಂಬ ವಿಧಿ ಇರುತ್ತದೆ. ಇಲ್ಲಿ ಕಾಲಸಾಮಾನ್ಯವು ಮಾತ್ರನೇ ವಿಹಿತವಾಗಿರುತ್ತದೆ. ಯಾವಜ್ಜೀವಂ ಎಂಬ ಕಡೆಯಲ್ಲಿ ಇರುವ ಣಮುಲ್ ಪ್ರತ್ಯಯದೊಡನೆ ಅನ್ವಯಮಾಡಲ್ಪಟ್ಟ ಬೇರೆ ಕಾಲವಿಶೇಷವು ಉಕ್ತವಾಗಿರುವುದಿಲ್ಲ. ಆದ್ದರಿಂದ ಲಿಂಗಪೂಜೆಯನ್ನು ಸರ್ವದಾ ಮಾಡಬೇಕು. ಅಗ್ನಿಹೋತ್ರಾದಿ ಕರ್ಮಗಳನ್ನಾದರೋ ಸಾಯಂಕಾಲ ಮತ್ತು ಪ್ರಾತಃಕಾಲದಲ್ಲಿ ಮಾತ್ರ ಮಾಡತಕ್ಕದ್ದು. ಆದುದರಿಂದ ಶಿವಲಿಂಗಪೂಜೆಗೂ, ಉಳಿದ ಕರ್ಮಗಳಿಗೂ ಕಾಲನಿಯಮದಲ್ಲಿ ಇಷ್ಟು ವ್ಯತ್ಯಾಸವಿರುವುದು. ॥೫೧॥

ಅಗ್ನಿಹೋತ್ರ ವಿಧಿಯಲ್ಲಿ ಯಾವಜ್ಜೀವಂ ಎಂದು ಕಾಲಸಾಮಾನ್ಯವು ಉಕ್ತವಾಗಿದ್ದರೂ, ಅಲ್ಲಿ ಸಾಯಂ, ಪ್ರಾತಃ ಎಂದು ಕಾಲವಿಶೇಷವನ್ನು ವಿಧಾನ ಮಾಡಿರುವುದರಿಂದ ಕಾಲವು ಸಂಕೋಚಮಾಡಲ್ಪಟ್ಟಿದೆ. ಲಿಂಗಪೂಜಾ ವಿಧಿಯಲ್ಲಿ ಕಾಲವನ್ನು ಸಂಕೋಚಮಾಡಲು ಯಾವ ಉಕ್ತಿಯೂ ಇಲ್ಲದಿರುವುದರಿಂದ ಯಾವಜ್ಜೀವವೂ ಮಾಡಲೇಬೇಕು ಎಂಬ ವಾಕ್ಯಾರ್ಥವು ಸಿದ್ಧವಾಗುತ್ತದೆ. ಅಂದರೆ ಈ ಲಿಂಗಪೂಜಾವಿಧಿಯ್ಳಾದ ಯಾವಜ್ಜೀವಂ ಎಂಬಲ್ಲಿರುವ ಣಮುಲ್ ಪ್ರತ್ಯಯಕ್ಕೆ ಯಾವ ವಿಶೇಷ ಅರ್ಥವೂ ಇರುವುದಿಲ್ಲ. ಅದು ಕೇವಲ ಸ್ವಾರ್ಥವಾದ "ಜೀವವಿರುವವರೆಗೂ" ಎಂಬರ್ಥವನ್ನು ಬೋಧಿಸುತ್ತದೆ. ॥೫೨॥

ವಿಹಿತಾ ಪ್ರತ್ಯಯೇನೈವ ಶಿವಪೂಜನಭಾವನಾ ।
ತಯಾ ಭಾವನಯಾ ತಾವತ್ ಕರಣಂ ಪೂಜನಂ ಮತಂ ॥೫೩॥

ತತ್ರಾಧಿಕರಣಂ ಕಿಂ ವಾ ಕಾ ತದ್ಬೋಧಕಸಪ್ತಮೀ ।
ಅಧಿಕಾರೀ ಚ ಕಸ್ತಸ್ಮಿನ್ ಕಥಮಂಶೋಽಪಿ ಚಿಂತಿತಃ ॥೫೪॥

ಶಿವಲಿಂಗೇ ಬಿಲ್ವಪತ್ರೈಃ ಪವಿತ್ರೈಃ ಸ್ವಾರ್ಜಿತೈರಪಿ ।
ಶ್ರುತಿಪ್ರಾಪ್ತಾ ಭಾವನಾಪಿ ಪೂರ್ಣಾಂಶಾ ಸಮಭೂಚ್ಛಿವೇ ॥೫೫॥

ವಿಧಿಶಬ್ದಕ್ಕೆ ಭಾವನಾ ಎಂಬ ಅರ್ಥವನ್ನು ಶಾಸ್ತ್ರದಲ್ಲಿ ಹೇಳುತ್ತಾರೆ. ಭಾವನಾ ಎಂದರೆ ಇಷ್ಟಾರ್ಥಸಾಧನೆಗಾಗಿ ಪ್ರಯತ್ನಪಡುವವನ ಉಪಾಯ ಎಂದರ್ಥ. ಈ ಉಪಾಯವು ಶಿವಪೂಜಾ ವಿಧಾನವನ್ನು ಮಾಡಿರುವ ವಿಧಿಯಿಂದ ಶಿವಪೂಜೆಯೇ ಎಂದು ತಿಳಿಯುವುದು. ಆ ಉಪಾಯಕ್ಕೆ ಸಾಧನವು ಅಗತ್ಯ ವಾಗುವುದು. ಸಾಧನವಿಲ್ಲದಿದ್ದರೆ ಕಾರ್ಯವೂ ಫಲವೂ ಸಿದ್ಧಿಸುವುದಿಲ್ಲ. ಅಂದರೆ ಈ ವಾಕ್ಯಾರ್ಥದಲ್ಲಿ ಇಷ್ಟಾರ್ಥಸಾಧನೋದ್ಯುಕ್ತನ ಉಪಾಯಕ್ಕೆ ಶಿವಪೂಜೆಯೇ ಸಾಧನವೆಂದು ತಿಳಿಯತಕ್ಕದ್ದು. ॥೫೩॥

ವಿಧಿಸಾಮಾನ್ಯಕ್ಕೂ ಅನೇಕ ಅಂಶಗಳು ಬೇಕಾಗುತ್ತವೆ. ಅಂಶಗಳ ಅನ್ವಯ ವಿಲ್ಲದೇ ವಿಧಿವಾಕ್ಯಾರ್ಥವು ಪೂರ್ಣವಾಗುವುದಿಲ್ಲ. ಅಂದಮೇಲೆ ಈ ಲಿಂಗಪೂಜಾ ವಿಧಿಯಲ್ಲಿ ಆ ಅಂಶಗಳು ಯಾವುವು? ಆಧಾರಾಂಶವು ಯಾವುದು? ಆ ಆಧಾರ ವನ್ನು ಬೋಧಿಸತಕ್ಕ ಸಪ್ತಮೀವಿಭಕ್ತಿಯು ಎಲ್ಲಿದೆ? ಹೀಗೆ ವಿಧಿಗೆ ಅಧಿಕಾರಿ ಎಂಬ ಅಂಶವೂ ಅನ್ವಯವಾಗಬೇಕಾಗಿದೆ. ಅಂದಮೇಲೆ ಎಂಥವನು ಲಿಂಗಪೂಜೆಗೆ ಅಧಿಕಾರಿ? ಎಂಬ ಆಕಾಂಕ್ಷೆ ಬಂದರೆ ಈ ಉಕ್ತಿಯು ಅನ್ವಯವಾಗುವುದು. ॥೫೪॥

ಯಾವಜ್ಜೀವಂ ಎಂಬ ಉಕ್ತಿಯಿಂದ ಶಿವಪೂಜಾವಿಧಾನವು, ಈ ವಿಧಿಯ ಭಾವನೆಗೆ ಆಧಾರಾಂಶ, ಕರಣಾಂಶ, ಅಧಿಕಾರಿಯ ಅಂಶ ಇವುಗಳೆಲ್ಲವೂ ಈ ಶ್ಲೋಕದಲ್ಲಿ ಹೇಳಲ್ಪಟ್ಟಂತಾಯಿತು. ಶಿವಲಿಂಗೇ ಎಂಬಲ್ಲಿ ಸಪ್ತಮೀವಿಭಕ್ತಿಯಿಂದ ಶಿವಪೂಜೆಗೆ ಶಿವಲಿಂಗವೇ ಆಧಾರವೆಂದು ತಿಳಿಯತಕ್ಕದ್ದು. ಬಿಲ್ವಪತ್ರೈಃ ಎಂಬಲ್ಲಿ ತೃತೀಯಾವಿಭಕ್ತಿ ಇರುವುದರಿಂದ, ತೃತೀಯಾವಿಭಕ್ತಿಗೆ ಸಾಧನ ಎಂಬ ಅರ್ಥವಿರುವುದರಿಂದ, ಬಿಲ್ವಪತ್ರೆಯೇ ಶಿವಪೂಜೆಗೆ ಸಾಧನ ಎಂದು ತಿಳಿಯತಕ್ಕದ್ದು. ಈ ಸಕಲ ಸಾಧನಗಳನ್ನೂ ಸಂಪಾದಿಸಿಕೊಂಡು, ಇಷ್ಟಾರ್ಥವನ್ನು ಸಾಧಿಸಿಕೊಳ್ಳ

ಶ್ರುತಿರ್ಯಥಾಸ್ತಿ ಸರ್ವೇಭ್ಯಃ ಕಾಮೇಭ್ಯ ಇತಿ ತತ್ರ ಸಾ ।
ದರ್ಶಾದೌ ತದ್ವದತ್ರಾಪಿ ಕಾಮಃ ಶ್ರುತಿರವಿಚ್ಯುತಾ ॥೫೬॥

ಫಲಸಾಧನಭೂತತ್ವಾತ್ಕರಣಂ ಶಿವಪೂಜನಂ ।
ಶಿವಾರ್ಚನೇನ ಲಭ್ಯಂತೇ ಸರ್ವೇ ಕಾಮಾ ಇತಿ ಶ್ರುತೇಃ ॥೫೭॥

ಇಯಂ ಶಿವಾರ್ಚನೇನೇತಿ ತೃತೀಯಾ ಕರಣಂ ಪರಂ ।
ಶಿವಪೂಜನಮೇವೇತಿ ಶಕ್ತ್ಯಾ ಬೋಧಯತಿ ಸ್ವಯಂ ॥೫೮॥

ತಸ್ಯಾಃ ಶಕ್ತಿಸ್ತು ನಾನ್ಯತ್ರ ಓಮಿತ್ಯಸ್ಯೈವ ನಿಶ್ಚಿತಾ ।
ಕರಣೇ ಶಕ್ತಿರೇವಂ ಚ ತದೇವ ಕರಣಂ ಸ್ಮೃತಂ ॥೫೯॥

ಬೇಕೆಂದಿರುವವನು ಅಧಿಕಾರಿ ಎಂದು ತಿಳಿಯುವುದು. ಅಂದರೆ ಒಟ್ಟು ವಾಕ್ಯಾರ್ಥವು ಇಷ್ಟು.—ಇಷ್ಟಾರ್ಥವನ್ನು ಪಡೆಯಬೇಕೆಂಬ ಅಪೇಕ್ಷೆಯುಳ್ಳ ಮನುಷ್ಯನು ಶಿವಲಿಂಗದಲ್ಲಿ ಸ್ವಾರ್ಜಿತವಾದ ಬಿಲ್ವಪತ್ರೆಗಳಿಂದ ಶಿವಪೂಜಾರೂಪವಾದ ಉಪಾಯವನ್ನು ಕೈಕೊಳ್ಳತಕ್ಕದ್ದು. ||೫೫||

ವೇದವಿಹಿತವಾದ ಸಕಲ ಕರ್ಮಗಳಿಗೂ ಫಲಬೋಧಕವಾದ ವಾಕ್ಯವು ಇದ್ದೇ ಇರುತ್ತದೆ. ದರ್ಶಪೂರ್ಣಮಾಸಕ್ಕೆ ವಿಧಿವಾಕ್ಯ ಇರುವಂತೆ ಸ್ವರ್ಗಕಾಮನಾ ರೂಪವಾದ ಫಲವಾಕ್ಯವೂ ಇದೆ. ಹಾಗೆಯೇ ಶಿವಪೂಜೆಯ ವಿಧಿಗೂ ವಿಧಿಯ ಅವಿನಾಭೂತವಾದ ಫಲವಾಕ್ಯವಿದೆ. ||೫೬||

ಇದೇ ವಾಕ್ಯವು ಶಿವಪೂಜೆಗೆ ವಿಹಿತವಾದ ಫಲವನ್ನು ಬೋಧಿಸುವುದು. ಸಕಲೇಷ್ಟಸಿದ್ಧಿಗೂ ಸುಲಭೋಪಾಯವು ಶಿವಪೂಜೆಯು. ಆ ಶಿವಪೂಜೆಯಿಂದ ಸಮಸ್ತ ಮನೋರಥಗಳೂ ಲಭಿಸುವುವು. ಹೀಗೆಂಬುದೂ ವೇದವಾಕ್ಯವೇ. ||೫೭||

ಫಲವಾಕ್ಯದಲ್ಲಿ ಶ್ರೂಯಮಾಣವಾದ ತೃತೀಯಾವಿಭಕ್ತಿಗೆ ಸಾಧನ ಎಂದರ್ಥ. ಆದರೊಡನೆಯೇ ಆ ಶಿವಪೂಜಾ ಎಂಬ ಶಬ್ದದಿಂದಲೇ ಶಬ್ದಶಕ್ತಿಯಿಂದ ಉಪಾಯಭೂತವಾದುದು ಶಿವಪೂಜೆ ಎಂದೂ ಲಭಿಸುವುದು. ||೫೮||

ಆ ವಾಕ್ಯದಲ್ಲಿರುವ ಶಿವಶಬ್ದಕ್ಕೆ ಪ್ರಣವವಾಚ್ಯವಾದ ಅರ್ಥದಲ್ಲಿಯೇ ಶಕ್ತಿ ಇರುವುದು. ಮತ್ತೆ ಬೇರೆ ಯಾವುದನ್ನೂ ಆ ಶಬ್ದವು ಬೋಧಿಸುವುದಿಲ್ಲ. ಆ ತೃತೀಯಾವಿಭಕ್ತಿಗೆ ಕರಣದಲ್ಲಿ ಶಕ್ತಿ ಇರುವುದರಿಂದ ಪರಬ್ರಹ್ಮಸ್ವರೂಪನಾದ ಶಿವಪೂಜೆಯೇ ಸಾಧನ ಎಂದು ನಿಶ್ಚಿತವಾಗುವುದು. ||೫೯||

ಯಜ್ಜುಹೋತಿ ತದಿತ್ಯಾದಿ ಶ್ರುತಿರಾಯತನೇ ಯಥಾ ।
ಶಕ್ತ್ಯಾ ತಥೈವ ಪ್ರಕೃತೇ ಲಿಂಗೇ ಕುರ್ಯಾದಿತಿ ಶ್ರುತಿಃ ॥೬೦॥

ತಥಾ ಚ ಸಪ್ತಮೀ ಸೇಯಂ ಲಿಂಗಮಾಯತನಂ ಪರಂ ।
ಜ್ಞೇಯಂ ಶಿವಾರ್ಚನಸ್ಯೇತಿ ತತ್ರ ಶಕ್ತೌ ವದತ್ಯಪಿ ॥೬೧॥

ಫಲಕಾಮೋಽಧಿಕಾರೀತಿ ಜ್ಯೋತಿಷ್ಟೋಮೇ ವಿನಿಶ್ಚಯಾತ್ ।
ಪ್ರಕೃತೇಽಪ್ಯಧಿಕಾರೀ ತು ಫಲಕಾಮ ಇತಿ ಶ್ರುತಃ ॥೬೨॥

ಗುಣಾಂತರಾನ್ವೇಷಣಾಯ ಪ್ರವೃತ್ತಾ ಸಾಪಿ ಭಾವನಾ ।
ಬಿಲ್ವಪತ್ರೈರಿತಿ ಶ್ರುತ್ಯಾ ತಾನಿ ಜಗ್ರಾಹ ಸಾದರಂ ॥೬೩॥

ಜುಹೋತಿ ಎಂಬ ಶ್ರೌತವಿಧಿಗಳಲ್ಲಿ ಸಪ್ತಮೀವಿಭಕ್ತಿಗೆ ಆಧಾರದಲ್ಲಿ ಶಕ್ತಿ ಎಂದು ಅಂಗೀಕರಿಸಿ ಹೋಮವನ್ನು ವಿಧಿವಿಹಿತವಾದ ಆಧಾರದಲ್ಲಿ ಮಾಡಬೇಕೆಂದು ಹೇಗೆ ವ್ಯವಸ್ಥೆಯೋ, ಹಾಗೆಯೇ ಲಿಂಗೇ ಎಂಬ ಶ್ರುತಿಯಲ್ಲಿ ಸಪ್ತಮೀವಿಭಕ್ತಿ ಶ್ರವಣದಿಂದ ಲಿಂಗದಲ್ಲಿಯೇ ಪೂಜಿಸಬೇಕೆಂಬ ವ್ಯವಸ್ಥೆ ಇರುವುದು. ॥೬೦॥

ಲಿಂಗೇ ಕುರ್ಯಾತ್ ಎಂದು ವಿಧಿಯಲ್ಲಿ ಲಿಂಗಪದದ ಮುಂದುಗಡೆ ಇರುವ ಸಪ್ತಮೀವಿಭಕ್ತಿಗೂ ಆಧಾರದಲ್ಲಿಯೇ ಶಕ್ತಿ. ಆಧಾರವೆಂದರೆ ಆಯತನ ಎಂದರ್ಥ. ಸಪ್ತಮಿಗೆ ಆಯತನದಲ್ಲಿ ಶಕ್ತಿ ಎಂದು ಹೇಳಿದಮೇಲೆ ಅದಕ್ಕೆ ಆಯತನ ಎಂತಲೇ ಅರ್ಥವೆಂದು ತಿಳಿಯುವುದು. ತಥಾ ಚ ಶಿವಾರ್ಚನೆಗೆ ಶಿವಲಿಂಗವೇ ಆಯತನ ಎಂದು ನಿರ್ಣಯವಾಗುವುದು. ॥೬೧॥

ಜ್ಯೋತಿಷ್ಟೋಮವಿಧಿಯೇ ಮುಂತಾದ ವಾಕ್ಯಾರ್ಥಗಳನ್ನು ನಿರ್ಣಯಿಸುವಾಗ ಶಾಸ್ತ್ರದಲ್ಲಿ ಫಲಕಾಮನೆ ಯಾರಿಗೆ ಇರುತ್ತದೆಯೋ ಆತನೇ ಅಧಿಕಾರಿ ಎಂದು ತೀರ್ಮಾನಿಸಿದ್ದಾರೆ. ಹಾಗೆಯೇ ಶಿವಪೂಜೆಗೂ ಫಲಾಪೇಕ್ಷಿಯಾದವನು ಅಧಿಕಾರಿ. ॥೬೨॥

ಶಿವಪೂಜಾವಿಧಿಯಲ್ಲಿ ಇರುವ ವಿಧಿಯು ಗುಣವನ್ನು ಆಕಾಂಕ್ಷೆಮಾಡಿದರೆ ಬಿಲ್ವಪತ್ರೈಃ ಎಂಬ ಅಂಶವು ಅನ್ವಯವಾಗುವುದು. ಬಿಲ್ವಪತ್ರೈಃ ಎಂಬಲ್ಲಿ ತೃತೀಯಾವಿಭಕ್ತಿ ಇರುವುದರಿಂದ ತೃತೀಯಕ್ಕೆ ಸಾಧನ ಎಂಬ ಅರ್ಥವಿರೋಣದರಿಂದ, ಆ ಭಾವನೆಯಲ್ಲಿ ಬಿಲ್ವಪತ್ರೆಯು ಸಾಧನರೂಪ ಗುಣವಾಗಿ ಅನ್ವಯ ಹೊಂದುವುದು. ॥೬೩॥

ಪತ್ನ್ಯವೇಕ್ಷಿತಮಿತ್ಯತ್ರ ಸಂಸ್ಕಾರಃ ಪತ್ನ್ಯವೇಕ್ಷಣಂ ।
ಸ್ವನೀತತ್ವಂ ಚ ಸಂಸ್ಕಾರೋ ಬಿಲ್ವಪತ್ರೇಷು ನಿಶ್ಚಯಃ ॥೬೪॥

ಸ್ವಾನೀತಾನ್ಯೇವ ತಾನೀತಿ ಸಂಸ್ಕಾರಾಪೇಕ್ಷಯಾಪಿ ಸಾ ।
ಸ್ವಾನೀತತ್ವಾಖ್ಯಸಂಸ್ಕಾರಂ ಸಾ ಗೃಹ್ಣಾತ್ಯೇವ ಸಾದರಂ ॥೬೫॥

ಪ್ರಯೋಗೇ ಪ್ರಥಮೇ ತಾವತ್ಸಂಸ್ಕಾರೋಽಯಮಿತಿ ಶ್ರುತಃ ।
ಆಜ್ಯಮನ್ನಂ ದ್ವಿತೀಯಾದಿಪ್ರಯೋಗೇ ನಿಯಮಸ್ತು ನ ॥೬೬॥

ಶ್ರೌತಕರ್ಮದಲ್ಲಿ ಉಪಯೋಗಿಸತಕ್ಕ ಆಜ್ಯಕ್ಕೆ ಒಂದು ಸಂಸ್ಕಾರವಿರುವುದು. ಅಂದರೆ, ಯಜಮಾನನ ಪತ್ನಿಯು ಆಜ್ಯದಲ್ಲಿ ತನ್ನ ಮುಖದ ಪ್ರತಿಬಿಂಬವನ್ನು ನೋಡಿಕೊಳ್ಳಬೇಕು. ಆ ಆಜ್ಯವನ್ನು ಆ ಕರ್ಮದಲ್ಲಿ ವಿನಿಯೋಗಿಸಬೇಕು. ಅಂದರೆ ಪತ್ನಿಯು ಆಜ್ಯದಲ್ಲಿ ಮುಖವನ್ನು ನೋಡಿಕೊಳ್ಳುವುದರಿಂದ ಒಂದು ಸಂಸ್ಕಾರವನ್ನು ಮಾಡಿದಂತೆ ಆಗುತ್ತದೆ. ಹಾಗೆಯೇ ಶಿವಪೂಜೆಯಲ್ಲಿ ಉಪಯೋಗಿಸತಕ್ಕ ಬಿಲ್ವಪತ್ರೆಗೂ ಒಂದು ಸಂಸ್ಕಾರವಾಗಬೇಕು. ಅಂದರೆ ಶಿವಪೂಜಕನು ಸ್ವತಃ ತಾನೇ ಆ ಬಿಲ್ವಪತ್ರೆಗಳನ್ನು ಕೊಯಿದುಕೊಂಡು ಬರುವುದೇ ಆ ಬಿಲ್ವಪತ್ರೆಗೆ ಒಂದು ಸಂಸ್ಕಾರವನ್ನು ಮಾಡಿದಂತೆ ಆಗುತ್ತದೆ. ಹಾಗೆ ವಿಧಿಭಾವನೆಗೆ ಸಂಸ್ಕಾರಾಂಶದ ಆಕಾಂಕ್ಷೆ ಬಂದರೆ ಯಾಗಭಾವನೆಯು ಪತ್ನ್ಯವೇಕ್ಷಣರೂಪಸಂಸ್ಕಾರವನ್ನು ಅನ್ವಯಪಡೆಯುವಂತೆ, ಶಿವಪೂಜಾಭಾವನೆಯು ಸ್ವಾನೀತತ್ವರೂಪ ಸಂಸ್ಕಾರದೊಡನೆ ಅನ್ವಯವನ್ನು ಪಡೆಯುವುದು. ||೬೪-೬೫||

ಆದರೆ ಈ ಸಂಸ್ಕಾರಗಳು ಕರ್ಮದ ಪ್ರಥಮಾನುಷ್ಠಾನದಲ್ಲಿ ಮಾತ್ರ ನಿಯಮವಾಗಿ ಮಾಡತಕ್ಕವುಗಳು. ದ್ವಿತೀಯಾವೃತ್ತಿ ಕರ್ಮವನ್ನು ಅನುಷ್ಠಾನ ಮಾಡುವಾಗ ಈ ಸಂಸ್ಕಾರವನ್ನು ಮಾಡಬೇಕೆಂಬ ನಿಯಮವಿರುವುದಿಲ್ಲ. ಯಾಗದಲ್ಲಿನ ದ್ರವ್ಯಗಳಾದ ಆಜ್ಯಅನ್ನಗಳಿಗೆ ಸಂಸ್ಕಾರವಿಷಯದಲ್ಲಿ ಈರೀತಿ ನಿರ್ಣೀತವಾಗಿರುವಂತೆ, ಬಿಲ್ವಪತ್ರೆಯ ವಿಷಯದಲ್ಲಿಯೂ ಅದೇ ನಿರ್ಣಯವು ಅನ್ವಯವಾಗುವುದು. ||೬೬||

ಆಧಾನಭಾವನಾ ನಾಂಧಕರ್ತುರುಪಾವಗಾಹಿನೀ ।
ಅನಂಧಕರ್ತೃಸಾಪೇಕ್ಷಾ ಪ್ರಯೋಗೇ ಪ್ರಥಮೇ ಮಿತಾ ॥೬೭॥

ದ್ವಿತೀಯಾದಿಪ್ರಯೋಗೇಷು ದೈವಾದಂಧತ್ವಸಂಭವೇ ।
ಆಜ್ಯಾವೇಕ್ಷಣಸಂಸ್ಕಾರಲೋಪಂ ಗೃಹ್ಣಾತಿ ಭಾವನಾ ॥೭೮॥

ಕರ್ಮಗಳನ್ನು ಅನುಷ್ಠಾನ ಮಾಡಲು ಶರೀರದ ಸಮಸ್ತ ಅವಯವವೂ ಇದ್ದರೇನೇ ಅಧಿಕಾರವಿರುವುದು. ಕರ್ಮದ ಸಮಗ್ರವಾದ ಅಂಶಗಳನ್ನೂ ಅನುಷ್ಠಾನ ಮಾಡಲು ಶಕ್ತಿ ಇರುವವನೇ ಕಾಮ್ಯಕರ್ಮಕ್ಕೆ ಅಧಿಕಾರಿ. ಹೀಗೆಂದು ಶಾಸ್ತ್ರದಲ್ಲಿ ವ್ಯವಸ್ಥೆಯನ್ನು ಮಾಡಿರುತ್ತಾರೆ. ಆದುದರಿಂದ ಅಗ್ನ್ಯಾಧಾನ ಭಾವನೆಯು ಸ್ವತಃ ಆಕಾಂಕ್ಷೆಯಿಂದ ಕುರುಡನ ಕರ್ತೃತ್ವವನ್ನು ಅನ್ವಯಕ್ಕಾಗಿ ಅಪೇಕ್ಷಿಸುವುದಿಲ್ಲ. ಕುರುಡನನ್ನು ಅಧಿಕಾರಿತ್ವೇನ ಅನ್ವಯ ಹೊಂದಲು ಭಾವನೆಗೆ ಸಾಮರ್ಥ್ಯವಿರುವುದಿಲ್ಲ. ಆದುದರಿಂದ ಕರ್ಮದ ಪ್ರಥಮಾನುಷ್ಠಾನ ಸಮಯದಲ್ಲಿ ಕಣ್ಣುಗಳುಳ್ಳ ಮನುಷ್ಯನನ್ನೇ ಅಧಿಕಾರಿ ಎಂದು ಭಾವನೆಯು ಅಂಗೀಕರಿಸುತ್ತದೆ. ಏಕೆಂದರೆ, ಕರ್ಮದಲ್ಲಿ ಅಂಗವಾಗಿ ದರ್ಶನವೂ ಒಂದು ಅಂಶವಾಗಿರುತ್ತದೆ. ಆ ದರ್ಶನ ಸಾಮರ್ಥ್ಯವುಳ್ಳವನೇ ಕರ್ಮದಲ್ಲಿ ಅಧಿಕಾರಿ. ॥೬೭॥

ಮೇಲೆ ಹೇಳಿದ ನಿಯಮವು ಕರ್ಮದ ಪ್ರಥಮಾನುಷ್ಠಾನದಲ್ಲಿ ಮಾತ್ರವೇ ಅನ್ವಿತವಾಗುವುದು. ಏತಕ್ಕೆಂದರೆ, ಕರ್ಮಗಳು ಜೀವವಿರುವವರೆಗೂ ಮಾಡಲ್ಪಡ ತಕ್ಕವುಗಳೆಂದು ವಿಧಿ ಇದೆ. ಆದರೆ ಮರಣಪರ್ಯಂತವಾಗಿ ಸಮಗ್ರ ಅಂಗಗಳೂ ಇದ್ದೇ ಇರುತ್ತವೆ ಎಂದು ನಂಬಿಕೆ ಇರುವುದಿಲ್ಲ. ಆದುದರಿಂದ ಕರ್ಮದ ದ್ವಿತೀಯಾನುಷ್ಠಾನ ಸಮಯದಲ್ಲಿ ಸಂಭಾವಿತವಾದ ಅಂಗಗಳುಳ್ಳವನೂ ಕರ್ಮಕ್ಕೆ ಅಧಿಕಾರಿಯಾಗಬಲ್ಲನು. ಮತ್ತು ಅಗ್ನ್ಯಾಧಾನ ಮಾಡುವಾಗ ಕಣ್ಣು, ಕಾಲು, ಕೈ ಮುಂತಾದ ಅವಯವಗಳು ಎಲ್ಲವೂ ಋಜುವಾಗಿರುವ ಮನುಷ್ಯನನ್ನೇ ಅಧಿಕಾರಿ ಎಂದು ಭಾವನೆಯು ಅಂಗೀಕರಿಸುತ್ತದೆ. ಆದರೆ ಅದೇ ಕರ್ಮವನ್ನು ಪುನಃ ಅನುಷ್ಠಾನ ಮಾಡುವಾಗ ದೈವಾತ್ ಅಂಗಹೀನತೆಯುಂಟಾಗಿದ್ದರೆ, ಅಂಥವನನ್ನೂ ಯಾಗಭಾವನೆಯು ಅಧಿಕಾರಿತ್ವೇನ ಅಂಗೀಕರಿಸುತ್ತದೆ. ಆಗ ಆಜ್ಯಾವೇಕ್ಷಣ ಮುಂತಾದ ಕರ್ಮಾಂಗಗಳಾದ ಅಂಶಗಳಿಗೆ ಲೋಪಬಂದರೂ ಸಹಿಸಬೇಕು. ಹೀಗೆಂಬುದು ಯುಕ್ತಿಸಿದ್ಧ ಎಂದು ನಿರ್ಣಯಿಸಲಾಗಿದೆ. ॥೬೮॥

ಏವಂ ಶಿವಾರ್ಚನೇಽಪ್ಯಾದ್ಯೇ ಸ್ವಾನೀತತ್ವಾವಗಾಹಿನೀ ।
ಪ್ರಯೋಗೇ ಭಾವನಾ ತತ್ತ್ವಂ ದ್ವಿತೀಯೇ ನಾವಗಾಹತೇ ॥೬೯॥

ಯದಿ ಕರ್ತಾ ಸ್ವಯಂ ದಕ್ಷಸ್ತತ್ಪತ್ರಾನಯನೇ ಸದಾ ।
ತದ್ಗೃಹ್ಣಾತೀತಿ ನಿಯಮೋ ನ ದ್ವಿತೀಯಾದಿಷು ಧ್ರುವಂ ॥೭೦॥

ಹಾಗೆಯೇ ಆಜ್ಯಾವೇಕ್ಷಣ ನ್ಯಾಯದಂತೆ ಬಿಲ್ವಪತ್ರೆಗಳಲ್ಲಿ ಸಂಸ್ಕಾರವನ್ನು ಮಾಡತಕ್ಕ ವಿಚಾರವನ್ನು ತಿಳಿದುಕೊಳ್ಳಬೇಕು. ಅಂದರೆ, ಮೊಟ್ಟ ಮೊದಲಿನ ಶಿವಪೂಜೆಯಲ್ಲಿ ಬಿಲ್ವಪತ್ರೆಗಳನ್ನು ಕರ್ತನೇ ಸ್ವತಃ ಕುಯಿದುಕೊಂಡು ತರಬೇಕು. ಇದೊಂದು ಬಿಲ್ವಪತ್ರೆಗಳಿಗೆ ಸಂಸ್ಕಾರವೆಂದು ಹಿಂದೆಯೇ ಹೇಳಿದೆ. ಅಂದರೆ ಶಿವಾರ್ಚನೆಯ ಭಾವನೆಯು ಪ್ರಥಮ ಪೂಜಾರೂಪವಾದ ಕರ್ಮದಲ್ಲಿ ಮಾತ್ರ ಸ್ವಾನೀತತ್ವ ಎಂಬ ಸಂಸ್ಕಾರಾಂಶವನ್ನು ಅನ್ವಯಕ್ಕಾಗಿ ಅಪೇಕ್ಷಿಸುತ್ತದೆ. ಆದರೆ ದ್ವಿತೀಯಪೂಜಾಭಾವನೆಯು ಆ ಸಂಸ್ಕಾರಾಂಶವನ್ನು ಅಪೇಕ್ಷಿಸುವುದಿಲ್ಲ. ಎರಡನೆಯ ಸಲ ಪೂಜೆಯನ್ನು ಮಾಡುವಾಗ ಬಿಲ್ವವನ್ನು ತಾನೇ ಕೊಯಿದು ತರಬೇಕೆಂದು ನಿಯಮವಿಲ್ಲ. ಅಂದರೆ ಎರಡನೇ ಪೂಜೆಯಲ್ಲಿ ಸ್ವಾನೀತತ್ವ ಸಂಸ್ಕಾರಕ್ಕೆ ಲೋಪ ಬಂದರೂ ಕೊರತೆ ಇರುವುದಿಲ್ಲ. ಏಕೆಂದರೆ ಯಾವಜ್ಜೀವವೂ ಸಮಗ್ರ ಅಂಗಗಳು ಸರಿಯಾಗಿ ಇರುತ್ತವೆ ಎಂಬುದು ನಿಯಮವಿಲ್ಲ. ಅಂಗನ್ಯೂನತೆ ಉಂಟಾದರೆ ಕರ್ಮಾಂಗಗಳನ್ನು ಅನುಷ್ಠಾನಮಾಡಲು ಆಗಲಾರದು. ಹೀಗೆಂಬುದು ಯುಕ್ತಿ ಸಿದ್ಧವಾದ ಶಾಸ್ತ್ರಾರ್ಥವಿಚಾರ. ॥೬೯॥

ಯಾವಜ್ಜೀವವೂ ಮಾಡಬೇಕಾದ ಕರ್ಮವನ್ನು ಆಯಾಯಾ ಕರ್ಮಾನುಷ್ಠಾನ ಸಮಯದಲ್ಲಿ ಆ ಕರ್ಮದಲ್ಲಿನ ಎಷ್ಟು ಅಂಗಗಳನ್ನು ಅನುಷ್ಠಾನ ಮಾಡಲು ಕರ್ತನಿಗೆ ಶಕ್ತಿ ಇದೆಯೋ, ಅವುಗಳೆಲ್ಲವನ್ನೂ ಮಾಡಬೇಕು. ಸಾಮರ್ಥ್ಯವೇ ಇಲ್ಲದಿದ್ದರೆ ಆ ಅಂಗಾಂಶಕ್ಕೆ ಲೋಪಬಂದರೂ ಕರ್ಮವು ವಿಗುಣವಾಗುವುದಿಲ್ಲ. ಆದರೆ ಎಷ್ಟು ಎಷ್ಟು ಅಂಗಾಂಶಗಳನ್ನು ಅನುಷ್ಠಿಸಲು ಸಾಮರ್ಥ್ಯವಿದೆಯೋ ಅವುಗಳನ್ನು ಅನುಷ್ಠಾನ ಮಾಡಲೇಬೇಕು. ಹಾಗೆಯೇ ಯಾವಜ್ಜೀವವೂ ಬಿಲ್ವ ಪತ್ರೆಗಳನ್ನು ಸ್ವತಃ ತರುವುದಕ್ಕೆ ಶಕ್ತಿ ಇದ್ದರೆ ತರಬೇಕು. ಶಕ್ತಿ ಇಲ್ಲದಿದ್ದರೆ ತಾನೇ ತರಬೇಕೆಂಬ ನಿಯಮವಿಲ್ಲ. ॥೭೦॥

ನ ಪಂಗುರಪ್ಯಧಿಕೃತಃ ಪ್ರಯೋಗೇ ಪ್ರಥಮೋ ಯತಃ ।
ಪ್ರದಕ್ಷಿಣಂ ಕ್ರಮಣವತ್ ಗೃಹ್ಣಾತ್ಯತ್ರೈವ ಭಾವನಾ ॥೨೦॥

ಏವಂ ಚಾದ್ಯಪ್ರಯೋಗೇಽಪಿ ವಿಶೇಷವಚನೈಃ ಪರಂ ।
ಪಂಗ್ವಾದೀಷ್ವಪಿ ಗೃಹ್ಣಾತಿ ಶಿವಪೂಜನಭಾವನಾ ॥೨೧॥

ಸೋಮಾಭಾವೇ ತು ಪೂತೀಕಾವಿಶೇಷವಚನೇನ ಸಾ ।
ಗೃಹ್ಣಾತಿ ಭಾವನಾ ತದ್ವತ್ ಅನ್ಯದ್ಗೃಹ್ಣಾತಿ ಭಾವನಾ ॥೨೩॥

ವಿಧಿಯ ಭಾವನೆಯು ತನ್ನ ಅನ್ವಯಪೂರ್ತಿಗಾಗಿ ಯಾವ ಅಂಗಗಳೂ ನ್ಯೂನವಾಗದಿರುವ ಮನುಷ್ಯನನ್ನೇ ಅಧಿಕಾರಿತ್ವೇನ ಅಪೇಕ್ಷಿಸುವುದು. ಏಕೆಂದರೆ ಕರ್ಮಾನುಷ್ಠಾನದಲ್ಲಿ ಕಾಲುಗಳಿಂದ ಒಂದು ಪ್ರದಕ್ಷಿಣಾದಿಕರ್ಮವನ್ನು ಅನುಷ್ಠಾನ ಮಾಡಲು ಕಾಲು ಅಗತ್ಯವಾಗಿರುವುದು. ಯಾಗಗಳಲ್ಲಿ ಅಭಿಕ್ರಮಣ (ದಾಟುವುದು) ಎಂಬ ಒಂದು ಕರ್ಮವನ್ನು ಅನುಷ್ಠಿಸಬೇಕು. ಶಿವಪೂಜೆಯಲ್ಲಿ ಪ್ರದಕ್ಷಿಣೆಯನ್ನು ಮಾಡಬೇಕು. ಇವುಗಳು ಕಾಲುಗಳಿದ್ದರೆ ಮಾತ್ರವೇ ಸಾಧ್ಯವಾಗುವುವು. ಇವುಗಳನ್ನು ಕಾಲುಗಳಿಲ್ಲದ ಮನುಷ್ಯನು ಮಾಡಲಾರನು. ಆದುದರಿಂದ ಕರ್ಮಗಳ ಪ್ರಥಮಪ್ರಯೋಗದಲ್ಲಿ, ಪ್ರಥಮಾನುಷ್ಠಾನದಲ್ಲಿ, ವಿಧಿಭಾವನೆಯು ಕುಂಟನಲ್ಲದವನನ್ನೇ ಅಧಿಕಾರಿತ್ವೇನ ಅಂಗೀಕರಿಸುವುದು. ಆದರೆ ಈ ನಿಯಮವು ಕರ್ಮದ ದ್ವಿತೀಯಾನುಷ್ಠಾನದಲ್ಲಿ ಇರುವುದಿಲ್ಲ. ಕಾಲುಗಳಿರತಕ್ಕವನು ಈ ಅಂಗಾಂಶವನ್ನು ಅನುಷ್ಠಾನಮಾಡಬೇಕು. ದೈವಾತ್ ಕುಂಟನಾಗಿ ಅನುಷ್ಠಾನ ಮಾಡಲು ಸಾಧ್ಯವಿಲ್ಲದಿದ್ದರೆ, ಆ ಅಂಗಾಂಶಕ್ಕೆ ಲೋಪ ಬಂದರೂ ದೋಷವೆನಿಸುವುದಿಲ್ಲ. ಹೀಗೆಂದು ಯುಕ್ತಿಸಿದ್ಧವಾಗಿದ್ದರೂ, ॥೨೦॥

ಶಿವಪೂಜೆಯ ವಿಧಿಭಾವನೆಯು ಕುಂಟನನ್ನು ಅಧಿಕಾರಿ ಎಂದು ಒಪ್ಪುವುದು. ಏಕೆಂದರೆ ಅಂಗಹೀನರೂ ಶಿವಪೂಜೆಯನ್ನು ಮಾಡಬೇಕು ಎಂದು ಮತ್ತೊಂದು ವಿಶೇಷವಿಧಿ ಇರುತ್ತದೆ. ಆ ವಿಧಿಯೊಡನೆ ಈ ಸಾಮಾನ್ಯವಿಧಿಗೆ ಏಕವಾಕ್ಯತೆಯನ್ನು ಮಾಡಬೇಕಾದರೆ ಕುಂಟರೂ ಕುರುಡರೂ ಸಹ ಶಿವಪೂಜೆಗೆ ಅಧಿಕಾರಿಗಳೆಂದು ಅಂಗೀಕೃತವಾಗುವುದು. ಪ್ರಥಮ ಶಿವಪೂಜೆಯಲ್ಲಿಯೂ ಅಂಗಹೀನರಿಗೆ ಅಧಿಕಾರ ಉಂಟು. ॥೨೧॥

ಯಾಗಭಾವನೆಯು ಮುಖ್ಯವಾಗಿ ಸೋಮಲತೆಯನ್ನು ಅನ್ವಯಕ್ಕಾಗಿ ಅಪೇಕ್ಷಿಸುತ್ತದೆ. ಆದರೆ ಸೋಮಲತೆಯೇ ಸಿಕ್ಕದಿರುವಾಗ, ಕರ್ಮವು ಅನುಷ್ಠಾನಕ್ಕೆ

ಆದ್ಯಪ್ರಯೋಗೇ ಗೃಹ್ಣಾತಿ ಬಿಲ್ವಪತ್ರಾದಿಭಾವನಾ ।
ತದಭಾವೇ ತು ತತ್ತುಲ್ಯಂ ಪತ್ರಂ ಗೃಹ್ಣಾತಿ ಭಾವನಾ ॥೭೪॥

ಅತ್ರಾಂಗಾನಿ ಬಹೂನ್ಯೇವ ಶ್ರುತಾನಿ ವಿವಿಧಾನ್ಯಪಿ ।
ನಿತ್ಯಂ ಚಮಸವತ್ಕಿಂಚಿದಂಗಮಸ್ತಿ ಶಿವಾರ್ಚನೇ ॥೭೫॥

ಗೋದೋಹನಾದಿ ತುಲ್ಯಾನಿ ಕಾಮ್ಯಾಂಗಾನ್ಯಪಿ ಕಾನಿಚಿತ್ ।
ತಾನಿ ನಿತ್ಯಾಂಗಲೋಪಾಯ ಪ್ರವೃತ್ತಾನಿ ಕಥಂಚನ ॥೭೬॥

ಅಸಾಧ್ಯವಾಗುವುದರಿಂದ ವಿಧಿ ವೈಯ್ಯರ್ಥ್ಯ ಪ್ರಸಂಗ ಬರುವುದರಿಂದ ಸೋಮಪ್ರತಿನಿಧಿಯೊಡನೆಯೂ ಭಾವನೆಯು ಅನ್ವಯವನ್ನು ಪಡೆಯುವುದು. ಶಾಸ್ತ್ರದಲ್ಲಿ ಸೋಮಕ್ಕೆ ಪ್ರತಿನಿಧಿಯಾಗಿ ಪೂತಿಕೆಯನ್ನು (ತಪಸೀಗಿಡ) ವಿಧಿಸಿದೆ. ಹಾಗೆಯೇ ಸೋಮಲತೆಯಂತೆ ಪೂತಿಕಾಲತೆಯೂ (ತಪಸೀಲತೆಯು) ಯಾಗಭಾವನೆಯೊಡನೆ ಅನ್ವಯವನ್ನು ಹೊಂದುವುದು. ಇದು ಸೋಮಾಭಾವಪಕ್ಷ ವಿಷಯವು. ॥೭೩॥

ಮೇಲೆ ಹೇಳಿದ ಯುಕ್ತಿಯಂತೆ ಶಿವಪೂಜನ ಭಾವನೆಯು ಮುಖ್ಯವಾಗಿ ತನ್ನೊಡನೆ ಅನ್ವಯಕ್ಕಾಗಿ ಬಿಲ್ವಪತ್ರೆಯನ್ನು ಅಪೇಕ್ಷಿಸುತ್ತದೆ. ಬಿಲ್ವಪತ್ರೆಗೇ ಭಾವನೆಯೊಡನೆ ಮುಖ್ಯಾನ್ವಯಯೋಗ್ಯತೆ ಇರುತ್ತದೆ. ಆದರೆ ಬಿಲ್ವಪತ್ರೆಯೇ ಸಿಕ್ಕದಿದ್ದರೆ ಅದಕ್ಕೆ ಸದೃಶವಾದ ಅನ್ಯಪತ್ರೆಯನ್ನು ಹೇಳಿದ್ದರೆ, ಅದರೊಡನೆಯೂ ಭಾವನೆಯು ಅನ್ವಯ ಪಡೆದೇ ಪಡೆಯುವುದು. ಅನ್ಯಥಾ ವಿಧಿಗೇ ವೈಯ್ಯರ್ಥ್ಯ ಬರುವುದು. ॥೭೪॥

ಶಿವಾರ್ಚನೆಯಲ್ಲಿ ಯಾಗದಲ್ಲಿರುವಂತೆಯೇ ಅನೇಕ ಅಂಗಾಂಶಗಳು ವಿಹಿತವಾಗಿರುತ್ತವೆ. ಯಾಗದಲ್ಲಿ ಚಮಸರೂಪ ಅಂಗವಿರುವಂತೆ ಶಿವಪೂಜನದಲ್ಲಿಯೂ ಅಂಗಾಂಶವಿದೆ. ಈ ಅಂಗಾಂಶಗಳಲ್ಲಿ ಕೆಲವು ನಿತ್ಯವಾಗಿರುವುವು. ಕೆಲವು ಅನಿತ್ಯವಾಗಿರುವುವು. ಈ ಚಮಸರೂಪ ಅಂಗವು ಯಾಗಕ್ಕೆ ನಿತ್ಯವಾದ ಅಂಗವಾಗಿರುವುದು. ಶಿವಪೂಜನದಲ್ಲಿಯೂ ನಿತ್ಯಾನಿತ್ಯರೂಪ ಅಂಗಾಂಶಗಳಿರುತ್ತವೆ. ॥೭೫॥

ಯಾಗದಲ್ಲಿ ಗೋದೋಹನವೆಂಬ ಕಾಮ್ಯವಾದ ಅಂಗವು ವಿಹಿತವಾಗಿರುತ್ತದೆ. ಹಾಗೆಯೇ ಶಿವಪೂಜನದಲ್ಲಿಯೂ ಕಾಮ್ಯವಾದ ಅಂಗಗಳೂ ಕೆಲವು ವಿಹಿತವಾಗಿರುತ್ತವೆ. ಈ ಕಾಮ್ಯಫಲಗಳನ್ನು ತಂದುಕೊಡುವ ಕಾಮ್ಯಾಂಗಗಳು ಕೆಲವು ಕಡೆಯಲ್ಲಿ ನಿತ್ಯವಾಗಿರುವ ಅಂಗಕ್ಕೆ ಪ್ರತಿಕೂಲವಾಗಿರುವುದರಿಂದ ನಿತ್ಯಾಂಗಗಳಿಗೆ ಲೋಪ ಬರುವುದು. ಹೇಗೆಂದರೆ, ॥೭೬॥

ಗೋದೋಹನಪ್ರಯೋಗೇ ಕಿಂ ಚಮಸಸ್ಯಾಂಗತಾ ಮತಾ ।
ಏವಂ ನಿತ್ಯಾಂಗಲೋಪೇಽಪಿ ಪ್ರಯೋಗಸ್ಯಾವಿಶೇಷತಃ ॥೭೭॥

ಭಸ್ಮತ್ರಿಪುಂಡ್ರಕರಣಂ ಸನ್ನಿಪತ್ಯೋಪಕಾರಕಂ ।
ಶಿವಲಿಂಗಂ ಚ ರುದ್ರಾಕ್ಷಂ ಧಾರಣಂ ಚ ಶ್ರುತಿಶ್ರುತಂ ॥೭೮॥

ನವನೀತಾಭ್ಯಂಜನಾದಿತುಲ್ಯಂ ಭಸ್ಮಾದಿಧಾರಣಂ ।
ತಸ್ಯ ಪ್ರತಿನಿಧಿರ್ನೇತಿ ತತ್ಪ್ರಯೋಗೋಽಪ್ಯಪೇಕ್ಷತೇ ॥೭೯॥

ಯಾಗದಲ್ಲಿ ಚಮಸವು ನಿತ್ಯವಾದ ಅಂಗವಾಗಿದ್ದರೂ, ಕಾಮ್ಯವಾದ ಗೋದೋಹನವನ್ನು ಅಂಗವಾಗಿ ಅನುಷ್ಠಿಸಿದರೆ, ಚಮಸಾಂಗಕ್ಕೆ ಲೋಪಬರುವುದು. ಏಕೆಂದರೆ, ಗೋದೋಹನವನ್ನು ಮಾಡಿದರೆ ಚಮಸಕ್ಕೆ ಪ್ರಸಂಗ ಉಳಿಯುವುದಿಲ್ಲ. ಇದರಂತೆ ಶಿವಪೂಜಾಪ್ರಯೋಗದಲ್ಲಿಯೂ ನಿತ್ಯವಾದ ಅಂಗಕ್ಕೆ ಕಾಮ್ಯವಾದ ಅಂಗಾನುಷ್ಠಾನದಿಂದ ಬಾಧಕವು ಬಂದು ಆ ನಿತ್ಯವಾದ ಅಂಗವು ಲೋಪ ಹೊಂದುವುದು. ಇದೆಲ್ಲ ನಿಯಮಗಳು ಕರ್ಮಾನುಷ್ಠಾನಕ್ಕೆ ಹೇಳಿದವುಗಳು. ಯಾಗಾನುಷ್ಠಾನಕ್ಕೆ ಹೇಳಿದ ಎಲ್ಲಾ ನಿಯಮಗಳೂ ಅದಕ್ಕೆ ಸಜಾತೀಯವಾದ ಶಿವಪೂಜಾನುಷ್ಠಾನದಲ್ಲಿಯೂ ಅನ್ವಿತವಾಗುವುವು. ಇಲ್ಲಿ ಹೇಳಿರತಕ್ಕ ಎಲ್ಲಾ ಪ್ರಮೇಯಗಳೂ ಶಾಸ್ತ್ರೀಯವಾದವುಗಳು. ಈ ವಿಷಯಗಳಲ್ಲಿ ಮೀಮಾಂಸಾ ಶಾಸ್ತ್ರದಲ್ಲಿ ಅನೇಕ ವಿಸ್ತಾರವಾದ ಚರ್ಚೆಗಳು ನಡೆದಿವೆ. ॥೭೭॥

ವೇದವಿಹಿತ ಕರ್ಮಗಳಿಗೆ ಅನೇಕ ಅಂಗಾಂಶಗಳು ವಿಹಿತವಾಗಿರುತ್ತವೆ. ಅವುಗಳಲ್ಲಿ ಎರಡು ವಿಧಗಳಿವೆ. ಸನ್ನಿಪತ್ಯೋಪಕಾರಕಾಂಗಗಳು ಕೆಲವು. ಮತ್ತೆ ಕೆಲವು ಆರಾದುಪಕಾರಕಾಂಗಗಳು. ಹಾಗೆಯೇ ಶಿವಪೂಜೆಯಲ್ಲಿಯೂ ಎರಡೂ ವಿಧವಾದ ಅಂಗಗಳಿವೆ. ಭಸ್ಮ, ತ್ರಿಪುಂಡ್ರ, ರುದ್ರಾಕ್ಷ ಇವುಗಳ ಧಾರಣೆಯೂ ಶಿವ ಪೂಜೆಗೆ ಅಂಗಗಳು. ಇವು ಸನ್ನಿಪತ್ಯೋಪಕಾರಕವಾದ ಅಂಗಗಳೆಂದು ಶ್ರುತಿಯಿಂದ ತಿಳಿಯುತ್ತವೆ. ॥೭೮॥

ಯಾಗಾದಿ ಕರ್ಮಗಳಲ್ಲಿ ನವನೀತಾಭ್ಯಂಜನಗಳನ್ನು ಮಾಡಬೇಕು. ಅವು ಗಳು ಸನ್ನಿಪತ್ಯೋಪಕಾರಕಾಂಗಗಳು. ಅವುಗಳಿಗೆ ಪ್ರತಿನಿಧಿ ವಿಧಾನವಿರುವುದಿಲ್ಲ. ಅಂದರೆ ಅವುಗಳನ್ನು ನಿಯಮೇನ ಅನುಷ್ಠಾನ ಮಾಡಲೇಬೇಕು. ಅವುಗಳಂತೆಯೇ ಈ ಭಸ್ಮಾದಿ ಧಾರಣೆಗಳೂ ಶಿವಪೂಜೆಗೆ ಸನ್ನಿಪತ್ಯೋಪಕಾರಕಾಂಗಗಳಾದುದರಿಂದ

ಕರ್ಮಾಂಗತ್ವೇನ ವಿಜ್ಞಾತಂ ಭಸ್ಮಧಾರಣಮಿತ್ಯತಃ ।
ತತ್ತ್ಯಾಗೇ ನಾಧಿಕಾರೀ ಸ್ಯಾತ್ ಸ್ಮಾರ್ತೇ ವಾನ್ವೈದಿಕೇಽಪಿ ವಾ ॥೮೦॥

ಶಿವಮಂತ್ರಜಪೇ ಯೋಗ್ಯೋ ಭಸ್ಮಧಾರೀ ನ ಚೇತರಃ ।
ಧೃತೇ ಭಸ್ಮನಿ ಗಾಯತ್ರೀ ಗುರುಣಾಭ್ಯುಪದಿಶ್ಯತೇ ॥೮೧॥

ಅಗ್ನಿಕಾರ್ಯೇಣ ಸಂಪನ್ನೇ ಪೂರ್ವಂ ಭಸ್ಮನ್ಯತಃಪರಂ ।
ಧೃತೇ ಭಸ್ಮನಿ ಗಾಯತ್ರೀಜಪಯೋಗ್ಯೋಪಜಾಯತೇ ॥೮೨॥

ಗಾಯತ್ರೀ ಶಿವಮಂತ್ರತ್ವಾದ್ಭಸ್ಮಧಾರಣಭಾವನಾಂ ।
ಸಾ ಗೃಹ್ಣಾತಿ ವಿಪಶ್ಯಂತೀ ತದ್ಗೃಹೀತಾಧಿತಿಷ್ಠತಿ ॥೮೩॥

ಇವುಗಳನ್ನು ಅನುಷ್ಠಾನ ಮಾಡಲೇಬೇಕು. ಇವುಗಳಿಗೆ ಪ್ರತಿಯಾಗಿ ಮತ್ತೇನನ್ನೂ ಉಪಯೋಗಿಸಬಾರದು. ॥೭೯॥

ಹೀಗೆ ಭಸ್ಮಧಾರಣೆಯು ಶಾಸ್ತ್ರಯುಕ್ತಿಯಿಂದ ಕರ್ಮಕ್ಕೆ ಅಂಗವೆಂದು ನಿರ್ಣೀತವಾಗಿರುವುದರಿಂದ ಕರ್ಮದಲ್ಲಿ ಅದನ್ನು ಅನುಷ್ಠಾನ ಮಾಡಲೇಬೇಕು. ಹಾಗೆ ಭಸ್ಮಧಾರಣವನ್ನು ಮಾಡದ ಮನುಷ್ಯನು ಕರ್ಮಕ್ಕೆ ಅಧಿಕಾರಿಯಾಗುವುದಿಲ್ಲ. ಏವಂ ಚ ಭಸ್ಮಧಾರಣವನ್ನು ಮಾಡದವನು ಶ್ರೌತಸ್ಮಾರ್ತ ಕರ್ಮಗಳಲ್ಲಿಯೂ ಅಧಿಕಾರವನ್ನು ಹೊಂದುವುದಿಲ್ಲವೆಂದು ನಿರ್ಣೀತವಾಗುವುದು. ॥೮೦॥

ಭಸ್ಮಧಾರಣೆಯನ್ನು ಮಾಡಿಕೊಂಡಿರುವವನೇ ಶಿವಮಂತ್ರಗಳನ್ನು ಜಪ ಮಾಡಲು ಯೋಗ್ಯನು. ಆತನೇ ಅಧಿಕಾರಿ. ಬೇರೆಯವನಿಗೆ ಶಿವಮಂತ್ರ ಜಪದಲ್ಲಿ ಅಧಿಕಾರವೇ ಇರುವುದಿಲ್ಲ. ಹಾಗೆಯೇ ಗಾಯತ್ರೀ ಮಹಾಮಂತ್ರವನ್ನು ಉಪದೇಶ ತೆಗೆದುಕೊಳ್ಳುವಾಗಲೂ ಭಸ್ಮವನ್ನು ಧರಿಸಿರಲೇಬೇಕು. ಹಾಗೆ ಧರಿಸಿದ್ದರೇ ಗುರುವು ಉಪದೇಶ ಕೊಡುವುದು. ॥೮೧॥

ಔಪಾಸನ ಮಾಡುವ ಅಗ್ನಿಯಲ್ಲಿ ಸುಟ್ಟು ಸುಸಂಸ್ಕೃತವಾದ ಭಸ್ಮವನ್ನು ಹಚ್ಚಿಕೊಂಡರೇ ಗಾಯತ್ರೀ ಮಹಾಮಂತ್ರವನ್ನು ಜಪಮಾಡಲು ಯೋಗ್ಯತೆ ಬರುವುದು. ಭಸ್ಮಧಾರಣೆ ಮಾಡಿದನಂತರ ಗಾಯತ್ರೀ ಜಪವನ್ನು ಮಾಡಿದರೆ ಮಹಾಫಲವು ಶೀಘ್ರವಾಗಿ ಸಿದ್ಧಿಸುವುದು. ॥೮೨॥

ಗಾಯತ್ರಿಯೂ ಶಿವಮಂತ್ರವೇ ಆಗಿರುವುದರಿಂದ ಶಿವವಿಷಯಕವಾದ ಶಿವಪೂಜಾವಿಧಿಯ ಭಾವನೆಯು ಇಲ್ಲಿಯೂ ಅನ್ವಯಿಸುವುದು. ಅದೇ ಭಾವನೆ

ರುದ್ರಾಕ್ಷಧಾರಣಂ ತದ್ವತ್ತಾಂ ಶಿವಾರ್ಚನಭಾವನಾಂ ।
ಸ್ವಾನುಗ್ರಹಾರ್ಥಂ ಪಶ್ಯಂತೀ ಭಾವನಾಂ ಪ್ರಚರಿಷ್ಯತಿ ॥೮೪॥

ಪೂರ್ವಾಂಗಾನ್ಯುತ್ತರಾಂಗಾನಿ ತಾನಿ ತಾವತ್ಪರಸ್ಪರಂ ।
ಮಹಾಪೂರ್ವೋಪಯುಕ್ತಾನಿ ಸಾ ಪೂರ್ವದ್ವಾರಸಂಭವಾತ್ ॥೮೫॥

ತದಪೂರ್ವಂ ಫಲಂ ಯಾವತ್ ತಾವದೇವಾಧಿತಿಷ್ಠತಿ ।
ಫಲೇ ಜಾತೇ ನ ತಸ್ಯಾಪಿ ಕೃತ್ಯಮಿತ್ಯವಧಾರಿತಂ ॥೮೬॥

ಯೊಡನೆ ಭಸ್ಮಧಾರಣೆಯು ಅನ್ವಯವನ್ನು ಮೊದಲೇ ಹೊಂದಿರುವುದರಿಂದ ಆ ಭಸ್ಮಧಾರಣೆಯ ವಿಧಿಯು ಗಾಯತ್ರೀಮಂತ್ರದ ವಿಧಿಯೊಡನೆಯೂ ಅನ್ವಯ ಹೊಂದುವುದು. ಗಾಯತ್ರೀಮಂತ್ರಜಪದಲ್ಲಿ ಭಸ್ಮಧಾರಣೆಯು ವಿಹಿತವಾದಂತಾಯಿತು. ಅಂದರೆ ಗಾಯತ್ರೀಜಪಾನುಷ್ಠಾನದಲ್ಲಿ ಭಸ್ಮಧಾರಣೆಯು ಒಂದು ಅಂಗ ಎಂದಾಯಿತು. ಏವಂಚ ಭಸ್ಮಧಾರಣಮಾಡಿರುವವನನ್ನೇ ಕುರಿತು ಗಾಯತ್ರೀಜಪ ವಿಧಿಯು ಪ್ರವರ್ತಿಸುವುದು. ಆತನೇ ಅಧಿಕಾರಿಯಾಗಿರುವುದರಿಂದ ಆತನಿಗೇ ಸಿದ್ಧಿಸುವುದು. ॥೮೩॥

ಆ ಭಸ್ಮಧಾರಣವಿಧಿಯಂತೆ ರುದ್ರಾಕ್ಷಧಾರಣವಿಧಿಯೂ ಶಿವಾರ್ಚನ ಭಾವನೆಯೊಡನೆ ಅನ್ವಿತವಾಗಿ ಕರ್ಮಾಂಗತ್ವವನ್ನು ಪಡೆದಿರುವುದರಿಂದ, ಮೇಲೆ ಹೇಳಿದ ಯುಕ್ತಿಯ ಪ್ರಕಾರ ಗಾಯತ್ರೀ ಮಂತ್ರಜಪ ವಿಧಿಯಲ್ಲಿ ಅನ್ವಿತವಾಗಿ ಆ ಜಪಾನುಷ್ಠಾನ ಕರ್ಮಕ್ಕೆ ಅಂಗವಾಗುವುದು. ಆದ್ದರಿಂದ ಶಿವಾರ್ಚನ ಭಾವನೆಯನ್ನು ಗಾಯತ್ರೀ ಮಂತ್ರಜಪ ವಿಧಿಯಲ್ಲಿ ಅನ್ವಯಮಾಡಿದರೆ ಮೇಲೆ ಹೇಳಿದ ಅರ್ಥವನ್ನುಂಟುಮಾಡುವುದು ಎಂದು ತಾತ್ಪರ್ಯ. ॥೮೪॥

ಕರ್ಮಗಳ ಅಂಗಗಳು ಮತ್ತೆ ಎರಡು ವಿಧಗಳಾಗಿರುತ್ತವೆ. ಕೆಲವು ಅಂಗಗಳು ಕರ್ಮಕ್ಕೆ ಪೂರ್ವಾಂಗಗಳು. ಅಂದರೆ ಪ್ರಧಾನ ಕರ್ಮಕ್ಕಿಂತ ಪೂರ್ವದಲ್ಲಿ ಅನುಷ್ಠಾನಕ್ಕೆ ಯೋಗ್ಯವಾದವುಗಳು. ಕೆಲವು, ಕರ್ಮದ ಅನಂತರ ಅನುಷ್ಠಾನಕ್ಕೆ ಯೋಗ್ಯವಾಗಿರುವುದರಿಂದ ಅವು ಉತ್ತರಾಂಗಗಳು. ಇವುಗಳೆಲ್ಲವೂ ಕರ್ಮದಿಂದ ಉಂಟಾಗುವ ಅಪೂರ್ವವೆಂದು ಹೆಸರು. ಈ ಅಂಗಾಪೂರ್ವಗಳು ಪ್ರಧಾನ ಕರ್ಮದಿಂದ ಉತ್ಪತ್ತಿಯಾಗುವ ಪರಮಾಪೂರ್ವಕ್ಕೆ ಕಾರಣಗಳಾಗಿರುವುವು. ॥೮೫॥

ಅಂಗಾಪೂರ್ವಗಳಿಂದ ಪ್ರಧಾನ ಕರ್ಮವು ಪೂರೈಸಿದ ಮೇಲೆ ಪರಮಾಪೂರ್ವವು ಹುಟ್ಟುವುದು. ಈ ಪರಮಾಪೂರ್ವವು ಫಲ ಹುಟ್ಟುವವರೆಗೂ ಇರುವುದು.

ಸರ್ವೇಭ್ಯ ಏವ ಕಾಮೇಭ್ಯಃ ಶಿವಪೂಜನಮಿತ್ಯಪಿ ।
ಪ್ರಯೋಗಭೇದಮಾಶ್ರಿತ್ಯ ತದಭಾವೇ ನ ತನ್ಮತಂ ॥೮೭॥

ನ ಹ್ಯೇಕೇನ ಪ್ರಯೋಗೇನ ಫಲಾನಿ ವಿವಿಧಾನ್ಯಪಿ ।
ಅತೋಽರ್ಥವಾದ ಏವಾಯಂ ನಾನಾವಿಧಫಲಶ್ರುತಿಃ ॥೮೮॥

ಆವೃತ್ತಿಶ್ಚೇತ್ಪ್ರಯೋಗಾಣಾಂ ಬಹೂನಿ ವಿವಿಧಾನ್ಯಪಿ ।
ಫಲಾನಿ ವಿವಿಧಾನ್ಯೇವ ಭವಿಷ್ಯಂತೀತಿ ನಿರ್ಣಯಃ ॥೮೯॥

ಫಲವು ಹುಟ್ಟಿದನಂತರ ನಾಶವಾಗುವುದು. ಫಲಾನಂತರ ಪರಮಾಪೂರ್ವದಿಂದ ಆಗಬೇಕಾದ್ದು ಏನೂ ಇಲ್ಲದಿರುವುದರಿಂದ ನಿವೃತ್ತವಾಗುವುದು. ಹೀಗೆಂದು ಶಾಸ್ತ್ರದಲ್ಲಿ ವಿವೇಚಿಸಲಾಗಿದೆ. ||೮೬||

ಶಿವಪೂಜೆಗೆ ಅನೇಕ ಕಾಮ್ಯಾಂಗಗಳು ವಿಹಿತವಾಗಿವೆ ಎಂದು ಹಿಂದೆಯೇ ಹೇಳಿದೆಯಷ್ಟೆ. ಆಯಾಯಾ ಕಾಮನೆಗಳಿಗಾಗಿ ಆಯಾಯಾ ಕಾಮ್ಯಾಂಗಗಳನ್ನು ಅನುಷ್ಠಾನ ಮಾಡಿದರೆ ಆಯಾಯಾ ಫಲಗಳು ಸಿದ್ಧಿಸುವುವು. ಆಯಾಯಾ ಕಾಮ್ಯಾಂಗಗಳಿಗೆ ಲೋಪವಾದರೆ ಅವುಗಳಿಗೆ ವಿಹಿತವಾದ ಫಲಗಳು ಲೋಪ ಹೊಂದುವುವು. ||೮೭||

ಒಂದೇ ಪ್ರಯೋಗಕ್ಕೆ ಅನೇಕ ಫಲಗಳು ದೊರೆಯಲಾರವು. ಹಾಗೆಯೇ ಕಾಮ್ಯಾಂಗಗಳ ಪೈಕಿ ಕೆಲವನ್ನು ಅನುಷ್ಠಾನ ಮಾಡಿದರೆ ಆಯಾಯಾ ಅಂಗಗಳಿಗೆ ಹೇಳಿರುವ ಫಲಗಳು ಮಾತ್ರವೇ ಸಿದ್ಧಿಸುವುವು. ಮತ್ತಿತರ ಕಾಮ್ಯಾಂಗಗಳ ಫಲಗಳು ಸಿದ್ಧಿಸುವುದಿಲ್ಲ. ಆದುದರಿಂದ ಒಂದು ಕರ್ಮಕ್ಕೆ ಸಕಲ ಇಷ್ಟಾರ್ಥಗಳೂ ಫಲವೆಂದು ಹೇಳುವ ಶ್ರುತಿಯು ಕೇವಲ ಅರ್ಥವಾದ. ಅಂದರೆ ಅದಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿರುವುದಿಲ್ಲ. ಆ ವಾಕ್ಯಕ್ಕೆ ಆ ಕರ್ಮವನ್ನು ಪ್ರಶಂಸೆ ಮಾಡುವುದರಲ್ಲಿ ತಾತ್ಪರ್ಯ., ||೮೮||

ಶಿವಪೂಜೆಯನ್ನು ಪುನಃ ಪುನಃ ಅನುಷ್ಠಾನ ಮಾಡಿದರೂ, ಶಿವಪೂಜಾಂಗ ಗಳನ್ನು ಎರಡು ಮೂರಾವರ್ತಿ ಅಥವಾ ಇನ್ನು ಹೆಚ್ಚುಸಲ ಅನುಷ್ಠಾನ ಮಾಡಿ ದರೂ ಅದಕ್ಕೆ ತಕ್ಕಂತೆ ವಿವಿಧವಾದ ಆನೇಕ ಫಲಗಳೂ ದೊರಕುವುವು. ||೮೯||

ಜಾಘನೀವ ಬಿಲ್ವಪತ್ರಮನ್ಯಚ್ಚಾರ್ಚನಸಾಧನಂ ।
ಭವತ್ಯತೋ ಲೌಕಿಕಂ ಚ ತದಂಗಮಿತಿ ನಿಶ್ಚಯಃ ॥೯೦॥

ತತ್ಸರ್ವಾಂಗೋಪಸಂಹಾರಂ ಸರ್ವಥಾ ಫಲಭಾವನಾ ।
ಸಾಪೇಕ್ಷತೇ ಗೃಹೀತ್ವೈವ ಸಂಪೂರ್ಣಾ ಫಲಮಿಚ್ಛತಿ ॥೯೧॥

ಶುಚಿತತ್ಕಾಲಜೀವಿತ್ವನಿದ್ರಾಲಸ್ಯಾದಿವರ್ಜನಂ ।
ಗೃಹ್ಣಾತಿ ಭಾವನಾ ತಾವತ್ತದಂಗಮಿತಿ ನಿಶ್ಚಯಾತ್ ॥೯೨॥

ವಿಶ್ವಾಸೋಽಪ್ಯಂಗಮೇವಾತ್ರ ಶಿವಪೂಜನಬೋಧಕೇ ।
ವಾಕ್ಯಂ ತದರ್ಥವಾದೇಽಪಿ ಪ್ರರೋಚಕಮಿತಿ ಶ್ರುತೇಃ ॥೯೩॥

ಈ ಶಿವಾರ್ಚನೆಗೆ ಬಿಲ್ವಪತ್ರೆಯು ಮುಖ್ಯವಾದ ವೈದಿಕಾಂಗವು. ಅದರಂತೆ ಜಾಘನೀಪತ್ರೆಯೂ ಲೌಕಿಕ (ಆಪ್ತವಚನ) ಸಿದ್ಧವಾಗಿರುವುದರಿಂದ ಅಂಗವಾಗುವುದು. ಆದರೂ ಈ ಅಂಗವಿಧಿಯು ಪ್ರಬಲವಾಗಿರುವುದರಿಂದ ಇದಕ್ಕೆ ಅಲೌಕಿಕಾಂಗತ್ವವೇ ಸಿದ್ಧಿಸುವುದು. ಇದರಂತೆ ಇನ್ನೂ ಅನೇಕ ಶಿವಾರ್ಚನಸಾಧನವಾದವುಗಳಿಗೆ ಅಂಗತ್ವವನ್ನು ಅರಿಯಬೇಕು. ॥೯೦॥

ಈ ಎಲ್ಲಾ ಯುಕ್ತಿಪರ್ಯಾಲೋಚನೆಯಿಂದ ಫಲೋಪಾಯರೂಪಭಾವನೆಯು ಸಮಸ್ತ ಅಂಗಗಳನ್ನೂ ತನ್ನ ಅನ್ವಯಕ್ಕೆ ಅಪೇಕ್ಷಿಸುವುದು. ಹಾಗೆ ಸಮಗ್ರ ಅಂಗಗಳಿಂದ ಅನ್ವಿತವಾದ ಭಾವನಾರೂಪ ಉಪಾಯವು ಪೂರ್ತಿಯಾದ ವಾಕ್ಯಾರ್ಥವಾಗುವುದು. ಮತ್ತು ಅದಕ್ಕೆ ಫಲವನ್ನೂ ವಿಧಿಸುವುದು. ॥೯೧॥

ಈ ಶಿವಪೂಜನಭಾವನೆಯು ತನಗೆ ಉಪಸ್ಕಾರಕವಾದ ಇನ್ನೂ ಕೆಲವನ್ನು ಅನ್ವಯಕ್ಕಾಗಿ ಅಪೇಕ್ಷಿಸುತ್ತದೆ. ಅವುಗಳಿವು–ಶೌಚ, ತತ್ಕಾಲಜೀವಿತ್ವ, ನಿದ್ರಾವರ್ಜನ, ಆಲಸ್ಯವರ್ಜನ ಇತ್ಯಾದಿ ಇವುಗಳೂ ಭಾವನೆಯೊಡನೆ ಅನ್ವಿತವಾಗಿ ಶಿವಪೂಜೆಗೆ ಅಂಗವೆಂದು ಹೇಳಿಸಿಕೊಳ್ಳುವುವು. ಶೌಚ ಮುಂತಾದವುಗಳನ್ನೂ ಶಿವಪೂಜೆಯಲ್ಲಿ ಅವಶ್ಯವಾಗಿ ಅನುಷ್ಠಾನಮಾಡಲ್ಪಡಬೇಕು. ॥೯೨॥

ಮೇಲೆ ಹೇಳಿರುವಂತೆ ಶಿವಪೂಜೆಗೆ ಅಗತ್ಯವಾದ ಪ್ರೀತಿ, ಆದರ ಇವುಗಳೂ ಭಾವನೆಯೊಡನೆ ಅನ್ವಯಹೊಂದಿ ಅಂಗಗಳೆನಿಸುವುವು. ಶ್ರುತಿಯಲ್ಲಿ ಅರ್ಥವಾದದಿಂದ ಉಂಟಾದ ಪ್ರಾಶಸ್ತ್ಯಜ್ಞಾನವೂ ಕರ್ಮಾಂಗವೆಂದು ಹೇಳಿರುವುದು ಇದಕ್ಕೆ ಆಧಾರ ॥೯೩॥

ಶಿವಾರ್ಚನೇಽಪಿ ವೇದಸ್ಯಾವೇದಸ್ಯ ನಿಯಮಾತ್ತಯೋಃ ।
ತದಂಗತ್ವಮಿತಿ ಜ್ಞಾತಂ ಭಾವನಾನುಗೃಹೀತಯೋಃ ॥೯೪॥

ಶಿವಪೂಜೋಪಕರಣಂ ಭಸ್ಮಸಂಸ್ಕೃತಮೇವ ತತ್ ।
ಗೃಹೀತಃ ಸೋಽಪಿ ಸಂಸ್ಕಾರಸ್ತಯಾ ಭಾವನಯಾ ಹಿ ತತ್ ॥೯೫॥

ಅಖಂಡಭಾವನಾ ಸೇಯಂ ಪ್ರಯೋಗಸ್ಯ ವಿಶೇಷತಃ ।
ಭಾವನಾಂತರಸಂಪನ್ನಾಸ್ತತ್ತದಂಗಾವಗಾಹನಾತ್ ॥೯೬॥

ಶಿವಾರ್ಚನೆಯಲ್ಲಿ ವೇದಗಳಿಂದಲೂ ಕೆಲವಕ್ಕೆ ಅಂಗತ್ವವು ಸಿದ್ಧವಾಗುವುದು. ಲೋಕದಿಂದಲೂ ಕೆಲವಕ್ಕೆ ಅಂಗತ್ವವು ಸಿದ್ಧಿಸುವುದು. ಇವುಗಳಿಗೆ ನಿತ್ಯತ್ವಾದಿ ವ್ಯವಸ್ಥೆಯನ್ನು ಮಾಡಲಾಗಿದೆ. ಆದ್ದರಿಂದ ಶಿವಪೂಜನಭಾವನೆಗೆ ಈ ಲೌಕಿಕಾ ಲೌಕಿಕವಾದ ಎಲ್ಲಾ ಅಂಗಗಳೂ ಉಪಸ್ಕಾರಕಗಳಾದ್ದರಿಂದ ಇವುಗಳಿಗೆ ಅಂಗತ್ವವು ನಿಶ್ಚಿತವಾಯಿತು. ॥೯೪॥

ಶಿವಪೂಜೆಗೆ ಉಪಯೋಗಿಸತಕ್ಕ ಪಾತ್ರೆ ಮುಂತಾದುವುಗಳನ್ನು ಭಸ್ಮದಿಂದ ಶುದ್ಧಿಗೊಳಿಸಿರಬೇಕು. ಈ ಭಸ್ಮದಿಂದ ಶುದ್ಧಿಮಾಡುವುದು ಆ ಉಪಕರಣಗಳಿಗೆ ಒಂದು ಸಂಸ್ಕಾರ. ಈ ಸಂಸ್ಕಾರವನ್ನು ಮಾಡಿದರೇ ಅವುಗಳು ಪೂಜೆಗೆ ಯೋಗ್ಯಗಳಾಗುವುವು. ಶಿವಪೂಜನಭಾವನೆಯು ಈ ಸಂಸ್ಕಾರದೊಡನೆಯೂ ಅನ್ವಿತವಾಗಿ, ಅರ್ಥಕೊಡುವುದರಿಂದ ಭಸ್ಮದಿಂದ ಮಾಡುವ ಸಂಸ್ಕಾರವೂ ಅಂಗವೆಂದು ನಿರ್ಣೀತವಾಗುವುದು. ॥೯೫॥

ಈ ಭಾವನೆಯಲ್ಲಿ ಎರಡು ವಿಧ. ಅವಾಂತರಭಾವನಾ, ಅಖಂಡಭಾವನಾ ಎಂದು. ಕರ್ಮಕ್ಕೆ ಅಂಗವಾದ ಪದಾರ್ಥಗಳನ್ನು ಪ್ರತ್ಯೇಕವಾಗಿ ಅನ್ವಯಹೊಂದಿ ವಾಕ್ಯಾರ್ಥವನ್ನು ಉಂಟುಮಾಡಿಕೊಡುವುದು ಅವಾಂತರಭಾವನಾ ಎಂದು ಹೇಳಲ್ಪಡುವುದು. ಈ ರೀತಿ ಪ್ರತ್ಯೇಕ ಅಂಗಗಳೊಡನೆ ಅನ್ವಿತವಾದ ಭಾವನೆಯು ಫಲೋಪಾಯರೂಪಭಾವನೆಯೊಡನೆ ಅನ್ವಯಹೊಂದಿದರೆ ಮಹಾವಾಕ್ಯಾರ್ಥ ಹುಟ್ಟುವುದು. ಈ ಉಪಾಯರೂಪಭಾವನೆಯೇ ಅಖಂಡಭಾವನೆ ಎಂದು ಹೇಳುವರು. ಈ ಅಖಂಡಭಾವನೆಗೇ ಫಲವಾಚಕಶಬ್ದದೊಡನೆ ಅನ್ವಯುಬರುವುದು. ಅದರಿಂದ ಈ ಮುಖ್ಯಭಾವನೆಯೇ ಕರ್ಮಕ್ಕೆ ಇದು ಫಲ ಎಂದು ತೋರಿಸಿಕೊಡುವುದು. ಮತ್ತು ಅವಾಂತರ ವಾಕ್ಯಾರ್ಥಗಳನ್ನು ಮಾತ್ರ ಹುಟ್ಟಿಸಿ ನಿವೃತ್ತವಾಗುವುವು. ಅನಂತರ ಸಮಗ್ರವಾದ

ತತ್ಪ್ರಯೋಗಬಹಿರ್ಭೂತಾನ್ಯಂಗಾನಿ ವಿಹಿತಾನ್ಯಪಿ ।
ಗೃಹ್ಣಾತಿ ಭಾವನಾ ಸೈವ ಬೃಹಸ್ಪತಿಸವಂ ಯಥಾ ॥೯೭॥

ತಥಾ ಚ ಶಿವಪೂಜಾಯಾಂ ಲಿಂಗಮಾಹವನೀಯವತ್ ।
ಜಲಾದಿವಚ್ಛಾಂಭವೋಽಪಿ ಪೂಜಾಧಿಕರಣಂ ಕ್ವಚಿತ್ ॥೯೮॥

ಲಿಂಗಾನ್ಯಪಿ ವಿಚಿತ್ರಾಣಿ ನಾರ್ಮದಾದೀನಿ ಕಾನಿಚಿತ್ ।
ತೇಷು ಪೂಜಾ ವಿಶೇಷೇಣ ತತ್ಫಲಾಯೋಪಕಲ್ಪತೇ ॥೯೯॥

ಅಂಗಗಳನ್ನೂ ಅನ್ವಯಪಡೆದಿರುವ ಅವಾಂತರಭಾವನೆಯೊಡನೆ ಅಖಂಡಭಾವನೆಯು ಅನ್ವಯಿಸಿ ವಾಕ್ಯಾರ್ಥವನ್ನು ಹುಟ್ಟಿಸುವುದು. ||೯೬||

ಹಿಂದೆ ಹೇಳಿರುವ ಅಂಗಗಳ ವಿನಿಯೋಗಗಳು ಪೂರ್ವಾಂಗಗಳು. ಕೆಲವು ಅಂಗಗಳು ಕರ್ಮಕ್ಕೆ ಉತ್ತರಾಂಗಗಳೂ ಇರುತ್ತವೆಂದು ಹಿಂದೆಯೇ ಹೇಳಿದೆ. ಆ ಉತ್ತರಾಂಗಗಳಿಗೆ ಪ್ರಯೋಗಬಹಿರ್ಭೂತವೆಂತಲೂ ಕರೆಯುತ್ತಾರೆ. ಬೃಹಸ್ಪತಿಸವ ಎಂಬುದು ಕರ್ಮಕ್ಕೆ ಉತ್ತರಾಂಗವೆಂದು ಶ್ರೌತದಲ್ಲಿ ಉಕ್ತವಾಗಿರುವುದು. ಆದರೂ ಆದನ್ನು ಪ್ರಧಾನ ಕರ್ಮದ ವಿಧಿಭಾವನೆಯು ಅನ್ವಯಹೊಂದಿ ಆದಕ್ಕೆ ಅಂಗತ್ವ ವನ್ನು ಸಾಧಿಸುವುದು. ಹಾಗೆಯೇ ಶಿವಪೂಜೆಯಲ್ಲಿಯೂ ಶಿವಪೂಜೆಯಾದ ಅನಂತರ ಅನುಷ್ಠಾನ ಮಾಡಬೇಕಾದ ಕರ್ಮಗಳನ್ನು ಶಿವಪೂಜಾಭಾವನೆಯೇ ಅನ್ವಯಮಾಡಿಕೊಂಡು ಆ ಉತ್ತರಾಂಗಗಳಿಗೂ ಅಂಗತ್ವವನ್ನು ಸಿದ್ಧಪಡಿಸುವುದು. ||೯೭||

ಅಗ್ನಿಹೋತ್ರಾದಿ ಶ್ರೌತಕರ್ಮಗಳಿಗೆ, ಯಾಗದ ಆಧಾರವು ಆಹವನೀಯಾಗ್ನಿ ಹೇಗೋ, ಹಾಗೆ ಶಿವಪೂಜೆಗೆ ಲಿಂಗವು ಆಧಾರ. ಒಟ್ಟಿನಲ್ಲಿ ಲಿಂಗದಲ್ಲಿ ಶಿವಪೂಜೆ ಮಾಡಬೇಕು ಎಂದರ್ಥ. ಶ್ರೌತದ ಕರ್ಮದಲ್ಲಿ ಕೆಲವು ಅನುಷ್ಠಾನಗಳಿಗೆ ಜಲವು ಆಧಾರ ಎಂದಿದೆ. ಆದರಂತೆ ಶಿವಪೂಜೆಯಲ್ಲಿಯೂ ಕೆಲವು ಅನುಷ್ಠಾನಗಳಿಗೆ ಶಿವಭಕ್ತರು ಅಧಿಕರಣರಾಗುವರು. ಆಧಾರ ಎಂದರೆ ಪೂಜೆಗೆ ಆಯತನ ಎಂದು ಹಿಂದೆಯೇ ಹೇಳಿದೆ. ||೯೮||

ಆ ಪೂಜೆಗೆ ಆಧಾರವಾದ ಶಿವಲಿಂಗಗಳು ನಾನಾವಿಧವಾಗಿವೆ. ಆದರೆ ಆ ಲಿಂಗಗಳಲ್ಲೆಲ್ಲಾ ನರ್ಮದಾನದಿಯಲ್ಲಿ ಹುಟ್ಟಿದ ಶಿವಲಿಂಗವು ಅತ್ಯಂತ ಶ್ರೇಷ್ಠ

ರೇವಾಜಲೇನ ರೇವಾಯಾಂ ರೇವಾತೀರಸಮುದ್ಭವೈಃ ।
ದೂರ್ವಾಂಕುರೈರ್ವಾ ಸಂಪೂಜ್ಯ ಮುಕ್ತೋ ಭವತಿ ಮಾನವಃ ॥೧೦೦॥

ರೇವಾತೀರಸಮುತ್ಪನ್ನಾಸ್ತರವೋಽಪಿ ವರಾನನೇ ।
ಲಿಂಗರೂಪಾಸ್ತತಸ್ತೇಷು ಪೂಜನಂ ಭುಕ್ತಿಮುಕ್ತಿದಂ ॥೧೦೧॥

ಲಿಂಗಾನಿ ಸಂತಿ ಯಾವಂತಿ ತ್ರೈಲೋಕ್ಯೇ ವರವರ್ಣಿನಿ ।
ತಾನಿ ಸರ್ವಾಣಿ ಲಿಂಗಾನಿ ಮಮ ಪ್ರಿಯಕರಾಣಿ ಹಿ ॥೧೦೨॥

ಮದ್ಭಕ್ತೋ ಯತ್ರ ಸದ್ಭಕ್ತ್ಯಾ ಮಮ ಧ್ಯಾನಂ ಕರಿಷ್ಯತಿ ।
ತದೇವ ಲಿಂಗಂ ಮದ್ರೂಪಮನ್ಯಲಿಂಗಂ ನ ಸರ್ವಥಾ ॥೧೦೩॥

ವಾದುದು. ಆ ಲಿಂಗದಲ್ಲಿ ಪೂಜೆಮಾಡಿದರೆ ವಿಶೇಷವಾದ ಫಲ ದೊರೆಯುವುದು. ||೯೯||

ನರ್ಮದಾನದಿಯಲ್ಲಿ ಸ್ನಾನಮಾಡಿ, ಅಲ್ಲಿಯೇ ದಡದಲ್ಲಿ ನರ್ಮದಾ ನದಿಯ ನೀರಿನಿಂದ ನರ್ಮದಾ ಲಿಂಗದಲ್ಲಿ ಅಭಿಷೇಕ ಮಾಡಿ, ಆ ನರ್ಮದಾತೀರದಲ್ಲಿ ಬೆಳೆದ ದೂರ್ವೆಗಳಿಂದ ಪೂಜೆಮಾಡಿದರೆ ಮಾನವನು ಸಂಸಾರದಿಂದ ಮುಕ್ತನೇ ಆಗುತ್ತಾನೆ. ||೧೦೦||

ನರ್ಮದಾನದಿಯ ದಡದಲ್ಲಿ ಹುಟ್ಟಿ ಬೆಳೆದ ಗಿಡಮರಗಳೂ ಲಿಂಗರೂಪವೇ ಆಗಿರುತ್ತವೆ. ಅಂದರೆ ಶಿವಲಿಂಗಕ್ಕಿರುವ ಮಾಹಾತ್ಮ್ಯವು ಅವುಗಳಿಗೂ ಇರುತ್ತದೆ. ಆ ಗಿಡಮರಗಳನ್ನೂ ಸಹ ಪೂಜಿಸಿದರೆ ಅನೇಕ ಪುಣ್ಯಫಲಗಳು ದೊರಕುವುವು. ||೧೦೧||

ಪಾರ್ವತಿಯೇ, ಮೂರು ಲೋಕದಲ್ಲಿ ಎಲ್ಲೆಲ್ಲಿ ಶಿವಲಿಂಗಗಳಿವೆಯೋ ಆ ಎಲ್ಲಾ ಲಿಂಗಗಳೂ ನನಗೆ ಅತ್ಯಂತ ಪ್ರೀತಿಕರವಾದವುಗಳೇ. ||೧೦೨||

ನನ್ನ ಭಕ್ತನು ಯಾವ ಶಿವಲಿಂಗವನ್ನು ಪೂಜಿಸುತ್ತಾ ಅತ್ಯಂತ ಭಕ್ತಿಯಿಂದ ನನ್ನನ್ನು ಧ್ಯಾನಿಸುವನೋ, ಅದೇ ಆಕಾರವೇ ನನ್ನ ಸ್ವರೂಪವಾಗುತ್ತದೆ. ಬೇರೆ ಆಕಾರದ ಲಿಂಗಗಳು ನನ್ನ ಸ್ವರೂಪಗಳಾಗಿ ಸರ್ವಥಾ ಇರುವುದಿಲ್ಲ. ಅವುಗಳು ಕೇವಲ ಶಿಲೆಯ ಖಂಡಗಳೇ ಸರಿ. ||೧೦೩||

ಮಂತ್ರೈರಧಿಷ್ಠಿತೈರ್ದ್ರವ್ಯೈಃ ಪೂಜಾ ತಾವದ್ವಿಧೀಯತೇ ।
ಅಧಿಷ್ಠಾನಂ ದೇವತಾಯಾಃ ಪವಿತ್ರಂ ಮಂತ್ರಸಾಧಿತಂ ॥೧೦೪॥

ತಥಾ ಚ ಸಿದ್ಧಲಿಂಗಾನಿ ನಾರ್ಮದಾದೀನಿ ಕೇವಲಂ ।
ತತ್ರ ಪ್ರತಿಷ್ಠಾವಿಧಯಃ ಪ್ರಸರಂತಿ ನ ಸರ್ವಥಾ ॥೧೦೫॥

ಸಿದ್ಧಕ್ಷೇತ್ರಾಣಿ ಯಾವಂತಿ ತತ್ರ ಲಿಂಗಾನಿ ಯಾನಿ ಚ ।
ತೇಷು ಪ್ರತಿಷ್ಠಾವಿಧಯಃ ಪ್ರಸರಂತಿ ನ ಸರ್ವಥಾ ॥೧೦೬॥

ಶಿವಪೂಜೆಯು ಶ್ರುತಿಯಲ್ಲಿ ವಿಹಿತವಾಗಿರುವುದು. ಅದಕ್ಕೆ ಅಂಗವಾದ ದ್ರವ್ಯಗಳೂ ಶ್ರುತಿಯಿಂದಲೇ ವಿಹಿತವಾಗಿವೆ. ಹಾಗೆಯೇ ಶ್ರುತಿಯಿಂದ ವಿಹಿತವಾದ ಆಯತನವೇ ಶಿವಪೂಜೆಗೆ ಆಧಾರವಾಗುವುದು. ಹಾಗೆ ಶ್ರುತಿವಿಹಿತವಾದ ಆಧಾರ ದಲ್ಲಿಯೇ ದೇವತೆ(ಶಿವ)ಯ ಸಾನ್ನಿಧ್ಯವಿರುವುದು. ಬೇರೆ ಕಡೆ ಇರುವುದಿಲ್ಲ. ॥೧೦೪॥

ಲಿಂಗಗಳಲ್ಲಿ ಎರಡು ವಿಧ. ಕೆಲವು ಸಿದ್ಧಲಿಂಗಗಳು. ಅವು ಸ್ವತಃ ದೇವತಾ ಸಾನ್ನಿಧ್ಯವನ್ನು ಪಡೆದುಕೊಂಡಿರುವುವು. ಇವುಗಳನ್ನು ಮಂತ್ರಾದಿವಿಧಿಯಿಂದ ಪ್ರತಿಷ್ಠೆಮಾಡಿ ದೇವತಾಸಾನ್ನಿಧ್ಯವನ್ನು ಸಂಪಾದಿಸಬೇಕಾಗಿಲ್ಲ. ಕೆಲವು ಅಸಿದ್ಧ ಲಿಂಗಗಳಿರುತ್ತವೆ. ಅವುಗಳಲ್ಲಿ ಸ್ವತಃ ದೇವತಾಸಾನ್ನಿಧ್ಯವಿಲ್ಲದಿರುವುದರಿಂದ ಆಗಮರೀತ್ಯಾ ಪ್ರತಿಷ್ಠೆಮಾಡಿ ದೇವತಾಸಾನ್ನಿಧ್ಯವನ್ನು ಆಕರ್ಷಣೆ ಮಾಡಬೇಕು. ಏವಂ ಚ ಈ ನರ್ಮದಾದಿಲಿಂಗಗಳು ಸಿದ್ಧಲಿಂಗಗಳಾಗಿರುವುದರಿಂದ ಇವುಗಳ ವಿಷಯದಲ್ಲಿ ಆಗಮಿಕವಾದ ಪ್ರತಿಷ್ಠಾವಿಧಿಗಳು ಪ್ರವರ್ತಿಸುವುದಿಲ್ಲ. ॥೧೦೫॥

ಕ್ಷೇತ್ರಗಳೂ ಎರಡು ಬಗೆಗಳಾಗಿರುತ್ತವೆ. ಸಿದ್ಧಕ್ಷೇತ್ರಗಳಲ್ಲಿ ದೇವತಾಸಾನ್ನಿಧ್ಯವು ಸ್ವತಃ ಸಿದ್ಧವಾಗಿರುತ್ತದೆ. ಅಲ್ಲಿರುವ ಲಿಂಗಗಳಲ್ಲಿಯೂ ಪ್ರತಿಷ್ಠಾವಿಧಿಯು ಪ್ರವರ್ತಿಸುವುದಿಲ್ಲ. ಅಸಿದ್ಧಕ್ಷೇತ್ರದಲ್ಲಿ ದೇವತಾಸಾನ್ನಿಧ್ಯವು ಇಲ್ಲದಿರುವುದರಿಂದ ಅಲ್ಲಿ ಸ್ಥಾಪಿಸಬೇಕಾದ ಲಿಂಗಗಳನ್ನು ಆಗಮರೀತ್ಯಾ ಪ್ರತಿಷ್ಠೆಮಾಡಿ, ಅವುಗಳಿಗೆ ದೇವತಾಸಾನ್ನಿಧ್ಯವನ್ನು ಮಂತ್ರಪೂರ್ವಕವಾಗಿ ತುಂಬಬೇಕು. ಸಿದ್ಧಕ್ಷೇತ್ರಗಳಲ್ಲಿ ರುವ ಲಿಂಗಗಳಲ್ಲಿ ದೇವತ್ವವು ಸ್ವತಃ ಸಿದ್ಧವಾಗಿರುತ್ತದೆ. ॥೧೦೬॥

ಸಿದ್ಧಕ್ಷೇತ್ರೋತ್ತಮಾ ಕಾಶೀ ತತ್ರ ಲಿಂಗಾನಿ ಯಾನಿ ತು ।
ತಾನಿ ಲಿಂಗಾನಿ ಸರ್ವಾಣಿ ಸಿದ್ಧಾನೀತ್ಯವಗಮ್ಯತಾಂ ॥೧೦೭॥

ರೇವಾಯಾಂ ಯಾನಿ ಲಿಂಗಾನಿ ತಾನಿ ಲಿಂಗಾನಿ ಶೈಲಜೇ ।
ಸಿದ್ಧಲಿಂಗಾನಿ ಸರ್ವಾಣಿ ತಾನಿ ಪೂಜ್ಯಾನಿ ಸರ್ವದಾ ॥೧೦೮॥

ತ್ರ್ಯಂಬಕಾಖ್ಯಂ ಚ ಯಲ್ಲಿಂಗಂ ಗೋದಾಮೂಲೇ ಮನೋಹರಂ ।
ತತ್ಸಿದ್ಧಲಿಂಗಂ ತತ್ಪೂಜಾ ಭುಕ್ತಿಮುಕ್ತಿಪ್ರದಾಯಿನೀ ॥೧೦೯॥

ಅಹೋಬಲಾಭಿಧಂ ಲಿಂಗಂ ಸಿದ್ಧಲಿಂಗಮಿತಿ ಶ್ರುತಂ ।
ಕೋಟಿಶಂಕರಲಿಂಗಂ ಚ ಸಿದ್ಧಲಿಂಗಮಿತಿ ಶ್ರುತಂ ॥೧೧೦॥

ಸಿದ್ಧಕ್ಷೇತ್ರಗಳಲ್ಲೆಲ್ಲಾ ಶ್ರೇಷ್ಠವಾದುದು ಶ್ರೀಕಾಶೀಕ್ಷೇತ್ರವು. ಅಲ್ಲಿ ದೇವತಾ ಸಾನ್ನಿಧ್ಯವು ಸ್ವತಃ ಸಿದ್ಧವಾಗಿರುತ್ತದೆ. ಅಲ್ಲಿರುವ ಲಿಂಗಗಳಲ್ಲಿಯೂ ದೇವತ್ವವು ಸ್ವತಃ ಸಿದ್ಧವಾಗಿರುವುದರಿಂದ ಆ ಲಿಂಗಗಳು ಎಲ್ಲಾ ಸಿದ್ಧಲಿಂಗಗಳೇ ಆಗಿರುತ್ತವೆ. ||೧೦೭||

ನರ್ಮದಾನದಿಯಲ್ಲಿ ಶಿವಸಾನ್ನಿಧ್ಯವು ಸ್ವತಃ ಇರುವುದರಿಂದ ಅಲ್ಲಿರುವ ಲಿಂಗಗಳಲ್ಲಿ ದೈವತ್ವವು ಅಕೃತ್ರಿಮವಾಗಿಯೇ ಸಿದ್ಧಿಸಿರುತ್ತದೆ. ಆದುದರಿಂದ ಪ್ರಯತ್ನಪೂರ್ವಕವಾಗಿಯಾದರೂ ನರ್ಮದಾಲಿಂಗದಲ್ಲಿಯೇ ಸರ್ವದಾ ಶಿವಪೂಜೆ ಮಾಡಬೇಕು. ||೧೦೮||

ಗೋದಾವರೀ ನದಿಯ ತೀರದಲ್ಲಿ ತ್ರ್ಯಂಬಕವೆಂಬ ಶಿವಲಿಂಗವಿದೆ. ಅದು ಅತ್ಯಂತ ಮನೋಹರವಾಗಿರುವುದಲ್ಲದೇ ಸಿದ್ಧಲಿಂಗವೂ ಆಗಿರುತ್ತದೆ. ಆ ಲಿಂಗವನ್ನು ಪೂಜೆಮಾಡುವುದರಿಂದ ಐಹಿಕಾಮುಷ್ಮಿಕವಾದ ಶ್ರೇಷ್ಠಫಲಗಳು ಅನಾಯಾಸವಾಗಿ ದೊರೆಯುವುವು. ||೧೦೯||

ಅಹೋಬಲೇಶ್ವರ ಎಂಬ ಶಿವಲಿಂಗವೂ ಮತ್ತು ಕೋಟಿಶಂಕರಲಿಂಗವೆಂಬ ಶಿವಲಿಂಗವೂ ಸಿದ್ಧಲಿಂಗವೆಂದು ಶ್ರುತಿಯಲ್ಲಿ ಪ್ರತಿಪಾದಿತವಾಗಿದೆ. ||೧೧೦||

ತೀರ್ಥೇಶಲಿಂಗಮಪ್ಯೇವಂ ಸಿದ್ಧಲಿಂಗಮಿತಿ ಶ್ರುತಂ ।
ಸಂಗಮೇಶ್ವರಲಿಂಗಂ ಚ ಸಿದ್ಧಲಿಂಗಮಿತಿ ಶ್ರುತಂ ॥೧೧೧॥

ಶ್ರೀಶೈಲೇ ಯಾನಿ ಲಿಂಗಾನಿ ತಾನಿ ಲಿಂಗಾನಿ ಶೈಲಜೇ ।
ಸಿದ್ಧಲಿಂಗಾನಿ ಸರ್ವಾಣಿ ತತ್ಪೂಜಾ ಸರ್ವಸಿದ್ಧಿದಾ ॥೧೧೨॥

ಅಶೀತಿಯೋಜನಾಯಾಮಃ ಶ್ರೀಶೈಲಃ ಕಮಲಾನನೇ ।
ಸ ತು ಲಿಂಗಮಯಸ್ಸರ್ವಂ ಸರ್ವತೀರ್ಥಮಯೋ ಹಿ ಸಃ ॥೧೧೩॥

ಶಿಲಾದೇನ ತಪಸ್ತಪ್ತಂ ಶಿವಗಂಗಾತಟೇ ಶಿವೇ ।
ತದುಗ್ರತಪಸಾ ಸರ್ವಂ ಸಕಂಪಮವನೀತಲಂ ॥೧೧೪॥

ದೇವಾಸ್ಸರ್ವೇ ಸಕಂಪಾಶ್ಚ ಮುನಯಶ್ಚಾರಣಾ ಅಪಿ ।
ತಾದೃಶೇನೋಗ್ರತಪಸಾ ಹೃಷ್ಟೋಽಸ್ಮಿ ಕಮಲಾನನೇ ॥೧೧೫॥

ಶ್ರುತಿಯಲ್ಲಿ ತೀರ್ಥೇಶವೆಂಬ ಲಿಂಗವೂ ಸಂಗಮೇಶ್ವರ ಎಂಬ ಲಿಂಗವೂ ಮತ್ತು ಶ್ರೀಶೈಲಕ್ಷೇತ್ರದಲ್ಲಿರುವ ಸಮಸ್ತ ಲಿಂಗಗಳೂ ಸಿದ್ಧವಾದ ಲಿಂಗಗಳೆಂದು ಹೇಳಲ್ಪಟ್ಟಿವೆ. ಅವುಗಳ ಪೂಜೆಯಿಂದ ಸಮಸ್ತ ಇಷ್ಟಸಿದ್ಧಿಗಳೂ ನೆರವೇರುವುವು. ||೧೧೧-೧೧೨||

ಶ್ರೀಶೈಲಕ್ಷೇತ್ರವು ಎಂಬತ್ತು ಯೋಜನ ವಿಸ್ತಾರವಾಗಿರುತ್ತದೆ. ಆ ಎಂಬತ್ತು ಯೋಜನವು ಎಲ್ಲವೂ ಶಿವಲಿಂಗಸ್ವರೂಪವೇ ಆಗಿದೆ. ಆ ಕ್ಷೇತ್ರವು ಸಮಸ್ತ ಕ್ಷೇತ್ರ ಸ್ವರೂಪವೂ ಆಗಿರುತ್ತದೆ. ಆದುದರಿಂದ ಆ ಕ್ಷೇತ್ರವೆಲ್ಲಾ ಶಿವಸಾನ್ನಿಧ್ಯದಿಂದ ಸದಾ ಪರಿಪೂರ್ಣವಾಗಿದೆ. ||೧೧೩||

ಶಿವಗಂಗಾಕ್ಷೇತ್ರದಲ್ಲಿ ಶಿಲಾದನೆಂಬುವನು ಪೂರ್ವಕಾಲದಲ್ಲಿ ನನ್ನನ್ನು (ಶಿವನನ್ನು) ಕುರಿತು ಅತ್ಯುಗ್ರವಾದ ತಪಸ್ಸನ್ನಾಚರಿಸಿದನು. ಆತನ ತಪೋಜ್ವಾಲೆಯಿಂದ ಭೂಮಿಯೆಲ್ಲಾ ನಡುಗುತ್ತಿದ್ದಿತು. ||೧೧೪||

ಪಾರ್ವತಿಯೇ, ಆ ಶಿಲಾದನ ಅತ್ಯುಗ್ರ ತಪಸ್ಸಿನಿಂದ ದೇವತೆಗಳೆಲ್ಲರೂ ಭೀತರಾದರು. ಚಾರಣರು, ಕಿಂಪುರುಷರು ದಿಕ್ಕುಗೆಟ್ಟರು. ಮುನಿಗಳೆಲ್ಲರೂ ದಿಗ್ಭ್ರಾಂತರಾದರು. ಇಂಥ ಉಗ್ರವಾದ ಮತ್ತು ನಿಶ್ಚಲವಾದ ಆ ಶಿಲಾದನ ತಪಸ್ಸಿಗೆ ನಾನು ಮೆಚ್ಚಿದೆನು. ||೧೧೫||

ತತಃ ಪ್ರತ್ಯಕ್ಷತಾಂ ಪ್ರಾಪ್ತಃ ಪ್ರೀತಸ್ತತ್ತಪಸಾ ಶಿವೇ ।
ಮಯಿ ಪ್ರಸನ್ನೇ ದೇವೇಶೇ ಯಯಾಚೇ ಸ ವರಂ ವರಂ ॥೧೧೬॥

॥ ಶಿಲಾದ ಉವಾಚ ॥

ನಮೋ ನಮಸ್ತೇ ಗಿರಿಜಾಸಹಾಯ
ನಮೋ ನಮಸ್ತೇ ಸುಕೃತಸ್ವರೂಪ ।
ನಮೋ ನಮಸ್ತೇಽನ್ನಪತೇ ಮಹೇಶ
ನಮೋ ನಮಸ್ತೇಽಸ್ತು ನಮೋ ನಮಸ್ತೇ ॥೧೧೭॥

ತ್ವತ್ಪಾದಾಂಬುಜಭಕ್ತಿರ್ಮೇ ನಿಶ್ಚಲಾ ಭವತು ಪ್ರಭೋ ।
ತ್ವಮೇವ ಶರಣಂ ಶಂಭೋ ಗತಿಸ್ತ್ವಂ ಜಗತಾಂ ಪ್ರಭೋ ॥೧೧೮॥

ಕರ್ಮಾಣ್ಯಸ್ಯ ಫಲೋನ್ಮುಖಾನಿ ಭಗವಂಸ್ತ್ವತ್ಪಾದಪದ್ಮಂ ಯತೋ
ದೃಷ್ಟಂ ದೋಷವಿವರ್ಜಿತಂ ಸುಖಯುತಂ ತಾವತ್ಕರೋತಿ ಸ್ವತಃ ।

ಆತನ ಭಕ್ತಿಗೂ ತಪಸ್ಸಿಗೂ ಸುಪ್ರೀತನಾಗಿ ನಾನು ಆತನಿಗೆ ಪ್ರತ್ಯಕ್ಷನಾದೆನು. ಆತನಲ್ಲಿ ನಾನು ಹೃಷ್ಟನಾಗಿ ಬೇಕಾದ ವರವನ್ನು ಕೇಳಿಕೊ ಎಂದು ಹೇಳಿದಾಗ ಆ ಶಿಲಾದನು ಅತ್ಯುತ್ತಮವಾದ ವರವನ್ನು ಈರೀತಿ ಬೇಡಿಕೊಂಡನು. ॥೧೧೬॥

ಆ ಶಿಲಾದನು ಪ್ರತ್ಯಕ್ಷನಾದ ನನ್ನನ್ನು ನೋಡಿ ಅತ್ಯಂತ ಆನಂದದಿಂದಲೂ ಭಕ್ತಿಯಿಂದಲೂ ಈರೀತಿ ಸ್ತೋತ್ರಮಾಡಿದನು. “ಹೇ ಗಿರಿಜಾಪತಿಯೇ, ನಿನಗೆ ನಾನು ನಮಸ್ಕರಿಸುವೆನು. ನೀನು ಸಕಲ ಪುಣ್ಯಸ್ವರೂಪನಾಗಿರುವೆ. ಜಗತ್ತಿನಲ್ಲಿರುವ ಆಹಾರವಸ್ತುಗಳಿಗೆಲ್ಲಾ ನೀನೇ ಅಧಿಪತಿ. ಸಮಸ್ತ ದೇವತೆಗಳಿಗೂ ನೀನೇ ದೇವರಾಗಿರುವೆ. ಅಂಥಾ ನಿನ್ನನ್ನು ನಮಸ್ಕರಿಸುತ್ತೇನೆ. ॥೧೧೭॥

ಪ್ರಭೋ, ನನಗೆ ನಿನ್ನ ಚರಣಕಮಲಗಳಲ್ಲಿ ಶಾಶ್ವತವಾದ ಭಕ್ತಿ ನಿಲ್ಲುವಂತೆ ಅನುಗ್ರಹಿಸು. ನನಗೆ ನೀನೇ ಶರಣು. ನೀನೇ ಸಮಸ್ತ ಜಗತ್ತಿಗೂ ಅಧಿಪತಿ. ॥೧೧೮॥

ಸ್ವಾಮಿಯೇ ಪರಮೇಶ್ವರನೇ, ಈ ನಿನ್ನ ಚರಣಕಮಲಗಳ ದರ್ಶನವು ಇಂದು ನನಗೆ ಒದಗಿ ನಾನು ಪವಿತ್ರನಾದೆನು. ನನ್ನ ಪುಣ್ಯಕರ್ಮಗಳೆಲ್ಲಾ ಇಂದು ಫಲಿಸಿರುವುದಕ್ಕೆ ನಿನ್ನ ಸಾಕ್ಷಾತ್ಕಾರವೇ ನಿದರ್ಶನ. ನಿನ್ನ ಪಾದಪದ್ಮವು ಸಕಲ

ತತ್ತ್ವಾವನ್ಮುನಿವೃಂದಮಾನಸಮನಃಪದ್ಮಪ್ರವಿಷ್ಟಂ ಪ್ರಭೋ
ತನ್ಮೇ ಮಾನಸಪಂಕಜೇ ಕ್ಷಣಮಿತಿ ಸ್ವಾಮಿನ್ ಮುದೇ ಜಾಯತಾಂ॥೧೧೯॥

ವಾಜಶ್ಚ ಮೇಽಸ್ತು ಪ್ರಸವಶ್ಚ ಮೇಽಸ್ತು
ತ್ವತ್ಪೂಜಯಾ ಸಾ ಪ್ರಯತಿಶ್ಚ ಮೇಽಸ್ತು ।
ಮಹೇಶ್ವರಾಶು ಪ್ರಸಿತಿಶ್ಚ ಮೇಽಸ್ತು
ಧೀತಿಶ್ಚ ಮೇಽಸ್ತು ಕ್ರತುರಸ್ತು ಶಂಭೋ ॥೧೨೦॥

ಸ್ವರಶ್ಚ ಮೇಽಸ್ತು ವರದೇಶ ಶಂಭೋ
ಶ್ಲೋಕಶ್ಚ ಮೇಽಸ್ತು ಶ್ರುತಿಗೀತಕೀರ್ತೇ ।
ಶ್ರಾವಶ್ಚ ಮೇಽಸ್ತು ಶ್ರುತಿರಸ್ತು ಶಂಭೋ
ಶಿವಾಭಿಧಾನಶ್ರವಣಾಯ ನಿತ್ಯಂ ॥೧೨೧॥

ದೋಷವಿವರ್ಜಿತವಾಗಿದೆ. ಸಕಲ ಸುಖಗಳಿಗೂ ಕಾರಣವಾಗಿರುತ್ತದೆ. ಇಂಥ ನಿನ್ನ ಚರಣಕಮಲವನ್ನು ಮುನಿಗಳೆಲ್ಲರೂ ಅತ್ಯಂತ ಪ್ರಯತ್ನದಿಂದ ಸದಾ ಮನಸ್ಸಿನಲ್ಲಿ ಧ್ಯಾನಿಸುತ್ತಾ ಧಾರಣೆಮಾಡಿರುತ್ತಾರೆ. ಅದೇ ಪಾದಪಂಕಜವು ನನ್ನ ಮನಸ್ಸರೋಜದಲ್ಲಿಯೂ ನಿಶ್ಚಲವಾಗಿ ಇದ್ದುಕೊಂಡು ಒಂದು ಕ್ಷಣಕಾಲವಾದರೂ ನನ್ನ ಮನಸ್ಸಿಗೆ ಪರಮಸುಖಪ್ರಕಾಶವನ್ನು ಕೊಡಲಿ. ॥೧೧೯॥

ಹೇ ಮಹೇಶ್ವರ, ಸತ್ವಗುಣಮಾತ್ರಕ್ಕೆ ಕಾರಣವಾದ ಆಹಾರವನ್ನು ನನಗೆ ಅನುಗ್ರಹಿಸು. ನನಗೆ ಆ ಅನ್ನವನ್ನು ಊಟಮಾಡು ಎಂಬ ಅನುಜ್ಞೆಯನ್ನು ಕೊಡು. ನಿನ್ನ ಆರಾಧನೆಯಿಂದ ನನಗೆ ಪರಮ ಶುದ್ಧಿಯು ದೊರಕುವಂತೆ ಕರುಣಿಸು. ನನಗೆ ಅನ್ನವಿಷಯಕವಾದ ಉತ್ಸುಕತೆಯು ಜಾಗ್ರತೆಯಾಗಿ ಏರ್ಪಡಲಿ. ನನಗೆ ಅನ್ನಧಾರಣಾಯೋಗ್ಯತೆಯುಂಟಾಗಲಿ. ನಾನು ಅನ್ನಕಾರಣವಾದ ಯಾಗಾದಿ ಸತ್ಕರ್ಮಗಳನ್ನು ಅನುಷ್ಠಿಸುತ್ತಿರುವಂತೆ ಅನುಗ್ರಹಮಾಡಬೇಕು.॥೧೨೦॥

ಸಕಲ ವರಗಳನ್ನು ಅನುಗ್ರಹಮಾಡುವುದರಲ್ಲಿ ಸಮರ್ಥನಾದ ಶಂಭುವೇ! ನನಗೆ ಮಂತ್ರಸಂಬಂಧವಾದ ಉದಾತ್ತಾನುದಾತ್ತಸ್ವರಿತರೂಪವಾದ ಸ್ವರಜ್ಞಾನ ವುಂಟಾಗಲಿ. ನಿನ್ನನ್ನು ಸ್ತೋತ್ರಮಾಡುವ ಶಕ್ತಿಯೂ ಮೊದಲು ನನಗೆ ಉಂಟಾ ಗಲಿ. ವೇದಪ್ರಖ್ಯಾತವಾದ ಕೀರ್ತಿಯುಳ್ಳ ಸ್ವಾಮಿಯೇ, ನಿನ್ನ ನಾಮಗಳನ್ನು

ಜ್ಯೋತಿಶ್ಚ ಮೇಽಸ್ತು ಜ್ವಲನಸ್ವರೂಪ
ಸುವಶ್ಚ ಮೇಽಸ್ತು ತ್ರಿಪುರಾಸುರಾರೇ
ಪ್ರಾಣಶ್ಚ ಮೇ ತಾವದಪಾನಯುಕ್ತೋ
ವ್ಯಾನಶ್ಚ ಮೇಽಸುಶ್ಚ ತಥೈವ ಚಿತ್ತಂ ॥೧೨೨॥

ಅಧೀತಂ ಚ ತಥಾ ವಾಕ್ಚ ಮನಶ್ಚಕ್ಷುಶ್ಚ ಮೇ ಪ್ರಭೋ ।
ಶ್ರೋತ್ರಂ ದಕ್ಷೋ ಬಲಂ ಚೋಜಃ ಸಹಶ್ಚಾಯುಶ್ಚ ಮೇ ಪ್ರಭೋ ೧೨೩॥

ಜರಾ ಚಾತ್ಮಾ ಚ ಮೇ ಶಂಭೋ ತನೂಶ್ಶರ್ಮ ಚ ವರ್ಮ ಚ ।
ಅಂಗಾನ್ಯಸ್ಥೀನಿ ಭಗವನ್ ಪರೂಂಷಿ ಚ ಭವಂತು ಮೇ ॥೧೨೪॥

ಮತ್ತೊಬ್ಬರಿಗೆ ತಿಳಿಸುವ ಸಾಮರ್ಥ್ಯವೂ ನಿತ್ಯವೂ ಸ್ವತಃ ಆದರದಿಂದ ಅದನ್ನು ಕೇಳುವ ಆಸೆಯೂ ಉಂಟಾಗುವಂತೆ ಕರುಣಿಸು. ॥೧೨೧॥

ಎಲೈ ತೇಜೋರೂಪಿಯೇ, ನನಗೆ ಯಾವಾಗಲೂ ಬೆಳಕು ದೊರೆಯಲಿ. ಓ ತ್ರಿಪುರಾಸುರಧ್ವಂಸಕನೇ, ನನಗೆ ಸ್ವರ್ಗವು ದೊರೆಯಲಿ. ದೇವ, ಅಪಾನಸಮೇತವಾದ ಪ್ರಾಣವಾಯುವೂ, ವ್ಯಾನವಾಯುವೂ ಇವುಗಳಲ್ಲಿ ಅಡಕವಾಗಿರುವ ಅಸುರೂಪವಾದ ವಾಯುವೂ ಮತ್ತು ಮನಸ್ಸಿನಿಂದುಂಟಾಗುವ ಜ್ಞಾನವೂ ಸಿದ್ಧಿಸಲಿ. ॥೧೨೨॥

ಪ್ರಭೋ, ನನಗೆ ಆ ಮನೋಜನ್ಯಜ್ಞಾನಕ್ಕೆ ವಿಷಯಗಳಾದ ದ್ರವ್ಯಗಳೂ (ಅಧೀತಂ) ವಾಙ್ಮನಶ್ಚಕ್ಷುಶ್ರೋತ್ರವೆಂಬ ಈ ನಾಲ್ಕು ಇಂದ್ರಿಯಪಾಟವವೂ ಉಂಟಾಗಲಿ. ಸ್ವಾಮಿಯೇ, ಜ್ಞಾನೇಂದ್ರಿಯಗತವಾದ ನೈಪುಣ್ಯವೂ (ದಕ್ಷ) ಕರ್ಮೇಂದ್ರಿಯಗಳ ಸಾಮರ್ಥ್ಯವೂ (ಬಲಂ) ಬಲಕ್ಕೆ ಕಾರಣೀಭೂತವಾದ ಎಂಟನೆಯ ಧಾತುವೂ (ಓಜಃ) ಶತ್ರುವಿಷಯಕವಾದ ತಿರಸ್ಕಾರಭಾವನೆಯೂ (ಸಹಃ) ಮತ್ತು ಆಯುಸ್ಸೂ ಸಹ ನನಗೆ ಉಂಟಾಗಲಿ. ॥೧೨೩॥

ಶಂಭುವೇ ! ನನಗೆ ವಾರ್ಧಕ್ಯವೂ, ಪರಮಾತ್ಮಜ್ಞಾನವೂ ಅಲಂಕಾರಸಾಧನೀಭೂತವಾದ ಸುಂದರವಾದ ದೇಹವೂ, ಸಕಲ ಸುಖಗಳೂ, ಮತ್ತು ಶರೀರರಕ್ಷಣೆಗೆ ಬೇಕಾದ ಕವಚಗಳೂ ಉಂಟಾಗಲಿ. ಎಲೈ ಭಗವಂತನೇ ! ಅವಯವಸೌಷ್ಠವವೂ ಅದರದರ ಸ್ಥಾನದಲ್ಲಿ ಸರಿಯಾಗಿರುವ ಮೂಳೆಗಳೂ, ಅಲ್ಲದೇ ಪರ್ವಗಳೂ (ಗಿಣ್ಣುಗಳೂ) ನನಗೆ ಲಭಿಸಲಿ. ॥೧೨೪॥

ಶರೀರಾಣಿ ಭವಂತ್ವೀಶ ತಾನಿ ರಮ್ಯಾಣಿ ಮೇ ಪ್ರಭೋ ।
ಜ್ಯೈಷ್ಠ್ಯಂ ಚ ಮೇಽಧಿಪತ್ಯಂ ಚ ಮನ್ಯುರ್ಭಾಮಶ್ಚ ಮೇ ಪ್ರಭೋ ॥೧೨೫॥

ಅಮಶ್ಚಾಂಭಶ್ಚ ಜೇಮಾ ಚ ಮಹಿಮಾ ವರಿಮಾ ಚ ಮೇ ।
ಪ್ರಥಿಮಾ ಚಾಸ್ತು ಗೌರೀಶ ವರ್ಷ್ಮಾ ಚ ದ್ರಾಘುಯಾ ಚ ಮೇ ॥೧೨೬॥

ವೃದ್ಧಂ ವೃದ್ಧಿಶ್ಚ ಸತ್ಯಂ ಚ ಶ್ರದ್ಧಾ ಚಾಸ್ತು ಜಗಚ್ಚ ಮೇ ।
ಧನಂ ವಶಾಸ್ತ್ವಹಿಶ್ಚಾಸ್ತು ಕ್ರೀಡಾ ಮೋದಶ್ಚ ಮೇ ಪ್ರಭೋ ॥೧೨೭॥

ಪ್ರಭೋ ! ನನಗೆ ಸುಂದರವಾದ ಶರೀರಾವಯವಗಳುಂಟಾಗಲಿ. ಈಶ್ವರನೇ ಶ್ರೇಷ್ಠತ್ವವೂ, ಯಜಮಾನಧರ್ಮವೂ ನನಗೆ ಉಂಟಾಗಲಿ. ಸ್ವಾಮಿಯೇ ! ಮಾನಸಿಕವಾದ ಕೋಪವೂ (ಮನ್ಯು) ಮತ್ತು ಬಾಹ್ಯಕಾರಣಗಳಿಂದ ಕೋಪವೂ (ಭಾಮಃ) ನಮಗೆ ಪ್ರಾಪ್ತವಾಗಲಿ. ||೧೨೫||

ಮಹಾದೇವನೇ, ಶತ್ರುಗಳಿಂದ ಇವನ ಸ್ವರೂಪವಿಷ್ಟೇ ಎಂದು ನಿರ್ಣಯಿಸಲು ಸಾಧ್ಯವಾಗದಂತಿರುವ ಶಕ್ತಿಯೂ (ಅಮಃ) ಶೈತ್ಯ ಮತ್ತು ಮಾಧುರ್ಯ ಗುಣಗಳಿಂದ ಯುಕ್ತವಾದ ನೀರೂ, ಜಯಸಾಮರ್ಥ್ಯವೂ, ಜಯದಿಂದುಂಟಾಗುವ ದ್ರವ್ಯಾದಿಸಂಪತ್ತುಗಳೂ ಮತ್ತು ಸರ್ವರಿಂದಲೂ ಪೂಜ್ಯತೆಯೂ ಸಹ ನನಗೆ ಲಭಿಸಲಿ. ಎಲೈ ಗೌರೀರಮಣನೇ, ಮನೆ, ಹೊಲ, ಗದ್ದೆಗಳ ವಿಸ್ತಾರವೂ (ಅಂದರೆ ವಿಸ್ತಾರವಾದ ಹೊಲ, ಮನೆ ಮತ್ತು ಗದ್ದೆಗಳೂ) ಪುತ್ರಪೌತ್ರಾದಿ ಸಂಪತ್ತೂ (ವರ್ಷ್ಮಾ) ಮತ್ತು ಅವಿಚ್ಛಿನ್ನವಾದ ಪುತ್ರಸಂತಾನವೂ (ದ್ರಾಘುಯಾ) ಸಹ ನನಗೆ ಪ್ರಾಪ್ತವಾಗಲಿ. ||೧೨೬||

ಪ್ರಭೋ, ಅತಿಶಯವಾದ ಅನ್ನ ಮತ್ತು ದ್ರವ್ಯಸಂಪತ್ತುಗಳೂ, ವಿದ್ಯಾದಿ ಗುಣಗಳಿಂದ ಉತ್ಕರ್ಷವೂ, ಸುಳ್ಳಾಡದಿರುವಿಕೆಯೂ, ಪರಲೋಕವಿರುವುದೆಂಬ ಬುದ್ಧಿಯೂ (ಶ್ರದ್ಧಾ) ಸ್ಥಾವರಜಂಗಮಾತ್ಮಕವಾದ ಪ್ರಪಂಚಜ್ಞಾನವೂ ನನಗೆ ಉಂಟಾಗಲಿ. ದೇವನೇ, ಚಿನ್ನವೇ ಮುಂತಾದ ದ್ರವ್ಯಗಳೂ, ಎಲ್ಲರನ್ನೂ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯವೂ (ವಶಃ) ಶರೀರಕಾಂತಿಯೂ, ಪಗಡೇ ಆಟವೇ ಮುಂತಾದ ಆಟಗಳೂ ಅಲ್ಲದೇ ಇದರಿಂದುಂಟಾಗುವ ಆನಂದವೂ ಸಹ ನನಗೆ ಬರಲಿ. ||೧೨೭||

ಜಾತಂ ಜನಿಷ್ಯಮಾಣಂ ಚ ಸೂಕ್ತಂ ಮೇ ಸುಕೃತಂ ಚ ಮೇ ।
ವಿತ್ತಂ ವೇದ್ಯಂ ಚ ಭೂತಂ ಚ ಭವಿಷ್ಯಂ ಚ ಸುಗಂ ಚ ಮೇ॥೧೨೮॥

ಸುಪಥಂ ಋದ್ಧಮೃದ್ಧಿಶ್ಚ ಕ್ಲಪ್ತಂ ಕ್ಲಪ್ತಿಶ್ಚ ಮೇ ಮತಿಃ ।
ಸುಮತಿಃ ಶಂ ಮಯಶ್ಚಾಸ್ತು ಪ್ರಿಯಂ ಚಾಸ್ತು ಶಿವಾಶು ಮೇ॥೧೨೯॥

ಅನುಕಾಮಶ್ಚ ಕಾಮಶ್ಚ ಶಂಭೋ ಸೌಮನಸಂ ಚ ಮೇ ।
ಭದ್ರಂ ಶ್ರೇಯಶ್ಚ ವಸ್ಯಶ್ಚ ಯಶೋ ಮೇ ಸುಭಗಶ್ಚ ಮೇ ॥೧೩೦॥

ಮಹೇಶ್ವರನೇ, ಹಿಂದೆ ಜನಿಸಿರುವ ಮಕ್ಕಳೂ ಮುಂದೆ ಹುಟ್ಟುವ ಮಕ್ಕಳೂ ಸಹ ಶಾಶ್ವತವಾಗಿರುವಂತೆ ನನ್ನನ್ನನುಗ್ರಹಿಸು. ದೇವ, ಋಗ್ವೇದಸಮೂಹವೂ (ಸೂಕ್ತ) ಅದರ ಅಧ್ಯಯನಾದಿಗಳಿಂದುಂಟಾದ ಅಪೂರ್ವವೂ ಅಂದರೆ ಪುಣ್ಯ ವಿಶೇಷವೂ (ಸುಕೃತಂ) ನನಗೆ ದೊರೆಯಲಿ. ದೇವೇಶನೇ, ಪೂರ್ವದಲ್ಲಿ ಪಡೆದಿರುವ ದ್ರವ್ಯಾಶೆಯೂ (ವಿತ್ತಂ) ಇನ್ನು ಮುಂದೆ ದೊರೆಯುವ ಐಶ್ವರ್ಯ ಸಂಪತ್ತುಗಳೂ (ವೇದ್ಯಂ) ನನಗೆ ಶಾಶ್ವತವಾಗಿರಲಿ. ಸ್ವಾಮಿ, ಹಿಂದಿನಿಂದಲೂ ಬಂದಿರುವ ಹೊಲ ಗದ್ದೆ ಮುಂತಾದವುಗಳೂ (ಭೂತಂ) ಮುಂದೆ ಬರುವ ಮನೆ ಮತ್ತು ಮಠ ಮುಂತಾದವುಗಳೂ (ಭವಿಷ್ಯಂ) ಮತ್ತು ಬಂಧುಜನಗಳು ವಾಸಮಾಡುವ ಗ್ರಾಮಗಳಿಗೆ ಸುಖಪ್ರಯಾಣವೂ ನನಗೆ ಪ್ರಾಪ್ತವಾಗಲಿ. ||೧೨೮||

ಎಲೈ ಮಂಗಳಸ್ವರೂಪನಾದ ಶಿವನೇ, ನಾನು ಸಂಚಾರಮಾಡುವ ದಾರಿಯು ಕಳ್ಳಕಾಕರ ಭಯವಿಲ್ಲದಂತಾಗಲಿ. ಅಭಿವೃದ್ಧಿಹೊಂದುತ್ತಿರುವ ದ್ರವ್ಯಸಂಪತ್ತು ಅಥವಾ ಅನುಷ್ಠಾನಮಾಡಿದ ಕರ್ಮಫಲಗಳು ಶಾಶ್ವತವಾಗಿ ನೆಲಸಲಿ. ಮುಂದೆ ಅನುಷ್ಠಾನ ಮಾಡುವ ಯಾಗಾದಿಗಳು ಸಫಲವಾಗಲಿ. ಯಾವಾಗಲೂ ನನ್ನ ಕಾರ್ಯಕ್ಕೆ ಸಾಕಾಗುವಷ್ಟು ದ್ರವ್ಯಗಳು ಒದಗಲಿ? ನನ್ನ ಸಾಮರ್ಥ್ಯವು ನಿಯಮಿತವಾಗಿರಲಿ. ಪದಾರ್ಥ ಮಾತ್ರ ವಿಷಯಕವಾದ ನಿಶ್ಚಯವೂ ನನಗೆ ಉಂಟಾಗಲಿ. ದೇವ, ಕಠಿಣವಾದ ರಾಜಕಾರ್ಯಗಳಲ್ಲಿ ನನಗೆ ಒಳ್ಳೆಯ ಜ್ಞಾನವು ದೊರೆಯಲಿ. ಐಹಿಕಾಮುಷ್ಮಿಕ ಸುಖಗಳೂ (ಇಹಪರಗಳೆರಡರಲ್ಲೂ ಸುಖಗಳು) ನನಗೆ ಉಂಟಾಗಲಿ. (ಶಂಮಯ) ಎಂದರೆ ಪ್ರೀತಿಕರವಾದ ಪದಾರ್ಥಗಳೂ ಸಹ ನನಗೆ ಜಾಗ್ರತೆ ಉಂಟಾಗಲಿ. ||೧೨೯||

ದೇವನೇ, ಈ ಲೋಕದಲ್ಲಿ ನಮಗೆ ಅನುಕೂಲವೆಂದು ತೋರುವ ಸ್ರಕ್ಚಂದನಾದಿ ಪದಾರ್ಥಗಳೂ (ಅನುಕಾಮಃ) ಮುಂದೆ ಹಿತಕರವೆನಿಸಿರುವ ಸ್ವರ್ಗಮೋಕ್ಷ

ದ್ರವಿಣಂ ಚಾಸ್ತು ಯಂತಾ ಚ ಧರ್ತಾ ಕ್ಷೇಮಶ್ಚ ಮೇ ಧೃತಿಃ ।
ವಿಶ್ವಂ ಮಹಶ್ಚ ಸಂವಿಚ್ಚ ಜ್ಞಾತ್ರಂ ಸೂಶ್ಚ ಪ್ರಸೂಶ್ಚ ಮೇ ॥೧೩೦॥

ಶೀರಂ ಲಯೋ ಋತಂ ಚಾಸ್ತು ಭಗವನ್ನಮೃತಂ ಚ ಮೇ ।
ಅಯಕ್ಷ್ಮಂ ಚಾನಾಮಯಚ್ಚ ಜೀವಾತು ಶ್ಚಾಸ್ತು ಮೇ ಸದಾ॥೧೩೨॥

ಮುಂತಾದವುಗಳೂ, (ಕಾಮ) ನನಗೆ ಒದಗಲಿ. ಶಂಭೋ ! ಮನಸ್ಸಿಗೆ ಸಮಾಧಾನ ವನ್ನುಂಟುಮಾಡುವ ಬಂಧುವರ್ಗವೂ (ಸೌಮನಸ್ಯಂ) ಇಹಲೋಕದಲ್ಲಿ ರಮಣೀ ಯವೆನಿಸುವ ಕಲ್ಯಾಣಸಂಪತ್ತುಗಳೂ (ಭದ್ರಂ) ಪರಲೋಕದಲ್ಲಿ ಹಿತಕಾರಿಯಾ ದುದೂ (ಶ್ರೇಯಃ) ವಾಸಮಾಡಲು ಯೋಗ್ಯವಾದ ಮನೆ ಮಠ ಮುಂತಾದವು ಗಳೂ, ಕೀರ್ತಿಯೂ ಮತ್ತು ಸೌಭಾಗ್ಯವೂ ಸಹ ನಿನ್ನನುಗ್ರಹದಿಂದ ನನಗೆ ಪ್ರಾಪ್ತವಾಗಲಿ. ||೧೩೦||

ದೇವನೇ, ನನಗೆ ದ್ರವ್ಯಸಂಪತ್ತುಂಟಾಗಲಿ. ನಮ್ಮನ್ನು ನಿಯಮಿಸುವ ಆಚಾರ್ಯನೂ, ಪೋಷಣೆಮಾಡುವ ತಂದೆ ಮುಂತಾದವರೂ ದೊರೆಯಲಿ. ನಮ್ಮಲ್ಲಿರುವ ದ್ರವ್ಯವನ್ನು ಕಾಪಾಡುವ ಶಕ್ತಿಯೂ (ಕ್ಷೇಮಃ) ಕಷ್ಟಬಂದಾಗಲೂ ಎದೆಗುಂದದಂತಹ ಧೈರ್ಯವೂ ನನಗೆ ಲಭಿಸಲಿ. ಮಹೇಶ್ವರನೇ, ಸರ್ವಜನ ಗಳಿಗೂ ಅನುಕೂಲತೆಯೂ (ವಿಶ್ವಂ) ಪೂಜ್ಯತೆಯೂ, ವೇದಶಾಸ್ತ್ರಾದಿ ಜ್ಞಾನವೂ, ಮತ್ತೊಬ್ಬರಿಗೆ ಉಪದೇಶಮಾಡುವ ಸಾಮರ್ಥ್ಯವೂ, ಮತ್ತು ಪುತ್ರಾದಿಗಳನ್ನು ಪ್ರೇರಣೆಮಾಡುವ ಶಕ್ತಿಯೂ ಅಲ್ಲದೆ ಸೇವಕರೇ ಮುಂತಾದವರನ್ನು ನಿಯಮ ಮಾಡುವ (ಅಪ್ಪಣೆಮಾಡುವ) ಸಾಮರ್ಥ್ಯವೂ ನನಗೆ ಉಂಟಾಗಲಿ. ||೧೩೧||

ಓ ಭಗವನ್ ! ಎತ್ತು, ನೊಗ ಮುಂತಾದ ಕೃಷಿಗಳಿಗೆ ಸಾಧನವಾದ ಪದಾರ್ಥಗಳೂ, (ಸೀರಂ) ಇವುಗಳಿಗೆ ಒದಗುವ ತೊಂದರೆಗಳ ನಿವಾರಣೆಯೂ (ಲಯಃ) ಯಜ್ಞಾದಿಕರ್ಮಗಳೂ, (ಋತಂ) ಇವುಗಳಿಂದುಂಟಾಗುವ ಫಲಗಳೂ (ಅಮೃತಂ) ನನಗೆ ಲಭಿಸಲಿ. ದೇವನೇ, ರಾಜಯಕ್ಷ್ಮ(ಕ್ಷಯ) ಮುಂತಾದ ಘೋರ ವ್ಯಾಧಿಗಳು ನನಗೆ ಬಾರದಿರಲಿ. ಮತ್ತು ಜ್ವರ ಮುಂತಾದ ಸಣ್ಣ ರೋಗಗಳೂ ನನಗೆ ಪ್ರಾಪ್ತವಾಗಬಾರದು. ಪ್ರಭೋ ! ಸುಖಜೀವನಕ್ಕೆ ಕಾರಣಭೂತವಾಗಿ ರೋಗಗಳನ್ನು ಉಪಶಮನ ಮಾಡುವುದಾದ ಔಷಧಿಗಳು ನನಗೆ ಯಾವಾಗಲೂ ದೊರೆಯುತ್ತಿರಲಿ. ||೧೩೨||

ದೀರ್ಘಾಯುಸ್ತ್ವಾನಮಿತ್ರಂ ಚ ಸರ್ವದಾಪ್ಯಭಯಂ ಚ ಮೇ ।
ಸುಗಂ ಚ ಶಯನಂ ಸೂಷಾ ಸುದಿನಂ ಚಾಸ್ತು ಮೇ ಸದಾ ॥೧೩೩॥

ಊರ್ಕ್ಚ ಮೇ ಸೂನೃತಾ ಚಾಸ್ತು ಪಯಶ್ಚಾಸ್ತು ರಸಶ್ಚ ಮೇ ।
ಘೃತಂ ಮಧು ಚ ಸಗ್ಧಿಶ್ಚ ಸಪೀತಿಶ್ಚ ಕೃಷಿಶ್ಚ ಮೇ ॥೧೩೪॥

ವೃಷ್ಟಿಶ್ಚ ಜೈತ್ರಮೌದ್ಭಿದ್ಯಂ ರಯಿಶ್ಚಾಸ್ತು ಸದಾಪಿ ಮೇ ।
ರಾಯಃ ಪುಷ್ಟಂ ಚ ಪುಷ್ಟಿಶ್ಚ ವಿಭು ಚ ಪ್ರಭು ಚ ಪ್ರಭೋ ॥೧೩೫॥

ಮಹೇಶ! ನನಗೆ ಯಾವಾಗಲೂ ಅಪಮೃತ್ಯುಭಯವು ಬರದಿರಲಿ. ದೀರ್ಘಾಯುಷ್ಯವೂ, ಶತ್ರುಗಳಿಂದ ನಿರ್ಭಯವೂ, ಮತ್ತಾವನಿಮಿತ್ತದಿಂದಲೂ ಭೀತಿಯೇ ಇಲ್ಲದಂತೆಯೂ ಕರುಣಿಸು. ಪ್ರಭೋ! ಮಂಗಳಕರವಾದ ಗಮನವನ್ನೂ ಅಂದರೆ (ಎಲ್ಲರೂ ಅಂಗೀಕರಿಸಿರುವಂತೆ ಆಚರಿಸುವಿಕೆಯನ್ನೂ) ಹಾಸಿಗೆ, ದಿಂಬು ಮುಂತಾದ ಉಪಕರಣಗಳೊಡಗೂಡಿದ ಶಯ್ಯಾಸಂಪತ್ತನ್ನೂ, ಸ್ನಾನ ಸಂಧ್ಯಾವಂದನಾದಿಗಳಿಂದ ಕೂಡಿದ ಶೋಭನವಾದ ಪ್ರಾತಃಕಾಲವನ್ನೂ, ಮತ್ತು ಯಜ್ಞ, ಯಾಗ, ದಾನ ಮುಂತಾದವುಗಳಿಂದೊಡಗೂಡಿದ ಶುಭದಿವಸಗಳನ್ನೂ ದೊರಕಿಸು. ॥೧೩೩॥

ಸಾರಭೂತವಾದ ಅನ್ನ ವಿಶೇಷಗಳು, (ರಸ) ತುಪ್ಪ, ಜೇನು, ಇವುಗಳೂ, ಬಂಧುಗಳೊಡನೆ ಸಹಭೋಜನವೂ, ಜೊತೆಯಲ್ಲಿ ಪಾನವೂ ಮತ್ತು ಕೃಷಿಯೂ ಸಹ ನನಗೆ ಉಂಟಾಗಲಿ. ॥೧೩೪॥

ಪ್ರಭುವೇ, ಮಳೆಯೂ, ಜಯಶೀಲವಾದ ಕ್ಷೇತ್ರವೂ, (ಅಂದರೆ ಒಳ್ಳೆಯ ಹೊಲಗದ್ದೆಗಳೂ) ವೃಕ್ಷ, ಪೊದೆ ಮುಂತಾದುವುಗಳ ಉತ್ಪತ್ತಿಯೂ, ಸುವರ್ಣವೂ (ರಯಿಃ) ಮಣಿ, ಮುತ್ತು ಮುಂತಾದವುಗಳೂ (ರಾಯಿಃ) ಹೆಚ್ಚಾದ ಸುವರ್ಣ ಸಮೃದ್ಧಿಯೂ (ಪುಷ್ಟಂ) ಶರೀರಪೋಷಣೆಯೂ (ಪುಷ್ಟಿಃ) ಮತ್ತು ವಿಭು, ಪ್ರಭುಗಳೂ ಅಂದರೆ ಸರ್ವವ್ಯಾಪಿತ್ವವೂ ಸರ್ವಾಧಿಪತ್ಯವೂ ಲಭಿಸಲಿ. ॥೧೩೫॥

ಬಹು ಭೂಯಶ್ಚ ಪೂರ್ಣಂ ಚ ತಥಾ ಪೂರ್ಣತರಂ ಚ ಮೇ ।
ಅಕ್ಷಿತಿಶ್ಚಾಸ್ತು ಭಗವನ್ನ್ಯಯವಾಶ್ಚ ಭವಂತು ಮೇ ॥೧೩೭॥

ಅನ್ನಮನ್ನಪತೇ ಮೇಽಸ್ತು ಕೇನಾಸ್ತು ಕ್ಷುಚ್ಚ ಮೇ ಪ್ರಭೋ ।
ವ್ರೀಹಯಶ್ಚ ಯವಾ ಮಾಷಾಸ್ತಿಲಾಮುದ್ಗಾಶ್ಚ ಮೇ ಶಿವ ॥೧೩೭॥

ಖಲ್ವಾಶ್ಚ ಸಂತು ಗೋಧೂಮಾ ಮಸುರಾಶ್ಚ ಪ್ರಿಯಂಗವಃ ।
ಅಣವಃ ಸಂತು ಮೇ ನಿತ್ಯಂ ಶ್ಯಾಮಾಕಾಃ ಸಂತು ಮೇ ಪ್ರಭೋ ॥೧೩೮॥

ಎಲೈ ಭಗವಂತನೇ, (ಬಹು, ಭೂಯಃ, ಪೂರ್ಣಂ, ಪೂರ್ಣತರಂ ಮತ್ತು ಅಕ್ಷಿತಿ ಎಂಬ ಈ ಐದು ಶಬ್ದಗಳೂ ಹಿಂದಿನ ವಿಭು ಮತ್ತು ಪ್ರಭುಶಬ್ದಗಳಂತೆ ಮುಂದೆ ಹೇಳುವ ಧಾನ್ಯಗಳ ವಿಷಯದಲ್ಲಿ ಉತ್ತರೋತ್ತರ ಅಭಿವೃದ್ಧಿಯನ್ನು ಸೂಚಿಸುವ ಪರಿಮಾಣವಾಚಕಪದಗಳು.) ಪ್ರಭು ಎಂಬ ಶಬ್ದಕ್ಕಿಂತಲೂ ಬಹು ಎಂಬ ಶಬ್ದದಿಂದ ತೋರುವ ಅರ್ಥವು, ಅದಕ್ಕಿಂತಲೂ ಹೆಚ್ಚೆಂದೂ ಆದಕ್ಕಿಂತಲೂ ಭೂಯಃ ಎಂಬುದು ಇನ್ನೂ ಹೆಚ್ಚೆಂದೂ, ಅದಕ್ಕಿಂತಲೂ ಪೂರ್ಣಂ ಎಂಬುದು ಮತ್ತೂ ಹೆಚ್ಚೆಂತಲೂ, ಪೂರ್ಣತರಂ ಎಂಬುದು ಅದಕ್ಕಿಂತಲೂ ಅಧಿಕವೆಂದೂ, ಅರ್ಥವನ್ನು ಸೂಚಿಸುತ್ತವೆ. ನನಗೆ ನೀಚಧಾನ್ಯವೆನಿಸಿದ ಯವಧಾನ್ಯವು ಅಪರಿಮಿತವಾಗಿ ಲಭಿಸಲಿ. (ಸರ್ವಸಂಪತ್ತೂ ಅತಿಶಯವಾಗಿ ದೊರಕಲಿ ಎಂದು ಭಾವ).॥೧೩೬॥

ಅನ್ನಗಳಿಗೆ ಅಧಿಪತಿಯಾದ ಸ್ವಾಮಿಯೇ, ನನಗೆ ಅನ್ನವು ಪೂರ್ಣವಾಗಿ ಉಂಟಾಗಲಿ. ಈ ಅನ್ನವನ್ನು ಊಟಮಾಡುವುದರಿಂದ ನನಗೆ ಹಸಿವಾಗದಿರಲಿ. ಪ್ರಭೋ! ಶಿವ! ನನಗೆ ಬತ್ತವೂ, ಯವಧಾನ್ಯವೂ, ಉದ್ದೂ, ಎಳ್ಳೂ ಮತ್ತು ಹೆಸರು ಧಾನ್ಯವೂ ಸಹ ಸಂಪೂರ್ಣವಾಗಿ ದೊರೆಯಲಿ. ॥೧೩೭॥

ಪ್ರಭೋ, ಮಹೇಶ್ವರನೇ, ಖಲ್ವಧಾನ್ಯಗಳೂ (ಅಂದರೆ ಹೆಸರುಕಾಳಿಗಿಂತಲೂ ಸ್ವಲ್ಪ ದಪ್ಪವಾದ ಧಾನ್ಯಗಳು. ಇದಕ್ಕೆ ಅಥರ್ವಣವೇದಭಾಷ್ಯದಲ್ಲಿ “ಖಲ್ವಾಶ್ಚಣಕಾಃ” ಎಂದು ಕಡಲೆ ಎಂಬರ್ಥವನ್ನು ಮಾಡಿರುವರು.) ಗೋದುವೆಯೂ, ಮಸುರಧಾನ್ಯವೂ (ಅಂದರೆ ಹೆಸರಿನಂತೆಯೇ ತೊವ್ವೆಮಾಡಲು ಉಪಯೋಗಿಸುವ ದ್ವಿದಳಧಾನ್ಯ ; ಅಂದರೆ ತೊಗರಿ ಎಂದು ಹೇಳಬಹುದು.) ಪ್ರಿಯಂಗುಧಾನ್ಯಗಳೂ (ನವಣೆಯೂ) ಅಣುಧಾನ್ಯವೂ (ಸಣ್ಣ ಬತ್ತಗಳೂ) ಮತ್ತು ಶ್ಯಾಮಾಕಧಾನ್ಯಗಳೂ

ನೀವಾರಾದ್ಯಾಶ್ಚ ಮೇ ಸಂತು ಗೃಹೇ ಸರ್ವಾನ್ನನಾಯಕ ।
ಅಶ್ಮಾ ಚ ಮೃತ್ತಿಕಾ ಚಾಸ್ತು ಗಿರಯಃ ಪರ್ವತಾಶ್ಚ ಮೇ ॥೧೩೯॥

ಸಿಕತಾಃ ಸಂತು ಭಗವನ್ಮೇ ವನಸ್ಪತಯಶ್ಚ ಮೇ ।
ಹಿರಣ್ಯಮಸ್ತ್ವಯಶ್ಚಾಸ್ತು ತಥಾ ಸೀಸಂ ತ್ರಪುಶ್ಚ ಮೇ ॥೧೪೦॥

ಶ್ಯಾಮಂ ಲೋಹಂ ಚ ಮೇಽಗ್ನಿಶ್ಚ ಗೃಹೇ ತಿಷ್ಠಂತು ಸರ್ವಥಾ ।
ಆಪಶ್ಚ ವೀರುಧಃ ಸಂತು ತಥೈವೋಷಧಯೋಽಪಿ ಮೇ ॥೧೪೧॥

ಕೃಷ್ಟಪಚ್ಯಂ ಚ ಬಹುಧಾ ಮಮ ತಿಷ್ಠತು ವೇಶ್ಮನಿ ।
ತಥೈವಾಕೃಷ್ಟಪಚ್ಯಂ ಚ ವನಸಂಭವಮಸ್ತು ಮೇ ॥೧೪೨॥

(ಇದನ್ನು ನವಣೆಯೆಂದೇ ವ್ಯವಹರಿಸುವರು.) ಸಹ ನನಗೆ ಪ್ರತಿನಿತ್ಯವೂ ಅತಿಶಯವಾಗಿ ಉಂಟಾಗಲಿ. ॥೧೩೮॥

ಎಲ್ಲರಿಗೂ ಅನ್ನವನ್ನು ಕೊಟ್ಟು ಕಾಪಾಡುತ್ತಾ ಜಗದೊಡೆಯನಾಗಿರುವ ದೇವನೇ, ನನ್ನ ಮನೆಯಲ್ಲಿ ಯಾವಾಗಲೂ ನೀವಾರವೇ ಮುಂತಾದ ಕಾಡಿನಲ್ಲಿ ಬೆಳೆಯುವ ತೃಣಧಾನ್ಯಗಳು ಸಮೃದ್ಧಿಯಾಗಿರಲಿ. ಅಲ್ಲದೇ ಕಲ್ಲುಗಳೂ, ಮಣ್ಣುಗಳೂ ಬೆಟ್ಟಗಳೂ ಮತ್ತು ಪರ್ವತಗಳೂ ಸಹ ನನಗೆ ಶುಭಪ್ರದವಾಗಿರಲಿ. ॥೧೩೯॥

ಮಹಾದೇವನೇ, ಮರಳುಗಳೂ ಮತ್ತು ವನಸ್ಪತಿಗಳೂ ಸಹ ನನಗೆ ಶುಭಪ್ರದವಾಗಿ ಉಂಟಾಗಲಿ. ಎಲೈ ಭಗವಂತನೇ, ಸುವರ್ಣವೂ, ಕಬ್ಬಿಣವೂ, ಸೀಸವೂ ಮತ್ತು ತವರವೂ ಸಹ ನನಗೆ ಯಥೇಚ್ಛವಾಗಿ ಲಭಿಸಲಿ. ॥೧೪೦॥

ದೇವದೇವನೇ, ಉಕ್ಕು, ಕಂಚು, ಹಿತ್ತಾಳೆ ಮುಂತಾದ ಲೋಹಗಳೂ, ಮತ್ತು ಅಗ್ನಿಯೂ ಸಹ ನನ್ನ ಮನೆಯಲ್ಲಿ ಯಾವಾಗಲೂ ಶಾಶ್ವತವಾಗಿರಲಿ. ನೀರುಗಳೂ, ಬಳ್ಳಿಗಳೂ ಮತ್ತು ಜ್ಯೋತಿರ್ಲತೆಗಳೂ (ಔಷಧಿಗಳೂ) ಸಹ ಸದಾ ನನಗೆ ದೊರೆಯುತ್ತಿರಲಿ. ॥೧೪೧॥

ಕೃಷಿಯಿಂದ ಪರಿಪಾಕ ಹೊಂದಿದ ಧಾನ್ಯಗಳು ಯಥೇಚ್ಛವಾಗಿ ನನ್ನ ಮನೆಯಲ್ಲಿರಲಿ. ಓ ದೇವನೇ, ಅದರಂತೆಯೇ ಕೃಷಿ ಮುಂತಾದವುಗಳಲ್ಲದೆ, ಕೇವಲ ಈ ಕಾಡುಗಳಲ್ಲಿ ಬೆಳೆಯುವ ಧಾನ್ಯಾದಿಗಳೂ ನನಗೆ ದೊರೆಯಲಿ. ॥೧೪೨॥

ಗೋಮಹಿಷ್ಯಾದಯೋ ಗ್ರಾಮ್ಯಾಃ ಪಶವಃ ಸಂತು ಮೇ ಗೃಹೇ ।
ಸದಾ ಯಜ್ಞೇನ ಕಲ್ಪಂತಾಮಾರಣ್ಯಾಃ ಪಶವಶ್ಚ ಮೇ ॥೧೪೩॥

ವಿತ್ತಂ ವಿತ್ತಿಶ್ಚ ಭೂತಂ ಚ ಭೂತಿಶ್ಚ ವಸತಿರ್ವಸು ।
ಶಿವಪೂಜಾದಿಕಂ ಕರ್ಮ ಶಕ್ತಿಶ್ಚ ಶಿವಪೂಜನೇ ॥೧೪೪॥

ಏಮಶ್ಚಾಸ್ತು ಮಮೇತಿಶ್ಚ ಗತಿಶ್ಚಾಸ್ತು ಶಿವಾರ್ಚನೇ ।
ಅಗ್ನಿರಿಂದುಶ್ಚ ಮೇ ಸೋಮಃ ಸವಿತಾ ಚ ಸರಸ್ವತೀ ॥೧೪೫॥

ಪೂಷಾ ಬೃಹಸ್ಪತಿರ್ಮಿತ್ರಸ್ತ್ವಷ್ಟಾ ಚ ವರುಣಶ್ಚ ಮೇ ।
ಧಾತಾ ಚ ವಿಷ್ಣುರಪ್ಯಸ್ತು ಗೃಹಕರ್ಮಕರಸ್ತು ಮೇ ॥೧೪೬॥

ಯಾಗಾದ್ಯನುಷ್ಠಾನಕ್ಕೋಸ್ಕರ ಗ್ರಾಮವಾಸಿಗಳಾದ ಹಸು, ಎಮ್ಮೆಮುಂತಾದ ಪ್ರಾಣಿಗಳೂ, ಕಾಡಿನಲ್ಲಿ ವಾಸಮಾಡುವ ಜಿಂಕೆ ಮುಂತಾದ ಪಶು ಪ್ರಾಣಿಗಳೂ ನನ್ನ ಮನೆಯಲ್ಲಿ ಸದಾ ನೆಲಸಿರಲಿ. ||೧೪೩||

ಮಹೇಶ್ವರನೇ, ಹಿಂದೆ ಪಡೆದಿರುವ ದ್ರವ್ಯಗಳೂ, ಮುಂದೆ ಲಾಭರೂಪವಾಗಿ ಬರುವ ಹಣವೂ, ಐಶ್ವರ್ಯಯುಕ್ತವಾದ ಪುತ್ರಪೌತ್ರಾದಿ ಸಂಪತ್ತುಗಳೂ, ತನ್ನ ಸ್ವಕೀಯವಾದ ಐಶ್ವರ್ಯವೂ, ಮನೆ ಮುಂತಾದ ವಾಸಸ್ಥಳಗಳೂ, ಗೋ ಮುಂತಾದ ವಸುಗಳೂ, ಶಿವಾರಾಧನಕರ್ಮವೇ ಮುಂತಾದ ಕರ್ಮಗಳೂ, ಮತ್ತು ಈ ಶಿವ ಪೂಜೆಮಾಡಲು ಸಾಮರ್ಥ್ಯವೂ ಸಹ ನನಗೆ ಉಂಟಾಗಲಿ. ||೧೪೪||

ಹೊಂದಲು ಯೋಗ್ಯವಾದ ಸುಖವೂ (ಏಮಃ) ಇಷ್ಟಪ್ರಾಪ್ತಿಯುಂಟಾಗಲು ಉಪಾಯವೂ (ಇತಿಃ) ಶಿವಪೂಜೆಯಲ್ಲಿ ಇಷ್ಟಪ್ರಾಪ್ತಿಯೂ, ಸಹ ನನಗೆ ಉಂಟಾಗಲಿ. ದೇವನೇ, ಅಗ್ನಿ, ಚಂದ್ರ, ಸೋಮ, ಸೂರ್ಯ ಮತ್ತು ಸರಸ್ವತೀ, ಈ ದೇವತೆಗಳೂ ನನಗೆ ಅನುಗ್ರಹಮಾಡಲಿ. ||೧೪೫||

ಇಂದ್ರ, ಬೃಹಸ್ಪತಿ, ಸೂರ್ಯ (ಮಿತ್ರ) ತ್ವಷ್ಟಾ, ವರುಣ, ಬ್ರಹ್ಮ ಮತ್ತು ವಿಷ್ಣು ಈ ದೇವತೆಗಳು ನನ್ನ ಮನೆಯ ಕೆಲಸವನ್ನು ಮಾಡುವಂತೆ ಅನುಗ್ರಹಿಸು. ||೧೪೬||

ಅಶ್ವಿನೌ ಚ ಮಮೇಶಾನ ತಿಷ್ಠೇತಾಂ ಸರ್ವದಾ ಗೃಹೇ ।
ಮರುತಶ್ಚ ಪ್ರಸರ್ಪಂತು ವಿಶ್ವೇದೇವಾಶ್ಚ ಮೇ ಗೃಹೇ ॥೧೪೭॥

ತ್ವದಾಜ್ಞಾವಶಗಾನೇತಾನಗ್ನೀಂದ್ರಾದಿಸುರಾನ್ ಶಿವ ।
ಮದ್ವಶಾನ್ಕುರು ವಿಶ್ವೇಶ ದಕ್ಷಾನ್ಮದ್ಗೃಹಕರ್ಮಣಿ ॥೧೪೮॥

ಅಂತರಿಕ್ಷಂ ಚ ಪೃಥಿವೀ ದ್ಯೌರಪ್ಯಸ್ತು ದಿಶಶ್ಚ ಮೇ ।
ಮೂರ್ಧಾ ಪ್ರಜಾಪತಿಶ್ಚಾಸ್ತು ಮೇ ಭವತ್ಕೃಪಯಾ ಭವ ॥೧೪೯॥

ಅಂಶುಶ್ಚ ರಶ್ಮಿರಪ್ಯಸ್ತು ಮೇಽದಾಭ್ಯೋಽಧಿಪತಿಶ್ಚ ಮೇ ।
ಉಪಾಂಶುರಂತರ್ಯಾಮಶ್ಚ ಮಮ ಸ್ಯಾದೈಂದ್ರವಾಯವಃ ॥೧೫೦॥

ಮೇ ಮೈತ್ರಾವರುಣಶ್ಚಾಸ್ತು ತಥೈವಾಸ್ತು ಮಮಾಶ್ವಿನಃ ।
ಪ್ರತಿಪ್ರಸ್ಥಾನಶುಕ್ರೌ ಚ ಮಂಥೀ ಚಾಗ್ರಯಣಶ್ಚ ಮೇ ॥೧೫೧॥

ಎಲೈ ಈಶಾನಮೂರ್ತಿಯೇ! ನನ್ನ ಮನೆಯಲ್ಲಿ ಸದಾ ಅಶ್ವಿನೀದೇವತೆಗಳು (ನಾಸತ್ಯ ಮತ್ತು ದಸ್ರರೆಂಬ ಹೆಸರುಳ್ಳ) ವಾಸಮಾಡುತ್ತಾ ಸಕಲ ರೋಗಗಳನ್ನೂ ನಿವಾರಣೆಮಾಡಲಿ. ಅಲ್ಲದೆ ಸಪ್ತಮರುತ್ತುಗಳೂ, ವಿಶ್ವೇದೇವತೆಗಳೂ ಸಹ ನನ್ನ ಮನೆಯಲ್ಲಿ ಸಂಚರಿಸಲಿ. ॥೧೪೭॥

ಎಲೈ ಮಂಗಳಸ್ವರೂಪನೆನಿಸಿದ ಶಿವನೇ, ಜಗದೊಡೆಯನಾಗಿರುವ ನೀನು ನಿನ್ನಾಜ್ಞೆಯನ್ನು ಪರಿಪಾಲಿಸಿ ನಡೆಯುವ ಈ ಅಗ್ನಿ, ಇಂದ್ರ ಮುಂತಾದ ದೇವತೆಗಳನ್ನು ನನ್ನ ಅಧೀನರಾಗುವಂತೆ ಮಾಡಿ ನನ್ನ ಮನೆಕೆಲಸಗಳಲ್ಲಿ ದಕ್ಷರಾಗಿ ಕೆಲಸ ನಡೆಸುವಂತೆ ಆಜ್ಞಾಪಿಸು. ॥೧೪೮॥

ಓ ದೇವದೇವನೇ, ಆಕಾಶ, ಭೂಮಿ, ಸ್ವರ್ಗ ಇವುಗಳೂ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎಂಬ ನಾಲ್ಕು ದಿಕ್ಕುಗಳೂ, ಊರ್ಧ್ವದಿಕ್ಕು, (ಮೂರ್ಧಾ) ಮತ್ತು ಬ್ರಹ್ಮನೂ ಸಹ ನಿನ್ನ ದಯೆಯಿಂದ ನನಗೆ ಅನುಗ್ರಹಮಾಡಲಿ. ॥೧೪೯॥

ಅಂಶು, ರಶ್ಮಿ, ಅದಾಭ್ಯ, ಅಧಿಪತಿ, ಉಪಾಂಶು, ಅಂತರ್ಯಾಮ, ಐಂದ್ರವಾಯು, ಮೈತ್ರಾವರುಣ, ಅಶ್ವೀ, ಪ್ರತಿಪ್ರಸ್ಥಾನ, ಶುಕ್ರ, ಮಂಥೀ, ಆಗ್ರಯಣ, ಈ ಸೋಮಗ್ರಹ ವಿಶೇಷಗಳೂ ನನಗೆ ಅನುಕೂಲವಾಗಿರಲಿ. ॥೧೫೦-೧೫೧॥

ವೈಶ್ವದೇವೋ ಧ್ರುವಶ್ಚಾಪಿ ತಥಾ ವೈಶ್ವಾನರಶ್ಚ ಮೇ ।
ಋತುಗ್ರಹಾಶ್ಚ ಮೇ ಸಂತು ಸಾತಿಗ್ರಾಹ್ಯಾಶ್ಚ ಶಂಕರ ॥೧೫೨॥

ಐಂದಾಗ್ನೌ ವೈಶ್ವದೇವಶ್ಚ ಗ್ರಹಾಃ ಸೋಮೋಪಯೋಗಿನಃ ।
ತಥಾ ಮರುತ್ವತೀಯಾಶ್ಚ ಗ್ರಹಾಃ ಸಂತು ಸದಾಪಿ ಮೇ ॥೧೫೩॥

ಮಾಹೇಂದ್ರಶ್ಚ ತಥಾದಿತ್ಯಃ ಸಾವಿತ್ರಶ್ಚಾಸ್ತು ಮೇ ಗ್ರಹಾಃ ।
ಸಾರಸ್ವತಶ್ಚ ಪೌಷ್ಣಶ್ಚ ತಥಾ ಪಾತ್ನೀವತಶ್ಚ ಮೇ ॥೧೫೪॥

ಸ ಹಾರಿಯೋಜನಶ್ಚಾಸ್ತು ಮಮೇಧ್ಮಶ್ಚಾಸ್ತು ಸರ್ವಥಾ ।
ಬರ್ಹಿರ್ವೇದಿಶ್ಚ ಧಿಷ್ಣಿಯಾಶ್ಚ ಸ್ರುಚಶ್ಚ ಚಮಸಾಶ್ಚ ಮೇ ॥೧೫೫॥

ಗ್ರಾವಾಣಃ ಸ್ವರವಃ ಸಂತು ತಥೈವೋಪರವಾಶ್ಚ ಮೇ ।
ತೇ ಮೇ ಧಿಷವಣೇ ಸಂತು ತೇ ದ್ರೋಣಕಲಶಶ್ಚ ಮೇ ॥೧೫೬॥

ವಾಯವ್ಯಾನಿ ಚ ಮೇ ಸಂತು ಪೂತಭೃಚ್ಚಾಸ್ತು ಮೇ ಪ್ರಭೋ ।
ತಥೈವಾಧವನೀಯಶ್ಚ ತದಾಗ್ನೀಧ್ರಂ ಚ ಮೇ ಪ್ರಭೋ ॥೧೫೭॥

ಹವಿರ್ಧಾನಂ ಚ ಮೇ ಸ್ವಾಮಿನ್ಗೃಹಾಶ್ಚೈವ ಸದಶ್ಚ ಮೇ ।
ಪುರೋಡಾಶಾಶ್ಚ ಮೇ ಸ್ವಾಮಿನ್ಪಚತಾಶ್ಚ ಭವಂತು ಮೇ ॥೧೫೮॥

ಹೇ ಶಂಕರ, ವೈಶ್ವದೇವ, ಧ್ರುವ, ವೈಶ್ವಾನರ, ಋತುಗ್ರಹ, ಸಾತಿಗ್ರಾಹ್ಯ, ಐಂದ್ರಾಗ್ನಿ, ವೈಶ್ವದೇವ, ಮರುತ್ವತೀಯ, ಮಾಹೇಂದ್ರ, ಆದಿತ್ಯ, ಸಾವಿತ್ರ, ಸಾರಸ್ವತ, ಪೌಷ್ಣ, ಪಾತ್ನೀವತ, ಮತ್ತು ಹಾರಿಯೋಜನ ಎಂಬ ಸೋಮೋಪಯೋಗಿಗಳಾದ ದೇವತೆಗಳು ನನಗೆ ಅನುಗ್ರಹೋನ್ಮುಖರಾಗಲಿ. ॥೧೫೨-೧೫೩-೧೫೪॥

ಎಲೈ ಸ್ವಾಮಿಯೇ, ಇಧ್ಮ, ಬರ್ಹಿ, ವೇದಿ, ಧಿಷ್ಣಿಯ, ಸ್ರುಚ, ಚಮಸ, ಗ್ರಾವಾಣ, ಸ್ವರವ, ಉಪರವ, ಈ ಯಜ್ಞಾಂಗ ದ್ರವ್ಯಗಳೆಲ್ಲವೂ ನನ್ನ ಜ್ಞಾನದ ಏಳಿಗೆಗಾಗಿ ಏರ್ಪಡಲಿ. ಮತ್ತು ದ್ರೋಣ, ಕಲಶ, ವಾಯವ್ಯ, ಪೂತಭೃತ್, ಆಧವನೀಯ, ಆಗ್ನೀಧ್ರ, ಹವಿರ್ಧಾನ, ಗೃಹಾ, (ಪತ್ನೀ ಶಾಲೆ ಮುಂತಾದವುಗಳು) ಸದಸ್ಸು, ಪುರೋಡಾಶ, ಪಚತ, (ಶಾಮಿತ್ರ ಮುಂತಾದವುಗಳು) ಅವಭೃಥ,

ತಥೈವಾವಭೃತಃ ಸಂತು ಸ್ವಗಾಕಾರಶ್ಚ ಮೇ ಪ್ರಭೋ ।
ಅಗ್ನಿರ್ಘರ್ಮಶ್ಚ ಮೇಽರ್ಕಶ್ಚ ಸೂರ್ಯಃ ಪ್ರಾಣಶ್ಚ ಮೇ ಪ್ರಭೋ॥೧೫೯॥

ಅಶ್ವಮೇಧಶ್ಚ ಪೃಥಿವೀ ದ್ಯೌರಪ್ಯದಿತಿರಸ್ತು ಮೇ ।
ಮೇ ಶಕ್ವರೀರಂಗುಲಯೋ ದಿಶಶ್ಚ ವಿದಿಶಶ್ಚ ಮೇ ॥೧೬೦॥

ತಥಾ ಯಜ್ಞೇನ ಕಲ್ಪಂತಾಂ ಋಕ್ಚ ಸಾಮ ಚ ಮೇ ಪ್ರಭೋ ।
ಸ್ತೊಮೋ ಯಜುಶ್ಚ ದೀಕ್ಷಾ ಚ ತಪಶ್ಚಾಸ್ತು ಋತುಶ್ಚ ಮೇ ॥೧೬೧॥

ವ್ರತಂ ಚಾಹೋರಾತ್ರಯೋರ್ಯದ್ವೃಷ್ಟ್ಯಾ ತು ನಿಯಮಾತ್ಮಕಂ ।
ಬೃಹದ್ರಥಂತರೇ ಯಜ್ಞೇ ಕಲ್ಪೇತಾಂ ಫಾಲಲೋಚನ ॥೧೬೨॥

ಸ್ವಗಾಕಾರ ಈ ಯಜ್ಞಾಂಗದ್ರವ್ಯಗಳೂ ನನಗೆ ಸುಕೃತರೂಪವಾದ ಫಲವನ್ನು ಅನುಗ್ರಹಿಸಲಿ. ||೧೫೫-೧೫೬-೧೫೭-೧೫೮||

ಪ್ರಭೋ, ಅಗ್ನಿ, ಘರ್ಮ (ಪ್ರವರ್ಗ್ಯ) ಅರ್ಕ (ಇಂದ್ರಾಯಾರ್ಕವತೇ ಪುರೋಡಾಶಂ; ಇತಿ ವಿಹಿತೋ ಯಾಗಃ ಸೂರ್ಯಃ ಎಂದು ಹೇಳಿದೆ) ಪ್ರಾಣ ('ಪ್ರಾಣಾಯಸ್ವಾಹಾ' ಎಂದು ವಿಧಾನಮಾಡಿರುವ ಹೋಮವು ಪ್ರಾಣವೆನಿಸುವುದು) ಅಶ್ವಮೇಧಯಾಗ, ಪೃಥಿವೀ, ಅಂತರಿಕ್ಷ, ಅದಿತಿ, ಈ ದೇವತೆಗಳೂ, ಶಕ್ವರೀ ಮತ್ತು ಅಂಗುಲಿ ಎಂಬ ಪುರುಷನ ಅವಯವ ವಿಶೇಷಗಳೂ, ಪೂರ್ವ ಪಶ್ಚಿಮ ದಕ್ಷಿಣೋತ್ತರರೂಪವಾದ ದಿಕ್ಕುಗಳೂ, ಆಗ್ನಿ, ನೈಋತ್ಯ, ವಾಯವ್ಯ ಮತ್ತು ಈಶಾನ್ಯವೆಂಬ ವಿದಿಕ್ಕುಗಳೂ, ನನ್ನ ಯಾಗದಿಂದ ತಮ್ಮ ತಮ್ಮ ಕಾರ್ಯಗಳಲ್ಲಿ ಸಮರ್ಥವಾಗಲಿ. ಅಲ್ಲದೇ ಋಕ್ಕು ಮತ್ತು ಸಾಮವೆಂಬ ಮಂತ್ರವಿಶೇಷಗಳೂ, ಸ್ತೋಮವೂ (ಸಾಮವನ್ನು ಆವೃತ್ತಿಮಾಡುವ ಸ್ತೋತ್ರವು) ಯಜುರ್ವೇದ ಮಂತ್ರವೂ, ಯಜನ, ಯಾಜನ, ದೀಕ್ಷಾ, ಸಂಸ್ಕಾರಗಳೂ, ಕೃಛ್ರಚಾಂದ್ರಾಯಣಾದಿ ಪಾಪನಿವಾರಣೆಗೋಸ್ಕರ ಆಚರಿಸುವ ತಪಸ್ಸುಗಳೂ, ಯಜ್ಞಾಂಗಭೂತವಾದ ಕಾಲಗಳೂ, ಏಕಾಶನಾದಿ ವ್ರತಗಳೂ (ಒಂದೇಹೊತ್ತು ಊಟಮಾಡುವ ವ್ರತಗಳೂ) ಹಗಲುರಾತ್ರಿಗಳಲ್ಲಿ ಹುಯ್ಯುವ ಮಳೆಯಿಂದ ಸಸ್ಯಸಮೃದ್ಧಿಯೂ, ನನ್ನ ಯಜ್ಞದಿಂದ ಅತಿಶಯವಾಗಿ ಉಂಟಾಗಲಿ. ಮತ್ತು ಎಲೈ ಫಾಲನೇತ್ರನೇ, ಈ ನನ್ನ ಯಜ್ಞದಿಂದ ಬೃಹತ್, ರಥಂತರ ಎಂಬ ಸಾಮಗಳು, ತಮ್ಮ ತಮ್ಮ ಸ್ತುತಿವ್ಯವಹಾರಗಳಲ್ಲಿ ಸಮರ್ಥವಾಗಲಿ. ||೧೫೯-೧೬೦-೧೬೧-೧೬೨||

ಗರ್ಭಾ ವತ್ಸಾಶ್ಚ ಭಗವನ್ತ್ರ್ಯವಿಶ್ಚಾಸ್ತು ಮಹೇಶ್ವರ ।
ತ್ರ್ಯವೀ ಚ ಮೇ ದಿತ್ಯವಾಟ್ಚ ದಿತ್ಯಾಹೀ ಚ ಸದಾಶಿವ ॥೧೬೩॥

ಪಂಚಾವಿಶ್ಚ ಮಹಾದೇವ ಪಂಚಾವೀ ಚ ತ್ರಿಲೋಚನ ।
ತ್ರಿವತ್ಸಶ್ಚ ತ್ರಿವತ್ಸಾ ಚ ತುರ್ಯವಾಟ್ಚೈವ ಮೇ ಪ್ರಭೋ ॥೧೬೪॥

ತುರ್ಯೌಹೀ ಪಷ್ಠವಾಚ್ಚಾಸ್ತು ಪಷ್ಠೌಹೀ ಚ ಮಹೇಶ್ವರ ।
ಉಕ್ಷಾ ವಂಶಾ ಚ ಋಷಭೋ ವೇಹನ್ನಡ್ವಾನ್ ತಥಾಸ್ತು ಮೇ ॥೧೬೫॥

ಧೇನುರಪ್ಯಸ್ತು ಭಗವನ್ಕ್ಷೀರಾಯಾತಿಮನೋಹರಾ ।
ಯಜ್ಞೇನ ಕಲ್ಪತಾಮಾಯುಃ ಪ್ರಾಣೋ ಯಜ್ಞೇನ ಕಲ್ಪತಾಂ ॥೧೬೬॥

ಮಹೇಶ್ವರನೇ, ನನ್ನ ಹಸುಗಳು ಗರ್ಭತಾಳಲಿ. ಯಾವಾಗಲೂ ಎಳೆಗರುಗಳು ನನ್ನ ಮನೆಯಲ್ಲಿರಲಿ. (ಆರುತಿಂಗಳಿನ ಕರುವಿಗೆ ವತ್ಸ ಎಂದು ವ್ಯವಹಾರವಿದೆ) ಎತ್ತುಗಳೂ, (ತ್ರ್ಯವಿಃ) ಹಸುಗಳೂ, (ತ್ರ್ಯವೀ) ಎರಡು ವರ್ಷದ ಗೂಳಿಯೂ, (ದಿತ್ಯವಾಟ್) ಎರಡು ವರ್ಷದ ಹಸುವೂ, (ದಿತ್ಯಾಹೀ) ಎರಡೂವರೆ ವರ್ಷ ವಯಸ್ಸಿನ ಗೂಳಿಯೂ (ಪಂಚಾವಿಃ) ಎರಡೂವರೆ ವರ್ಷದ ಹಸುವೂ (ಪಂಚಾವೀ) ನನ್ನ ಗೃಹದಲ್ಲಿ ಓಡಾಡುತ್ತಿರಲಿ. ಓ ಪ್ರಭೋ, ಮಹಾದೇವನೇ, ತ್ರಿಲೋಚನನೇ, ಮೂರು ವರ್ಷದ ವೃಷಭವೂ (ತ್ರಿವತ್ಸಃ) ಮತ್ತು ಮೂರು ವರ್ಷದ ಹಸುವೂ (ತ್ರಿವತ್ಸಾ) ಮೂರೂವರೆ ವರ್ಷ ವಯಸ್ಸಿನ ಹಸುವೂ (ತುರ್ಯೌಹೀ) ನನಗೆ ದೊರೆಯಲಿ. ಎಲೈ ಸದಾ ಮಂಗಳಸ್ವರೂಪನಾದ ಮಹೇಶ್ವರನೇ, ನಾಲ್ಕು ವರ್ಷದ ಗೂಳಿಯೂ (ಪಷ್ಠವಾಟ್) ಅದೇ ನಾಲ್ಕು ವರ್ಷದ ಹಸುವೂ (ಪಷ್ಠೌಹೀ) ಬೀಜದ ಹೋರಿಯೂ, (ಉಕ್ಷಾ) ಗೊಡ್ಡು ಹಸುವೂ (ವಶಾ) ಎತ್ತುಗಳೂ (ಋಷಭ) ಗರ್ಭದಲ್ಲೇ ಕರುಗಳು ಸಾಯುವ ಹಸುಗಳೂ (ವೇಹತ್) ಗಾಡೀ ಎತ್ತುಗಳೂ, (ಅನಡ್ವಾನ್) ಮತ್ತು ಹಾಲಿಗೋಸ್ಕರ ಮನೋಹರವಾದ ಮತ್ತು ಹೊಸದಾಗಿ ಕರು ಹಾಕಿರುವ ಹಸುವೂ (ಧೇನುಃ) ನನಗೆ ಲಭಿಸಲಿ. ಅಂದರೆ ಪಶುಸಮೃದ್ಧಿಯು ನನ್ನ ಗೃಹದಲ್ಲಿ ಸರ್ವದಾ ತೋರಿಬರಲಿ. ||೧೬೩-೧೬೪-೧೬೫||

ಮಹಾದೇವನೇ, ನಾನು ಅನುಷ್ಠಾನಮಾಡುವ ಯಾಗದಿಂದ ನನಗೆ ಆಯುಷ್ಯವು ಅಭಿವೃದ್ಧಿಯಾಗಲಿ. ಪ್ರಾಣವಾಯುವು ಶಾಶ್ವತವಾಗಿರಲಿ. ಅಪಾನವಾಯುವು ವ್ಯಾನವಾಯುವಿನೊಡನೆ ಸ್ಥಿರವಾಗಿರಲಿ. ಕಣ್ಣು, ಕಿವಿ ಇವುಗಳೂ

ಅಪಾನೋಽಪಿ ಸ ಯಜ್ಞೇನ ವ್ಯಾನೇನ ಸಹ ಕಲ್ಪತಾಂ ।
ಚಕ್ಷುಃ ಶ್ರೋತ್ರಂ ಚ ಯಜ್ಞೇನ ಮನಸಾ ಸಹ ಕಲ್ಪತಾಂ ॥೧೬೭॥

ವಾಗಾತ್ಮಾಪಿ ತಥಾ ಯಜ್ಞೋಽಪ್ಯೇವಂ ಯಜ್ಞೇನ ಕಲ್ಪತಾಂ ।
ತ್ವದಧೀನಮಿದಂ ಸರ್ವಂ ತವೇತಿ ಪ್ರಾರ್ಥಿತಂ ಮಯಾ ॥೧೬೮॥

ಸರ್ವಸ್ವತಂತ್ರೋಽಸಿ ಮಹೇಶ ಯಸ್ಮಾ
ತ್ತ್ವಮೇವ ದಾತಾಸಿ ತವಾಪಿ ದೇಯಾಃ ।
ಉಕ್ತಾಶ್ಚ ತಾವಚ್ಚಮಕೇನ ದೇಹಿ
ತಾನಸ್ವತಂತ್ರಾಂಛಿವಪೂಜಕಾಯ ॥೧೬೯॥

ತೇಷಾಂ ಪ್ರದೇಯತ್ವವಿನಿಶ್ಚಯೇನ
ತಾಂದೇಹಿ ಮಹ್ಯಂ ಶಿವಪೂಜಕಾಯ ।

ಮನಸ್ಸಿನೊಡನೆ ಈ ಯಜ್ಞದಿಂದ ತಮ್ಮ ತಮ್ಮ ದರ್ಶನ ಮತ್ತು ಶ್ರವಣ ಕಾರ್ಯಗಳಲ್ಲಿ ಸಮರ್ಥವಾಗಲಿ. (ಸರಿಯಾಗಿ ನಡೆಯಲಿ) ವಾಕ್ಕು, ಆತ್ಮಾ (ಶರೀರ) ಮುಂದೆ ಆಚರಿಸುವ ಅಶ್ವಮೇಧಾದಿ ಯಾಗಗಳೂ ಇವೆಲ್ಲವೂ ಈ ಯಜ್ಞದಿಂದ ಸರಿಯಾಗಿರಲಿ. ಓ ಮಹೇಶ್ವರನೇ, ಇವೆಲ್ಲವೂ ನಿನ್ನ ಅಧೀನವಾಗಿರುವುದರಿಂದ ನಾನು ಈರೀತಿ ನಿನ್ನನ್ನು ಪ್ರಾರ್ಥನೆಮಾಡುತ್ತಿರುವೆನು. ||೧೬೬-೧೬೭-೧೬೮||

ಮಹೇಶ್ವರನೇ, ನೀನು ಸರ್ವಸ್ವತಂತ್ರನು (ಎಲ್ಲಾ ವಿಷಯದಲ್ಲಿಯೂ ಮತ್ತೊಬ್ಬರ ನಿಯಮಗಳಿಲ್ಲದೇ ನಡೆಯುವ ಪ್ರಭಾವವುಳ್ಳವನು) ನೀನೇ ಸಕಲ ಇಷ್ಟಾರ್ಥಗಳನ್ನೂ ಕೊಡುವನಿದ್ದೀಯೆ. ನಿನಗೆ ಯಾರು ತಾನೇ ಏನು ಕೊಡಬಲ್ಲರು? ಮಹಾದೇವನೇ, ಚಮಕಸ್ತೋತ್ರದಲ್ಲಿ ಹೇಳಿರುವ ಮತ್ತು ನನ್ನ ಸ್ವತಂತ್ರವಲ್ಲದ ಇಷ್ಟಾರ್ಥಗಳನ್ನು ಶಿವಪೂಜಕನಾದ ನನಗೆ ಅನುಗ್ರಹಿಸು. ||೧೬೯||

ಚಮಕದಲ್ಲಿ ಹೇಳಿರುವ ವರಗಳನ್ನು ಕೊಡಲೇ ಬೇಕೆಂದು ನಿಶ್ಚಯಮಾಡಿರುವ ದೇವದೇವನೇ! ಅವುಗಳನ್ನು ಶಿವಪೂಜಕನಾದ ನನಗೆ ಕೊಡು. ಮಹೇಶ್ವರನೇ, ನೀನು ಕೊಡುವ ವರಗಳು ನನ್ನ ಗೃಹಕೃತ್ಯಗಳಿಗೆ ನಿಜವಾಗಿಯೂ ಯೋಗ್ಯವಾಗುವುವು. ಶಿವಪೂಜಾಧುರೀಣನಾದ ನಾನೂ ಯೋಗ್ಯನೆಂಬುದು ನಿನಗೆ

ತೇ ತಾವದಸ್ಮದ್ಗೃಹಕರ್ಮಯೋಗ್ಯಾಃ
ಯೋಗ್ಯೇನ ಯೋಗ್ಯಸ್ಯ ಕಿಲಾನ್ವಯೋಽಪಿ ॥೧೭೦॥

ಏತೇ ಪದಾರ್ಥಾಃ ಪ್ರಥಿತಾಸ್ತ್ವದೀಯಾ
ಸ್ತೇ ಶರ್ವ ದೇಯಾಸ್ತವ ದಾನಯೋಗ್ಯಾಃ ।
ಅಹಂ ಶಿವಾರಾಧನಸಕ್ತಚಿತ್ತಃ
ಕೋ ವಾ ಮದನ್ಯೋಽಸ್ತಿ ಸ ದಾನಯೋಗ್ಯಃ ॥೧೭೧॥

ದಾತಾಪಿ ದೇಯೇ ಸತಿ ದಾನಯೋಗ್ಯಂ
ವಿಹಾಯ ಕಸ್ಮೈ ಪ್ರದದಾತಿ ಭಕ್ತ್ಯಾ ।
ವಿದ್ವಾನತೋ ದೇಹಿ ಮಹೇಶ ತಾನ್ಮೇ
ಲೋಕೇ ಮದನ್ಯಸ್ತು ನ ಕೋಽಪಿ ಪಾತ್ರಂ ॥೧೭೨॥

ತಿಳಿದಿದೆ. ಆ ನನ್ನ ಅನುಗ್ರಹದಿಂದ ಬರುವುದೂ ಯೋಗ್ಯವೇ ಆಗಿರುವುದು. ಲೋಕದಲ್ಲಿ ಸಂಬಂಧಗಳು ಸಾಧಾರಣವಾಗಿ ಯೋಗ್ಯರಿಗೇ, ಅಥವ ನೀಚರಿಗೇ ನಡೆಯುವುವು. ಹೀಗಿರುವುದರಿಂದ ಪ್ರಭೋ, ನನಗೆ ದಯವಿಟ್ಟು ನಾನು ಕೇಳಿದ ವರಗಳನ್ನು ದಯಪಾಲಿಸಬೇಕು. ॥೧೭೦॥

ಮಹೇಶ್ವರನೇ, ಈ ಪದಾರ್ಥಗಳೆಲ್ಲವೂ ಪ್ರಸಿದ್ಧವಾಗಿರುವುವು. ಇವೆಲ್ಲವೂ ನಿನ್ನವು. ದೇವ! ಇವು ನೀನು ದಾನಮಾಡಲು ಯೋಗ್ಯವಾದ ಪದಾರ್ಥಗಳು. ನಾನು ಸದಾ ನಿನ್ನ ಆರಾಧನೆಯಲ್ಲಿಯೇ ನೆಟ್ಟಮನಸ್ಸುಳ್ಳವನಾಗಿರುವೆನು. ಹೀಗಿರುವಾಗ ನಿನ್ನ ಭಕ್ತನಾದ ನನಗಿಂತಲೂ ಈ ನಿನ್ನ ದಾನಕ್ಕೆ ಯೋಗ್ಯನಾದ ಪಾತ್ರನೆಲ್ಲಿರುವನು? ॥೧೭೧॥

ದಾನಮಾಡುವ ಅಪೇಕ್ಷೆಯುಂಟಾದಾಗ ದಾನಶೀಲನಾದ ಯಜಮಾನನು ದಾನಯೋಗ್ಯನಾದವನನ್ನು ಬಿಟ್ಟು ಅಪಾತ್ರನಿಗೆ ಭಕ್ತಿಯಿಂದ ದಾನಮಾಡಲು ಹೇಗೆ ಪ್ರಯತ್ನಿಸಿಯಾನು! ಆದುದರಿಂದ ಸರ್ವಜ್ಞನೆನಿಸಿದ ಮಹೇಶ್ವರನೇ! ನನಗಿಂತಲೂ ಸತ್ಪಾತ್ರನು ಇಲ್ಲದಿರುವುದರಿಂದ, ಈ ಸತ್ಪಾತ್ರನಿಗೆ ಆ ವರಗಳನ್ನು ಕೊಟ್ಟು ಸಲಹು. ॥೧೭೨॥

ತ್ವದ್ದತ್ತಮೇತಾದೃಶಭಾಗ್ಯಮೇತ್ಯ
ತ್ವತ್ಪಾದಪೂಜಾನಿರತೋ ಭವಾನಿ ।
ಪ್ರಮಾದಲೇಶೋಽಪಿ ತದಾ ನ ಭಾವಿ
ಭವೇ ಭವೇ ತ್ವತ್ಪದಪೂಜಕಸ್ಯ ॥೧೭೩॥

ಮಹಾಪ್ರಭುಃ ಶಂಭುರುಮಾಸಹಾಯೋ
ದಯಾಮಯೋ ಭೂತಿಮಯೋಽಪಿ ದಾತಾ ।
ಮಾತಾ ಪಿತಾ ಮೇ ಸ ಹಿತಪ್ರದಾತಾ
ಧಾತಾ ವಿಧಾತಾ ಪರಮೋತಸಂದೃಕ್ ॥೧೭೪॥

ಮನ್ಯೇ ಶಂಕರ ದೇವದೇವ ತವ ತದ್ದಾತೃತ್ವಮವ್ಯಾಹತಂ
ತೇನಾಗ್ನಿಪ್ರಮುಖಾನ್ಸುರಾನಪಿ ಸದಾ ತಾನ್ನಸ್ವತಂತ್ರಾನ್ಸ್ವತಃ ।
ಮಹ್ಯಂ ದೇಹಿ ಮದಿಚ್ಛಯಾ ಪರಮಿಮಾ ಕುರ್ವಂತು ಕೃತ್ಯಾನಿ ಮೇ
ಶಕ್ತಿರ್ಯಸ್ಯ ಯಥಾ ಯಥಾಸ್ತಿ ಭಗವನ್ಸರ್ವಸ್ವತಂತ್ರ ಪ್ರಭೋ ॥೧೭೫॥

ನೀನು ಕರುಣಿಸಿದ ಈ ಭಾಗ್ಯವನ್ನು ಸ್ವೀಕರಿಸಿ, ಆ ಐಶ್ವರ್ಯದಿಂದ ಸದಾ ನಿನ್ನ ಪಾದಪೂಜಾಪರಾಯಣನಾಗುವೆನು. ಮಹೇಶ್ವರನೇ ನಿನ್ನ ಪಾದಪೂಜಕನಾದ ನಾನು ಅಲ್ಪಾಪರಾಧವನ್ನೂ ಸಹ ಎಂದೂ ಮಾಡಲಾರೆನು. ಪ್ರತಿಜನ್ಮದಲ್ಲಿಯೂ ನಿನ್ನ ಪಾದಸೇವೆಯನ್ನು ಮಾಡುವ ನನಗೆ ನಿನ್ನಲ್ಲಿ ಅಪರಾಧವು ಹೇಗೆ ತಾನೇ ಉಂಟಾದೀತು? ||೧೭೩||

ಉಮಾಪತಿಯಾದ ಶಂಭುವು ಮಹಾಪ್ರಭುವು, ದಯಾಸ್ವರೂಪನು, ಸಕಲೈಶ್ವರ್ಯಗಳನ್ನೂ ಕೊಡತಕ್ಕವನು. ಮತ್ತು ದಾನಶೀಲನು. ತಾಯಿ, ತಂದೆ, ಬಂಧುಬಳಗ ಮುಂತಾದವರೆಲ್ಲರೂ ನನಗೆ ಆ ಪರಶಿವನೇ ಆಗಿರುವನು. ಧಾತೃವೂ (ಬ್ರಹ್ಮನೂ) ವಿಧಾತೃವೂ ಸಹ ಪರಮೋತಸಂದೃಕ್ (ಪರರ ಹೃದಯವನ್ನರಿಯುವವನೂ) ಎನಿಸಿದ ಆ ಪರಮೇಶ್ವರನೇ ಆಗಿರುವನು. ||೧೭೪||

ಎಲೈ ದೇವದೇವನೆನಿಸಿದ ಶಂಕರನೇ, ನಿನ್ನ ದಾನಮಾಡುವಿಕೆಯು ತಡೆಯಿಲ್ಲದುದು. ಈ ದಾನಮಹಿಮೆಯಿಂದ ಸ್ವತಂತ್ರರಲ್ಲದೇ ನಿನ್ನ ಅಧೀನರಾಗಿರುವ ಆ ಇಂದ್ರಾದಿದೇವತೆಗಳನ್ನೆಲ್ಲಾ ನನಗೆ ಅನುಗ್ರಹಿಸು. ಈ ಅಗ್ನಿಯೇ ಮುಂತಾದ ದೇವತೆಗಳು ನಿನ್ನಿಚ್ಛೆಯಂತೆ ಅವರವರ ಶಕ್ತ್ಯನುಸಾರ ನನ್ನ ಮನೆಯಲ್ಲಿ ಕೆಲಸ

ದೇಯತ್ವೇನ ವಿನಿಶ್ಚಿತಾಸ್ತವ ಸುರಾಃ ಸರ್ವೇಽಪಿ ವೇದೈರಪಿ
ದಾತಾ ತ್ವಂ ತವ ಭಾಗ್ಯಮಪ್ಯವಿಲಯಂ ಭೂಯಃ ಸಮುಜ್ಜೃಂಭತೇ ।
ಅಸ್ಮಾಕಂ ತು ಮಹಾಪ್ರಭುರ್ಭವಾನ್ಯೈವೇತಿ ಚಿತ್ತಂ ಮುಹುಃ
ಸ್ವಾನಂದಾಂಬುಧಿವೀಚಿಕಾತಿಚಪಲಾ ಲೀಲಾವಿಲಾಸಾಸ್ಪದಂ ॥೧೭೬॥

ಇತಿ ಶ್ರೀ ಶಿವರಹಸ್ಯೇ ಹರಾಖ್ಯೇ ತೃತೀಯಾಂಶೇ ಪೂರ್ವಾರ್ಧೇ ಶಿಲಾದತಪೋವರ್ಣನಂ ಶಿಲಾದಕೃತಚಮಕವಿಧಾನಪ್ರಾರ್ಥನಂ ನಾಮ ಚತುಸ್ತ್ರಿಂಶೋಽಧ್ಯಾಯಃ

ವನ್ನು ಮಾಡಿಕೊಂಡಿರಲಿ. ಸರ್ವಸ್ವತಂತ್ರನಾದ ಪ್ರಭುವೇ, ನನ್ನಿಷ್ಟಾರ್ಥವನ್ನು ನೆರವೇರಿಸು. ||೧೭೫||

ಮಹೇಶ್ವರನೇ, ಸಕಲ ದೇವತೆಗಳೂ ನಿನ್ನಿಂದ ದಾನ ಹೊಂದಲು ನಿಶ್ಚಯಿಸಲ್ಪಟ್ಟಿರುವರು. ನೀನೇ ದಾನಮಾಡುವ ಯಜಮಾನನು. ನಿನ್ನ ಭಾಗ್ಯವಾದರೋ ನಾಶರಹಿತವೆನಿಸಿ ಅಪಾರವಾಗಿರುವುದು. ಇದೇ ವಿಷಯವನ್ನೇ ಸಕಲ ವೇದಗಳೂ ಸಾರುತ್ತಿರುವುವು. ನಮಗಾದರೋ ನೀನೇ ಮಹಾಪ್ರಭುವು. ಎಲೈ ಭವಸಂಜ್ಞಕನಾದ ದೇವದೇವನೇ, ನೀನೇ ನಮಗೆ ಸರ್ವಸ್ವವೂ ಎಂದು ಮನಸ್ಸಿನಲ್ಲಿ ಪದೇ ಪದೇ ಧ್ಯಾನಮಾಡುತ್ತಾ, ತದ್ರೂಪವಾದ ಆನಂದವೆಂಬ ಸಮುದ್ರದಲ್ಲಿ ಅತಿ ಚಂಚಲವಾದ ಅಲೆಗಳ ಲೀಲಾವಿಲಾಸಗಳಿಗೆ ಸಿಕ್ಕಿ ನಾವು ಧನ್ಯರಾಗಿರುವೆವು. ||೧೭೬||

ಇಲ್ಲಿಗೆ ಶ್ರೀಶಿವರಹಸ್ಯದ ಹರಸಂಜ್ಞಕವಾದ ಮೂರನೆಯ ಭಾಗದ ಪೂರ್ವಾರ್ಧದಲ್ಲಿ ಶಿಲಾದನ ತಪಸ್ಸಿನ ವರ್ಣನೆ ಮತ್ತು ಆ ಶಿಲಾದನು ಮಾಡಿದ ಚಮಕವಿಧ ಪೂರ್ವಕ ಪ್ರಾರ್ಥನೆಗಳೆಂಬ ಮೂವತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಶಿವರಹಸ್ಯೇ

ತೃತೀಯಾಂಶೇ

ಪೂರ್ವಾರ್ಧೇ

ಪಂಚತ್ರಿಂಶೋಽಧ್ಯಾಯಃ

॥ ರಾಜೋವಾಚ ॥

ಇತಿ ತತ್ಪ್ರಾರ್ಥಿತಾನ್ ಸರ್ವಾನ್ ಚಮಕಪ್ರತಿಪಾದಿತಾನ್ ।
ವರಾನ್ ದದೌ ಮಹಾದಾತಾ ಸ ವದಾನ್ಯಶಿರೋಮಣಿಃ ॥೧॥

ತತಃ ಪರಂ ತು ತತ್ರೈವ ಕುಂಭಯೋನಿಂ ತಪೋನಿಧಿಂ ।
ಶಿವಧ್ಯಾನಸುಧಾಧಾರಾಪರಿವೀತಂ ದದರ್ಶ ಸಃ ॥೨॥

ಮೂವತ್ತೈದನೆಯ ಅಧ್ಯಾಯ

ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಶಿಲಾದನು ಚಮಕಕ್ರಮದಂತೆ ಸ್ತೋತ್ರಮಾಡಲು, ಮಹಾದಾನಿಯೂ, ದಾನಶೌಂಡಶಿರೋಮಣಿಯೂ ಆದ ಪರಮೇಶ್ವರನು ಬಹಳ ಸಂತುಷ್ಟನಾಗಿ, ಆತನು ಬೇಡಿದ ಎಲ್ಲಾ ವರಗಳನ್ನು ಅನುಗ್ರಹಿಸಿದನು. ॥೧॥

ಆ ಶಿಲಾದನಿಗೆ ವರವನ್ನು ಕೊಡುವ ಕಾಲದಲ್ಲಿ ಅಲ್ಲಿಯೇ ಅಗಸ್ತ್ಯ ಮಹರ್ಷಿಯೂ ಇದ್ದನು. ಆತನಿಗೆ ಶಿಲಾದನು ಮಾಡಿದ ಮಹತ್ತರವಾದ ಶಿವ ಸ್ತೋತ್ರವನ್ನು ಕೇಳಿ ಅಮೃತಾಸ್ವಾದವನ್ನು ಮಾಡಿದಷ್ಟು ಆನಂದವಾಗಿತ್ತು. ಆತನು ಮತ್ತೂ ಮನಸ್ಸಿನಲ್ಲಿ ಧ್ಯಾನಾಮೃತವನ್ನು ಅನುಭವಿಸುತ್ತಲೇ ಇರುವಾಗ ಪರಮೇಶ್ವರನ ಕೃಪಾಕಟಾಕ್ಷವು ಆತನ ಕಡೆಗೂ ಬಿದ್ದಿತು. ॥೨॥

ಸೋಽಪಿ ದೃಷ್ಟ್ವಾ ಮಹಾದೇವಂ ಸಾಂಬಂ ಸರ್ವಸುರೋತ್ತಮಂ ।
ಅತಿಸಂತುಷ್ಟಹೃದಯಸ್ತುಷ್ಟಾವ ಪರಮೇಶ್ವರಂ ॥೩॥

ಭರ್ಗೋ ದೇವಸ್ಯ ಸವಿತುರ್ವರೇಣ್ಯಮಿಹ ಧೀಮಹಿ ।
ಸ ಭರ್ಗೋ ಭಗವಾಞ್ಛಂಭುರ್ಧಿಯೋ ಯೋ ನಃ ಪ್ರಚೋದಯಾತ್॥೪॥

ಗಣಗಣಪತಯೇ ನಮೋ ನಮಃ ಸುರಗಣಪತಯೇ ನಮೋ ನಮಃ ।
ಅಗಪತಿಪತಯೇ ನಮೋ ನಮಃ ಪಶುಪತಿಪತಯೇ ನಮೋ ನಮಃ ॥೫॥

ನಮಾಮಿ ದುಂಢಿಂ ಮದಸಿಕ್ತಗಂಡಂ
ಹತಾಘಷಂಡಂ ವಿಧೃತೋರ್ಧ್ವಶುಂಡಂ ।
ಸ್ವಭಕ್ತವಿಘ್ನಾರ್ತಿಹರಂ ಪ್ರಚಂಡಂ
ಪರಾತ್ಪರಂ ಯನ್ಮಹತೋ ಮಹಾಂತಂ ॥೬॥

ಆಗ ಅಗಸ್ತ್ಯನೂ ಸಾಕ್ಷಾತ್ ಪರಮೇಶ್ವರನನ್ನು ನೋಡಿ ತನ್ನ ಮೇಲೆ ಕರುಣಿಸಿದ ಕೃಪಾದೃಷ್ಟಿಯಿಂದ ಅತ್ಯಂತ ಆನಂದಪರವಶನಾಗಿ ಆ ಭಗವಂತನಾದ ಭವಾನೀಪತಿಯನ್ನು ಪರಮ ಭಕ್ತಿಯಿಂದ ಸ್ತುತಿಸಿದನು. ಎಂದು ನಂದೀಶ್ವರನು ಶಿವಗಣಗಳಿಗೆ ಆ ಸ್ತುತಿಕ್ರಮವನ್ನು ವಿವರಿಸಿ ಹೇಳಲಾರಂಭಿಸಿದನು. (ಇದು ವೇದ ಪಾದಸ್ತವ) ॥೩॥

" ದೇವದೇವನಾದ ಸೂರ್ಯನ ಅತ್ಯಂತ ಶ್ರೇಷ್ಠವಾದ ತೇಜಸ್ಸನ್ನು ಧ್ಯಾನಿಸುವೆನು. ಆ ತೇಜಸ್ಸೇ ನಮ್ಮ ಬುದ್ಧಿಯನ್ನು ಸಕಲ ಕರ್ಮಗಳಲ್ಲಿಯೂ ಚೋದನೆ ಮಾಡುವುದಾಗಿದೆ. ಆ ಸೂರ್ಯನ ತೇಜಸ್ಸೇ ಭಗವಂತನಾದ ಪರಮೇಶ್ವರಸ್ವರೂಪ. ॥೪॥

ವಿಘ್ನನಾಶಕನಾದ ಗಣಪತಿಗೆ ಶತಶಃ ನಮಸ್ಕಾರವು. ಆತನೇ ಸಕಲ ಶಿವಗಣಗಳಿಗೂ ಅಧ್ಯಕ್ಷನಾಗಿರುವನು. ಆತನೇ ಸಕಲ ದೇವಗಣಗಳಿಗೂ ಅಧಿಪತಿಯಾಗಿರುತ್ತಾನೆ. ಪರ್ವತರಾಜನಾದ ಹಿಮವಂತನಿಗೂ ಆತನೇ ಸ್ವಾಮಿಯು. ಪಶುಪತಿಯಾದ ಪರಮೇಶ್ವರನ ಪ್ರಾಣಕ್ಕೆ ಅಧಿಪತಿಯಾಗಿರುವನು ಆತನೇ. (ಅತ್ಯಂತ ಪ್ರೀತಿಪಾತ್ರನು) ಅಂತಹ ಗಣಪತಿಗೆ ನಮಸ್ಕರಿಸುವೆನು. ॥೫॥

ಆ ಗಜಾನನು ಸಕಲ ಪಾಪಗಳನ್ನೂ ನಾಶಮಾಡುವವನು. ದುಂಢಿರಾಜ ಎಂಬ ದಿವ್ಯನಾಮದಿಂದ ಆತನು ಶೋಭಿಸುವನು. ಆತನು ತನ್ನ ಭಕ್ತರ ಸಕಲ

ಗಣಾಧಿಪಂ ಗಂಡತಲಾಲಿಕೋಟಿಂ
ಕಿರೀಟಕೋಟಿಧ್ವಜನಿರ್ಜಿತಾಂಬುದೈಃ ।
ಸಂಸೇವಿತಾಂಘ್ರಿಂ ಪ್ರಣಮಾಮಿ ಸರ್ವದಾ
ಕವಿಂ ಕವೀನಾಮುಪಮಶ್ರವಸ್ತಮಂ ॥೭॥

ನಮಸ್ತೇಽಸ್ತು ಗಣೇಶಾಯ ಮಹಾದೇವ ಸುತಾಯ ತೇ ।
ವಿಘ್ನಾಂಧಕಾರಸೂರ್ಯಾಯ ಬ್ರಹ್ಮಣಾಂ ಬ್ರಹ್ಮಣಸ್ಪತೇ ॥೮॥

ಸಿದ್ಧಿಂ ದಾತುಂ ಬುದ್ಧಿವೃದ್ಧಿಂ ಶಕ್ತಂ ನಿತ್ಯಂ ಗೌರೀಪುತ್ರಂ ।
ಸ್ಕಂದಂ ವಂದ್ಯಂ ವಂದೇ ವೇದೈಃ ಸುಬ್ರಹ್ಮಣ್ಯೋಂ ಸುಬ್ರಹ್ಮಣ್ಯೋಂ ॥೯॥

ವಿಘ್ನಗಳನ್ನೂ ಧ್ವಂಸಮಾಡುವನು. ಆತನು ಪ್ರಚಂಡನೂ ಪರಾತ್ಪರನೂ ಆಗಿದ್ದಾನೆ. ಮಹತ್ಪದಾರ್ಥಗಳೆಲ್ಲವುಗಳಿಂದಲೂ ಮಹತ್ತಮನಾಗಿರುವ ಆ ಗಣಪತಿಯನ್ನು ನಮಸ್ಕರಿಸುತ್ತೇನೆ. ॥೬॥

ಆ ಗಣಪತಿಯ ಗಂಡಸ್ಥಲದ ಮದೋದಕವನ್ನು ಪಾನಮಾಡಲು ಭ್ರಮರಗಳು ಮುತ್ತಿ ಮುತ್ತಿ ಅಲಂಕರಿಸುತ್ತಿರುವುವು. ಸಕಲ ದೇವತೆಗಳೂ ಆತನ ಪಾದಪದ್ಮಗಳ ಸೇವೆಯನ್ನು ಮಾಡುವರು. ಆತನು ಮಹಾಕವಿಯು. ಕವಿಗಳೆಲ್ಲರಿಗೂ ಮುಖ್ಯ ಉಪಾಸ್ಯದೈವವೂ ಆಗಿರುವನು. ಇಂಥ ಮಹಿಮಾಶಾಲಿಯಾದ ಗಣಾಧಿಪನನ್ನು ಸರ್ವದಾ ನಮಸ್ಕರಿಸುವೆನು. ॥೭॥

ಆ ಗಣೇಶನಿಗೆ ಮೊದಲು ನಮಸ್ಕಾರ ಮಾಡುವೆನು. ಆ ಗಣಪತಿಯೇ ಪರಮೇಶ್ವರನ ಪ್ರಿಯ ಪುತ್ರನು. ವಿಘ್ನವೆಂಬ ಕಗ್ಗತ್ತಲೆಗೆ ಸೂರ್ಯನಂತಿರುವನು. ಆ ಗಜಾನನನೇ ಬ್ರಾಹ್ಮಣ್ಯಕ್ಕೆ ಅಧಿಪತಿಯಾಗಿ ಬ್ರಹ್ಮಣಸ್ಪತಿ ಎಂದು ವಿಖ್ಯಾತನಾಗಿರುತ್ತಾನೆ. ॥೮॥

ಹಾಗೆಯೇ ಷಣ್ಮುಖಸ್ವಾಮಿಗೂ ನಮಸ್ಕರಿಸುತ್ತೇನೆ. ಆತನು ಸಕಲ ಸಿದ್ಧಿಗಳನ್ನೂ, ಬುದ್ಧಿಯನ್ನೂ, ಐಶ್ವರ್ಯವನ್ನೂ ದಯಪಾಲಿಸತಕ್ಕವನು. ಸಿದ್ಧಿ, ಬುದ್ಧಿಗಳಿಗೆ ಆತನೇ ಅಧಿಪತಿಯು. ಗಿರಿಜೆಯ ಪ್ರಿಯಪುತ್ರನೇ ಆತನು ಅಂತಹ ಸ್ಕಂದ ಸ್ವಾಮಿಯನ್ನು ಸುಬ್ರಹ್ಮಣ್ಯೋಂ ಎಂದು ವೇದಋಕ್ಕಿನಿಂದ ಸ್ತುತಿಸುತ್ತೇನೆ. ॥೯॥

ತಾರಕಾಸುರಸಂಹಾರವಿಹಾರಚತುರಂ ಪರಂ ।
ವಂದೇ ವಂದಾರುಮಂದಾರಂ ಕುಮಾರಂ ಪುಷ್ಕರಸ್ರಜಂ ॥೧೦॥

ಯೇ ವೈದಿಕಸ್ಮಾರ್ತವಿಧಿಪ್ರಯುಕ್ತಕ್ರಿಯಾಜಲಕ್ಷಾಲನಪೂತಚಿತ್ತಾಃ ।
ವಿಭೂತಿರುದ್ರಾಕ್ಷವಿಭೂಷಣಾಸ್ತೇ ಶಮೇನ ಶಾಂತಾಃ ಶಿವಮಾಚರಂತಿ॥೧೧॥

ಅಕಸ್ಮಾದಸ್ಮದೀಯೇನ ಭಾಗ್ಯೇನ ಸುಖದೇನ ಮೇ ।
ಸ್ಮರಾರಾತಿಸ್ಮೃತಿಸ್ತಾವದಭ್ರಾದ್ವೃಷ್ಟಿರಿವಾಜನಿ ॥೧೨॥

ಸುರಾಪಾರಶಿರೋರತ್ನಪ್ರಭಾನೀರಾಜಿತಾಯ ತೇ ।
ಮಹಾದೇವಾಯ ಶರ್ವಾಯ ಸದಸಸ್ಪತಯೇ ನಮಃ ॥೧೩॥

ಆ ಷಣ್ಮುಖಸ್ವಾಮಿಯು ತಾರಕಾಸುರನ ಸಂಹಾರವೆಂಬ ವಿಹಾರದಲ್ಲಿ ಅತ್ಯಂತ ಚತುರನು. ಆತನು ಭಕ್ತಜನರಿಗೆ ಕಲ್ಪವೃಕ್ಷಸ್ವರೂಪನು. ಆ ಕುಮಾರ ಸ್ವಾಮಿಯು ದಿವ್ಯ ಕಮಲಹಾರದಿಂದ ವಿರಾಜಿಸುವನು. ಅಂಥವನನ್ನು ನಾನು ಭಕ್ತಿಯಿಂದ ವಂದಿಸುವೆನು. ||೧೦||

ವೈದಿಕ ಮತ್ತು ಸ್ಮಾರ್ತ ಕರ್ಮಗಳ ಅನುಷ್ಠಾನದಿಂದ ಯಾರ ಮನಸ್ಸು ನೀರಿನಿಂದ ತೊಳೆದಂತೆ ಶುದ್ಧವಾಗಿರುತ್ತದೆಯೋ ಅಂತಹವರು ಶಾಂತರಾಗಿರುತ್ತಾರೆ. ಆ ಶಮವೃತ್ತಿಯುಳ್ಳವರು ವಿಭೂತಿ ಮತ್ತು ರುದ್ರಾಕ್ಷಮಾಲೆಗಳನ್ನು ಧರಿಸಿಕೊಂಡು ಶಾಂತಮನಸ್ಕರಾಗಿ ಶಿವಾರಾಧನೆ ಮಾಡುವರು. ||೧೧||

ನನ್ನ ಯಾವ ಪುಣ್ಯಪರಿಪಾಕದಿಂದಲೋ ಇಂದು ನನಗೆ ಪರಮೇಶ್ವರನ ಸ್ತೋತ್ರಸ್ಮರಣೆಯು ಅತಿಶಯವಾಗಿ ಬರುತ್ತಿದೆ. ಇದು ನನ್ನ ಅತಿಶಯ ಭಾಗ್ಯವೇ ಸರಿ. ಈದಿನ ಪರಮೇಶ್ವರ ಕೃಪೆಯು ನನ್ನ ಮೇಲೆ, ಮೋಡದಿಂದ ಮಳೆ ಬೀಳುವಂತೆ ವರ್ಷಿಸಿದೆ. ||೧೨||

ಹೇ ಪರಮೇಶ್ವರ, ನೀನು ಸಕಲ ದೇವತೆಗಳ ಸಭೆಗೆ ಅಧ್ಯಕ್ಷನಾಗಿರುವೆ. ನಿನ್ನನ್ನು ಸಕಲ ದೇವತೆಗಳೂ ನಮಸ್ಕರಿಸುವಾಗ ತಮ್ಮ ತಮ್ಮ ಕಿರೀಟಗಳ ಮಣಿಯ ಪ್ರಭೆಯಿಂದ ನಿನಗೆ ಆರತಿಮಾಡುವರು. ಮಹಾದೇವನೆನಿಸಿದ ನಿನಗೆ ನಮಸ್ಕಾರ. ||೧೩||

ಭೂತಜಾತಸಮುತ್ಪತ್ತಿಹೇತುಭೂತಾಯ ಸರ್ವದಾ ।
ಸರ್ವದೇವಾಭಿವಂದ್ಯಾಯ ಭೂತಾನಾಂ ಪತಯೇ ನಮಃ ॥೧೪॥

ಸರ್ವಾಸುರಾಧಿದೇವಾಯ ದೇವಾರಾಧ್ಯಪದಾಯ ತೇ ।
ದೇವೋತ್ತಮೋತ್ತಮಾಯಾಶು ಪಶೂನಾಂ ಪತಯೇ ನಮಃ ॥೧೫॥

ಕಾಲಾಂತಕಾಯ ಶರ್ವಾಯ ಮಹಾಮೃತ್ಯುಂಜಯಾಯ ಚ ।
ಭೂತಸ್ವರ್ಗಾಪವರ್ಗಾಯ ಜಗತಾಂ ಪತಯೇ ನಮಃ ॥೧೬॥

ಮುನೀಂದ್ರಸುಂದರಾಪಾರಮನಃಪದ್ಮಾಶ್ರಯಾಯ ಚ ।
ತ್ರಿನೇತ್ರಾಯ ನಮಸ್ತುಭ್ಯಂ ಕ್ಷೇತ್ರಾಣಾಂ ಪತಯೇ ನಮಃ ॥೧೭॥

ನಮಸ್ತ್ರಿಲೋಕನಾಥಾಯ ನಮಃ ಪರತರಾಯ ತೇ ।
ನಮಶ್ಶಾಂತಾಯ ಭಗವನ್ನನ್ನಾನಾಂ ಪತಯೇ ನಮಃ ॥೧೮॥

ಪ್ರಪಂಚದ ಪಂಚಭೂತಗಳ ಉತ್ಪತ್ತಿಗೂ ನೀನೇ ಮುಖ್ಯ ಕಾರಣನು. ಅದಕ್ಕಾಗಿಯೇ ನೀನು ಭೂತಪತಿಯೆಂದೂ ದೇವಾದಿದೇವನೆಂದೂ ವಿಖ್ಯಾತನಾಗಿದ್ದೀಯೆ. ||೧೪||

ಸಕಲ ದೇವತೆಗಳಿಗಿಂತಲೂ ನೀನು ಅತ್ಯಂತ ಶ್ರೇಷ್ಠತಮನು. ಅದಕ್ಕೇ ದೇವತೆಗಳು ನಿನ್ನನ್ನು ತಮಗೆ ಅಧಿಪತಿಯನ್ನಾಗಿ ಮಾಡಿಕೊಂಡು ಆರಾಧಿಸುವರು. ನೀನು ಪಶುಸದೃಶರಾದ ಸಕಲ ಜೀವಿಗಳಿಗೂ ಒಡೆಯನಲ್ಲವೆ? ||೧೫||

ಮಹಾಕಾಲನಿಗೂ ನೀನು ಅಂತಕನಾಗಿದ್ದೀಯೆ. ನೀನು ಮಹಾಮೃತ್ಯುವನ್ನೂ ಜಯಿಸಿರುತ್ತೀಯೆ. ಸಕಲ ಭೂತಗಳಿಗೂ ಸ್ವರ್ಗವನ್ನೂ ಮೋಕ್ಷವನ್ನೂ ನೀನೇ ಕೊಡುವವನಿದ್ದೀಯೆ. ಅದರಿಂದಲೇ ನೀನು ಜಗತ್ಪತಿಯೆನಿಸಿರುವೆ. ಇಂತಹ ನಿನಗೆ ವಂದನೆ. ||೧೬||

ನೀನು ಸಕಲ ಕ್ಷೇತ್ರಗಳಿಗೂ ಅಧಿಪತಿಯಾದ ಕ್ಷೇತ್ರಜ್ಞನಾಗಿರುವೆ. ಮುನಿಗಳ ಮನಸ್ಸೆಂಬ ಸುಂದರ ಕಮಲವೇ ನಿನ್ನ ಆವಾಸಸ್ಥಾನವಾಗಿರುವುದು. ನೀನು ತ್ರಿನೇತ್ರಗಳಿಂದ ವಿರಾಜಿಸುತ್ತಿರುವೆ. ||೧೭||

ನೀನು ಮೂರು ಲೋಕಗಳಿಗೂ ಅಧಿಪತಿಯಾಗಿರುವೆ. ನೀನು ಪರತತ್ವಕ್ಕೂ ಮೀರಿದ ಪರಾಪರ ತತ್ತ್ವನೆನಿಸಿರುವೆ. ಹೇ ಶಾಂತಸ್ವರೂಪನೇ, ನೀನೇ ಸಕಲ ಆಹಾರವಸ್ತುಗಳಿಗೂ ಅಧಿಪತಿಯಲ್ಲವೆ! ||೧೮||

ಆರ್ಯಾಚಿತ್ತಪ್ರವಿಷ್ಟಾಯ ಪ್ರಹೃಷ್ಟಾಯ ಸುರೇಷ್ವಪಿ ।
ಪ್ರಕೃಷ್ಟಾಯಾತಿಪುಷ್ಟಾಯ ಪುಷ್ಟಾನಾಂ ಪತಯೇ ನಮಃ ॥೧೯॥

ಮಹಾಭೂತಾಧಿಪತಯೇ ಭೂತಾಭೀತಿಪ್ರದಾಯ ಚ ।
ಭೂತಿಪ್ರದಪ್ರಭೂತಾಯ ದಿಶಾಂ ಚ ಪತಯೇ ನಮಃ ॥೨೦॥

ವಿಶ್ವಮಾಯಾವಿದೂರಾಯ ವಿಶ್ವಾವಿಶ್ವಪ್ರಿಯಾಯ ಚ ।
ವಿಶ್ವೇಶ್ವರಾಯ ಸೋಮಾಯ ವಿಶ್ವರೂಪಾಯ ವೈ ನಮಃ ॥೨೧॥

ಘೋರತತ್ಪುರುಷೇಶಾನ ವಾಮದೇವ ಸದಾಶಿವ ।
ಅವಿದ್ಯಾಧ್ವಾಂತಸೂರ್ಯಾಯ ಸದ್ಯೋಜಾತಾಯ ವೈ ನಮಃ ॥೨೨॥

ಭಗವತಿಯಾದ ಗಿರಿಜೆಯ ಮನಸ್ಸಿನಲ್ಲಿ ಸ್ಥಾನ ಪಡೆದಿರುವವನು ನೀನೊಬ್ಬನೇ. ದೇವತೆಗಳಲ್ಲಿ ಕೃಪಾದೃಷ್ಟಿಯನ್ನು ನೀನೇ ಬೀರುವವನು. ನೀನೇ ಸರ್ವಶ್ರೇಷ್ಠನು. ನೀನು ಪರಾಕ್ರಮಶಾಲಿಗಳಿಗೆಲ್ಲರಿಗೂ ಅಧಿಪತಿಯಾದುದರಿಂದಲೇ ಸರ್ವಶಕ್ತನೆನಿಸಿರುವೆ. ॥೧೯॥

ನೀನು ಪೃಥಿವ್ಯಾದಿ ಸಕಲ ಮಹಾಭೂತಗಳಿಗೂ ಅಧಿಪತಿಯು. ಆದುದರಿಂದಲೇ ಆ ಭೌತಿಕವಾದ ತಾಪಭೀತಿಯನ್ನು ಪರಿಹಾರಮಾಡಲು ನೀನೇ ಶಕ್ತನಿರುವೆ. ನೀನು ಸಕಲವಾದ ಐಶ್ವರ್ಯವನ್ನು ಅನುಗ್ರಹಿಸುವುದರಲ್ಲಿ ಅಗ್ರಗಣ್ಯನೆಂದು ವಿಖ್ಯಾತನಾಗಿದ್ದೀಯೆ. ನೀನೇ ಸಕಲ ದಿಕ್ಕುಗಳಿಗೂ ಅಧಿಪತಿಯು. ॥೨೦॥

ನೀನು ಈ ಪ್ರಪಂಚಕ್ಕೆ ಪ್ರಕೃತಿಯಾದ ಮಾಯೆಯ ವ್ಯಾಪ್ತಿಗೆ ಒಳಗಾಗಿರುವವನಲ್ಲ. ಆದರೂ ನಿನಗೆ ಈ ವಿಶ್ವವಿಷಯದಲ್ಲಿ ಕೌತುಕವಿರುತ್ತದೆ. ಆದುದರಿಂದಲೇ ನೀನು ಈ ಪ್ರಪಂಚಕ್ಕೆ ಅಧಿಪತಿ ಎಂದೂ ವಿಶ್ವರೂಪನೆಂದೂ ಸಿದ್ಧವಾಗುವುದು. ॥೨೧॥

ಶಂಕರನೇ, ನಿನ್ನ ಐದು ಮುಖಗಳಿಗೂ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ನಾಮಧೇಯಗಳಿರುತ್ತವೆ. ನಿನ್ನ ಪೂರ್ವದಿಙ್ಮುಖವಾದ ಸದ್ಯೋಜಾತಮೂರ್ತಿಯು ಮನಸ್ಸಿನಲ್ಲಿ ಆವಿರ್ಭವಿಸಿದೊಡನೆಯೇ,

ನಮೋ ಭರ್ಗಾಯ ಭೀಮಾಯ ಭಗನೇತ್ರಹರಾಯ ತೇ ।
ದೇವತಾಸಾರ್ವಭೌಮಾಯ ನಮೋ ರುದ್ರಾಯ ಮೀಢುಷೇ ॥೨೩॥

ಸಹಸ್ರಶಿರಸೇ ತುಭ್ಯಂ ಸಹಸ್ರಚರಣಾಯ ಚ ।
ನಮಸ್ಸಹಸ್ರಹಸ್ತಾಯ ಸಹಸ್ರಾಕ್ಷಾಯ ಮೀಢುಷೇ ॥೨೪॥

ಕಾಲಭಾಸುರನೇತ್ರಾಗ್ನಿಸಂದಗ್ಧತ್ರಿಪುರಾಯ ತೇ ।
ನಮಸ್ಸುಂದರರೂಪಾಯ ಸುಮೃಡೀಕಾಯ ಮೀಢುಷೇ ॥೨೫॥

ಸಂಸಾರಘೋರರೋಗಾರ್ತಿನಿವಾರಣಕರಾಯ ತೇ ।
ನಮಸ್ತುಭ್ಯಮಷಾಢಾಯ ಸಹಮಾನಾಯ ಮೀಢುಷೇ ॥೨೬॥

ತತ್ಕಾಲದಲ್ಲಿ ಸೂರ್ಯನು ಉದಯಿಸಲು ಕತ್ತಲೆಯು ಮಾಯವಾಗುವಂತೆ ಅಜ್ಞಾನ ರಾಶಿಯು ನಾಶಹೊಂದುವುದು. ಆದರಿಂದಲೇ ಆ ನಿನ್ನ ಮುಖಕ್ಕೆ ಸದ್ಯೋಜಾತ ಎಂದು ಹೆಸರು ಬಂದಿತು. ||೨೨||

ನೀನು ತೇಜೋರೂಪನಾಗಿದ್ದಿಯೆ. ಹಾಗೂ ಪಾಪಿಗಳಿಗೆ ಭಯಂಕರನಾಗಿದ್ದೀಯೆ. ಸೂರ್ಯನೇ ನಿನಗೆ ನೇತ್ರಸ್ವರೂಪನಾಗಿರುವನು. ಭಗದೇವತೆಯ ಕಣ್ಣನ್ನು ದಕ್ಷಯಜ್ಞದಲ್ಲಿ ನಾಶಮಾಡಿದವನು. ಸಕಲ ದೇವತೆಗಳಿಗೂ ನೀನೇ ಸಾರ್ವಭೌಮನು. ನೀನೇ ಪ್ರಳಯಕಾಲದ ಮಹಾರುದ್ರನೂ ಆಗಿರುತ್ತೀಯೆ. ||೨೩||

ನಿನ್ನ ವಿಶ್ವರೂಪವನ್ನು ಎಷ್ಟೆಂದು ಹೇಳಲಿ. ನಿನಗೆ ಸಹಸ್ರ ಶಿರಸ್ಸುಗಳು, ಸಹಸ್ರ ಪಾದಗಳು, ಸಹಸ್ರ ಕರಗಳು, ಸಹಸ್ರ ನೇತ್ರಗಳೂ ಇರುತ್ತವೆ. ||೨೪||

ನಿನ್ನ ಲಲಾಟಾಗ್ನಿಯು ಅತ್ಯಂತ ಉಜ್ಜ್ವಲವಾಗಿರುತ್ತದೆ. ನೀನು ಆ ನೇತ್ರಾಗ್ನಿಯಿಂದ ಶತ್ರುಗಳಾದ ತ್ರಿಪುರರನ್ನೆಲ್ಲಾ ಧ್ವಂಸಮಾಡಿ ಭಸ್ಮಮಾಡಿದ್ದೀಯೆ. ನಿನ್ನ ಆಕಾರವು ಅತ್ಯಂತ ಸುಂದರವೂ ಸೌಮ್ಯವೂ ಆಗಿರುತ್ತದೆ. ||೨೫||

ಸಂಸಾರವೆಂಬುದೊಂದು ಮಹಾರೋಗದ ಸಂಕಟವಾಗಿರುತ್ತದೆ. ನೀನೇ ಅದನ್ನು ನಾಶಮಾಡಲೂ ಮತ್ತು ಪರಿಹರಿಸಲೂ ಶಕ್ತನಾಗಿದ್ದೀಯೆ. ನೀನು ಯಾವ ಶತ್ರುವಿಗೂ ಸೋಲತಕ್ಕವನಲ್ಲ. ಮತ್ತು ಮಹಾಕ್ಷಮಾಶೀಲನಾಗಿ ಶತ್ರುಗಳನ್ನು ಲೆಕ್ಕಿಸುವವನಲ್ಲ. ||೨೬||

ಸಮಸ್ತವೇದವೇದಾಂತಬಂದಿವಂದಿತಮವ್ಯಯಂ ।
ಭವ್ಯಸ್ವರೂಪಂ ತಂ ವಂದೇ ಸದಸಸ್ಪತಿಮದ್ಭುತಂ ॥೨೭॥

ಸುರಾಸುರಗಣಾರಾಧ್ಯಂ ದುರಾರಾಧ್ಯಂ ದುರಾತ್ಮನಾಂ ।
ಪರಮಾನಂದದಂ ವಂದೇ ಸುಗಂಧಿಂ ಪುಷ್ಟಿವರ್ಧನಂ ॥೨೮॥

ತಮೇವ ಭಕ್ತ್ಯಾ ಹೃದಿ ಭಾವಯಾಮೋ
ಭವಂ ಭವಾನೀರಮಣಂ ಭಜಾಮಃ ।
ಭವಾದಿನಾಮಾನಿ ಮುದಾ ವದಾಮೋ
ಯತ್ಸ್ಮಿನ್ ಪ್ರಸೂತಾ ಜಗತಃ ಪ್ರಸೂತೀ ॥೨೯॥

ಗೌರೀವಿಹಾರಪ್ರವರಪ್ರಜಾತ
ಸ್ವೇದೋದಕಾಮೋದವಿಜೃಂಭಿತೇನ ।
ಉಮಾಸಹಾಯಸ್ಸಮಯಸ್ಸ ಭೂಯ
ಸ್ತೋಯೇನ ಜೀವಾನ್ಸ್ಯಸಸರ್ಜ ಭೂಮ್ಯಾಂ ॥೩೦॥

ಅಖಿಲ ವೇದಗಳೂ, ಉಪನಿಷತ್ತುಗಳೂ ನಿನ್ನ ಸ್ತುತಿಪಾಠಕರು. ಅವು ನಿನ್ನನ್ನು ನಾಶರಹಿತನೆಂದು ಸದಾ ಸ್ತುತಿಸುತ್ತಾ ನಿನ್ನನ್ನು ವಂದಿಸುವುವು. ನಿನ್ನ ಸ್ವರೂಪವು ಅತ್ಯಂತ ಮನೋಹರವಾಗಿರುವುದು, ಅದ್ಭುತವಾಗಿರುವುದು. ನೀನೇ ಸಕಲ ಸಭೆಗಳಿಗೂ ಅಧ್ಯಕ್ಷನು. ॥೨೭॥

ನಿನ್ನನ್ನೇ ದೇವತೆಗಳೂ ದಾನವರೂ ಪೂಜಿಸುವರು. ದುಷ್ಟಾತ್ಮರಿಗೆ ನಿನ್ನನ್ನು ಆರಾಧಿಸಲು ಅಸಾಧ್ಯವಾಗಿರುವುದು. ನೀನು ನಿನ್ನ ಭಕ್ತರಿಗೆ ಪರಮಾನಂದವನ್ನೇ ಅನುಗ್ರಹಿಸುವೆ. ನೀನು ಪರಿಮಳಸಂಪನ್ನನು. ಮತ್ತು ಸಕಲರಿಗೂ ಶಕ್ತಿವರ್ಧಕನು ಸಹ ಆಗಿರುವೆ. ॥೨೮॥

ಆ ಭವಾನೀಪತಿಯನ್ನೇ ನಾವು ಸದಾ ಭಕ್ತಿಯಿಂದ ಮನಸ್ಸಿನಲ್ಲಿ ಧ್ಯಾನ ಮಾಡುತ್ತೇವೆ. ಆತನ ನಾಮಾವಳಿಯಾದ ಭವಶಬ್ದವೇ ಮೊದಲಾದವುಗಳನ್ನು ಹೇಳುತ್ತಾ ಭಜನೆಯನ್ನು ಮಾಡುತ್ತೇವೆ. ಆ ಪರಶಿವನಿಂದಲೇ ಈ ಚರಾಚರಾತ್ಮಕ ವಾದ ಜಗತ್ತಿನ ಉತ್ಪತ್ತಿಯು ಉಂಟಾಗಿರುತ್ತದೆ. ॥೨೯॥

ಆ ಉಮಾರಮಣನು ಕ್ರೀಡಾಸಮಯದಲ್ಲಿ ಗಿರಿಜೆಯ ಉದ್ದಾಮವಾದ ವಿಹಾರದಲ್ಲಿ ಆಸಕ್ತನಾಗುವನು. ಆಗ ಆತನಿಗೆ ರತಿಶ್ರಮದಿಂದ ಬೆವರು ಉಂಟಾಗು

ಯ ಏವ ತಾವದ್ಗಿರಿರಾಜಕನ್ಯಾ
ವಿನ್ಯಸ್ತಹಸ್ತಸ್ತನಮುಸ್ತಹಸ್ತಃ ।
ಸ ಏವ ತಾವದ್ವ್ಯಸಸರ್ಜ ತಸ್ಯಾಂ
ಯದೋಷಧೀಭಿಃ ಪುರುಷಾನ್ ಪಶೂಂಶ್ಚ ॥೩೦॥

ಪ್ರದೋಷಕಾಲೀನಶಿವಾರ್ಚನೇನ
ಯಸ್ಸರ್ವದೋಷಾಪಹರೋ ಹರೋ ನಃ ।
ಗೌರೀವಿಹಾರಾದರತಸ್ಸಸರ್ಜ
ಯದೇಷ ಭೂತಾನಿ ಚರಾಚರಾಣಿ ॥೩೨॥

ಫಾಲಾಕ್ಷಂ ದಕ್ಷಯಜ್ಞಾದಿಶಿಕ್ಷಾದಕ್ಷಾಕ್ಷಿಲಕ್ಷಿತಂ ।
ವಂದೇ ವಂದೇ ವಿರೂಪಾಕ್ಷಮಕ್ಷರಂ ಪರಮಂ ಪದಂ ॥೩೩॥

ತ್ತದೆ. ಆ ಬೆವರಿನ ಜಲವು ಪರಿಮಳವಾಗಿರುತ್ತದೆ. ಇಂಥ ಸುಗಂಧಸ್ವೇದ ಜಲವು ಸಮುದ್ರವೇ ಮುಂತಾದ ಜಲರಾಶಿಗೆ ಸೇರಿ ಅದೂ ಪರಿಮಳವೂ ಪವಿತ್ರವೂ ಆಗುವುದು. ಅಂಥ ಜಲರಾಶಿಯಲ್ಲಿರತಕ್ಕ ಜೀವರಾಶಿಯನ್ನೇ ಪುನಃ ಭೂಮಿಯ ಮೇಲೆ ಜೀವಿಸಬಲ್ಲ ಪ್ರಾಣಿಯನ್ನಾಗಿ ಪರಿಣಾಮಗೊಳಿಸಿ ಸೃಷ್ಟಿಸುವನು. ॥೩೦॥

ರತಿಕ್ರೀಡಾಸಮಯದಲ್ಲಿ ಪರಮೇಶ್ವರನ ಯಾವ ಹಸ್ತವು ಗಿರಿಜೆಯ ಸ್ತನಮಂಡಲದಲ್ಲಿ ಓಡಾಡುವುದೋ, ಅದೇ ಹಸ್ತವು ಈ ಭೂಮಿಯಲ್ಲಿ ಓಷಧಿ ವನಸ್ಪತಿಗಳನ್ನೂ, ಜನರನ್ನೂ, ಚತುಷ್ಪಾತ್ ಪ್ರಾಣಿಗಳನ್ನೂ ಸೃಷ್ಟಿಸುವನು ಮತ್ತು ಪೋಷಿಸುವನು. ॥೩೧॥

ಪ್ರದೋಷ ಸಮಯದಲ್ಲಿ ಶಿವಾರ್ಚನೆಯನ್ನು ಮಾಡಿದರೆ, ಆ ಪರಮೇಶ್ವರನು ಸಕಲ ದೋಷಗಳನ್ನೂ ಪಾಪಗಳನ್ನೂ ನಾಶಮಾಡುವನು. ಅದೇ ಶಿವನು ಈ ಚರಾಚರವಸ್ತುಗಳನ್ನೂ ಪಂಚಭೂತಗಳನ್ನೂ ಸೃಷ್ಟಿಸಿರುವನು. ಏತಕ್ಕೆಂದರೆ ಗಿರಿಜೆಯೊಡನೆ ವಿಹರಿಸುವಾಗ ವಿಲಾಸಕ್ಕಾಗಿಯೂ ಕುತೂಹಲಕ್ಕಾಗಿಯೂ ಇದು ಉಪಯುಕ್ತವಾಗುವುದು. ॥೩೨॥

ಆ ಪರಮೇಶ್ವರನು ಲಲಾಟನೇತ್ರವುಳ್ಳವನು. ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಿ ಆತನಿಗೆ ಬುದ್ಧಿಕಲಿಸಿದವನು. ಕೋಪಪಾತ್ರರಾದವರಿಗೆ ಆತನ ಕಣ್ಣುಗಳು ಅತ್ಯಂತ ಭಯಂಕರಗಳಾಗಿರುವುವು. ಆತನ ಸ್ಥಾನವು ನಾಶರಹಿತವೂ

ಶಿವಪ್ರಭಾವಶ್ರವಣೋತ್ಸುಕಾಯ ಶಿವಾರ್ಚನಾನಂದವಿಜೃಂಭಿತಾಯ।
ಶಿವಸ್ತವಾಖ್ಯಾನವಿವರ್ಧನಾಯ ಶಿವಪ್ರಜಾಯೈ ಶಿವಮಸ್ತು ಮಹ್ಯಂ ॥೩೪॥

ಮಹಾಪ್ರಭುಶ್ಶಂಭುರುಮಾಸಹಾಯೋ
ದಯಾಮಯೋ ಭೂತಿಮಯೋಽಮಯೋಽಪಿ।
ಮಾತಾಪಿತಾ ಮೇ ಸ ಹಿತಪ್ರದಾತಾ
ಧಾತಾ ವಿಧಾತಾ ಪರಮೇತಸಂದೃಕ್ ॥೩೫॥

ಮಂಗಲಾಲಂಕೃತಾರ್ಧಾಂಗಮರ್ಧೇಂದುಲಲಿತಾಲಕಂ।
ಅರ್ಧನಾರೀಶ್ವರಂ ವಂದೇ ಪುರುಷಂ ಕೃಷ್ಣಪಿಂಗಲಂ ॥೩೬॥

ಎಲ್ಲಕ್ಕಿಂತಲೂ ಶ್ರೇಷ್ಠವೂ ಆಗಿರುತ್ತದೆ. ಅಂಥ ಪರಮೇಶ್ವರನನ್ನು ಶತಶಃ ನಮಸ್ಕರಿಸುತ್ತೇನೆ. ॥೩೩॥

ನಾನು ಸದಾ ಶಿವಮಹಿಮೆಯನ್ನು ಕೇಳಲು ಕುತೂಹಲಿಯಾಗಿರುತ್ತೇನೆ. ಶಿವಪೂಜೆಯಿಂದಲೇ ನನ್ನ ಏಳಿಗೆ ಆಗುತ್ತಿರುವುದು. ಶಿವಸ್ತೋತ್ರದಿಂದಲೇ ನಾನು ಅಭಿವೃದ್ಧಿಹೊಂದುತ್ತಿರುವೆನು. ಇಂತಹ ನನಗೂ ನನ್ನ ಸಂತತಿಗೂ ಸರ್ವದಾ ಮಂಗಳವಿರಲಿ. ॥೩೪॥

ಆ ಶಂಭುವು ಮಹಾಪ್ರಭುವಾಗಿದ್ದಾನೆ. ಆತನೇ ಭಗವತಿಯಾದ ಗಿರಿಜೆಗೆ ರಮಣನು. ಆತನು ಅತ್ಯಂತ ದಯಾಮಯನು, ವಿಭೂತಿಪುರುಷನು, ಮತ್ತು ಪ್ರಣವಸ್ವರೂಪನೂ ಆಗಿದ್ದಾನೆ. ಆತನೇ ನನಗೆ ತಾಯಿ, ತಂದೆ, ಸೃಷ್ಟಿಕರ್ತನು, ಕರ್ಮವಿಧಾಯಕನು, ಭಾಗ್ಯದಾತನೂ ಆತನೇ ಆಗಿರುವನು. ಆತನು ಸರ್ವಸಮ ದರ್ಶಿ. ಆತನಿಗೆ ಯಾರಲ್ಲಿಯೂ ಪಕ್ಷಪಾತವಿರುವುದಿಲ್ಲ. ॥೩೫॥

ಆ ಪರಮೇಶ್ವರನು ಅರ್ಧನಾರೀಶ್ವರನಾಗಿದ್ದಾನೆ. ಆದುದರಿಂದಲೇ ಅರ್ಧ ಶರೀರವು ಮಂಗಲದ್ರವ್ಯಗಳಿಂದ ಅಲಂಕೃತವಾಗಿದೆ. ಈ ಸ್ತ್ರೀಪುರುಷಸಂಯೋಗ ದಿಂದ ಅಪೂರ್ವವಾದ ಕೃಷ್ಣಪಿಂಗಲವರ್ಣದ ಕಾಂತಿಯು ಪ್ರಕಾಶಿಸುತ್ತದೆ. ಆತನು ತನ್ನ ಲಲಿತವಾದ ಜಡೆಯಲ್ಲಿ ಅರ್ಧಚಂದ್ರನನ್ನು ಧರಿಸಿರುತ್ತಾನೆ. ಇಂತಹ ಪ್ರಕೃತಿ ಯನ್ನು ಮೀರಿದ ಪುರುಷನನ್ನು ನಮಸ್ಕರಿಸುತ್ತೇನೆ. ॥೩೬॥

ಜಗನ್ನಿರ್ಮಾಣಚಾತುರ್ಯಮರ್ಯಾದಾಸೇತುಸೇವಿತಂ ।
ವಂದೇ ಶಾಂತಮುಮಾಕಾಂತಂ ಜಗತಸ್ತಸ್ಥುಷಸ್ಪತಿಂ ॥೩೭॥

ಪುರಾದಿಕಾಮ[1]ರಾರಾತಿಸಂಹಾರಚತುರಂ ಪರಂ ।
ಪರಾತ್ಪರತರಂ ವಂದೇ ಜೇತಾರಮಪರಾಜಿತಂ ॥೩೮॥

ತಂ ವಂದೇ ಸಚ್ಚಿದಾನಂದಮದ್ವೈತಮತಿಸುಂದರಂ ।
ಲೀಲಯಾ ವಿದಧೇ ಯೋಽಯಮಿಮಾನಿ ತ್ರೀಣಿ ವಿಷ್ಟಪಾ ॥೩೯॥

ತಂ ವಂದೇ ನಿತ್ಯಸರ್ವಜ್ಞಂ ನಿತ್ಯವಿಜ್ಞಾನಸಾಗರಂ ।
ಯತೋ ಯಜೂಂಷಿ ಜಾತಾನಿ ಋಚಸ್ಸಾಮಾನಿ ಜಜ್ಞಿರೇ ॥೪೦॥

ಈ ಉಮಾಕಾಂತನು ಪ್ರತ್ಯಕ್ಷವಾದ ಉಚ್ಚಾವಚ ಪ್ರಪಂಚವನ್ನು ಸೃಷ್ಟಿಸುವ ನೈಪುಣ್ಯದ ಚರಮಸೀಮೆಯನ್ನು ಕಂಡುಹಿಡಿದಿರುವನು. ಈ ಜಗತ್ತಿನ ಅಂತರ್ಭಾಗದಲ್ಲಿ ಅಧ್ಯಾಸೀನನಾಗಿರುವನು, ಅದರಿಂದಲೇ ಆತನು ಸರ್ವಾಂತರ್ಯಾಮಿಯೂ, ಶಾಂತಮೂರ್ತಿಯೂ ಆಗಿರುತ್ತಾನೆ. ॥೩೭॥

ಸರ್ವವಿಜಯಿಗಳೆಂದು ದೃಪ್ತರಾದ ತ್ರಿಪುರರನ್ನೂ ಮನ್ಮಥನನ್ನೂ ಸಂಹರಿಸಿದವನು ಪರಮೇಶ್ವರನೇ. ಆತನೇ ವಿಜಗೀಷುವು. ಮತ್ತು ಯಾರಿಂದಲೂ ಪರಾಭವವಿಲ್ಲದವನು. ॥೩೮॥

ಆ ಪರಮೇಶ್ವರನು ಸೋಮಸುಂದರನಾಗಿದ್ದಾನೆ. ಆತನೇ ದ್ವಿತೀಯ ವಸ್ತುರಹಿತನಾದ ಸಚ್ಚಿದಾನಂದ ಪರಬ್ರಹ್ಮಸ್ವರೂಪನು. ಆತನು ವಿಲಾಸಾರ್ಥವಾಗಿ ಈ ಮೂರುಲೋಕಗಳನ್ನೂ ಸೃಜಿಸಿರುವನು. ॥೩೯॥

ಆ ಶಂಕರನು ಸರ್ವಜ್ಞಸ್ವರೂಪನು ಮತ್ತು ನಿತ್ಯಜ್ಞಾನಿಯೂ ಆಗಿರುವನು. ಆತನ ಸ್ವರೂಪವೇ ಋಗ್ವೇದ, ಯಜುರ್ವೇದ ಸಾಮವೇದ ಎಂದು ವೇದತ್ರಯರೂಪವಾಗಿರುವುದು. ॥೪೦॥

---

1. ಮನ್ಮಥಾ

ಭವಂತಮೇವ ಸತತಂ ಭಗವಂತಮುಮಾಪತಿಂ ।
ಸ್ಮೃತ್ವಾ ತರತಿ ಸಂಸಾರಂ ಯೋ ವಿಶ್ವಾಭಿವಿಪಶ್ಯತಿ ॥೪೧॥

ಸರ್ವಾಮರನಿಯಂತಾರಂ ಶಂಕರಂ ಲೋಕಶಂಕರಂ ।
ಭಜಸ್ವ ಯತ್ಪ್ರಸಾದೇನ ವ್ಯಾಪ್ಯ ನಾರಾಯಣಃಸ್ಥಿತಃ ॥೪೨॥

ತಮೇವ ವಂದೇ ದೇವೇಶಂ ಮಹೇಶಂ ಶರಣಂ ಗತಃ ।
ಯದಾಜ್ಞಯಾ ಜಗದ್ಧಾತಾ ಯಥಾಪೂರ್ವಮಕಲ್ಪಯತ್ ॥೪೩॥

ಸ್ಮರಾರಿಂ ತಮಹಂ ವಂದೇ ಯಲ್ಲಿಂಗಂ ಮಂಗಳಪ್ರದಂ ।
ಪೂಜಯಂತಿ ಪ್ರಸೂನಾದ್ಯೈರಿಂದ್ರಜ್ಯೇಷ್ಠಾಮರುದ್ಗಣಾಃ ॥೪೪॥

ನಮಾಮಿ ತಮುಮಾರ್ಧಾಂಗ ಶಂಗಂ ಮಂಗಲದಾಯಕಂ ।
ಯಮರಾಧ್ಯ ಸುಖಂ ಪ್ರಾಪುರ್ದೇವಾಸಃ ಪೂಷರಾತಯಃ ॥೪೫॥

ಪ್ರಪಂಚಗಳೆಲ್ಲವನ್ನೂ ಸರ್ವದಾ ಸಾಕ್ಷಾತ್ ನೋಡಿಕೊಳ್ಳುತ್ತಿರುವ ಮತ್ತು ಕಾಪಾಡುತ್ತಿರುವ ಪರಮೇಶ್ವರನನ್ನು ಯಾರು ಸ್ಮರಿಸುವರೋ, ಅವರು ಸಂಸಾರ ಬಂಧನದಿಂದ ಬಿಡುಗಡೆ ಹೊಂದುವರು. ಅಂತಹ ಭಗವಂತನಾದ ಉಮಾಪತಿ ಯನ್ನು ಧ್ಯಾನಿಸುತ್ತೇನೆ. ॥೪೧॥

ಆ ಶಂಕರನು ಲೋಕಕ್ಕೆಲ್ಲಾ ಕಲ್ಯಾಣಕಾರಿಯು, ಸಕಲ ದೇವತೆಗಳಿಗೂ ಶಾಸಕನು. ಆತನ ಮಹಿಮಾಲೇಶದ ಪ್ರಭಾವದಿಂದ ನಾರಾಯಣನು ಜಗತ್ತನ್ನೇ ವ್ಯಾಪಿಸಿಕೊಂಡಿರುವನು. ॥೪೨॥

ಆ ದೇವತೆಗಳಿಗೂ ಅಧಿಪತಿಯಾದ ಪರಮೇಶ್ವರನನ್ನೇ ನಮಸ್ಕರಿಸುತ್ತೇನೆ. ಆ ಮಹೇಶ್ವರನನ್ನೇ ಶರಣುಹೊಗುತ್ತೇನೆ. ಆತನ ಆಜ್ಞೆಯಮೇರೆಗೆ ಬ್ರಹ್ಮನೂ ಜಗತ್ತನ್ನು ಸೃಷ್ಟಿಮಾಡುವನು. ॥೪೩॥

ಯಾವಾತನ ಲಿಂಗದ ದರ್ಶನ ಪೂಜನಗಳಿಂದ ಸಕಲ ಕಲ್ಯಾಣಗಳೂ ಸಿದ್ಧಿಸುವುವೋ, ಅಂತಹ ಮದನಾಂತಕನನ್ನು ನಮಸ್ಕರಿಸುತ್ತೇನೆ. ಆತನನ್ನೇ ಇಂದ್ರಾದಿ ದೇವತೆಗಳೂ ಪೂಜಿಸುವರು. ॥೪೪॥

ಆ ಅರ್ಧನಾರೀಶ್ವರನನ್ನು ನಮಸ್ಕರಿಸುತ್ತೇನೆ. ಆತನು ಕಲ್ಯಾಣ ಮಾತ್ರ ಪಾತ್ರನಾಗಿರುವನಲ್ಲದೇ ಸಕಲರಿಗೂ ಕಲ್ಯಾಣಕಾರಿಯೂ ಆಗಿದ್ದಾನೆ. ಆತನನ್ನೇ

ನಮಾಮಿ ತಂ ಮಹಾರುದ್ರಂ ಶಾಂಭವಾಶ್ಚಿದ್ಘನಂ ಪರಂ ।
ಸತತಂ ವೇದವೇದಾಂತೈಸ್ಸಂಜಾನಾನಾ ಉಪಾಸತೇ ॥೪೬॥

ನಮಾಮಿ ತಾಂ ಮಹಾಗೌರೀಂ ಕುಚಕುಂಕುಮರೂಷಿತಾಂ ।
ಸ್ಮೃತ್ಯಾಸ್ಯಾನಂದದಾಮಾಶು ಯಾ ತೇ ರುದ್ರಶಿವಾ ತನೂಃ ॥೪೭॥

ನಮಸ್ತೇ ಕರುಣಾಪಾರಸಾಗರಾಯ ಸ್ಮರಾಯ ಚ ।
ನಮಶ್ಶಾಂತಿರಸಾಯಾಪಿ ನಮಸ್ತೇ ರುದ್ರ ಮನ್ಯವೇ ॥೪೮॥

ಮಹಾಪ್ರಲಯಕಾಲಾಗ್ನಿನಿಭಶೂಲಾಯ ತೇ ನಮಃ ।
ನಮಃ ಪರಶವೇ ತಾವದುತೋತ ಇಷವೇ ನಮಃ ॥೪೯॥

ಆರಾಧಿಸಿ ಪೂಷ, ಮಿತ್ರ ಮುಂತಾದ ದೇವತೆಗಳು ಸುಖವನ್ನು ಕಂಡುಕೊಂಡಿರುತ್ತಾರೆ. ॥೪೫॥

ಶಿವಭಕ್ತರು ಯಾವಾತನನ್ನು ವೇದವೇದಾಂತಗಳ ಮನನದಿಂದ ತಿಳಿದುಕೊಂಡು ಸದಾ ಉಪಾಸನೆಮಾಡುವರೋ, ಆ ಚಿದ್ಘನಸ್ವರೂಪನಾದ, ಪರಾತ್ಪರನಾದ ಪರಮೇಶ್ವರನನ್ನು ನಮಸ್ಕರಿಸುತ್ತೇನೆ. ॥೪೬॥

ಆ ಭಗವತಿಯಾದ ಗಿರಿಜೆಯ ಪಾದಗಳಿಗೆ ನಮಸ್ಕರಿಸುತ್ತೇನೆ. ಆಕೆಯು ತನ್ನ ವಕ್ಷಸ್ಥಲದಲ್ಲಿ ಧರಿಸಿದ ಕುಂಕುಮದಿಂದ ಉಜ್ವಲಳಾಗಿದ್ದಾಳೆ. ಆಕೆಯನ್ನು ಸ್ಮರಿಸಿದ ಮಾತ್ರದಿಂದಲೇ ಪರಮಾನಂದವು ಲಭಿಸುತ್ತದೆ. ಆಕೆಯೇ ಶಿವನ ಶರೀರವನ್ನು ವ್ಯಾಪಿಸಿಕೊಂಡಿರುತ್ತಾಳೆ. ॥೪೭॥

ಓ ಪರಮೇಶ್ವರನೇ, ನಿನ್ನ ದಯಾಸಾಗರರೂಪವಾದ ವಾತ್ಸಲ್ಯವನ್ನು ನಮಸ್ಕರಿಸುತ್ತೇನೆ. ಶಾಂತಿರಸಸ್ವರೂಪಿಯಾದ ನಿನಗೆ ನಮಿಸುತ್ತೇನೆ. ಓ ರುದ್ರನೇ, ನಿನ್ನ ಕೋಪವೃತ್ತಿಗೆ ಶತಶಃ ನಮಸ್ಕಾರಮಾಡುತ್ತೇನೆ. ॥೪೮॥

ಓ ಪರಮೇಶ್ವರನೇ, ನಿನ್ನ ಶೂಲವು ಮಹಾಪ್ರಲಯಕಾಲದ ಅಗ್ನಿಗೆ ಸದೃಶವಾದುದು. ಆ ನಿನ್ನ ತ್ರಿಶೂಲಕ್ಕೂ, ನಿನ್ನ ಕೊಡಲಿಗೂ ಮತ್ತು ನಿನ್ನ ಧನುರ್ಬಾಣಗಳಿಗೂ ಸದಾ ನಮಿಸುವೆನು. ॥೪೯॥

ಫಣಿರಾಜಮಹಾಕಾಯಜ್ಯಾಜ್ಯೋತ್ಸ್ನಾಮಂಡಿತಾಯ ಚ ।
ಮಹಾಮೇರುಸ್ವರೂಪಾಯ ನಮಸ್ತೇ ಅಸ್ತು ಧನ್ವನೇ ॥೫೦॥

ರತ್ನಕಂಕಣಭಾಭಾರಭಾಸುರಾಭ್ಯಾಂ ಭವಪ್ರಭೋ ।
ಭಕ್ತಾಭೀಷ್ಟಪ್ರದಾಭ್ಯಾಂ ಚ ಬಾಹುಭ್ಯಾಮುತ ತೇ ನಮಃ ॥೫೧॥

ಸುರಾಸುರಾದಿಕಾಪಾರಸಂಹಾರಕರಣಾನ್ಯಪಿ ।
ಘೋರಾಣ್ಯಪಾರರೂಪಾಣಿ ತಸ್ಮಾತ್ತೇಭ್ಯೋಽಕರಂ ನಮಃ ॥೫೨॥

ಮಾಂ ಮಾಮಕಧಿಯಾ ದೀನಂ ತಾವಕಂ ಕರುಣಾಕರ ।
ಕುರು ಶಂಕರಸಂಪನ್ನಂ ದರಿದ್ರಂ ನೀಲಲೋಹಿತ ॥೫೩॥

ನೀನು ಅಪ್ರತಿಮ ಧನುರ್ಧಾರಿಯು. ನಿನ್ನ ಮನಸ್ಸಿನ ಹೆದೆಯೇ ಸರ್ಪರಾಜನು. ಆ ಹೆದೆಯನ್ನು ಏರಿಸುವಾಗ ಆ ಸರ್ಪದ ಕಾಂತಿಯು ಭಯಂಕರವಾದ ಚಂದ್ರಿಕೆಯಂತೆ ಇರುತ್ತದೆ. ಆ ಧನುಸ್ಸನ್ನು ನೀನು ಧರಿಸಿಕೊಂಡು ನಿಂತಿರುವಾಗ ಮೇರುಪರ್ವತದಂತೆ ನಿಶ್ಚಲನಾಗಿ ಧೀರನಾಗಿರುವೆ. ಇಂತಹ ನಿನಗೆ ಎದುರಾಳು ಯಾರುತಾನೇ ಇರುವರು ? ॥೫೦॥

ಆ ನಿನ್ನ ಬಾಹುಗಳನ್ನು ನಮಸ್ಕರಿಸುತ್ತೇನೆ. ಆ ಭುಜಗಳು ಸದಾ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವುದರಲ್ಲಿ ಸನ್ನದ್ಧಗಳಾಗಿರುವುವು. ಆ ಬಾಹುಗಳು ರತ್ನಕಂಕಣಗಳನ್ನು ಧರಿಸಿದ್ದು, ಕಂಕಣಗಳ ಪ್ರಭೆಯಿಂದ ಅತ್ಯಂತ ಕಾಂತಿಯುಕ್ತಗಳಾಗಿರುತ್ತವೆ. ॥೫೧॥

ಆ ನಿನ್ನ ಬಾಹುಗಳು ಭಯಂಕರಗಳಾಗಿವೆ. ಏಕೆಂದರೆ—ಅನೇಕಾನೇಕ ದೈತ್ಯದಾನವರನ್ನು ಸಾಹಸಲೇಶದಿಂದಲೇ ಅವು ನಾಶಮಾಡಿರುವುವು. ಆದರಲ್ಲಿಯೂ ಅವುಗಳ ಸ್ವರೂಪವು ಏನೆಂಬುದೂ ಸಹ ಸರಿಯಾಗಿ ತಿಳಿಯಲು ಸಾಧ್ಯವಾಗುವುದಿಲ್ಲ. ಇಂತಹ ಅದ್ಭುತಗಳಾದ ನಿನ್ನ ಭುಜಗಳನ್ನು ನಮಸ್ಕರಿಸುವುದಲ್ಲದೆ ಮತ್ತಿನ್ನೇನು ಮಾಡಲು ಶಕ್ಯ ! ॥೫೨॥

ನೀಲ ಮತ್ತು ಲೋಹಿತವರ್ಣದಿಂದ ರಂಜಿಸುವ ಮಹೇಶ್ವರನೇ, ಈ ನನ್ನನ್ನು ಉದ್ಧರಿಸು. ನಾನು ನನ್ನ ಅಲ್ಪಜ್ಞವಾದ ಬುದ್ಧಿಯ ಮೇರೆಗೆ ಕೃಪಣನೂ ದೀನನೂ ಆಗಿರುವೆನು. ಕರುಣಾನಿಧಿಯೇ, ಈ ದರಿದ್ರನನ್ನು ಅಣಿಮಾದಿ ಅಷ್ಟೈ

ಶಾಂಕರಾಗ್ರೇಸರಾರಾಧ್ಯಂ ಶಿವಾರಾಧನಸಾಧನಂ ।
ರಕ್ಷ ರಕ್ಷ ವಿರೂಪಾಕ್ಷಂ ನಾನ್ಯಂ ವಿಂದಾಮಿ ರಾಧಸೇ ॥೫೪॥

ದಾರಾಣಾಂ ಮಮ ಪುತ್ರಾಣಾಂ ಪೌತ್ರಾದೀನಾಂ ವಿಶೇಷತಃ ।
ತ್ವತ್ಪಾದುಕಾರಾಧಕಾನಾಮಸ್ಮಾಕಮವಿತಾ ಭವ ॥೫೫॥

ಅತಃ ಪರಮುಮಾಕಾಂತ ದುರ್ದಶಾಂ ನ ಸಹಾಮಹೇ ।
ತಾಂ ದುರ್ದಶಾಂ ಹರಾಸ್ಮಾಕಂ ಭೂರಿದಾ ಭೂರಿ ದೇಹಿ ನಃ ॥೫೬॥

ಶಿವಪೂಜನಸಕ್ತೇಭ್ಯಶ್ಶಾಂಭವೇಭ್ಯಃ ಪ್ರತಿಕ್ಷಣಂ ।
ಪವಿತ್ರಂ ಗೋತ್ರಮಸ್ಮಭ್ಯಂ ವಸುಸ್ಪಾರ್ಹಂ ತದಾ ಭರ ॥೫೭॥

ಶ್ವರ್ಯಸಂಪನ್ನನನ್ನಾಗಿ ಮಾಡು. ಎಷ್ಟಾದರೂ ನೀನು ಮಂಗಲದಾತನೇ ಆಗಿರುವೆಯಲ್ಲವೇ! ॥೫೩॥

ನಾನು ಒಬ್ಬ ಶಿವದಾಸರ ದಾಸನು ಶಿವಭಕ್ತರನ್ನು ಪೂಜಿಸುತ್ತೇನೆ. ನಾನು ಒಂದು ಶಿವಪೂಜೆಯ ಉಪಕರಣವಾಗಿದ್ದೇನೆಂತಲಾದರೂ ನನ್ನನ್ನು ಉದ್ಧರಿಸಿ ಕಾಪಾಡು. ನಾನು ಮತ್ತೆ ಬೇರೆ ಯಾರನ್ನೂ ಸಿದ್ಧಿಗಾಗಿಯಾಗಲೀ ರಕ್ಷಣೆಗಾಗಲೀ ಶರಣುಹಾಕುವುದಿಲ್ಲ. ॥೫೪॥

ನನ್ನ ಕುಟುಂಬವನ್ನು ಕಾಪಾಡು. ನನ್ನ ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಇವರೆಲ್ಲರನ್ನೂ ಕ್ಷೇಮದಿಂದ ಕಾಪಾಡು. ನಾವೆಲ್ಲರೂ ನಿನ್ನ ಪಾದುಕೆಗಳನ್ನೇ ಆರಾಧಿಸತಕ್ಕವರಾಗಿದ್ದೇವೆ. ನಮಗೆ ನೀನೇ ರಕ್ಷಕನಾಗಿರು. ॥೫೫॥

ನೀನು ಕೋಟ್ಯಂತರ ಜೀವಿಗಳಿಗೆ ಬೇಕುಬೇಕಾದ್ದನ್ನು ಸರ್ವದಾ ಕೊಡಲು ಸಿದ್ಧನಾಗಿರುತ್ತೀಯೆ. ಈಗ ನಮ್ಮನ್ನೂ ಅನುಗ್ರಹಿಸು. ನಾವು ಇಲ್ಲಿಯವರೆಗೆ ಅನುಭವಿಸಿರುವ ದುರ್ದಶೆಯೇ ಸಾಕು. ಇನ್ನಾದರೂ ಈ ನಮ್ಮ ದುರ್ದಶೆಯನ್ನು ಪರಿಹರಿಸಿ ಕಾಪಾಡು. ॥೫೬॥

ನಮ್ಮ ವಂಶೀಕರೆಲ್ಲರೂ ಶಿವಭಕ್ತರ ಪೂಜಕರೇ ಆಗಿರುವರು. ಪ್ರತಿಕ್ಷಣದಲ್ಲಿಯೂ ಶಿವಭಕ್ತರನ್ನು ಪೂಜಿಸಿ, ಶಿವನನ್ನು ಆರಾಧಿಸಿ, ನಮ್ಮ ವಂಶವೇ ಪವಿತ್ರವಾಗಿರುವುದು. ಇಂಥ ನಮ್ಮ ವಂಶಕ್ಕೆ ನೀನು ಸಂಪತ್ತನ್ನು ಅನುಗ್ರಹಿಸು. ॥೫೭॥

ಭಾವೇಭ್ಯೋ ಭವಭೀರುಭ್ಯೋ ಭಸ್ಮಾಂಗೇಭ್ಯಃ ಪ್ರಯತ್ನತಃ ।
ಭವಾನೀರಮಣ ಸ್ವಾಮಿನ್ ಇಮಾಂಸ್ತೋತೃಭ್ಯ ಆಭರ ॥೫೮॥

ಸರ್ವಮೋಹವಿನಾಶಾಯ ಸರ್ವಾಭೀಷ್ಟದ ಶಂಕರ ।
ಪ್ರಯಚ್ಛ ಶಾಂಕರೀಂ ವಿದ್ಯಾಂ ರಾಯಾ ವಿಶ್ವಪುಷಾ ಸಹ ॥೫೯॥

ಶಿವಪೂಜಾಸಾಧನಾನಾಂ ಬಿಲ್ವಾನಾಮರ್ಚನಾಯ ಚ ।
ತಥಾ ಶಿವಪ್ರಣಾಮಾರ್ಥಂ ಬಲಂ ಧೇಹಿ ತನೂಷು ನಃ ॥೬೦॥

ಶಿವಪೂಜನಸಾಮಗ್ರೀವಿರಹಾದೇವ ದುಃಖಿನಃ ।
ಹೃದ್ರೋಗಂ ಮಮ ಸೂರ್ಯೇಶ ಹರಿಮಾಣಂ ಚ ನಾಶಯ ॥೬೧॥

ಓ ಭವಾನೀಪತಿಯೇ, ನಮ್ಮ ವಂಶಜರೆಲ್ಲರೂ ಭವಾರಾಧಕರು. ಯಾವಾಗಲೂ ಶೈವಚಿಹ್ನೆಯಾದ ಭಸ್ಮವನ್ನು ಧಾರಣೆಮಾಡತಕ್ಕವರು. ಸಂಸಾರದಲ್ಲಿ ಮಹಾ ಭೀರುಗಳು ಅಂದರೆ ಸಂಸಾರದಲ್ಲಿ ಜಿಹಾಸೆ ಪಡುವರು. ಮುಮುಕ್ಷುಗಳೂ ಆಗಿದ್ದಾರೆ. ಹೀಗೆ ಯಾವಾಗಲೂ ನಿನ್ನನ್ನೇ ಸ್ತುತಿಮಾಡುವ ಈ ನಮ್ಮನ್ನು ಉದ್ಧರಿಸು ಸ್ವಾಮಿ. ||೫೮||

ಶಂಕರನೇ, ನೀನು ಭಕ್ತರ ಸಕಲ ಅಭೀಷ್ಟಗಳನ್ನು ಸಲ್ಲಿಸಿಕೊಡತಕ್ಕವನಾಗಿದ್ದೀಯೆ. ಆದುದರಿಂದ ನನಗೆ ಶಾಂಕರ ವಿದ್ಯೆಯನ್ನು ಕೊಡು. ಆ ವಿದ್ಯೆಯು ಸಕಲ ಮೋಹಗಳನ್ನೂ ಅಜ್ಞಾನಗಳನ್ನೂ ನಾಶಮಾಡತಕ್ಕದ್ದಾಗಿದೆ. ಆ ವಿದ್ಯೆಯೊಡನೆ ಲೋಕಯಾತ್ರೆಗೆ ಸಾಧನವಾದ ಐಶ್ವರ್ಯವನ್ನೂ ದಯಪಾಲಿಸು. ||೫೯||

ನಾನು ಶಿವಪೂಜೆಯನ್ನು ಮಾಡುತ್ತಿರಬೇಕು. ಶಿವಲಿಂಗಕ್ಕೆ ಬಿಲ್ವದಳಗಳಿಂದ ಅರ್ಚನೆಯನ್ನು ನಡೆಸಬೇಕು. ಶಿವನಿಗೆ ಸಾಷ್ಟಾಂಗ ಪ್ರಣಾಮವನ್ನೂ, ಪ್ರದಕ್ಷಿಣ ನಮಸ್ಕಾರವನ್ನೂ ಮಾಡಬೇಕು. ಇವುಗಳೆಲ್ಲವುಗಳಿಗೂ ಅತ್ಯಗತ್ಯವಾದ ಶಕ್ತಿಯನ್ನೂ, ಶರೀರದಲ್ಲಿ ದಾರ್ಢ್ಯವನ್ನೂ ನೀನೇ ಅನುಗ್ರಹಿಸು. ||೬೦||

ಈವರೆಗೂ ನಾನು ದರಿದ್ರನಾಗಿರುವುದರಿಂದ ನನ್ನ ಹತ್ತಿರ ಯಾವ ಶಿವಪೂಜಾ ಸಾಮಗ್ರಿಯೂ ಇರುವುದಿಲ್ಲ. ಶಿವಪೂಜೆಯನ್ನು ಪ್ರಶಸ್ತವಾಗಿ ಮಾಡಲು ನನಗೆ ಶಕ್ತಿಸಾಲದು. ಇದೇ ನನಗೆ ಬಹಳ ವ್ಯಸನವಾಗಿರುತ್ತದೆ. ಇದು ನನ್ನ ಮನಸ್ಸಿಗೆ ರೋಗವಿದ್ದಂತೆ ಆಗಿರುತ್ತದೆ. ಎಲ್ಲಾ ನನ್ನ ಈ ಕೊರತೆಗಳನ್ನೂ, ಸೂರ್ಯಾತ್ಮಕನಾದ ನೀನು ಪರಿಹರಿಸಬೇಕು. ||೬೧||

ಶಿವದ್ರೋಹರತಾ ಯೇ ಚ ಶಿವಭಕ್ತಪರಾಙ್ಮುಖಾಃ ।
ತಾನ್ ಶಿವಾಚಾರರಹಿತಾನ್ ವಿಬಾಧಸ್ವ ಮಹಾಂಭಸಿ ॥೬೨॥

ಅನನ್ಯಶರಣಾನಸ್ಮಾನ್ ತ್ರ್ಯಕ್ಷ ದಾಕ್ಷಾಯಣೀಪ್ರಿಯ ।
ಕಟಾಕ್ಷೇಣ ವಿರೂಪಾಕ್ಷ ರಕ್ಷಾಣೋ ಬ್ರಹ್ಮಣಸ್ಪತೇ ॥೬೩॥

ಗೌರೀಪತೇ ಪಿತಾ ಮಾತಾ ದಾತಾ ತ್ರಾತಾ ವಿಶೇಷತಃ ।
ತ್ವಮಸ್ಮಾಕಂ ಧನಂ ಭಾಗ್ಯಮುತ ಭ್ರಾತೋತ ನ ಸ್ಸಖಾ ॥೬೪॥

ನೈಸ್ತ್ರಪಾನಾದಿಸಮಯೇ ನ ಕೃತಂ ಶಿವಪೂಜನಂ ।
ಅನ್ಯಚ್ಚ ತತ್ ಕ್ಷಮಸ್ವೇಶ ಯನ್ಮಯಾ ದುಷ್ಕೃತಂ ಕೃತಂ ॥೬೫॥

ಈ ಲೋಕದಲ್ಲಿ ಯಾರು ಶಿವಪೂಜೆಯನ್ನು ಮಾಡದೇ ಶಿವದ್ರೋಹಿಗಳಾಗಿರುತ್ತಾರೆಯೋ, ಯಾರು ಶಿವಭಕ್ತರನ್ನು ಆದರಿಸದೇ ಕಡೆಗಾಣುತ್ತಾರೆಯೋ ಅವರನ್ನು ನೀನು ಶಿಕ್ಷಿಸಬೇಕು. ಅವರು ವಾಮಾಚಾರಿಗಳು. ಮಂಗಳಕರವಾದ ಧರ್ಮಮಾರ್ಗದಿಂದ ದೂರರಾಗಿ ವ್ರಾತ್ಯರಾಗಿರುವರು. ಅಂಥವರನ್ನು ಮಹಾ ಮಡುವಿನಲ್ಲಿ ಹಾಕಿ ಶಿಕ್ಷಿಸಬೇಕು. ॥೬೨॥

ಮುಕ್ಕಣ್ಣಸ್ವಾಮಿಯೇ! ನಿನ್ನನ್ನು ಬಿಟ್ಟು ಬೇರೆ ಯಾರೂ ನನಗೆ ರಕ್ಷಕರಿಲ್ಲ. ಓ ದಾಕ್ಷಾಯಿಣೀ ಪ್ರಿಯವಲ್ಲಭ! ನಮ್ಮನ್ನು ಕೃಪಾಕಟಾಕ್ಷದಿಂದ ಅವಲೋಕಿಸು. ವಿರೂಪಾಕ್ಷಸ್ವಾಮಿಯೇ! ನೀನು ಹಿರಣ್ಯಗರ್ಭನಿಗೂ ಯಜಮಾನನಾಗಿರುವೆ. ಅಂದಮೇಲೆ ನಮ್ಮ ರಕ್ಷಣೆಯ ಭಾರವೂ ನಿನ್ನಮೇಲೆಯೇ ಇರುತ್ತದೆಂದು ಮತ್ತೆ ಹೇಳಬೇಕೆ? ॥೬೩॥

ಗಿರಿಜಾರಮಣನೇ! ನೀನೇ ನಮಗೆ ತಂದೆ, ತಾಯಿ, ನಾವು ಬೇಡಿದ್ದನ್ನು ಕೊಟ್ಟು ಕಾಪಾಡುವವನೂ ನೀನೇ. ನೀನೇ ನಮ್ಮ ಧನ, ಭಾಗ್ಯ, ಬಂಧು, ಮಿತ್ರ, ಸಹೋದರ. ಎಲ್ಲವೂ ನೀನೇ ಆಗಿರುತ್ತೀಯೆ. ॥೬೪॥

ನಾನು ಪಾನವೇ ಮೊದಲಾದ ವಿಲಾಸಕಾಲದಲ್ಲಿ ಅಜ್ಞಾನದಿಂದ ಶಿವಪೂಜೆಯನ್ನು ಮಾಡದೇ ಬಿಟ್ಟಿದ್ದರೆ ಆ ನನ್ನ ತಪ್ಪನ್ನು ಕ್ಷಮಿಸು. ಓ ಈಶ್ವರ! ಇದಲ್ಲದೇ ನನ್ನ ಯಾವುಯಾವುದು ದುಷ್ಕರ್ಮಗಳೂ ಪಾಪಗಳೂ ಇರುತ್ತವೆಯೋ, ಅವೆಲ್ಲಕ್ಕು ನಿನ್ನ ಕ್ಷಮೆಯಿರಲಿ. ॥೬೫॥

ಕರ್ಪೂರಪೂರನೀಹಾರಗಿರಿಸುಂದರವಿಗ್ರಹ ।
ಗಿರಿಜಾನುಗ್ರಹಾನುಗ್ರಂ ಗಾಯೇ ತ್ವಾಮನಸಾ ಗಿರಾ ॥೬೬॥

ಸೋಽಯಂ ದೇಯೋ ವರೋಽಸ್ಮಭ್ಯಂ ವಯಂ ಲಿಂಗಂ ಸಮರ್ಚಿತಂ ।
ಬಿಲ್ವಾದಿಸಾಧನೈರ್ದಿವ್ಯೈಃ ಪಶ್ಯೇಮ ಶರದಶ್ಶತಂ ॥೬೭॥

ಶಿವಲಿಂಗಾರ್ಚನೋದ್ಯೋಗಮಹೋತ್ಸವಸಮನ್ವಿತಾಃ ।
ಸರ್ವಸೌಭಾಗ್ಯಸಂಪನ್ನಾಃ ಜೀವೇಮ ಶರದಶ್ಶತಂ ॥೬೮॥

ಗೌರೀವಿಹಾರಶ್ರೀಪುಂಜಮಂಜುಶಿಂಜಿತಮಂಜುಳಂ ।
ಶ್ರೀಕಾಲಕಾಲಮಾಲೋಕ್ಯ ನಂದಾಮ ಶರದಶ್ಶತಂ ॥೬೯॥

ಪರಮೇಶ್ವರನೇ! ನಿನ್ನ ಶರೀರದ ಸೌಂದರ್ಯವನ್ನು ಏನೆಂದು ಕೊಂಡಾಡಲಿ? ನಿನ್ನ ದೇಹವು ಕರ್ಪೂರಪ್ರವಾಹದಿಂದ ತುಂಬಿಕೊಂಡಿರುವ ಹಿಮಪರ್ವತದಂತೆ ಅತ್ಯಂತ ಧವಳವಾಗಿರುವುದು. ಅದರ ಕಾಂತಿಯನ್ನು ಹೇಳಲು ಶಕ್ಯವಿಲ್ಲ. ನೀನು ಸಾಕ್ಷಾತ್ ಭಗವತಿಯನ್ನೇ ಅನುಗ್ರಹಿಸುವೆ. ಅಂಥ ಮಹಾಮಹಿಮಶಾಲಿಯಾದ ನಿನ್ನನ್ನು ಮನಸ್ಸಿನಿಂದಲೂ ಮಾತಿನಿಂದಲೂ ಸ್ತೋತ್ರಮಾಡುತ್ತೇನೆ. ॥೬೬॥

ನಾವು ನೂರಾರು ವರ್ಷಗಳ ವರೆಗೂ ಶಿವಲಿಂಗವನ್ನು ದಿವ್ಯವಾದ ಬಿಲ್ವಪತ್ರೆಗಳಿಂದ ಅರ್ಚಿಸಬೇಕು. ಹಾಗೂ ಬಿಲ್ವಪತ್ರೆಗಳಿಂದ ಅಲಂಕೃತವಾದ ಶಿವಲಿಂಗವನ್ನು ನಾವು ನೂರಾರು ವರ್ಷಗಳ ವರೆಗೂ ದರ್ಶನಮಾಡುತ್ತಿರಬೇಕು. ನಮಗೆ ಇಂತಹ ವರವನ್ನು ಕೊಡು. ॥೬೭॥

ನಾವು ನೂರಾರು ವರ್ಷಗಳ ವರೆಗೂ ಶಿವಾರ್ಚನೆಯ ಮಹೋತ್ಸವವನ್ನು ನಡೆಸುತ್ತಿರಬೇಕು. ಆ ಶಿವಾರಾಧನೆಯನ್ನು ಮಹಾ ವೈಭವದಿಂದ ನಡೆಸಲು ನಮಗೆ ಎಲ್ಲಾ ಬಗೆಯ ಸಂಪತ್ತುಗಳೂ ಬೇಕು. ಆದುದರಿಂದ ನಾವು ಸಕಲೈಶ್ವರ್ಯಯುಕ್ತರಾಗಿ ನೂರಾರು ವರ್ಷಗಳು ಶಿವಾರ್ಚನೆಯನ್ನು ಮಾಡುತ್ತಿರುವಂತೆ ವರವನ್ನು ಅನುಗ್ರಹಿಸು. ॥೬೮॥

ಶ್ರೀಗಿರಿಜೆಯ ವಿಹಾರಕ್ಕಾಗಿ ತಯಾರುಮಾಡಿದ ಲತಾಮಂಟಪದಲ್ಲಿ ಸುಮಧುರವಾಗಿ ಕಲಕಲಧ್ವನಿ ಗೈಯ್ಯುತ್ತಿರುವ ಶ್ರೀ ಕಾಲಕಾಲೇಶ್ವರನನ್ನು

ಉಮಾಸಹಾಯಂ ಸದಯಂ ಪ್ರಸನ್ನಹೃದಯಂ ಹೃದಿ ।
ಸಾನಂದಂ ಮುಹುರಾಲೋಕ್ಯ ಮೋದಾಮ ಶರದಶ್ಶತಂ ॥೨೦॥

ಪ್ರಸೀದ ಭಗವಂಛಂಭೋ ಭವತ್ಕರುಣಯಾ ವಯಂ ।
ನಿರ್ಮೂಯಾ ಶ್ಯಾಂಭವಾ ಏವ ಭವಾಮ ಶರದಶ್ಶತಂ ॥೨೧॥

ಹಾರಾಪಾರಕಥಾಮೇವ ಸಂಸಾರಾತಿಭಯಕ್ಷಯಂ ।
ಕರ್ತುಮತ್ಯುದ್ಯತಾ ನಿತ್ಯಂ ಶೃಣವಾಮ ಶರದಶ್ಶತಂ ॥೨೨॥

ಶಿವಶಂಕರ ಗೌರೀಶ ಮಹಾದೇವಾಂತಕಾಂತಕ ।
ಶೂಲಿನ್ನಿತ್ಯಾದಿನಾಮಾನಿ ಪ್ರಬ್ರವಾಮ ಶರದಶ್ಶತಂ ॥೨೩॥

ನೋಡುತ್ತಾ, ನಾವು ನೂರಾರು ವರ್ಷಗಳ ವರೆಗೆ ಆನಂದಪಡುತ್ತಿರುವಂತೆ ನಮಗೆ ವರ ಕೊಡು. ॥೧೯॥

ಪರಮ ದಯಾಳುವೂ ಸುಪ್ರಸನ್ನನೂ ಆದ ಗಿರಿಜಾರಮಣನನ್ನು ನಾವು ನಮ್ಮ ಹೃದಯದಲ್ಲಿ ಕಂಡು ಆನಂದಪಡಬೇಕು. ಅಂಥ ಭವ್ಯವಾದ ಮೂರ್ತಿಯನ್ನು ಪದೇ ಪದೇ ನಾವು ನೋಡುತ್ತಾ ನಾವು ನೂರಾರು ವರ್ಷಗಳು ಸಂತೋಷದಿಂದಿರುವಂತೆ ವರವನ್ನು ಅನುಗ್ರಹಿಸು. ॥೨೦॥

ಶಂಭುವೇ, ನಮ್ಮಲ್ಲಿ ಶಾಶ್ವತವಾದ ದಯೆಯನ್ನಿಡು. ಆ ನಿನ್ನ ದಯೆಯ ಪ್ರಭಾವದಿಂದ ನಮ್ಮ ಮೋಹಾಜ್ಞಾನಗಳೂ, ಮಮಕಾರಗಳೂ ನಾಶವಾಗಲಿ. ಹಾಗೆಯೇ ನಾವು ಶಂಕರಭಕ್ತರೆಂದೆನಿಸಿ ನೂರಾರು ವರ್ಷ ಬದುಕಿರುವಂತೆ ನಮಗೆ ವರಕೊಡು. ॥೨೧॥

ನಾವು ನೂರಾರು ವರ್ಷ ಶಿವಚರಿತೆಯನ್ನು ಕೇಳುತ್ತಿರಬೇಕು. ಆ ಚರಿತೆಯು ಅಪಾರವಾಗಿರುವುದು. ಸಂಸಾರದಲ್ಲಿ ಸಂಭವಿಸುವ ಘೋರ ಭಯವನ್ನೂ ನಾಶಮಾಡತಕ್ಕದ್ದಾಗಿದೆ. ಅಂತಹ ದಿವ್ಯಕಥೆಯನ್ನು ನಾವು ನೂರಾರು ಕಾಲ ಹೇಳುತ್ತಿರುವಂತೆಯೂ ಕೇಳುತ್ತಿರುವಂತೆಯೂ ನಮಗೆ ವರ ಕೊಡು. ॥೨೨॥

ಶಿವ, ಶಂಕರ, ಗೌರೀಶ ಎಂಬುದಾಗಿ ನಾವು ಶಿವನಾಮಾವಳಿಯನ್ನು ನೂರಾರು ವರ್ಷಗಳ ವರೆಗೆ ಭಜನೆ ಮಾಡುತ್ತಿರುವಂತೆ ನಮಗೆ ವರ ಕೊಡು. ॥೨೩॥

ಅಪಮೃತ್ಯುಮಹಾಮೃತ್ಯುಮಹಾರೋಗಾಕುಲೈರಪಿ ।
ಆಧಿಭಿರ್ವ್ಯಾಧಿಭಿರ್ನಿತ್ಯಮಜೀತಾಃ ಸ್ಯಾಮ ಶರದಶ್ಶತಂ ॥೭೪॥

ಗೌರೀಕುಚಗಿರೀಸಾರಕಾಶ್ಮೀರರಸರೂಷಿತಂ ।
ಸದಾ ಪ್ರಾಗೇಷು ಪಶ್ಯಾಮಿ ಯುವಾನಂ ವಿಶ್ಪತಿಂ ಕವಿಂ ॥೭೫॥

ಗೌರೀಮನೋಹರಸ್ಮೇರವಿಲೋಕನವಿಶಾರದಂ ।
ದೃಷ್ಟ್ವಾ ಹೃಷ್ಟೋಽಸ್ಮಿ ತಂ ಸಾಂಬಂ ಸುಭಾಸಂ ಶುಕ್ರಶೋಚಿಷಂ॥೭೬॥

ಅಪಾರಾಸಾರಸಂಸ್ಕಾರರೋಗಭೋಗವಿನಾಶಕಃ ।
ಸ್ಮೃತಃ ಸ್ಮರಹರಶ್ಶೂರೋ ನೀಲಗ್ರೀವೋ ವಿಲೋಹಿತಃ ॥೭೭॥

ನಮ್ಮನ್ನು ಅಪಮೃತ್ಯುವೂ, ಮಹಾಮೃತ್ಯುವೂ, ಮಹಾರೋಗಗಳೂ, ವ್ಯಾಧಿಗಳೂ ಪೀಡಿಸಕೂಡದು. ನಾವು ಈ ಬಾಧೆಗಳಿಂದ ಆಕ್ರಮಿಸಲ್ಪಡದವರಾಗಿ ನೂರಾರು ಕಾಲ ಬಾಳುವಂತೆ ವರವನ್ನು ಅನುಗ್ರಹಿಸು. ॥೭೪॥

ಗೌರಿಯ ಸ್ತನಮಂಡಲದಲ್ಲಿ ಲಿಪ್ತವಾದ ಕುಂಕುಮಕೇಸರಿಯಿಂದ ಭೂಷಿತನಾಗಿರುವ ತರುಣ ಶಂಕರನನ್ನು ನಾನು ನೋಡುವೆನು. ಆ ತರುಣ ಶಂಕರನು ಕವಿಯಾಗಿರುವನು, ಅಲ್ಲದೇ ಎಲ್ಲಾ ಲೋಕಗಳಿಗೂ ಅಧಿಪತಿಯಾಗಿರುವನು. ॥೭೫॥

ಗಿರಿಜೆಯ ಮನೋಹರವಾದ ಮಂದಹಾಸವನ್ನು ನೋಡಿ ಆನಂದಪಡುವ ಸೌಭಾಗ್ಯವು ಆ ಶಿವನಿಗಲ್ಲದೇ ಮತ್ತೆ ಯಾರಿಗೂ ಲಭ್ಯವಲ್ಲ. ಆ ರಸಿಕಶಿಖಾಮಣಿಯಾದ ಗಿರಿಜೆಯೊಡನೆ ವಿಲಾಸವಾಡುವ ಸುಯೋಗವು ಆ ಶಂಕರನಿಗೆ ಮಾತ್ರವೇ. ಆತನು ಯಾವಾಗಲೂ ಅರ್ಧನಾರೀಶ್ವರನಾಗಿ ಅತ್ಯಂತ ಉಜ್ವಲನಾಗಿರುತ್ತಾನೆ. ಅತಿ ಕಾಂತಿಸಂಪನ್ನನಾದ ಆ ಪರಮೇಶ್ವರನನ್ನು ಕಂಡು ನಾವು ಅತ್ಯಂತ ಆನಂದಪಡುತ್ತೇವೆ. ॥೭೬॥

ಆ ನೀಲಕಂಠನು ಈ ತುದಿಬುಡವಿಲ್ಲದ ಸಂಸಾರದಲ್ಲಿನ ರೋಗಗಳನ್ನೂ ವಿಷಯಾಭಿಲಾಷೆಗಳನ್ನೂ ನಾಶಮಾಡತಕ್ಕವನಿದ್ದಾನೆ. ಆತನೇ ಮನ್ಮಥಧ್ವಂಸಿಯಾಗಿ ಪರಮಶೂರನಾಗಿದ್ದಾನೆ. ಅಂಥ ವಿಲೋಹಿತನನ್ನು ಸದಾ ಧ್ಯಾನಮಾಡುವೆನು. ॥೭೭॥

ಸ್ಮೃತಃ ಸ್ತುತಃ ಶ್ರುತೋ ಧ್ಯಾತಃ ಪೂಜಿತೋ ಘಾಸಕೃನ್ಮುದಾ ।
ಮುಕ್ತಿಪ್ರದೋ ಮಹಾದೇವಃ ತುವಿಗ್ರೀವೋ ಅನಾಮಯಃ ॥೭೮॥

ರುದ್ರವೀಣಾಗಾನಲೋಲಲೀಲಯಾ ಸಾಮಕಲ್ಪಕಃ ।
ಸಾಮಗಾನಪ್ರಿಯಃ ಸೋಽಯಮುಪಾಸ್ಯೈ ಗಾಯತಾ ನರಃ ॥೭೯॥

ರುದ್ರಸೂಕ್ತಪ್ರಿಯೋ ದೇವೋ ರುದ್ರಾಧ್ಯಾಯಪ್ರಿಯಶ್ಶಿವಃ ।
ಅತಸ್ತೈರಖಿಲೈರ್ವಿಪ್ರೈರಭಿಷ್ಟುತಃ ॥೮೦॥

ಶಿವಾರ್ಚನಾದಯೋ ಧರ್ಮಾಶ್ಚಿತ್ತಂ ಶಂಕರಕಲ್ಪಿತಾಃ ।
ಅತೋ ಭಜ ವಿರೂಪಾಕ್ಷಮಧ್ಯಕ್ಷಂ ಧರ್ಮಿಣಾಮಿಮಂ ॥೮೧॥

ಸಮಸ್ತ ರೋಗರುಜಿನಗಳಿಂದ ವಿದೂರನಾದ ಆ ಮಹಾದೇವನನ್ನು ಸ್ಮರಿಸಿದರೂ, ಸ್ತುತಿಸಿದರೂ, ಆತನ ನಾಮವನ್ನು ಕೇಳಿದರೂ, ಧ್ಯಾನಮಾಡಿದರೂ, ಅರ್ಚನೆಮಾಡಿದರೂ, ಆ ನೀಲಕಂಠನು ಮುಕ್ತಿಯನ್ನೇ ಅನುಗ್ರಹಿಸುವನು. ರಾಗಾದಿರೋಗಗಳಿಂದ ನಿಜವಾಗಿಯೂ ಪರಶಿವನು ದೂರನೆನಿಸಿರುವನು. ॥೭೮॥

ರುದ್ರವೀಣೆಯಲ್ಲಿ ಗಾಯನಮಾಡಿದರೆ ಪರಮೇಶ್ವರನಿಗೆ ಬಹಳ ಪ್ರಿಯವಾಗಿರುವುದು. ಹಾಗೂ ಆತನು ಸಾಮಗಾನದಲ್ಲಿ ಬಹಳ ಪ್ರೀತಿ ಇಟ್ಟಿರುವುದರಿಂದ ಸಾಮಗಾನವನ್ನು ಮಾಡುವ ಮನುಷ್ಯನು ಪರಮೇಶ್ವರನಿಗೆ ಅತ್ಯಂತ ಪ್ರೀತಿಪಾತ್ರನಾಗುವನು. ಸಾಮಗಾನಮೂರ್ತಿಯೂ ಆತನೇ ಅಲ್ಲವೆ? ॥೭೯॥

ಶಂಕರನಿಗೆ ರುದ್ರಸೂಕ್ತವೂ ರುದ್ರಾಧ್ಯಾಯವೂ ಅತ್ಯಂತ ಪ್ರಿಯಗಳಾಗಿರುವುವು. ಆದುದರಿಂದಲೇ ಬ್ರಾಹ್ಮಣರು ಆ ಶಿವನನ್ನು ರುದ್ರಸೂಕ್ತದಿಂದಲೂ ರುದ್ರಾಧ್ಯಾಯದಿಂದಲೂ ಸ್ತೋತ್ರಮಾಡುತ್ತಾರೆ. ॥೮೦॥

ಶಿವಾರ್ಚನೆಯೇ ಮೊದಲಾದ ಶಿವಧರ್ಮಗಳನ್ನು ಆ ಶಿವನೇ ಸ್ವತಃ ಕಲ್ಪಿಸಿ ಆಚರಣೆಗೆ ತರಿಸಿರುತ್ತಾನೆ. ಆದುದರಿಂದ ಎಲೈ ಮನವೇ, ಆ ಶಿವಧರ್ಮಗಳಿಗೆಲ್ಲಾ ಅಧ್ಯಕ್ಷನಾದ ಆ ವಿರೂಪಾಕ್ಷನನ್ನೇ ಭಜಿಸು. ॥೮೧॥

ಪ್ರಣಮಂತಿ ಸುರಾಸ್ಸರ್ವೇ ಪ್ರಣತಂ ಶಿವಸನ್ನಿಧೌ ।
ಅತಃ ಕುರ್ಮೋ ನಮಸ್ಕಾರಾನ್ ರುದ್ರಾಯ ಸ್ಥಿರಧನ್ವನೇ ॥೮೨॥

ರುದ್ರಾಧ್ಯಾಯಾದಿಭಿರ್ಯಾ ಯಾ ನಮಸ್ಯಾ ಪ್ರತಿಪಾದಿತಾ ।
ಸಾ ಪಿನಾಕಿನಮಾಯಾತಿ ನಮಸ್ಯಾ ಕಲ್ಮಲೀಕಿನಂ ॥೮೩॥

ನೇತ್ರಾಂಭೋರುಹ ತೇ ಕೃತ್ಯಂ ಹಿತಮದ್ಯಾಧುನೋಚ್ಯತೇ ।
ಪಶ್ಯ ಮಾಮಕ ಪಶ್ಯೇಶಂ ಭ್ರಾಜಮಾನಂ ಹಿರಣ್ಮಯಂ ॥೮೪॥

ಶಿವನಾಮಸುಧಾಧಾರಾಂ ಧೀರಸಂಹಾರಹಾರಿಣೀಂ ।
ಅಂತಃಕರಣಪಾತ್ರೇಣ ಪಾತಂ ಗೌರಾವಿವೇರಿಣೀ ॥೮೫॥

ಶಿವನನ್ನು ಆರಾಧಿಸಿ, ನಮಸ್ಕರಿಸುವವನನ್ನೂ, ಶಿವಭಕ್ತನನ್ನೂ ಎಲ್ಲಾ ದೇವತೆಗಳೂ ಸಹ ವಂದಿಸುತ್ತಾರೆ. ಆ ಶಿವಧರ್ಮಾಚರಣೆಯಿಂದಲೇ ಇಷ್ಟೊಂದು ಮಹತ್ವವು ಲಭಿಸುವುದು. ಆದುದರಿಂದ ನಾವು ಆ ಪಿನಾಕಧನುರ್ಧಾರಿಯಾದ ರುದ್ರನಿಗೆ ಅನೇಕಾನೇಕ ನಮಸ್ಕಾರಗಳನ್ನು ಅರ್ಪಿಸುತ್ತೇವೆ. ॥೮೨॥

ರುದ್ರಸೂಕ್ತ ಮತ್ತು ರುದ್ರಾಧ್ಯಾಯಗಳಲ್ಲಿ ಯಾವ ಯಾವ ನಮಸ್ಕಾರಗಳು ಪ್ರತಿಪಾದಿತಗಳಾಗಿರುತ್ತವೆಯೋ ಅವುಗಳೆಲ್ಲಾ ಆ ಪರಮೇಶ್ವರನನ್ನೇ ಕುರಿತವುಗಳಾದ್ದರಿಂದ ಆತನಿಗೇ ಅವು ಸೇರುತ್ತವೆ. ಎಲೈ ಮನಸ್ಸೇ, ಅಂತಹ ತೇಜೋರೂಪಿಯಾದ ಸ್ವಾಮಿಯನ್ನು ಪೂಜಿಸು. ॥೮೩॥

ಎನ್ನ ಕಣ್ಣುಗಳೇ, ನಿಮಗೆ ಒಂದು ಹಿತೋಕ್ತಿಯನ್ನು ಹೇಳುವೆನು. ನಾನು ಹೇಳಿದಂತೆ ನೀವು ವರ್ತಿಸಿದರೆ, ನಿಮಗೆ ಮಂಗಲವುಂಟಾಗುವುದು. ನೀವು ಸರ್ವದಾ ಆ ಶಂಕರನನ್ನೇ ನೋಡಿರಿ. ಆತನು ಸುವರ್ಣದಂತೆ ದೇದೀಪ್ಯಮಾನನಾಗಿದ್ದಾನೆ. ಆತನನ್ನೇ ನೋಡಿ ನಿಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡು ಆನಂದಪಡಿರಿ. ॥೮೪॥

ರಾಕ್ಷಸರ ನಾಶಕ್ಕಾಗಿ ಸರ್ವದಾ ದೇವತೆಗಳಿಂದ ಅಪಹರಿಸುತ್ತಿರುವ ಶಿವನಾಮವೆಂಬ ಅಮೃತವನ್ನು ನಮ್ಮ ಅಂತಃಕರಣವೆಂಬ ಪಾತ್ರೆಯಿಂದ ತುಂಬಿಟ್ಟುಕೊಳ್ಳಬೇಕು. ॥೮೫॥

ಶಿವನಿರ್ಮಾಲ್ಯಮಾಲ್ಯಾನಿ ಸಮ್ಯಗಾಘ್ರಾಯ ನಾಸಿಕೇ ।
ಶಾಂಭವೇಭ್ಯೋಽಧುನಾ ನಿತ್ಯಮಸ್ಮಭ್ಯಂ ಶರ್ಮ ಯಚ್ಛತ ॥೮೬॥

ರಸನೇ ಮಧುರಾಪಾರರಸಾಸ್ವಾದನತತ್ಪರೇ ।
ಶಿವನಾಮರಸಂ ಬ್ರೂಹಿ ಜಯತಾಮಿವ ದುಂದುಭಿಃ ॥೮೭॥

ರೇ ರೇ ಚಿತ್ತಚಕೋರ ಜಹಿ ದುಃಖಮತಃಪರಂ ।
ಶಿವನಾಮಸುಧಾಧಾರಾಂ ಗೌರೋ ನ ತೃಷಿತಃ ಪಿಬ ॥೮೮॥

ರೇ ರೇ ಮನಶ್ಚಂಚರೀಕ ಶಿವಪಾದಾಂಬುಜಂ ಮುಹುಃ ।
ಗಾಢಮಾಲಿಂಗ್ಯ ನಿಸ್ಸಂಗೋ ಯೋಷಾ ಜಾರಮಿವ ಪ್ರಿಯಂ ॥೮೯॥

ಎಲೈ ನಾಸಿಕವೇ, ನೀನು ಶಿವನಿರ್ಮಾಲ್ಯಗಳಾದ ಹೂಗಳ ಗಂಧವನ್ನೇ ಆಘ್ರಾಣಿಸು. ಅವುಗಳ ಪರಿಮಳವನ್ನೇ ಆಸ್ವಾದಮಾಡು. ಆದರಿಂದ ಶಿವಭಕ್ತರಾದ ನಮಗೆ ಬಹಳ ಹಿತವುಂಟು. ಆದುದರಿಂದ ನೀವು ಶಿವನಿರ್ಮಾಲ್ಯವನ್ನೇ ಆಘ್ರಾಣಿಸಿ ನಮಗೆ ಸದಾ ಕ್ಷೇಮವನ್ನು ತಂದುಕೊಡಿರಿ. ॥೮೬॥

ಎನ್ನ ಜಿಹ್ವೆಯೇ, ನೀನು ಸದಾ ಮಧುರರಸವನ್ನು ಆಸ್ವಾದಮಾಡುತ್ತಿರುವೆ. ಆದರೆ ಈಗ ಎಲ್ಲಾ ಮಧುರದ್ರವ್ಯಕ್ಕಿಂತಲೂ ಉತ್ಕೃಷ್ಟವಾದ ಶಿವನಾಮವನ್ನು ಉಚ್ಚರಿಸು. ಅದರ ರಸವು ದಿವ್ಯವಾದುದು. ಆದುದರಿಂದ ನೀನು ದುಂದುಭಿಯೂ ಕೂಡ ನಾಚಿಕೊಳ್ಳುವಂತೆ ಗಟ್ಟಿಯಾಗಿ, ಮಂದ್ರವಾಗಿ ಶಿವಭಜನೆಮಾಡು. ॥೮೭॥

ಎಲೈ ಚಕೋರರೂಪವಾದ ಮನವೇ, ಇನ್ನು ವೃಥಾ ಅನ್ಯತ್ರ ಕ್ಲೇಶಪಡುವುದನ್ನು ಬಿಡು. ನಿನಗೆ ತೃಷೆಯುಂಟಾದಾಗ ಅಮೃತವು ಬೇಕಾಗುತ್ತದೆಯಷ್ಟೆ. ಇದೋ ದಿವ್ಯವಾದ ಶಿವನಾಮವೆಂಬ ಶ್ರೇಷ್ಠವಾದ ಅಮೃತವಿಲ್ಲಿದೆ. ಇದನ್ನು ಧ್ಯಾನರೂಪದಿಂದ ಆಸ್ವಾದನೆಮಾಡು. ಮತ್ತೆ ಬಾಯಾರಿಕೆಯುಂಟಾಗದಷ್ಟು ಈ ಶಿವನಾಮಾಮೃತವನ್ನು ಪಾನಮಾಡು. ॥೮೮॥

ಓ ಭ್ರಮರರೂಪವಾದ ಮನಸ್ಸೇ, ನನಗೆ ದಾನಮಾಡುವುದಕ್ಕೂ, ಮಕರಂದವನ್ನು ಆಸ್ವಾದಮಾಡುವುದಕ್ಕೂ ಕಮಲವು ಬೇಕಾಗಿದೆಯಷ್ಟೆ. ಇದೋ ಶಿವಚರಣರೂಪವಾದ ಕಮಲಗಳು ಇಲ್ಲಿವೆ. ಇವುಗಳಲ್ಲಿ ದಿವ್ಯವಾದ ಮಕರಂದ ವಿರುವುದು. ಇವನ್ನು ಆಲಿಂಗಿಸಿಕೋ. ರಾತ್ರಿವೇಳೆಯಲ್ಲಿ ಅಭಿಸಾರಿಕೆಯು ತನ್ನ

ಮಹಾರ್ಹರತ್ನಾಕರಚಾರುಮೇರು
ಭೂರಿಪ್ರಭಾಭಾಸುರಭೂಷಣಾಯ ।
ಮಹೇಶ್ವರಾಯಾತಿಮನೋಹರಾಯ
ಮಹೋ ಮಹೀಂ ಸುಷ್ಟುತಿಮೀರಯಾಮಿ ॥೯೦॥

ಮಹೇಶ್ವರಾತಿದುಸ್ಸಹಾಮಿತಾತಿಗರ್ಭವೇದನಾ
ಸಮಾಕುಲಾ ನಪಾರಪಾಪಸಂಘಸಂಕುಲಾನಿಮಾನ್ ।
ಅವಾವ ಮಾಮವಾವ ಮಾಮುಮಾಸಹಾಯ ಕಾಲಹನ್
ಅದೂಷಣೋಽವ ಸೋಮ ಹೇ ಮೃಶಸ್ವ ಶೂರ ರಾಧಸೇ ॥೯೧॥

ಪ್ರಿಯ ಜಾರನನ್ನು ಹೇಗೆ ಗಾಢವಾಗಿ ಆಲಂಗಿಸಿಕೊಳ್ಳುವಳೋ, ಹಾಗೆ ಶಿವಚರಣ ಕಮಲಗಳನ್ನು ಗಾಢವಾಗಿ ಆಲಿಂಗಿಸಿಕೊಂಡು ಅನನ್ಯಪ್ರವಣತೆಯಿಂದ ಮಕರಂದ ವನ್ನು ಪಾನಮಾಡು. ॥೮೯॥

ಮೇರುಪರ್ವತವು ಅನರ್ಘ್ಯವಾದ ರತ್ನಗಳನ್ನು ಧರಿಸಿಕೊಂಡು ಹೇಗೆ ಅತ್ಯಂತ ಉಜ್ವಲವಾಗಿ ಪ್ರಕಾಶಿಸುವುದೋ, ಹಾಗೆಯೇ ಪರಮೇಶ್ವರನೂ ರತ್ನ ಮಯವಾದ ಅತ್ಯುತ್ತಮ ಭೂಷಣಗಳನ್ನು ಧರಿಸಿಕೊಂಡು ತೇಜಸ್ವಿಯಾಗಿ ಪ್ರಕಾಶಿ ಸುತ್ತಾನೆ. ಅಲ್ಲದೇ ಮಹಾದೇವನು ಅತ್ಯಂತ ಸುಂದರನೂ ಮನೋಹರನೂ ಆಗಿರುತ್ತಾನೆ. ಇಂಥ ಮಹೇಶ್ವರನಿಗೆ ನಾನು ಅತ್ಯುತ್ಸವಪೂರ್ವಕವಾದ, ಅಪಾರ ವಾದ ಸ್ತುತಿಗಳನ್ನು ಹಾಡಿ ಸಂತೋಷಗೊಳಿಸುತ್ತೇನೆ. ॥೯೦॥

ಪರಮೇಶ್ವರನೇ, ನಾವು ಬಹಳ ಕಷ್ಟದಲ್ಲಿ ಸಿಕ್ಕಿಬಿದ್ದಿದ್ದೇವೆ. ನಮ್ಮ ಪಾಪಗಳು ನಮ್ಮನ್ನು ಸುತ್ತಲೂ ಮುತ್ತಿಕೊಂಡು ಬಂಧಿಸುತ್ತಿವೆ. ಇವುಗಳ ಪೀಡೆಯು ಅತ್ಯಂತ ಅಸಹ್ಯವಾಗಿರುತ್ತದೆ. ಗರ್ಭಧಾರಣೆಯೂ, ಪ್ರಸವವೂ ಎಷ್ಟು ಕಷ್ಟದಾಯಕವೋ ಅವುಗಳಿಗಿಂತಲೂ ಈ ಪಾಪಗಳ ವೇದನೆಯೂ ಭಯಂಕರ ವಾಗಿದೆ. ಇಂತಹ ವಿಪತ್ತಿನಲ್ಲಿ ಸಿಲುಕಿಕೊಂಡಿರುವ ನನ್ನನ್ನು ಉದ್ಧರಿಸಿ ಕಾಪಾಡು. ನಾನು ಏನು ಪಾಪಗಳನ್ನು ಮಾಡಿದ್ದರೂ ಅವುಗಳನ್ನು ಕ್ಷಮಿಸು. ನೀನು ಸೌಮ್ಯನೂ, ದೋಷರಹಿತನೂ, ಕಾಲಕಾಲನೂ ಆಗಿರುತ್ತೀಯೆ. ಇಂತಹ ಮಹಾ ಮಹಿಮನಾದ ನೀನೇ ನನ್ನನ್ನು ಉದ್ಧರಿಸಿ ಕಾಪಾಡಬೇಕು. ॥೯೧॥

ಭಜೇಮ ಕಾಮದಂ ಮುದಾ ಹೃದಿ ಪ್ರವಿಷ್ಟಮಷ್ಟಧಾ
ನಿರಂತರಾಯ ಮಂತರಾಯನಾಶಹೇತುಸಾಧಕಂ ।
ಅನರ್ಗಲಂ ಪ್ರವಾಹಸೃಷ್ಟಿಕಾರಣಂ ಸಭಾಪತಿಂ
ಸ ನೋ ದದಾತು ತಂ ರಯಿಂ ರಯಿಂ ಪಿಶಂಗಸಂದೃಶಂ ॥೯೨॥

ನಮೋಂಧಕಾಸುರಾದಿಸರ್ವಶತ್ರುನಾಶಹೇತವೇ
ಸುರಾಧಿಕಾಯ ಚಿತ್ತಮೇತದಿಂದುಖಂಡಮೌಲಯೇ ।
ಭಯಾಪಹಾಯ ದೇಯಮೇವ ಬಿಲ್ವಪಲ್ಲವಾಮಲಂ
ನ ಯಸ್ಯ ಹನ್ಯತೇ ಸಖಾ ನ ಹ್ರೀಯತೇ ಕದಾಚನ ॥೯೩॥

ಅಹೋ ಮಹಾದೇವ ಮಹಾನುಭಾವ ಶುದ್ಧಸ್ವಭಾವಾನುಪಮಪ್ರಭಾವ ।
ಭವೋದ್ಭವಾನುದ್ಭವಭವ್ಯಭಾವ ಭವೇ ಭವೇನಾತಿಭವೇ ಭವಸ್ವ ಮಾಂ॥೯೪॥

ಸಕಲ ಪುರುಷಾರ್ಥಗಳನ್ನೂ ಅನುಗ್ರಹಿಸುವ ಆ ಪರಮೇಶ್ವರನನ್ನು ಭಜಿಸುತ್ತೇವೆ. ಆತನು ನಮ್ಮ ಹೃದಯದಲ್ಲಿ ವಿರಾಜಮಾನನಾಗಿರುವನು. ಆತನಿಗೆ ಎಂಟು ಪ್ರಕೃತಿಗಳಿರುವುವು. (ಪಂಚಭೂತಗಳು, ಸೂರ್ಯಚಂದ್ರರು, ಮತ್ತು ಕ್ರತುವಿನ ಯಜಮಾನ) ಆತನು ವಿಘ್ನರಹಿತನು. ಅಲ್ಲದೇ ವಿಘ್ನನಾಶಕನು. ಆತನಿಗೆ ಯಾವಾಗಲೂ ಎಲ್ಲಿಯೂ ಯಾವುದಕ್ಕೂ ತಡೆಯಿರುವುದಿಲ್ಲ. ಆತನು ಸರ್ವತಂತ್ರ ಸ್ವತಂತ್ರನು. ಈ ಅವಿಚ್ಛಿನ್ನವಾದ ಸೃಷ್ಟಿಗೆ ಆತನೇ ಕಾರಣನು. ಸಕಲ ಜೀವ ಸಮುದಾಯಕ್ಕೂ ಅಧಿಪತಿಯಾಗಿರುವನು. ನಮಗೆ ಆತನು ನಾನಾಬಗೆಯ ಸುಖ ಸಂಪತ್ತುಗಳನ್ನೂ ಹೊಂಬಣ್ಣವುಳ್ಳ ಸುವರ್ಣರಾಶಿಯನ್ನೂ ಅನುಗ್ರಹಿಸಲಿ. ॥೯೨॥

ಅಂಧಕಾಸುರನೇ ಮೊದಲಾದ ಲೋಕಕಂಟಕರನ್ನು ಸಂಹಾರಮಾಡಿದ ಆ ಚಂದ್ರಮೌಳಿಗೆ ನನ್ನ ಮನಸ್ಸು ಸದಾ ನಮಸ್ಕರಿಸುತ್ತಿರುವುದು. ಆತನು ಎಲ್ಲರ ಕಷ್ಟವನ್ನೂ ಪರಿಹರಿಸುವುದರಿಂದ ದೇವತೆಗಳೆಲ್ಲರಿಗಿಂತಲೂ ಶ್ರೇಷ್ಠನಾಗಿರುತ್ತಾನೆ. ಆತನನ್ನು ಶುಚಿಯೂ, ಕೋಮಲವೂ, ಆದ ಬಿಲ್ವಪತ್ರೆಗಳಿಂದ ಅರ್ಚಿಸಬೇಕು. ಆ ಪರಮೇಶ್ವರನ ಭಕ್ತನು ಎಂದೂ ಇತರರಿಂದ ಪೀಡಿತನಾಗುವುದಿಲ್ಲ, ಇತರರು ಆ ಭಕ್ತನನ್ನು ಸೂರೆಮಾಡುವುದಕ್ಕೂ ಆಗುವುದಿಲ್ಲ. ॥೯೩॥

ಓ ಮಹಾದೇವನೇ, ನೀನು ಮಹಾನುಭಾವನು, ಪವಿತ್ರಸ್ವಭಾವನು. ಅನಿತರಸಾಧಾರಣವಾದ ಮಹಿಮೆಯುಳ್ಳವನು. ಈ ಜಗತ್ತಿನ ಪೂರ್ವಕಾಲದ

ಮಹಾಘಕೋಟಿಕೋಟಿಕೂಟದಾವಪಾವಕಾಕುಲಾನ್
ಅಪಾರಕಾಮವಂಚಿತಾನುದಾರದಾರಲೋಲುಪಾನ್ ।
ಅನಾಥನಾಥ ವಿಶ್ವನಾಥ ತಾನವಾವ ಕಾಲಹನ್
ಅದೂಷಣೋಽವ ಸೋಮ ಹೇ ಮೃಶಸ್ವ ಶೂರ ರಾಧಸೇ ॥೯೫॥

ಮಂದಾರಕುಂದಾದಿಮರಂದಧಾರಾ
ಸಕ್ತಾಲಿಮಾಲಾಕುಲಮಾಲಿಕಾಭಿಃ ।
ಸಮರ್ಚಯಾಮಿ ಸ್ತುತಿಭಿರ್ಗಿರೀಶ
ಮಷಾಢಮುಗ್ರಂ ಸಹಮಾನಮಾಭಿಃ ॥೯೬॥

ನಮೋ ನಮಸ್ತೇ ಗಿರಿರಾಜರಾಜ
ಕುಮಾರಿಕಾಸುಂದರಕಾಮುಕಾಯ ।

ಅವಸ್ಥೆಯೂ ವರ್ತಮಾನಕಾಲದ ಅವಸ್ಥೆಯೂ ಭವಿಷ್ಯಕಾಲದ ಅವಸ್ಥೆಯೂ ನೀನೇ ಆಗಿರುವೆ. ನಾನು ಜನ್ಮಜನ್ಮಾಂತರದಲ್ಲಿಯೂ ನಿನ್ನನ್ನು ಮರೆಯುವುದಿಲ್ಲ. ನಾನು ನಿನ್ನನ್ನು ಮರೆಯದ ಹಾಗೆ ನೀನೇ ಮಾಡಬೇಕು. ॥೯೪॥

ಓ ವಿಶ್ವನಾಥ! ನಮ್ಮ ಸುತ್ತಲೂ ಕೋಟಿ ಕೋಟಿ ಪಾಪಗಳು ಕಾಡುಗಿಚ್ಚಿನಂತೆ ಭಯಂಕರವಾಗಿ ಸಂತಾಪಗೊಳಿಸುತ್ತಿವೆ. ನಾವು ಈವರೆಗೂ ಬಹಳ ಮೋಸಹೋದೆವು. ಅಜ್ಞಾನದಿಂದ ಸ್ತ್ರೀಯರಲ್ಲಿ ಕಾಮುಕರಾಗಿ ಮೂಢರಾಗಿದ್ದೆವು. ಪರಮ ದಯಾಳುವಾದ ನೀನು ನಮ್ಮ ತಪ್ಪುಗಳನ್ನು ಕ್ಷಮಿಸಿ ನಮ್ಮನ್ನು ಕಾಪಾಡಿ ಉದ್ಧರಿಸು. ನಮ್ಮಂಥ ಅನಾಥರಿಗೆ ನೀನೇ ರಕ್ಷಕನಾಗಿದ್ದೀಯೆ. ॥೯೫॥

ಹೂಗಳಲ್ಲಿ ರಸವೂ ಸೌಂದರ್ಯವೂ ತುಂಬಿರುವುದರಿಂದ ಭ್ರಮರಗಳು ಯಾವ ಹೂಗಳನ್ನು ಮುತ್ತಿಕೊಂಡಿರುತ್ತವೆಯೋ, ಅಂಥ ಮಂದಾರವೇ ಮೊದಲಾದ ಪುಷ್ಪಗಳನ್ನು ಪೋಣಿಸಿ ಆ ಮಾಲಿಕೆಗಳಿಂದ ಆ ಪರಮೇಶ್ವರನನ್ನು ಪೂಜಿಸುತ್ತೇನೆ. ಉಗ್ರನಾಗಿದ್ದರೂ ಸೌಮ್ಯನಾಗಿರುವ ಆ ಗಿರೀಶನನ್ನು ಸ್ತೋತ್ರಗಳಿಂದ ಸ್ತುತಿಸುತ್ತೇನೆ. ॥೯೬॥

ಓ ಶಂಕರನೇ, ನೀನು ಗೋವುಗಳ ಜೊತೆಯಲ್ಲಿ ಸಂಚರಿಸುವ ಕರುಗಳ ಸ್ವರೂಪವಾಗಿರುವೆ. ಮರಗಳ ಮೂಲಭಾಗದಲ್ಲಿರುವ ಬೇರು ಮತ್ತು ಅವುಗಳ

ನಮೋ ನಮಸ್ತೇಽಸ್ತು ಪುನ
ರ್ನಮಸ್ತೇ ನಮೋ ಜಘನ್ಯಾಯ ಚ ಬುಧ್ನಿಯಾಯ ॥೯೭॥

ತಸ್ಮೈ ನಮಸ್ಸರ್ವಗುಣಾರ್ಣವಾಯ
ಸರ್ವಾಮರಾರಾಧಿತಪಾದುಕಾಯ ।
ಗೌರೀಸಮೇತಾಯ ಬಹುಪ್ರಜೇಯಂ
ಯತಃ ಪ್ರಸೂತಾ ಜಗತಃ ಪ್ರಸೂತೀ ॥೯೮॥

ತಸ್ಮೈ ನಮೋ ಮಂಗಲಮಂಗಲಾಯ
ಶ್ರೀಮಂಗಲಾಲಂಕೃತವಿಗ್ರಹಾಯ ।
ವೇದಾಂತಸಂಘಾತಸಮಾಶ್ರಯಾಯ
ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ ॥೯೯॥

ಶಾಖೆ, ಇವುಗಳ ರೂಪದಲ್ಲಿರುವವನೂ ನೀನೇ. ಅಂಥವನಿಗೆ ನಮಸ್ಕಾರ. ನೀನು ಹಿಮಗಿರಿರಾಜನ ಪುತ್ರಿ ಗಿರಿಜೆಯು ಅಚ್ಚುಮೆಚ್ಚಿನ ಪ್ರಿಯಕರನೆನಿಸಿರುವೆ. ಅಂತಹ ನಿನಗೆ ಶತಶಃ ನಮಸ್ಕಾರ. ॥೯೭॥

ಯಾವಾತನ ದೆಸೆಯಿಂದ ಈ ಬಹುಪ್ರಜಾಭೂಯಿಷ್ಠವಾದ ಪ್ರಪಂಚದ ಉತ್ಪತ್ತಿಯು ಉಂಟಾಯಿತೋ, ಆತನು ಶಂಕರನೇ ಆಗಿರುವನು. ಅಂತಹ ಪರಮೇಶ್ವರನು ಸಕಲ ಗುಣಗಳಿಗೂ ನಿಧಿಯಾಗಿರುವನು. ಆತನ ಚರಣಗಳಿಗೆ ಸಮಸ್ತ ದೇವತೆಗಳೂ ವಂದಿಸುವರು. ಆ ಗಿರಿಜಾರಮಣನಿಗೆ ನಾವೂ ವಂದಿಸುತ್ತೇವೆ. ॥೯೮॥

ಆ ಪರಮೇಶ್ವರನಿಗೂ ಮಿಗಿಲಾದ, ಪರತರವಾದ ವಸ್ತುವು ಯಾವುದೊಂದೂ ಇರುವುದಿಲ್ಲೆಂದು ವೇದಾಂತಗಳೆಲ್ಲವೂ ಸಾರುತ್ತವೆ. ಅಂಥ ವೇದಾಂತಗಳಿಗೂ ಆ ಶಂಕರನೇ ಆಶ್ರಯನು. ಸಮಸ್ತ ಮಂಗಳಗಳಿಗೂ ಆ ಪರಮೇಶ್ವರನೇ ಮಂಗಲ ಸ್ವರೂಪನಾಗಿರುವನು. ಮಂಗಲಾಧಿದೇವತೆಯೇ ಆತನನ್ನು ಅಲಂಕರಿಸಿಕೊಂಡಿರುತ್ತಾಳೆ. ಅಂಥ ಪರಮೇಶ್ವರನಿಗೆ ಶತಶಃ ನಮಸ್ಕಾರ. ॥೯೯॥

ಸುಧಾಕರಾಪಾರಕರಪ್ರಸಾರ
ವಿಹಾರತಾರಾಕರಹಾರಭಾರ ।
ನಮೋ ನಮಸ್ತೇಽಸ್ತು ನಮೋ ನಮಸ್ತೇ
ಯಸ್ಮಿನ್ನಿದಂ ಸಂಚವಿಚೈತಿ ಸರ್ವಂ ॥೧೦೦॥

ಹಿರಣ್ಯರೂಪಂ ಚ ಹಿರಣ್ಯಬಾಹುಂ
ಹಿರಣ್ಯನಾಥಂ ಚ ಹಿರಣ್ಯವರ್ಣಂ ।
ನಮಾಮಿ ಫಾಲಸ್ಫುರದಗ್ನಿಜಾಲಂ
ಹಿರಣ್ಯದಂ ತಂ ಶುಚಿವರ್ಣಮಾರಾತ್ ॥೧೦೧॥

ಸೂಕ್ಷ್ಮಾತಿಸೂಕ್ಷ್ಮಾದ್ಭುತವಿಗ್ರಹಾಯ
ಮಹೋನ್ನತಾತ್ಯುನ್ನತಸನ್ನುತಾಯ ।
ನಮೋ ನಮಸ್ತೇ ಶ್ರುತಿಸಂಸ್ತುತಾಯ
ಅಣೋರಣೀಯಾನ್ಮಹತೋ ಮಹೀಯಾನ್ ॥೧೦೨॥

ಅಮೃತಕಿರಣನಾದ ಚಂದ್ರನ ಬೆಳದಿಂಗಳಿನಲ್ಲಿ ವಿಹರಿಸುವ ಪರಮೇಶ್ವರನೇ, ನಕ್ಷತ್ರಮಾಲೆಗಳನ್ನೇ ಮಾಲಿಕೆಯಾಗಿ ಧರಿಸಿರುವ ಶಂಕರನೇ, ನಿನಗೆ ನಮಸ್ಕಾರ. ಈ ಚರಾಚರಾತ್ಮಕವಾದ ಪ್ರಪಂಚವು ಎಲ್ಲಿಂದ ಹುಟ್ಟಿರುವುದೋ, ಎಲ್ಲಿ ಲಯವಾಗುವುದೋ, ಆ ಅಧಿಷ್ಠಾನವು ನೀನೇ ಆಗಿರುವೆ. ಅಂಥ ನಿನಗೆ ಪುನಃ ಪುನಃ ನಮಸ್ಕಾರ. ||೧೦೦||

ಸುವರ್ಣಸ್ವರೂಪನೂ, ಸುವರ್ಣಭುಜನೂ, ಸುವರ್ಣವರ್ಣನೂ, ಸುವರ್ಣಾಧಿಪತಿಯೂ ಆದ ಪರಮೇಶ್ವರನಿಗೆ ನಮಸ್ಕರಿಸುತ್ತೇನೆ. ಆತನು ಲಲಾಟದಲ್ಲಿ ನೇತ್ರರೂಪದಿಂದ ಉಜ್ವಲವಾದ ಅಗ್ನಿಯನ್ನು ಧರಿಸಿರುತ್ತಾನೆ. ಅಮಲವಾದ ಕಾಂತಿಯುಳ್ಳವನು. ಆತನು ಭಕ್ತರಿಗೆ ಸುವರ್ಣವನ್ನೇ ಕೊಡುವನು. ಅಂಥ ಶಂಕರನಿಗೆ ಅತ್ಯಂತ ಸಾಮೀಪ್ಯದ ನಮಸ್ಕಾರವಿರಲಿ. ||೧೦೧||

ಆ ಪರಮೇಶ್ವರನು ಪರಮಾಣುವಿಗಿಂತಲೂ ಸೂಕ್ಷ್ಮನು. ಮಹತ್ತರವಾದ ಮೇರುಪರ್ವತಕ್ಕಿಂತಲೂ ಮಹತ್ತಮನು. ಆದುದರಿಂದಲೇ ಆತನ ಶರೀರವು ಅತಿಸೂಕ್ಷ್ಮವೂ, ಅತಿಮಹತ್ತಮವೂ ಆಗಿದ್ದು ಅದ್ಭುತವಾಗಿರುತ್ತದೆ. ಆತನನ್ನು ಮಹಾಮಹಿಮಶಾಲಿ ಎಂದು ವೇದಗಳೆಲ್ಲವೂ ಸ್ತೋತ್ರಮಾಡುತ್ತವೆ. ||೧೦೨||

ನ ಕೇವಲಂ ಪರ್ವತಮಸ್ತಕೇಷು
ನ ಕೇವಲಂ ಪರ್ವತಮಧ್ಯಭಾಗೇ ।
ನ ಕೇವಲಂ ತದ್ಗಿರಿಮೂಲಭಾಗೇ
ಅಧಸ್ವಿದಾಸೀದುಪರಿಸ್ವಿದಾಸೀತ್ ॥೧೦೩॥

ನ ಕೇವಲಂ ಪೂರ್ವದಿಗಾಶ್ರಿತೋಽಯಂ
ನ ಕೇವಲಂ ತಿಷ್ಠತಿ ದಕ್ಷಿಣಾಯಾಂ ।
ನ ಪಶ್ಚಿಮಾಯಾಮಯಮುತ್ತರಸ್ಯಾಂ
ವ್ಯಾಪ್ತಾಸ್ಸ ಸರ್ವಾಃ ಪ್ರದಿಶೋ ದಿಶಶ್ಚ ॥೧೦೪॥

ಸಂಸಾರರೋಗಾದಿಕರೋಗಜಾಲಂ
ಶ್ರೀಕಾಲಕಾಲಾಖಿಲಲೋಕಪಾಲಂ ।
ದೂರೀಕುರು ತ್ವಂ ತ್ವರಯಾ ದಯಾಬ್ಧೇ
ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ ॥೧೦೫॥

ಆ ಪರಮೇಶ್ವರನು ಕೇವಲ ಪರ್ವತಾಗ್ರಭಾಗದಲ್ಲಿ ಇರುವುದಿಲ್ಲ. ಕೇವಲ ಪರ್ವತದ ಮಧ್ಯಭಾಗದಲ್ಲಿಯೂ ಕಾಣುವುದಿಲ್ಲ. ಕೇವಲ ಮೂಲಭಾಗದಲ್ಲಿಯೂ ತೋರುವುದಿಲ್ಲ. ಪರಂತು ಆತನು ಪರ್ವತಾದಿಗಳ ಅಗ್ರಾಗ್ರಭಾಗಗಳಲ್ಲಿ, ಮಧ್ಯ ಮಧ್ಯಭಾಗಗಳಲ್ಲಿ, ಮೂಲಮೂಲ ಭಾಗಗಳಲ್ಲಿ ಓತಪ್ರೋತವಾಗಿ ವ್ಯಾಪಿಸಿ ಕೊಂಡಿರುತ್ತಾನೆ. ||೧೦೩||

ಆ ಪರಮೇಶ್ವರನು ಕೇವಲ ಪೂರ್ವದಿಕ್ಕಿನಲ್ಲಿ ಇರುವುದಿಲ್ಲ. ದಕ್ಷಿಣದಲ್ಲಿ ಮಾತ್ರವಲ್ಲ, ಪಶ್ಚಿಮೋತ್ತರಗಳಲ್ಲಿ ಮಾತ್ರವಲ್ಲ, ಪರಂತು ದಿಕ್ಕುಗಳು ವಿದಿಕ್ಕುಗಳು ಎಲ್ಲವನ್ನೂ ವ್ಯಾಪಿಸಿಕೊಂಡು ಇರುತ್ತಾನೆ. ||೧೦೪||

ಮೃತ್ಯುಂಜಯನೂ, ಸಮಸ್ತಲೋಕರಕ್ಷಕನೂ ಆದ ಪರಮೇಶ್ವರನೇ, ನೀನು ಸಮಸ್ತ ವೈದ್ಯರಿಗಿಂತಲೂ ಶ್ರೇಷ್ಠನಾದ ವೈದ್ಯನೆಂದು ಕೇಳಿರುವೆನು. ತಿಳಿದಿರುವೆನು. ನೀನು ಈ ನನ್ನ ಸಂಸಾರ ಮತ್ತು ವ್ಯಾಧಿ ಮುಂತಾದ ರೋಗಗಳನ್ನು ದಿವ್ಯವಾದ ಚಿಕಿತ್ಸೆಗಳಿಂದ ಗುಣಪಡಿಸು. ನೀನು ದಯಾನಿಧಿಯಲ್ಲವೇ. ನನ್ನ ಮೇಲೆ ಕನಿಕರ ವಿಟ್ಟು ಶೀಘ್ರವಾಗಿ ಈ ನನ್ನ ರೋಗಗಳನ್ನು ದೂರಮಾಡು. ||೧೦೫||

ಪಶ್ಯಾಧುನಾ ಪಶ್ಯ ಭವತ್ಪದಾಬ್ಜ
ಪೂಜಾರತಂ ಭಸ್ಮವಿಭೂಷಿತಾಂಗಂ ।
ರುದ್ರಾಕ್ಷಮಾಲಾಭರಣಂ ಮಹೇಶ
ಪಶ್ಚಾತ್ಪುರಸ್ತಾದಧರಾದುದಕ್ತಾತ್ ॥೧೦೬॥

ದಯಾಸುಧಾಸಾಗರ ಧೀರಧಾರಾತರಂಗಸಂಗ ತ್ವದಪಾಂಗಸಂಗಾತ್ ।
ವಯಂ ಮಹಾಪಾಪಕುಲಸ್ವರೂಪಾಃ ತ್ವತ್ಪಾದನಾವಾ ದುರಿತಾ ತರೇಮ ॥೧೦೭॥

ದೈನ್ಯಾಂಬುಧಾರಾಧರ ಧೀರಧಾರ
ಪುರಾಪಕಾರಾಕರಮಾದರೇಣ ।
ಮಾಂ ಪಾಲಯಾಭೀಷ್ಟವಿಶಿಷ್ಟ ಮಿಷ್ಟ
ಮೋಜಿಷ್ಠಯಾ ದಕ್ಷಿಣ ಏವ ರಾತಿಂ ॥೧೦೮॥

ಓ ಪರಮೇಶ್ವರನೇ, ನಾನು ನಿನ್ನ ಭಕ್ತನಾಗಿದ್ದೇನೆ. ನೀನು ಮೇಲುಗಡೆಯಲ್ಲಿಯೂ, ಕೆಳಗಡೆಯಲ್ಲಿಯೂ, ಹಿಂಗಡೆಯಲ್ಲಿಯೂ ಎಲ್ಲೆಡೆಯಲ್ಲಿಯೂ ನೀನು ಇರುತ್ತೀಯೆ. ಎಂದು ದೃಢವಾಗಿ ನಂಬಿರುತ್ತೇನೆ. ನಿನ್ನ ಚರಣಕಮಲಗಳನ್ನೇ ಸದಾ ಪೂಜಿಸುತ್ತೇನೆ. ಸರ್ವದಾ ಭಸ್ಮಲೇಪನಮಾಡಿಕೊಂಡಿರುತ್ತೇನೆ. ರುದ್ರಾಕ್ಷಮಾಲೆಯನ್ನು ಧರಿಸಿರುತ್ತೇನೆ. ಇಂಥ ಶಿವಧರ್ಮಮಾತ್ರ ನಿಷ್ಠನಾದ ನನ್ನನ್ನು ಹೇ ಮಹೇಶ, ಕೃಪಾದೃಷ್ಟಿಯಿಂದ ಒಂದು ಸಲ ನೋಡು. ॥೧೦೬॥

ಓ ಮಹೇಶ, ನೀನು ಕರುಣಾಮೃತನಿಧಿಯು, ಮಹಾಧೀರನೂ ಇರುತ್ತೀಯೆ. ನಾವು ಮಹಾಪಾಪಗಳ ಮುದ್ದೆಯೇ ಆಗಿರುತ್ತೇವೆ. ನಮ್ಮಮೇಲೆ ಕೃಪಾಕಟಾಕ್ಷವನ್ನು ಬೀರು. ನಿನ್ನ ಪಾದಸೇವೆಯೆಂಬ ದೋಣಿಯಿಂದ ಈ ಪಾಪಸಮುದ್ರವನ್ನು ದಾಟುತ್ತೇವೆ. ॥೧೦೭॥

ಯದ್ಯಪಿ ನಾನು ಎಷ್ಟೋವೇಳೆ ನಿನ್ನನ್ನು ಸೇವಿಸದೇ ಬಹಳ ಅಪಚಾರ ಮಾಡಿರುತ್ತೇನೆ. ಆದರೂ ನನ್ನ ದೈನ್ಯವನ್ನು ಕೇಳಿ ನೀನು ದಯೆ ತೋರಬೇಕು. ಎಷ್ಟಾದರೂ ನೀನು ಮಹಾಧೀರನೂ ಉದಾರನೂ ಆಗಿರುತ್ತೀಯೆ. ಆದುದರಿಂದ ನನ್ನ ಮೇಲೆ ಗಾಢವಾದ ಕೃಪೆಮಾಡಿ ನನ್ನ ಇಷ್ಟಾರ್ಥಗಳನ್ನು ಪೂರೈಸಿ ನನಗೆ ಸುಖ ಸಂಪತ್ತುಗಳನ್ನು ಕೊಟ್ಟು ಕಾಪಾಡು. ॥೧೦೮॥

ಮಹೇಶ್ವರಾರಾಧನಸಾಧನಾನಾ
ಮಾಸಾದನೇನೈವ ನಯಾಮಿ ಕಾಲಂ ।
ನ ಕಾಲಭಿರ್ದೇಹಿ ಮಮಾಮಿತಾಯು
ರ್ಯದಿ ಕ್ಷಿತಾಯುರ್ಯದಿ ವಾ ಪರೇತಃ ॥೧೦೯॥

ಕದಾ ಮುದಾ ಸುಂದರಮಂದಹಾಸ
ಪುರಸ್ಸರಂ ಮಾಂ ಸ್ಮರವೈರಿರಾರಾತ್ ।
ಭಸ್ಮಾಂಗಮಾಲಿಂಗಸಿ ಸ್ವೋತ್ತಮಾಂಗೈಃ
ಸ್ಥಿರೇಭಿ ರಂಗೈಃ ಪುರುರೂಪ ಉಗ್ರಃ ॥೧೧೦॥

ಕದಾ ತ್ರಿಪುಂಡ್ರಾಂಕಿತಫಾಲಭಾರಂ
ರುದ್ರಾಕ್ಷಮಾಲಾಭರಣಪ್ರಿಯಂ ಚ ।
ಲಿಂಗಾರ್ಚಕಂ ದ್ರಕ್ಷ್ಯಸಿ ರಕ್ಷಣಾಯ
ಹಿರಣ್ಯರೂಪಸ್ಸಹಿರಣ್ಯಸಂದೃಕ್ ॥೧೧೧॥

ಓ ಶಂಕರನೇ, ನನಗೆ ಅಪರಿಮಿತವಾದ ಆಯುಸ್ಸನ್ನು ಕೊಡು. ಅಂದರೆ ನನಗೆ ಮೃತ್ಯುವಿನ ಭಯವಿರುವುದಿಲ್ಲ. ನನ್ನ ಜೀವಮಾನದಲ್ಲಿ ಸರ್ವದಾ ಪರಮೇಶ್ವರನ ಆರಾಧನೆಯನ್ನು ಮಾಡುತ್ತೇನೆ. ಆತನ ಪೂಜಾ ಸಂಭಾರಗಳನ್ನು ಸಿದ್ಧಪಡಿಸಿಕೊಳ್ಳುವುದರಲ್ಲಿಯೇ ಕಾಲವನ್ನು ಕಳೆಯುತ್ತೇನೆ. ಆಗ ಮೃತ್ಯುವು ನನಗೆ ಹೇಗೆ ಬರುವುದು? ಅಥವಾ ಅಂಥ ಮರಣ ಸಮಯ ಬಂದರೂ, ಗಟ್ಟಿಮುಟ್ಟಾಗಿ ಬದುಕಿದ್ದಾಗಲೇ ನಾನು ಆ ಪರಮೇಶ್ವರನನ್ನೇ ಶರಣು ಹೊಂದಿರುವುದರಿಂದ ಆ ಮೃತ್ಯುಭಯವು ನನಗೆ ತಪ್ಪುವುದು. ॥೧೦೯॥

ನನ್ನನ್ನು ಆ ಸ್ಮರವೈರಿಯು ಯಾವಾಗ ಗಾಢವಾಗಿ ಆಲಿಂಗಿಸಿಕೊಳ್ಳುವನು? ನನಗೆ ಎಂದು ಸಾಯುಜ್ಯರೂಪ ಮುಕ್ತಿಯು ದೊರೆಯುವುದು? ಆ ಶಂಕರನು ಎಂದು ಸಂತೋಷದಿಂದ ಮಂದಹಾಸವನ್ನು ಬೀರುತ್ತಾ ಭಸ್ಮಲೇಪಿತನಾದ ನನ್ನನ್ನು ವಿಸ್ರಂಭನಾದ ಅಂಗಗಳಿಂದ ಅಪ್ಪಿಕೊಳ್ಳುವನು? ಪರಮೇಶ್ವರನೇ! ಅಂಥ ಸದವಕಾಶವನ್ನು ನನಗೆ ಶೀಘ್ರವಾಗಿ ಅನುಗ್ರಹಿಸು. ॥೧೧೦॥

ಓ ಶಂಕರನೇ, ನೀನು ಸುವರ್ಣಸ್ವರೂಪನೂ, ಸುವರ್ಣವರ್ಣನೂ ಆಗಿರುತ್ತೀಯೆ. ನಾನು ಶಿವಧರ್ಮವನ್ನು ಆಚರಿಸುತ್ತಿದ್ದೇನೆ. ಸದಾ ಲಲಾಟದಲ್ಲಿ

ಬಿಲ್ವಾದಿಸಂಪೂಜಿತಲಿಂಗಮಧ್ಯಾ
ದ್ವಿನಿರ್ಗತಂ ಬಿಲ್ವದಳಾಂಕಿತಾಂಗಂ ।
ಶಂಗಂ(ಭುಂ)ಪ್ರಪಶ್ಯಾಮಿ ಮುಹುರ್ಮುದಾಹಂ
ಆದಿತ್ಯವರ್ಣಂ ತಮಸಃ ಪರಸ್ತಾತ್ ॥೧೧೨॥

ತಮೇವ ದೇವೋತ್ತಮಮಿಂದುಮೌಳಿಂ
ಭಜಾಮಿ ಭಕ್ತ್ಯಾ ಭಗವಂತಮೇಕಂ ।
ಭವಂ ಭವಾನೀಪತಿಮಾಮನಂತಿ
ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ॥೧೧೩॥

ತಮೇವ ಸಾಂಬಂ ಸತತಂ ಭಜಾಮಿ
ಯಲ್ಲಿಂಗಪೂಜಾಸಮವಾಪ್ತಭಾಗ್ಯಃ ।

ತ್ರಿಪುಂಡ್ರಭಸ್ಮವನ್ನೂ, ರುದ್ರಾಕ್ಷಮಾಲೆಗಳನ್ನೂ ಧರಿಸಿರುತ್ತೇನೆ. ಸದಾ ಶಿವಲಿಂಗವನ್ನು ಪೂಜಿಸುತ್ತಿರುತ್ತೇನೆ. ಇಂಥ ಶಿವಧರ್ಮಮಾತ್ರ ಪರಾಯಣನನ್ನು ಎಂದು ರಕ್ಷಣೆಮಾಡುವೆ? ಎಂದು ಕೃಪಾದೃಷ್ಟಿಯಿಂದ ಈಕ್ಷಿಸುವೆ? ॥೧೧೧॥

ಶಿವಲಿಂಗಕ್ಕೆ ಬಿಲ್ವದಳವೇ ಮೊದಲಾದವುಗಳಿಂದ ಪ್ರಶಸ್ತವಾಗಿ ಪೂಜೆಮಾಡಿ, ಅಂಥ ಲಿಂಗಮಧ್ಯದಿಂದ ಉದ್ಭವಿಸಿ ಪ್ರತ್ಯಕ್ಷನಾದ ಆ ಪರಮೇಶ್ವರನನ್ನು ನಾನು ಎಂದು ನೋಡುವೆನು? ಹಾಗೆ ಪ್ರತ್ಯಕ್ಷವಾಗಿ ನೋಡಿದರೆ ಎಷ್ಟು ಆನಂದವಾಗುವುದು? ಆತನು ತಮೋಗುಣಕ್ಕೆ ವಿದೂರನಾಗಿರುವನು, ಸೂರ್ಯನಂತೆ ಉಜ್ವಲವಾಗಿ ಪ್ರಕಾಶಿಸುವನು. ಅಂತಹ ಸಾಕ್ಷಾತ್ ಮೂರ್ತಿಯನ್ನು ಪದೇ ಪದೇ ನಾನು ನೋಡಲಾರೆನೇ? ॥೧೧೨॥

ಜ್ಞಾನಿಗಳು ತರ್ಕನ್ಯಾಯಗಳಿಂದಲೂ ವೇದಾಂತ ತತ್ತ್ವಗಳಿಂದಲೂ ಆ ಗಿರಿಜಾಪತಿಯೇ ಪರಬ್ರಹ್ಮನೆಂದು ನಿಸ್ಸಂದಿಗ್ಧವಾಗಿ ನಿರ್ಣಯಮಾಡಿಕೊಂಡಿರುತ್ತಾರೆ. ಅಂಥ ದೇವೋತ್ತಮನಾದ ಭಗವಂತನೇ ಚಂದ್ರಶೇಖರನು. ನಾನು ಆತನೊಬ್ಬನನ್ನೇ ಭಕ್ತಿಯಿಂದ ಭಜಿಸುವೆನು. ॥೧೧೩॥

ಈ ಸ್ಥಾವರಜಂಗಮಮಯವಾದ ಪ್ರಪಂಚದ ಸೃಷ್ಟಿಗೆ ಮೊದಲು ಆ ಪರಮೇಶ್ವರನೇ ತಾನೇತಾನಾಗಿ ಏಕರಾಜ್ಯದಿಂದ ಇರತಕ್ಕವನು. ಆತನು ಒಬ್ಬನೇ

ಹಿರಣ್ಯಗರ್ಭಸ್ಸಮವರ್ತತಾಗ್ರೇ
ಭೂತಸ್ಯ ಜಾತಃ ಪತಿರೇಕ ಆಸೀತ್ ॥೧೧೪॥

ತಮೇವ ವಿಶ್ವೇಶ್ವರ ಮಾಶ್ರಯಾಮೋ
ಯೋ ದೇವದೇವೋ ಜಗದೇಕನಾಥಃ ।
ಯದ್ದೃಷ್ಟಿಮಾತ್ರಂ ಶ್ರಿಯಮಾತನೋತಿ
ಶ್ರೀಣಾಮುದಾರೋ ಧರುಣೋ ರಯೀಣಾಂ ॥೧೧೫॥

ಸುಪುತ್ರಪೌತ್ರಾದಿಸಮೃದ್ಧಿಕಾಮಾಃ
ಕಾಮಾದಿಮೇಕಂ ಶರಣಂ ಪ್ರಪನ್ನಾಃ ।
ಯತಸ್ಸಮುಸ್ತೇಪ್ಸಿತದಾನಲೋಲಾ
ದ್ಧಿರಣ್ಯಗರ್ಭಸ್ಸಮವರ್ತತಾಗ್ರೇ ॥೧೧೬॥

ಸತ್ಯಸ್ವರೂಪನು. ಎರಡನೇ ಪದಾರ್ಥವು ವಾಸ್ತವಿಕವಾಗಿ ಇರುವುದಿಲ್ಲ. ಇಂತಹ ಪರಮ ತಾತ್ವಿಕನಾದ ಪರಮೇಶ್ವರನನ್ನು ಪೂಜಿಸುವೆನು. ಆತನ ಲಿಂಗಪೂಜೆ ಯಿಂದಲೇ ನನಗೆ ಭಾಗ್ಯವು ದೊರೆಯುವುದು. ಆ ಎಲ್ಲಾ ಭಾಗ್ಯಗಳಿಂದ ಆತನನ್ನೇ ಭಜಿಸುವೆನು. ॥೧೧೪॥

ದೇವತೆಗಳಿಗೂ ದೇವತೆಯೆನಿಸಿ ಸಕಲ ಜಗತ್ತಿಗೂ ಒಡೆಯನಾಗಿರುವ ಆ ವಿಶ್ವೇಶ್ವರನನ್ನೇ ನಾವು ಆಶ್ರಯಿಸುತ್ತೇವೆ. ಆತನ ಕೃಪಾಕಟಾಕ್ಷವು ಬಿದ್ದೊಡ ನೆಯೇ ಸಕಲ ಸಂಪತ್ತುಗಳೂ ದೊರೆಯುವುವು. ಮನುಷ್ಯಮಾತ್ರನಾಗಿದ್ದರೂ ಉದಾರವಾದ ಸುಖಸಂಪತ್ತುಗಳಿಗೆ ಅಧಿಪತಿಯಾಗುವನು. ಅತ್ಯಂತ ಸುಖಿಯಾಗು ವನು. ॥೧೧೫॥

ಮಕ್ಕಳು, ಮೊಮ್ಮಕ್ಕಳು, ಐಶ್ವರ್ಯ ಮುಂತಾದ ಸಕಲ ಸಂಪತ್ತುಗಳಿಗಾಗಿ ಆ ಮದನಾಂತಕನಾದ ಪರಮೇಶ್ವರನನ್ನೇ ಮರೆಹೋಗುತ್ತೇವೆ. ಆತನೇ ಭಕ್ತರ ಸಕಲ ಇಷ್ಟಾರ್ಥಗಳನ್ನೂ ಮುಕ್ತಹಸ್ತನಾಗಿ ದಾನಮಾಡುವವನು. ಸೃಷ್ಟಿಯ ಪ್ರಾರಂಭದಲ್ಲಿ ಹಿರಣ್ಯಗರ್ಭನಾದ ಪ್ರಜಾಪತಿಯೂ ಆ ಪರಮೇಶ್ವರನಿಂದಲೇ ಉತ್ಪನ್ನನಾಗಿರುವನು. ॥೧೧೬॥

ಮಹೇಶ್ವರಾದೇವ ಸಮಸ್ತಮೇತ
ತ್ಕಲ್ಪಾವಸಾನೇ ಪುನರೇವ ಜಾತಂ ।
ಆದಾವುಮಾಲಿಂಗಿತಸುಂದರಾಂಗಾ
ದ್ದಿವಾ ಚ ನಕ್ತಂ ಪಲಿತೋ ಯುವಾಜನಿ ॥೧೧೭॥

ಭೋ ಲೋಚನೋರುಭ್ರಮರಪ್ರಕೃಷ್ಟ
ಮಂದಾರಕುಂದಾದಿ ಮರಂದಧಾರಂ ।
ವಿಧಾಯ ಗೌರೀಪತಿಮಾಶ್ರಿತೋ ಯಃ
ಸ್ವಾದುಃ ಕಿಲಾಯಂ ಮಧುಮಾಂ ಉತಾಯಂ ॥೧೧೮॥

ಕ್ಷೀರಂ ಘೃತಂ ಶರ್ಕರಯಾ ಸಮೇತಂ
ಗೃಹಾಣ ಜಿಹ್ವೇ ಮಧುರಪ್ರಿಯೇ ತ್ವಂ ।
ಫಲಾನಿ ರಮ್ಯಾಣಿ ಪುನರ್ಗೃಹಾಣ
ಸ್ತುಹಿ ಶ್ರುತಂ ಗರ್ತಸದಂ ಯುವಾನಂ ॥೧೧೯॥

ಪೂರ್ವಕಲ್ಪಾಂತ್ಯದಲ್ಲಿ ಪ್ರಲಯದಿಂದ ಸಮಸ್ತ ಚರಾಚರಗಳೂ ನಾಶ ಹೊಂದಿದ್ದವು. ಪುನಃ ಸೃಷ್ಟಿಯ ಪ್ರಾರಂಭದಲ್ಲಿ ಆ ಗಿರಿಜಾರಮಣನಿಂದಲೇ ಈ ಜಗತ್ತು ಉಂಟಾಗಿರುವುದು. ಆ ಶಂಕರನಿಂದಲೇ ಈ ಹಗಲು, ರಾತ್ರಿ, ತರುಣ, ವೃದ್ಧ ಎಲ್ಲವೂ ಹುಟ್ಟಿರುವುವು. ॥೧೧೭॥

ಎಲೈ ಲೋಚನಗಳೆಂಬ ಭ್ರಮರಗಳೇ, ನಿಮಗೆ ನಿಜವಾದ ಮಕರಂದವು ಬೇಕಾದರೆ ಗೌರೀಪತಿಯ ಪಾದಕಮಲವನ್ನು ಆಶ್ರಯಿಸಿರಿ. ಅಲ್ಲಿ ಮಂದಾರ, ಮಲ್ಲಿಗೆ ಮೊದಲಾದ ಸುಗಂಧಮಯವಾದ ಪುಷ್ಪಗಳ ಮಕರಂದವು ಧಾರಾಕಾರ ವಾಗಿ ಸುರಿಯುತ್ತಿರುವುದು. ಅದನ್ನು ಪಡೆದು ಮಕರಂದಾಸ್ವಾದನಮಾಡಿ ನಿತ್ಯತೃಪ್ತರೆನಿಸಿರಿ. ॥೧೧೮॥

ಮಧುರರಸದಲ್ಲಿ ಪ್ರೀತಿಯುಳ್ಳ ಓ ಜಿಹ್ವೆಯೇ, ಇದೋ ಬೇಕಾದಷ್ಟು ರಸವು ನನಗೆ ಸಿದ್ಧವಾಗಿರುವುದು. ಆ ಪರಮೇಶ್ವರನಿಗೆ ನಿವೇದಿತವಾದ ಹಾಲು, ತುಪ್ಪ, ಹಣ್ಣು, ಇವುಗಳನ್ನು ಯಥೇಚ್ಛವಾಗಿ ಆಸ್ವಾದಮಾಡು. ಆದರೆ ಆ ಪರಮೇಶ್ವರನನ್ನು ಧ್ಯಾನಿಸಲು ಮಾತ್ರ ಮರೆಯಬೇಡ. ಆ ಶಂಕರನನ್ನು ವೇದಗಳೂ ಸಹ ಸ್ತೋತ್ರ ಮಾಡುತ್ತಿವೆ. ಆತನು ಸದಾ ತರುಣನು. ರಂಧ್ರನಿವಾಸಿಯು (ಪಾಣಿಪೀಠದ

ಅತಃ ಪರಂ ಕಾಲಭಯಂ ನ ನೋ ಸ್ಯಾ
ನ್ನ ಗರ್ಭವಾಸಾದಿಭಯಾದಿ ನೂನಂ ।
ಯತೋ ಜಲೈರ್ಬಿಲ್ವದಳೈಃ ಪ್ರಗೇಷು
ಯಕ್ಷ್ಮಾಮಹೇ ಸೌಮನಸಾಯ ರುದ್ರಂ ॥೧೨೦॥

ಶ್ರೀಮನ್ಮಹಾದೇವ ದಯಾಸಮುದ್ರ
ಶ್ರೀಮನ್ಮಹಾರುದ್ರ ಮಮಾಪರಾಧಾನ್
ದೂರೀಕುರು ತ್ವಂ ಕೃಪಯಾ ತ್ವಮೀಶ
ಪಿತೇವ ಪುತ್ರಾನ್ ಪ್ರತಿ ನೋ ಜುಷಸ್ವ ॥೧೨೧॥

ಮಾ ಮವ್ಯಕ್ತವ್ಯಕ್ತಸರ್ವಾಪರಾಧ
ಗಾಧಾಂಭೋಧಿಕ್ರೂರನಕ್ರಾದಿದಷ್ಟಂ ।
ದೃಷ್ಟ್ವಾ ರಿಷ್ಟಾನಿಷ್ಟನಾಶಾಯ ಭೂಯೋ
ದೇವಸ್ತ್ರಾತಾ ತ್ರಾಯತಾಮಪ್ರಯುಚ್ಛನ್ ॥೧೨೨॥

ರಂಧ್ರದಲ್ಲಿರುವ ಶಿವಲಿಂಗದಲ್ಲಿರುವನು.) ಇಂಥ ಪರಮಪವಿತ್ರನಾದ ಭಗವಂತನನ್ನು ಸದಾ ಸ್ತುತಿಸುತ್ತಿರು. ||೧೧೯||

ನಾವು ಪ್ರತಿನಿತ್ಯವೂ ಪ್ರಭಾತಕಾಲದಲ್ಲಿ ಆ ಪರಮೇಶ್ವರನನ್ನು ಪೂಜಿಸುತ್ತೇವೆ. ಸುಖ ಶಾಂತಿಗಳಿಗಾಗಿ, ಸೌಮನಸ್ಯ ಸಿದ್ಧಿಗಾಗಿ ಅಂದರೆ ಚಿತ್ತಶುದ್ಧಿಯನ್ನು ಪಡೆಯಲು ಜಲಗಳಿಂದಲೂ ಬಿಲ್ವದಳಗಳಿಂದಲೂ ಅರ್ಚಿಸುತ್ತೇವೆ. ಅಂದಮೇಲೆ ಇನ್ನು ಮುಂದೆ ನನಗೆ ಮೃತ್ಯುಭಯವೆಲ್ಲಿಯದು? ಪುನರ್ಜನ್ಮವೆಲ್ಲಿಯದು? ನನಗೆ ಯಾವ ಭಯವೂ ಇರುವುದಿಲ್ಲ. ||೧೨೦||

ಮಹಾದೇವನೇ, ನೀನು ದಯಾಸಾಗರನಿರುವೆ. ನನ್ನ ಯಾವತ್ತೂ ಅಪರಾಧಗಳನ್ನು ಮನ್ನಿಸು. ದಯೆಯಿಟ್ಟು ನನ್ನನ್ನು ಉದ್ಧರಿಸು. ತಂದೆಯು ತನ್ನ ಪುತ್ರರಲ್ಲಿ ಯಾವ ಮಮತೆಯನ್ನೂ ವಾತ್ಸಲ್ಯವನ್ನೂ ಇಟ್ಟಿರುತ್ತಾನೆಯೋ ಹಾಗೆಯೇ ನಮ್ಮಲ್ಲಿ ನಿನ್ನ ವಾತ್ಸಲ್ಯವನ್ನು ತೋರು. ||೧೨೧||

ಯದ್ಯಪಿ ನಾನು ಅಜ್ಞಾನದಿಂದಲೋ ಅಥವಾ ತಿಳಿದೋ ಅನೇಕ ಅಪರಾಧಗಳನ್ನು ಮಾಡಿರುವೆನು. ಅದೊಂದು ಸಮುದ್ರದಂತೆ ಅಗಾಧವಾಗಿದೆ. ಅವುಗಳಲ್ಲಿ

ಯತ್ಪಾದಾಬ್ಜಂ ಯೋಗಿಭಿರ್ನೈವ ದೃಷ್ಟಂ
ಬ್ರಹ್ಮಾದ್ಯೈರ್ವಾ ಸಿದ್ಧಸಂಘೈರನೇಕೈಃ ।
ಯಸ್ಯ ಧ್ಯಾನಾತ್ಸರ್ವದಾ ಸರ್ವಸಿದ್ಧಿಸ್ತತ್ವಾ
ಯಾಮಿ ಬ್ರಹ್ಮಣಾ ವಂದಮಾನಃ ॥೧೨೩॥

ನಮಾಮಿ ದುಂಢಿಂ ಮದಸಿಕ್ತಗಂಡಂ
ಹತಾಘಷಂಡಂ ವಿಧೃತೋರ್ಧ್ವತುಂಡಂ ।
ಸ್ವಭಕ್ತವಿಘ್ನಾರ್ತಿಹರಂ ಪ್ರಚಂಡಂ
ಪರಾತ್ಪರಂ ಯನ್ಮಹತೋ ಮಹಾಂತಂ ॥೧೨೪॥

ಮುಳುಗಿರುವ ನಾನು ದುಷ್ಟಜಲಚರಗಳಿಂದ ಕಚ್ಚಿಕೊಂಡಷ್ಟು ವ್ಯಥೆಯನ್ನು ಅನುಭವಿಸುತ್ತಿದ್ದೇನೆ. ಹೀಗೆ ದುಃಖದಲ್ಲಿ ತೋರುತ್ತಿರುವ ನನ್ನನ್ನು, ನನ್ನ ದುರವಸ್ಥೆಯನ್ನೂ ನೋಡಿ, ಕೃಪೆಮಾಡಿ ಕಾಪಾಡು. ನನ್ನ ಕಷ್ಟಗಳನ್ನೂ ಅಮಂಗಳಗಳನ್ನೂ ದೂರಮಾಡು. ನನ್ನ ರಕ್ಷಕನು ನೀನೇ ಆಗಿರುವುದರಿಂದ, ನಾನು ಬೇಡಿಕೊಳ್ಳದಿದ್ದರೂ ಸರ್ವದಾ ಉದ್ಧರಿಸಿ ಕಾಪಾಡು. ॥೧೨೨॥

ಯೋಗಿಗಳೂ, ಸಿದ್ಧರೂ, ಬ್ರಹ್ಮನೇ ಮೊದಲಾದ ದೇವತೆಗಳೂ ಸಹ ಯಾವ ನಿನ್ನ ಚರಣಕಮಲಗಳನ್ನು ನೋಡಲು ಶಕ್ತರಾಗಿಲ್ಲವೊ, ಯಾವ ಚರಣ ಕಮಲಗಳ ಧ್ಯಾನಮಾಡುವುದರಿಂದ ಸರ್ವದಾ ಸರ್ವಸಿದ್ಧಿಗಳೂ ಲಭಿಸುವುವೋ, ಆ ಚರಣಕಮಲಗಳನ್ನು ನಾನು ಆಶ್ರಯಿಸುತ್ತೇನೆ. ಶಂಕರನೇ, ನಿನ್ನನ್ನು ವೇದೋಕ್ತವಾದ ಮಂತ್ರವನ್ನು ಹೇಳುತ್ತಾ ವಂದಿಸುತ್ತೇನೆ. ॥೧೨೩॥

ಆ ಗಜಾನನು ಸಕಲ ಪಾಪಗಳನ್ನೂ ನಾಶಮಾಡುವವನು. ದುಂಢಿರಾಜ ಎಂಬ ದಿವ್ಯನಾಮದಿಂದ ಆತನು ಶೋಭಿಸುವನು. ಆತನು ತನ್ನ ಭಕ್ತರ ಸಕಲ ವಿಘ್ನಗಳನ್ನೂ ಧ್ವಂಸಮಾಡುವನು. ಆತನು ಪ್ರಚಂಡನೂ ಪರಾತ್ಪರನೂ ಆಗಿದ್ದಾನೆ. ಮಹತ್ಪದಾರ್ಥಗಳೆಲ್ಲವುಗಳಿಂದಲೂ ಮಹತ್ತಮನಾಗಿರುವ ಆ ಗಣಪತಿಯನ್ನು ನಮಸ್ಕರಿಸುತ್ತೇನೆ. ॥೧೨೪॥

ಗಣಾಧಿಪಂ ಗಂಡತಲಾಲಿಕೋಟಿಭಿಃ
ಕಿರೀಟಕೋಟಿಧ್ವಜನಿರ್ಜಿತಾಂಬುದೈಃ ।
ಸಂಸೇವಿತಾಂಘ್ರಿಂ ಪ್ರಣಯಾಮಿ ಸರ್ವದಾ
ಕವಿಂ ಕವೀನಾಮುಪಮಶ್ರವಸ್ತಮಂ ॥೧೨೫॥

ನಮೋ ಭವಾನ್ಯೈ ಭವತಾಪಭೀರು
ಸ್ವಭಕ್ತಸಂರಕ್ಷಣಸತ್ವರಾಯೈ ।
ಆನಂದದಾ ಹಾರವಿಹಾರದಾ ಯಾ
ಚತುಷ್ಕಪರ್ದಾ ಯುವತಿಸ್ಸುಪೇಶಾಃ ॥೧೨೬॥

ತಾರಾಭಿತಾರಾಮರಹಾರಹೀರ
ಪ್ರಸಾರಧಾರಾನಿಕರೋಪಕಾರಾಂ ।
ಚಿರಾಯ ಧೀರಾಂ ಭಜ ಚಿತ್ತ ಗೌರೀಂ
ವಚೋವಿದಂ ವಾಚಮುದೀರಯಂತೀಂ ॥೧೨೭॥

ಆ ಗಣಪತಿಯ ಗಂಡಸ್ಥಲದ ಮದೋದಕವನ್ನು ಪಾನಮಾಡಲು ಭ್ರಮರಗಳು ಮುತ್ತಿ ಮುತ್ತಿ ಅಲಂಕರಿಸುತ್ತಿರುವುವು. ಸಕಲ ದೇವತೆಗಳೂ ಆತನ ಪಾದಪದ್ಮಗಳ ಸೇವೆಯನ್ನು ಮಾಡುವರು. ಆತನು ಮಹಾಕವಿಯು. ಕವಿಗಳೆಲ್ಲರಿಗೂ ಮುಖ್ಯ ಉಪಾಸ್ಯದೈವವೂ ಆಗಿರುವನು. ಇಂಥ ಮಹಿಮಾಶಾಲಿಯಾದ ಗಣಾಧಿಪನನ್ನು ಸರ್ವದಾ ನಮಸ್ಕರಿಸುವೆನು. ||೧೨೫||

ಆ ಭಗವತಿಯಾದ ಗಿರಿಜೆಗೆ ನಮಸ್ಕಾರ. ದೇವಿಯು ತನ್ನ ಭಕ್ತರ ಸಾಂಸಾರಿಕ ತಾಪತ್ರಯವನ್ನು ಹೋಗಲಾಡಿಸಿ ಕಾಪಾಡುವುದಕ್ಕೆ ಸದಾ ಸನ್ನದ್ಧಳಾಗಿರುವಳು. ತಾಯಿಯು ನೀಳವಾದ ಕೇಶಪಾಶದಿಂದ ಕೂಡಿದವಳಾಗಿ ಅತ್ಯಂತ ಕೋಮಲಳೂ ಭವ್ಯವಾದ ಸೌಂದರ್ಯವತಿಯಾಗಿರುವಳಲ್ಲದೇ, ಸದಾ ಯುವತಿಯೇ ಆಗಿರುವಳು. ಆಕೆಯು ತನ್ನ ಭಕ್ತರಿಗೆ ಸುಖಸಂತೋಷಗಳನ್ನೂ, ಭೋಗವಿಲಾಸಗಳನ್ನೂ ಇತ್ತು ಕಾಪಾಡುವಳು. ||೧೨೬||

ದೇವತೆಗಳು ನಕ್ಷತ್ರಮಾಲಿಕೆಗಳನ್ನೂ, ಮುಕ್ತಾಹಾರಗಳನ್ನೂ ಧರಿಸಿರುತ್ತಾರೆ. ಆ ದೇವತೆಗಳ ಸಂಪತ್ತುಗಳು ಈ ಭಗವತಿಯ ಅನುಗ್ರಹದಿಂದಲೇ

ನಮಾಮಿ ತಾಮೇವ ಜಗಜ್ಜನಿತ್ರೀಂ
ಕರೋತಿ ಕಾಶ್ಮೀರರಸಪ್ರಸಾರೈಃ ।
ಸರಕ್ತವರ್ಣೈರ್ಗಿರಿಜಾಕುಚೈರ್ಯಾ
ಶ್ರಿಯಂ ಸಖಾಯಂ ಪರಿಷಸ್ವಜಾನಾ ॥೧೨೮॥

ತಾಮೇವ ವಂದೇ ಗಿರಿರಾಜಕನ್ಯಾಂ
ಯತ್ಪಾದುಕಾರಾಧನತಃ ಸುಖಾನಿ ।
ಮಹೇಶ್ವರಾಂಕಸ್ಥಲಸನ್ನಿವಿಷ್ಟಾ
ವಿಶ್ವಾನಿ ದೇವೀ ಭುವನಾಭಿಚಕ್ಷ್ಯೈ ॥೧೨೯॥

ವಿಶಾಲವೂ ಪರಿಪೂರ್ಣವೂ ಆಗಿರುತ್ತವೆ. ಆಕೆಯು ವಜ್ರವೃಷ್ಟಿಯನ್ನೇ ಸುರಿಸ ಬಲ್ಲಳು. ಅಂಥ ಉದಾರಳಾದ ಭಗವತಿಯನ್ನು ನನ್ನ ಮನಸ್ಸು ಸದಾ ಧ್ಯಾನ ಮಾಡಲಿ. ಆ ಭಗವತಿಯು ಯಾವಾಗಲೂ ಸುಸಂಸ್ಕೃತವೂ ತರ್ಕಶುದ್ಧವೂ ಆದ ಮಾತನ್ನೇ ಆಡುವಳು. ಅಂದರೆ ಆಕೆಯನ್ನು ಭಜಿಸಿದರೆ ನಾನೂ ಶುದ್ಧವಾಣಿ ಯುಳ್ಳವನೂ ಮತ್ತು ನ್ಯಾಯವಿದನೂ ಆಗಬಲ್ಲೆನು. ||೧೨೭||

ಆ ಭಗವತಿಯು ಅತ್ಯುತ್ತಮವಾದ, ಕಾಶ್ಮೀರದ ಕುಂಕುಮ ಕಸ್ತೂರಿಯೇ ಮೊದಲಾದ ಪರಿಮಳದ್ರವ್ಯಗಳನ್ನು ತನ್ನ ಕುಚಗಳಲ್ಲಿ ಧಾರಣೆಮಾಡಿಕೊಂಡಿರು ತ್ತಾಳೆ. ಆ ಸುಗಂಧದ್ರವ್ಯಗಳ ಕಾಂತಿಯು ಅತ್ಯಂತ ಉಜ್ವಲವಾಗಿರುತ್ತದೆ. ಹೀಗೆಯೇ ಅತ್ಯುತ್ತಮ ರೀತಿಯಿಂದ ಅಲಂಕೃತಳಾದ ಭಗವತಿಯು ತನ್ನ ಜೀವನಸಂಗಿಯೂ, ಪ್ರಿಯತಮನೂ ಆದ ಪರಮೇಶ್ವರನನ್ನು ಆಲಂಗಿಸಿಕೊಳ್ಳುವಳು. ಇಂಥ ಪರಮ ಸೌಭಾಗ್ಯವತಿಯೂ ಜಗನ್ಮಾತೆಯೂ ಆದ ಆ ಗಿರಿಜೆಯನ್ನು ನಮಸ್ಕರಿಸುತ್ತೇನೆ. ||೧೨೮||

ಯಾವ ಭಗವತಿಯ ಚರಣಕಮಲಗಳನ್ನು ಆಶ್ರಯಿಸಿ ಆರಾಧಿಸುವುದರಿಂದ ಸಕಲ ಸುಖಸಂಪತ್ತುಗಳೂ ಕರಗತವಾಗುತ್ತವೆಯೋ, ಆ ಗಿರಿರಾಜ ಕುಮಾರಿಕೆ ಯನ್ನು ನಮಸ್ಕರಿಸುತ್ತೇನೆ. ಆ ಭಗವತಿಯು ಪರಮೇಶ್ವರನ ವಾಮಭಾಗದಲ್ಲೇ ಇದ್ದುಕೊಂಡು ಪ್ರಪಂಚದ ಎಲ್ಲಾ ಆಗುಹೋಗುಗಳನ್ನೂ, ವ್ಯವಹಾರಗಳನ್ನೂ ಸಾಕ್ಷಿಯಾಗಿ ನಡೆಸುವಳು. ||೧೨೯||

ಮಂದಾರಾದಿಸ್ರಗ್ವಿಶೇಷಾಲಿವೃಂದಾ
ಮಂದಧ್ವಾನಾಕರ್ಣನಾಸಕ್ತಚಿತ್ತಾಂ ।
ವಂದೇ ಮಂದಂ ಭಕ್ತಸಂರಕ್ಷಣಾರ್ಥಂ
ವಂದೇ ದೇವಂ ರಾಧಸೇ ಚೋದಯಂತೀಂ ॥೧೩೦॥

ವಂದೇ ಭೂಯೋ ಮಂದಹಾಸೋಪಹಾಸ
ವ್ಯಾಸಕ್ತಶರ್ವಮಮರಂ ಮಹೇಶಂ ।
ಕ್ರೀಡಾಲೋಲಂ ಕರ್ತುಮಭ್ಯುದ್ಯತಾಂತಾ
ಮೇಷಾ ನೇತ್ರೀ ರಾಧಸಃ ಸೂನೃತಾನಾಂ ॥೧೩೧॥

ಭವಾನಿ ಮಾತಸ್ತ್ರಿಜಗಜ್ಜನಿತ್ರಿ
ತ್ವಮಂಬ ಅಂಬಾಧರರಾಗಭಾಗ್ಯೈಃ ।

ಆ ಭಗವತಿಯು ಮಂದಾರವೇ ಮೊದಲಾದ ಉತ್ತಮ ಪುಷ್ಪಮಾಲೆಗಳನ್ನು ಧರಿಸಿರುತ್ತಾಳೆ. ಆ ಹೂಗಳ ಸುವಾಸನೆಯಿಂದ ವಶೀಕೃತಗಳಾದ ಭ್ರಮರಗಳು ಅತ್ಯಂತ ಮತ್ತತೆಯಿಂದ ಝೇಂಕಾರ ಮಾಡುತ್ತಾ ಬಂದು ಮುತ್ತಿಕೊಳ್ಳುವುವು. ಈ ಭ್ರಮರಗಳ ಮಂದವಾದ ಧ್ವನಿಯನ್ನು ಕೇಳುತ್ತ ಕೇಳುತ್ತಾ ಭಗವತಿಯಲ್ಲಿ ಒಂದು ಅಪೂರ್ವವಾದ ಸೌಭಾಗ್ಯವೂ ವೈಚಿತ್ರ್ಯವೂ ಹೊರಹೊಮ್ಮುವುದು. ಹೀಗಿದ್ದರೂ ಲೋಕಯಾತ್ರೆಯನ್ನೂ ಭಕ್ತರ ರಕ್ಷಣೆಯನ್ನೂ ಆಕೆಯು ಕೊಂಚವೂ ಮರೆಯುವುದಿಲ್ಲ. ಯಥಾಕಾಲದಲ್ಲಿ ಭಕ್ತರಿಗೆ ಸುಖಸಂಪತ್ತುಗಳನ್ನೂ ಸಂರಕ್ಷಣೆಯನ್ನೂ ಅನುಗ್ರಹಿಸುವುದಕ್ಕೆ ಪರಮೇಶ್ವರನನ್ನು ಪ್ರೇರಿಸುತ್ತಾಳೆ. ॥೧೩೦॥

ಆ ಭಗವತಿಯು ಜರಾಮರಣ ವಿದೂರನಾದ ಪರಮೇಶ್ವರನನ್ನು ನಾನಾ ವಿಧವಾದ ಉಪಹಾಸಗೋಷ್ಠಿಗಳಿಗೂ ಅನೇಕ ತರಹವಾದ ಮಧುರಪ್ರಬಂಧಗಳಿಗೂ ಒತ್ತಾಯದಿಂದ ಕರೆದೊಯ್ಯುತ್ತಾಳೆ. ಆಕೆಯೇ ತಾತ್ತ್ವಿಕವಾದ ಸೌಭಾಗ್ಯಸಮುನ್ನತಿಗಳಿಗೂ ಐಶ್ವರ್ಯ ಸಂಪತ್ತುಗಳಿಗೂ ಅಧಿಪತಿಯಾಗಿರುತ್ತಾಳೆ. ಅಂಥ ಭಗವತಿಯನ್ನು ಪುನಃ ಪುನಃ ನಮಸ್ಕರಿಸುತ್ತೇನೆ. ॥೧೩೧॥

ಜಗನ್ಮಾತೆಯೇ! ಭವಾನಿಯೇ! ನಿನ್ನ ಅಧರವು (ಕೆಳತುಟಿ) ಅತ್ಯಂತ ಸೌಭಾಗ್ಯಶಾಲಿಯಾದುದು. ಆ ಅಧರವಿಲಾಸಲೇಶದಿಂದ ನಮ್ಮನ್ನು ಅನುಗ್ರಹಿಸು.

ಶ್ರಿಯಾ ಪ್ರದೇಹಿ ತ್ವರಯಾ ಪ್ರಿಯಾನ್ನೋ
ಯಯಾತಿ ವಿಶ್ವಾ ದುರಿತಾ ತರೇಮ ॥೧೩೨॥

ಕಸ್ತೇ ಸ್ತುತಿಂ ಕರ್ತುಮಿಹಾಸ್ತಿ ಶಕ್ತೋ
ಯಾ ಮಿಂದಿರಾ ಸುಂದರಚಂದನಾದ್ಯೈಃ ।
ಸಮರ್ಚಯಾಮಾಸ ಸರಸ್ವತೀ ಚ
ಸರಸ್ವತೀ ವಾ ಸುಭಗಾ ದದಿರ್ವಸು ॥೧೩೩॥

ಇತಿ ಸ್ತುತೋ ಮಹಾದೇವೋ ವರಾನ್ ದತ್ವಾ ತದೀಪ್ಸಿತಾನ್ ।
ಪುನರ್ವರಾಂತರಂ ದಾತುಮುವಾಚ ವಚನಂ ಮುದಾ ॥೧೩೪॥

ತ್ವಯಾ ಕೃತಂ ಸ್ತೋತ್ರಶಿಖಾಮಣಿಂ ಯಃ
ಕಂಠೇ ಲುಠಂತಂ ಕುರುತೇತಿಭಕ್ತ್ಯಾ ।

ಆದರಿಂದಲೇ ನಮಗೆ ಸಮೃದ್ಧಿಯಾಗಿ ಸಂಪತ್ತು ಲಭಿಸುವುದು. ಆ ಸಂಪತ್ತಿನಿಂದ ಈ ನಮ್ಮ ಹೀನ, ದೀನವಾದ ಕಷ್ಟಪರಂಪರೆಗಳನ್ನು ದಾಟುತ್ತೇವೆ. ॥೧೩೨॥

ಭಗವತಿಯೇ! ನಿನ್ನನ್ನು ಐಶ್ವರ್ಯನಿಲಯೆಯಾದ ಲಕ್ಷ್ಮಿಯೂ, ವಿದ್ಯಾಧಿದೇವತೆಯಾದ ಸರಸ್ವತಿಯೂ ಮಹಾ ಭಕ್ತಿಪೂರ್ವಕವಾಗಿ ಚಂದನವೇ ಮೊದಲಾದ ಉಪಕರಣಗಳಿಂದ ಪೂಜಿಸುವರು. ಇಂಥ ಮಹಾಮಹಿಮಶಾಲಿಯಾದ ನಿನ್ನನ್ನು ಸಮಗ್ರವಾಗಿ ಸ್ತುತಿಸಲು ಯಾರುತಾನೇ ಶಕ್ತರಿರುವರು? ಆದರೂ ನನ್ನ ಅಲ್ಪಸ್ತುತಿಯಿಂದಲೇ ಪ್ರಸನ್ನಳಾಗಿ ನನಗೆ ವಾಗ್ವಿಭವವನ್ನೂ, ಸಂಪತ್ಸಮೃದ್ಧಿಯನ್ನೂ ಅನುಗ್ರಹಿಸು. ॥೧೩೩॥

ಈರೀತಿಯಾಗಿ ಅಗಸ್ತ್ಯನು ಪರಮೇಶ್ವರನನ್ನೂ, ಪರಮೇಶ್ವರನ ಪಂಚಾಯತನವನ್ನೂ ಭಕ್ತಿಯಿಂದ ಸ್ತುತಿಸಲು, ಆ ಭಕ್ತವತ್ಸಲನಾದ ಶಂಕರನು ಸಂತುಷ್ಟನಾಗಿ ಅಗಸ್ತ್ಯನು ಬೇಡಿದ ಎಲ್ಲಾ ವರಗಳನ್ನೂ ಕೊಟ್ಟನು. ಅಲ್ಲದೇ ಬೇರೊಂದು ವರವನ್ನೂ ಸಹ ಕೊಡಬೇಕೆಂಬ ಅಭಿಪ್ರಾಯದಿಂದ ಪ್ರಮೋದವನ್ನು ಸೂಚಿಸುತ್ತಾ ಹೇಳಿದನು. ॥೧೩೪॥

ಎಲೈ ಅಗಸ್ತ್ಯನೇ! ನೀನು ಮಾಡಿದ ಸ್ತೋತ್ರವು ಬಹಳ ಶ್ರೇಷ್ಠವಾಗಿರುವುದು. ಶಿವಸ್ತೋತ್ರಗಳಲ್ಲೆಲ್ಲಾ ಚೂಡಾಮಣಿಯಂತಿದೆ. ಇಂಥ ಉತ್ತಮವಾದ ಸ್ತೋತ್ರವನ್ನು ಯಾರು ಕಂಠಸ್ಥಮಾಡಿಕೊಂಡು ಸದಾ ಹೇಳುತ್ತಿರುತ್ತಾರೆಯೋ,

ತಮಾಶು ಸಂಪಜ್ಜಲರಾಶಯಸ್ತಾಃ
ಪರಿಷ್ವಜಂತೇ ಜನಯೋ ಯಥಾ ಪತಿಂ ॥೧೩೫॥

ಇಮಂ ಸ್ತವಂ ಯಃ ಪಠತಿ ಪ್ರಭಾತೇ
ಮಧ್ಯಾಹ್ನಕಾಲೇಽಪಿ ಮಹಾಪ್ರದೋಷೇ ।
ತಸ್ಯ ಪ್ರಯಾಂತಿ ಪ್ರಹಶಾ ಇವಾಶು
ಭಿಯಂ ದಧಾನಾ ಹೃದಯೇಷು ಶತ್ರವಃ ॥೧೩೬॥

ಲಭಂತೇ ಜಪಂತಶ್ಶ್ರಿಯಂ ಕೀರ್ತಿಕಾಮಾ
ಲಭಂತೇ ಧನಂ ಧಾನ್ಯಮಶ್ವಾದಿಕಂ ಚ ।
ಲಭಂತೇ ಯಥಾಯುಃ ಪ್ರವೃದ್ಧಂ ಪ್ರವೃದ್ಧಾನ್
ಲಭಂತೇಽಪುತ್ರಾನ್ ಲಭಂತೇಽಪೌತ್ರಾನ್ ॥೧೩೭॥

ಅವರಿಗೆ ಸಕಲ ಸಂಪತ್ತುಗಳೂ ಲಭಿಸುವುವು. ಈ ಸ್ತೋತ್ರ ಪಾಠಮಾಡುವವರನ್ನು ಸಕಲ ಸಂಪತ್ತುಗಳೂ, ನೂತನ ವಧುವು ತನ್ನ ಪತಿಯನ್ನು ಹೇಗೆ ಸ್ವತಃ ತಾನೇ ಆಲಿಂಗಿಸಿಕೊಳ್ಳುವಳೋ, ಹಾಗೆಯೇ ಬಂದು ಸೇರುತ್ತವೆ. ॥೧೩೫॥

ಈ ಮಹತ್ತರವಾದ ಸ್ತೋತ್ರವನ್ನು, ಪ್ರಾತಃಕಾಲದಲ್ಲಿಯಾಗಲಿ, ಮಧ್ಯಾಹ್ನ ಕಾಲದಲ್ಲಿಯಾಗಲಿ, ಅಥವಾ ಪ್ರದೋಷಕಾಲದಲ್ಲಿಯಾಗಲಿ ಯಾರು ನಿಯಮ ದಿಂದಲೂ ಭಕ್ತಿಯಿಂದಲೂ ಪಾರಾಯಣಮಾಡುವರೋ, ಅವರ ಶತ್ರುಗಳೆಲ್ಲಾ ತಮ್ಮಷ್ಟಕ್ಕೆ ತಾವೇ ಹೆದರಿಕೊಂಡು ಓಡಿಹೋಗುವರು. ಇದನ್ನು ಪಾರಾಯಣ ಮಾಡುವವರಿಗೆ ಶತ್ರುಗಳಿಂದ ಯಾವ ಕೇಡೂ ಉಂಟಾಗುವುದಿಲ್ಲ. ॥೧೩೬॥

ಈ ಸ್ತೋತ್ರವನ್ನು ಧನಾಪೇಕ್ಷಿಗಳು ಪಾರಾಯಣಮಾಡಿದರೆ, ಧನಧಾನ್ಯ, ಅಶ್ವಾದಿ ಸಂಪತ್ತುಗಳು ಮುಂತಾದ ಸಕಲ ಇಷ್ಟಾರ್ಥಗಳನ್ನೂ ಪಡೆಯುತ್ತಾರೆ. ಕೀರ್ತಿಕಾಮಿಗಳು ಪಾರಾಯಣಮಾಡಿದರೆ ಲೋಕವಿಖ್ಯಾತವಾದ ಕೀರ್ತಿಯನ್ನು ಹೊಂದುತ್ತಾರೆ. ಆಯುಷ್ಕಾಮಿಗಳು ಸುದೀರ್ಘವಾದ ಆಯುಸ್ಸನ್ನೂ, ಪುತ್ರಾರ್ಥಿ ಗಳು ಪುತ್ರಪೌತ್ರಾದಿ ಸಂತಾನಸಂಪತ್ತನ್ನೂ ಈ ಸ್ತೋತ್ರದ ಪಾರಾಯಣದಿಂದ ಪಡೆಯುತ್ತಾರೆ. ಅಂದರೆ ಐಹಿಕವಾದ ಸಕಲ ಕೋರಿಕೆಗಳೂ ಈ ವೇದಪಾದಸ್ತವದ ಪಠನೆಯಿಂದ ದೊರಕುತ್ತವೆ ಎಂದು ಅರಿಯಬೇಕು. ॥೧೩೭॥

ಇತಿ ದತ್ವಾ ವರಾಂಸ್ತಸ್ಮೈ ತತ್ರೈವಗಿರಿಜಾಪತಿಃ ।
ಅಂತರ್ದಧೇ ಗಣೇಶಾದ್ಯೈಸ್ಸಹ ಲಿಂಗೇ ಶಿವಾತ್ಮಕೇ ॥೧೩೮॥

ಶ್ರೀಶೈಲೇಶ್ವರಲಿಂಗತುಲ್ಯಮಮಲಂ ಲಿಂಗಂ ನ ಭೂಮಂಡಲೇ
ಬ್ರಹ್ಮಾಂಡಪ್ರಲಯೇಽಪಿ ತಸ್ಯ ವಿಲಯೋ ನಾಸ್ತೀತಿ ವೇದೋಕ್ತಯಃ ।
ತಸ್ಮಾತ್ತತ್ಪೂಜನೇನ ಮುಕ್ತಿರಖಿಲೈಃ ಪ್ರಾಪ್ಯಾ ನ ಸಾ ದುರ್ಲಭಾ
ತತ್ಪೂಜಾನಿರತಸ್ಯ ದುರ್ಲಭತಮಂ ಕಿಂ ವಾ ಜಗನ್ಮಂಡಲೇ ॥೧೩೯॥

ಇತಿ ಶ್ರೀಶಿವರಹಸ್ಯೇ ತೃತೀಯಾಂಶೇ ಹರಾಖ್ಯೇ ಪೂರ್ವಾರ್ಧೇಽಅಗಸ್ತ್ಯ
ಮಹಾಮುನಿಕೃತ ವೇದಪಾದಸ್ತವವರ್ಣನಂ ನಾಮ
ಪಂಚತ್ರಿಂಶೋಽಧ್ಯಾಯಃ

ಈರೀತಿಯಾಗಿ ಅಗಸ್ತ್ಯನಿಗೆ ಅನೇಕ ವರಗಳನ್ನೂ, ಸ್ತೋತ್ರವಿಚಾರದಲ್ಲಿ ಶ್ಲಾಘನೆಯನ್ನೂ ಕೊಟ್ಟು, ಗಣಪತಿಯೇ ಮೊದಲಾದ ಪಂಚಾಯತನ ಪರಿವಾರ ದೊಡನೆ ಪರಮೇಶ್ವರನು ಅಲ್ಲಿಯೇ ಶಿವಾತ್ಮಕವಾದ ಶಿವಲಿಂಗದಲ್ಲಿ ಅಂತರ್ಧಾನ ಪಡೆದನು. ಎಂದು ಸೂತರು ಹೇಳಿ ಮುಂದೆ ಶ್ರೀಶೈಲದ ಮಹಿಮೆಯನ್ನು ಸ್ವಲ್ಪ ಮಟ್ಟಿಗೆ ವಿವರಿಸಲಾರಂಭಿಸಿದರು. ॥೧೩೮॥

ಅಖಂಡ ಭೂಮಂಡಲದಲ್ಲಿ ಶ್ರೀಶೈಲಕ್ಷೇತ್ರದಷ್ಟು ಪವಿತ್ರತಮವಾದದ್ದೂ, ಮಹಿಮಾಶಾಲಿಯಾದದ್ದೂ ಬೇರೊಂದು ಕ್ಷೇತ್ರವಿರುವುದಿಲ್ಲ. ಶ್ರೀಶೈಲೇಶ್ವರ ಲಿಂಗದಷ್ಟು ಅದ್ಭುತವಾದ ಶಿವಲಿಂಗವೂ ಬೇರೊಂದಿಲ್ಲ. ಆ ಶ್ರೀಶೈಲಕ್ಷೇತ್ರವು ಮಹಾಪ್ರಲಯದಲ್ಲಿಯೂ ನಾಶವಾಗುವುದಿಲ್ಲೆಂದು ಶ್ರುತಿಗಳೆಲ್ಲಾ ಸಾರುತ್ತವೆ. ಅಂದ ಮೇಲೆ ಅದರ ಮಹಾತ್ಮ್ಯೆಯನ್ನು ಎಷ್ಟೆಂದು ಹೇಳುವುದು? ಇಂಥ ಮಹತ್ತರವಾದ ಕ್ಷೇತ್ರದಲ್ಲಿ ವಾಸಮಾಡುತ್ತಾ ಆ ಶ್ರೀಶೈಲೇಶ್ವರಲಿಂಗದ ಆರಾಧನೆಯನ್ನು ಮಾಡುತ್ತಿದ್ದರೆ, ಅಂಥವನಿಗೆ ಈ ಪ್ರಪಂಚದಲ್ಲಿ ದುರ್ಲಭವಾದದ್ದು ಏನುತಾನೇ ಆಗುವುದು? ಆ ಲಿಂಗಾರಾಧನೆಯಿಂದ ಸಮಸ್ತರಿಗೂ ಈ ಸಂಸಾರ ಬಂಧನವು ತೊಲಗಿ ಸುಖ ಸಾಮ್ರಾಜ್ಯವೇ ದೊರೆಯುತ್ತದೆಂಬುದರಲ್ಲಿ ಸಂಶಯವಿಲ್ಲ ಎಂದು ಸೂತಮಹರ್ಷಿ ಗಳು ಹಿಂದೆ ಜೈಗೀಷವ್ಯಮಹರ್ಷಿಗೆ ಕುಮಾರಸ್ವಾಮಿಯು ಉಪದೇಶಿಸಿದ ಅಂಶವ ನ್ನೆಲ್ಲಾ ವಿವರವಾಗಿ ಶೌನಕಾದಿಗಳಿಗೆ ತಿಳಿಯಹೇಳಿದರು. ॥೧೩೯॥

(ವಿ. ಸೂ.—ಈ ಅಧ್ಯಾಯದಲ್ಲಿ ಅಗಸ್ತ್ಯಕೃತವೇದಪಾದಸ್ತವವೆಂಬ ಅಪೂರ್ವ ಸ್ತೋತ್ರವೊಂದಿರುವುದು. ದೂರ್ವಾಸಕೃತ ವೇದಪಾದಸ್ತವದಂತೆಯೇ ಇದು ಅನೇಕ ವಿಷಯುಗಳನ್ನೊಳಗೊಂಡು, ಸುಲಭಶೈಲಿಯಿಂದ ಕೂಡಿರುವುದು. ಶಿವಪೂಜಕರು ಇದನ್ನು ಕಂಠಪಾಠಮಾಡಿ ನಿತ್ಯವೂ ಪಠಿಸಲು ಅರ್ಹವಾಗಿರುವುದು.)

ಇಲ್ಲಿಗೆ ಶ್ರೀಶಿವರಹಸ್ಯದ ಹರಸಂಜ್ಞಕವಾದ ಮೂರನೆಯ ಭಾಗದ ಪೂರ್ವಾರ್ಧದಲ್ಲಿ ಮೂವತ್ತೈದನೆಯ ಅಧ್ಯಾಯವು ಮುಗಿದುದು.